ಮಹಿಳಾ ಸಾಹಿತ್ಯ ಸಂಪುಟ

ಮನುಷ್ಯ ಜಾತಿ ತಾನೊಂದೆ ವಲಂ

ಮಹಿಳಾ ಸಾಹಿತ್ಯ ಸಂಪುಟ-ಲಲಿತ ಪ್ರಬಂಧ

JNANA001611

# ಲಲಿತ ಪ್ರಬಂಧ

ಪ್ರಧಾನ ಸಂಪಾದಕರು
ನಾಡೋಜ ಡಾ. ಮನು ಬಳಿಗಾರ್

ಸಂಪಾದಕರು
ಡಾ. ತಮಿಳ್ ಸೆಲ್ವಿ
ಬಾ.ಹ. ರಮಾಕುಮಾರಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

# ಮಹಿಳಾ ಸಾಹಿತ್ಯ ಸಂಪುಟ

# ಲಲಿತ ಪ್ರಬಂಧ


ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಮಾಲಿಕೆಯ ಸಂಪಾದಕರು

**ಡಾ. ಮಲ್ಲಿಕಾ ಘಂಟಿ**

ಸಂಪಾದಕರು

ಡಾ. ತಮಿಳ್ ಸೆಲ್ವಿ

ಬಾ.ಹ. ರಮಾಕುಮಾರಿ



**ಕನ್ನಡ ಸಾಹಿತ್ಯ ಪರಿಷತ್ತು**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು ೫೬೦ ೦೧೮.

MAHILA SAHITYA SAMPUTA - LALITA PRABHANDA - Chief Editor: Nadoja Dr. Manu Baligar, Editor: Dr. Tamil Selvi, Ba.Ha. Ramakumari Published by: Kannada Sahitya Parishattu, Pampa Mahakavi Road, Chamarajapete, Bengaluru-560018 Pages: xlviii +256 Price: Rs. 180/-: 2020

ಪ್ರಥಮ ಮುದ್ರಣ : ೨೦೨೦

ಪ್ರತಿಗಳು : ೫೦೦

ಬೆಲೆ : ಒಂದು ನೂರ ಎಂಬತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

**ಪ್ರಕಟಣಾ ಸಮಿತಿ**

**ನಾಡೋಜ ಡಾ. ಮನು ಬಳಿಗಾರ್**

ಅಧ್ಯಕ್ಷರು

| | | |
|---|---|---|
| ಸಮ್ಮೇಳನಾಧ್ಯಕ್ಷರು | - | ಡಾ. ಎಚ್.ಎಸ್. ವೆಂಕಟೇಶಮೂರ್ತಿ |
| | | ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ |
| ಸಂಚಾಲಕರು, ಪ್ರಕಟಣಾ ವಿಭಾಗ | - | ಡಾ. ಪದ್ಮರಾಜ ದಂಡಾವತಿ |

ಸದಸ್ಯರು

| | |
|---|---|
| ಶ್ರೀ ಜರಗನಹಳ್ಳಿ ಶಿವಶಂಕ | ಶ್ರೀ ಎ.ಆರ್. ಉಜ್ಜನಪ್ಪ |
| ಡಾ. ಮೂಡ್ನಾಕೂಡು ಚಿನ್ನಸ್ವಾಮಿ | ಶ್ರೀ ಸಂಜಯ ಅಡಿಗ |
| ಪ್ರೊ. ಧರಣೇಂದ್ರ ಕುರಕುರಿ | ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್ |
| ಶ್ರೀ ರಂಜಾನ್ ದರ್ಗಾ | ಗೌರವ ಕಾರ್ಯದರ್ಶಿಗಳು |
| ಡಾ. ಬಿ.ಕೆ. ರವಿ | ಡಾ. ರಾಜಶೇಖರ ಹತಗುಂದಿ |

ಡಾ. ತಮಿಳ್ ಸೆಲ್ವಿ

ಡಾ. ದೊಡ್ಡಮಲ್ಲಯ್ಯ

ಡಾ. ಎಚ್.ಎಲ್. ಪುಷ್ಪ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಕೆ. ರಾಜಕುಮಾರ್

ಗೌರವ ಕೋಶಾಧ್ಯಕ್ಷರು

ಶ್ರೀ ಪಿ. ಮಲ್ಲಿಕಾರ್ಜುನಪ್ಪ

ಮುಖಪುಟ ಕಲಾವಿನ್ಯಾಸ : ಚಂದ್ರಕಾಂತ ಪಟ್ಟಣ

**ಮುದ್ರಣ : ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು**

# ಅಧ್ಯಕ್ಷರ ನುಡಿ

ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಈಗ ೧೦೫ ವರ್ಷಗಳನ್ನು ಪೂರೈಸಿ ೧೦೬ನೇ ವರ್ಷದಲ್ಲಿ ಕಾಲಿರಿಸಿದೆ. ನಾಡು, ನುಡಿ, ನೆಲ, ಜಲ ಮತ್ತು ಸಾಹಿತ್ಯ ಹಾಗೂ ಸಂಸ್ಕೃತಿ ಕುರಿತು ಏನೇ ವಿಚಾರ ಇದ್ದರೂ ಪರಿಷತ್ತು ತನ್ನ ಧ್ವನಿ ಎತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರಿನ ಆದಿಯಲ್ಲಿ ಕನ್ನಡ ಇರುವುದು ಅರ್ಥಪೂರ್ಣವೂ, ಸಾರ್ಥಕವೂ ಆಗಿದೆ. ಅಂದಿನ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬಂತು. ಆಗ ಅದಕ್ಕೆ ಇದ್ದ ಹೆಸರು ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದು. ನಂತರ ಅದು ಕನ್ನಡ ಸಾಹಿತ್ಯ ಪರಿಷತ್ತು ಎಂದು ಈಗಿನ ಹೆಸರು ಪಡೆಯಿತು. ಪರಿಷತ್ತಿನ ಹುಟ್ಟಿಗೆ ಆಗಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರೂ ಕಾರಣಕರ್ತರಾಗಿದ್ದರು ಎಂಬುದನ್ನೂ ಇಲ್ಲಿ ಉಲ್ಲೇಖಿಸ ಬೇಕು. ಪರಿಷತ್ತು ಇದುವರೆಗೆ ಲ೫ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿದೆ ಮತ್ತು ಪರಿಷತ್ತಿಗೆ ನಾನು ೨೫ನೇ ಅಧ್ಯಕ್ಷನಾಗಿ ಚುನಾಯಿತನಾಗಿದ್ದೇನೆ. ಪರಿಷತ್ತು ಇದುವರೆಗೆ ೧,೨೫ ಕೃತಿಗಳನ್ನು ಪ್ರಕಟಿಸಿದ್ದು ಅದರಲ್ಲಿ ಕೆಲವು ಕೃತಿಗಳು ಹಲವು ಮುದ್ರಣಗಳನ್ನು ಕಂಡಿವೆ. ಶಬ್ದಕೋಶಗಳ ರಚನೆಯಲ್ಲಿ, ಹಳಗನ್ನಡ ಕಾವ್ಯಗಳ ಗದ್ಯಾನುವಾದ ಪ್ರಕಟಣೆಯಲ್ಲಿ ಪರಿಷತ್ತಿನದು ಮುಂಚೂಣಿ ಕೆಲಸ.

ಕನ್ನಡದ ಆದಿ ಕವಿ ಪಂಪನ "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಮಾತನ್ನು ತನ್ನ ಘೋಷ ವಾಕ್ಯವಾಗಿ ಒಪ್ಪಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೂ ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿದೆ.

ನಾನು ಕನ್ನಡಿಗರ ಅಗಾಧ ಪ್ರೀತಿ ಮತ್ತು ಅವಿಚ್ಛಿನ್ನ ವಿಶ್ವಾಸದ ಫಲವಾಗಿ ದಾಖಲೆ ಗೆಲುವಿನೊಡನೆ ಅಧ್ಯಕ್ಷ ಸ್ಥಾನದಲ್ಲಿ ಕುಳಿತ ದಿನದಿಂದ ಇದುವರೆಗೆ ಪ್ರತಿಭಾ ನ್ಯಾಯ, ಸಾಮಾಜಿಕ ನ್ಯಾಯ, ಪ್ರಾದೇಶಿಕ ಸಮಾನತೆ ಮತ್ತು ಗುಣಗ್ರಾಹಿತ್ವಗಳನ್ನು ಒಂದು ವ್ರತದಂತೆ ಪಾಲಿಸಿಕೊಂಡು ಬಂದಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಲ್ಲಿ ಸಮಸ್ತರನ್ನು ಒಳಗೊಳ್ಳುವ ಕೆಲಸ ಮಾಡಿದ್ದೇನೆ. ದುರ್ಬಲ ವರ್ಗಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಂಡಿದ್ದೇನೆ. ಪರಿಷತ್ತಿನ ಹಳೆಯ ನಿಯಮಾವಳಿಗೆ ತಿದ್ದುಪಡಿ ತಂದ ನಂತರ ಪರಿಷತ್ತಿನ ತಾಲ್ಲೂಕು, ಜಿಲ್ಲೆ ಮತ್ತು ಕೇಂದ್ರ ಘಟಕಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಮಹಿಳೆಯರಿಗೆ ಸಿಕ್ಕ ಹೆಚ್ಚಿನ ಪ್ರಾತಿನಿಧ್ಯ ಐತಿಹಾಸಿಕವಾದುದು. ಏಕೆಂದರೆ ಅಷ್ಟು ಜನರಿಗೆ ಹಿಂದೆ ಎಂದೂ ಈ ಪ್ರಮಾಣದಲ್ಲಿ

ಪ್ರಾತಿನಿಧ್ಯ ಸಿಕ್ಕಿರಲಿಲ್ಲ. ಇದುವರೆಗೆ ಪರಿಷತ್ತಿನ ಪದಾಧಿಕಾರಿ ವರ್ಗದಲ್ಲಿ, ಕಾರ್ಯಕಾರಿಣಿಯಲ್ಲಿ ಅಲಕ್ಷಿತವಾಗಿದ್ದ ಸಮುದಾಯಕ್ಕೆ ಸೂಕ್ತ ಸ್ಥಾನಮಾನವನ್ನು ಈ ಅವಧಿಯಲ್ಲಿಯೇ ದೊರಕಿಸಿದ್ದು ನನಗೆ ಅಪಾರ ಸಂತೋಷವನ್ನೂ ಸಮಾಧಾನವನ್ನೂ ತಂದು ಕೊಟ್ಟಿದೆ.

ಪ್ರಸ್ತುತ ಕಾರ್ಯಕಾರಿ ಸಮಿತಿ ಅವಧಿಯಲ್ಲಿ ಇದುವರೆಗೆ ನಾಲ್ಕು ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳು ನಡೆದಿದ್ದು ಅದರಲ್ಲಿ ಸಾಮಾಜಿಕ ನ್ಯಾಯ ಮತ್ತು ಪ್ರತಿಭಾ ಪಕ್ಷಪಾತಗಳೆರಡನ್ನೂ ಕಾಯ್ದುಕೊಳ್ಳಲಾಗಿದೆ ಎಂಬುದನ್ನು ಕನ್ನಡದ ಪ್ರಾಜ್ಞ ಜನರು ಗಮನಿಸಿದ್ದಾರೆ. ಅದೇ ರೀತಿ ಪರಿಷತ್ತಿನ ಆಶ್ರಯದಲ್ಲಿ ನೀಡಲಾಗುವ, ನಾಡಿನ ಅತ್ಯಂತ ಪ್ರತಿಷ್ಠಿತವಾದ ನೃಪತುಂಗ ಪ್ರಶಸ್ತಿ ಕೊಡುವ ವಿಚಾರದಲ್ಲಿಯೂ ಇದೇ ಮಾನದಂಡವನ್ನು ಅನುಸರಿಸಲಾಗಿದೆ. ಈ ಅವಧಿಯಲ್ಲಿಯೇ ಮತ್ತು ಇದೇ ಮೊದಲ ಸಲ ಪರಿಶಿಷ್ಟ ಜಾತಿಯ ಖ್ಯಾತ ಕವಿ ಡಾ. ಸಿದ್ಧಲಿಂಗಯ್ಯ ಈ ಪ್ರಶಸ್ತಿ ಸಂದುದನ್ನು ಇಲ್ಲಿ ಸ್ಮರಿಸಲು ಬಯಸುವೆ. ಇದನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದಕ್ಕೆ ಕಾರಣ ಇದೆ. ಏಕೆಂದರೆ, ಇದೆಲ್ಲ ಕೇವಲ ಸಾಂಕೇತಿಕವಲ್ಲ. ಇದಕ್ಕೆ ಪೂರಕವಾಗಿಯೇ ಈ ಅವಧಿಯಲ್ಲಿಯೇ ದಲಿತ ಸಾಹಿತ್ಯ ಸಂಪುಟಗಳ ಸರಣಿಯಲ್ಲಿ ಪ್ರಥಮ ಬಾರಿಗೆ ಈಗಾಗಲೇ ಆರು ಸಂಪುಟಗಳು ಪ್ರಕಟವಾಗಿವೆ. ಏಳನೆಯ ಸಂಪುಟ ಅಚ್ಚಿನಲ್ಲಿ ಇದೆ. ಈ ಸಂಪುಟದ ಸಂಚಾಲಕರಾಗಿ ಕನ್ನಡದ ಹಿರಿಯ ವಿದ್ವಾಂಸ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಕಾರ್ಯ ನಿರ್ವಹಿಸಿದ್ದಾರೆ. ಈ ಸಂಪುಟಗಳ ಸಂಪಾದಕರಾಗಿ ಕನ್ನಡದ ಹೆಸರಾಂತ ದಲಿತ ಲೇಖಕರು ಕಾರ್ಯ ನಿರ್ವಹಿಸಿದರು. ಇನ್ನೂ ಮೂರು ಸಂಪುಟಗಳನ್ನು ತರಲು ಪರಿಷತ್ತು ಒಪ್ಪಿಕೊಂಡು ಅದಕ್ಕೆ ಸಂಪಾದಕರನ್ನೂ ನೇಮಿಸಲಾಗಿತ್ತು. ಆದರೆ, ಅವರ ಅನಾಸಕ್ತಿಯ ಕಾರಣವಾಗಿ ಆ ಕೆಲಸ ಮುಂದುವರಿಯಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಲು ಬಯಸುವೆ.

ದಲಿತ ಸಂಪುಟಗಳನ್ನು ಪ್ರಕಟಿಸುವುದಕ್ಕೆ ಮಾತ್ರ ನನ್ನ ಬದ್ಧತೆ ನಿಲ್ಲಲಿಲ್ಲ. ಕಳೆದ ವರ್ಷ ಅಂದರೆ, ೨೦೦೯ ರ ಆಗಸ್ಟ್‌ನಲ್ಲಿ ಕೋಲಾರದಲ್ಲಿ ಅಖಿಲ ಕರ್ನಾಟಕ ದಲಿತ ಸಾಹಿತ್ಯ ಸಮ್ಮೇಳನವನ್ನೂ ಪ್ರಸಿದ್ಧ ದಲಿತ ಲೇಖಕ ಡಾ.ಎಲ್.ಹನುಮಂತಯ್ಯ ಅವರ ಅಧ್ಯಕ್ಷತೆಯಲ್ಲಿ ಸಂಘಟಿಸಲಾಗಿತ್ತು. ಎರಡು ದಿನಗಳ ಆ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಿತು. ಆ ಮಟ್ಟದ ಮತ್ತು ಆ ಬಗೆಯ ಸಾಹಿತ್ಯ ಸಮ್ಮೇಳನವೊಂದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಅದೇ ಮೊದಲು ಏರ್ಪಡಿಸಲಾಗಿತ್ತು ಎಂಬುದನ್ನು ಇಲ್ಲಿ ಪ್ರಸ್ತಾಪಿಸಲು ಬಯಸುವೆ. ಈ ಸಮ್ಮೇಳನದಲ್ಲಿ ಎಲ್ಲ ಗೋಷ್ಠಿಗಳಲ್ಲಿ ದಲಿತರು ಮಾತ್ರ ಇರುವಂತೆ ನಿಗಾ ವಹಿಸಲಾಗಿತ್ತು. ಅವರು ಏನು ಹೇಳುತ್ತಾರೆ ಎಂಬುದನ್ನು ಉಳಿದ ಎಲ್ಲ ಸಮುದಾಯಗಳ ಜನರು ಕೆಳಗೆ ಕುಳಿತು ಕೇಳಿಸಿಕೊಂಡುದು ಅರ್ಥಪೂರ್ಣವಾಗಿತ್ತು. ಇದು ಕೂಡ ಸಾಂಕೇತಿಕವಾದುದು ಆಗಿರಲಿಲ್ಲ. ಇದನ್ನು ಕೂಡ ಬುದ್ಧಿಪೂರ್ವಕವಾಗಿಯೇ ಮಾಡಲಾಗಿತ್ತು. ಈ ಎರಡೂ ಪ್ರಯತ್ನಗಳನ್ನು, ಅಂಚಿನಲ್ಲಿ ಇರುವ ಒಂದು ಸಮುದಾಯವನ್ನು ಕೇಂದ್ರಕ್ಕೆ ತರುವ ದಿಸೆಯಲ್ಲಿನ ದಿಟ್ಟ ಹೆಜ್ಜೆಗಳು ಎಂದು ಯಾರಾದರೂ ಗುರುತಿಸುತ್ತಾರೆ ಎಂದು ಭಾವಿಸಿದ್ದೇನೆ.

ದಲಿತ ಸಾಹಿತ್ಯ ಸಂಪುಟಗಳಂತೂ ಕನ್ನಡ ಸಾಹಿತ್ಯದಲ್ಲಿ ಚಿರಕಾಲ ಉಳಿಯುವ ಸಂಪುಟಗಳು ಆಗಿದ್ದು ಇದನ್ನು ಒಂದು ವಿಶ್ವವಿದ್ಯಾಲಯ ಮಾಡಬೇಕಾದ ಕೆಲಸ ಎಂದು ಅನೇಕ ವಿದ್ವಾಂಸರು ನನ್ನ ಮುಂದೆ ಹೇಳಿದರು. ಇದು ನಾವು ಮಾಡಿದ ಕೆಲಸದ ಉಪಯುಕ್ತತೆಯನ್ನೂ ಸಾರ್ಥಕತೆಯನ್ನೂ ಸಾಬೀತು ಮಾಡುತ್ತದೆ. ಇಂಥದು ಮಾತ್ರ ಇತಿಹಾಸದಲ್ಲಿ ಉಳಿಯುತ್ತದೆ.

ಇದೀಗ ಮಹಿಳಾ ಸಂಪುಟಗಳ ವಿಚಾರವನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಕನ್ನಡದಲ್ಲಿ ಲೇಖಕಿಯರ ಸಾಧನೆ ಸಣ್ಣದೇನೂ ಇಲ್ಲ. ಆದರೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮಗೆ ಸಿಗಬೇಕಾದ ಸ್ಥಾನ ಸಿಕ್ಕಿಲ್ಲ ಎಂಬ ಅಸಮಾಧಾನ, ಆಕ್ರೋಶ ಅವರಲ್ಲಿ ಇದೆ. ಕನ್ನಡದ ವಿಮರ್ಶೆಯೂ ತಮಗೆ ನ್ಯಾಯ ಕೊಟ್ಟಿಲ್ಲ ಎಂಬ ದೂರು ಅವರದು. ಇದು, ನಮ್ಮ ಸಾಮಾಜಿಕ ಸಂರಚನೆಯಲ್ಲಿಯೇ ಇರುವ ಸಮಸ್ಯೆ ಎಂದು ಯಾರಿಗಾದರೂ ಅರ್ಥವಾಗುತ್ತದೆ. ಅದು ಸಾಹಿತ್ಯ ಮುಂತಾದ ಕ್ಷೇತ್ರಗಳಿಗೂ ವಿಸ್ತರಿಸಿದೆ.

ದೇಶದ ಮತ್ತು ನಾಡಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳಾ ಸಮುದಾಯ ಕೂಡ ಅಂಚಿನಿಂದ ಕೇಂದ್ರದ ಕಡೆ ಚಲಿಸುವ ಹೋರಾಟವನ್ನು ಸತತವಾಗಿ ನಡೆಸಿಕೊಂಡು ಬಂದಿದೆ. ಅದು ರಾಜಕೀಯ ಕ್ಷೇತ್ರವೇ ಇರಲಿ, ಸಾಮಾಜಿಕ ಕ್ಷೇತ್ರವೇ ಇರಲಿ ಅಥವಾ ಸಾಹಿತ್ಯ ಕ್ಷೇತ್ರವೇ ಇರಲಿ ಅಲ್ಲಿ ಸಮಾನತೆಗಾಗಿ ಮಹಿಳೆಯ ಹೋರಾಟ ನಿರಂತರವಾಗಿ ನಡೆದುಕೊಂಡು ಬಂದಿದೆ. ನಾನು ಅಧ್ಯಕ್ಷನಾಗಿ ಚುನಾಯಿತನಾದ ನಂತರ ಈ ಸಮುದಾಯಕ್ಕೂ ಅವರಿಗೆ ನ್ಯಾಯವಾಗಿ ಸಿಗಬೇಕಾದ ಸ್ಥಾನ ದೊರಕಿಸಲು ನಿರಂತರವಾಗಿ ಪ್ರಯತ್ನ ಮಾಡಿದ್ದೇನೆ. ಇದು ಕೂಡ ಸಾಂಕೇತಿಕವಾದುದು ಅಲ್ಲ ಎಂದು ಇಲ್ಲಿ ಸ್ಪಷ್ಟಪಡಿಸಲು ಬಯಸುವೆ.

ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಹೇಗೆ ದಲಿತರಿಗಾಗಿ ಒಂದು ಸಮ್ಮೇಳನ ನಡೆದಿರಲಿಲ್ಲವೋ ಹಾಗೆಯೇ ಮಹಿಳೆಯರಿಗಾಗಿ ಒಂದು ಸಮ್ಮೇಳನವೂ ನಡೆದಿರಲಿಲ್ಲ. ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಮಹಿಳಾ ಸಮಾವೇಶ ನಡೆದಿತ್ತು. ಸಮಾವೇಶಕ್ಕೂ ಸಮ್ಮೇಳನಕ್ಕೂ ವ್ಯತ್ಯಾಸ ಇದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಹಾಗೆಯೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಹೆಸರಾಂತ ಲೇಖಕಿ ಡಾ.ಸುಧಾ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಈ ಸಮ್ಮೇಳನವು ದಲಿತ ಸಮ್ಮೇಳನಕ್ಕಿಂತ ಮುಂಚೆಯೇ ೨೦೦೯ರ ಮಾರ್ಚ್‌ನಲ್ಲಿ ನಡೆಯಿತು. ಅದು ಕೂಡ ಅತ್ಯಂತ ಯಶಸ್ವಿ ಸಮ್ಮೇಳನ ಎಂದು ಹೆಸರು ಮಾಡಿತು.

ಮಹಿಳೆಯರಿಗೆ ಸಿಗಬೇಕಾದ ಸ್ಥಾನಮಾನಗಳನ್ನು ಕೊಡುವ ಪರಿಷತ್ತಿನ ಮತ್ತು ನನ್ನ ಬದ್ಧತೆಯ ಮುಂದುವರಿಕೆಯಾಗಿ ಇದೀಗ ಮಹಿಳಾ ಸಾಹಿತ್ಯ ಸಂಪುಟಗಳು ನಿಮ್ಮ ಕೈಯಲ್ಲಿ ಇವೆ. ಕನ್ನಡದ ಪ್ರಸಿದ್ಧ ಚಿಂತಕಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಯಾದ ಸೋದರಿ ಡಾ.ಮಲ್ಲಿಕಾ ಘಂಟಿಯವರು ಮಹಿಳಾ

ಸಾಹಿತ್ಯ ಸಂಪುಟಗಳ ಹೊಳಹನ್ನು ನನ್ನ ಮುಂದೆ ಇಡುತ್ತಿದ್ದಂತೇ ಒಂದು ಕ್ಷಣವೂ ತಡಮಾಡದೇ ಆಗಬಹುದು ಎಂದು ನಿರ್ಣಯಿಸಿ ಕಥೆ, ವಿಮರ್ಶೆ, ಸ್ತ್ರೀವಾದಿ ಚಿಂತನೆ, ಕಾವ್ಯ,



ಅಂಕಣ, ಲಲಿತ ಪ್ರಬಂಧ, ಜಾನಪದ ಮತ್ತು ಸಂಕೀರ್ಣ ಸಂಪುಟಗಳನ್ನು ಹೊರತರಲು ಯೋಜನೆ ರೂಪಿಸಿದೆವು. ನಾನು ಎಲ್ಲ ಸಂಪುಟಗಳ ಪ್ರಧಾನ ಸಂಪಾದಕನಾಗಿ ಇರುವುದು, ಡಾ.ಮಲ್ಲಿಕಾ ಅವರು ಮಾಲಿಕೆ ಸಂಪಾದಕರಾಗಿ ಇರುವುದು ಮತ್ತು ಪ್ರತಿ ಸಂಪುಟಕ್ಕೂ ಒಬ್ಬೊಬ್ಬರು ಸಂಪಾದಕರನ್ನು ನೇಮಿಸುವುದು ಎಂದು ತೀರ್ಮಾನಿಸಿದೆವು. ಅದೇ ರೀತಿ ಸಂಪುಟಗಳ ಸಂಪಾದಕರಾಗಿ ಡಾ. ಪದ್ಮನಿ ನಾಗರಾಜು, ಡಾ. ಎಂ. ಎಸ್. ಆಶಾದೇವಿ, ಡಾ. ಮಲ್ಲಿಕಾ ಘಂಟಿ, ಡಾ. ಪಿ. ಚಂದ್ರಿಕಾ, ಪ್ರತಿಭಾ ನಂದಕುಮಾರ್, ಡಾ. ತಮಿಳ್ ಸೆಲ್ವಿ ಮತ್ತು ಬಾ. ಹ. ರಮಾಕುಮಾರಿ ಹಾಗೂ ಡಾ. ಎನ್. ಲಕ್ಷ್ಮಿ ಅವರು ಕ್ರಮವಾಗಿ ಆಯಾ ಸಂಪುಟಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಲು ಒಪ್ಪಿಕೊಂಡರು.

ಈ ಎಲ್ಲ ಸಂಪಾದಕರು ಪುರುಷರನ್ನು ಮೀರಿಸುವ ಹಾಗೆ ಅತ್ಯಂತ ಕಡಿಮೆ ಕಾಲದಲ್ಲಿ ತಮ್ಮ ಸಂಪುಟಗಳನ್ನು ಸಿದ್ಧಪಡಿಸಿ ಅಧ್ಯಯನ ಪೂರ್ಣವಾದ ಪ್ರಸ್ತಾವನೆಗಳನ್ನೂ ಬರೆದು ಕೊಟ್ಟಿದ್ದಾರೆ. ಈ ಕೆಲಸ ಇಲ್ಲಿಗೇ ಮುಗಿಯಿತು ಎಂದು ನಾನು ಭಾವಿಸಿಲ್ಲ. ಇವೆಲ್ಲ ಒಳ್ಳೆಯ ಆರಂಭಗಳು ಎಂಬ ಭಾವನೆ ನನ್ನದು. ಕೆಲಸ ಮಾಡುವ ಕರ್ತೃತ್ವ ಶಕ್ತಿ ಇರುವವರಿಗೆ ಆಕಾಶವೇ ಮಿತಿಯಾಗಿರುತ್ತದೆ. ಮತ್ತು ಇಂಥ ಕೆಲಸಗಳು ಮುಂದುವರಿಯುತ್ತಲೇ ಇರಬೇಕು ಎಂಬುದರ ಒಂದು ಸೂಚನೆಯಾಗಿ ಹಾಗೂ ಇಂಥ ಕೆಲಸಗಳಿಗೆ ಒಂದು ಒಳ್ಳೆಯ ಆರಂಭವನ್ನು ಒದಗಿಸಬೇಕು ಎಂದು ಈ ಸಂಪುಟಗಳನ್ನು ರೂಪಿಸಲಾಗಿದೆ. ಇಲ್ಲಿ ನಾವು ಸಂಪಾದಿಸಿರುವ ಒಂದೊಂದು ಸಂಪುಟವನ್ನೇ ಹಲವು ಸಂಪುಟಗಳಾಗಿ ರೂಪಿಸಲು ಅವಕಾಶ ಇದೆ ಎಂಬುದೂ ನಮ್ಮ ಗಮನದಲ್ಲಿ ಇದೆ.

ಗಾರ್ಗಿ ಅತ್ಯಂತ ಪ್ರಖರ ವಿಚಾರವಾದಿ, ಪ್ರಶ್ನೆ ಕೇಳುವ ತನ್ನ ಹಕ್ಕನ್ನು ಪ್ರಾಣವನ್ನು ಪಣಕ್ಕೆ ಇಟ್ಟು ಉಳಿಸಿಕೊಂಡವಳು. ಗಾರ್ಗಿ ಮತ್ತು ಯಾಜ್ಞವಲ್ಕರ ಸಂವಾದಕ್ಕೆ ಮತ್ತು ಚರ್ಚೆಗೆ ನಮ್ಮ ಉಪನಿಷತ್ತುಗಳಲ್ಲಿ ಅನೇಕ ಸಾಕ್ಷಿಗಳು ಇವೆ. ನಮ್ಮದು ಒಂದು ಕಾಲದಲ್ಲಿ ಮಾತೃಪ್ರಧಾನ ಸಂಸ್ಕೃತಿ. ಇದು ಪಿತೃಪ್ರಧಾನ ಸಂಸ್ಕೃತಿಯಾಗಿ ಪರಿವರ್ತನೆಯಾಗುವುದರ ಜೊತೆಗೆ ಸ್ತ್ರೀ ಕುಲ ಅಂಚಿಗೆ ಸರಿಯಿತು. ಈ ಹಿನ್ನಡೆ ಅವರಿಗೆ ಎಲ್ಲ ಕ್ಷೇತ್ರದಲ್ಲಿಯೂ ಆಯಿತು. ಇದನ್ನು ಒಂದು ಹಿನ್ನಡೆ ಎಂದು ಅವರು ಭಾವಿಸದೇ ಒಂದು ಸವಾಲು ಎಂದು ಸ್ವೀಕರಿಸಿ, ಒಂದು ಪಂಥಾಹ್ವಾನ ಎಂದು ಸ್ವೀಕರಿಸಿ ತಮಗೆ ಸಲ್ಲಬೇಕಾದ ಸ್ಥಾನಕ್ಕಾಗಿ ಮಹಿಳೆಯು ಬರೀ ಭಾರತದಲ್ಲಿ ಮಾತ್ರವಲ್ಲ ಜಾಗತಿಕವಾಗಿಯೂ ತನ್ನ ಪ್ರಯತ್ನ ನಡೆಸಿದ್ದಾಳೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೯ನೇ ಶತಮಾನದ ಆದಿಯಲ್ಲಿಯೇ "ಅರ್ಧ ಜನಸಂಖ್ಯೆಗೆ ಸಿಗಬೇಕಾದ ನ್ಯಾಯಕ್ಕಾಗಿ' ಧ್ವನಿ ಎತ್ತಿದ ಅನೇಕ ನಿದರ್ಶನಗಳು ನಮಗೆ ಸಿಗುತ್ತವೆ. ಆದಾಗ್ಯೂ, ಮಹಿಳಾ ಸಾಹಿತ್ಯ ಎನ್ನುವುದು ಅಡುಗೆ ಮನೆಯ ಸಾಹಿತ್ಯ ಎಂಬ ಮೂದಲಿಕೆಗೆ ಒಳಗಾಯಿತು. ವಾಸ್ತವದಲ್ಲಿ ಮಹಿಳೆಯರ ಸಾಹಿತ್ಯ ಅಡುಗೆ ಮನೆ ಸಾಹಿತ್ಯವಾಗಿರದೇ ಅದು ಪುರುಷ ಸಾಹಿತ್ಯಕ್ಕೆ ಎಲ್ಲ ರೀತಿಯಲ್ಲಿಯೂ ಸಮಾನವಾಗಿರುವುದನ್ನು ಯಾವ ಪಕ್ಷಪಾತವಿಲ್ಲದೇ ನೋಡುವ ಕಣ್ಣಿಗೆ ಕಾಣಿಸುತ್ತದೆ.



ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಮಹಿಳೆಯರು ಪಾಲುಗೊಂಡುದು ಮತ್ತು ಆಯಾ ಪ್ರಕಾರಗಳಲ್ಲಿ ಸಮರ್ಥವಾಗಿ ಅವರು ಅಭಿವ್ಯಕ್ತಿಸಿದ್ದುದು ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಕಾಣಿಸುತ್ತದೆ. ಅಲ್ಲಿ ಹಲವು ಮೇರು ಪ್ರತಿಭೆಗಳು ಮೂಡಿ ಬಂದಿರುವುದೂ ಗಮನಾರ್ಹ. ಈ ಸಾಧನೆಯನ್ನು ಅವರು ಮಾಡಿದ್ದು ಅನೇಕ ಅಡ್ಡಿ ಆತಂಕಗಳ ನಡುವೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಲೇಬೇಕು.

ಮೊದಲೇ ಇಲ್ಲಿ ಪ್ರಸ್ತಾಪಿಸಿದ ಹಾಗೆ ೧೯ನೇ ಶತಮಾನದ ಆದಿಯಲ್ಲಿಯೇ ಲೇಖಕಿಯರ ಧ್ವನಿ ಕೇಳಿ ಬಂದರೂ ಅವರ ಸಾಹಿತ್ಯಕ್ಕೆ ೧೯೮೦ರ ದಶಕದ ವರೆಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ. ಬಹುಶಃ ಅದೇ ಕಾರಣಕ್ಕಾಗಿ "ಸ್ತ್ರೀವಾದಿ ಚಿಂತನೆ" ಎಂಬ ಹೊಸ ಆಲೋಚನಾ ಕ್ರಮ ಹುಟ್ಟಿಕೊಂಡಿತು. ಮಹಿಳಾ ಸಾಹಿತ್ಯವನ್ನು ಅದರ ನಿಜಾರ್ಥದಲ್ಲಿ ಗುರುತಿಸುವ ಹಾಗೂ ಅವರ ಸಾಹಿತ್ಯಕ್ಕೆ ಒಂದು ಸ್ಥಾನ ನಿರ್ದೇಶನ ಮಾಡುವ ಕೆಲಸವನ್ನು ಈ ಸ್ತ್ರೀವಾದಿ ಚಿಂತನೆ ಮೊದಲ ಬಾರಿಗೆ ರೂಪಿಸಿತು. ಈ ಚಿಂತನೆಯ ಮುಖ್ಯ ಉದ್ದೇಶವೇ ಮಹಿಳಾ ಸಾಹಿತ್ಯ ಕುರಿತ ಹಳೆಯ ವಿನ್ಯಾಸವನ್ನು ಬದಲಿಸುವುದು ಹಾಗೂ ಹೊಸ ಮೀಮಾಂಸೆಯನ್ನು ನಿರ್ಮಿಸುವುದು ಆಗಿತ್ತು. ಇದು ಒಂದು ರೀತಿಯಲ್ಲಿ ಮಹಿಳಾ ಸಾಹಿತ್ಯದ ಅವಲೋಕನಕ್ಕೆ ಹೊಸ ಪರಿಭಾಷೆಯನ್ನು ನಿರ್ಮಿಸಿತು. ಹೆಚ್ಚ ಕಡಿಮೆ ಅದೇ ಸಮಯದಲ್ಲಿ ಕನ್ನಡದಲ್ಲಿ ಬಂಡಾಯ ಸಾಹಿತ್ಯ ಚಳವಳಿಯೂ ಆರಂಭವಾಯಿತು. ೧೯೭೯ ರಲ್ಲಿ ಬೆಂಗಳೂರಿನಲ್ಲಿ ಮೊದಲ ಬಂಡಾಯ ಸಾಹಿತ್ಯ ಸಮ್ಮೇಳನ ನಡೆದಿತ್ತು. ಅಲ್ಲಿ ಮತ್ತು ತದನಂತರ ಬಂಡಾಯ ಸಾಹಿತ್ಯ ಕೂಡ ಕನ್ನಡ ವಿಮರ್ಶೆಗೆ ಹೊಸ ಪರಿಭಾಷೆಯ ಅಗತ್ಯವಿದೆ ಎಂದು ಪ್ರತಿಪಾದಿಸಿತು, ಆಗ್ರಹಿಸಿತು. "ನಮ್ಮ ಸಾಹಿತ್ಯವನ್ನು ನಿಕಷಕ್ಕೆ ಒಡ್ಡಲು ನಿಮಗೆ ಬೇರೆ ದೃಷ್ಟಿಕೋನ ಬೇಕು" ಎಂದು ಬಂಡಾಯ ಮತ್ತು ದಲಿತ ಲೇಖಕರು ಆಗ್ರಹಿಸಿದರು. ಮಹಿಳಾ ಲೇಖಕಿಯರು ಕೂಡ ಇದನ್ನೇ ಪ್ರತಿಪಾದಿಸಿದರು. ಮತ್ತು ಅವರು ಈ ಕೆಲಸವನ್ನು ಪುರುಷರು ಮಾಡಿಯಾರು ಎಂದು ಕಾಯುತ್ತ ಕುಳಿತುಕೊಳ್ಳದೇ ತಾವೇ ಮೇಲ್ಪಂಕ್ತಿ ಹಾಕಿದರು. ದಲಿತ ಮತ್ತು ಬಂಡಾಯ ಲೇಖಕರ ಹಾಗೆಯೇ, "ನಮ್ಮ ಬರವಣಿಗೆಯನ್ನು ನೋಡಬೇಕಾದ ಕ್ರಮ ಇದು" ಎಂದು ಅವರು ಹೇಳಿಕೊಡಲು ಯತ್ನಿಸಿದರು. ಅದರಲ್ಲಿ ಅವರು

ಸಫಲರೂ ಆದರು. ಆ ನೂತನ ಚಿಂತನ ಕ್ರಮ, ದೃಢತೆ, ತಮ್ಮನ್ನು ತಾವು ಮುಖ್ಯ ವೇದಿಕೆಯ ಮೇಲೆ ತಂದುಕೊಳ್ಳಲು ಅವರು ಹೇಗೆ ಹೆಣಗಿದರು ಎಂಬುದಕ್ಕೆ ಈ ಎಲ್ಲ ಸಂಪುಟಗಳು ಕನ್ನಡಿ ಹಿಡಿಯುವಂತೆ ಇವೆ. ಅದನ್ನೆಲ್ಲ ಒಂದು ಬೃಹತ್ ವೇದಿಕೆ ಮೇಲೆ ಬಿಂಬಿಸುವ ಕೆಲಸವನ್ನು ಪರಿಷತ್ತು ಈಗ ಮಾಡಿದೆ. ಆಧುನಿಕ ಕನ್ನಡದ ಮಹಿಳೆಯ ಎಲ್ಲ ಪ್ರಮುಖ ಪ್ರಕಾರಗಳ ಪ್ರಾತಿನಿಧಿಕ ಬರವಣಿಗೆಯನ್ನು ಇಲ್ಲಿ ಸಂಕಲಿಸಿ ಕೊಡಲು ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಇದು ಒಂದು ಅನನ್ಯ ಪ್ರಯತ್ನ. ಏಕೆಂದರೆ ಇದನ್ನು ಬೇರೆಲ್ಲೂ ಇದುವರೆಗೆ ಮಾಡಲಿಲ್ಲ. ಮಾಡಬೇಕು ಎಂದು ಯಾರಿಗೂ ಅನಿಸಲಿಲ್ಲ.

ನಮ್ಮ ಕನ್ನಡದ ಲೇಖಕಿಯರು ಹೇಗೆ ಯೋಚಿಸಿದರು. ಅವರ ಅನುಭವ ಲೋಕ ಹೇಗೆ ಇತ್ತು, ಅದು ಏನನ್ನು ಪರಿಶೋಧಿಸಲು ಪ್ರಯತ್ನ ಮಾಡಿತು. ಅಲ್ಲಿ



ಹೆಣ್ಣಿನ ಆಳದ ತಲ್ಲಣಗಳು, ಸಂತೋಷಗಳು, ದುಃಖಗಳು, ಸುಖಗಳು ಹೇಗೆ ಮೊಗ ಪಡೆದುವು ಎಂಬುದನ್ನು ಈ ಸಂಪುಟಗಳು ಕನ್ನಡಿಗರ ಮುಂದೆ ತೆರೆದು ಇಡುತ್ತವೆ. ಹೆಣ್ಣು ಮತ್ತು ಗಂಡಿನ ಸಂವೇದನೆಯ ನಡುವೆ ಇರುವ ಭಿನ್ನತೆಗಳನ್ನು ಹಿಡಿದು ಇಡಲು ಈ ಸಂಪುಟಗಳು ಯಶಸ್ವಿಯಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಕನ್ನಡದ ಓದುಗರು ಈ ಸಂಪುಟಗಳನ್ನು ಪ್ರೀತಿಯಿಂದ ಎದೆಗೆ ಅವಚಿಕೊಳ್ಳುತ್ತಾರೆ ಎಂಬ ನಂಬಿಕೆ ನನ್ನದು. ಮತ್ತು ಸ್ತ್ರೀ ಸಾಹಿತ್ಯ ಕುರಿತ ಉನ್ನತ ಅಧ್ಯಯನಕ್ಕೆ ಈ ಸಂಪುಟಗಳು ಆಕರಗಳು ಆಗುತ್ತವೆ ಎಂದೂ ನಾನು ಪ್ರಬಲವಾಗಿ ನಂಬಿದ್ದೇನೆ. ಇಂಥ ಕೆಲಸವನ್ನು ನಮ್ಮ ಅವಧಿಯಲ್ಲಿ ಮಾಡಿ ಪೂರೈಸುತ್ತಿರುವುದಕ್ಕೆ ನನ್ನ ಮನಸ್ಸಿನಲ್ಲಿ ಸಾರ್ಥಕ ಭಾವನೆ ಮೂಡಿದೆ.

ಈ ಎಲ್ಲ ಸಂಪುಟಗಳ ಎಲ್ಲ ಸಂಪಾದಕಿಯರಿಗೆ ಮತ್ತು ಮಾಲಿಕೆಯ ಸಂಪಾದಕರಾದ ಡಾ.ಮಲ್ಲಿಕಾ ಘಂಟಿಯವರಿಗೆ ನನ್ನ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳನ್ನು ಅಂದವಾಗಿ ಹೊರಗೆ ತರಲು ಮತ್ತು ಸಂಪಾದಕರ ಜೊತೆಗೆ ಸಂಯೋಜಕನ ಕೆಲಸ ಮಾಡಲು ಪರಿಷತ್ತಿನ ಪ್ರಕಟಣೆಯ ವಿಭಾಗದ ರಾಜ್ಯ ಸಂಚಾಲಕರಾದ ಡಾ. ಪದ್ಮರಾಜ ದಂಡಾವತಿಯರು ಬಹುವಾಗಿ ಶ್ರಮಿಸಿದ್ದಾರೆ. ಅವರ ಜೊತೆಗೆ ಪ್ರಕಟಣಾ ವಿಭಾಗದ ಬಿ.ಎಂ.ನಾಗರತ್ನ ಅವರೂ ಕೈ ಜೋಡಿಸಿದ್ದಾರೆ. ಪರಿಷತ್ತಿನ ಬಿ.ಎಂ.ಶ್ರೀ ಅಚ್ಚುಕೂಟದ ಸಿಬ್ಬಂದಿ ಎಂದಿನಂತೆ ಹಗಲೂ ರಾತ್ರಿ ದುಡಿದು ಈ ಸಂಪುಟಗಳನ್ನು ಸಕಾಲದಲ್ಲಿ ಮುದ್ರಿಸಿ ಕೊಟ್ಟಿದ್ದಾರೆ. ಈ ಸಂತೋಷದ ಗಳಿಗೆಯಲ್ಲಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ನಾಡೋಜ ಡಾ.ಮನು ಬಳಿಗಾರ್**

ಅಧ್ಯಕ್ಷರು

# ಮಾಲಿಕೆಯ ಸಂಪಾದಕರ ನುಡಿ

"ಕಲ್ಲುಕಾಲಲಿ ತುಳಿದು ಕೋಮಲಾಂಗಿಯ ಮಾಡಿದರು...." ಎಂಬ ಈ ಸಾಲು ಮಹಿಳಾ ಬದುಕಿಗೆ ಅನ್ವಯಿಸಿಕೊಂಡು ಹೇಳುವುದರ ಹಿಂದೆ ಮನುಕುಲ ಚರಿತೆಯ ಏಳು ಬೀಳಿನ ಅಗಣಿತ ಹಾದಿಗಳ ಪಯಣವಿದೆ. ಈ ಹಾದಿಗಳ ಅನ್ವೇಷಣೆಯೆಂದರೆ ಗಂಡು ರಾಜಕಾರಣದ ಮೋಸದ ಕಣ್ಣಕಟ್ಟಿನ ಆಟದ ತಂತ್ರಗಳನ್ನು ಬಯಲುಗೊಳಿಸುವುದೇ ಆಗಿದೆ. ಮಾನವ ಚರಿತ್ರೆಯನ್ನು ಅರಿಯುವುದೆಂದರೆ ಸಮಾಜವನ್ನು ಅರ್ಥೈಸಿಕೊಳ್ಳುವಿಕೆಯೆಂದೆ ಭಾವಿಸಲಾಗಿದೆ. ಈ ಅರ್ಥೈಸಿಕೊಳ್ಳುವಿಕೆಯು ಪುರುಷರೂಪಿತ, ದ್ವೇಷಪೂರಿತ ವ್ಯಾಖ್ಯಾನಗಳ ಹಿಂದೆ ಬಹುದೊಡ್ಡ ಶಕ್ತಿಯಾಗಿ ವರ್ಣಾಧಾರಿತವಾದ ರಾಜಕಾರಣವಿದೆ. ವೇದ, ಉಪನಿಷತ್ತು, ಸ್ಮೃತಿ, ಅರ್ಥಶಾಸ್ತ್ರ, ಪುರಾಣಾದಿಯಾಗಿ ಶಾಸ್ತ್ರ, ಧರ್ಮಕಾವ್ಯ ಕಾರಣಗಳು ವರ್ಣಾಧಾರಿತ ಪುರುಷಹಿತಾಸಕ್ತಿ ರಾಜಕಾರಣವನ್ನು ಸಕ್ರಿಯಗೊಳಿಸುವಾಗ ಸ್ತ್ರೀಯನ್ನು ಗುರಿಯಾಗಿಸಿಕೊಂಡದ್ದರ ಹಿಂದೆ ಏನಿತ್ತು ಎಂಬುದೆ ನಮ್ಮೆದುರಿನ ಬಹುದೊಡ್ಡ ಪ್ರಶ್ನೆ, ಈ ಪ್ರಶ್ನೆಗಳನ್ನು ಅಂದಂದಿನ ಕಾಲದ ಸಮಾಜದೊಳಗಿದ್ದ ಅನೇಕ ಮಹಾತ್ಮರು ಹಾಕಿಕೊಂಡಿರುವರು. ಆದರೆ ಯಾವ ಕಾಲದಲ್ಲಿಯೂ ನ್ಯಾಯಸಮ್ಮತವಾದ ಉತ್ತರಗಳನ್ನು ಕಂಡುಕೊಳ್ಳಲು ಆಗಿಲ್ಲ ಎಂಬುದನ್ನು ಚರಿತ್ರೆಯ ಓದು ನಮ್ಮರಿವಿಗೆ ತಂದಿದೆ. ಹೀಗಾಗಿಯೆ ನಾವು ಮತ್ತೇ ಇಂದು ವರ್ತಮಾನದಲ್ಲಿ ನಿಂತು ಹಿಂಚಲನೆಯಿಂದ ಬೆನ್ನ ಹಿಂದಿನ ಕತ್ತಲಿನಲ್ಲಿ ಹುಗಿದು ಹೋಗಿರುವ ಅವಳ ಹೆಜ್ಜೆಗಳ ಆಕಾರಗಳನ್ನು ಹುಡುಕುವ ಮತ್ತೆ ಭವಿಷತ್ತಿನ ಹೆಜ್ಜೆಗಳಿಗೆ ಸುಗಮ ಹಾದಿ ನಿರ್ಮಿಸುವ ಇರಾದೆ ಈ ಶತಮಾನದ ಮಹಿಳೆಯರ ಜಾಗೃತ ಪ್ರಜ್ಞೆಯ ಭಾಗವೆಂದೆ ಭಾವಿಸಿರುವೆ.

**ಕಿಂಡಿಯಲ್ಲಿ ಕಂಡ ಜಗತ್ತು :** ವೇದ, ಉಪನಿಷತ್ತುಕಾಲೀನ ಸಮಾಜದಲ್ಲಿ ಮಹಿಳೆಯರಿಗೆ ಗೌರವದ ಸ್ಥಾನವಿತ್ತೆಂದು ಸನಾತನಿಗಳು ಅರ್ಧಸತ್ಯಗಳನ್ನು ಪೂರ್ಣ ಸತ್ಯಗಳಾಗಿ ಸುವುದಕ್ಕಾಗಿ ಎಷ್ಟೊಂದು ಹೆಣಗಾಡಿದರು ಎಂಬುದಕ್ಕೆ ಸಾಕ್ಷಿ ಪುರಾವೆಗಳ ಮೊರೆ ಹೋಗುವ ಅಗತ್ಯವಿಲ್ಲ. ಹೊರ ಆಕ್ರಮಣಿಗರು ಮತ್ತು ಒಳ ಮೂಲವಾಸಿಗಳ ಸಂಘರ್ಷ, ಸೌಹಾರ್ದ, ಸಮನ್ವಯತೆಗಳಿಂದ ರೂಪುಗೊಂಡ ಸಮಾಜದಲ್ಲಿ ಹೆಣ್ಣಿನ ಹುಟ್ಟಿನ ಬಗ್ಗೆ ಏಕಾಭಿಪ್ರಾಯಗಳಿಲ್ಲವೆಂಬುದನ್ನು ವೇದಗಳಲ್ಲಿರುವ ಕೆಲವು ಋಕ್ಕಗಳಲ್ಲಿ ಕಾಣಬಹುದು. ಋಗ್ವೆದ ಮತ್ತು ಅಥರ್ವಣ ವೇದಗಳಲ್ಲಿ ಹೆಣ್ಣಿನ ಸಾಮಾಜಿಕ ಸ್ಥಾನಮಾನಗಳ ಕುರಿತಂತೆ ಪ್ರಸ್ತಾಪಿಸಲಾಗಿದೆ. ಋಗ್ವದದಲ್ಲಿ ಗಂಡು ಮಗುವಿನ ಬಗ್ಗೆ ಸಮಾಜದಲ್ಲಿ ಬೇಡಿಕೆಯಿತ್ತು ಎಂದು ಹೇಳಿದರೆ ಅಥರ್ವಣ ವೇದದ ಋಕ್ಕೊಂದರಲ್ಲಿ ಮಗ ಹುಟ್ಟಲೆಂದು ಪ್ರಾರ್ಥನೆಗೈಯುತ್ತಿದ್ದರು ಎಂಬುದರ ಉಲ್ಲೇಖವಿದೆ.

“ಗಂಡು ಮಗುವನ್ನು ಪಡೆಯುವುದಕ್ಕಾಗಿ ವೇದಗಳು ಒಂದು ವಿಶೇಷ ಆಚರಣೆಯನ್ನು ಗೊತ್ತುಪಡಿಸಿವೆ. ಅದನ್ನು 'ಪುಂಸವನ' ಸಂಸ್ಕಾರ ಎಂದು ಕರೆಯುತ್ತಾರೆ. ಇದು



ಮೂರು ತಿಂಗಳ ಗರ್ಭಿಣಿ ಇದ್ದಾಗ ಮಾಡುವ ಒಂದು ಸಂಸ್ಕಾರ” . “ಪ್ರಜಾಪತಿಯೆ, ನೀನು ಈ ಗರ್ಭವನ್ನು ಸೃಷ್ಟಿಸಿದ್ದೀಯೆ. ಈ ಗರ್ಭದಿಂದ ಗಂಡು ಸಂತಾನ ಜನಿಸಲಿ. ಹೆಣ್ಣು ಸಂತಾನ ಇನ್ನೆಲ್ಲಿಯಾದರೂ ಆಗಲಿ” , “ಪ್ರಜಾಪತಿಯೆ ಹುಟ್ಟುವ ಗಂಡು ಮಗುವನ್ನು ಕಾಪಾಡು. ಅವನನ್ನು ಮಹಿಳೆಯನ್ನಾಗಿ ಮಾಡಬೇಡ” [ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ-ವೇದಗಳಲ್ಲಿಯ ಮಹಿಳೆಯರು] ಎಂಬುದರಲ್ಲಿ ಗಂಡಿನ ಪ್ರಧಾನತೆಯನ್ನು ಸಮಾಜ ಎತ್ತಿಹಿಡಿದು ಹೆಣ್ಣಿನ ಕುರಿತಂತೆ ಸಮಾಜದಲ್ಲಿ ನಕಾರಾತ್ಮಕ ಧೋರಣೆಯಿತ್ತು ಎಂಬುದು ತಿಳಿಯುತ್ತದೆ. ಈ ಶಾಸ್ತ್ರೋಕ್ತ, ವೇದೋಕ್ತ ಸಂಗತಿಗಳು ಕಾಲಾನಂತರದಲ್ಲಿ ಎಲ್ಲ ವರ್ಣಗಳಲ್ಲಿಯು ಈ ನಂಬಿಕೆಗಳು ಆಚರಣೆಗೆ ಬರುವುದಕ್ಕೆ ಉದಾರವಾಗಿ ಶ್ರಮಿಸಿವೆ. ಇಂದಿಗೂ ಚೊಚ್ಚಲು ಗರ್ಭಿಣಿಯರಿಗೆ ಹಳ್ಳಿಗಳಲ್ಲಿ ಅಂಬಲಿಗಡಿಗೆ ಪೂಜೆಮಾಡಿಸುವುದರ ಮೂಲಕ ಸ್ತ್ರೀವಿರೋಧಿ ಧೋರಣೆ ಚಾಲ್ತಿಯಲ್ಲಿರಿಸಿರುವುದನ್ನು ಗಮನಿಸಬಹುದು. ಇದೇ ಆಶಯವನ್ನು ನಮ್ಮ ಜನಪದ ಮಹಿಳೆಯರು ಹಂಬಲಿಸಿರುವುದನ್ನು ಗಮನಿಸುವಾಗ ಲಿಂಗರಾಜಕಾರಣ ವರ್ಣಜಿಗಿತವನ್ನು ಕಾಲದೊಂದಿಗೆ ಹೊಸೆದಿತ್ತು. ಶೂದ್ರ ಮಹಿಳೆಯರು ತಮ್ಮನ್ನು ಬೇಟೆಯಾಡಲು ಬಳಸಿದ್ದ ಹತ್ಯಾರಗಳನ್ನೇ ತನ್ನೊಡಲಿನಲ್ಲಿ ಮತ್ತು ಮಡಿಲಿನಲ್ಲಿಟ್ಟುಕೊಳ್ಳುವುದರ ಹಿಂದೆ ವೈದಿಕ ಹಿತಗಳ ಸಾಮಾಜಿಕ ಒತ್ತಡಗಳಿವೆ.

ಬೇಟೆ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಯೆಡೆಗಿನ ಸಾಗುದಾರಿಯಲ್ಲಿ ಸ್ತ್ರೀ ತನ್ನ ಚರಿತ್ರೆಯ ಕೊಂಡಿಯನ್ನು ಕಳಚಿಕೊಂಡದ್ದಕ್ಕೆ ಕಾರಣಗಳು ಸಿಗುತ್ತವೆ. ನೇಗಿಲಿನ ಆವಿಷ್ಕಾರ, ಬೆಂಕಿಯ ಬಳಕೆ ಹೆಣ್ಣಿನ ಕೈಯಲ್ಲಿಯ ಕಟ್ಟುವಿಕೆಯ ಆಯುಧಗಳನ್ನು ಗಂಡಸು ವಶಪಡಿಸಿಕೊಂಡದ್ದರ ಹಿಂದೆ ಬಹುದೊಡ್ಡ ಚರಿತ್ರೆಯಿದೆ. ಇದನ್ನು ಕುಟುಂಬ, ಖಾಸಗಿ, ಆಸ್ತಿಯ ಉಗಮದೊಂದಿಗೆ ಕಾಣಬಹುದು. ಅಲೆಮಾರಿ ಸಮುದಾಯಗಳು ಕಾದಾಟದಲ್ಲಿಯೇ ಬದುಕುತ್ತಿದ್ದ ಕಾರಣ ಕಾದಾಟಕ್ಕೆ ಗಂಡಿನ ಅಗತ್ಯತೆ ಕಾಣಿಸಿಕೊಂಡಿರಬಹುದು ಎಂದು ಸುಲಭವಾಗಿ ಚರಿತ್ರೆಕಾರರು ಹೇಳಿದ್ದನ್ನು ಗಂಡು ಬೇಡಿಕೆಯನ್ನು ಸಮರ್ಥಿಸುವುದಕ್ಕೆ ಧಾರಾಳವಾಗಿ ಬಳಸಿಕೊಳ್ಳಲಾಗಿದೆ. ಹೀಗೆ ಭಾವಿಸುವುದರ ಮೂಲಕ ಹೆಣ್ಣಿನ ದೈಹಿಕ ಶಕ್ತಿಯನ್ನು ನಿರಾಕರಿಸಲಾಗಿದೆ. ಆಕೆಯ ಶಕ್ತಿಯನ್ನು ಕರ್ತವ್ಯದ ಕಕ್ಷೆಯಲ್ಲಿ ಕಟ್ಟಿಹಾಕಿ ಹಲವು ಪಾತ್ರಗಳ ನಿರ್ವಹಣೆಯನ್ನು ಹೊರಿಸಲಾಗಿದೆ. ಈ ಪಾತ್ರಗಳ ಕುರಿತಂತೆ ಋಗ್ವದದಲ್ಲಿ ಮಾಹಿತಿಗಳು ದೊರೆಯುತ್ತವೆ. ಗಂಡಸಿನ ಅಧೀನದಲ್ಲಿರುವ ಹೆಣ್ಣೊಬ್ಬಳು ನಿಷ್ಠೆಯಿಂದ ಮೂರು ಪಾತ್ರಗಳನ್ನು ಆದ್ಯ ಕರ್ತವ್ಯಗಳೆಂದೂ ಕಡ್ಡಾಯವಾಗಿ ಮಾಡಬೇಕು ಎಂಬುದರ ಹಿಂದೆ ಕುಟುಂಬದ ಪರಿಕಲ್ಪನೆ ಗಟ್ಟಿಗೊಂಡಿರುವುದು ಕಾಣಿಸುತ್ತದೆ. “ಗಂಡನನ್ನು ಪ್ರೀತಿಸುವವಳನ್ನು ಜಯಳೆಂದು ಅಧೀನಕ್ಕೊಳಪಡಿಸಿಕೊಂಡ ಗಂಡನ ಮಕ್ಕಳ ತಾಯಿಯನ್ನು 'ಜಾನಿ'ಯಂದು,

ಗಂಡನ ಆಚರಣೆಗಳಲ್ಲಿ ಅವನ ಆಜ್ಞೆಯಂತೆ ಭಾಗಿಯಾದವಳನ್ನು 'ಪತ್ನಿ' ಎಂದು ಕರೆಯುವುದರ ಮೂಲಕ ಪುರುಷಾಧಿಪತ್ಯ ಮುನ್ನೆಲೆಗೆ ಬರತೊಡಗಿದೆ. ರಾಜರು ಮತ್ತು ಬಲಿಷ್ಠ (ಧಾರ್ಮಿಕವಾಗಿ, ಆರ್ಥಿಕವಾಗಿ) ಗಂಡಸರು ಬಹುಪತ್ನಿತ್ವ ಪದ್ಧತಿಯನ್ನು ರೂಢಿಯಲ್ಲಿ ತಂದಿದ್ದರು. ಇದಕ್ಕೆ ವಿರುದ್ಧವಾಗಿ ಕೌತುಕಮಯ ಸಂಗತಿಗಳು ಋಗ್ವದದಲ್ಲಿ ಉಲ್ಲೇಖಿತವಾಗಿವೆ. ಈ ಸಂಗತಿಗಳು ಪ್ರಧಾನತೆಯನ್ನು ಎತ್ತಿ ಹಿಡಿಯುವುದಕ್ಕೆ



ಬಳಕೆಗೊಳ್ಳುವುದಕ್ಕೆ ಉಲ್ಲೇಖಿತವಾದವುಗಳಲ್ಲ. ಇಷ್ಟೊತ್ತಿಗಾಗಲೇ ವರ್ಣವ್ಯವಸ್ಥೆ ಹೆಣ್ಣನ್ನು ಲೈಂಗಿಕ ಶುದ್ಧಾಶುದ್ಧಿಯ ಪ್ರಮೇಯದಲ್ಲಿ ದಾಖಲಿಸಿತ್ತು. ಬಹುಪತಿತ್ವದ ಬಗ್ಗೆ ಕೂಡ ಋಗ್ವದದಲ್ಲಿ ಉಲ್ಲೇಖವಿದೆ." ಒಬ್ಬ ಹೆಂಗಸು ಮೊದಲು ಹತ್ತು ಮಂದಿ ಬ್ರಾಹ್ಮಣರಲ್ಲದ ಗಂಡಂದಿರನ್ನು ಹೊಂದಿರಲಿ, ಒಬ್ಬ ಪುರೋಹಿತ ಅವಳ ಕೈ ಹಿಡಿದರೆ ಅವನೊಬ್ಬನೇ ಅವಳ ಗಂಡನಾಗುತ್ತಾನೆ. ಬ್ರಾಹ್ಮಣರು ಮಾತ್ರ ಅವಳ ಗಂಡ ರಾಜನೂ ಅಲ್ಲ, ವೈಶ್ಯನೂ ಅಲ್ಲ ಎಂದು ಒಂದು ಋಕ್ಕು ಹೇಳುತ್ತದೆ. [ಕನ್ನಡ ಕಾವ್ಯಕಂಡ ಹೆಣ್ಣು, ಸಿ.ವೀರಣ್ಣ ಇದು ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣ್ಯದ ಹಿಡಿತ ಗಟ್ಟಿಗೊಳ್ಳುತ್ತಿರುವುದನ್ನು ಅದೇ ಸಂದರ್ಭದಲ್ಲಿ ಹೆಣ್ಣಿಗೆ ಲೈಂಗಿಕ ಸ್ವಾತಂತ್ರದ (ಬಹುಪತಿತ್ವದ) ಅವಕಾಶವನ್ನು ಕಿತ್ತುಕೊಂಡದ್ದನ್ನು ಬಿಂಬಿಸುತ್ತದೆ. ಋಗ್ವದದ ಕಾಲಕ್ಕಾಗಲೇ ಸೀ ಬದುಕಿನ ಅಧಃಪತನ ಪ್ರಾರಂಭವಾಗಿತ್ತು. ಹೆಣ್ಣಿನ ವಿಷಯದಲ್ಲಿ ವೇದಕಾಲೀನ ಸಮಾಜ ಉದಾರವಾಗಿರಲಿಲ್ಲ. ವೆಂಬುದನ್ನು ಹಲವಾರು ಋಕ್ಕುಗಳಲ್ಲಿ ಸ್ತ್ರೀ ಸಂಬಂಧಿ ಹೇಳಿಕೆಗಳಿರುವುದರ ಮೂಲಕ ನೋಡಬಹುದು. ಹೆಣ್ಣಿನ ಬುದ್ಧಿಯನ್ನು ಅಳೆಯಲು ಸಾಧ್ಯವಿಲ್ಲ.. ಹೆಣ್ಣಿನ ಪ್ರೇಮ ಯಾವಾಗಲೂ ಚಂಚಲ' "ಹೆಣ್ಣಿನ ಹೃದಯ ಕಿರುಬನ ಹೃದಯದಂತಿಹದು" ಎಂಬ ಹೇಳಿಕೆಗಳಿಂದ ಸ್ತ್ರೀಯನ್ನು ಅಪಮಾನಿಸಲಾಗಿದೆ.

ಅತ್ಯಂತ ಕಟ್ಟುನಿಟ್ಟಿನ ನಿಯಮಗಳನ್ನು ವೇದಕಾಲೀನ ಸಮಾಜ ಮಹಿಳೆಯರಿಗೆ ವಿಧಿಸಿತ್ತು. ಕೆಲವು ಪ್ರಸಂಗಗಳಲ್ಲಿ ಧಾರಾಳವಾಗಿ ನಡೆದುಕೊಂಡದ್ದರ ಕುರಿತು ಉಲ್ಲೇಖಗಳಿವೆ. ಹೆಣ್ಣಿಗೆ ವಿದ್ಯೆ ನೀಡುವ ವಿಚಾರದಲ್ಲಿ ಒಂದಿಷ್ಟು ಧಾರಾಳತೆಯನ್ನು ಪ್ರದರ್ಶಿಸಿದೆ. ಅದು ವರ್ಣವ್ಯವಸ್ಥೆಯನ್ನು ಮುಂದಿಟ್ಟುಕೊಂಡೆ ಎನ್ನುವುದನ್ನು ಗಮನಿಸಬೇಕು. ವೇದಗಳ ಕಾಲದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರ ಮಧ್ಯೆ ವಿವಾಹಗಳು ನಡೆದಿರುವ ಉಲ್ಲೇಖಗಳಿವೆ. ಹೀಗಾಗಿ ಈ ಎರಡೂ ವರ್ಣಗಳಿಗೆ ವಿದ್ಯೆಯೆ ಪ್ರಧಾನವಾದ ಸಂಪತ್ತಾದ ಕಾರಣ ಅದನ್ನು ಕುಟುಂಬ ಮೂಲದ ಹೆಣ್ಣು ಮಕ್ಕಳಿಗೂ ಹಂಚಿದ್ದರ ಹಿಂದೆ ಸಾರ್ವತ್ರಿಕ ಹಿತವಿರಲಿಲ್ಲ. ಪುತ್ರನಿಲ್ಲದ ಮನೆಯಲ್ಲಿ ಪುತ್ರಿಯರು 'ಪುತ್ರಿಕಳಾಗಿ ಮಗನ ಕರ್ತವ್ಯಗಳನ್ನು ನಿರ್ವಹಿಸಿರುವರು. ಕ್ಷತ್ರಿಯಳಾದ ಘೋಷಾ ಋಗ್ವೆದದ ಅನೇಕ ಋಕ್ಕೂಗಳನ್ನು ರಚಿಸಿದಳೆಂಬ ಖ್ಯಾತಿಯಿದೆ. "ಲೋಪಾ ಮುದ್ರಾ, ಮಮತಾ, ಉಪಾಲಾ, ಸೂರ್ಯ, ಇಂದ್ರಾಣಿ, ಶಚೀ, ಸರ್ಸರಾಜ್ಞೆ ಮತ್ತು ವಿಶ್ವಾವರ" [ಕನ್ನಡ ಕಾವ್ಯಕಂಡ ಹೆಣ್ಣು, ಸಿ.ವೀರಣ್ಣ] ಇವರೆಲ್ಲರೂ ಋಕ್ಕುಗಳ ಕರ್ತೃಗಳೆಂದು ಹೇಳಲಾಗಿದೆ.

ವಿಶ್ವಾವರಳಂತೂ ಅಗ್ನಿಯನ್ನು ಕುರಿತು ಋಕ್ಕುಗಳನ್ನು ರಚಿಸಿದ್ದಲ್ಲದೆ ಯಜ್ಞದಲ್ಲಿ ಋತ್ವಿಕನ ಕಾರ್ಯವನ್ನು ನೆರವೇರಿಸಿದಳೆಂದು ಹೇಳಲಾಗಿದೆ.

ವೇದಗಳ ಕಾಲದಲ್ಲಿಯೇ ಕುಟುಂಬ, ಖಾಸಗಿ ಆಸ್ತಿಯ ಪರಿಕಲ್ಪನೆಗಳು ಗಟ್ಟಿಗೊಂಡು ಸ್ತ್ರೀಮೂಲೀಯತೆಯನ್ನು ನಿರ್ನಾಮ ಮಾಡುವ ಎಲ್ಲ ಯೋಜನೆಗಳು ಸಿದ್ಧಗೊಂಡಂತಿದೆ. ಗಂಡು ಮಗುವನ್ನು ಪಡೆಯುವುದಕ್ಕಾಗಿಯೇ ಹಲವಾರು ಆಚರಣೆಗಳು ಕಾಣಿಸಿಕೊಂಡಿವೆ. ಹುಣ್ಣಿಮೆ ಅಮಾವಾಸ್ಯೆಯ ದಿನ ಯಜ್ಞಯಾಗಾದಿಗಳನ್ನು ವಿಶೇಷವಾದ ರೀತಿಯಲ್ಲಿ ಆಚರಿಸುತ್ತ ದೇವರಿಗೆ ಗಂಡುಮಗುವನ್ನು ನೀಡು ಎಂದು ಬೇಡಿಕೊಳ್ಳುವ ಆಚರಣೆಗಳು ಸಿಗುತ್ತವೆ. ಐತರೇಯ ಬ್ರಾಹ್ಮಣದಲ್ಲಿ ರಾಜ ಹರಿಶ್ಚಂದ್ರನ ಕಥೆ ಬರುತ್ತದೆ. ಅವನಿಗೆ ನೂರು ಜನ ಹೆಂಡತಿಯರಿದ್ದರೂ ಒಂದೂ ಗಂಡು ಮಗುವಿರಲಿಲ್ಲ. ಅವನ ಆಸ್ಥಾನದ



ಬ್ರಾಹ್ಮಣ ವಿದ್ವಾಂಸರು ಪುತ್ರನ ಪ್ರಾಮುಖ್ಯತೆಯನ್ನು ಅವರಿಗೆ ಹೀಗೆ ವಿವರಿಸಿ ಹೇಳುತ್ತಾರೆ. "ತಂದೆಯ ಋಣ ಮಗನ ಮೇಲಿರುತ್ತದೆ. ತಂದೆಯೂ ಮಗನ ಮುಖ ನೋಡಿದ ಕೂಡಲೇ ಅಮರತ್ವವನ್ನು ಪಡೆದು ಋಣಮುಕ್ತನಾಗುತ್ತಾನೆ.... ಮಗನು ಮುಕ್ತಿಯ ನಾವೆ, ಅತ್ಯುನ್ನತ ಸ್ವರ್ಗದ ಬೆಳಕು. ಹೆಂಡತಿಯು ಜೊತೆಗಾತಿ. ಆದರೆ ಮಗಳು ನೋವಿನ ಶೂಲೆ" [ಬಿ.ವಿ. ವೀರಭದ್ರಪ್ಪ: ವಿಚಾರ ಸಾಹಿತ್ಯ-ವೇದಗಳಲ್ಲಿಯ ಮಹಿಳೆಯರು] ಎಂದು ಉಪದೇಶಿಸುವುದರ ಮೂಲಕ ಹೆಣ್ಣಿನ ಹುಟ್ಟಿನ ಬಗ್ಗೆ ಭಯವನ್ನು ಬಿತ್ತಲಾಯಿತು. ರಾಜನನ್ನು ನಿಯಂತ್ರಿಸುತ್ತಿರುವ ಈ ಪುರೋಹಿತಶಾಹಿ ವರ್ಗದಿಂದಲೇ ಮಹಿಳಾ ಸ್ವಾತಂತ್ರ್ಯದ ಹರಣ ಮತ್ತು ಅವಳ ಅಸ್ತಿತ್ವದ ನಿರಾಕರಣೆಯಾದಂತಿದೆ. ಯಾಕೆ ಈ ಪುರೋಹಿತ ವರ್ಗವು ಹೆಣ್ಣಿಗೆ ಇಂತಹ ಶಿಕ್ಷೆಗಳನ್ನು ನೀಡಿರಬೇಕು ಎಂಬುದನ್ನು ನೋಡುವುದಾದರೆ ಮಾತೃಮೂಲ ಸಂಸ್ಕೃತಿಯ ನಾಯಕತ್ವದಲ್ಲಿದ್ದ ನಿಸರ್ಗಜ್ಞಾನ, ಅವರ ದೈಹಿಕ ಸಾಮರ್ಥ್ಯವನ್ನು ಎದುರಿಸುವ ಶಕ್ತಿ ಸಾಲದ ಪುರೋಹಿತಶಾಹಿ ವರ್ಗವು ಕಾಲಕ್ರಮೇಣ ತಂತ್ರ ಪ್ರಧಾನವಾದ ಪುರುಷಯುಕ್ತಿಯನ್ನು ಬಲಗೊಳಿಸುತ್ತಾ ಸ್ತ್ರೀಮೂಲಿಯ ಬಲಿಷ್ಠ ಗಂಡಸರನ್ನು ನಾಯಕರನ್ನಾಗಿಸಿ ಅವರನ್ನು ವಿಶೇಷವಾಗಿ ನಿಯಂತ್ರಿಸುತ್ತ ಮಾತೃ ಮೂಲ ಸಮುದಾಯಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಹೂಡಿದ ಬಹುದೊಡ್ಡ ಸಂಚು ಮಾನವ ಚರಿತ್ರೆಯಲ್ಲಡಗಿದೆ. ಈ ಸಂಚಿನ ಮೊದಲ ಬಲಿಪಶು ಹೆಣ್ಣು ಎಂಬುದನ್ನು ಕಾಲ ಅರಗಿಸಿಕೊಂಡ ಬಹುದೊಡ್ಡ ಪ್ರಮಾದವಿದು.

ಈ ವೇದಕಾಲೀನ ಸಮಾಜ ಹೆಣ್ಣನ್ನು ಅತ್ಯಂತ ಹೀನಾಯವಾಗಿ ಕಂಡಿದೆ. ಶೂದ್ರರು, ನಾಯಿಗಳು ಮತ್ತು ಕಾಗೆಗಳ ಗುಂಪಿಗೆ ಮಹಿಳೆಯರು ಸೇರುತ್ತಾರೆ ಎಂದು ಹೇಳುವುದರ ಮೂಲಕ ಸ್ತ್ರೀ ಸಮುದಾಯವನ್ನು ಮನುಷ್ಯ

ಸಮಾಜದಿಂದ ಹೊರಗಿಟ್ಟಿದೆ. ಬಹುಪತ್ನಿತ್ವವನ್ನು ಮತ್ತು ಪ್ರಭುತ್ವವನ್ನು ಒಪ್ಪಿಕೊಂಡಿರುವ ಈ ಯುಗದಲ್ಲಿ ಮಹಿಳೆಯರನ್ನು ಪ್ರಾಣಿಗಳೊಂದಿಗೆ ಅದರಲ್ಲೂ ಕುದುರೆಗಳೊಂದಿಗೆ ಲೈಂಗಿಕ ಕ್ರಿಯೆಗೆ ಒತ್ತಾಯಿಸಿರುವ ಉಲ್ಲೇಖಗಳಿವೆ. ಕುದುರೆಯನ್ನು ಯಾಕೆ ಆಯ್ಕೆ ಮಾಡಿಕೊಂಡರೆಂದರೆ ಅದರ ಶಕ್ತಿ, ಗಮ್ಯತೆಯ ಕಾರಣದಿಂದ. ರಾಜರಿಗೆ ಬಲಿಷ್ಠ ಗಂಡು ಸಂತಾನದ ಅಗತ್ಯವಿತ್ತು. ಈ ಕಾರಣಕ್ಕಾಗಿ ರಾಣಿಯರನ್ನು ಕುದುರೆಯೊಂದಿಗೆ ಲೈಂಗಿಕ ಕ್ರಿಯೆಗೆ ಒತ್ತಾಯಿಸುವುದಷ್ಟೆ ಅಲ್ಲ ಸ್ವತಃ ಹಿರಿಯ ರಾಣಿಯರು ಕುದುರೆಯ ಮಗ್ಗುಲಲ್ಲಿ ಮಲಗಿ ಬಲಿಷ್ಠಗಂಡು ಮಗುವನ್ನು ನೀಡು ಎಂದು ಪ್ರಾರ್ಥಿಸುತ್ತಿದ್ದರು ಎಂಬ ಪ್ರಸಂಗಗಳನ್ನು ವೇದಕಾಲದಲ್ಲಿ ಗಮನಿಸಬಹುದಾಗಿದೆ. ಹೆಂಡತಿ ತನ್ನ ಸೇವೆ ಮಾಡಲು ಮತ್ತು ತನ್ನ ವಾರಸುದಾರನನ್ನು ಹೆತ್ತುಕೊಡಲು ದೇವರು ಕೊಟ್ಟಿರುವ ಹೆಣ್ಣು. ಅವಳು ತನ್ನ 'ಪೋಷ್ಯ'ಳು ಅಂದರೆ ಆಶ್ರಿತಳು ಎಂದು ಹೇಳಲಾಗಿದೆ. ಬಹುಪತ್ನಿತ್ವವನ್ನು ಒಪ್ಪಿದ ವೇದಕಾಲೀನ ಸಮಾಜದಲ್ಲಿ ಪಟ್ಟದ ರಾಣಿಗಿದ್ದ ಸ್ಥಾನಮಾನಗಳು ಉಳಿದ ಸ್ತ್ರೀಯರಿಗೆ ಇರಲಿಲ್ಲವೆಂಬುದನ್ನು ಗಮನಿಸಬೇಕು. ಪಟ್ಟದ ರಾಣಿಗೆ ಉಳಿದೆಲ್ಲ ರಾಣಿಯರು ಅಧೀನರಾಗಿಯೆ ಇರಬೇಕಾಗಿತ್ತು. ಪಟ್ಟದರಸಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಮಾತ್ರ ರಾಜ್ಯಪಟ್ಟ ದೊರೆಯುತ್ತಿತ್ತು. ಹೀಗಾಗಿಯೇ ಪಟ್ಟದರಸಿಯರು ಪುತ್ರ ಸಂತಾನಕ್ಕಾಗಿ ಕುದುರೆಯೊಂದಿಗೆ ಮಲಗಲು ಮುಂದಾಗುತ್ತಿದ್ದರು. ಇದನ್ನು ಒಂದಿಷ್ಟು ಸೂಕ್ಷ್ಮವಾಗಿ ಗಮನಿಸಿದರೆ



ವರ್ಣವ್ಯವಸ್ಥೆಯ ಶ್ರೇಣೀಕೃತತೆ ಹೇಗೆ ಕೆಲಸ ಮಾಡಿದೆ ಎಂಬುದು ಅರ್ಥವಾಗುತ್ತದೆ. ಯುದ್ಧವೆಂಬುದು ಸಮುದಾಯ-ಸಮುದಾಯಗಳ ಮಧ್ಯೆ ನಡೆಯುತ್ತಿರುವ ಹೊತ್ತಿನಲ್ಲಿ ಸೋತ ಸಮುದಾಯದ ರಾಜರು, ರಾಣಿಯರು, ಗುಲಾಮರು ಸೇವಕರಾದಿಯಾಗಿ ಸಮಸ್ತವು ಗೆದ್ದವರಿಗೆ ದಕ್ಕುತ್ತಿತ್ತು. ಗೆದ್ದ ರಾಜನ ಪಟ್ಟದರಸಿಯರ ಜೊತೆಗೆ ಸೋತ ರಾಜನ ರಾಣಿಯರು ಸೇವಕರಾಗಿ ಅರಸಿಯರಾಗಿ ಅರಮನೆಯಲ್ಲಿರುತ್ತಿದ್ದರು. ಇಂತಹ ಸಂದರ್ಭದಲ್ಲಿ ಪಟ್ಟದರಸಿಯರಿಗೆ ಗಂಡು ಸಂತಾನವಿಲ್ಲದಿದ್ದರೆ ಅದು ರಾಜನ ದೋಷವಾಗಿ ಕಾಣಿಸದೆ ಅದನ್ನು ಮರೆಮಾಚುವ ಸಲುವಾಗಿ ಕುದುರೆ, ನಿಯೋಗದಂತಹ ಪದ್ಧತಿಗಳು ಆಪತ್‌ಧರ್ಮವಾಗಿ ಕಾಣಿಸಿಕೊಂಡಿವೆ. ಈ ನಿಯೋಗಕ್ಕೆ ಸಿದ್ಧಗೊಂಡ ಗಂಡಸರೆಲ್ಲರು ಬ್ರಾಹ್ಮಣ ಪಂಡಿತರೆ ಆಗಿರುತ್ತಿದ್ದರು. ಮಹಾಭಾರತವನ್ನು ನೆನಪಿಸಿಕೊಂಡರೆ ಇದು ಅರ್ಥವಾಗುತ್ತದೆ. ಬೀಜ ಮತ್ತು ಕ್ಷೇತ್ರದ ಪರಿಕಲ್ಪನೆಯ ಮೂಲಕ ಸ್ತ್ರೀ ಸಮುದಾಯವನ್ನು ಶ್ರೇಣೀಕರಣದಲ್ಲಿ ಹಂಚಲಾಯಿತು. ಈ ಹಂಚಿಕೆಯನ್ನು ಸಮರ್ಥಿಸಿಕೊಳ್ಳಲು ಹೆಣ್ಣಿಗೆ ಹೆಣ್ಣನ್ನೆ ಶತ್ರುವಾಗಿಸಿದರು.

ಸ್ಮೃತಿಗಳನ್ನು ಧರ್ಮಶಾಸ್ತ್ರಗಳೆಂದು ಕರೆಯಲಾಗಿದೆ. ಈ ಶಾಸ್ತ್ರಗಳು ಸಮಾಜವನ್ನು ನಿಯಂತ್ರಿಸುವ ಅಂಕುಶಗಳಂತೆ ಕಾರ್ಯಮಾಡಿವೆ. ವೇದಗಳ ಕಾಲದಲ್ಲಿ ಪುರುಷನ ಖಾಸಗಿ ಆಸ್ತಿಯಾಗಿ ಕುಟುಂಬ ಸೇರಿದ್ದ ಹೆಣ್ಣು ಚರಾಸ್ತಿಯಂತೆ ಬಳಕೆಗೊಂಡಿರುವುದನ್ನು ಕಾಣಬಹುದು. ಬಹುಪತಿತ್ವ ಮತ್ತು ಬಹುಪತ್ನಿತ್ವ ಈ ಎರಡರಲ್ಲಿಯೂ ಹೆಣ್ಣಿನ ಅಸ್ತಿತ್ವವನ್ನು ನಿರಾಕರಿಸಲಾಗಿದೆ. ಈ ಹಂತದಲ್ಲಿ ಮಹಿಳೆಯರನ್ನು ಚರಾಸ್ತಿಯನ್ನಾಗಿಸಲಾಗಿದೆ. ಇವುಗಳ ಮಧ್ಯ ಇರುವ ವ್ಯತ್ಯಾಸವೆಂದರೆ ಅನೇಕ ಪುರುಷರು ಒಂದು ಹೆಣ್ಣನ್ನು ಹೊಂದಿದ್ದರೆ ಇನ್ನೊಂದರಲ್ಲಿ ಒಬ್ಬ ಪುರುಷ ಅನೇಕ ಹೆಣ್ಣುಗಳ ಒಡೆಯನಾಗುವ ಸವಲತ್ತನ್ನು ಪಡೆದಿದ್ದ. ಸಂಪತ್ತು, ಪುಸ್ತಕ ಮತ್ತು ಸ್ತ್ರೀಯರನ್ನು ನೋಡಿಕೊಳ್ಳಲು ಬೇರೊಬ್ಬರನ್ನು ಬಿಡಬಾರದು, ಬೇರೆಯವರ ಕೈಗೆ ಕೊಡಬಾರದೆಂದು ಹೇಳಲಾಗಿದೆ. ಅದನ್ನು ಇಂದು ಪಠ್ಯದಲ್ಲಿ ಶಾಸ್ತ್ರೋಕ್ತವಾಗಿ ಉಳಿಸಿ ಗ್ರಂಥ ಸಂಪಾದನೆಯ ಸಂದರ್ಭದಲ್ಲಿ ಗ್ರಂಥಗಳನ್ನು ಹೇಗೆ ರಕ್ಷಿಸಬೇಕು ಎಂಬುದನ್ನು ಹೇಳುವಾಗ "ಪುಸ್ತಕಂ ವನಿತಂ, ವಿತ್ತಂ ಪರಹಸ್ತಂ ಗತಂ ಗತಾ...." ಗ್ರಂಥವನ್ನು ಅನ್ಯರ ಕೈಗಿತ್ತರೆ ಅದು ಮರಳುವಾಗ ಹರಿಯುವ ಭಯಕಾಡಿದೆ. ಹಾಗೆನೇ ಹಣವನ್ನು ಬೇರೆಯವರಿಗೆ ನೀಡಿದರೆ ಅದು ಇದ್ದರೂಪದಲ್ಲಿ ಮರಳಲಾರದು. ಹಾಗೆನೇ ಹೆಣ್ಣನ್ನು ಇನ್ನೊಬ್ಬರಿಗೆ ನೀಡಿದರೆ ಅವಳು ಭ್ರಷ್ಟಳಾಗಿ ಬರುತ್ತಾಳೆ ಎನ್ನುವುದರ ಹಿಂದೆ ಯಜಮಾನನಿಗೆ ಹೆಣ್ಣಿನ ದೇಹದ ಮೇಲಿನ ಹಕ್ಕು ಕಳೆದುಕೊಳ್ಳುವ ಲೈಂಗಿಕ ಭಯದಿಂದ ಹೆಣ್ಣನ್ನು ಕಾಯುವಂತೆ ಮಾಡಿದ ಗಂಡಸಿನ ಮನಸ್ಥಿತಿಗೆ ಶಾಸ್ತ್ರಗ್ರಂಥಗಳೇ ಕಾರಣ. ಹೆಣ್ಣಿನ ಬಗ್ಗೆ ಎಷ್ಟೊಂದು ನಕಾರಾತ್ಮಕ ಧೋರಣೆಯಿತ್ತು ಎನ್ನುವುದನ್ನು ಸ್ಥಿತಿಗಳ ಕಾಲದಲ್ಲಿ ಕಾಣಬಹುದು.

ಸ್ಮೃತಿಗಳು ಹೆಣ್ಣು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲವೆನ್ನುತ್ತವೆ. ಆಕೆಯನ್ನು ಅನ್ಯಾಶ್ರಯದಲ್ಲಿರಿಸುವಾಗ ಮನು ಹೇಳಿದ ಮಾತುಗಳಿಗೆ ಇಂದಿಗೂ ಮರಣವಿಲ್ಲ. ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಗನ ಆಶ್ರಯವನ್ನು ಹೆಣ್ಣಿಗೆ ಸೂಚಿಸುವುದರ ಹಿಂದೆ ಹೆಣ್ಣನ್ನು ಪುರುಷ ಪ್ರಧಾನ ಚೌಕಟ್ಟಿನಲ್ಲಿ ತುರುಕುವುದೇ ಆಗಿತ್ತು. ಮುಂದುವರಿದು ಆಕೆಯನ್ನು ನಿಯಂತ್ರಿಸುವುದಕ್ಕಾಗಿಯೇ ಕೌಟುಂಬಿಕ



ಜವಾಬ್ದಾರಿಯನ್ನು ವಿವಾಹದ ಮೂಲಕ ಹೇರುವ ಹೊತ್ತಿನಲ್ಲಿ ಮನು ಮದುವೆಯ ವಯಸ್ಸನ್ನು ಸ್ತ್ರೀಪುರುಷರಿಗೆ ನಿಗದಿಗೊಳಿಸುತ್ತಾನೆ. ತಂದೆಯಾದವನು ತನ್ನ ಎಂಟು ವರ್ಷದ 'ಗೌರಿ'ಯನ್ನು ಮದುವೆ ಮಾಡಿಕೊಟ್ಟರೆ ಸ್ವರ್ಗ, ಒಂಬತ್ತು ವರ್ಷದ 'ರೋಹಿಣಿ'ಯನ್ನು ಕೊಟ್ಟರೆ ವೈಕುಂಠ, ಹತ್ತು ವರ್ಷದ 'ಕನ್ಯ'ಕಳನ್ನು ಕೊಟ್ಟರೆ ಬ್ರಹ್ಮಲೋಕ, ಹನ್ನೆರಡು ವರ್ಷದ 'ವೃಷಾಲಿ'ಯನ್ನು ಕೊಟ್ಟರೆ ಗೌರವ ಎಂದು ಹೇಳಲಾಗಿದೆ. ಇದೆ ಹೊತ್ತಿನಲ್ಲಿ ವಸಿಷ್ಠ "ಹೆಣ್ಣು ಮಗುವಿಗೆ ಅದು ಬೆತ್ತಲೆಯಾಗಿ ಓಡಾಡುತ್ತಿರುವಾಗಲೇ ಮದುವೆ ಮಾಡಬೇಕೆಂದು ಹೇಳುತ್ತಾನೆ."[ಬಿ.ವಿ.

ವೀರಭದ್ರಪ್ಪ: ವಿಚಾರ ಸಾಹಿತ್ಯ- ವೇದಗಳಲ್ಲಿಯ ಮಹಿಳೆಯರು] ಈ ವಿಷಯದಲ್ಲಿ ಎಲ್ಲ ಧರ್ಮಶಾಸ್ತ್ರಗಳು ಸಮ್ಮತಿಸಿವೆ. ಹೆಣ್ಣನ್ನು ಬಾಲ್ಯದಿಂದಲೇ ನಿಯಂತ್ರಿಸುವ ಗಂಡಸಿನ ಉದ್ದೇಶದ ಹಿಂದೆ ಹೆಣ್ಣಿನ ದೈಹಿಕ ಮತ್ತು ಬೌದ್ಧಿಕ ಶಕ್ತಿಯ ಭಯಕಾಡಿದೆ. ಊಳಿಗಮಾನ್ಯ ಪದ್ಧತಿಯು 'ಮನುಸಂಹಿತೆಯನ್ನು' ಸಾಮಾಜಿಕ ಶಾಸನೋಪಾದಿಯಲ್ಲಿ ಗಟ್ಟಿಗೊಳಿಸಿದ ಕಾಲ ಮಹಿಳೆಯರಿಗೆ ಅತ್ಯಂತ ಗ್ರಹಣಕಾಲವಾಗಿದೆ. ಮನುವಿನ ಪ್ರಕಾರ "ಬಾಲಯಾವಾಯುವತ್ಯಾವಾ ವೃದ್ಧಯಾ ವ್ಯಾಪಿ ಯೋಷಿತಾ! ನಸ್ವಾತಂತ್ರಣ ಕರ್ತವ್ಯಂಕಿಂಬೆತ್ಕಾರ್ಯ ಕೃಷ್ಟಷಿ" ಅಂದರೆ ಹುಡುಗಿ, ಯುವತಿ, ಮುದುಕಿ ಮನೆಯಲ್ಲಿ ತನ್ನ ಯಜಮಾನನನ್ನು ಕೇಳದೆ ಸ್ವತಂತ್ರವಾಗಿ ಯಾವ ಕೆಲಸವನ್ನು ಮಾಡಕೂಡದು. ಈ ಮಾತು ಪುರುಷ ಪ್ರಧಾನ ಸಂಸ್ಕೃತಿಯ ಮೌಲ್ಯವಾಗಿಯೆ ಅಂಗೀಕರಿಸಲ್ಪಟ್ಟಿತು. ಮುಂದುವರೆದು ಬಾಲ್ಯವಿವಾಹಕ್ಕೆ ಒಳಗಾಗುವ ಹುಡುಗಿಯರು ಗಂಡನ ಮರಣಾನಂತರ ಹೇಗೆ ಬದುಕಬೇಕು ಎಂಬುದನ್ನು ಕಠಿಣ ನಿಯಮಗಳ ಮೂಲಕ ಆಚರಣೆಯಲ್ಲಿಟ್ಟಿದ್ದರು. ಸತಿ ಪದ್ಧತಿಯ ಬಗ್ಗೆ ಇಲ್ಲಿಯವರೆಗೂ ನಮಗಿದ್ದ ತಿಳುವಳಿಕೆಯನ್ನು ಬದಲಿಸಿ ಕೊಳ್ಳುವಂತಹ ಹಲವಾರು ಸಂಗತಿಗಳು ಸ್ಮೃತಿಗಳಲ್ಲಿ ಕಾಣಿಸುತ್ತವೆ. ವರ್ಣಾಶ್ರಮ ಧರ್ಮಕ್ಕೆ ಒಳಪಟ್ಟಿದ್ದ ವೇದ ಮತ್ತು ಸ್ಮೃತಿಗಳ ಕಾಲದಲ್ಲಿ ಎಲ್ಲ ಮಹಿಳೆ ಮತ್ತು ಎಲ್ಲ ಪುರುಷರಿಗೆ ಏಕರೂಪಿ ಕಾನೂನು ಕಟ್ಟಳೆಗಳಿರಲಿಲ್ಲ. ಕ್ಷತ್ರಿಯ ಮತ್ತು ಬ್ರಾಹ್ಮಣ ಕುಲಗಳ ಶುದ್ಧಿಗಾಗಿ ಹುಟ್ಟಿಕೊಂಡ ಕಾನೂನುಗಳು ಶೂದ್ರ ಪುರುಷನನ್ನು ಮತ್ತು ಬ್ರಾಹ್ಮಣ ಕ್ಷತ್ರಿಯ ಮಹಿಳೆಯರನ್ನು ಗುರಿಯಾಗಿಸಿಕೊಂಡಿದ್ದವು ಎಂಬುದನ್ನು ಅಂಗೀರಸನ ಹೇಳಿಕೆಯಲ್ಲಿ ಗೋಚರಿಸುತ್ತದೆ. "ಬ್ರಹ್ಮನ ಆಜ್ಞೆಯಂತೆ ಬ್ರಾಹ್ಮಣ ಹೆಂಗಸು ಸತ್ತ ಗಂಡನನ್ನು ಹಿಂಬಾಲಿಸಬಾರದು. ಬ್ರಾಹ್ಮಣ ಜಾತಿಯ ಹೆಣ್ಣು ಸತ್ತ ಗಂಡನೊಡನೆ (ಸತಿ) ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಅವಳಾಗಲಿ ಅವಳ ಗಂಡನಾಗಲೀ ಸ್ವರ್ಗಕ್ಕೆ ಹೋಗುವುದಿಲ್ಲ" [ಡಾ. ಸಿ. ವೀರಣ್ಣ : ಕನ್ನಡ ಕಾವ್ಯ ಕಂಡ ಹೆಣ್ಣು] ಎಂದು ಅಂಗೀರಸ ಹೇಳುವುದರ ಹಿಂದೆ ಬ್ರಾಹ್ಮಣ ಮಹಿಳೆಯರ ಬಗ್ಗೆ ಮೃದು ಧೋರಣೆಯನ್ನು ಸ್ಮೃತಿಗಳು ಹೊಂದಿದ್ದವು ಎಂಬುದನ್ನು ಗಮನಿಸಬಹುದು. ಮುಂದುವರಿದು ಇವೆ ಸ್ಪತಿಗಳು ಬೇರೆ ಬೇರೆ ಕ್ಷತ್ರಿಯ, ವೈಶ್ಯ ವರ್ಣದ ಹೆಣ್ಣು ಮಕ್ಕಳು ಸತಿ ಹೋಗುವುದನ್ನು ಕಡ್ಡಾಯಗೊಳಿಸಿವೆ. ಈ ವರ್ಣದ ಹೆಣ್ಣುಗಳು ಸತಿಹೋಗುವುದರ ಮೂಲಕ ಪತಿಗೆ ಸ್ವರ್ಗದ ಬಾಗಿಲನ್ನು ತೆರೆಯಲಾಗುತ್ತದೆ ಎಂದು ನಂಬಿಸಲಾಗಿದೆ.

ವಿವಾಹದ ಮೂಲಕ ಕುಟುಂಬದ ಚೌಕಟ್ಟು ಭದ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಬೇರೆ ಬೇರೆ ವರ್ಣಗಳಿಗೆ ಸೇರಿದ ಹೆಣ್ಣು ಮಕ್ಕಳು ಅನುಸರಿಸಬೇಕಾದ ನಿಯಮಗಳನ್ನು

ಮನು ಸ್ಪಷ್ಟವಾಗಿ ಹೇಳಿರುವನು. "ಒಂದೇ ವರ್ಣದವರನ್ನು ವಿವಾಹವಾಗುವಾಗ ಪರಸ್ಪರ ಕೈಗಳನ್ನು ಸೇರಿಸಬೇಕು. ಕ್ಷತ್ರಿಯ ಕನ್ಯ ಬ್ರಾಹ್ಮಣನನ್ನು ವರಿಸುವಾಗ ಬಾಣ ಹಿಡಿಯಬೇಕು. ಉತ್ತಮ ಕುಲದವನನ್ನು ವರಿಸುವ ವೈಶ್ಯ ಕನ್ಯೆ ಕೈಯಲ್ಲಿ ಚಾಟಿ ಹಿಡಿಯಬೇಕು. ಶೂದ್ರ ಕನ್ಯ ಗಂಡಿನ ವಸ್ತ್ರದ ತುದಿ ಹಿಡಿಯಬೇಕು" ಇದು ವರ್ಣ ವ್ಯವಸ್ಥೆಯನ್ನು ಸ್ತ್ರೀಯರ ಮೂಲಕ ಸ್ಥಿರೀಕರಿಸುವ ಕೆಲಸವನ್ನು ಮಾಡಿದೆ. ಶೂದ್ರ ಪುರುಷ ಉಳಿದ ವರ್ಣಗಳ ಸ್ತ್ರೀಯರನ್ನು ನೋಡುವಂತೆಯೇ ಇರಲಿಲ್ಲ. ನೋಡಿದವರನ್ನು, ಚಾಪೆಯಲ್ಲಿ ಸುತ್ತಿ ಸುಡಬೇಕು ಎಂಬ ಭೀಕರ ನಿಯಮಗಳು ಸಮಾಜದಲ್ಲಿ ರೂಢಿಯಲ್ಲಿದ್ದವು. ಬ್ರಾಹ್ಮಣ ಪುರುಷ ಶೂದ್ರ ಹೆಣ್ಣನ್ನು ಮದುವೆಯಾದರೆ ಸತ್ತ ನಂತರ ನರಕಕ್ಕೆ ಹೋಗುತ್ತಾನೆ ಎನ್ನುವುದರ ಮೂಲಕ ವರ್ಣಸಂಕರಕ್ಕೆ ಸಂಬಂಧಿಸಿ ಶಾಸ್ತ್ರಾಧಿಗಳ ಸಮ್ಮತಿಯಿರಲಿಲ್ಲವೆನ್ನುವುದನ್ನು ಒತ್ತಿ ಹೇಳಲಾಗಿದೆ. ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಮೇಲ್ಮುಖ ಚಲನೆಗೆ ಅವಕಾಶವಿರಲಿಲ್ಲ, ಹೆಣ್ಣಿನ ನಡೆನುಡಿಗಳನ್ನು ಸ್ಮೃತಿಗಳು ಹೀಗೆ ಸೂತ್ರಿಕರಿಸುತ್ತವೆ. 'ಎಳೆಯ ವಯಸ್ಸಿನಲ್ಲಿ ಹೆಣ್ಣು ಪರದೆಯ ಹಿಂದೆ ಇರಬೇಕು. ಗಂಡನ ಅಪ್ಪಣೆಯಿಲ್ಲದೆ ಅವಳು ಹೊರಗೆ ಹೋಗಬಾರದು. ಹೊರಗೆ ಹೋಗಲೇಬೇಕಾದಾಗ ಅವಳು ಸರಿಯಾಗಿ ಬಟ್ಟೆಗಳನ್ನು ಧರಿಸಬೇಕು, ಬಟ್ಟೆ ಹೇಗೆ ಧರಿಸಬೇಕೆಂದರೆ ದೇಹದ ಯಾವ ಭಾಗವೂ ಕಾಣದಂತೆ ಎಚ್ಚರಿಕೆಯಿಂದ ಮುಚ್ಚಿಕೊಂಡಿರಬೇಕು. ಜೋರಾಗಿ ನಡೆಯಬಾರದು, ವ್ಯಾಪಾರಿ ಮತ್ತು ವೃದ್ಧ ವೈದ್ಯ ಇವರನ್ನು ಬಿಟ್ಟು ಬೇರೆಯವರೊಂದಿಗೆ ಮಾತನಾಡಬಾರದು. ನಡೆಯುವಾಗ ಹಾದಿಯಲ್ಲಿ ನಗಬಾರದು ಮತ್ತು ಅನ್ಯರೊಂದಿಗೆ ಮಾತನಾಡಬಾರದು' ಎಂದು ಹೇಳಿದ್ದು, ಕುಲೀನ ಸ್ತ್ರೀಯರಿಗೆ ಮಾತ್ರವೆಂಬುದನ್ನು ಗಮನಿಸಬೇಕು. ಯಾಕೆ ಕುಲೀನ ಸ್ತ್ರೀಯರಿಗೆ ಈ ನಿಯಮಗಳನ್ನು ಮಾಡಿರಬೇಕು? ವ್ಯಾಪಾರಿ ಮತ್ತು ವೃದ್ಧವೈದ್ಯರನ್ನು ಹೊರತುಪಡಿಸಿ, ಬೇರೆ ಗಂಡಸರೊಂದಿಗೆ ಮಾತನಾಡಬಾರದು ಎಂಬುದರ ಹಿಂದೆ ವರ್ಣಸಂಕಟದ ಭಯ ಮತ್ತು ಹೆಣ್ಣಿನ ದೇಹದ ಮೇಲಿನ ಸ್ವಾಧೀನತೆ ಕುಲಶುದ್ದಿಯನ್ನು ಗಟ್ಟಿಗೊಳಿಸುವುದಕ್ಕಾಗಿ ಇಂತಹ ಕಟ್ಟಳೆಗಳನ್ನು ಹಾಕಿದಂತಿದೆ. ಗಂಡಿನ ದಾಸ್ಯತ್ವಕ್ಕೆ ಹೆಣ್ಣನ್ನು ನೂಕುವಾಗ ಧರ್ಮಶಾಸ್ತ್ರಗಳು ಶ್ರಮವಹಿಸಿರುವುದರ ಹಿಂದೆ ಏನಿತ್ತು ಎಂಬುದೇ ನಮ್ಮ ಹುಡುಕಾಟದ ಬಹುಮುಖ್ಯ ಸಂಗತಿ, ದೇವದಾಸಿಯರು ದೇವರು ಧರ್ಮದ ಹೆಸರಿನಲ್ಲಿ ರಾಜಪ್ರಭುತ್ವ, ಧರ್ಮ ಪ್ರಭುತ್ವದ ಉಪಭೋಗಕ್ಕಾಗಿ ಕವಲೊಡೆದ ಸ್ತ್ರೀ ಸಮುದಾಯಕ್ಕೆ ಈ ಶೃಂಗಾರ ಪ್ರಧಾನವಾದ ವಿದ್ಯೆಗಳನ್ನು ಕಲಿಯುವ ಅವಕಾಶವನ್ನು ನೀಡಿತ್ತು. ಕುಟುಂಬ ಚೌಕಟ್ಟಿನಲ್ಲಿ ಬಂಧಿಸಲ್ಪಟ್ಟ ಮಹಿಳೆಯರು ತಮ್ಮ ಲೈಂಗಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡ ಸಮಾಜವೇ ಇನ್ನೊಂದು ಸಮುದಾಯಗಳ ಸ್ತ್ರೀಯರಿಗೆ ಕುಟುಂಬವನ್ನು ನಿರಾಕರಿಸಿ ಲೈಂಗಿಕ ಸ್ವಾತಂತ್ರ್ಯ ನೀಡಿತ್ತು. ಸಾಮಾಜಿಕ ಗೌರವದಿಂದ ವಂಚಿತರನ್ನಾಗಿಸಿದ ಈ ಸಮುದಾಯದ ಸ್ತ್ರೀಯರು ಹೀನಕುಲವೆಂದು ಕರೆಯಲ್ಪಟ್ಟ ಕುಲದಿಂದ ಬಂದವರಾಗಿದ್ದರು. ಈ ಕುಲಗಳಲ್ಲಿ ಹೆಣ್ಣು ಸಂತತಿಗೆ ಬೇಡಿಕೆಯಿತ್ತು. ಕುಲಕಸುಬನ್ನು ಮುಂದುವರೆಸಿಕೊಂಡು ಹೋಗುವ ವಾರಸುದಾರಿಕೆ ಹೆಣ್ಣುಮಗುವಿಗಿತ್ತು.

ಧರ್ಮಶಾಸ್ತ್ರಗಳ ರಕ್ಷಣೆಗಾಗಿ ಹುಟ್ಟಿದಂತಿರುವ ಕೌಟಿಲ್ಯನ ಅರ್ಥಶಾಸ್ತ್ರ ರಾಜಕೀಯ ಕಾರಣಗಳಿಂದ ಇನ್ನಷ್ಟು ಸ್ತ್ರೀ ಶೋಷಣೆಗೆ ಹೊಸ ಬಗೆಯ ಹಾದಿಗಳನ್ನು ತೆರೆಯಿತು.



ಗೃಹಿಣಿ-ಗಣಿಕೆಯರೆಂದು ಸ್ತ್ರೀ ಸಮುದಾಯದ ಮಧ್ಯದಲ್ಲಿ ಗೋಡೆ ಕಟ್ಟುವುದರ ಮೂಲಕ ಸ್ತ್ರೀ ಸಮುದಾಯವನ್ನು ಒಡೆದು ನಿರಂತರವಾಗಿ ಪರಸ್ಪರ ಸಾಂಸ್ಕೃತಿಕವಾಗಿ ಕದನಕ್ಕೆಳಸುವಂತೆ ಮಾಡಿದೆ. ಧರ್ಮಶಾಸ್ತ್ರಗಳು ವಾಸ್ತವವಾಗಿ ಹೆಣ್ಣಿಗೆ ಮಾಡಬಾರದೆಂದು ನಿಷೇಧಿಸಿದ ವಿಷಯಗಳನ್ನು ಅರ್ಥಶಾಸ್ತ್ರ ಮಾಡಲು ಪ್ರಚೋದಿಸಿತು. ಕೇವಲ ನಿಯಮಗಳ ರೂಪದಲ್ಲಿದ್ದ ವೇದ, ಸ್ಮೃತಿಕಾರರ ಮಾತುಗಳಿಗೆ ಕಾನೂನು, ದಂಡ, ಶಿಕ್ಷೆಯೆಂಬವುಗಳನ್ನು ಆಡಳಿತದ ಭಾಗವಾಗಿಸಿದ ಅರ್ಥಶಾಸ್ತ್ರ ಹೆಣ್ಣಿಗೆ ಸಂಪೂರ್ಣ ದಿಗ್ಬಂಧನವನ್ನು ಹಾಕಿತು. ಹೆಣ್ಣಿನ ಸ್ತ್ರೀಧನ, ಆಸ್ತಿ ಹಕ್ಕುಗಳ ಮೇಲೆ ರಾಜಾಧಿಕಾರವನ್ನು ಹೇರಿತು. ಗಣಿಕಾ ಸ್ತ್ರೀಯರು ರಾಜಾದಾಯ ಕೊಡಬೇಕು ಎನ್ನುವುದರ ಮೂಲಕ ವೇಶ್ಯಾವೃತ್ತಿಯನ್ನು ಸೇವಾ ತೆರಿಗೆಯ ವಲಯಕ್ಕೆ ತರುವುದರ ಮೂಲಕ ರಾಜನ ಸ್ವತ್ತಾಗಿಯೆ ಈ ವೇಶ್ಯೆಯರು ಇರಬೇಕು. ರಾಜ ಹೇಳಿದವನಿಗೆ ವೇಶ್ಯ ತನ್ನ ದೇಹವನ್ನು ಒಪ್ಪಿಸದಿದ್ದರೆ ಅವಳು ಸಾರ್ವಜನಿಕವಾಗಿ ಶೂದ್ರನ ಕೈಯಿಂದ ಚಢಿ ಏಟು ತಿನ್ನುವುದನ್ನು ಕಾನೂನಾಗಿಸಿದ. ಪ್ರತಿ ತಿಂಗಳು ಪ್ರತಿಯೊಬ್ಬ ವೇಶ್ಯ ತನ್ನ ಎರಡು ದಿನದ ಸಂಪಾದನೆಯನ್ನು ರಾಜನಿಗೆ ಕೊಡಬೇಕು ಎಂದು ಕಾನೂನು ಜಾರಿಗೊಳಿಸುವಾಗ ಕೌಟಿಲ್ಯನಿಗೆ ವೇಶ್ಯಾವೃತ್ತಿ ನೈತಿಕ ಪ್ರಶ್ನೆಯಾಗಿ ಕಾಡಿದಂತಿಲ್ಲ. ಹೆಣ್ಣಿನ ಎಲ್ಲ ರೀತಿಯ ಒಡೆತನವನ್ನು ಗಂಡಸಿಗೆ ವಹಿಸುವುದರ ಮೂಲಕ ಹೆಣ್ಣನ್ನು ಅಬಲಾಸ್ಥಾನಕ್ಕೆ ನೂಕಿದ. ದೇವರ ಸೇವೆಗೆಂದ ಮಹಿಳಾ ಸಮುದಾಯವೊಂದನ್ನು ಹುಟ್ಟುಹಾಕುವುದರ ಮೂಲಕ ಪುರುಷ ಕೌಟುಂಬಿಕ ಚೌಕಟ್ಟಿನಾಚೆಗೂ ಲೈಂಗಿಕ ಉಪಭೋಗದ ಉಪಕರಣವೊಂದನ್ನು ಎಗ್ಗಿಲ್ಲದೆ ನಿರ್ಮಿಸಿದ್ದ.

ಧರ್ಮ ಶಾಸ್ತ್ರಗಳಿಂದ ವೈದಿಕ ಯುಗದಲ್ಲಿ ಬಂಧಿಸಲ್ಪಟ್ಟ ಮಹಿಳೆಯ ಬದುಕಿಗೆ ಸಂಬಂಧಿಸಿ ನಂತರ ಬಂದ ಧರ್ಮಗಳು ಉದಾರವಾಗಿ ನಡೆದುಕೊಂಡಂತೆ ಹೊರಮೈಯಲ್ಲಿ ಕಾಣಿಸಿದರೂ ಒಳಮೈಯಲ್ಲಿಯ ಗಾಯದ ಉರಿ ಹಾಗೆಯೆ ಉಳಿದಿತ್ತು. ಸ್ತ್ರೀ ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲವೆಂದು ಸಾರುತ್ತ ಬಂದಿದ್ದ ಹಿಂದೂ ಧರ್ಮಕ್ಕೆ ಪ್ರತಿರೋಧ ಒಡ್ಡುತ್ತ ಬಂದ ಯಾವ ಧರ್ಮಗಳು ಮಹಿಳೆಯರನ್ನು ಬಂಧನದಿಂದ ಸಂಪೂರ್ಣವಾಗಿ ಮುಕ್ತಗೊಳಿಸುವ ಸಾಹಸಕ್ಕೆ ಕೈಹಾಕಲಿಲ್ಲ. ಹಿಂದೂ ಧರ್ಮದ ತಾತ್ವಿಕತೆಯನ್ನು ಪ್ರಬಲವಾಗಿ ವಿರೋಧಿಸುತ್ತ ಹೊಸ ಸಮಾಜದ ಸಾಧ್ಯತೆಗಳನ್ನು ತೋರಿಸಿದ ಬೌದ್ಧಧರ್ಮ ಹೆಣ್ಣಿನ ವಿಷಯದಲ್ಲಿ ಅಷ್ಟೊಂದು ಮುಕ್ತತೆಯನ್ನು, ಉದಾರತೆಯನ್ನು ತೋರಿಸಲಿಲ್ಲ. ಧರ್ಮ ಪ್ರಸಾರಕ್ಕೆ ಹುಟ್ಟಿಕೊಂಡ ಸಂಘದಲ್ಲಿ ಸ್ತ್ರೀಯರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಬುದ್ಧ ಪೂರ್ಣ ಮನಸ್ಸಿನಿಂದ ಒಪ್ಪಿಗೆ

ನೀಡಿದಂತಿಲ್ಲ. 'ಸುಲ್ಲವಗ್ಗ'ದಲ್ಲಿ ಬುದ್ಧ ಆನಂದನಿಗೆ ಹೇಳಿರುವ ಈ ಮಾತುಗಳಲ್ಲಿ 'ಕುಟುಂಬ' ಬಹುವಾಗಿ ಕಾಡಿದಂತಿದೆ. ಆನಂದ "ಸ್ತ್ರೀ ಗೃಹಕೃತ್ಯಜೀವನದಿಂದ ಮುಕ್ತಳಾಗದೆ ಇದ್ದಿದ್ದರೆ, ನನ್ನ ಧರ್ಮದಡಿಯಲ್ಲಿ ಗೃಹವಿಲ್ಲದವಳಾಗದೆ ಇದ್ದಿದ್ದರೆ, ಧರ್ಮ ಬಹಳ ಕಾಲ ಬದುಕುತ್ತಿತ್ತು. ಕೊನೆಯ ಪಕ್ಷ ಸಾವಿರ ವರ್ಷಗಳಷ್ಟು ಇರುತ್ತಿತ್ತು. ಆದರೆ ಹೆಣ್ಣು ಗೃಹಕೃತ್ಯಗಳನ್ನು ತೊರೆದಿರುವುದರಿಂದ ಅದು ಹೆಚ್ಚೆಂದರೆ ಐನೂರು ವರ್ಷ ಬಾಳೀತು" ಹೆಣ್ಣು ಧರ್ಮ ಸ್ವೀಕಾರ ಮಾಡಿದ್ದರಿಂದ ಧರ್ಮದ ಆಯುಷ್ಯ ಕಡಿಮೆಯಾಗುತ್ತದೆಂಬ ಅಳುಕು ಬುದ್ಧನಿಗಿತ್ತು. ಈ ಅಳುಕಿಗೆ ಕುಟುಂಬದ ಜವಾಬ್ದಾರಿ ಮತ್ತು ಹೆಣ್ಣಿನ ಸಂತಾನೋತ್ಪತ್ತಿ ಕಾರಣವಾಗಿರಬೇಕೆಂದು ಭಾವಿಸಬಹುದು. ಕುಟುಂಬದ ಸಂಪೂರ್ಣ ಹೊಣೆಗಾರಿಕೆಯನ್ನು ಹೆಣ್ಣಿಗೆ



ಹೊರಿಸಲಾಗಿತ್ತು. ಇದರಿಂದ ಮಹಿಳೆ ಬಿಡುಗಡೆಗೊಳ್ಳುವುದೆಂದರೆ ಕುಟುಂಬದ ಚೌಕಟ್ಟು ಮುರಿದಂತೆ ಎಂಬುದು ಬುದ್ಧನಿಗೆ ಅರ್ಥವಾಗಿತ್ತು. ಸಂಸಾರವನ್ನು ಬಂಧನವೆಂದು ಗಂಡಿಗೆ ಹೇಳಿದಂತೆ ಹೆಣ್ಣಿಗೆ ಹೇಳಿಲ್ಲ. ಸಂಸಾರ ಗಂಡಿಗೆ ಬಂಧನವಾದರೆ ಹೆಣ್ಣಿಗೆ ಕರ್ತವ್ಯ ಮತ್ತು ಕಡ್ಡಾಯವಾಗಿ ಪಾಲಿಸಬೇಕಾದ ಮೌಲ್ಯವೆಂದು ಒಪ್ಪಿಸಲಾಗಿದೆ. ಹೀಗಾಗಿಯೆ ಬುದ್ಧನಂತವರಿಗೂ ಸ್ತ್ರೀಯರನ್ನು ಹೊರತುಪಡಿಸಿ ಕುಟುಂಬವನ್ನು ಸರಿಭಾವಿಸಲು ಸಾಧ್ಯವಾದಂತಿಲ್ಲ.

ಧರ್ಮಮಾರ್ಗದಲ್ಲಿ ನಡೆಯಲು ಬಯಸುವ ಗಂಡಸಿಗೆ ಸ್ತ್ರೀ ಬಹುದೊಡ್ಡ ಬಂಡೆಯಾಗಿ ಎಲ್ಲ ಧರ್ಮಗಳಿಗೂ ಕಾಣಿಸಿರುವಳು. ಸ್ತ್ರೀ ಕುರಿತಹಾಗೆ ಬುದ್ಧನಂತಹವರಿಗೂ ಭಯ ಕಾಡಿದೆ. ಶಿಷ್ಯನಾದ ಆನಂದ ಹೆಣ್ಣಿನೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂದು ಕೇಳಿದ್ದಕ್ಕೆ ಬುದ್ಧ "ಸ್ತ್ರೀಯರನ್ನು ನೋಡಲೇಬಾರದು, ನೋಡಲೇಬೇಕಾಗಿ ಬಂದರೆ ಅವರೊಂದಿಗೆ ಮಾತನಾಡಬಾರದು, ಅದೂ ಅನಿವಾರ್ಯವಾದರೆ ತುಂಬಾ ಎಚ್ಚರದಿಂದಿರಬೇಕು" ಎಂದು ಹೇಳುವಲ್ಲಿ ಬುದ್ಧಗುರುದೇವನಿಗಿದ್ದ ಒತ್ತಡಗಳೇನು ಎಂಬುದು ಕಾಲವೇ ಹುಡುಕಬೇಕಾದ ಸಂಗತಿ. ಹೆಣ್ಣಿನ ಬಗ್ಗೆ ಇದ್ದ ದೇಹ ಮೂಲದ ಭಯ ಬುದ್ಧನಂತವರಿಗೂ ಕಾಡಿರಬಹುದೆ? ಪುರುಷನ ಮನಸಿನ ಚಂಚಲತೆಯನ್ನು ಒಪ್ಪಿಕೊಳ್ಳದ ಸಮಾಜ ಸ್ತ್ರೀಯರನ್ನು ದೂಷಿಸುತ್ತಿರುವುದನ್ನು ಗಮನಿಸಬಹುದು. ಸ್ತ್ರೀಯಿಲ್ಲದೆ ಕುಟುಂಬವನ್ನು ಕಲ್ಪಿಸಿಕೊಳ್ಳುವುದೆ ಅಸಾಧ್ಯದ ಸಂಗತಿಯಾಗಿ ಎಲ್ಲ ಕಾಲದ ಸಮಾಜ ಧರ್ಮಗಳಿಗೆ ಕಾಡಿರುವುದರಿಂದ ಹೆಣ್ಣನ್ನು ಕುಟುಂಬಕ್ಕೆ ಸೀಮಿತಗೊಳಿಸುತ್ತಲೆ ಗಂಡಿಗೆ ಕುಟುಂಬದೊಂದಿಗೆ ಅದರ ಜವಾಬ್ದಾರಿ ಇಲ್ಲದೆಯೂ ಬದುಕುವ ಮಾರ್ಗಗಳನ್ನು ಸಮಾಜ ಧರ್ಮಗಳು ಮುಕ್ತವಾಗಿಯೆ ತೆರೆದಿವೆ. ಹೆಣ್ಣಿಗೆ ಮಾತ್ರ ಯಾವುದೆ ಆಯ್ಕೆಗಳನ್ನು ನಿರಾಕರಿಸಿ "ಗೃಹಿಣಿ ಗೃಹಮುಚ್ಚತೆ ಸ್ವರ್ಗದಪಿಗರಿಯಸಿ" ಎನ್ನಲಾಗಿದೆ. ಈ ಸೂತ್ರದಿಂದಲೇ ಹೆಣ್ಣಿನ ಚರಿತ್ರೆಗೆ ಉರುಳು ಬಿಗಿಯಲಾಗಿದೆ.

ಕುಟುಂಬ ಧರ್ಮವನ್ನು ಬುದ್ಧ ಮಹಿಳೆಯರು ಮಾತ್ರ ಪಾಲಿಸಲು ಸಾಧ್ಯವೆಂದು ಭಾವಿಸಿದ ಕಾರಣ ಲಗ್ನವಾಗಲಿರುವ ಮಹಿಳೆಯರಿಗೆ ಉಪದೇಶ ನೀಡುತ್ತಾನೆ. "ನಾರಿಯರೆ ನೀವು ಗಂಡನ ಮನೆಯಲ್ಲಿ ಬೇಗನೆ ಏಳಿರಿ,

ಎಲ್ಲರೂ ಮಲಗಿದ ನಂತರ ಮಲಗಿರಿ. ಸಂತೋಷದಿಂದ ಮನೆಗೆಲಸ ಮಾಡಿರಿ. ಮನೆಯನ್ನು ಓರಣವಾಗಿರಿಸಿರಿ, ಮೃಧುಭಾಷಿಣಿಯರಾಗಿರಿ. ಈ ನಡವಳಿಕೆಯನ್ನು ಮದುವೆಯಾಗುವ ಪೂರ್ವದಲ್ಲಿ ನೀವು ಗಳಿಸಿಕೊಳ್ಳಿರಿ. ನೀವು ಗಂಡನ ಮನೆಯಲ್ಲಿ ಎಲ್ಲರ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಿರಿ, ಅವರವರಿಗೆ ಅನುಕೂಲವಾದ ಊಟವನ್ನು ಬಡಿಸಿರಿ. ನೀವು ಗಂಡನ ಸಂಪತ್ತನ್ನು ಸರಿಯಾಗಿ ಕಾಯ್ದುಕೊಳ್ಳಿರಿ. ನೀವು ಹಾಗೆ ಮಾಡಿದರೆ ಸತ್ತನಂತರ ಅಪ್ಸರೆಯಾಗುತ್ತಿರಿ[ಪುನರುದ್ಧರಣೆ: ಹೊನ್ನಮ್ಮನ ಹದಿಬದೆಯ ಧರ್ಮ, ಡಾ. ಮಧುವೆಂಕಾರೆಡ್ಡಿ, ಪ-೩೫]. ಈ ಮಾತುಗಳನ್ನು ನೋಡಿದರೆ ವೈದಿಕ ನೆಲೆಯ ಹೆಣ್ಣಿನ ಸ್ಥಾನವನ್ನು ಬುದ್ಧ ಒಪ್ಪಿಕೊಂಡ ಹಾಗೆ ತೋರುತ್ತದೆ. ಹೀಗಿರುವ ಬುದ್ಧ ಆಮ್ರಪಾಲಿಯಂಥವಳೊಂದಿಗೆ ನಡೆದುಕೊಂಡದನ್ನು ಸ್ತ್ರೀ ಭಿಕ್ಕುಗಳ ಒಂದು ಪ್ರತ್ಯೇಕ ಗುಂಪೇ ಬೌದ್ಧಧರ್ಮದಲ್ಲಿತ್ತು ಎಂಬುದು ಕೂಡಾ ಹೇಗೆ ಪರಿಭಾವಿಸಬೇಕು ಎಂಬುದು



ಪ್ರಶ್ನೆಯಾಗಿ ಕಾಡುತ್ತಿದೆ. ಸ್ತ್ರೀ ಭಿಕ್ಕುಗಳಿಗೆ ಕೆಲವು ಕಠಿಣ ನಿಯಮಗಳ ಪಾಲನೆಯನ್ನು ಬೋಧಿಸಲಾಗಿತ್ತು. ಒಬ್ಬ ಭಿಕ್ಕುನಿ ನೂರು ವರ್ಷ ಮುಕ್ತಿಗಾಗಿ ಬೇಡಿ ಕಾಲಕಳೆದಿದ್ದರೂ ಆಗ ತಾನೇ ಸನ್ಯಾಸ ಸ್ವೀಕರಿಸುವ ಭಿಕ್ಕುವಿಗೆ ಅವಳು ಎದ್ದು ನಿಂತು ನಮಸ್ಕರಿಸಿ ಎಲ್ಲ ಗೌರವಗಳನ್ನು ತೋರಬೇಕು. ಭಿಕ್ಕು ಆದವಳು ಯಾವುದೇ ಕಾರಣಕ್ಕೆ ಭಿಕ್ಕುವನ್ನು ಅವಮಾನಿಸಬಾರದು ಅಥವಾ ನಿಂದಿಸಬಾರದು. ಅವಳು ಅಧಿಕಾರಯುತವಾಗಿ ಭಿಕ್ಕುಣಿಯರಿಗೆ ವಂದಿಸುವುದನ್ನು ನಿಲ್ಲಿಸಬೇಕು. ಆದರೆ ಭಿಕ್ಕುಣಿಯರು ಭಿಕ್ಕುಗಳಿಗೆ ವಂದಿಸುವುದನ್ನು ಮರೆಯಬಾರದು' ಎಂದು ಹೇಳುವಲ್ಲಿ ಹೆಣ್ಣಿನ ಆತ್ಮಗೌರವವನ್ನು ನಿರಾಕರಿಸಲಾಗಿದೆ. ಪುರುಷಲಿಂಗಿಯಾಗಿ ಹುಟ್ಟುವುದೇ ಶ್ರೇಷ್ಠವೆಂಬ ವೈದಿಕ ಹಿತಾಸಕ್ತಿಯನ್ನು ಬುದ್ಧನಂತವರು ಬೆಂಬಲಿಸಿದ ಹಾಗಿದೆ. ಹೆಣ್ಣಿನ ಅನುಭವ, ವಯಸ್ಸು, ಜ್ಞಾನ, ಶಕ್ತಿ ಯಾವುದು ಪರಿಗಣಿಸಲ್ಪಡುವ ಸಂಗತಿಗಳೇ ಅಲ್ಲವೆನ್ನುವ ಧೋರಣೆ ಎಲ್ಲ ಕಾಲದಲ್ಲಿಯೂ ಸಾಮಾಜೀಕರಣಗೊಂಡಂತಿದೆ.

ಎಂತಹ ಮಹಿಳೆಯರು ಬುದ್ಧನ ಕಾಲದಲ್ಲಿ ಸಂಘಕ್ಕೆ ಸೇರಿದ್ದು ಎನ್ನುವುದನ್ನು ಗಮನಿಸುವುದಾದರೆ, ಕೌಟುಂಬಿಕ ಸುಭದ್ರ ಚೌಕಟ್ಟಿನಲ್ಲಿ ಬಂದಿಸಲ್ಪಟ್ಟವರಲ್ಲದವರು. ಬಡತನದ ಬೇಗೆಯಲ್ಲಿ ಬೆಂದು ಬದುಕು ಬರ್ಬರವೆಂದು ಭಾವಿಸಿದ ಮಹಿಳೆಯರು, ಒಂಟಿತನದ ಭಯವನ್ನು ನೀಗಿಕೊಳ್ಳುವ ಹಂಬಲದ ಮಹಿಳೆಯರು, ಕೌಟುಂಬಿಕ ಹಿಂಸೆ, ರೋಗರುಜಿನಗಳಿಂದ ಬಳಲುತ್ತಿದ್ದ ಮಹಿಳೆಯರು ಬೌದ್ಧ ಭಿಕ್ಕುಣಿಯರಾಗಿ ನೆಮ್ಮದಿ ಕಾಣುವ ಕಾರಣದಿಂದ ಸಂಘ ಸೇರಿರುವರು. ಗಂಡನನ್ನು ಕಳೆದುಕೊಂಡು ವಿಧವೆಯರಾಗಿ ಸಾಮಾಜಿಕ ಅಪಮಾನಗಳಿಂದ ಬಿಡುಗಡೆ ಹೊಂದಲು ಮತ್ತು ರಕ್ಷಣೆ ಪಡೆಯಲು, ಮಕ್ಕಳಿಲ್ಲದೆ ಕುಟುಂಬದ ಆಶ್ರಯತಪ್ಪಿ ಅನಾಥ ಪ್ರಜ್ಞೆಯಿಂದ ಬಳಲುತ್ತಿದ್ದ ಮಹಿಳೆಯರಿಗೆ ಸಂಘ ಪರ್ಯಾಯ ಬದುಕನ್ನು ಕಲ್ಪಿಸಬಹುದು ಎಂಬ ನಿರೀಕ್ಷೆಯಿಂದ ಬಂದ ಮಹಿಳೆಯರ ಬಹುದೊಡ್ಡ ಗುಂಪೇ

ಬುದ್ಧನ ಸಂಘದಲ್ಲಿ ಭಿಕ್ಕುಣಿಯರಾಗಿ ಧರ್ಮಪ್ರಚಾರದ ಕಾರ್ಯದಲ್ಲಿ ತೊಡಗಿಕೊಂಡಿರುವರು. ಇಂತಹ ನೆಲೆಯಿಂದ ಬಂದ ಮಹಿಳೆಯರು ಎಳೆಯ ವಯಸ್ಸಿನ ಗಂಡು ಭಿಕ್ಕುಗಳನ್ನು ವಿಚಲಿತರನ್ನಾಗಿಸಬಹುದು ಎಂಬ ಭಯದ ಕಾರಣದಿಂದ ಕಠಿಣ ನಿಯಮಗಳನ್ನು ಮಹಿಳಾ ಭಿಕ್ಕುಣಿಯರಿಗೆ ಹಾಕಿದಂತಿದೆ. ಇದರ ಮಧ್ಯದಲ್ಲಿಯೂ ಮಹಿಳೆಯರು ಬಿಡುಗಡೆಗೊಂಡು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರ ಕುರಿತು ಅನೇಕ ಉಲ್ಲೇಖಗಳಿವೆ. ಥೇರೀಗಾಥಾದಲ್ಲಿ ಮುತ್ತಾಳ ಕುರಿತಂತಿರುವ ಉಲ್ಲೇಖವೊಂದು ಹೀಗಿದೆ : "ಕೋಸಲದ ಒಬ್ಬ ಬಡಬ್ರಾಹ್ಮಣ ಚಿಕ್ಕವಯಸ್ಸಿನಲ್ಲಿಯೇ ಮಗಳು 'ಮುತ್ತಾಳ'ನ್ನು ಗೂನು ಬೆನ್ನಿನ ಮುದುಕನೊಬ್ಬನಿಗೆ ಧಾರೆ ಎರೆದಿದ್ದ. ಈ ಮದುವೆಯನ್ನು ನಿರಾಕರಿಸಿ ಕುಟುಂಬ, ಗಂಡನನ್ನು ತ್ಯಜಿಸಿ ಬೌದ್ಧ ಧರ್ಮ ಸ್ವೀಕರಿಸಿದೆ ಎಂದು ಒಂದು ಗಾಥಾದಲ್ಲಿ ಹೇಳಿರುವಳು" .

"ಆಹಾ, ಕಡೆಗೂ ನಾನು ಮುಕ್ತಳು, ಅದೆಷ್ಟು ಅದ್ಭುತ ಸ್ವಾತಂತ್ರ್ಯ !

ಮೂರು ವಾವಸ್ತುಗಳಿಂದ ನಾನು ಮುಕ್ತಳು;

ಬೀಸುವ ಕಲ್ಲು, ಒನಕೆ ಮತ್ತು ಗೂನು ಬೆನ್ನಿನ ಗಂಡ

ಯಾವುದೂ ಈಗಿಲ್ಲ. ಆದರಷ್ಟೇ ಅಲ್ಲ;

ನಾನು ಮರುಹುಟ್ಟು ಮತ್ತು ಸಾವಿನಿಂದಲೂ ಮುಕ್ತಳು,



ನನ್ನನ್ನು ಜಗ್ಗಿ ಎಳೆಯುತ್ತಿದ್ದ ಎಲ್ಲವನ್ನೂ ದೂರ ಬೀಸಾಡಿದ್ದೇನೆ" [ಲೋಕಾಯತ: ಅನುವಾದ, ಜಿ.ರಾಮಕೃಷ್ಣ, ಪು.೩೨೮] ಹುಟ್ಟಿನಾರಭ್ಯ ಬಂಧನದಲ್ಲಿದ್ದ ಹೆಣ್ಣುಜೀವ ಬಿಡುಗಡೆ ಹೊಂದಿದಾಗಿನ ಅನುಭೂತಿಯನ್ನು ಹೇಳಿಕೊಳ್ಳುವಾಗ ಬಂಧನದ ಪರಿಕರಗಳಲ್ಲಿ ನಿರ್ಜೀವ ವಸ್ತುಗಳಾದ ಬೀಸುವಕಲ್ಲು, ಒನಕೆಯ ಜೊತೆಗೆ ಗೂನು ಬೆನ್ನಿನ ಗಂಡನನ್ನು ಸಮೀಕರಿಸಿದ್ದು ಚಿಂತನೆಗೆ ತೊಡಗಿಸುತ್ತದೆ. ಇಲ್ಲಿಯವರೆಗೂ ವಸ್ತುವಿನ ಜೊತೆಗೆ ಹೆಣ್ಣನ್ನು ನಿಲ್ಲಿಸಿದ್ದನ್ನು ನೋಡಿದ್ದೇವೆ. ಆದರೆ ಇಲ್ಲಿ ಮುತ್ತಾ ಯಾವ ವ್ಯವಸ್ಥೆ ಯಾವ ವ್ಯಾಖ್ಯಾನವನ್ನು ಹೆಣ್ಣಿನ ಕುರಿತು ಮಾಡಿಕೊಂಡು ಬಂದಿತ್ತೋ ಅದೇ ಮಾದರಿಯ ಆಯುಧದ ಮೂಲಕವೆ ಸಮಾಜವನ್ನು ಎದುರಿಸಿ ಹೊರಬಂದು ತನ್ನ ಆಯ್ಕೆಯ ಹಕ್ಕನ್ನು ಬದುಕಿನ ಹಕ್ಕೆಂದು ಹೇಳುತ್ತಾಳೆ. ಬೀಸುವ ಕಲ್ಲು, ಒನಕೆ, ಗೂನು ಬೆನ್ನಿನಿಂದ ಬಿಡುಗಡೆ ಹೊಂದುವುದೆಂದರೆ ಕುಟುಂಬ ಚೌಕಟ್ಟನ್ನು ಮೀರಿ ಬರುವುದೆ ಆಗಿದೆ. ಒನಕೆ, ಬೀಸುವ ಕಲ್ಲುಗಳ ಕೇವಲ ಸಂಕೇತಗಳೂ ಅಲ್ಲ, ವಸ್ತುಗಳು ಅಲ್ಲ. ಪುರುಷಪ್ರಧಾನ ಸಮಾಜದ ಕುಟುಂಬದಲ್ಲಿ ಒನಕೆಯಿಂದ ಪದಾರ್ಥಗಳನ್ನು

ಕುಟ್ಟಿದಂತೆ ಬೀಸುಕಲ್ಲಿನಿಂದ ಧಾನ್ಯಗಳನ್ನು ನುರಿಸಿದಂತೆ ಹೆಣ್ಣು ಜೀವನವನ್ನು ಹಿಂಸಿಸಲಾಗುತ್ತಿತ್ತು. ಇದರೊಂದಿಗೆ ಗೂನು ಬೆನ್ನಿನ ಗಂಡನು ಸೇರಿಕೊಂಡಿದ್ದ ಇಂತಹ ಹಿಂಸೆಯಿಂದ ಬಿಡುಗಡೆ ಹೊಂದುವುದೆಂದರೆ 'ಮರುಹುಟ್ಟು ಪಡೆದ ಹಾಗೆನೇ ಸಾವಿನಿಂದಲೂ ಮುಕ್ತಳು ಎಂದು ಚೇತೋಹಾರಿಯಾಗಿ ಮಾತನಾಡುತ್ತಾಳೆ. ಕೌಟುಂಬಿಕ ಹಿಂಸೆಯಿಂದಾಗಿ ನಿತ್ಯ ಸಾಯುವ ಕ್ರಿಯೆಯಿಂದ ಬಿಡುಗಡೆ ಹೊಂದುವುದರ ಮೂಲಕ ಗಾಳಿ ಬೆಳಕಿನ ಹೊರಲೋಕದಲ್ಲಿ ತನ್ನ ಅಸ್ಮಿತೆಯನ್ನು ದಾಖಲಿಸುತ್ತಲೇ ಒಳಲೋಕ ಜಗ್ಗಿ ಎಳೆಯುತ್ತಿದ್ದವುಗಳನ್ನೆಲ್ಲ ಕಿತ್ತು ಬಿಸಾಡುವುದೆಂದರೆ ವಿಸ್ಮೃತಿಗೆ ಒಳಗಾಗದೆ ಮುಕ್ತ ಮುಕ್ತಳಾದ ಎನ್ನುತ್ತಾಳೆ. ಕೌಟುಂಬಿಕ ಹಿಂಸೆಯಿಂದ ಬಿಡುಗಡೆ ಹೊಂದಿ ಸಂಘ ಸೇರಿ ಭಿಕ್ಕುನಿಯರಾಗಿ ಬದುಕಲೆಂದು ಬಂದವರಿಗೆ ಬುದ್ಧಗುರು ಪರ್ಯಾಯವನ್ನು, ಹಲವು ಗೆರೆಗಳನ್ನು ಎಳೆಯುವುದರ ಮೂಲಕ ತೋರಿಸಿದ. ಈ ಕಾಲದಲ್ಲಿ ಒಂದು ಸಂಗತಿಯೆಂದರೆ ಸತಿ ಸಹಗಮನಕ್ಕೊಳಗಾಗುವುದರ ಕುರಿತು ವಿರೋಧಗಳಿರುವುದನ್ನು ಗಮನಿಸಬೇಕು. ಹೀಗಾಗಿಯೇ ವಿಧವೆಯರೆ ಭಿಕ್ಕುನಿಯರಾಗುತ್ತಿದ್ದರು. ಹೆಣ್ಣಿಲ್ಲದೆ ಕುಟುಂಬವನ್ನು ಕಲ್ಪಿಸಿಕೊಳ್ಳುವುದು ಬುದ್ಧನಂತಹವರಿಗೂ ಸಾಧ್ಯವಾದಂತಿಲ್ಲ. ವಾರಸುದಾರಿಕೆಯ ಪಾವಿತ್ರತೆಯ ಪ್ರಶ್ನೆಗಳು ಕಾಡಿರಬಹುದು.

ಅದೇ ರೀತಿ ಜೈನಧರ್ಮವು ಮಹಿಳೆಯ ಬದುಕಿನಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಗಬಹುದಾದ್ದೇನನ್ನು ಹೇಳಲಿಲ್ಲ. ಧಾರ್ಮಿಕವಾಗಿ ಮಹಿಳೆಯರಿಗೆ ಮೋಕ್ಷದ ಬಾಗಿಲನ್ನು ತೆರೆದವರು ಶ್ವೇತಾಂಬರರು, ಸ್ತ್ರೀಯರೂ ಸನ್ಯಾಸಿನಿ(ಕಂತಿ)ಯರಾಗಿ ಧರ್ಮ ಪ್ರಚಾರಕರಾಗುವ ಅವಕಾಶವಿತ್ತು. ಕಂತಿಯಾಗಿ ಧರ್ಮಕಾರ್ಯದಲ್ಲಿ ತೊಡಗಬಯಸುವ ಮಹಿಳೆಯರು ಯಾರ ಅಪ್ಪಣೆಗಾಗಿ ಕಾಯಬೇಕಾಗಿರಲಿಲ್ಲವೆಂಬುದೊಂದೇ ಈ ಧರ್ಮ ಮಹಿಳೆಯರಿಗಾಗಿ ಮಾಡಿದ ಮಹದುಪಕಾರ. ಬೌದ್ಧ ಭಿಕ್ಕುನಿಯರಿಗಿದ್ದ ನಿಯಮಗಳೇ ಜೈನ ಧರ್ಮದ ಕಂತಿಯರಾದವರಿಗೂ ಇದ್ದವು. ಗಂಡಸರಿಗೆ ಮಾತ್ರ ಮೋಕ್ಷದ ಮಾರ್ಗ ತೆರೆದಿದೆ. ಹೆಣ್ಣು ಮೋಕ್ಷ ಬಯಸುವಂತಿರಲಿಲ್ಲ. ಹೆಣ್ಣು ಭವದಿಂದ ಬಿಡುಗಡೆ ಹೊಂದಿ ಮೋಕ್ಷ ಹೊಂದಬೇಕಾದರೆ ಗಂಡು ಜೀವವಾಗಿಯೇ ಹುಟ್ಟಿರಬೇಕು ಎಂಬುದರ



ಮೂಲಕ ಮಹಿಳೆಯರಿಗೆ ಧಾರ್ಮಿಕ ಸಮಾನತೆಯ ನ್ಯಾಯವನ್ನು ನಿರಾಕರಿಸಲಾಗಿದೆ. ಇಂತಹ ಲಿಂಗವಿರೋಧಿ ತಾತ್ವಿಕ ನೆಲೆಯ ಧರ್ಮಗಳಿಂದ ಹೆಣ್ಣಿನ ಬಿಡುಗಡೆ ಸಾಧ್ಯವಾಗದು. ಕುಲೀನ ಮಹಿಳೆಯರು ಗಂಡ ಸತ್ತ ಮೇಲೆ ಸತಿ' ಹೋಗುವುದಕ್ಕಿಂತಲೂ ಧಾರ್ಮಿಕ ಕಾರ್ಯದಲ್ಲಿ ಪುರುಷ ಪ್ರಧಾನ ಮೌಲ್ಯಗಳನ್ನು ಎತ್ತಿಹಿಡಿದು, ಬದುಕಿನ ಸಾರ್ಥಕತೆಯನ್ನು ಪಡೆದುಕೊಳ್ಳಬೇಕೆಂದು ಉದಾರವಾಗಿ ಹೇಳಿದೆ. ವಾರಸುದಾರಿಕೆಯ ಶುದ್ದತೆಯನ್ನು

ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಂಡೆ ಈ ಕಾಲದಲ್ಲಿ ಮಹಿಳೆಯರು ತಮ್ಮ ಕರ್ತವ್ಯವನ್ನು ನಿರ್ವಹಿಸಿರುವರು. ಅಂತಹ ಮಹಿಳೆಯರು ಚರಿತ್ರೆಯಲ್ಲಿ ದಾಖಲಾಗಿರುವರು. ಅತ್ತಿಮಬ್ಬೆಯಂತಹ ಮಹಿಳೆಯರನ್ನು ಮುಂದಿಟ್ಟುಕೊಂಡು ಜೈನಧರ್ಮದ ಉದಾರತೆಯನ್ನು ಅಳೆಯುವಾಗ ಚರಿತ್ರೆಯ ಗ್ರಹಿಕೆ ಇರಬೇಕಾಗುತ್ತದೆ.

ಕರ್ನಾಟಕದ ಧಾರ್ಮಿಕ ಚರಿತ್ರೆಯಲ್ಲಿ ಅತ್ಯಂತ ಸಂಚಲವನ್ನುಂಟು ಮಾಡಿದ ವೀರಶೈವ ಧರ್ಮ ಮಹಿಳೆಯರನ್ನು ಸಮಾನವಾಗಿಯೆ ಕಾಣಲು ಪ್ರಯತ್ನಿಸಿತು. ಆದರೆ ಆ ಕಾಲದಲ್ಲಿ ಹೆಣ್ಣಿನ ಬಗ್ಗೆ ಔದಾರ್ಯವಿತ್ತೇ ವಿನಃ ಸಮಾನತೆಯ ಸಖ್ಯದ ಜಾಡಿರಲಿಲ್ಲ. ಅಲ್ಲಿಯು ವೈರುಧ್ಯಗಳಿರುವುದನ್ನು ಕಾಣಬಹುದು. 'ಶರಣಸತಿ ಲಿಂಗಪತಿ' ಎಂದು ಹೊರಟ ಶರಣರ ನಡಿಗೆ ಕುಟುಂಬದೊಳಗಿಂದ ಹೊರಟದ್ದಲ್ಲ. ಹೆಣ್ಣಾಗುವುದರಲ್ಲಿಯೇ ಶರತ್ವವಿದೆಯೆಂದವರು ಹೆಣ್ಣಾದವಳನ್ನು ಹಲವು ಪರೀಕ್ಷೆಗೆ ಒಳಪಡಿಸುತ್ತಾರೆ. ಆ ಕಾಲದ ಒತ್ತಡಗಳು ಅವರನ್ನು ಹಾಗೆ ನಿರ್ಬಂಧಿಸಿರಬಹುದು. ಹೆಣ್ಣನ್ನು ನಿರ್ಜೀವ ವಸ್ತುಗಳಾದ ಹೊನ್ನು, ಮಣ್ಣಿನೊಂದಿಗೆ ಸಮೀಕರಿಸಿದ್ದರಲ್ಲಿಯೇ ವೈದಿಕಹಿತ ಶರಣರ ಮೂಲಕವೂ ಜೀವಂತವಾಗಿದೆ. ಇದೆಲ್ಲದಕ್ಕೂ ಕಾರಣ ದೇಹಮೀಮಾಂಸೆಯ ಅಘನಿತ ಭಯ ಕಾಡಿದಂತಿದೆ. ಪುರೋಹಿತಶಾಹಿಯನ್ನು ಪ್ರಬಲವಾಗಿ ವಿರೋಧಿಸಿದ ವೀರಶೈವ ಧರ್ಮದ ನಿಜವಾದ ಶಕ್ತಿಯೆಂದರೆ ಕಾಯಕ ಜೀವಿಗಳು ಲಿಂಗ ತಾರತಮ್ಯತೆಯನ್ನು ಪ್ರಶ್ನಿಸುವ, ಪ್ರತಿಭಟಿಸುವ, ಪರ್ಯಾಯ ಬದುಕಿನ ಕಲ್ಪನೆ. ಶರಣ ಚಳುವಳಿಯಲ್ಲಿ ಕಾಣಬಹುದಾದ ಅತ್ಯಂತ ಆರೋಗ್ಯಕರ ಸಂಗತಿಯೆಂದರೆ ಸ್ತ್ರೀಯರಿಗೆ ಏನು ಬೇಕು, ಬೇಡ ಎಂಬುದನ್ನು ಸ್ತ್ರೀಯರೇ ಹೇಳಿರುವುದು. ಆಧ್ಯಾತ್ಮದ ಮೀಮಾಂಸೆ ಮತ್ತು ಲಿಂಗ ಸಮಾನತೆಯನ್ನು ಎತ್ತಿಹಿಡಿಯಲೆಂದು ಜೇಡರ ದಾಸಿಮಯ್ಯನಂತಹ ಹಿರಿಯ ಶರಣರು ಮಾತನಾಡಿದ್ದನ್ನು ಪ್ರಶ್ನಿಸುವ, ಪರೀಕ್ಷಿಸುವ ಶಕ್ತಿ ಶರಣೆಯರಿಗಿತ್ತು ಎಂಬುದನ್ನು ಕಾಲ ಅಲಕ್ಷಿಸಿದೆ. ಜೇಡರ ದಾಸಿಮಯ್ಯನವರು ದೈಹಿಕ ಅಂಗರಚನೆಯನ್ನು ಮೀರಿ ಆಧ್ಯಾತ್ಮವನ್ನು ಪರಿಭಾವಿಸುವ ರೀತಿ ಹೀಗಿದೆ...

"ಮೊಲೆಮುಡಿ ಬಂದಡೆ ಹೆಣ್ಣೆಂಬರು

ಗಡ್ಡ ಮೀಸೆ ಬಂದಡೆ ಗಂಡೆಂಬರು

ನಡುವೆ ಸುಳಿವ ಆತ್ಮನು

ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ" -

ಆತ್ಮಕ್ಕೆ ಲಿಂಗ ಸೂತಕವಿಲ್ಲವೆಂದು ಒತ್ತಿ ಹೇಳುತ್ತಾರೆ. ಆದರೆ ಆತ್ಮ ಪರಮಾತ್ಮನ ಅರಿಯಲು ಬೇಕಾದ ಮೂಲ ಯಾವುದು ಎಂಬುದನ್ನು ಮರೆತು ಮಾತನಾಡುತ್ತಾರೆ. ಭವದ ಬದುಕಿನಲ್ಲಿಯೇ ಶರಣ ಹುಟ್ಟಿ ಇಹಪರಗಳನ್ನು ಗೆಲ್ಲಬೇಕಾದರೆ ಜ್ಞಾನ ಅರಿವಿನ

ಸಾಕ್ಷಾತ್ಕಾರವಾಗಬೇಕು ಎಂಬುದನ್ನು ಹೆಣ್ಣನ್ನು ಹೊರಗಿಟ್ಟು ಶರಣತತ್ವ ಮುನ್ನೆಲೆಗೆ ಬಂದಿತ್ತು. ಅದನ್ನು ಗೊಗ್ಗವ್ವ, ಕಾಳವ್ವ, ಅಂಬಿಗರ ಚೌಡಯ್ಯ ಪ್ರಶ್ನಿಸುತ್ತಾರೆ. ಮನುಷ್ಯನಲ್ಲಿ ಆತ್ಮದ ಅರಿವು ಮೂಡಬೇಕಾದರೆ ಜ್ಞಾನ ಬೇಕು ಎಂಬುದನ್ನು ಯಾವ ಕಾಲದ ಮಹಾತ್ಮರು ಪರಿಭಾವಿಸಿದಂತಿಲ್ಲ. ಅದನ್ನು ಮೊಟ್ಟ ಮೊದಲಿಗೆ ಗೊಗ್ಗವ್ವ ಜಗತ್ತು ಕೇಳುವ ಹಾಗೆ ಹೇಳಿದ ರೀತಿ ಹೀಗಿದೆ.

"ಮೊಲೆ ಮುಡಿ ಬಂದಡೆ ಹೆಣ್ಣೆಂಬರು

ಮೀಸೆಕಾಸೆ ಬಂದಡೆ ಗಂಡೆಂಬರು

ಈ ಉಭಯದ ಜ್ಞಾನ

ಹೆಣ್ಣೋ ಗಂಡೋ ನಾಸ್ತಿನಾಥಾ"

ಜೇಡರ ದಾಸಿಮಯ್ಯ ಯಾವ ಮಾನದಂಡದಿಂದ ಲಿಂಗ ನಿರಸನ ಕ್ರಿಯೆಗೆ ತೊಡಗಿದ್ದನೋ ಅದೇ ಮಾನದಂಡದಿಂದಲೇ ಹೆಣ್ಣಿನ ಹಕ್ಕೊತ್ತಾಯ ಏನನ್ನು ಬಯಸುತ್ತದೆ ಎಂಬುದನ್ನು ಹೇಳಿರುವಳು. ವೈದಿಕ ಧರ್ಮದ ಬಹುದೊಡ್ಡ ಪಿತೂರಿಯೆ ಶೂದ್ರ ಮತ್ತು ಮಹಿಳೆಯರನ್ನು ಅಕ್ಷರ ಮತ್ತು ಜ್ಞಾನದಿಂದ ವಂಚಿತರನ್ನಾಗಿಸುವುದಾಗಿತ್ತು. ಈ ಪಿತೂರಿಯನ್ನು ವೈಚಾರಿಕ ಮತ್ತು ವಾಸ್ತವದ ನೆಲೆಯಲ್ಲಿ ಮೊಟ್ಟಮೊದಲಿಗೆ ಪ್ರಶ್ನಿಸುತ್ತಾಳೆ. ಯಾವುದೇ ಧರ್ಮಗಳಾಗಲಿ, ಧಾರ್ಮಿಕ ಮಹಾತ್ಮರಾಗಲಿ ಹೆಣ್ಣಿಗೆ ಬೇಕಿರುವುದೇನು ಎಂಬುದನ್ನು, ಹೆಣ್ಣನ್ನು ಹೊರಗಿಟ್ಟೆ ತೀರ್ಮಾನಿಸಿರುವರು. ಹೀಗಾಗಿಯೇ ಇಂದಿಗೂ ಮಹಿಳೆಯರು ಪುರುಷ ಪ್ರಧಾನ ಸಂಸ್ಕೃತಿಯ ವಾಹಕಗಳಾಗಿ ಬಳಕೆಯಾಗುತ್ತಿರುವರು. ಜ್ಞಾನ ವಲಯಗಳಿಂದಲೇ ಹೆಣ್ಣನ್ನು ಹೊರಗಿಟ್ಟು ಚರಿತ್ರೆ ಕಟ್ಟಿರುವುದರಿಂದ ಹೆಣ್ಣು ವ್ಯಕ್ತಿಯಾಗಿ ಕಾಣೆಯಾಗಿರುವಳು. ಅದೇ ಸಂದರ್ಭದಲ್ಲಿ ಶಕ್ತಿಸ್ವರೂಪಿಣಿಯಾಗಿ ಆರಾಧಿಸಲ್ಪಟ್ಟಿರುವಳು. ಹೆಣ್ಣಿನ ಹೆಣ್ಣನವನ್ನು ಆರಾಧಿಸಿ ಗೌರವಿಸಿದ ಪುರುಷ ವರ್ಗ ಹೆಣ್ಣಾಗುವುದು ಪುಣ್ಯದ ಕೆಲಸವೆಂದು ಸಾರುತ್ತಲೇ ಹೆಣ್ಣನ್ನು ವಿಸ್ಮೃತಿಗೆ ಒಳಗಾಗುವಂತೆ ಅಕ್ಷರ ವಿದ್ಯೆಯನ್ನು ದುಡಿಸಿಕೊಂಡಿದೆ. ಹನ್ನೆರಡನೆಯ ಶತಮಾನದಲ್ಲಿ ಶರಣರಿಗೆ ಸರಿದೊರೆಯಾಗಿ ವಿಚಾರ ವಿನಿಮಯಕ್ಕೆ ಮುಂದಾದ ವಚನಕಾರ್ತಿಯರ ಗ್ರಹಿಕೆಗಳು ಏಕಮುಖಿಯಾದವುಗಳಲ್ಲ. ಕುಟುಂಬ ಹೆಣ್ಣಿಗೆ ಸುರಕ್ಷಿತ ಚೌಕಟ್ಟೆಂದು ಭಾವಿಸಿದ ಸಮಾಜದೊಳಗೆ ಹೆಣ್ಣಿಗೆ ಕುಟುಂಬ ಸುರಕ್ಷಿತತೆಯನ್ನು ನೀಡಲಾರದು. ಅದೊಂದು ಯಾತನಾಮಯ ಶಿಬಿರವೆಂದು ಸ್ವತಃ ಕುಟುಂಬದೊಳಗಿದ್ದ ಶರಣೆಯರು ನಿರ್ಭಿಡೆಯಿಂದ ಮಾತನಾಡುವುದು ಆ

ಕಾಲದ ಮಹಿಳೆಯರಿಗಿದ್ದ ಚಾರಿತ್ರಿಕ ಗ್ರಹಿಕೆಗೆ ಹಿಡಿದ ಕನ್ನಡಿ. ಅದೇ ನೆಲೆಯಲ್ಲಿ ಬಯಲಲ್ಲಿದ್ದ ವಚನಕಾರ್ತಿಯರು ತಮ್ಮ ಅನುಭವಗಳನ್ನು ನಿರ್ಭಿಡೆಯಿಂದ ಹೊರಹಾಕಿರುವುದು ಇಂದಿಗೂ ಕೂಡಾ ಅಗಾಧ ಸಂಗತಿಯೆ. ಜ್ಞಾನಮುಖಿಯಾಗಿ ಹೊರಟ ಹನ್ನೆರಡನೆಯ ಶತಮಾನದ ಮಹಿಳೆಯರ ನಡಿಗೆಯ ಹೆಜ್ಜೆಗಳು ಸ್ತ್ರೀ ಅಸ್ಮಿತೆಯ ಮಾರ್ಗ ನಿರ್ಮಿಸುವ ಮೊದಲೆ ಶರಣ ಚಳುವಳಿ ರಾಜಸತ್ತೆಯಿಂದ ಚದುರಿಹೋಗುವಂತಾಯಿತು. ಆರ್ಥಿಕ, ಸಾಮಾಜಿಕ ಸಮಾನತೆಯನ್ನು ಧಾರ್ಮಿಕ ಸಮಾನತೆಯ ಮೂಲಕ ಆಗುಮಾಡಿಕೊಳ್ಳುವ ಪ್ರಯತ್ನದಲ್ಲಿ ಶೂದ್ರ ಮತ್ತು ಮಹಿಳೆಯರನ್ನು ಗಂಭೀರವಾಗಿ ಬಸವಾದಿ ಶರಣರು ಪರಿಗಣಿಸಿದ್ದರು. ಹೀಗಾಗಿಯೆ ಹೆಣ್ಣಿನ ಗೃಹಕೃತ್ಯಕ್ಕೆ ಸಾಮಾಜಿಕ ಗೌರವವನ್ನು ಮತ್ತು ಆರ್ಥಿಕ ಮನ್ನಣೆಯನ್ನು ನೀಡುವ



ಪ್ರಯತ್ನವನ್ನು ಮಾಡಿದರು. ಇಂದಿಗೂ ದುಡಿಮೆಯೆಂದರೆ ಸಂಬಳದ ಮಾನದಂಡದಿಂದಲೇ ಗುರುತಿಸುವ ಪರಿಪಾಠವಿರುವುದರಿಂದ ದಿನವಿಡೀ ಮಹಿಳೆಯರು ಮನೆಯಲ್ಲಿ ದುಡಿಮೆಯಲ್ಲಿ ತೊಡಗಿಕೊಂಡರೂ ಅದನ್ನು ದೇಶದ ಉತ್ಪಾದನಾ ಲೆಕ್ಕದಲ್ಲಿ ಪರಿಗಣಿಸುತ್ತಿಲ್ಲ. ಹೆಣ್ಣಿನ ಕ್ರಿಯಾಶೀಲತೆಯನ್ನು, ದೈಹಿಕ ದುಡಿಮೆಯನ್ನು ಕೌಟುಂಬಿಕ ಏಳು-ಬೀಳಿಗೆ ತಗುಲುಹಾಕಲಾಗಿದೆ. ಅಕ್ಷರಸ್ಥ ಮತ್ತು ಮೇಲ್ವರ್ಗದ ಕುಲೀನ ಸ್ತ್ರೀಯರು 'ಹೌಸ್ ವೈಫ್' (ಗೃಹಿಣಿ) ಸಿಂಡ್ರೋಮ್‌ದಿಂದ ಇಂದಿಗೂ ಬಿಡುಗಡೆ ಹೊಂದಿಲ್ಲವೆಂಬುದು ಗಮನಿಸಬೇಕಾದ ಸಂಗತಿ.

ಧರ್ಮದ ಮೂಲಕ ನಡೆದ ಚರ್ಚೆಗಳಿಗಿಂತಲೂ ಭಿನ್ನವಾದ ಚರ್ಚೆಗಳು ನಮ್ಮ ಆಧುನಿಕ ಸಂದರ್ಭದಲ್ಲಿ ನಡೆದಿವೆ. ಇದಕ್ಕೆ ಕಾರಣ ನಮ್ಮ ಕಾಲದ ಸಾಮಾಜಿಕ- ರಾಜಕೀಯ ಬಿಕ್ಕಟ್ಟುಗಳು. ಇದು ಮಹಿಳೆಗೆ ಹೊಸ ದೃಷ್ಟಿಕೋನವನ್ನು ಕೊಟ್ಟಿರುವುದರಲ್ಲಿ ಯಾವ ಅನುಮಾನಗಳೂ ಇಲ್ಲ. ಈ ವಿಧಾನ ಮಹಿಳೆಯ ಮನೋಭೂಮಿಕೆಯನ್ನು ಅರಿತುಕೊಳ್ಳುವಲ್ಲಿ ಸಹಾಯಕವಾಗಿವೆ. ಜಾತಿ, ವರ್ಗ, ವರ್ಣಗಳ ಸಂಘರ್ಷಕ್ಕೆ ಒಳಗಾದ ಸಮಾಜ ಹೆಣ್ಣಿನ ವಿಷಯಕ್ಕೆ ಬಂದಾಗ ಸಮಾನ ಗುಂಪಾಗಿ ಕಾಣಿಸಿಕೊಂಡಿದೆ. ಯಾಕೆಂದರೆ ಈ ಮೂರೂ ಅಂಶಗಳು

ಅಧಿಕಾರಕ್ಕಾಗಿ ಆಕ್ರಮಣಶೀಲತೆಯನ್ನೇ ಅವಲಂಬಿಸಿವೆ. ಅಂತಹ ಆಕ್ರಮಣಶೀಲತೆಯ ಪ್ರವೃತ್ತಿಯಿಂದ ದೂರವಿರುವ ಮಹಿಳೆ ತನ್ನ ಹಕ್ಕುಗಳಿಗಾಗಿ ನಿರಂತರ ಹೋರಾಟವನ್ನು ರೂಪಿಸುವುದು ಅಗತ್ಯವಿದೆ. ಅಂತಹ ಅಗತ್ಯತೆಯ ಚಾರಿತ್ರಿಕ ಅಂಶಗಳನ್ನು ಸಮಕಾಲೀನ ಸ್ತ್ರೀವಾದ ಮುಕ್ತವಾದ ಅಭಿಪ್ರಾಯಗಳನ್ನು ಮಂಡಿಸಿದೆ.

ನಾನು ಶ್ರೇಷ್ಠ ಎನ್ನುವ ಪುರುಷನ ವ್ಯಸನಕ್ಕೂ, ಮಹಿಳೆಯು ನಾನು ಸಮಾನಳು ಎನ್ನುವುದಕ್ಕೂ ಅಗಾಧ ವ್ಯತ್ಯಾಸವಿದೆ. ಶ್ರೇಷ್ಠ ಎನ್ನುವುದು ಒಂದು ಅಹಂಭಾವ. ಮುಂದುವರೆದಂತೆ ಅದೊಂದು ಅಕ್ರಮಶೀಲ ಪ್ರವೃತ್ತಿ. ಅದೇ ಮಹಿಳೆ ಇದನ್ನು ಪ್ರತಿಪಾದಿಸುತ್ತಿರುವ ನೆಲೆ ಅತ್ಯಂತ ಜೀವಪರವಾಗಿದೆ. ಶತಶತಮಾನಗಳಿಂದಲೂ ಅಧೀನತೆಯನ್ನು Feel ಮಾಡಿರುವ ಮಹಿಳೆ ಇಂದು ಕ್ರಿಯಾತ್ಮಕವಾಗಿ ಪ್ರಶ್ನಿಸುತ್ತಿರುವುದು, ತನ್ನ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿರುವುದರ ಹಿಂದೆ ಪುರುಷನ ಹಿತಾಸಕ್ತಿಯೂ ಇದೆ. ಹೆಣ್ಣು ಎಂದಿಗೂ ಕುಟುಂಬವನ್ನು ನಿರಾಕರಿಸಿಲ್ಲ, ಮಾತೃತ್ವವನ್ನು ನಿರಾಕರಿಸಿಲ್ಲ, ಪರಶುರಾಮನಂತೆ ತಾಯಿಯನ್ನೋ, ತಂದೆಯನ್ನೂ ಹತ್ಯೆ ಮಾಡಿಲ್ಲ. ಆಕೆ ಏನಿದ್ದರೂ ಸಂಗೋಪನೆಯ ಶಕ್ತಿಯಾಗಿ ಕಾಣಿಸಿಕೊಂಡಿದ್ದಾಳೆ. ಆಕೆಯ ಸಮಾಜದ ಕಲ್ಪನೆಯಲ್ಲಿ ಧರ್ಮದ ಕಲ್ಪನೆಯಲ್ಲಿ ಪುರುಷನಿದ್ದಾನೆ. ಆತನ ಗೈರು ಹಾಜರಿಯನ್ನು ಯಾವ ಸ್ತ್ರೀವಾದವೂ ಪ್ರತಿಪಾದಿಸಿಲ್ಲ. ಅದೇ ಪುರುಷನ ದೃಷ್ಟಿಕೋನದಲ್ಲಿ ಮಹಿಳೆ ಸಮಾಜದ ಪ್ರತಿನಿಧಿಯಾಗಿ, ಕುಟುಂಬದ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವುದಿಲ್ಲ. ಈ ದ್ವಂದ್ವವನ್ನು ಬಿಡಿಸಲು ಮಹಿಳೆಗೆ ತನ್ನದೇ ಆದ ತಾತ್ವಿಕತೆಯ ಅವಶ್ಯಕತೆ ಇದೆ. ಅದು ಚಳುವಳಿಯ ರೂಪದಲ್ಲಿರಬಹುದು ಇಲ್ಲವೆ ಹೋರಾಟದ ರೂಪದಲ್ಲಿರಬಹುದು ಅಥವಾ ಸಾಹಿತ್ಯದ ಮೂಲಕವಾಗಿರಬಹುದು. ಇಲ್ಲೆಲ್ಲಾ ಹೆಣ್ಣು ನಿರೀಕ್ಷಿಸುತ್ತಿರುವ ತನ್ನ ಪ್ರಾತಿನಿಧ್ಯವನ್ನು ಆದರೆ ಅದು ಅನಾಯಾಸವಾಗಿ ಸಿಗುವುದಿಲ್ಲ. ಯಾಕೆಂದರೆ ಅದು ಒಬ್ಬ ಪುರುಷನನ್ನು ಪರಿವರ್ತಿಸುವ ಪ್ರಕ್ರಿಯೆ ಅಲ್ಲ. ಇಡೀ ಸಮಾಜವನ್ನು ಬದಲಾಯಿಸುವ ಇರಾದೆ



ಇರುವುದರಿಂದ ಈ ಚಳುವಳಿಗೆ ಸ್ಪಷ್ಟವಾದ ತಾತ್ವಿಕ ನೆಲೆ ಬೇಕಾಗುತ್ತದೆ. ಅಂತಹ ಚಿಂತನೆಗಳು ವಿಭಿನ್ನ ಆಯಾಮಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಅದರಲ್ಲಿಯೂ ಮುಖ್ಯವಾಗಿ ಸ್ತ್ರೀವಾದ ಸಿದ್ಧಾಂತದ ನೆಲೆ ಒಂದಾದರೆ, ಮತ್ತೊಂದು ಸಾಹಿತ್ಯದ ನೆಲೆಯಾಗಿದೆ. ಆದರೆ ಇವೆರಡೂ ಭಿನ್ನ ಚಿಂತನೆಗಳಲ್ಲ. ಪರಸ್ಪರ ಸಹಕರಿಸುತ್ತಿರುವ ಈ ಅಧ್ಯಯನದ ನೆಲೆಗಳು ಸ್ತ್ರೀವಾದಿ ಓದನ್ನು ರೂಪಿಸುತ್ತಿರುವುದು ಮಹತ್ವದ ಸಂಗತಿಯಾಗಿದೆ. ಹೀಗಾಗಿ ಇವೆರಡೂ ನೆಲೆಗಳು ಪ್ರಯತ್ನಿಸುತ್ತಿರುವುದು ಸ್ತ್ರೀ ಪುರುಷರಿಬ್ಬರೂ ಸಮಾನತೆಯನ್ನು ಸಾಧಿಸಬೇಕಾಗಿದೆ ಎಂಬುದನ್ನು ಈ ಹಿನ್ನೆಲೆಯಲ್ಲಿಯೇ ಸ್ತ್ರೀವಾದಿ ಚಿಂತನೆಗಳು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ನಡೆದಿವೆ ಎಂಬುದನ್ನು ಡಾ.ವೀಣಾ ಮುಜುಂದಾರ್ ಅವರು ವಿಶ್ಲೇಷಿಸುತ್ತಾರೆ.

೧) ವಾಸ್ತವವನ್ನು ಗ್ರಹಿಸಿ ಅರ್ಥ ಮಾಡಿಕೊಳ್ಳುವುದು ಎಂದರೆ ಈವರೆಗೆ ಸತ್ಯದ ಚಿತ್ರಣವೆಂದು ಗ್ರಹಿಕೆಯಾಗಿರುವುದರಲ್ಲಿ ಎಷ್ಟೊಂದು ಅಭ್ಯಾಸವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಈ ಬಗೆಗೆ

ಪುನರ್ವ್ಯಾಖ್ಯಾನ ಮಾಡಿಕೊಳ್ಳಬೇಕು. ಸತ್ಯ, ವಾಸ್ತವ ಎಂದು ಗ್ರಹಿಸಿದ್ದು ಪುರುಷ ದೃಷ್ಟಿಕೋನದ್ದಾಗಿದೆಯಲ್ಲವೇ ಎಂಬ ಅರಿವು.

೨) ಸಮಸ್ಯೆಯನ್ನು ಗುರುತಿಸುವಲ್ಲಿ ಆಗಿರುವ ಸ್ಥಿತ್ಯಂತರಗಳು ಹೀಗೆ ಗೌರವಾದರಗಳ ಸ್ಥಾನ ಇತ್ತು ಎಂದು ಈವರೆಗೆ ನಂಬಿಸುತ್ತಾ ಬರಲಾಗಿದೆ. ಇತ್ತೀಚೆಗಷ್ಟೇ ಸಮಸ್ಯೆಯೊಂದಿದೆ ಎಂಬುದನ್ನು ಗುರುತಿಸಿ ಒಪ್ಪಲಾಗಿದೆ. ಅಂದರೆ ರೋಗ ನಿದಾನ (diagnosis) ಜಾರಿಗೊಂಡಿದೆ.

೩) ಆಗಿಹೋದ ತಪ್ಪುಗಳನ್ನು ಮರೆಯಿಸುವ ಪ್ರಯತ್ನ ಸಾಗಿದೆ. ಈ ಪ್ರಯತ್ನ ಹೊಸದಲ್ಲ. ಸ್ತ್ರೀಯನ್ನು ಭ್ರಾಮಕ ನೆಲೆಯಲ್ಲಿಟ್ಟು ವಂಚಿಸಲಾಗುತ್ತಿದೆ. ಮಾತೃತ್ವ, ದೈವತ್ವಗಳ ಮಾತು; ವೇದ ಕಾಲದಲ್ಲಿ ಎಂತೆಂಥ ಸ್ತ್ರೀಯರ ಇರುವಿಕೆ ಸಾಧ್ಯವಿತ್ತು ಎಂಬ ನಿದರ್ಶನಗಳಿಂದ ಪ್ರಯೋಜನವಿಲ್ಲ. ಏಕೆಂದರೆ ಈ ನಿದರ್ಶನಗಳು ಕೇವಲ ಅಪವಾದಗಳು. ಒಬ್ಬ ಇಂದಿರಾಗಾಂಧಿಯನ್ನು ತೋರಿ ಸ್ತ್ರೀಗೆ ಮಹತ್ವದ ಸ್ಥಾನ ಕೊಡಲಾಗಿದೆ ಎಂದಂತೆ, ಬಹುತೇಕ ಸ್ತ್ರೀಯರ ಪಾಡೇನು ಎಂಬುದನ್ನು ಗಮನಿಸಬೇಕು.

೪) ಈವರೆಗೆ ನಡೆದು ಬಂದದ್ದನ್ನು ಪೂರ್ಣ reverse ಮಾಡಬೇಕೋ ಅಥವಾ ನಡೆಯುತ್ತಿರುವ ಕ್ರಮವನ್ನು ತಿದ್ದುಪಡಿ ಮಾಡಿ ಪ್ರಯೋಗಿಸಬೇಕೋ ಎಂಬ ಡೋಲಾಯಮಾನತೆ. ಇಲ್ಲೂ ಸಹ ಭ್ರಮೆಯ ಪ್ರಯೋಗವಿದೆ. ಅಭಿವೃದ್ಧಿ, ಪ್ರಗತಿ, ಸಮಾನತೆಗಳೆಂಬ ಮಾತನಾಡುತ್ತಾ ಜನತೆ, ಸಮುದಾಯ ಎಂಬ ಪದಗಳನ್ನು 'ಪುರುಷ ಎಂಬುದಕ್ಕೆ ಬದಲಾಗಿ ಬಳಸಿದಾಗ 'ಎಲ್ಲ ಸರಿಹೋಯಿತು' ಎಂಬ ಭಾವ ಬರುತ್ತದೆ. ಆ ವಾಸ್ತವದಲ್ಲಿ ಈ 'ಜನತೆ' 'ಸಮುದಾಯ'ದಲ್ಲಿ ಸ್ತ್ರೀ ಸೇರ್ಪಡೆಯಾಗುವುದಿಲ್ಲ. ಈ ಬಗೆಗೆ ಮೈ ಮರೆಯದೆ 'ಸ್ತ್ರೀ' ಸೇರುತ್ತಾಳೆ ಎಂಬ ಬಗ್ಗೆ ಸ್ಪಷ್ಟನೆ ಪಡೆಯಬೇಕು.

ಇಡೀ ಈ ಚಿಂತನೆಯಲ್ಲಿ ಸ್ತ್ರೀಗೆ ಬೇಕಾಗಿರುವುದೇನು ಎಂಬ ಬಗ್ಗೆ ಸ್ಪಷ್ಟವಾದ ಮಂಡನೆ ಇದೆ. ಸೀಗೆ ಬೇಕಾಗಿರುವುದು ಬೇರೆಯೇ ಆದ ವಿಶಿಷ್ಟ ಸ್ಥಾನಮಾನಗಳಲ್ಲ. ಸಮಾಜದ ಜವಾಬ್ದಾರಿಗಳನ್ನು ಹಂಚಿಕೊಳ್ಳುವಲ್ಲಿ ಈಗಿರುವ ವ್ಯವಸ್ಥೆಯ ಅಳವಡಿಕೆಯಲ್ಲಿ ಸ್ತ್ರೀಯ ಪಾಲು, ಜನತೆ, ಸಮುದಾಯ, ಸಮಾಜ ಎಂದಾಗ 'ಸ್ತ್ರೀ'ಯನ್ನೂ ಒಳಗೊಂಡಂತೆ



ಎಲ್ಲರೂ ಎಂಬಂತಹ ವ್ಯಾಖ್ಯಾನ" (ಎಚ್.ಎಸ್.ಶ್ರೀಮತಿ : ಸಮಕಾಲೀನ ಕನ್ನಡ ಸಾಹಿತ್ಯ : ಸ್ತ್ರೀವಾದಿ ಓದಿನ ಹಿನ್ನೆಲೆಯಲ್ಲಿ : ಪುಟ : ೨೨೭-೨೨೮)

ಎಲ್ಲರನ್ನೂ ಒಳಗೊಳ್ಳಬೇಕಾದ ನಮ್ಮ ಸಾಂಸ್ಕೃತಿಕ ಸಂಸ್ಥೆಗಳು ಮಾಡಿದ್ದಾದರೂ ಏನನ್ನು ? ಬೌದ್ಧಿಕ ವಲಯಕ್ಕೆ ಹೆಣ್ಣನ್ನು ದೂರಮಾಡಿ ಅನುಭವಲೋಕಕ್ಕೆ ಸೀಮಿತಗೊಳಿಸಿ, ಆಕೆಯನ್ನು 'ಅಡಿಗೆಮನೆ'ಗೆ ಸಂಕೇತವಾಗಿ ಬಳಸಿ, ಈ ಸಮಾಜ ತಲುಪಿದ್ದಾದರೂ ಎಲ್ಲಿ ? ಅಪೂರ್ಣವಾದ ಬದುಕನ್ನು ಪರಿಚಯಿಸಿದ ಇದುವರೆಗಿನ ಪುರುಷ ಚಿಂತನೆಗಳು ಪೂರ್ಣಗೊಳ್ಳಬೇಕಾದರೆ ಮಹಿಳಾ ಅನುಭವ ಲೋಕವನ್ನು ಆಗು ಮಾಡಿಕೊಳ್ಳಲೇಬೇಕು. ಅಂತಹ ಅಸಮಗ್ರ ಸಾಹಿತ್ಯವನ್ನು ಸಮಗ್ರಗೊಳಿಸುವ ಆಲೋಚನೆಯೂ ಸ್ತ್ರೀವಾದಕ್ಕಿದೆ. ಈ ಕಾರಣಕ್ಕಾಗಿ ಇದುವರೆಗಿನ ಶಾಸ್ತ್ರ, ಪುರಾಣ, ಕಾವ್ಯ, ಚರಿತ್ರೆಯಲ್ಲಿ ಮಹಿಳೆಯ ಆಕೃತಿಗಳನ್ನು ಸ್ತ್ರೀವಾದಿ ಚಿಂತನೆಯ ಮೂಲಕ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗುತ್ತಿದೆ.

ಚರಿತ್ರೆಯುದ್ದಕ್ಕೂ ಗಂಡಾಳ್ವಿಕೆಯನ್ನು ಒಪ್ಪಿಕೊಂಡು ಬಂದ ಸಮಾಜದ ಮನಸ್ಥಿತಿಗೆ ಲಿಂಗಭೇದವಿಲ್ಲ. ಹೀಗಾಗಿಯೇ ನಮ್ಮ ಸಾಹಿತ್ಯಾದಿ ಕಲೆಗಳೆಲ್ಲವೂ ಗಂಡು ಮನಸ್ಥಿತಿಯ ಸ್ಥಿರೀಕರಣಕ್ಕೆ ಸಾಕಷ್ಟು ಶ್ರಮಿಸಿವೆ. ಈ ಚರಿತ್ರೆಯನ್ನು ನೆನಪಿಟ್ಟುಕೊಂಡು ಆಧುನಿಕ ಕಾಲದ ಮಹಿಳೆಯರು ತಮ್ಮ ಬಿಡುಗಡೆಯ ನಕ್ಷೆಯನ್ನು ಅಕ್ಷರದ ಮೂಲಕ ಬರೆಯಲು ಪ್ರಾರಂಭಿಸಿದರು. ಈ ಪ್ರಯತ್ನ ಸ್ವಾತಂತ್ರ ಪೂರ್ವದಿಂದ ಇಂದಿನವರೆಗೂ ವ್ಯಕ್ತಿ ನೆಲೆಯಿಂದ, ಸಂಘಟಿತ ನೆಲೆಯಲ್ಲಿ ನಡೆದಿರುವುದಕ್ಕೆ ಸಾಕ್ಷಿ ಪುರಾವೆಗಳಿವೆ. ಆದರೆ ಕಾಲ ದಾಖಲಿಸಿಕೊಳ್ಳುವ ಒತ್ತಾಸೆಯನ್ನು ಇಂದು ಸಾಹಿತ್ಯ ಪರಿಷತ್ತಿನ ಮೂಲಕ ಹೊರಹಾಕಿದೆ. ಹೀಗಾಗಿ ಮಹಿಳೆಯರು ತಮ್ಮ ಅನುಭವಗಳನ್ನು ತಮಗಿರುವ ಲೋಕ ಗ್ರಹಿಕೆಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಹೊರಹಾಕುವ ಪ್ರಯತ್ನವನ್ನು ಗಂಭೀರವಾಗಿಯೆ ಮಾಡಿರುವರು.

ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಂಡು ಸಂಭ್ರಮಿಸಿದೆ. ಈ ಸಂಭ್ರಮಕ್ಕೆ ಮಹಿಳೆಯರು ಕಾರಣಿಭೂತರು ಎನ್ನುವುದರಲ್ಲಿ ಅನುಮಾನಗಳಿಲ್ಲ. ಕನ್ನಡಿಗರ ಹೆಮ್ಮೆಯ ಸಂಸ್ಥೆಯಾದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ ಅವರು ನಂಬಿರುವ ಸಾಮಾಜಿಕ ನ್ಯಾಯ, ಪ್ರತಿಭಾ ನ್ಯಾಯ, ಪ್ರಾದೇಶಿಕ ನ್ಯಾಯ, ಲಿಂಗ ಸಮಾನತೆಯ ನ್ಯಾಯವನ್ನು ಅನುಷ್ಠಾನಗೊಳಿಸಿರುವರು. ಅದರಂಗವಾಗಿ ಇಂದು (ಮಹಿಳಾ ಸಂಪುಟಗಳು) ಮಹಿಳಾ ಸಾಹಿತ್ಯದ ಎಂಟು ಸಂಪುಟಗಳು ಲೋಕದ ನ್ಯಾಯದ ತಕ್ಕಡಿಯನ್ನು ಸರಿದೂಗಿಸುವ ಇರಾದೆಯನ್ನು ಈಡೇರಿಸಿಕೊಳ್ಳುತ್ತಿದೆ. ಕಥೆ, ಕಾವ್ಯ, ಲಲಿತ ಪ್ರಬಂಧ, ಅಂಕಣ, ವಿಮರ್ಶೆ, ಸ್ತ್ರೀವಾದ, ಸಂಕೀರ್ಣ, ಜಾನಪದವೆಂಬ ಎಂಟು ಸಂಪುಟಗಳು ಮಹಿಳೆಯರು ವಿವಿಧ ಪ್ರಕಾರಗಳು ಮಾಡಿದ ಸಾಹಿತ್ಯ ಕೃಷಿಯ ಪ್ರಾತಿನಿಧಿಕ ಸಂಕಲನಗಳಾಗಿವೆ. ಸಾಹಿತ್ಯ ಚರಿತ್ರೆಯ ಒಂಟಿಕಾಲಿನ ನಡಿಗೆಗೆ ಜಂಟಿಕಾಲುಗಳ ಹೆಜ್ಜೆಗಳ ನಾದ ಮುಂದಿನ ತಲೆಮಾರು ಸಾಹಿತ್ಯ ಚರಿತ್ರೆ ಬರೆಯುವುದಕ್ಕೆ ಓದುವುದಕ್ಕೆ ಶೋಧಿಸುವುದಕ್ಕೆ ಬಹುದೊಡ್ಡ ಆಕರ ಸಾಮಗ್ರಿಗಳಾಗಬಲ್ಲವು.

ಪರಿಕಲ್ಪನಾತ್ಮಕ ಎಂಟು ಸಂಪುಟಗಳಲ್ಲಿ ಮಹಿಳೆಯರ ಅನುಭವಗಳು ಅಂತರ್ಗತವಾಗಿರುವ ವಿಷಯಗಳನ್ನು, ಅವುಗಳ ಆಶಯಗಳನ್ನು ದಾಖಲಿಸುವುದು ಕಾಲದ ಅಗತ್ಯವೆಂದು ಭಾವಿಸಿರುವೆ.

**ಕಾವ್ಯ ಸಂಪುಟ ಒಂದು : 'ರಾಜಕಾರಣವೇ ಕಾವ್ಯಕಾರಣ' :** ಪಿ.ಚಂದಿಕಾರವರು ಪ್ರಾತಿನಿಧಿಕ ಮಹಿಳಾ ಕಾವ್ಯದ ಸಂಪಾದನೆಯ ಪ್ರಾರಂಭದಲ್ಲಿಯೇ ಕವಿತೆಯೇ ಏಕೆ ? ಎಂದು ಪ್ರಶ್ನಿಸಿಕೊಳ್ಳುತ್ತಲೇ ಅದಕ್ಕೆ ಉತ್ತರಗಳನ್ನು ಹೆಣ್ಣಿನ ಒಳಲೋಕದಿಂದಲೇ ಹುಡುಕುವ ಪ್ರಯತ್ನ ಮಾಡಿರುವರು "ಕನ್ನಡ ಮಹಿಳಾ ಕಾವ್ಯದ ಮೊದಲ ಹಂತದಲ್ಲಿ ಅಕ್ಷರಜ್ಞಾನ, ಎರಡನೆಯ ಹಂತದಲ್ಲಿ ಅರಿವು ಮತ್ತು ಮೂರನೆಯ ಹಂತದಲ್ಲಿ ಆತ್ಮ ಪ್ರತ್ಯಯವನ್ನೊಳಗೊಂಡ ದೊಡ್ಡ ಪರಿವರ್ತನೆಯ ನೆಲೆಗಳನ್ನು ಕಾಣುತ್ತೇವೆ ಎಂದು ಕಾವ್ಯಲೋಕದ ಮಹಿಳಾ ಪ್ರವೇಶಿಕೆಗೆ ತಾತ್ವಿಕ ಚೌಕದ್ದೊಂದು ಇತ್ತು ಎಂಬುದನ್ನು ಮುಂದಿಟ್ಟುಕೊಂಡು ಅದರ ಮೂಲಕ ಕಾವ್ಯ ಕಾರಣಗಳನ್ನು ವಿಶ್ಲೇಷಿಸುತ್ತಾರೆ. ಮೊದಲ ತಲೆಮಾರಿನ ಕವಿಯಿತ್ರಿಯರಿಗೆ, ರಾಷ್ಟ್ರೀಯ ಚಳುವಳಿ, ಗಾಂಧಿ ಪ್ರಭಾವ ಮುಂತಾದ ಕಾರಣಗಳಿಗಾಗಿ ಆದರ್ಶ ಸಮಾಜದ ಹಂಬಲ ಮುಖ್ಯವಾಗಿತ್ತು. ತಿರುಮಲೆ ರಾಜಮ್ಮ, ಸರಸ್ವತಿಬಾಯಿ ರಾಜವಾಡೆಯಂಥವರು ಈ ಪಥದಲ್ಲಿ ನಡೆದರೆ ಬೆಳಗೆರೆ ಜಾನಕಮ್ಮ, ಕಾವೇರಮ್ಮನಂಥವರು ಹೆಣ್ಣಿನ ನೋವಿನ ಕಾರಣಗಳನ್ನು ಹುಡಕಲು ಹೊರಟರು.

ಆಧುನಿಕ ಓದಿನ ಪ್ರಭಾವಕ್ಕೊಳಗಾದ ನಂತರದ ತಲೆಮಾರು ಸಮಾಜವೆಂದರೆ ಕೇವಲ ಪುರುಷನೆಂಬುದನ್ನು ಪ್ರಶ್ನಿಸುವುದಕ್ಕೆ ಜಗತ್ತಿನಾದ್ಯಂತ ಪ್ರಾರಂಭವಾಗಿದ್ದ ವಿ ಮೆನ್ ಎನ್ನುವ ಚಳುವಳಿಯ ಇದರ ಪ್ರಭಾವ ಚ.ಸರ್ವಮಂಗಳಾರಂಥವರ 'ಅವನು ಬಸವ'ದ ಮೂಲಕ ಪುರುಷ ಪ್ರಧಾನ ಸಾಂಸ್ಕೃತಿಕ ಮನಸ್ಸು, ಎಳೆದ ಗೆರೆಯನ್ನು ಅಳುಕಿಸದೆ ಅದರ ಸಮಾನಾಂತರವಾದ ಹಿರಿದಾದ ಗೆರೆ ಎಳೆಯುವುದರ ಮೂಲಕ ಕಾವ್ಯದ ಮಡಿವಂತಿಕೆಯ ಲೋಕದಲ್ಲೊಂದು ಕಲ್ಲು ಒಗೆದು ತರಂಗಗಳು ಏಳುವಂತೆ ಮಾಡಿದರು. ಇದರ ಮುಂದುವರಿಕೆಯಾಗಿ ಸ್ತ್ರೀವಾದವನ್ನು ಅರ್ಥೈಸಿಕೊಂಡು ಹೆಣ್ಣಿನ ಅಸ್ತಿತ್ವ, ಅನನ್ಯತೆಯ ಹುಡುಕಾಟಕ್ಕೆ ಒಂದು ತಲೆಮಾರೆ ಸೃಷ್ಟಿಯಾಯಿತು. ಮಹಿಳಾ ಕಾವ್ಯವೆಂಬುದು ಲೋಕಗ್ರಹಿಕೆಯ ಸಂಚಾರಕ್ಕೆ ಹೊರಟಿತು. ಇದೇ ಹೊತ್ತಿಗೆ ಕರ್ನಾಟಕದಲ್ಲಿ ಸಾಹಿತ್ಯಕ ಚಳುವಳಿಯೊಂದು ಮಹಿಳೆಯರ ಬರಹಕ್ಕೆ ಹಕ್ಕೊತ್ತಾಯಕ್ಕೆ ಒಂದು ವೇದಿಕೆಯನ್ನು ಕಲ್ಪಿಸಿತು. ದಲಿತ ಬಂಡಾಯ ಚಳುವಳಿಯ ಪ್ರಭಾವಕ್ಕೊಳಗಾಗಿ ಮಾತೆ ಆಡದ ಸಮುದಾಯಗಳ ಧ್ವನಿಯಾಗಿ ಅಕ್ಷರಗಳಿಗೆ ಪ್ರತಿಭಟನೆಯ ಅಸ್ತ್ರದ ನಿಗಿ ನಿಗಿ ಕಿಚ್ಚನ್ನು ಪರಿಚಯಿಸಿದರು. ಈ ಹೊತ್ತಿನಲ್ಲಿ ಅಕ್ಷರಲೋಕ ಬೆಚ್ಚಿ ಬೀಳಿಸುವಂತಹ ಸಾಮಾಜಿಕ ಸ್ಫೋಟಕಗಳು ಕಾಣಿಸಿಕೊಂಡವು. ಅಭಿಜಾತ ಸಾಹಿತ್ಯದ ಮಾದರಿಗಳನ್ನು ಮುರಿದು ಕಟ್ಟುವ ಕ್ರಿಯೆಗಳು ಅನುಭವದ ತಾಜಾತನದಿಂದ ಆದವು. ಹೀಗೆ ಮಾತನಾಡಿದ ಬರೆದ ಬಹುದೊಡ್ಡ ಗುಂಪು ಅಲಕ್ಷಿತಲೋಕದಿಂದ ಬಂದವರಾಗಿದ್ದರು. ಈ ಎಲ್ಲ ಸಾಹಿತ್ಯಕ, ಸಾಮಾಜಿಕ, ಲಿಂಗ ರಾಜಕಾರಣಗಳ

ಗ್ರಹಿಕೆಗಳನ್ನಿಟ್ಟುಕೊಂಡು ಈ ಸಂಪುಟ ಮಹಿಳಾ ಕಾವ್ಯದ (ಪ್ರಾತಿನಿಧಿಕ) ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕನ್ನಡ ಕಾವ್ಯದ ನಾಡಿಮಿಡಿತವನ್ನು ಹಿಡಿದಿಟ್ಟಿದೆ.



**ಕಥಾ ಸಂಪುಟ ಎರಡು : ಒಳಕುದಿಯ ಹೊರಹಾಕುವ ಜೀವಗಳ ಹಸಿಮಾತು :** ಹೆಣ್ಣಿನ ಒಡಲು ಕಥೆಗಳ ಕಡಲು ಎಂದು ಹೇಳಲಾಗಿದೆ. ಈ ಕಡಲಿನ ಆಳ ಅಗಲಗಳನ್ನು ಡಾ.ಪದ್ಮನಿ ನಾಗರಾಜು ಅವರು ಮಹಿಳೆಯರ ಪ್ರಾತಿನಿಧಿಕ ಕಥೆಗಳ ಮೂಲಕ ಅಳೆಯುವ ಪ್ರಯತ್ನವನ್ನು ಈ ಸಂಪುಟದಲ್ಲಿ ಮಾಡಿರುವರು. ಮಾನವ ಇತಿಹಾಸ 'ಮಹಿಳಾ ಇತಿಹಾಸವಲ್ಲ'ವೆಂಬ ಪ್ರಜ್ಞೆಯೊಂದಿಗೆ ಒಡಲಿನ ಕಥೆಗಳ ಕಡಲಿನಲ್ಲಿರುವ ಮುತ್ತುರತ್ನಗಳು ಕಪ್ಪೆ ಚಿಪ್ಪುಗಳನ್ನು ಒಟ್ಟಿಗೆ ಸಂಗ್ರಹಿಸಿರುವರು. “ಸ್ತ್ರೀ ಪರ ಸಾಹಿತ್ಯ ರಚಿಸಿದ ಆರ್.ಕಲ್ಯಾಣಮ್ಮ ಹಾಗೂ ನಂಜನಗೂಡು ತಿರುಮಲಾಂಬರವರನ್ನು ಆಧುನಿಕ ಕನ್ನಡ ಸಾಹಿತ್ಯದ ಮೊದಲ ಲೇಖಕಿಯರು ಎಂದು ಇವರಿಬ್ಬರನ್ನು ಗುರುತಿಸಲಾಗುತ್ತದೆ.” ಮೊದಲ ತಲೆಮಾರಿನ ಕಥೆಗಾರ್ತಿಯರಿಗೆ ಅಕ್ಷರಲೋಕದ ಹಿನ್ನೆಲೆಯಿತ್ತು, ಆದರ್ಶವೆಂದು ಹೇಳಿದ ಸಾಮಾಜಿಕ, ಕೌಟುಂಬಿಕ ಮಾದರಿಗಳಿದ್ದವು. ಇಂತಹ ಮಾದರಿಗಳನ್ನಿಟ್ಟುಕೊಂಡು ಮೊದಲ ತಲೆಮಾರಿನ ಕಥೆಗಾರ್ತಿಯರು ಕಥೆ ಬರೆದದ್ದು ಕೂಡಾ ಆ ಕಾಲದ ಮಡಿವಂತಿಕೆ ಸಮಾಜದಲ್ಲಿ ಸಾಹಸವೆಂದೆ ಭಾವಿಸಲಾಗಿತ್ತು “ಸೀಮಿತ ನೆಲೆಗಟ್ಟಿನಲ್ಲಿ ಮಹಿಳೆ ಪ್ರಾರಂಭದಲ್ಲಿ ಬರೆಯಲಾರಂಭಿಸಿದ ಅವಳ ಕೃತಿಗಳಿಗೆ ಆಯ್ದುಕೊಂಡ ವಸ್ತುಗಳು ಕೂಡಾ ಅವಳು ಕಂಡು ಕೇಳಿದ, ಅನುಭವಿಸಿದ ಘಟನೆಗಳನ್ನೇ ಆಧರಿಸಿದ್ದವಾಗಿದ್ದವು. ಅಂತಹ ಸಾಹಿತ್ಯದಲ್ಲಿ ಗಟ್ಟಿತನ ಕಂಡುಬರದಿದ್ದರೂ, ಬರೆದಳೆಂಬ ಹೆಮ್ಮೆಯ ಬದಲು “ಅಡಿಗೆಮನೆ ಸಾಹಿತ್ಯ” ಎಂದು ಅವಹೇಳನಕ್ಕೊಳಗಾದರೂ ಮಹಿಳೆಯರು ಧೃತಿಗೆಡದೆ ಬರೆದೇ ಬರೆದರು. ಇಂದು ಅಂತಹ ಮಾತುಗಳನ್ನು ಧಿಕ್ಕರಿಸಿ ಸಮಾನವಾಗಿ ಬರೆದ ಮಹಿಳಾ ಸಾಹಿತ್ಯ (ಕಥೆ)ವನ್ನು ಕಡೆಗಣಿಸಲು ಸಾಧ್ಯವೇ ಇಲ್ಲವೆಂದು ಹಲವು ಪ್ರಥಮಗಳನ್ನು ಕನ್ನಡ ಕಥಾಪರಂಪರೆಯಲ್ಲಿ ಮಹಿಳೆಯರು ಸಾಧಿಸಿರುವುದನ್ನು ಈ ಸಂಪುಟದಲ್ಲಿ ದಾಖಲಿಸಿರುವರು.

**ಲಲಿತ ಪ್ರಬಂಧ ಸಂಪುಟ ಮೂರು : ಆತ್ಮದೊಂದಿಗಿನ ಆತ್ಮಸಂವಹನ :** ಬರಹಗಾರರಲ್ಲಿ ಓದುಗರು ಇರುತ್ತಾರೆ. ಓದುಗರಲ್ಲಿ ಬರಹಗಾರರು ಇರಬೇಕಾಗಿಲ್ಲ. ಬರಹಗಾರರಲ್ಲಿರುವ ಓದುಗರ ನಡುವಿನ ಸಂಬಂಧಗಳು ಆತ್ಮದೊಂದಿಗಿನ ಆತ್ಮಸಂವಹನದಂತಿರುತ್ತದೆ ಎಂಬುದನ್ನು ಲಲಿತ ಪ್ರಬಂಧಗಳಲ್ಲಿ ಕಾಣಬಹುದು. ಸಾಹಿತ್ಯದಲ್ಲಿ ಗಂಭೀರತೆಗೆ ಮಾತ್ರ ಸ್ಥಾನವೆಂಬುದನ್ನು ಬದಿಗಿಟ್ಟು ಸಾಹಿತ್ಯವು ಮನುಷ್ಯಲೋಕದ ಕನ್ನಡಿಯೆಂದು ಭಾವಿಸುವುದಾದರೆ ಅಲ್ಲಿ ಉಲ್ಲಾಸ, ಉತ್ಸಾಹ, ಸರಸ, ವಿನೋದಗಳಿಗೆಲ್ಲವುಗಳಿಗೂ ಜಾಗವಿದೆ ಎಂಬುದನ್ನು ಬಿಂಬಿಸಲೆಂದೆ ಲಲಿತ ಪ್ರಬಂಧ'ಗಳ ಪ್ರಕಾರವೊಂದು ಹುಟ್ಟಿಕೊಂಡಿದೆ. “ವಿ.ಸೀ.ಯವರು ಭಾವಿಸಿದಂತೆ ಲಲಿತ

ಪ್ರಬಂಧಗಳೆಂದರೆ 'ಮನಸ್ಸಿನ ಒಲವು, ಓಟ, ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಮ" ಎನ್ನುತ್ತಾರೆ. 'ನೇಯುವ ಈ ಕ್ರಮ ಪ್ರಬಂಧಕಾರರ ಕಲೆಗಾರಿಕೆಯನ್ನು ತೋರಿಸುತ್ತದೆ. ಲಲಿತ ಪ್ರಬಂಧಗಳಲ್ಲಿ ವೈಚಾರಿಕತೆ ಇದೆ. ಕಾಲ್ಪನಿಕತೆಯೂ ಇದೆ. ಹಾಸ್ಯ ವಿಡಂಬನೆಗಳೂ ಇವೆ. ಇಂಥ ವಿಭಿನ್ನ ಎಳೆಗಳ ಕಲಾತ್ಮಕ ನೇಯ್ದೆಯುಳ್ಳ ಬರಹವೇ ಲಲಿತ ಪ್ರಬಂಧ" ಈ ಕಲಾತ್ಮಕ ನೇಯ್ದೆಯಲ್ಲಿ ಗಂಡಸಿಗೆ ಅಪರಿಚಿತವಾಗಿದ್ದ ಅದ್ಭುತಲೋಕವೊಂದರ ಪರಿಚಯವನ್ನು ಮಹಿಳೆಯರು ಮಾಡಿಸಿರುವರು. ಅದು ಮಹಿಳಾ ಲೋಕವೆಂದು ಕರೆಯಿಸಿಕೊಂಡ ಅಡಗಿಮನೆಯ ಒಳಗುಟ್ಟನ್ನು ಅದರ ಸೌಂದರ್ಯ ಸಾಧ್ಯತೆಗಳನ್ನು



ಅದರೊಂದಿಗಿದ್ದ ಅದರೊಂದಿಗಿನ ಅನುಭವಗಳನ್ನು ನವಿರಾಗಿ ಹೇಳಿ, ತಾವು ಹಗುರಾಗಿ ಓದುಗರ ಹೃದಯವನ್ನು ಭಾರಗೊಳಿಸುವ ಹಲವು ಕಹಿ ಸತ್ಯಗಳಿಗೆ ಅಕ್ಷರದ ನೆಯ್ದಿ ಕುಸುರಿತನದ ಎಲ್ಲ ಹಂತಗಳ ಮಾದರಿಗಳನ್ನು ಈ ಸಂಪುಟದಲ್ಲಿ ಕಾಣಬಹುದು.

**ವಿಮರ್ಶಾ ಸಂಪುಟ ನಾಲ್ಕು : "ಶಕ್ತರನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತದೆಯೇ ಹೊರತು ಅಶಕ್ತರನ್ನಲ್ಲ"** : ಎನ್ನುವ ಕಾಲಾತೀತ ಸತ್ಯದ ಪುನರ್ ದರ್ಶನವನ್ನು ಡಾ.ಎಂ.ಎಸ್.ಆಶಾದೇವಿಯವರು ವಿಮರ್ಶಾ ಸಂಪುಟದ ಮೂಲಕ ಮಾಡಿರುವರು. "ಹೆಣ್ಣಿನ ಮಟ್ಟಿಗೆ ಹಲವು ಬಹಿಷ್ಕೃತ, ಅಸಾಧ್ಯ ಕ್ಷೇತ್ರಗಳಲ್ಲಿ ಒಂದಾಯಿತು" ಎಂದು ಸಂಪಾದಕರು ಸರಿಯಾಗಿಯೇ ವಿಮರ್ಶಾ ಕ್ಷೇತ್ರದ ಲಿಂಗರಾಜಕಾರಣವನ್ನು ಗುರುತಿಸಿರುವರು. ಮೊದಲ ತಲೆಮಾರಿನ ಲೇಖಕಿಯರು ತಮ್ಮ ಬರಹದ ಬಗ್ಗೆ ಪುರುಷ ವಿಮರ್ಶಕರು ಉದಾಸೀನತೆಯಿಂದ ಕಾಣುತ್ತಿರುವುದರ ಕುರಿತು ಸಹನೆಯಿಂದಲೇ ಮಾತನಾಡಿರುವರು. ಸಾಂಸ್ಕೃತಿಕ ಮತ್ತು ಸಾಹಿತ್ಯಕ ರಾಜಕಾರಣದ ಒಳ ಸುಳಿವುಗಳನ್ನು ಗ್ರಹಿಸುವುದರಲ್ಲಿ ಮೊದಲ ತಲೆಮಾರಿನ ಲೇಖಕಿಯರು ಮುಂದಾಗಲಿಲ್ಲ. ದೂರದೃಷ್ಟಿಯ ಕೊರತೆಯಿಂದ ಹಿರಿಯ ತಲೆಮಾರಿನ ಲೇಖಕಿಯರು ಪುರುಷಲೋಕ ಬಯಸಿದ್ದೆಲ್ಲವನ್ನು ಬಿಟ್ಟುಕೊಟ್ಟು "ಇಟ್ಟಂತೆ ಇರುವೆ ಶಿವಾ" ಎನ್ನುವ ಹಾದಿಯಲ್ಲಿಯೇ ನಡೆದದ್ದು ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಬೇಕಾದವರಿಗೆ ಎದುರಾದ ಬಹುದೊಡ್ಡ ಬಿಕ್ಕಟ್ಟೆಂದು ಹೇಳಬಹುದು. ಕಲೆಯ ಕುರಿತ ಹಾಗೇ ಸ್ಥಾಪಿತ ವ್ಯಾಖ್ಯಾನಗಳನ್ನು ಮುರಿದು ಕಟ್ಟುವ ಕ್ರಿಯೆಗಳಿಗಿಂತಲೂ ಸಹನೆಯಿಂದ ಗೆಲ್ಲುವ ವಿಶ್ವಾಸದಿಂದಲೇ ಬರಹವನ್ನು ಪ್ರಾರಂಭದಲ್ಲಿ ಅಗಾಧವಾಗಿಯೇ ಪ್ರೀತಿಸಿದರು.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಿಮರ್ಶೆ ಮತ್ತು ಮೀಮಾಂಸೆ ಪ್ರಧಾನವಾದ ಕಾರಣ ಸಾಂಸ್ಕೃತಿಕ ರಾಜಕಾರಣದ ಚುಕ್ಕಾಣಿ ಗಂಡಸಿನ ಕೈಯಲ್ಲಿಯೆ ಇತ್ತು. ಹೀಗಾಗಿ ಮಹಿಳೆಯರ ಕೃತಿ ಕುರಿತ ಹಾಗೆ

ಅವಜ್ಞತೆ ಮತ್ತು ಅಸಡ್ಡೆಯಿಂದ ನೋಡಿದ್ದರ ಕುರಿತು ತಕರಾರುಗಳನ್ನು ಚಾರಿತ್ರಿಕ ನೆಲೆಯಲ್ಲಿ ವಿಮರ್ಶಕಿಯರು ಎತ್ತಿದ ಮೇಲೆಯೇ ಸಾಹಿತ್ಯ ರಾಜಕಾರಣ ಅರ್ಥವಾಯಿತು. ಹೀಗಾಗಿ ಸಿದ್ಧಮಾದರಿಯ ಅಳತೆಗೋಲಿನಿಂದ ಅಳೆಯುವುದರ ಕುರಿತು ಪರ್ಯಾಯ ಸ್ತ್ರೀ ವಿಮರ್ಶಾ ಪರಿಭಾಷೆಗಳ ಹುಡುಕಾಟಕ್ಕೆ ತೊಡಗಿದರು. ಹೀಗಾಗಿಯೇ ಪುರುಷನಿಷ್ಠ ಸಾಹಿತ್ಯ ವಿಮರ್ಶೆಯ ಮಾನದಂಡಗಳನ್ನು ಮೀರಿ ಸ್ತ್ರೀ ನಿಷ್ಠ ವಿಮರ್ಶಾ ಮಾನದಂಡಗಳನ್ನು ಹುಡುಕಿಕೊಂಡರು. ಬಹುಮುಖಿ ಉಭಯಲಿಂಗೆ ಆಶಯಗಳ ಪ್ರಾತಿನಿಧಿಕ ವಿಮರ್ಶೆಯ ಪರಿಭಾಷೆಗಳ ಪರಿಚಯವನ್ನು ಈ ಸಂಪುಟದಲ್ಲಿ ಕಾಣಬಹುದು.

**ಸ್ತ್ರೀವಾದಿ ಸಂಪುಟ ಐದು : ಉಭಯಲಿಂಗಿ ಜ್ಞಾನದ ಪರಿ ಇಂತು :** ಆರ್ಥಿಕ ಸಂರಚನೆಯಲ್ಲಿ ಹುದುಗಿರುವ ಸಾಮಾಜಿಕ, ಸಾಂಸ್ಕೃತಿಕ ನಮ್ಮ ಬದುಕಿನ ಸ್ವರೂಪವನ್ನು ನಿರ್ಧರಿಸುತ್ತದೆ. ಬಹುತ್ವವನ್ನು ಒಳಗೊಂಡಿರುವ ಮನುಷ್ಯನ ಸಾಮಾಜಿಕ ಸಾಂಸ್ಕೃತಿಕ ಬದುಕನ್ನು ಕಾಲ, ದೇಶಗಳು ನಿರ್ಧರಿಸುತ್ತವೆ ಎನ್ನುವ ಸಾಮಾಜಿಕ ವ್ಯಾಖ್ಯಾನ ನಾವು ಕಾಣುವ ಪ್ರಪಂಚವನ್ನು ಕುರಿತಾದದ್ದು. ಆಯಾಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳೆಲ್ಲವೂ ಪುರುಷಮಯಗೊಂಡಿರುವುದರಿಂದ ಉತ್ಪಾದಕ ನೆಲೆಯಲ್ಲಿ



ಮಹಿಳೆ ಕಾಣೆಯಾಗಿರುವಳು. ರೂಢಿಗತ ಮಹಿಳೆಯರ ಬದುಕಿನ ಸ್ಥಿತಿಗತಿಗಳನ್ನು ಸ್ತ್ರೀವಾದಿ ಪ್ರಜ್ಞೆಯ ಮೂಲಕ ಅಳೆಯಹೊರಟಿದ್ದರ ಹಿಂದೆ ಪಶ್ಚಿಮದಲ್ಲಿ ನಡೆದ ಮಹಿಳಾ ಚಳುವಳಿಯ ಒತ್ತಾಸೆಗಳಿವೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ನಲುಗಿಹೋದ ಹೆಣ್ಣು ಜೀವದ ಕಾರಕಾರಣಗಳನ್ನು ಹುಡುಕುವ ಪ್ರಯತ್ನ ಒಂದು ಕಡೆಯಾದರೆ ಇನ್ನೊಂದು ಕಡೆ ಸ್ತ್ರೀವಾದಿ ಪ್ರಜ್ಞೆಯ ನೆಲೆಯಲ್ಲಿ ಸ್ತ್ರೀ ಸಂಸ್ಕೃತಿಯ ಶೋಧದ ಪ್ರಯತ್ನಗಳು ಆಧುನಿಕ ಓದಿನ ಮುಖೇನ ಕಾಣಿಸಿಕೊಂಡಿತು. ಹೊರ ಮತ್ತು ಒಳಜಗತ್ತಿನ ಶಕ್ತಿ ಕೇಂದ್ರಗಳೆಂದು ಭಾವಿಸಿರುವ ಉತ್ಪಾದನಾ ನೆಲಯಲ್ಲಿ ಹೆಣ್ಣು ಗಂಡಿಗೆ ಸಮಾನತೆಯ ಹಕ್ಕೊತ್ತಾಯವನ್ನು ಸ್ತ್ರೀವಾದಿ ವಿಚಾರಧಾರೆ ಪ್ರತಿಪಾದಿಸಿತು. “ಸ್ತ್ರೀವಾದಿ ವಿಮರ್ಶೆಯು ಸಾಹಿತ್ಯದಲ್ಲಿ ಸ್ಥಾಪಿತವಾದ ಪುರುಷ ಶ್ರೇಷ್ಠತೆಯ ವಿರುದ್ಧ ತನ್ನ ಹೋರಾಟವನ್ನು ಹಲವು ರೀತಿಗಳಲ್ಲಿ ಮಾಡಬೇಕಾಗಿದೆ. ಈ ಹೋರಾಟಕ್ಕೆ ಬೀಳಿಸುವುದರಲ್ಲಷ್ಟೇ ಆಸಕ್ತಿಯಿಲ್ಲ. ಕಟ್ಟುವುದರಲ್ಲಿ ಕೂಡ. ರಚನಾತ್ಮಕವಾದ ತಮ್ಮ ಕರ್ತವ್ಯಗಳನ್ನು ಈ ವಿಮರ್ಶೆ ಮರೆಯುವಂತಿಲ್ಲ. ಆದ್ದರಿಂದ ಸ್ತ್ರೀವಾದಿ ನೆಲೆಯಿಂದ ಬರುವ ಸಾಹಿತ್ಯಕ್ಕೆ ಆದ್ಯ ಗಮನ ನೀಡುತ್ತವೆ” ಎಂದು ಡಾ.ವಿಜಯಾ ದಬ್ಬೆಯವರು ಸ್ತ್ರೀವಾದ ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶಿಸುವ ಹೊತ್ತಿನಲ್ಲಿ ಹೇಳಿರುವ ವಿಚಾರಗಳು ಮುಂದಿನ ದಿನಗಳಲ್ಲಿ ಮಹಿಳೆಯರ ಬರಹಕ್ಕೆ ತಾತ್ವಿಕ ಚೌಕಟ್ಟನ್ನು ನೀಡಿದವು. ಸ್ತ್ರೀವಾದಿ ಸೈದ್ಧಾಂತಿಕ ಚೌಕಟ್ಟು ಬಹುರೂಪದ್ದು. ವರ್ಗ ವರ್ಣಗಳಲ್ಲಿ ಹಂಚಿಹೋಗಿರುವ ಭಾರತದ ಮಹಿಳೆಯರ ಬದುಕಿನ ಅನ್ವೇಷಣೆ ಪಶ್ಚಿಮದ ಚೌಕಟ್ಟಿಗೆ ಒಗ್ಗುವುದರಲ್ಲಿ ಹಲವು ಅನುಮಾನಗಳನ್ನು ಹುಟ್ಟುಹಾಕಿದವು. ಪುರುಷ

ದ್ವೇಷ ಮತ್ತು ಕೌಟುಂಬಿಕ ಬದುಕನ್ನು ಮುರಿಯುವ ಮನೆಮುರಿಕಿಯರೆಂದು ಭಾವಿಸುವ ಹಾಗೇ ಸ್ತ್ರೀವಾದದ ಸೈದ್ಧಾಂತಿಕತೆಯನ್ನು ಮೊದಮೊದಲು ಅನುಮಾನದಿಂದ ನೋಡಲಾಯಿತು. ಇದಕ್ಕೆ ಕಾರಣ ಶ್ರೇಣೀಕೃತ ನೆಲೆಯಿಂದ ಬಂದ ಮಹಿಳೆಯರ ಗ್ರಹಿಕೆಗಳಾಗಿದ್ದವು. ನಂತರದ ದಿನಗಳಲ್ಲಿ ಭಾರತದ ಚರಿತ್ರೆ ಮುಖೇನ ಸ್ತ್ರೀವಾದಿ ಸಿದ್ದಾಂತವನ್ನು ಅರ್ಥೈಸಿಕೊಳ್ಳುವ ಪ್ರಯತ್ನಗಳು ಹಲವು ನೆಲೆಯಿಂದ ಬಂದ ಮಹಿಳೆಯರ ಮೂಲಕ ನಡೆದ ಕಾರಣ ಸ್ತ್ರೀವಾದ ವಿಶ್ವಾಸಾರ್ಹತೆಯನ್ನು ಸಮಾಜದಲ್ಲಿ ಗಳಿಸಲು ಸಾಧ್ಯವಾಯಿತು. ಈ ಸಾಧ್ಯತೆಗಳನ್ನು ಈ ಸಂಪುಟದ ಬರಹಗಳಲ್ಲಿ ಕಾಣಬಹುದು.

**ಅಂಕಣ ಬರಹ ಸಂಪುಟ ಆರು : ಮಾರುಕಟ್ಟೆಯೊಳಗೆ ಮಾನಸಿಯ ಮಾತುಗಳು:** ಕನ್ನಡ ಸಾಹಿತ್ಯದ ಪ್ರಕಾರಗಳಿಗೆ ಹೋಲಿಸಿದರೆ ಅಂಕಣ ಬರಹಗಳು ಇತ್ತೀಚಿನ ಬೆಳೆಯಾಗಿದೆ. ಇದು ಒಂದು ರೀತಿಯಲ್ಲಿ ವಿಮರ್ಶಕರ ಮತ್ತು ಗಂಭೀರ ಓದುಗರ ಅಲಕ್ಷಕ್ಕೆ ಇತ್ತೀಚಿನವರೆಗೂ ಒಳಗಾದ ಪ್ರಕಾರವಾಗಿತ್ತು. ಸಾಹಿತ್ಯಕ್ಕಿರುವ ಮಹತ್ವವನ್ನು ಅಂಕಣ ಬರಹಕ್ಕೆ ನೀಡದೆ ಹೋದ ಕಾರಣ ಸಾಹಿತಿಗಳು ಈ ಪ್ರಕಾರದ ಕೃಷಿಯಲ್ಲಿ ಹೆಚ್ಚು ತೊಡಗಿದಂತಿಲ್ಲ ಡಿ.ವಿ.ಜಿ., ಪಾ.ವೆಂ., ನಿರಂಜನರು, ಹಾ.ಮಾ.ನಾಯಕರಂತಹವರು ಇದನ್ನು ಗಂಭೀರವಾಗಿ ತೆಗೆದುಕೊಂಡ ಕಾರಣದಿಂದ ಸಾಹಿತ್ಯದ ಪ್ರಕಾರಗಳ ವ್ಯಾಪ್ತಿಗೆ ಇತ್ತೀಚೆಗೆ ಸೇರಿಸಲ್ಪಟ್ಟಿದೆ. ಸ್ವತಃ ಪತ್ರಿಕೆಯನ್ನು ಹುಟ್ಟುಹಾಕಿದ ಲಂಕೇಶ, ತೇಜಸ್ವಿ, ಚಂದ್ರಶೇಖರ ಪಾಟೀಲರಂಥವರು ಅಂಕಣ ಬರಹಗಳ ಮೂಲಕವೇ ಗುರುತಿಸಿಕೊಂಡಿದ್ದುಂಟು. ಸಮಕಾಲೀನ ಬಿಕ್ಕಟ್ಟುಗಳನ್ನು ಗಮನದಲ್ಲಿಟ್ಟುಕೊಂಡು ಬೆಳೆದ

ಈ ಪ್ರಕಾರ ಇಂದು ಎಲ್ಲರನ್ನು ಒಳಗೊಳ್ಳುತ್ತಿದೆ. ಕನ್ನಡದ ಮುಖ್ಯ ಬರಹಗಾರರು ಮತ್ತು ಯುವ ಬರಹಗಾರರು ಇಂದು ಪತ್ರಿಕೆಗಳಲ್ಲಿ, ಬ್ಲಾಗ್‌ಗಳಲ್ಲಿ, ಅಂಕಣಗಳನ್ನು ಬರೆಯುತ್ತಿರುವರು. ಅಂಕಣಗಳಿಲ್ಲದೆ ಪತ್ರಿಕೆಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗದ ಹಾಗೆ ಇಂದು ಅಂಕಣ ಬರಹ ಮಾನ್ಯತೆಗೆ ಒಳಗಾಗಿದೆ.

ಅಂಕಣ ಬರಹಕ್ಕೆ ಸಮ್ಮಂದಿಸಿ ಹೇಳುವುದಾದರೆ, ಎರಡು ರೀತಿಯ ಅಂಕಣಕಾರರನ್ನು ಕಾಣುತ್ತೇವೆ. ಒಂದು ಸಾಹಿತಿಗಳು ಬರೆಯುವ ಅಂಕಣಗಳು ಮತ್ತು ಭಿನ್ನ ಭಿನ್ನ ಕ್ಷೇತ್ರದ ತಜ್ಞರು ಬರೆಯುವ ಅಂಕಣ, ಸಾಹಿತಿಗಳು ಬರೆಯುವ ಅಂಕಣಕ್ಕೂ ವಿಷಯ ಪರಿಣಿತರು ಬರೆಯುವ ಅಂಕಣಗಳ ಉದ್ದೇಶ, ವ್ಯಾಪ್ತಿ, ವಸ್ತುವಿಷಯಗಳ ನಿರೂಪಣೆಯಲ್ಲಿ ವ್ಯತ್ಯಾಸಗಳಿರುತ್ತವೆ. ಇದಕ್ಕೆ ಕಾರಣ ಬರಹಗಾರನ ಆಯ್ಕೆ, ಆಸಕ್ತಿ, ಎನ್ನಬಹುದು ಈ ಕಾರಣಕ್ಕಾಗಿಯೇ ಮಹಿಳಾ ಅಂಕಣಕಾರರು ಭಿನ್ನರಾಗುತ್ತಾರೆ.

ಪುರುಷ ಕೇಂದ್ರಿತ ಸಮಾಜವನ್ನು ಪುರುಷ ಮಾನದಂಡದಿಂದಲೇ ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಅದೇ ಮಹಿಳೆಯರು ತಮ್ಮ ಅಸ್ಮಿತೆಗೆ ಉಂಟಾದ ಎಲ್ಲ ಬಿಕ್ಕಟ್ಟುಗಳನ್ನು ತಮ್ಮದೇ ಆದ ಅನುಭವ, ಭಾಷೆ, ರೂಪಕಗಳ ಮೂಲಕ ಅಭಿವ್ಯಕ್ತಪಡಿಸುತ್ತಾಳೆ. ಪುರುಷರ ಗ್ರಹಿಕೆಗೆ ನಿಲುಕದ ಬದುಕಿನ ಅಮೂರ್ತವಾದ ಹಲವಾರು ಸಂಗತಿಗಳನ್ನು, ಹಿತಾಸಕ್ತಿಗಳನ್ನು ಪ್ರಶ್ನಿಸುವ, ಪರಿವರ್ತಿಸುವ ರೀತಿಯ ಬರಹಗಳನ್ನು ಮಹಿಳೆಯರು ಅಂಕಣದ ರೂಪಿ ಬರಹಕ್ಕೆ ಒಗ್ಗಿಸಿಕೊಂಡಿರುವರು. ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಕನ್ನಡ ಪತ್ರಿಕೆಗಳು ಮಹಿಳಾ ಅಂಕಣಕಾರರಿಗೆ ನೀಡಿರುವ ಪ್ರೋತ್ಸಾಹ ಆರೋಗ್ಯಕರ ಬೆಳವಣಿಗೆಯಾಗಿದೆ. ಪ್ರಮುಖ ಪತ್ರಿಕೆಗಳಲ್ಲಿ ಮಹಿಳಾ ಅಂಕಣಕಾರರು, ರಾಜಕೀಯ, ಸಾಮಾಜಿಕ ಸಮಸ್ಯೆಗಳು, ಆರೋಗ್ಯ, ನೈರ್ಮಲ್ಯ, ಸಾಹಿತ್ಯ, ಕಲೆ ಮುಂತಾದವುಗಳ ಕುರಿತು ಬರೆಯುತ್ತಿರುವುದು ಮತ್ತು ಓದುವ ವರ್ಗವನ್ನು ವಿಸ್ತರಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಹೀಗೆ ವಿಭಿನ್ನ ನೆಲೆಯಲ್ಲಿ ವಿಭಿನ್ನ ಪತ್ರಿಕೆ, ಕಾಲಗಳಲ್ಲಿ ಪ್ರಕಟಗೊಂಡ ಸ್ತ್ರೀ ದೃಷ್ಟಿಕೋನದ ಅಂಕಣ ಬರಹಗಳನ್ನು ಪ್ರಾತಿನಿಧಿಕವಾಗಿ ಈ ಸಂಪುಟದ ವ್ಯಾಪ್ತಿಗೆ ಒಳಪಡಿಸಲಾಗಿದೆ.

**ಸಂಕೀರ್ಣ ಸಂಪುಟ ಏಳು : ಬಯಲ ರೂಪಿನ ಬಣ್ಣದ ಬಿಂಬಗಳು :** ಸಂಕೀರ್ಣ ಎಂಬ ಪದ ಬಳಕೆ ನವ್ಯ ವಿಮರ್ಶಕರ ಮೂಲಕ ಸಾಹಿತ್ಯಲೋಕಕ್ಕೆ ಪರಿಚಯವಾದ ಹಾಗಿದೆ "ಯಾವುದೇ ವಿಷಯ-ವಸ್ತುಗಳನ್ನು ಏಕಮುಖಿಯಾಗಿ ಗ್ರಹಿಸದಿರುವಿಕೆಯನ್ನು ಸಂಕೀರ್ಣವೆಂದು ಭಾವಿಸಿದಂತಿದೆ. "ಸರಳವಲ್ಲ, ಜಟಿಲ ಮತ್ತು ಕಷ್ಟಕರವಾದದ್ದು ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಬದುಕಿನ ಸಂಕೀರ್ಣತೆಗೆ ಕಾರಣವಾದ ಸಂಗತಿಗಳ ಮೇಲೆ ಕ್ಷ ಕಿರಣ ಬೀರುವ ಪ್ರಯತ್ನವನ್ನು ಆಯಾ ಕ್ಷೇತ್ರದಲ್ಲಿ ಮಾಡಲಾಗಿದೆ. ಯಾವುದೇ ಸಾಹಿತ್ಯ ಪ್ರಕಾರದಲ್ಲಿ ಸೇರ್ಪಡಿಸಲು ಸಾಧ್ಯವಾಗದ, ವಿಶಿಷ್ಟ ಬರಹಗಳನ್ನು ದಾಖಲೆಯ ಮತ್ತು ಓದುಗರನ್ನು ಗಮನದಲ್ಲಿಟ್ಟುಕೊಂಡು ಸಂಗ್ರಹಿಸಲು ಮುಂದಾದಾಗ ಅದಕ್ಕೊಂದು ಗುರುತು ಬೇಕಾಗಿತ್ತು. ಅದನ್ನು ಸಂಕೀರ್ಣವೆಂದು ಕರೆದು ಭಿನ್ನ ಭಿನ್ನ ಜ್ಞಾನಶಾಖೆಗಳ ಗ್ರಹಿಕೆಗಳನ್ನು ಒಂದೆಡೆ ತರುವ ಪ್ರಯತ್ನವನ್ನು ಪ್ರಾತಿನಿಧಿಕವಾಗಿ ಮಾಡಲಾಗಿದೆ.

ಹೆಣ್ಣು-ಗಂಡುಗಳನ್ನು ಒಳಗೊಂಡ ಹಾಗೇ ಸಮಾಜ ಏಕಕಾಲದಲ್ಲಿ ಹಲವು ಕಾಲಗಳ ಮೌಲ್ಯಗಳ ಕುರಿತು ಮಾತನಾಡುತ್ತಿರುತ್ತದೆ. ಸರಳವಲ್ಲದ ಬದುಕಿನ ಅನುಭವಗಳ ಅನಾವರಣ ಸಂಕೀರ್ಣ ನೆಲೆಯಲ್ಲಿಯೇ ಆಗುವುದು ಸಹಜ. ಒಂದು ವಸ್ತು ವಿಷಯ, ಕ್ಷೇತ್ರ, ಸಂಗತಿ, ಭಾವ, ಬಣ್ಣಗಳ ಕುರಿತು ಮಾತನಾಡುವ ಬರೆಯುವ ಕ್ರಿಯೆ ಮುಂದುವರಿದಂತೆ, ಬೆಳೆದಂತೆ ಹಲವು ನೆಲೆಯಲ್ಲಿ ಅದರ ಸಾಧ್ಯಾಸಾಧ್ಯತೆಗಳನ್ನು ತೆರೆದು ತೋರಿಸುತ್ತದೆ. ಅಂತಹ ಸಾಧ್ಯತೆಗಳು ಕೇವಲ ಪುರುಷರಿಗೆ ಸೀಮಿತಗೊಂಡಿಲ್ಲ. ಮಹಿಳೆಯರು ತಮಗೆ ದೊರೆತ ಅವಕಾಶಗಳ ಅನುಭವಗಳನ್ನು ದಾಖಲಿಸುವಾಗ, ಹಂಚಿಕೊಳ್ಳುವಾಗ ಅನೇಕ ಬಗೆ, ರೀತಿ, ಶೈಲಿ, ಭಾಷೆಯ ಬಳಕೆ, ಪ್ರಯೋಗಗಳು ಕನ್ನಡದ ಸಂದರ್ಭದಲ್ಲಾಗಿವೆ. ಆಧುನಿಕ ಓದಿನ ಕಾರಣದಿಂದ ಮಹಿಳೆಯರು ಹಲವು ಕ್ಷೇತ್ರಗಳಲ್ಲಿ ತಮ್ಮಿರುವಿಕೆಯನ್ನು ಸಾಬೀತುಪಡಿಸುವಾಗಿನ ಅನುಭವಗಳನ್ನು ಹಂಚಿಕೊಂಡ ಬರಹಗಳನ್ನು ಉಪೇಕ್ಷಿಸುವಂತಿಲ್ಲ. ಸಾಹಿತ್ಯ, ಸಂಗೀತ, ರಾಜಕೀಯ, ಧಾರ್ಮಿಕ, ಆರ್ಥಿಕ, ವಿಜ್ಞಾನ, ಮಾನವೀಕ, ರಂಗಭೂಮಿ, ಅಭಿನಯ, ಮಾಧ್ಯ, ಬಣ್ಣ, ಉದ್ಯಮ ಮುಂತಾದ ರಂಗಗಳಲ್ಲಿ ಪ್ರವೇಶಿಸಿರುವಳು. ಈ ಕ್ಷೇತ್ರಗಳ ಅನುಭವಗಳನ್ನು, ಅವುಗಳ ಪರಿಚಯಿಸುವ ವಿಕಾಸದ ಮಾದರಿಗಳನ್ನು ವಿಶಿಷ್ಟವಾಗಿ ಕಟ್ಟಿಕೊಟ್ಟಿರುವರು. ಓದುಗರ ಅಭಿರುಚಿಯನ್ನು ಮತ್ತು ಚಿಂತನಾಶೀಲತೆಯನ್ನು ಉದ್ದೀಪಿಸುವ ಮಹಿಳೆಯರ ಬರಹಗಳ ಒಟ್ಟುಗೂಡುವಿಕೆಯ ಕಾರಣ ಸಂಕೀರ್ಣ ಸಂಪುಟವೊಂದು ಸಿದ್ಧಗೊಂಡಿದೆ.

**ಜಾನಪದ ಸಂಪುಟ ಎಂಟು : ಹಾಡು ಹಾಡೆಂದರೆ ಏನೆಂದು ಹಾಡಲಿ... ಹಾಡಲ್ಲ ಅದು ನಮಪಾಡ :** ಜಾನಪದ ಸಾಹಿತ್ಯ ಸಂದರ್ಭದಲ್ಲಿ ಒಂದು ಜನಪ್ರಿಯವಾದ ವ್ಯಾಖ್ಯಾನವಿದೆ. ಅದೇನೆಂದರೆ "ಜನವಾಣಿ ಬೇರು; ಕವಿವಾಣಿ ಹೂ" ಎಂದು ಈ ಜನವಾಣಿಯ ಬೇರಿಗೆ ನೀರೆರೆದವರು ನೀರೆಯರು ಎಂಬುದನ್ನು ಕೂಡಾ ಚರಿತ್ರೆ ಮರೆಮಾಚಿದೆ. ಬ್ರಿಟೀಷರಾಗಮನದಿಂದ ಬೆಳಕು ಬೆಂಕಿ ಕೂಡಿಯೆ ಈ ನೆಲದಲ್ಲಿ ಹಲವು ಪಲ್ಲಟಗಳನ್ನುಂಟು ಮಾಡಿದ್ದವು. ಮೌಖಿಕ ಪರಂಪರೆಯಲ್ಲಿದ್ದ ಬದುಕಿನ ಶ್ರೀಮಂತ ದಾಖಲೆಗಳನ್ನು ಸಂಗ್ರಹಿಸುವ, ಸಂಪಾದಿಸುವ ಕೆಲಸಗಳನ್ನೆಲ್ಲ ಮೊದಲ ತಲೆಮಾರಿನ ಶಿಷ್ಠ ಸಾಹಿತಿಗಳು ಮಾಡಿದರು. ಕೈಗಾರೀಕರಣದಿಂದ ಉದ್ಭವಿಸಿದ ಬಿಕ್ಕಟ್ಟಿಗೆ ತಾಯ್ತನದಂತಿದ್ದ ಜಾನಪದ ಸಾಹಿತ್ಯ ಸಂಸ್ಕೃತಿಯಲ್ಲಿ ಪರಿಹಾರಗಳಿವೆ ಎಂದು ಶಿಷ್ಠಲೋಕ ಪರಿಭಾವಿಸಿತ್ತು. ಆದರೆ ತಾಯಿಯನ್ನೇ ಹೆಡೆಮುರಿಗಿ ಕಟ್ಟಿ ಕತ್ತಲಲ್ಲಿ ಕೂಡಿಹಾಕಿದ್ದನ್ನು ಮರೆತಿತ್ತು. ಹೆಣ್ಣಿನ ಚಾರಿತ್ರಿಕ ಸೋಲಿಗೆ ಕಾರಣಗಳನ್ನು ಅಕ್ಷರವಂಚಿತ ಮಹಿಳೆಯರು ಅನುಭಾವಾಧಾರದ ಮೇಲೆ ಮೌಖಿಕವಾಗಿ ದಾಖಲಿಸುವುದನ್ನು ಮರೆಯಲಿಲ್ಲ. ಹೆಣ್ಣಿನ ಯಾತನಾಮಯ ಬದುಕಿಗೆ ಕಾರಣಗಳನ್ನು ಸಾಮಾನ್ಯ ಹೆಣ್ಣು ಮಹಿಳೆಯೊಬ್ಬಳು ಗ್ರಹಿಸಿದ ರೀತಿ ವಿಸ್ಮಯಗೊಳಿಸುವಂತಿದೆ.

"ಹೆಣ್ಣಿನ ಗೋಳಹತ್ತಿ ಬನ್ನಿಯ ಮರಬೆಂದೋ

ಅಲ್ಲಿ ಸನ್ಯಾಸಿ ಮಠ ಬೆಂದು ಹಾರವರ

ಪಂಚಾಂಗ್ಲತ್ತಿ ಉರಿದಾವೋ”  -

ಹೆಣ್ಣಿಗೆ ಅಕ್ಷರದ ಬಾಧ್ಯಸ್ಥಿಕೆಯಿಲ್ಲದಿದ್ದರು ಅರಿವಿನ ಬಾಯಾಗಿ ಮಾತನಾಡಿರುವರು. ಭೂಮಿ ಮೇಲಿನ ಅಸಂಖ್ಯಾತ ಹೆಣ್ಣುಜೀವಗಳ ಗೋಳಿಗೆ ಕಾರಣವನ್ನು ಗುರುತಿಸುವಲ್ಲಿ



ಅನುಭವವೊಂದೆ ಆಧಾರವೆಂಬುದನ್ನು ಗಂಭೀರವಾಗಿ ಪರಿಗಣಿಸುವಂತಹದ್ದು. ತಮ್ಮ ಇರುವಿಕೆಯ ಅರಿವು ಅನುಭವಕ್ಕೆ ಬಂದ ಮೇಲೆ ಪ್ರತಿಭಟಿಸುವ ಪ್ರಶ್ನಿಸುವ, ಅಸಹಾಯಕತೆ, ತೋರ್ಪಡಿಸುವ ಹಲವು ಮಾರ್ಗಗಳಲ್ಲಿ (ಪ್ರಕಾರಗಳಲ್ಲಿ) ದಾಖಲಿಸಿರುವರು. ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ದಿನಗಳಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಜಾನಪದಕ್ಕೆ ಬೇಡಿಕೆ ಬಂದಾಗ ವ್ಯಾಪಾರಕ್ಕೆ ಮುಂದಾದವರು ಗಂಡಸರೇ ಆಗಿದ್ದರು. ಇದರ ಮಧ್ಯದಲ್ಲಿಯು ಅಕ್ಷರಲೋಕಕ್ಕೆ ತೆರೆದುಕೊಂಡ ಮಹಿಳೆಯರು ಪೂರ್ವಿಕರ ಮೌಖಿಕ ಪರಂಪರೆಯಲ್ಲಿ ತಾವಿರುವುದನ್ನು ಅರಿತರು. ಅಕ್ಷರಲೋಕಕ್ಕೆ ತೆರೆದುಕೊಂಡ ಹೆಣ್ಣುಮಕ್ಕಳು ಜಾನಪದ ಬದುಕನ್ನು, ಸಂಸ್ಕೃತಿಯನ್ನು ಅರ್ಥೈಸಿಕೊಂಡಿರುವ ಬರಹವನ್ನು ಪ್ರಾತಿನಿಧಿಕವಾಗಿ ಸಂಗ್ರಹಿಸುವ ಹಂಬಲದಿಂದ ಮಹಿಳಾ ಜಾನಪದ ಸಂಪುಟ ಸಿದ್ಧಗೊಂಡಿದೆ. ಹೀಗೆ ಒಟ್ಟು ಎಂಟು ಸಂಪುಟಗಳು ಪರಿಷತ್ತಿನ ಹಿರಿಮೆಗೆ ಗರಿಯಂದೇ ಭಾವಿಸುವೆ.

ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು ಹೊರತರುವುದರ ಮೂಲಕ ಚಾರಿತ್ರಿಕ ಮೈಲುಗಲ್ಲೊಂದನ್ನು ಊರಿತ್ತು. ಈ ಹೊತ್ತಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ ಅವರಿಗೆ ಮಹಿಳಾ ಸಾಹಿತ್ಯ ಸಂಪುಟಗಳನ್ನು ಹೊರತರುವ ಕುರಿತು ಪತ್ರವೊಂದನ್ನು ಬರೆದಾಗ ಅದಕ್ಕೆ ತಕ್ಷಣ ಸ್ಪಂದಿಸಿ ಕಾರ್ಯೋನ್ಮುಖರಾದರು. ಈ ಮಾಲಿಕೆಗಳ ಸಂಪಾದಕತ್ವದ ಜವಾಬ್ದಾರಿಯನ್ನು ನನಗೆ ವಹಿಸಿದರು ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಗಂಭೀರವಾದ ಕಾರ್ಯ ಮಾಡಿರುವ ಲೇಖಕಿಯರನ್ನು ಸಂಪರ್ಕಿಸಿ ಇಂತಹದೊಂದು ಮಹತ್ತರವಾದ ಕೆಲಸ ಮಾಡಿಕೊಡಲು ಸಭೆ ಕರೆದು ಎಂಟು ಸಂಪುಟಗಳ ಸಂಪಾದನಾ ಜವಾಬ್ದಾರಿಯನ್ನು ವಹಿಸಿದರು. ಕಾಲಬದ್ಧ ಯೋಜನೆಯೆಂದು ಪದೇ ಪದೇ ನೆನಪಿಸಿ ಕಡಿಮೆ ಅವಧಿಯಲ್ಲಿ ಗಂಭೀರವಾದ ಕೆಲಸವನ್ನು ನಮ್ಮಿಂದ ಮಾಡಿಸಿದ ತಾಯಿ ಹೃದಯದ ಡಾ.ಮನು ಬಳಿಗಾರ ಅವರಿಗೆ ಅನಂತ ಕೃತಜ್ಞತೆಗಳು.

ಪರಿಷತ್ತಿನ ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತಿರುವ ಹಿರಿಯರಾದ ಡಾ.ಪದ್ಮರಾಜ ದಂಡಾವತಿಯವರು ನಮ್ಮ ಆಮೆಗತಿಯ ನಡಿಗೆಯನ್ನು ತೀವ್ರಗೊಳಿಸುವಂತೆ ಉತ್ತೇಜಿಸಿ ನಮ್ಮಿಂದ ಇಂತಹದೊಂದು ಮಹತ್ವದ ಕೆಲಸ ಮಾಡಿಸಿರುವರು. ಅವರಿಗೆ ಕೃತಜ್ಞತೆಗಳನ್ನು ತಿಳಿಸುವುದು ನಮ್ಮ ಕರ್ತವ್ಯ. ಈ ಎಂಟು ಸಂಪುಟಗಳ

ಜವಾಬ್ದಾರಿಯನ್ನು ಹೊತ್ತ ನನಗೆ ಹೆಗಲೆಣೆಯಾದ ಸಹೋದರಿ ಪಿ.ಚಂದ್ರಿಕಾ, ಡಾ.ಆಶಾದೇವಿ, ಡಾ.ಪದ್ಮನಿ ನಾಗರಾಜು, ಪ್ರತಿಭಾ ನಂದಕುಮಾರ, ಡಾ.ಲಕ್ಷ್ಮಿದೇವಿ, ಡಾ.ತಮಿಳ್ ಸೆಲ್ವಿ ಮತ್ತು ಬಾ.ಹಾ.ರಮಾಕುಮಾರಿ, ಡಾ.ಗುರುದೇವಿ ಹುಲ್ಲೆಪ್ಪನವರ ಇವರಿಗೆಲ್ಲ ಕೃತಜ್ಞತೆಗಳನ್ನು ಹೇಳುವುದು ಔಪಚಾರಿಕವಲ್ಲ. ನಾಡಿನುದ್ದಕ್ಕೂ ಸಾಹಿತ್ಯ ಕೃಷಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವ ಲೇಖಕಿಯರನ್ನು ಒಳಗೊಳ್ಳಬೇಕೆಂಬ ಹಂಬಲ ನಮ್ಮದಾಗಿದ್ದರೂ ಕಾಲಮಿತಿ ಮತ್ತು ಸಂಪರ್ಕಿಸುವ ಸಾಹಸದಲ್ಲಿ ಯಶಸ್ಸು ಕಾಣದೆ ಕೊನೆಗೆ ಪ್ರಾತಿನಿಧಿಕತನವನ್ನು ಮುಂದಿಟ್ಟುಕೊಂಡು ಈ ಮಹತ್ತರ ಯೋಜನೆಯನ್ನು ಪೂರೈಸಿದ ಸಂತೋಷ ನಮಗಿದೆ. ಇದು ಪ್ರಾರಂಭವಷ್ಟೇ ಮುಂದಿನ ದಿನಗಳಲ್ಲಿ ಇದರ ಮುಂದುವರಿಕೆಯಾದ ಗಮನಾರ್ಹವಾದದ್ದನ್ನು ಸಾಧಿಸುತ್ತೇವೆ ಎಂಬ ವಿಶ್ವಾಸ ಮೂಡಿಸಿದ



ಪರಿಷತ್ತಿಗೆ ಕೃತಜ್ಞತೆಗಳು. ಕಾರ್ಯದರ್ಶಿಯಾದ ರಾಜಶೇಖರ ಹತಗುಂದಿ, ಚೆನ್ನೇಗೌಡ ಅವರಿಗೂ ಮತ್ತು ಲೇಖನಗಳ ಸಂಗ್ರಹಿಸುವಲ್ಲಿ ಸಹಾಯ ಮಾಡಿದ ಡಾ.ವೆಂಕಟಗಿರಿ ದಳವಾಯಿ ಅವರಿಗೂ ಮತ್ತು ಸಕಾಲಕ್ಕೆ ಅಂದವಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಪ್ರೀತಿಯ ಹುಡುಗ ಕೊಟ್ರೇಶ್ ಕೊಟ್ಟೂರು, ನಾಗರತ್ನಾಳಿಗೂ ಹಾಗೂ ಪ್ರಕಟಣಾ ವಿಭಾಗದ ಎಲ್ಲರಿಗೂ ನೆನಕೆಗಳು.

ಕನ್ನಡ ಸಾಹಿತ್ಯ ಪರಿಷತ್ತು ಇಂತಹದೊಂದು ಚಾರಿತ್ರಿಕ ಕಾರ್ಯ ಮಾಡುತ್ತಿರುವ ಹೊತ್ತಿನಲ್ಲಿ ಪರಿಷತ್ತಿನ ಅಧ್ಯಕ್ಷರು ಅತ್ಯಂತ ಆಸಕ್ತಿ ಮತ್ತು ಎಚ್ಚರಿಕೆಯಿಂದ ಸಲಹೆ ಸೂಚನೆಗಳನ್ನು ನೀಡುವಾಗಲೆಲ್ಲ ಲೇಖಕಿಯರ ಅನುಮತಿಯನ್ನು ಕಡ್ಡಾಯವಾಗಿ ಪಡೆಯಲೇಬೇಕು ಎನ್ನುತ್ತಿದ್ದರು. ಜಗತ್ತನ್ನು ನೋಡಬೇಕು, ಜಗತ್ತು ನಮ್ಮನ್ನು ಗಮನಿಸಬೇಕು ಎನ್ನುವ ಉದಾರವಾದ ಮನೋಭಾವ ಲೇಖಕಿಯರಲ್ಲಿದೆ. ಕಡಿಮೆ ಅವಧಿಯಲ್ಲಿ ಬೃಹತ್ ಕೆಲಸಕ್ಕೆ ಕೈ ಹಾಕಿರುವುದರಿಂದ ಬಹುಪಾಲು ಲೇಖಕಿಯರನ್ನು ಸಂಚಾರಿ ವಾಣಿಯ ಮೂಲಕ ಸಂಪರ್ಕಿಸಿ ಅನುಮತಿ ಪಡೆದಿದ್ದೇವೆ. ಎಷ್ಟೋ ಜನ ಹಿರಿಯ ಜೀವಗಳು ನಮ್ಮೊಂದಿಗಿಲ್ಲ, ಅವರ ಬರಹವನ್ನು ಬಿಡುವಂತಿಲ್ಲ, ಅವರ ಸಂಬಂಧಿಕರನ್ನು ಸಂಪರ್ಕಿಸುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಲಾಗಿದೆ. ಎಷ್ಟೋ ಜನ ಲೇಖಕಿಯರ ಹಳೆಯ ವಿಳಾಸಗಳು, ಫೋನ್ ನಂಬರುಗಳು ಬದಲಾಗಿವೆ. ಹೀಗಾಗಿ ಆ ತೊಂದರೆಯನ್ನು ಅನುಭವಿಸುವುದು ಅನಿವಾರ್ಯವಾಗಿತ್ತು. ಎಲ್ಲ ಮಿತಿಗಳ ಮಧ್ಯದಲ್ಲಿ ಒಂದು ಚಾರಿತ್ರಿಕ ಕಾರ್ಯಮಾಡುತ್ತಿರುವುದರಿಂದ ನಮ್ಮೆಲ್ಲ ಲೇಖಕಿಯರು ಗೌರವದಿಂದ ಈ ಕೆಲಸವನ್ನು ಮನಸಾರೆ ಒಪ್ಪಿಕೊಳ್ಳುವರೆಂಬ ನಂಬಿಕೆ ನಮಗಿದೆ.

**-ಡಾ. ಮಲ್ಲಿಕಾ ಘಂಟಿ**

# ಪ್ರಸ್ತಾವನೆ

ಕಥೆ, ಕಾದಂಬರಿ, ಕವನಗಳಂತೆ ಲಲಿತ ಪ್ರಬಂಧವೂ ಸಾಹಿತ್ಯದ ಒಂದು ಪ್ರಮುಖ ಪ್ರಕಾರವಾಗಿದೆ. ಹಾಸ್ಯ, ವಿಡಂಬನೆ, ವಿನೋದ, ವಿಶ್ಲೇಷಣೆ, ವೈಚಾರಿಕತೆ, ಕತೆ ಹೀಗೆ ಎಲ್ಲ ಭಾವನಾ ಲಹರಿಯೂ ಮಿಳಿತವಾಗಿರುವ ಸಾಹಿತ್ಯ ಪ್ರಕಾರವಿದು. ಕಾಂತಾಸಂಮಿತೆಯಂತೆ ಹಿತವಾದ ಬೋಧನೆಯನ್ನೂ ಇವು ಮಾಡುತ್ತಾ, ಓದುಗರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬಿಡುತ್ತವೆ.

ಇಂಗ್ಲಿಷಿನ "Essay' ಎಂಬುದರ ಸಂವಾದಿ ಕನ್ನಡ ಪದ 'ಪ್ರಬಂಧ'. ಇದು ಮೂಲತಃ ಫ್ರೆಂಚ್ ಭಾಷೆಯ ಪದ. ಫ್ರೆಂಚ್‌ನಲ್ಲಿ ಇದಕ್ಕೆ ಪ್ರಯತ್ನ' ಎಂದು ಅರ್ಥ. ಹದಿನಾರನೇ ಶತಮಾನದಲ್ಲಿದ್ದ, ಫ್ರಾನ್ಸಿನ ಮಾಂಟೇನ್ ಎಂಬಾತ ಈ ಸಾಹಿತ್ಯ ರೂಪದ ಸೃಷ್ಟಿಕರ್ತ. ಎಲ್ಲ ಬಗೆಯ ಪ್ರಬಂಧಗಳನ್ನೂ ಇಂಗ್ಲಿಷ್‌ನಲ್ಲಿ 'ಎಸ್ಸಿ' ಎಂದೇ ಗುರುತಿಸುವುದು ರೂಢಿಯಲ್ಲಿದ್ದರೂ, ಇದನ್ನು ಔಪಚಾರಿಕ (Formal) ಅನೌಪಚಾರಿಕ (Informal) ಎಂದು ಎರಡು ರೀತಿಯಲ್ಲಿ ಗುರುತಿಸಲಾಗುವುದು. ಲಲಿತ ಪ್ರಬಂಧಗಳು ಅನೌಪಚಾರಿಕ ಪಂಬಂಧಗಳ ಮಾದರಿಗೆ ಸೇರಿದವು.

ಇವು ಒಂದು ಸಂದೇಶವನ್ನೇನೂ ನೀಡುವುದಿಲ್ಲ ಅಥವಾ ಇವು ಸಮೂಹವನ್ನುದ್ದೇಶಿಸಿಯೂ ಮಾತನಾಡುವುದಿಲ್ಲ. ಸುಸಂಸ್ಕೃತ ಮನಸ್ಸೊಂದು ತನ್ನೆದುರಿನ ಆತ್ಮದೊಂದಿಗೆ ಆಪ್ತವಾಗಿ ನಡೆಸುವ ಸಂವಹನವನ್ನು ಲಲಿತ ಪ್ರಬಂಧಗಳಲ್ಲಿ ಕಾಣಬಹುದು.

ಪ್ರಬಂಧಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳೊಳಗೆ ಹಲವು ಪ್ರಭೇದಗಳು ಕಾಣಿಸುತ್ತವೆ. ಅವುಗಳಲ್ಲಿರುವ ಸೂಕ್ಷ್ಮ ವ್ಯತ್ಯಾಸಗಳ ಆಧಾರದಿಂದ, ಪ್ರಬಂಧಗಳನ್ನು ಲಲಿತ ಪ್ರಬಂಧಗಳು, ವಿಮರ್ಶಾತ್ಮಕ ಪ್ರಬಂಧಗಳು, ವೈಜ್ಞಾನಿಕ ಪ್ರಬಂಧಗಳು, ವೈಚಾರಿಕ ಪ್ರಬಂಧಗಳು, ಚಿಂತನಾತ್ಮಕ ಪ್ರಬಂಧಗಳು, ವರ್ಣನಾತ್ಮಕ ಪ್ರಬಂಧಗಳು, ಚಿತ್ರಾತ್ಮಕ ಪ್ರಬಂಧಗಳು, ವ್ಯಕ್ತಿ ಚಿತ್ರಣಗಳು, ಹರಟೆಗಳು, ಹಾಸ್ಯ ಪ್ರಬಂಧಗಳು, ಆತ್ಮಕಥನಾತ್ಮಕಗಳು, ನಿರೂಪಣಾ ಪ್ರಬಂಧಗಳು(ನರೇಟಿವ್ ಎಸ್ಸೇಸ್)... ಹೀಗೆ ಹಲವು ಪ್ರಕಾರಗಳಲ್ಲಿ ಗುರುತಿಸಬಹುದು. ಇವುಗಳಲ್ಲದೆ ಸಂಶೋಧನಾ ಲೇಖನ-ಕೃತಿಗಳನ್ನು ಸಂಪ್ರಬಂಧಗಳೆಂದೂ, ಸಂಶೋಧನಾ ಗ್ರಂಥಗಳನ್ನು ಮಹಾಪ್ರಬಂಧಗಳೆಂದೂ ಕರೆಯುವ ಮಟ್ಟಿಗೆ ಪ್ರಬಂಧದ ಅರ್ಥವ್ಯಾಪ್ತಿ ವಿಸ್ತರಿಸಿಕೊಳ್ಳುತ್ತದೆ.

“ಲಲಿತ ಪ್ರಬಂಧ', ಹೆಸರೇ ಸೂಚಿಸುವಂತೆ ಪ್ರಬಂಧದ 'ಬಿಗಿ'ಯನ್ನು ಇದು ಸ್ವಲ್ಪ ಸಡಿಲ, ಲಲಿತ ಮಾಡಿಕೊಂಡಿರುತ್ತದೆ. ಹಗುರವಾಗಿ, ಲಲಿತವಾಗಿ... ಸುಲಲಿತವಾಗಿ ಸಾಗುವುದೇ ಇದರ ಪ್ರಮುಖ ಗುಣ, ಉಲ್ಲಾಸಮಯತೆ ಇದರ ಇನ್ನೊಂದು ಅಂಶ, ಅನೌಪಚಾರಿಕತೆ ಇದರ ಪ್ರಮುಖ ಲಕ್ಷಣ. ಲೇಖಕನ ವೈಯಕ್ತಿಕ ಚಿಂತನೆ ದೃಷ್ಟಿಕೋನಕ್ಕೇ ಇಲ್ಲಿ ಪ್ರಾಧಾನ್ಯ ಫ್ರಾನ್ಸಿಸ್ ಬೇಕನ್ ಇದರ ಬಗ್ಗೆ ಬರೆಯುತ್ತಾ, 'dispersedmeditation



ಎಂಬ ಪದ ಬಳಸುತ್ತಾನೆ. 'ಚದುರಿದ ಧ್ಯಾನ' ಎಂದು ಇದನ್ನು ಕನ್ನಡೀಕರಿಸಬಹುದು. ಈ ಪದವೇ ಅರ್ಥಪೂರ್ಣವಾದುದು, ಕುತೂಹಲ ಹುಟ್ಟಿಸುವಂತಹುದು. ಏಕೆಂದರೆ, 'ಧ್ಯಾನ'ದ ಪ್ರಮುಖ ಲಕ್ಷಣವೇ ಏಕಾಗ್ರತೆ ಹಾಗೂ ಕೇಂದ್ರೀಕರಣ. ಇಲ್ಲಿ ಆ ಧ್ಯಾನ ಚದುರಿದೆ! ಅತ್ತ ಇತ್ತ ಹರಿದಾಡಿದೆ! ಆದರೂ ಇದು ಧ್ಯಾನವೇ. ಕವಿಯ ಮಾತಿನಲ್ಲಿ ಹೇಳುವುದಾದರೆ ಇದು “ಓಂಕಾರದ ಶಂಖನಾದಕಿಂತ ಕಿಂಚಿದೂನ', ಅಷ್ಟೇ! ಆದ್ದರಿಂದಲೇ ತೀ.ನಂ.ಶ್ರೀ.ಯವರು ಲಲಿತ ಪ್ರಬಂಧಗಳನ್ನು 'ಮಂದಕೃತಿಯ ಭಾವಗೀತೆಗಳು' ಎಂದು ಕರೆದಿರುವುದು.

ಲಲಿತ ಪ್ರಬಂಧಗಳು ಶಾಸ್ತ್ರೀಯವಾಗಿ ವಿಷಯವನ್ನು ನಿರೂಪಿಸುವುದಕ್ಕಿಂತಲೂ, ಕಲಾತ್ಮಕವಾಗಿ ವಿಷಯ ಪ್ರತಿಪಾದನೆ ಮಾಡುತ್ತವೆ. ಕಸರತ್ತಿಲ್ಲದ ಸರಳ ಬರವಣಿಗೆಯೇ ಇದರ ವೈಶಿಷ್ಟ್ಯ. ಇವುಗಳಲ್ಲಿ ಭಾವಗೀತೆಯ ಸೊಗಸೂ, ಸಣ್ಣಕಥೆಗಳ ಬೆಡಗೂ ಮಿಳಿತವಾಗಿ ರಂಜನೆಯನ್ನೊದಗಿಸುತ್ತದೆ. ತನಗೆ ಬೇಕಾದಂತೆ ಅಥವಾ ಬೇಕೆನಿಸಿದಷ್ಟು ವಿವರಗಳನ್ನು ಇದು ನೀಡುತ್ತಾ ಸಾಗುತ್ತದೆ. ಇನ್ನು ಇದಕ್ಕೆ ಇಂಥದ್ದೇ ವಿಷಯ ಆಗಬೇಕೆಂದೇನಿಲ್ಲ, ನೋಟಕ್ಕೆ ಕಂಡ ಮನಸ್ಸಿಗೆ ಹಿಡಿಸಿದ ಯಾವುದೋ ಒಂದು ವಸ್ತು, ವಿಷಯ, ಪದ... ಸಕಲವೂ ಇದಕ್ಕೆ ವಸ್ತುವಾಗಬಲ್ಲದು. ಎಂದರೆ, ಲಲಿತ ಪ್ರಬಂಧಕ್ಕೆ ಒಂದು 'ವಸ್ತು' ಎಂಬುದಿರಬೇಕು. ಆ 'ವಸ್ತು'ವಿನ ಸುತ್ತಲೂ ವಿವರಣೆಗಳಿರಬಹುದು, ಸಂಭಾಷಣೆ ಇರಬಹುದು, ನೆನಪಿನ ಘಟನೆಗಳೂ ಇರಬಹುದು... ಒಟ್ಟಿನಲ್ಲಿ ತಾತ್ವಿಕ ಸಂವಾದದ ಮುಖ್ಯ ಎಳೆಯೊಂದನ್ನು ಹಿಡಿದು, ಓದುಗರ ನಂಬಿಕೆಗಳನ್ನೂ, ನೆನಪುಗಳನ್ನೂ ಮೀಟುತ್ತಾ ಆಯ್ಕೆಯ ವಸ್ತುವಿನ ಬಗೆಗಿನ ವಿಷಯಗಳನ್ನು ಇದು ಲಲಿತವಾದ ಶೈಲಿಯಲ್ಲಿ ಮುಂದುವರೆಸಿಕೊಂಡು ಹೋಗುತ್ತದೆ. ಆದರೆ ಕೇವಲ ನೆನಪಿನ ಘಟನೆಗಳ ಪೋಣಿಕೆಯೋ, ವ್ಯಕ್ತಿ ಚಿತ್ರಣಗಳೋ... ಕೇವಲ ಸಂಭಾಷಣೆ-ಹರಟೆಗಳೋ... ಮಾತ್ರವೇ ಲಲಿತ ಪ್ರಬಂಧಗಳಾಗವು. ಎಂದರೆ ಲಲಿತ ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡ ವಸ್ತು ಯಾವುದೇ ಇರಲಿ, ಪ್ರಬಂಧ ಅದರ ಸುತ್ತ ಸುತ್ತಬೇಕು, ನಿರೂಪಣೆ ಆಪ್ತವೆನಿಸಬೇಕು, ಓದುಗರನ್ನು ಹಿಡಿದಿಡುವ ಆಕರ್ಷಣೆಯನ್ನು ಅದು ಉಳಿಸಿಕೊಳ್ಳಬೇಕು. ಭಾವಗೀತೆಯನ್ನು ಓದಿದಾಗ ಮನಸ್ಸು ಉಲ್ಲಾಸಗೊಳ್ಳುವಂತೆ ಪ್ರಬಂಧವೂ ಮನಸ್ಸಿಗೆ ಆಹ್ಲಾದವನ್ನು ಉಂಟು ಮಾಡುವಂತಿರಬೇಕು. ಮತ್ತೆ ಮತ್ತೆ ಓದಬೇಕೆನ್ನುವ ಮಧುರ ಅನುಭೂತಿಯನ್ನು ಅದು ನೀಡಬೇಕು... ಜೊತೆಜೊತೆಗೇ ನಮ್ಮನ್ನು ಚಿಂತನೆಗೂ ಹಚ್ಚಬೇಕು.

ಲಲಿತ ಪ್ರಬಂಧಗಳಿಗೂ, ಹಾಸ್ಯ ಪ್ರಬಂಧಗಳಿಗೂ, ಹರಟೆಗಳಿಗೂ... ನಡುವಿನ ವ್ಯತ್ಯಾಸದ ಗೆರೆ ತೀರ ತೆಳುವಾದದ್ದು. ಎಂದರೆ ಹರಟೆಗಳೂ, ಹಾಸ್ಯ ಪ್ರಬಂಧಗಳೂ "ಲಲಿತ ಪ್ರಬಂಧ'ಗಳಾಗವು. ಆದರೆ ತುಂಬ ಜನ ಇವುಗಳ ನಡುವಿನ ವ್ಯತ್ಯಾಸವನ್ನು ಸರಿಯಾಗಿ ಗುರುತಿಸದೆ ಹರಟೆಗಳನ್ನೂ, ಹಾಸ್ಯಗಳನ್ನೂ ಕೂಡ ಲಲಿತ ಪ್ರಬಂಧಗಳೆಂದೇ ಭಾವಿಸಿದ್ದಾರೆ. ಮಾತಿನ ಚಾತುರ್ಯವೇ 'ಹರಟೆ'ಯ ಜೀವಾಳ. ಇನ್ನೂ ಕೆಲವರು ಕೇವಲ ವ್ಯಕ್ತಿ ಚಿತ್ರಣಗಳನ್ನೂ, ನೆನಪಿನ ಘಟನೆಗಳನ್ನೂ, ಆತ್ಮಕಥನಾತ್ಮಕ ವಿವರಣೆಗಳನ್ನೂ ಕೂಡ ಲಲಿತ ಪ್ರಬಂಧಗಳೆಂದೇ ಭಾವಿಸುವುದೂ ಉಂಟು!

- XXXV -

ಒಟ್ಟಿನಲ್ಲಿ ನಿರ್ದಿಷ್ಟ ಚೌಕಟ್ಟಿನೊಳಗೆ ನಿಲುಕಲು ಆಗದ, ಹೊಂದಲು ನಿಲುಕದ, ಅದೇ ಸಮಯದಲ್ಲಿ ಎಲ್ಲವನ್ನೂ ತನ್ನೊಳಗು ಮಾಡಿಕೊಳ್ಳಲು ಹಪಹಪಿಸುವ ಈ ಸಾಹಿತ್ಯ ಪ್ರಕಾರ ತನ್ನ ಗಟ್ಟಿತನವನ್ನು ಉಳಿಸಿಕೊಳ್ಳುತ್ತಾ, ಹೊಸ ಆಯಾಮಗಳಿಗೆ ತೆರೆದುಕೊಳ್ಳುತ್ತಾ ಸಾಗುತ್ತದೆ.

ಲಲಿತ ಪ್ರಬಂಧಗಳ ಬಗ್ಗೆ ಬರೆಯುತ್ತಾ ವೀ.ಸೀ.ಯವರು, 'ಮನಸ್ಸಿನ ಒಲವು, ಓಟ, ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಮ' ಎನ್ನುತ್ತಾರೆ. 'ನೇಯುವ' ಈ ಕ್ರಮ ಪ್ರಬಂಧಕಾರರ ಕಲೆಗಾರಿಕೆಯನ್ನು ತೋರಿಸುತ್ತದೆ. ಲಲಿತ ಪ್ರಬಂದಗಳಲ್ಲಿ ವೈಚಾರಿಕತೆ ಇದೆ, ಕಾಲ್ಪನಿಕತೆಯೂ ಇದೆ. ಹಾಸ್ಯ-ವಿಡಂಬನೆಗಳೂ ಇವೆ. ಇಂಥ ವಿಭಿನ್ನ ಎಳೆಗಳ ಕಲಾತ್ಮಕ ನೇಯ್ದೆಯುಳ್ಳ ಬರಹವೇ ಲಲಿತ ಪ್ರಬಂಧ.

*

ಕನ್ನಡದಲ್ಲಿ ಲಲಿತ ಪ್ರಬಂಧಗಳು ಸೃಷ್ಟಿಯಾಗಿ ಸುಮಾರು ಒಂದು ಶತಮಾನಕ್ಕಿಂತ ಹೆಚ್ಚೇ ಆಗಿದೆ. ಕನ್ನಡದಲ್ಲಿ ಸ್ವತಂತ್ರ ಪ್ರಬಂಧ ಸಂಕಲನ ಪ್ರಕಟವಾಗುವ ಮೊದಲು 'ಅನುವಾದಿತ' ಪ್ರಬಂಧ ಸಂಕಲನ ಪ್ರಕಟವಾಯಿತು. ೧೮೯೮ರಲ್ಲಿ ಬಿ.ವೆಂಕಟಾಚಾರ್ಯರು ಬಂಕಿಮ ಚಂದ್ರರ ಬಂಗಾಳಿ ಪ್ರಬಂಧಗಳನ್ನು ಲೋಕ ರಹಸ್ಯ' ಎಂದು ಅನುವಾದಿಸುವ ಮೂಲಕ ಕನ್ನಡದ ಮೊದಲ ಪ್ರಬಂಧ ಸಂಕಲನವನ್ನು ಪ್ರಕಟಿಸಿದರು.

ಇದರ ನಂತರ ಸ್ವತಂತ್ರ ಕನ್ನಡ ಪ್ರಬಂಧಗಳೂ ಸೃಷ್ಟಿಯಾಗತೊಡಗಿದವು. ಹೊಸಗನ್ನಡದ ಮುಂಗೋಳಿಯೆನ್ನಿಸಿರುವ ಮುದ್ದಣ ಹಾಗೂ ಪಂಜೆ ಮಂಗೇಶರಾಯರೇ ಈ ಪ್ರಕಾರದ ಮೊದಲ ಬರಹಗಾರರೆಂದು ಸದ್ಯಕ್ಕೆ ಗುರುತಿಸಲಾಗುತ್ತಿದೆ. ಮುದ್ದಣನ 'ಜೋಗುಳ' ಎನ್ನುವ ಪ್ರಬಂಧವು ೧೯೦೦ರಲ್ಲಿ, ಮಂಗಳೂರಿನಿಂದ ಪ್ರಕಟವಾಗುತ್ತಿದ್ದ 'ಸುಹಾಸಿನಿ' ಎನ್ನುವ ಪತ್ರಿಕೆಯಲ್ಲಿ ಮುದ್ರಣವಾಗಿದೆಯೆಂದು ಎಂ.ಗೋವಿಂದ ಪೈಯವರು ಹೇಳುತ್ತಾರೆ.

'ಸತ್ಯದೀಪಿಕೆ' ಪತ್ರಿಕೆಯಲ್ಲಿ ಪ್ರಕಟವಾದ ಪಂಜೆ ಮಂಗೇಶರಾಯರು ಬರೆದ ಹಲ್ಲಿ, ಬಂದಣಿಗೆ ಎನ್ನುವ ಪ್ರಬಂಧಗಳೂ, ೧೯೦೭ರಲ್ಲಿ ಸುಹಾಸಿನಿ ಪತ್ರಿಕೆಯಲ್ಲಿ ಪ್ರಕಟವಾದ ಎಂ.ಎನ್. ಶ್ರೀನಿವಾಸರಾಯರ ಭ್ರಮರ ಹಾಗೂ ಮೋಡ ಎಂಬ ಎರಡು ಪ್ರಬಂಧಗಳೂ ಕನ್ನಡದ ಆರಂಭಕಾಲದ ಪ್ರಬಂಧಗಳಾಗಿವೆ. ಆದರೆ ಕನ್ನಡದ ಮೊದಲ ಪ್ರಬಂಧ ಸಂಕಲನವನ್ನು ರಚಿಸಿದವರು ಲೋಕರಹಸ್ಯದ ಅನುವಾದ ಮಾಡಿದ್ದ ಬಿ. ವೆಂಕಟಾಚಾರ್ಯರೇ ಆಗಿದ್ದಾರೆ. ೧೯೧೩ ರಲ್ಲಿ ಬಿ. ವೆಂಕಟಾಚಾರ್ಯರ 'ದಾಡಿಯ ಹೇಳಿಕೆ' ಎಂಬ ಕೃತಿಯೇ ಕನ್ನಡದ ಮೊದಲ ಸ್ವತಂತ್ರ ಪ್ರಬಂಧ ಸಂಕಲನವಾಗಿದೆ.

ಆಮೇಲೆ ಕನ್ನಡದಲ್ಲಿ ಲಲಿತ ಪ್ರಬಂಧಗಳ ಹೊಳೆಯೇ ಹರಿದು ಬರತೊಡಗಿತು. ಕಾಲದಿಂದ ಕಾಲಕ್ಕೆ ಇದು ಹೊಸ ರೂಪ ಪಡೆದುಕೊಳ್ಳುತ್ತಾ ಸಾಗಿದೆ. 21ನೆಯ ಶತಮಾನದಲ್ಲಿ ತನ್ನ ಬೇರು ಬಿಳಲುಗಳನ್ನು ಇದು ಇನ್ನಷ್ಟು ವಿಸ್ತರಿಸಿಕೊಂಡು ವಿಸ್ತಾರವಾಗಿ ಬೆಳೆಯತೊಡಗಿದೆ. ಆದರೂ ಲಲಿತ ಪ್ರಬಂಧಗಳಿಗೆ ಒಂದು ಖಚಿತ ಸ್ವರೂಪ, ಸ್ಥಾನ ತಂದುಕೊಟ್ಟವರು ಮಾತ್ರ ಎ.ಎನ್. ಮೂರ್ತಿರಾಯರು.



ಈ ಸಾಲಿನಲ್ಲಿ ಮಹಿಳೆಯರ ಕೊಡುಗೆಯೂ ಕಡಿಮೆಯೇನಲ್ಲ. ಟಿ. ಸುನಂದಮ್ಮ, ಭುವನೇಶ್ವರಿ ಹೆಗಡೆ, ಆರ್.ನಿರ್ಮಲಾ, ವಸುಮತಿ ಉಡುಪ, ಲಲಿತಾ ಹೊಸಪ್ಯಾಟಿ ಮೊದಲಾದ ಅಸಂಖ್ಯಾತ ಬರಹಗಾರ್ತಿಯವರು ಲಲಿತ ಪ್ರಬಂಧಗಳನ್ನು ರಚಿಸುವ ಮೂಲಕ ಕನ್ನಡ ಪ್ರಬಂಧ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

೧೯೫೦ರ ದಶಕದ ವೇಳೆಗೆ ಕನ್ನಡದಲ್ಲಿ ಪ್ರಬಂಧ ಸಾಹಿತ್ಯ ಒಂದು ಪ್ರಮುಖ ಪ್ರಕಾರವಾಗಿ ಬೆಳೆದು ನಿಂತಿತ್ತು. ಪ್ರಬಂಧ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ ಮಹತ್ವವಾದುದು. ಸುಧಾ, ತರಂಗ, ಮಯೂರ, ಕಸ್ತೂರಿ, ಪ್ರಜಾವಾಣಿ ಮೊದಲಾದ ಪತ್ರಿಕೆಗಳು ಲಲಿತ ಪ್ರಬಂಧಗಳಿಗಾಗಿಯೇ ವಿಶೇಷ ಸಂಚಿಕೆಗಳಲ್ಲಿ ಸ್ಪರ್ಧೆ ಏರ್ಪಡಿಸುವ ಮೂಲಕ, ಹೊಸ ಬರಹಗಾರ್ತಿಯರನ್ನು ಪತ್ತೆ ಹಚ್ಚುವ ಕೆಲಸ ನಿರಂತರವಾಗಿ ನಡೆಯುತ್ತಾ ಬಂದಿದೆ. ಇದು ಬರಹಗಾರ್ತಿಯರಿಗೆ ಸ್ಫೂರ್ತಿಯನ್ನೂ ತುಂಬುತ್ತಿರುವುದು ಶ್ಲಾಘನೀಯ ಅಂಶ.

*

ಹೊಸಗನ್ನಡ ಸಾಹಿತ್ಯದ ಆರಂಭ ಕಾಲಘಟ್ಟದಲ್ಲಿ, ಒಂದು ವಿಷಯವನ್ನು ಕುರಿತ ಗಂಭೀರ ಚಿಂತನೆಯ ಬರಹವನ್ನು ಪ್ರಬಂಧವೆಂದೂ, ಸಂಭಾಷಣೆ- ವಿನೋದಗಳಿಂದ ಕೂಡಿದ ಬರಹವನ್ನು 'ಹರಟೆ',

'ವಿನೋದ/ಹಾಸ್ಯ/ಲಾಸ್ಯ' ಸಾಹಿತ್ಯವೆಂದೂ ಮುಗುಳ್ನಗೆ ಮೂಡುವಂತೆ ಮಾಡಿ, ನಮ್ಮನ್ನು ವಿಚಾರಕ್ಕೆ ಹಚ್ಚುವಂತಹ ಲಲಿತ ಶೈಲಿಯ ಬರಹಗಳನ್ನು ಲಘುಪ್ರಬಂಧ ಅಥವಾ ಲಲಿತ ಪ್ರಬಂಧಗಳೆಂದೂ ಕರೆಯುವುದು ರೂಢಿಯಲ್ಲಿತ್ತು.

ಕನ್ನಡದಲ್ಲಿ ಈ ಪ್ರಕಾರದ ಬರಹಗಳಿಗೆ 'ಲಲಿತ ಪ್ರಬಂಧ' ಎನ್ನುವ ಹೆಸರನ್ನು ಮೊದಲು ನೀಡಿದವರು ಲಲಿತ ಪ್ರಬಂಧಗಳ ಪ್ರವರ್ತಕರೆಂದು ಖ್ಯಾತರಾಗಿರುವ ಎ.ಎನ್. ಮೂರ್ತಿರಾಯರು.

ಆರಂಭದಲ್ಲಿ ಇದನ್ನು ಲಘು ಪ್ರಬಂಧ, ಭಾವ ಪ್ರಬಂಧ, ವೈಯಕ್ತಿಕ ಪ್ರಬಂಧ ಹರಟೆ... ಇತ್ಯಾದಿ ಹೆಸರುಗಳಿಂದ ಕರೆಯಲಾಗಿದ್ದರೂ, ಆಮೇಲೆ ಇದಕ್ಕೆ 'ಲಲಿತ ಪ್ರಬಂಧ' ಎಂಬ ಹೆಸರೇ ಉಳಿದುಕೊಂಡಿದೆ. ಈ ಬಗೆಯ ಪ್ರಬಂಧ ಪ್ರಕಾರದ ಗುಣವನ್ನು ಇದು ಸಮರ್ಥವಾಗಿ ಪ್ರತಿಬಿಂಬಿಸುತ್ತದೆ. ಇದನ್ನು 'ಮೊದಲಿಗೆ ಲಲಿತ ಪ್ರಬಂಧ ಎಂದು ಕರೆದ ಎ.ಎನ್.ಮೂರ್ತಿರಾಯರು ತಮ್ಮ 'ಹರಟೆ ಮತ್ತು ಪ್ರಬಂಧ' ಎನ್ನುವ ಲೇಖನದಲ್ಲಿ, ಲಲಿತ ಪ್ರಬಂಧ'ವು ಹರಟೆಯಲ್ಲ ಎಂದು ಪ್ರತಿಪಾದಿಸುತ್ತಾರೆ.

*

ಈ ಸಂಕಲನದಲ್ಲಿ ಈ ಶತಮಾನದಲ್ಲಿ ಮಹಿಳೆಯರಿಂದ ರಚನೆಯಾಗಿರುವ ಕೆಲವು ಲಲಿತ ಪ್ರಬಂಧಗಳನ್ನು ಆಯ್ದು ಸಂಗ್ರಹಿಸಲಾಗಿದೆ. ಹಿರಿ ಕಿರಿಯ ಲೇಖಕಿಯರೆಲ್ಲರ ಪ್ರಬಂಧಗಳೂ ಇಲ್ಲಿವೆ. ಇಲ್ಲಿನ ಹಲವು ಹೊಸ ಲೇಖಕಿಯರು, ತಮ್ಮಲ್ಲಿ ಮುಂದೆ ಬೆಳೆಯುವ ಶಕ್ತಿಯಿದೆ ಎಂದು ತೋರಿಸಿಕೊಟ್ಟಿದ್ದಾರೆ.



ಬರೆದದ್ದು ಕಥೆ, ಕಾದಂಬರಿ, ಕವನ-ವಾಗಿರದಿದ್ದಲ್ಲಿ... ಅದು ಲಲಿತ ಪ್ರಬಂಧ ಎನ್ನುವ ಬಾಲಿಶ ನಿಲುವನ್ನೂ ಮೀರಿ ಸಶಕ್ತ ಪ್ರಬಂಧಗಳನ್ನು ಬರೆಯುತ್ತಿರುವವರ ಸಂಖ್ಯೆ ನಮ್ಮಲ್ಲಿ ಸಾಕಷ್ಟಿದೆ. ದಿನಪತ್ರಿಕೆಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಾ ಹೋಗುತ್ತಿರುವಾಗ, ಅದರಲ್ಲಿ ಏನಾದರೂ ಬರೆದು ತುಂಬಿಸಲೇ ಬೇಕಾದ ಅನಿವಾರ್ಯಕ್ಕೆ ಸಿಲುಕಿ, ಯಾರಿಂದಾದರೂ ಏನನ್ನಾದರೂ ಬರೆಸಿ, ಹೀಗೆ ಬರೆದದ್ದೆಲ್ಲವೂ ಪ್ರಬಂಧವೆನ್ನಿಸಿಕೊಳ್ಳುತ್ತಿರುವ ಸ್ಥಿತಿಯೂ ಕಂಡುಬರುತ್ತಿರುವಾಗ, ಉತ್ತಮ ಪ್ರಬಂಧಗಳನ್ನು ಆಯ್ಕೆ ಮಾಡುವುದು ಕೂಡ ಕಷ್ಟದ ಹಾಗೂ ಜವಾಬ್ದಾರಿಯ ಕೆಲಸವೇ ಆಗಿದೆ.

ಇಲ್ಲಿ ಬೇರೆ ಬೇರೆ ರೀತಿಯ ಲಲಿತ ಪ್ರಬಂಧಗಳಿವೆ. ಇವುಗಳಲ್ಲಿ ವೈವಿಧ್ಯತೆ ಇದೆ. ಪ್ರಬಂಧಕಾರರ ಸ್ವಾತಂತ್ರ್ಯ ಹೆಚ್ಚಿನ ಪ್ರಮಾಣದಲ್ಲಿದ್ದು, ತಮಗೆ ತೋಚಿದ ವಿಷಯಗಳ ಮೇಲೆ ನಿರರ್ಗಳವಾಗಿ ನಿರಾಯಾಸವಾಗಿ ತಮ್ಮ ಮನಸ್ಸನ್ನು ಹರಿಯಬಿಟ್ಟಿದ್ದಾರೆ. . ಇವುಗಳಲ್ಲಿ ಕನ್ನಡದ ಜಾಯಮಾನಕ್ಕೆ ಒಗ್ಗುವಂತಹ ವಿಷಯ, ಪ್ರಾದೇಶಿಕತೆ,

ಭಾಷಾ ವೈವಿಧ್ಯತೆ, ನುಡಿಗಟ್ಟುಗಳನ್ನೂ ಧಾರಾಳವಾಗಿ ಬಳಸಿಕೊಳ್ಳಲಾಗುತ್ತದೆ. ಇಲ್ಲಿನ ಪ್ರಬಂಧಗಳು ಓದಲು ರೋಚಕವಾಗಿದೆ ಎನ್ನಿಸಲು ಕಾರಣ ಈ ಪ್ರಬಂಧಗಳಿಗೆ ಆಯ್ಕೆ ಮಾಡಿಕೊಂಡಿರುವ ವಸ್ತುಗಳಲ್ಲಿ ಕಂಡು ಬರುವ ವಿಭಿನ್ನತೆ. ಅಲ್ಲದೆ ಹಾಸ್ಯ, ವಿಡಂಬನೆಗಳ ಒಗ್ಗರಣೆಯಿಂದ ಇವು ಇನ್ನಷ್ಟು ಓದುಗರ ಮನ ಸೆಳೆಯುತ್ತವೆ.

ಕನ್ನಡದಲ್ಲಿ ಲಲಿತ ಪ್ರಬಂಧಗಳನ್ನು ರಚಿಸಿದ ಮಹಿಳೆಯರಲ್ಲಿ ಟಿ.ಸುನಂದಮ್ಮನವರೇ ಮೊದಲಿಗರು. 'ಕೊರವಂಜಿ' ಪತ್ರಿಕೆಯ ಮೂಲಕ ಬೆಳೆದ ಇವರು ಹಾಸ್ಯ ಸಾಹಿತ್ಯ ಹಾಗೂ ಲಲಿತ ಪ್ರಬಂಧ ರಚನೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ನಿರಂತರವಾಗಿ ಬರೆಯುತ್ತಾ ಬಂದರು. ಕನ್ನಡ ಸಾಹಿತ್ಯ ಲೋಕ ಕಂಡ ಅಪೂರ್ವ ಬರಹಗಾರ್ತಿ ಇವರು. ಇಲ್ಲಿ ಸುನಂದಮ್ಮನವರ 'ಹಾಗಾಗಬಾರದೇಕೆ' ಎನ್ನುವ ಪ್ರಬಂಧವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಬದುಕಿನಲ್ಲೂ, ಪ್ರತಿ ಸಂದರ್ಭದಲ್ಲೂ 'ಹಾಗಾಗಬಾರದೇಕೆ?' ಎಂದು ಅನ್ನಿಸುವುದು ಸಹಜ. ಮಗು ಹುಟ್ಟುವುದರಿಂದಲೇ ಇಂತಹ ನಿರೀಕ್ಷೆ ಬದುಕಿನಲ್ಲಿ ಆರಂಭವಾಗುತ್ತದೆ ಎಂದು ಆರಂಭವಾಗುವ ಈ ಪ್ರಬಂಧವು ಬದುಕಿನ ಹಲವು ಸಂದರ್ಭಗಳಲ್ಲಿ ಎಂತೆಂತಹ ನಿರೀಕ್ಷೆಗಳು ಮನದಲ್ಲಿ ತೋರಬಹುದು ಎಂಬುದನ್ನು ತಿಳಿ ಹಾಸ್ಯ ಮಿಶ್ರಿತ ವಿಡಂಬನೆಯೊಂದಿಗೆ ನಿರೂಪಿಸುತ್ತದೆ. ಅದೇ ಸಂದರ್ಭದಲ್ಲಿ ಓದುಗರ ಮನಸ್ಸಿನಲ್ಲಿದ್ದ ಹಲವು ನಿರೀಕ್ಷೆಗಳನ್ನೂ ಕೂಡ ಇದು ಕೆದಕಿ, ಮನಸ್ಸಿನಲ್ಲಿ ಹಲವು ಪ್ರಶ್ನೆಗಳನ್ನೂ ಎಬ್ಬಿಸುತ್ತದೆ.

ಅಮೇರಿಕಕ್ಕೆ ಹೋಗಿ ಹಲವಾರು ವರ್ಷಗಳ ಕಾಲ ಅಲ್ಲಿಯೇ ನೆಲೆಸಿದ್ದು, ಅಮೇರಿಕನ್ನಡ ಪತ್ರಿಕೆಯ ಸ್ಥಾಪಕರಾಗಿದ್ದ ನಾಗಲಕ್ಷ್ಮಿ-ಹರಿಹರೇಶ್ವರ ದಂಪತಿಗಳೀರ್ವರೂ ಕನ್ನಡ ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ನಾಗಲಕ್ಷ್ಮಿಯವರು ಆರಂಭ ಕಾಲದ ಪ್ರಬಂಧಕಾರ್ತಿಯರಲ್ಲಿ ಮಹತ್ವದ ಹೆಸರು ಗಳಿಸಿದವರು. ಇವರ 'ಕಿಶೋರರು' ಪ್ರಬಂಧವು ಹದಿಹರೆಯದ ಯುವಕರ ಮಾನಸಿಕ ಸ್ಥಿತಿ, ಅವರ ಶಕ್ತಿ ಸಾಮರ್ಥ್ಯಗಳಿಗೆ ಕನ್ನಡ ಹಿಡಿಯುತ್ತದೆ. ಬಾಲ್ಯದಿಂದ ಹದಿಹರೆಯಕ್ಕೆ ಕಾಲಿಟ್ಟ ಕಿಶೋರಾವಸ್ಥೆಯ ಹಮ್ಮುಬಿಮ್ಮು, ಸೊಬಗು-ಸೊಗಸುಗಳೊಂದಿಗೆ ಕನವರಿಕೆಯನ್ನೂ



ಈ ಪ್ರಬಂಧ ಸೆರೆ ಹಿಡಿದಿದೆ. ಕಿಶೋರಾವಸ್ಥೆಯ ಶಕ್ತಿ, ದೃಢತೆಗಳನ್ನು ಮನವರಿಕೆ ಮಾಡಿಕೊಡಲು ಹಲವು ಇಂಗ್ಲಿಷ್ ಸಾಹಿತ್ಯ ಕೃತಿಗಳ ಉದಾಹರಣೆಗಳನ್ನೂ ಇವರು ತೆಗೆದುಕೊಂಡಿರುವುದು, ಇವರ ವ್ಯಾಪಕ ಅಧ್ಯಯನದ ದ್ಯೋತಕವೂ ಆಗಿದೆ.

ಭುವನೇಶ್ವರಿ ಹೆಗಡೆಯವರು ಇಪ್ಪತ್ತನೇ ಶತಮಾನದ ಹೆಸರಾಂತ ಪ್ರಬಂಧಕಾರ್ತಿ. ಸುಮಾರು ೩೫೦ಕ್ಕಿಂತ ಹೆಚ್ಚು ಪ್ರಬಂಧಗಳನ್ನು ರಚಿಸಿರುವ ಇವರ ಬರಹಗಳ ವೈವಿಧ್ಯ ಬೆರಗು ಹುಟ್ಟಿಸುವಂತಹುದು. ಇವರ ಜೀವನ ಪ್ರೀತಿ ಹಾಗೂ ಭಾಷಾ ತಿಳಿವಳಿಕೆ ಅಸಾಮಾನ್ಯವಾದವು. ಸಂದರ್ಭಕ್ಕೆ ತಕ್ಕ ಹಾಗೆ ಭಾಷೆಯನ್ನು ಹೊಂದಿಸಿಕೊಳ್ಳುವಲ್ಲಿಯೂ, ಪದಗಳನ್ನು ತಿರುಚುವುದರಲ್ಲಿಯೂ, ಹೊಸ ಪದಗಳನ್ನು ಸೃಷ್ಟಿಸುವುದರಲ್ಲಿಯೂ ಇವರು ನಿಷ್ಣಾತರು. ಇವರ 'ಪರವಾಯಿಲ್ಲ' ಎನ್ನುವ ಪ್ರಬಂಧವು ಕನ್ನಡ ಭಾಷೆಯ ವಿವಿಧತೆಯನ್ನು ತೆರೆದು ತೋರಿಸುತ್ತದೆ. ಒಂದೇ ಸಮಯದಲ್ಲಿ ಒಂದೇ ಸ್ಥಳದಲ್ಲಿ ಒಂದು ಪದ ಸಮವೂ ವಿರುದ್ಧವೂ ಆದ ಅರ್ಥದಲ್ಲಿ ಪ್ರಯೋಗಗೊಳ್ಳುವ ರೀತಿಯನ್ನು ಇವರು ಇಲ್ಲಿ ಅತ್ಯಂತ ಬೆರಗಿನಿಂದ ವರ್ಣಿಸುತ್ತಾರೆ.

ಜಯಶ್ರೀ ದೇಶಪಾಂಡೆಯವರು, 'ಕೋಪ ಬಾರದಿರುವ ಮನುಷ್ಯರೂ ಇದ್ದಾರೆಯೇ?' ಎಂದು ಪ್ರಶ್ನಿಸುತ್ತಲೇ 'ಕೋಪವೆಂಬುದನರ್ಥ ಸಾಧನಂ' ಎಂಬುದನ್ನೂ ನೆನಪಿಸಿಕೊಳ್ಳುತ್ತಾ, ಕೋಪ ಮಾಡಿಕೊಳ್ಳದ ಮನುಷ್ಯರಿರಲಿ, ದೇವಾನುದೇವತೆಗಳೂ ಋಷಿ ಮುನಿಗಳೂ ಇಲ್ಲವೆ ಇಲ್ಲ ಎಂದು ಹೇಳುವ ಮೂಲಕ ಪ್ರಬಂಧದ ಒಳಗೆ ಓದುಗರನ್ನು ಸೆಳೆದುಕೊಂಡು ಬಿಡುತ್ತಾರೆ. ವಿಜಯಪುರ ಮೂಲದ ಜಯಶ್ರೀಯವರು ಕಥೆಗಾರ್ತಿಯಾಗಿಯೂ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಜ್ಯೋತ್ಸ್ನಾ ಕಾಮತರ 'ಕೀಟ ಪ್ರಿಯರನ್ನು ವರಿಸಿದಾಗ' ಪ್ರಬಂಧವನ್ನು ಓದಿ ಆಸ್ವಾದಿಸುವ ಸೊಗಸೇ ಬೇರೆ! ಪ್ರಬಂಧಗಳು ಏಕಕಾಲಕ್ಕೆ ವೈಯಕ್ತಿಕ ಹಾಗೂ ಸಾಮಾಜಿಕ ಎರಡರ ಸಮಗ್ರ ಕಲ್ಪನೆಯನ್ನೂ ತಂದುಕೊಡಬಲ್ಲವೆಂಬುದನ್ನು ಇವರ ಬರಹಗಳು ತೋರಿಸಿಕೊಟ್ಟಿವೆ. ಇವರ ಪ್ರಬಂಧಗಳಲ್ಲಿ ಹಾಸ್ಯದೊಂದಿಗೆ ದೈನಂದಿನ ಬವಣೆಯ ಸನ್ನಿವೇಶಗಳೂ ಹೆಣೆದುಕೊಂಡಿರುತ್ತವೆ. ದೈನಂದಿನ ಚಟುವಟಿಕೆಗಳನ್ನೇ ವಕ್ರೀಕರಿಸಿ, ಅತಿಶಯೋಕ್ತಿಯ ಅಲಂಕಾರ ಹಾಕಿದಾಗ, ನಗೆ ಕಾಣಿಸಿಕೊಳ್ಳಲು ಸಾಧ್ಯ ಎನ್ನುವ ಜ್ಯೋತ್ಸಾ ಕಾಮತರು ತಮ್ಮ ಬದುಕಿನ ಸನ್ನಿವೇಶ ಘಟನೆಗಳನ್ನೇ ತಮ್ಮ ಬರಹಗಳ ವಸ್ತುಗಳನ್ನಾಗಿ ಆಯ್ಕೆ ಮಾಡಿಕೊಂಡು, ಕನ್ನಡದ ವಿಶಿಷ್ಟ ಬರಹಗಾರ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಇವರ ಬರಹಗಳ ಶೈಲಿ ಬಿಜಿಎಲ್ ಸ್ವಾಮಿಯವರ ಬರಹಗಳನ್ನು ನೆನಪಿಗೆ ತರುತ್ತವೆ.

'ಬರಹಗಾರ್ತಿಯ ಬವಣೆಗಳನ್ನು ನಾನಾಪರಿಯಾಗಿ ಚಿತ್ರಿಸುವ ಗುರುದೇವಿ ಹಲ್ಲೆಪ್ಪನವರ ಮಠ ಅವರು, ವಾಸ್ತವಿಕ ಬದುಕಿನಲ್ಲಿ ಸಾಮಾನ್ಯ ಜನರಿಂದ ಸಾಹಿತಿಗಳು ಎದುರಿಸುವ ಮುಜುಗರಗಳು, ಸಂಕಟಗಳು, ಅನಿವಾರ್ಯವಾಗಿ ಅದನ್ನು ಒಪ್ಪಿಕೊಳ್ಳಬೇಕಾಗಿ ಬರುವಂತಹ ಪರಿಸ್ಥಿತಿ, ಇವುಗಳಿಂದ ಕೌಟುಂಬಿಕ ಜೀವನದಲ್ಲಿ ಉಂಟಾಗುವ ಬೇಸರ, ವೈಮನಸ್ಸುಗಳನ್ನು ಹಿಡಿಯುತ್ತಾರೆ.

ಸುನಂದಾ ಬೆಳಗಾಂವಕರ್ ಅವರ 'ಕಜ್ಜಾಯ'(ಪ್ರಬಂಧ ಸಂಕಲನದ ಹೆಸರು)ದ ಸಿಹಿ ಎಂದಿಗೂ ನೆನಪಿನಿಂದ ಮಾಸದು. ಹಾಗೆಯೇ ಅವರ 'ಮೊಸರವಲಕ್ಕಿ'ಯ



ರುಚಿಯೂ! ಕಜ್ಜಾಯದ ರುಚಿಯೊಂದಿಗೆ ಧಾರವಾಡದ ಸೊಗಡೂ ಇವರ ಭಾಷೆಗೆ ಅಂಟಿಕೊಂಡು, ಇವರನ್ನು ಜನಪ್ರಿಯತೆಯ ಶಿಖರಕ್ಕೇರಿಸಿತು. ಮಾನವ ಪ್ರೀತಿ, ಕಳಕಳಿಯೇ ಇವರ ಬರಹಗಳ ಸ್ಥಾಯೀಭಾವ. ಮನುಷ್ಯ ಸಂಬಂಧಗಳ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು ಪೋಣಿಸುವ ವಿಶಿಷ್ಟ ಬರಹಗಾರ್ತಿ ಸುನಂದಾ ಅವರು.

'ವರದಾ ಶ್ರೀನಿವಾಸ್' ಅವರ 'ಸೀರೆಗಾಗಿ ಕಂಚೀಯಾತ್ರೆ' ಸ್ವಾರಸ್ಯಕರವಾಗಿ ಮುಂದುವರೆಯುತ್ತದೆ. ಸೀರೆಯ ಬಗೆಗಿನ ವ್ಯಾಮೋಹ, ರೇಷ್ಮೆಯ ಇತಿಹಾಸ, ರೇಷ್ಮೆ ಸೀರೆಗಳ ವ್ಯಾಪಾರ ಹೀಗೆ ಬೆಳೆಯುತ್ತಾ ಹೋಗುವ ಪ್ರಬಂಧವು ಸೀರೆಗಳ ವಿವರಣೆ, ನಿರೂಪಣೆಗಳಿಂದ ಮನಸೆಳೆಯುತ್ತದೆ. ಲೇಖಕಿಯಾಗಿ, ತನ್ನತನದ ಛಾಪನ್ನು ಒತ್ತಿರುವ ವರದಾ ಶ್ರೀನಿವಾಸ್ ಅವರ ಪ್ರಬಂಧಗಳು ಈಗಾಗಲೇ ಓದುಗ ವಲಯದಲ್ಲಿ ತಮ್ಮದೇ ಆದ ಸ್ಥಾನ ಪಡೆದುಕೊಂಡಿವೆ. ಆಧುನಿಕ ಯುಗದಲ್ಲಿ ವಿಧವಿಧ ಬಗೆಯ ಉಡುಪುಗಳು ಯುವತಿಯರನ್ನು ಆಕರ್ಷಿಸುತ್ತಿದ್ದರೂ ಸಾಂಪ್ರದಾಯಿಕ ಸೀರೆಯ ವ್ಯಾಮೋಹವೇನೂ ಕಡಿಮೆಯಾಗಿಲ್ಲ ಎನ್ನುವುದನ್ನು ಇಲ್ಲಿ ನೋಡಬಹುದು.

ನೆರೆಹೊರೆಯ ಜನ ಹೇಗೆ ನಯನಾಜೂಕು ಸಜ್ಜನಿಕೆಗಳನ್ನು ಮೀರಿ ನಡೆಯುತ್ತಾರೆ ಎಂಬುದರ ಚಿತ್ರಣ ಜಯಾ ಯಾಜಿ ಶಿರಾಲಿಯವರ 'ಹಚ್ಚಿಕೊಂಡಿರಾ' ನೀವು ಪ್ರಬಂಧದಲ್ಲಿದೆ. ಸಹಾಯ ಮಾಡಿಯೂ ಪೇಚಿಗೆ ಸಿಲುಕಿಕೊಳ್ಳುವ ಲೇಖಕಿ ಹಚ್ಚಿಕೊಳ್ಳುವುದರಲ್ಲಿರುವ ಸ್ವಾರಸ್ಯವನ್ನೂ, ಸಂಕಟಗಳನ್ನೂ ಒಟ್ಟಿಗೇ ದಾಖಲಿಸುತ್ತಾರೆ

ತಮ್ಮ ಸಾವಿಗೆ ಕೊಂಚ ದಿನ ಹಿಂದಷ್ಟೇ ಬರೆದ ಶಾರದಾ ಹೆಮ್ಮಿಗೆಯವರ 'ಕಣ್ಣು ಕಂಡಷ್ಟು' ಸಂಕಲನವು ಮಧ್ಯಮವರ್ಗದ ಗೃಹಿಣಿಯ ಚಿಂತನಧಾರೆಯನ್ನು ಸೆರೆ ಹಿಡಿಯುವ ಕೃತಿಯಾಗಿದೆ. ಇದರಲ್ಲಿರುವ ಬೇಡದ ಅತಿಥಿ' ಎನ್ನುವ ಪ್ರಬಂಧವು ಅತಿಥಿಗಳ ಕಾರಣದಿಂದ ಉಂಟಾಗುವ ಗೊಂದಲ, ಅಸಹಾಯಕತೆಗಳ ಚಿತ್ರಣವನ್ನು ನೀಡುತ್ತದೆ. ಅತಿಥಿಗಳು ಯಾವುದೇ ತೊಂದರೆಯನ್ನು ನೀಡದೆಯೂ ಹೇಗೆ ಮುಜುಗರಕ್ಕೆ ಒಳಪಡಿಸಬಹುದು ಎಂಬುದನ್ನು ಈ ಪ್ರಬಂಧದಲ್ಲಿ ಕಾಣಬಹುದು. ಇವರ ಬರಹಗಳಲ್ಲಿ ಗೃಹಿಣಿಯೊಬ್ಬಳಿಗೆ ಸಹಜವಾಗಿ ನಿಲುಕುವ ಅನುಭವ ಚಿತ್ರಣಗಳಿವೆ.

ಶೈಲಾ ಛಬ್ಬಿಯವರ 'ನಾಯಿ ದೇವರು' ನಗಿಸುತ್ತಲೇ ಕೌತುಕತೆ ಉಳಿಸಿಕೊಳ್ಳುತ್ತದೆ. ಮನುಷ್ಯನ, ನಾಯಿಯ ಮೇಲಿನ ಪ್ರೀತಿಯನ್ನು ಇಲ್ಲಿ ಸೊಗಸಾಗಿ ಹಿಡಿದಿಡಲಾಗಿದೆ. ವೈಯಕ್ತಿಕ ಜೀವನದ ಘಟನೆಗಳನ್ನೇ ಆಧರಿಸಿ ರಚನೆಯಾಗಿರುವ ಈ ಪ್ರಬಂಧವು ಇವರ ಜನಪ್ರಿಯ ಬರಹಗಳಲ್ಲಿ ಒಂದಾಗಿದೆ.

ಜಾನಕಿ ಸುಂದರೇಶ್ ಅವರು ಎದ್ದು ಹೋಗುವ ಸಂಕಟ'ದಲ್ಲಿ ಬದುಕಿನ ಅಶಾಶ್ವತೆಯ ಬಗ್ಗೆ ತಿಳಿಸುತ್ತಾರೆ.

ಪ್ರಬಂಧಕಾರರಿಗೆ ಯಾವ ವಿಷಯವೂ ವಸ್ತುವಾಗಬಹುದು ಎಂಬುದನ್ನು ಶ್ವೇತಾ ನರಗುಂದ, ಜಿ.ವಿ.ನಿರ್ಮಲ. ಭಾರತಿ, ಗಾಯಿತ್ರಿ ಮೂರ್ತಿ ಮೊದಲಾದ ಲೇಖಕಿಯರು ತೋರಿಸಿಕೊಟ್ಟಿದ್ದಾರೆ. ಕ್ರಮವಾಗಿ ಇವರು ಮೊರಕೆ, ಆ.ಕ್ಷೀ..., ನಿದ್ರೆ, ಜಿರಳೆ... ಇತ್ಯಾದಿ ಸಾಮಾನ್ಯ ವಿಷಯಗಳನ್ನು ಆಯ್ಕೆ ಮಾಡಿಕೊಂಡೂ ಸ್ವಾರಸ್ಯಮಯವಾಗಿ ಅದರ ಸುತ್ತ ಸುತ್ತಿ ಸುಳಿದಾಡುವ ರೀತಿ ಬೆರಗು ಹುಟ್ಟಿಸುತ್ತದೆ.



ಟೈಲರುಗಳು ನಮ್ಮ ಜೀವನದ ಅವಿಭಾಜ್ಯ ಅಂಗವೆನ್ನುವ ರುಚಿತಾ(ಟೀನಾ) ಶಶಿಕಾಂತ ಅವರ ಬರವಣಿಗೆಯಲ್ಲಿ ಟೈಲರುಗಳ ಸ್ವಭಾವದ ಕುರಿತ ವಿವಿಧ ಚಿತ್ರಣಗಳಿವೆ. ಸಾಹಿತ್ಯ ಲೋಕದಿಂದ ಟೈಲರುಗಳಿಗೆ ಸಂಬಂಧಿಸಿದದ ಕೆಲವು ಉಲ್ಲೇಖಗಳನ್ನೂ ಇಲ್ಲಿ ನೆನಪಿಸಿಕೊಳ್ಳುತ್ತಾರೆ. ಟೈಲರುಗಳಿಗೆ ಸಂಬಂಧಿಸಿದಂತೆ ಅವರು ಹೇಳುವ ಕಥೆಗಳು ಎಂಥವರ ಮುಖದ ಮೇಲೂ ನಗೆ ಮೂಡಿಸುತ್ತವೆ.

ಪ್ರಾದೇಶಿಕ ವೈಶಿಷ್ಟ್ಯತೆ, ಜೀವನ ಪದ್ಧತಿಗಳು ನಾಗವೇಣಿ ಎಚ್ ಅವರ 'ಹಬ್ಬಗಳ ಬಾಲ್ಯದಲ್ಲಿ ಕಾಣಬಹುದು. ಓದುವಾಗಲೇ ನಾಲಿಗೆಯಲ್ಲಿ ನೀರೂರಿಸುತ್ತಾ ಸಾಗುವ ಸ್ವಾದಿಷ್ಟ ಪ್ರಬಂಧವಿದು! ತುಳುನಾಡಿನ ಹಬ್ಬಗಳ ಸಂಭ್ರಮವನ್ನೂ, ವಿವಿಧ ಹಬ್ಬಗಳ ಆಚರಣೆಯ ವಿಧಾನವನ್ನೂ, ಆಯಾ ಹಬ್ಬಗಳಲ್ಲಿ ತಯಾರಿಸುತ್ತಿದ್ದ ವಿವಿಧ ಬಗೆಯ ತಿಂಡಿಗಳನ್ನೂ ಬಾಯಲ್ಲಿ ನೀರೂರಿಸುವವಂತೆ ವರ್ಣಿಸಿರುವುದು ಈ ಪ್ರಬಂಧದ ವೈಶಿಷ್ಟ್ಯವೆನ್ನಬೇಕು. ವಿವಿಧ ತಿನಿಸುಗಳ ಪರಿಚಯವನ್ನು ಮಾಡಿಕೊಡುತ್ತಲೇ ಅದರ ತಯಾರಿ, ತಿನಿಸಿನ ಮೇಲೆ ಮಕ್ಕಳ ಮೈಮೋಹ, ಇಂದಿನ

ಮಕ್ಕಳು ಫಾಸ್ಟ್ ಫುಡ್‌ಗಳಿಗೆ ಮರುಳಾಗಿರುವ ರೀತಿ ಎಲ್ಲವನ್ನೂ ಲಾಲಿತ್ಯಮಯವಾಗಿ, ಪ್ರಾದೇಶಿಕ ಭಾಷಾ ಶೈಲಿಯಲ್ಲಿ ಚಿತ್ರಿಸಿದ್ದಾರೆ.

'ಬದಲಾದ ದೃಷ್ಟಿಕೋನದಲ್ಲಿ ಶ್ಯಾಮಲಾ ರವಿಶಂಕರ್ ಅವರು, ಇಂದಿನವರ ಬದಲಾದ ದೃಷ್ಟಿಕೋನವನ್ನು ಚಿತ್ರಿಸುವ, ವ್ಯಾಖ್ಯಾನಿಸುವ ಪ್ರಯತ್ನ ಮಾಡಿದ್ದಾರೆ. ರೈಲಿನ ಪ್ರಯಾಣ, ಟಿ.ವಿ., ಜಾಲದೊಡನೆ ಬೆಸೆದುಕೊಂಡಿರುವ ಜಾಹೀರಾತಿನ ಬಂಧನ ಎರಡೂ ಇಲ್ಲಿ ಒಟ್ಟಿಗೆ ಬೆಸೆದುಕೊಂಡಿರುವ ತಂತ್ರ ವಿಶಿಷ್ಟವಾಗಿದೆ.

ಶಾಂತಾದೇವಿ ಹಿರೇಮಠ ಅವರ 'ಹೆಂಡತಿ ತವರು ಮನೆಗೆ ಹೋದಾಗ' ಪ್ರಬಂಧದಲ್ಲಿ ತಿಳಿಹಾಸ್ಯ, ನೇರ ನರೂಪಣಾ ಕ್ರಮ, ದಿನನತ್ಯದ ಘಟನೆಗಳ ಹಗುರ ನೋಟವನ್ನು ಕಾಣಬಹುದು.

ಕೆ.ಎಂ. ವಿಜಯಲಕ್ಷ್ಮಿ ಅವರು 'ದೇವರ ಹುಡುಕಾಟದಲ್ಲಿ ಪ್ರಬಂಧದಲ್ಲಿ ಮಕ್ಕಳ ಮುಗ್ಧ ಮನಸ್ಸು ದೇವರಿಗಾಗಿ ಹುಡುಕಾಡುವ ಪರಿಯನ್ನು ಹೇಳುತ್ತಾಲೇ ನಗೆ ಉಕ್ಕಿಸುತ್ತಾರೆ. ದೇವರನ್ನು ಕಾಣಲು ಹಾರೈಸುವ ಮಕ್ಕಳು, ಕಾಣಲಾಗದಾದಾಗ ಎದುರಿಸುವ ಆತಂಕ, ತೊಳಲಾಟಗಳನ್ನೂ ಇಲ್ಲಿ ದಾಖಲಿಸುತ್ತಾರೆ.

ಅನಿತಾ ನರೇಶ್ ಮಂಚಿಯವರ 'ಕಾಟು ಮಾವೆಂದರೆ ಸಾಕೆ...?' ಪ್ರಬಂಧದಲ್ಲಿ, ಮಾವಿನ ಹಣ್ಣಿನ ವ್ಯಾಮೋಹವನ್ನು ತಿಳಿಸುತ್ತಲೇ, ಮಾವಿನ ಬಗೆಗಿನ ತಮ್ಮ ನೆನಪುಗಳ ಸರಣಿಯನ್ನು ಬಿಚ್ಚಿಡುತ್ತಾ ಹೋಗುತ್ತಾರೆ. ಮುದ್ದು ತೀರ್ಥಹಳ್ಳಿಯವರ, 'ತಲೆಯಲ್ಲಿ ಕೂದಲಿಲ್ಲದಿದ್ದರೂ ಎಗ್ಗಿಗೆ ಮಲ್ಲಿಗೆ ಹೂ!' ಪ್ರಬಂಧವು ಕನ್ನಡದ ಗಾದೆಯನ್ನೇ ತಿರುಚಿ ಹೊಸ ರೂಪ ಕೊಟ್ಟಿದೆ.

ವಿಜಯಾಗುರುರಾಜ್ ಅವರ 'ಪಾದುಕಾ ಪುರಾಣ'ವು ಒಂದಲ್ಲಾ ಒಂದು ಸಲ ನಾವೆಲ್ಲರೂ ನಮ್ಮ ಪಾದುಕೆಗಳನ್ನು ಕಳೆದುಕೊಂಡು ಪರಿತಪಿಸಿದ್ದನ್ನು ನೆನಪಿಗೆ ತರುತ್ತದೆ. ಜಾಹ್ನವಿ ಆನಂದ ಹಳ್ಳೂರ ಅವರು 'ಊಟಕ್ಕೇನದ?' ಎಂದು ಪ್ರಶ್ನಿಸುತ್ತಲೇ ಊಟ ತಿಂಡಿಗಳ ಬಗೆಗಿನ ಸಾಹಿತ್ಯಕ ವಿಚಾರಗಳನ್ನೂ, ತಮ್ಮ ವಿಚಾರಧಾರೆಗಳನ್ನೂ ಮೆಲುಕು ಹಾಕುತ್ತಾ ಸಾಗುತ್ತಾರೆ.



ಲಲಿತ ಪ್ರಬಂಧಕಾರ್ತಿಯರಲ್ಲಿ ಪ್ರಮುಖವಾಗಿ ಗಮನ ಸೆಳೆಯುವ ಲೇಖಕಿಯರಲ್ಲಿ ಒಬ್ಬರಾದ ಲಲಿತಾ ಹೊಸಪ್ಯಾಟಿಯವರ 'ಕಳೆಯದ ಬಳೆಯ ನಿನಾದ...'ವು ಓದಿ ಮುಗಿಸಿದ ಮೇಲೂ, ಮಿಡಿದು ಬಿಟ್ಟ ತಂಬೂರಿಗಳಂತೆ

ಕಿವಿಯಲ್ಲಿ ಗುಂಯ್‌ಗುಡುತ್ತಲೇ ಇರುತ್ತದೆ. ಬಳೆಯ ವಿವಿಧ ಮಗ್ಗುಲುಗಳನ್ನು ಇವರು ಪರಿಚಯಿಸುವ ರೀತಿ ಅಪರೂಪದ್ದು.

ವಿಜಯಾ ಶ್ರೀಧರ್ ಅವರ 'ಹುಳಿ ಹುಳಿ ನೆನಪುಗಳು' ನಮ್ಮೊಳಗಿನ ಹುಳಿಯ ಬಗೆಗಿನ ಸಿಹಿ ನೆನಪುಗಳನ್ನು ಮೀಟಿ ಮೇಲೆ ತಂದರೆ, ಸ್ಮಿತಾ ಅಮೃತರಾಜ್ ಅವರ 'ಭಾವ ಚಿತ್ರಗಳ ಭಾವನಾ ಲೋಕದಲ್ಲಿ ಪ್ರಯಾಣಿಸುತ್ತಾ ನಮ್ಮ ಮನಸ್ಸಿನ ಹಾಳೆಯೊಳಗೆ ಅಚ್ಚಾಗಿರುವ ಹಲವಾರು ಭಾವಚಿತ್ರಗಳು ಕಣ್ಣ ಮುಂದೆ ಸುಳಿದಾಡುತ್ತವೆ. ರೋಹಿಣಿ ಎಸ್ ರಾವ್ ಅವರ 'ಎರಡಂಕಿಯ ಬಿಂಕ' ಒಂದು ವಸ್ತುನಿಷ್ಠ ಪ್ರಬಂಧ. ಎರಡು ಎನ್ನುವ ಶಬ್ದದ ವಿವಿಧಾರ್ಥ, ಸಂಬಂಧ, ಧ್ವನಿಗಳನ್ನು ಅವರು ದುಡಿಸಿಕೊಂಡಿರುವ ರೀತಿ ಇಲ್ಲಿ ಸ್ವಾರಸ್ಯಕರವಾಗಿದೆ. ಗೀತಾ ಕುಂದಾಪುರ ಅವರ 'ಬಾಲ್ಯ ಕದ್ದ ಕಾಗೆಗಳು ಕಾಗೆಗಳ ಮೇಲಿನ ನಮ್ಮ ನಂಬಿಕೆಗೆ ಕೈಗನ್ನಡಿ ಹಿಡಿಯುತ್ತದೆ. ಪರಿಸರ ಮಿತ್ರ ಎಂದು ಕರೆಸಿಕೊಳ್ಳುವ ಕಾಗೆಗಳ ಸಂಖ್ಯೆ ದಿನೇದಿನೇ ಕಡಿಮೆಯಾಗುತ್ತಿರುವ ಬಗ್ಗೆ ಲೇಖಕಿ ವಿಷಾದವನ್ನು ವ್ಯಕ್ತ ಪಡಿಸುತ್ತಾರೆ.

ಪ್ರಮುಖ ಪ್ರಬಂಧಕಾರ್ತಿಯರಲ್ಲಿ ಒಬ್ಬರಾಗಿರುವ ವಸುಮತಿ ಉಡುಪರ 'ದಂಡಿಗೆ ಹೆದರಲ್ಲ, ದಾಳಿಗೆ ಹೆದರಲ್ಲ ಪ್ರಬಂಧವನ್ನು ಅದೇ ಹೆಸರಿನ ಸಂಕಲನದಲ್ಲಿ ಕಾಣಬಹುದು. ಈ ಕೃತಿಯು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೂ ಪಾತ್ರವಾಗಿದೆ. ಹೆದರಿಕೆಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ಒಂದೆಡೆ ಹೆಣೆಯುತ್ತಾ ಇದು, ಘಟನೆಗಳ ಸೂಕ್ಷ್ಮಗಳನ್ನು ಚಿತ್ರಿಸುವ ಕಲಾ ಕೌಶಲ್ಯ ತೋರಿಸಿಯೂ ಹೊರಟಲ್ಲಿಗೆ ಹಿಂದಿರುಗಿ ಬಂದು ನಿಲ್ಲುತ್ತದೆ, ಎಂದರೆ ಹೆದರಿಕೆಯ ಬಗೆಗಿನ ಭಾವನೆಗಳೇನೂ ನಮ್ಮಲ್ಲಿ ಬದಲಾಗದು. ಸಣ್ಣ ಕಥೆಗಳ ಗುಣವೂ ಈ ಪ್ರಬಂಧದಲ್ಲಿ ಕಾಣಿಸಿಕೊಳ್ಳುವುದು ಇದರ ಮತ್ತೊಂದು ವಿಶೇಷತೆಯಾಗಿದೆ.

ಈ ಸಂಕಲನದಲ್ಲಿ ಅನುಭವ ಕಥನಗಳೂ ಕೆಲವಿವೆ. ಅಂಥವುಗಳಲ್ಲಿ, ಉಷಾ ನರಸಿಂಹನ್ ಅವರ 'ಸರ್ಪವಿಷಹರ ಮದ್ದು' ನೆನಪಿನ ಘಟನೆಗಳನ್ನೇ ಪ್ರಮುಖವಾಗಿ ಆಧರಿಸಿರುವಂತಹದ್ದು. ಇವರ ಬಹಳಷ್ಟು ಬರಹಗಳು ತಮ್ಮ ಅನುಭವ ಮತ್ತು ನೆನಪಿನ ಘಟನೆಗಳನ್ನೇ ಆಧರಿಸಿದ್ದು, ಅವು ಒಂದೊಂದಾಗಿ ಸುರುಳಿ ಬಿಚ್ಚಿಕೊಳ್ಳುತ್ತಾ ಸಾಗುತ್ತವೆ.

ನೋಟುಗಳ ಅಮಾನೀಕರಣದ ಹಿನ್ನೆಲೆಯಲ್ಲಿ ರಚನೆಯಾಗಿರುವ ಕೆ.ಎಸ್.ಚೈತ್ರ 'ಅಮ್ಮನ ಚಿಲ್ಲರೆ ನೆನಪುಗಳು' ಓದುಗರ ಬಾಲ್ಯದ ಘಟನೆಗಳನ್ನು ಮರುಕಳಿಸುತ್ತದೆ.

ಸಹನಾ ಕಾಂತಬೈಲು ಅವರ 'ಊರ ದನಗಳ ಕುರಿತ ನೂರೆಂಟು ನೆನಪುಗಳು' ಪ್ರಬಂಧವು, ಹಳ್ಳಿಯು ಕ್ರಮೇಣ ನಾಗರಿಕತೆಗೆ ತೆರೆದುಕೊಳ್ಳುತ್ತಾ, ನಿಧಾನವಾಗಿ ತನ್ನ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಾ ಸಾಗುತ್ತಿರುವ ಅಸಹಾಯಕತೆಯನ್ನು ಪ್ರತಿಬಿಂಬಿಸುತ್ತದೆ.

ಪ್ರಜ್ಞಾ ಮತ್ತಿಹಳ್ಳಿ ಅವರ 'ಇರುವುದೋ ಇಲ್ಲದಿರುವುದೋ' ಪ್ರಬಂಧದಲ್ಲಿ ಫೋನಿನಲ್ಲಿ ಮುಳುಗಿರುವ ಪತಿರಾಯ, ಮನೆಯಲ್ಲಿದ್ದೂ ಈ ಜಗತ್ತಿನಲ್ಲಿಲ್ಲದ ಹಾಗೆ ಏಕಾಗ್ರತೆಯಿಂದ, ತಲ್ಲೀನತೆಯಿಂದ ಫೋನಿನಲ್ಲಿ ಮುಳುಗಿ ಹೋಗಿರುವುದನ್ನು ಕಂಡು ಆ 'ದಿವ್ಯ ಸ್ಥಿತಿ'ಯನ್ನು ನೋಡಿದ ಮೇಲೆ ಅದು, 'ಇರುವಿಕೆಯ ಸ್ಥಿತಿಯೋ, ಇಲ್ಲದಿರುವಿಕೆಯೋ' ಎಂಬ ಗೊಂದಲಕ್ಕೀಡಾಗಿ, ಇಂತಹ ಅತಿ ಏಕಾಗ್ರತೆ ತಂದೊಡ್ಡುವ ಅಪಾಯಗಳನ್ನೂ ಅದರ ಪರಿಣಾಮಗಳನ್ನು ಲೇಖಕಿ ಇಲ್ಲಿ ಮಾರ್ಮಿಕವಾಗಿ ವಿವರಿಸಿದ್ದಾರೆ.

ಈ ಸಂಕಲನದಲ್ಲಿ ಪ್ರಬುದ್ಧ ಲೇಖನಗಳೊಂದಿಗೆ ನಕ್ಕು, ಮನಸ್ಸನ್ನು ಹಗುರಗೊಳಿಸಿಕೊಳ್ಳುವಂತಹವೂ ಇವೆ. ಮಧುರಾ ಕರಣಮ್ ಅವರ 'ಪಾರ್ಟುಗಳ ಪರದಾಟ' ಇದಕ್ಕೆ ಉತ್ತಮ ಉದಾಹರಣೆ. ಕಾಲ್ಪನಿಕತೆಯನ್ನು ಸಾಹಿತ್ಯ ಪ್ರಕಾರವು ಹೇಗೆ ದುಡಿಸಿಕೊಳ್ಳಬಹುದು ಎಂಬುದಕ್ಕೆ ಈ ಲೇಖನ ಮಾದರಿಯಾಗಿದೆ. ಇದು ಒಂದು ಮೋಜಿನ ವಕ್ರ ಚಿಂತನೆಯ ಫಲವಾಗಿ ಮೂಡಿ ಬಂದಿರುವ ಪ್ರಬಂಧ!

ವಾಣಿ ಸುರೇಶ್ ಅವರ 'ಯಾಕ್‌ಗೆ ಶೇವ್ ಯಾಕೆ?' ಪ್ರಬಂಧದ ಶೀರ್ಷಿಕೆಯೇ ಕುತೂಹಲಕಾರಿಯಾದುದು? ಶೀರ್ಷಿಕೆಯೇ ಪ್ರಬಂಧದ ಒಳಹೋಗಲು ಪ್ರೇರೇಪಿಸುತ್ತದೆ. 'ಶೇವಿಂಗ್ ದ ಯಾಕ್" ಎನ್ನುವುದು ಅಮೇರಿಕನ್ ಭಾಷೆಯಲ್ಲಿರುವ ಒಂದು ನುಡಿಗಟ್ಟು, ಯಾವುದೋ ಕೆಲಸ ಮಾಡಲು ಹೋಗಿ, ಏನೇನನ್ನೋ ಮಾಡಲು ತೊಡಗಿ, ಕಡೆಗೆ ಯಾವ ಕೆಲಸವೂ ನಡೆಯದೆ ಸೋಮಾರಿಯಾಗಿ ಕಾಲ ಕಳೆಯುವುದನ್ನೇ ಹೀಗೆ ಹೇಳುವುದು ಎಂಬುದು ಕಡೆಯಲ್ಲಿ, ತಿಳಿದು ನಗೆ ಉಕ್ಕುತ್ತದೆ!

ಶೈಲಜಾ ಹಾಸನ್ ಅವರ 'ಹೃದಯ ಬಾಯಿಗೆ ಬರುವುದು' ಲೇಖನವಂತೂ ನಡೆದ ಘಟನೆಗಳನ್ನು ಕಣ್ಮುಂದೆ ತಂದು ನಿಲ್ಲಿಸುವಷ್ಟು ಸಶಕ್ತವಾಗಿದೆ. ಕನ್ನಡದ ಒಂದು ನುಡಿಗಟ್ಟನ್ನು ಆಧರಿಸಿ ರಚಿತವಾಗಿರು ಈ ಪ್ರಬಂಧವು ಕನ್ನಡ ಭಾಷೆಯ ವೈಶಿಷ್ಟ್ಯತೆಯ ಒಂದು ಮಾದರಿಯನ್ನು ಮನದಟ್ಟು ಮಾಡುತ್ತದೆ.

ಸುಧಾ ರಮೇಶ್ ಅವರ, ದೃಷ್ಟಿ ಕಣ್ಣಿನ ಸುತ್ತಲೂ ಹರಿದಾಡಿದರೆ, ಕೆ.ಎಸ್.ಪವಿತ್ರ ಅವರು ಬೇರೆ ಬೇರೆ ರಾಜ್ಯದ ಜನರೊಂದಿಗಿನ, ವಿದೇಶೀಯರೊಂದಿಗಿನ ಒಡನಾಟದ ಸಂದರ್ಭದಲ್ಲಿ ಭಾಷೆಯ ಕಾರಣದಿಂದ ಉಂಟಾಗುವ ಅವಾಂತರಗಳನ್ನು ಹಾಸ್ಯಮಯವಾಗಿ ನಿರೂಪಿಸುವ 'ಭಾಷಾ(ಅ)ಂತರಗಳು' ಪ್ರಬಂಧ ಕಚಗುಳಿ ಇಡುತ್ತದೆ.

"ಅಮ್ಮ ಅಂದ್ರೆ' ಪ್ರಬಂಧದ ಶೀರ್ಷಿಕೆಯನ್ನು ನೋಡುತ್ತಿದ್ದಂತೆ ಇದು ಅಮ್ಮನ ಬಗ್ಗೆ ಬರೆಯಲು ಹೊರಟ ಭಾವನಾತ್ಮಕ ಪ್ರಬಂಧ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ, ವಾಸ್ತವವಾಗಿ ಇದು 'ಅಮ್ಮ' ಎಂದು ಜನಪದರಲ್ಲಿ

ಕರೆಯಲ್ಪಡುವ 'ಚಿಕನ್ ಫಾಕ್ಸ್' ಎಂಬ ರೋಗದ ಬಗೆಗಿನ ವಿವರಣೆ ನೀಡುತ್ತದೆ. ಅದರ ಬಗ್ಗೆ ಜನಮಾನಸದಲ್ಲಿ ಬೇರೂರಿರುವ ನಂಬಿಕೆಗಳ ಸುತ್ತಾ ಇದು ಸರಿದಾಡುತ್ತದೆ. ಈ ಸಾಂಕ್ರಾಮಿಕ ರೋಗವೊಂದು ಎಷ್ಟೇ ಜಾಗ್ರತೆ ವಹಿಸಿದರೂ ಹೇಗೆ ಹರಡುತ್ತದೆ ಎಂಬುದಕ್ಕೆ ಕನ್ನಡಿ ಹಿಡಿಯುತ್ತಲೇ, ಅದರ ಬಗ್ಗೆ ಜನರಲ್ಲಿ ಬೇರೂರಿರುವ ನಂಬಿಕೆಗಳನ್ನೂ ಇದು ಬಿಚ್ಚಿಡುತ್ತದೆ.

- xliii -

ವಸುಂಧರಾ ಭೂಪತಿಯವರ 'ಅತ್ತೆ ಅಮ್ಮನಾಗುವ ಪರಿ!' ಪ್ರಬಂಧವು ಒಂದು ವ್ಯಕ್ತಿ ಚಿತ್ರ ಮಾದರಿಯಲ್ಲಿರುವ ಪ್ರಬಂಧ. ಅತ್ತೆ ಸೊಸೆಯರ ನಡುವಿನ ಸಂಬಂಧವನ್ನು ಆತ್ಮೀಯವಾಗಿಸುತ್ತಾ ಸಾಗುವ ಪ್ರಬಂಧವು ಜಾನಪದ ಗೀತೆಗಳನ್ನು ತನ್ನ ಸಹಾಯಕ್ಕೆ ತೆಗೆದುಕೊಳ್ಳುತ್ತದೆ. ಸಾಮಾನ್ಯವಾಗಿ ಅತ್ತೆ- ಸೊಸೆಯರ ನಡುವಿನ ಸಂಬಂಧ ಆಪ್ತವಾಗಿರುವುದು ಅಪರೂಪ. ಅಂತಹ ಅಪರೂಪದ ಅತ್ತೆಯ ಬಗ್ಗೆ ಸೊಸೆ ವಸುಂಧರ ಅವರು ನೆನಪಿಸಿಕೊಳ್ಳುವ ರೀತಿ ಹೃದಯವನ್ನು ಆದ್ರ್ರಗೊಳಿಸುತ್ತದೆ.

ಮಾಲತಿ ಮುದಕವಿಯುವರು 'ಜಾಹೀರಾತು'ಗಳ ಸ್ವರೂಪದ ಬಗ್ಗೆ ವಿವರಣೆಯನ್ನೂ ನೀಡುತ್ತಾ, ಜಾಹೀರಾತಿನ ವಿವಿಧತೆ, ಸೂಕ್ಷ್ಮತೆಗಳನ್ನು ಬದುಕಿನೊಂದಿಗೆ ಸಮೀಕರಿಸಿ ಬದುಕಿಗೂ ಅದನ್ನು ಅನ್ವಯಿಸುತ್ತಾ, ಪ್ರಬಂಧಕ್ಕೆ ಒಂದು ಹೊಸ ಆಯಾಮವನ್ನು ನೀಡಿದ್ದಾರೆ. ಓದುಗರನ್ನು ತನ್ನ ಚಿಂತನೆಯೊಳಗೆ ಪಾಲ್ಗೊಳ್ಳುವಂತೆ ಇದು ಮಾಡುತ್ತದೆ.

ಈ ಸಂಕಲನದಲ್ಲಿ ಅನುಭವ ಕಥನಗಳೂ ಕೆಲವಿವೆ. ಅಂಥವುಗಳಲ್ಲಿ, ಶ್ರೀಮತಿ ಸುಧಾ ಮೂರ್ತಿಯವರ "ಆರ್.ಎಚ್. 'ಡಯಾಗೋಸ್ಟಿಕ್' ಮತ್ತು, 'ಉಷಾ ನರಸಿಂಹನ್ ಅವರ 'ಸರ್ಪವಿಷಹರ ಮದ್ದು' ನೆನಪಿನ ಘಟನೆಗಳನ್ನೇ ಪ್ರಮುಖವಾಗಿ ಆಧರಿಸಿರುವಂತಹದ್ದು. ಈ ಬರಹಗಳು ತಮ್ಮ ಅನುಭವ ಮತ್ತು ನೆನಪಿನ ಘಟನೆಗಳನ್ನೇ ಆಧರಿಸಿದ್ದು, ಅವು ಒಂದೊಂದಾಗಿ ಸುರುಳಿ ಬಿಚ್ಚಿಕೊಳ್ಳುತ್ತಾ ಸಾಗುತ್ತವೆ.

ಸುಧಾಮೂರ್ತಿಯವರ 'ಆರ್.ಎಚ್. ಡಯಾಗೋಸ್ಟಿಕ್ ಆತ್ಮೀಯವಾದ, ಹೃದಯಂಗಮವಾದ, ಮನ ಕಲಕುವ ಘಟನೆಯನ್ನು ಆಧರಿಸಿ ರಚಿಸಿರುವ ಪ್ರಬಂಧ. ಇವರ ತಂದೆ ಒಬ್ಬ ಡಾಕ್ಟರ್ ಮಾತ್ರವಲ್ಲ, ಮಾನವೀಯತೆಯ ಸಾಕಾರ ಎಂಬುದನ್ನು ಈ ಪ್ರಬಂಧ ನಿರೂಪಿಸಿದೆ. ವೈದ್ಯಕೀಯ ಜಗತ್ತು, ಇಂದು ಸಂಪೂರ್ಣ ಹಣಗಳಿಕೆಯನ್ನೇ ಗುರಿಯಾಗಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿರುವುದನ್ನು ನೋಡುವ ನಮಗೆ, 'ಜೀವ ಕೊಡುವುದೇ ಡಾಕ್ಟರರ

ಕೆಲಸ"  ಎಂಬುದನ್ನು ಕಾಯಾ ವಾಚಾ ಮನಸಾ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಂತಹ ಡಾ.ಆರ್.ಎಚ್. ಅವರಂತಹ ವೈದ್ಯರು ಕೆಲವರಾದರೂ ಇರುವುದನ್ನು ನೆನಪಿಗೆ ತರುತ್ತದೆ.

*

ಇಲ್ಲಿನ ಪ್ರಬಂಧಗಳು ಮುಖ್ಯವಾಗಿ ಸ್ತ್ರೀಲೋಕವೊಂದನ್ನು ಅನಾವರಣ ಗೊಳಿಸುತ್ತವೆ. ಮಹಿಳೆಯರ ಅನುಭವ ಪ್ರಪಂಚಕ್ಕೆ ಮಾತ್ರವೇ ನಿಲುಕಬಲ್ಲ ಸಂಗತಿಗಳಿವು. ಇಲ್ಲಿ ಆತ್ಮಗತವಾದ ಮಾತು ಇದೆ, ಮಿತಿಗೊಳಪಟ್ಟ ಸ್ವಾತಂತ್ರ್ಯವೂ ಇದೆ. ಸೆರಗು, ಬಳೆ, ಸೀರೆಗಳ ಮೇಲಿನ ವ್ಯಾಮೋಹ... ಇತ್ಯಾದಿ ಸ್ತ್ರೀ ಲೋಕವೊಂದು ಇಲ್ಲಿ ತೆರೆದುಕೊಳ್ಳುತ್ತದೆ. ಯಾವುದೇ ವಿಷಯವನ್ನು ಆಯ್ಕೆ ಮಾಡಿಕೊಂಡಿರಲಿ, ತಾವು ಆಯ್ಕೆ ಮಾಡಿಕೊಂಡ ವಿಷಯವನ್ನು ಕಟ್ಟುವಲ್ಲಿನ ಶ್ರದ್ಧೆ ಎಲ್ಲ ಪ್ರಬಂಧಗಳನ್ನೂ ಸುಂದರವಾಗಿಸಿದೆ. ಮಹಿಳೆಯರು ಯಾವುದೇ ವಿಷಯದ ಬಗ್ಗೆ ಮನೋಲ್ಲಾಸ ಮೂಡಿಸುವಂತೆ ಬರೆಯಬಲ್ಲರು, ಘಟನೆ ಯಾವುದಾದರೂ ಆಗಿರಲಿ, ಎಲ್ಲವನ್ನೂ ಅನುಭವ ಮತ್ತು ಪ್ರತಿಭಾ ಶಕ್ತಿಯ ಮೂಸೆಯಲ್ಲಿ ಕರಗಿಸಿ, ಸಶಕ್ತ ಪ್ರಬಂಧವಾಗಿ ಎರಕ ಹೊಯ್ಯುವ ಶಕ್ತಿ ಅವರಲ್ಲಡಗಿದೆ ಎಂಬುದನ್ನು ಇವು ಕನ್ನಡಿ ಹಿಡಿದು ತೋರಿಸುತ್ತವೆ.



ಇಂದು ನಮಗೆ ಯಾವುದಕ್ಕೂ ಸಮಯ ಇಲ್ಲ. ಇದು ಅವಸರದ ಯುಗ. ದೀರ್ಘವಾದ ಮತ್ತು ಗಂಭೀರವಾದ ಸಾಹಿತ್ಯವನ್ನು ಓದಿ ಅರಗಿಸಿಕೊಳ್ಳುವ ಸಮಯ ನಮಗೆ ತುಂಬ ಕಡಿಮೆ. ಏನಿದ್ದರೂ ಬೇಗನೆ ಓದಿ ಮುಗಿಸುವಂತಹ ಬರಹಗಳ ಕಡೆಗಷ್ಟೇ ಗಮನ ಹರಿಯುವುದು. ಅದೇ ಸಮಯದಲ್ಲಿ ಅದು, ಮನೋರಂಜನೆಯನ್ನೂ ನೀಡುವಂತಿರಬೇಕು. ಪ್ರಯಾಣದ ಸಮಯದಲ್ಲಿ, ಬೇಸರವಾಗಿದ್ದಾಗ, ನಿದ್ರೆ ಬಾರದಿದ್ದಾಗ.... ಸುಮ್ಮನೆ ಕಣ್ಣಾಡಿಸುವಂತಹ ಸಾಹಿತ್ಯವೂ ಅದಾಗಿರಬೇಕು. ಅದು ಮನಸ್ಸಿಗೆ ಆನಂದವನ್ನೂ ಮುದವನ್ನೂ ಉಂಟು ಮಾಡುವಂತಿರಬೇಕು.... ಎಂದೆಲ್ಲಾ ಬಯಸುವವರಿಗೆ ಲಲಿತ ಪ್ರಬಂಧವೇ ಹೆಚ್ಚು ಸೂಕ್ತವಾದುದು ಎಂಬುದು ನಮ್ಮ ಅಭಿಪ್ರಾಯ.

ಈ ಸಂಕಲನಕ್ಕೆ ತನ್ನದೇ ಆದ ಕೆಲವು ಮಿತಿಗಳೂ ಇವೆ. ಆ ಹಿನ್ನೆಲೆಯಲ್ಲಿ ನೋಡಿದಾಗ ಇದು ಪರಿಪೂರ್ಣ ಸಂಕಲನ ಎಂದು ಹೇಳಲಾಗದು. ಇನ್ನೂ ಎಷ್ಟೋ ಲೇಖಕಿಯರ ಪ್ರಬಂಧಗಳನ್ನು ಇಲ್ಲಿ ನಾನಾ ಕಾರಣಗಳಿಂದ ಕೈ ಬಿಡಬೇಕಾಗಿ ಬಂದಿದೆ. ಮುಂದೆ ಇನ್ನೊಂದು ಬೃಹತ್ ಸಂಪುಟ ತರುವ ಅವಕಾಶ ಸಿಕ್ಕರೆ ಆಗ ಇನ್ನೂ ಹಲವು ಲೇಖಕಿಯರಿಗೆ ಅವಕಾಶ ದೊರೆತೀತು, ನೋಡೋಣ!

ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಪೂರೈಸಿರುವ ಶುಭ ಸಂದರ್ಭದಲ್ಲಿ, ಅತ್ಯಂತ ಕ್ರಿಯಾಶೀಲ ಅಧ್ಯಕ್ಷರು ಪರಿಷತ್ತಿನ ಸಾರಥ್ಯ ವಹಿಸಿ ಹತ್ತು ಹಲವು ಮಹತ್ವದ ಕ್ರಿಯಾ ಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪರಿಷತ್ತಿನ ಕಾರ್ಯ ವ್ಯಾಪ್ತಿಯೂ ಇವರಿಂದ ವಿಸ್ತಾರಗೊಂಡಿದೆ, ಕ್ರಿಯಾಶೈಲಿಯೂ ಎತ್ತರೆತ್ತರಕ್ಕೇರಿದೆ. ಅಧ್ಯಕ್ಷರ ದೂರದೃಷ್ಟಿಯ ಫಲವಾಗಿಯೇ ಶತಮಾನದ ಮಹಿಳಾ ಸಾಹಿತ್ಯ ಸಂಪುಟಗಳು ಬೆಳಕು ಕಂಡಿರುವುದು.

ಈ ಸಂಕಲನವನ್ನು ಸಿದ್ಧಪಡಿಸಲು ಅವಕಾಶ, ಪ್ರೋತ್ಸಾಹ ಹಾಗೂ ಜವಾಬ್ದಾರಿ ನೀಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರಿಗೂ, ಆಯ್ಕೆ ಮಾಡಿಕೊಂಡ ಪ್ರಬಂಧಗಳನ್ನೂ ಪ್ರಕಟಿಸಲು ಅನುಮತಿ ನೀಡಿದ ಎಲ್ಲ ಲೇಖಕಿಯರಿಗೂ, ಕಾಲಕಾಲಕ್ಕೆ ಸೂಕ್ತ ಸಲಹೆ-ಸೂಚನೆಗಳನ್ನು ನೀಡಿದ ಪ್ರಕಟಣ ವಿಭಾಗದ ಶ್ರೀ. ಪದ್ಮರಾಜ ದಂಡಾವತಿಯವರಿಗೂ, ಪ್ರಧಾನ ಸಂಪಾದಕರಾದ ಡಾ.ಮಲ್ಲಿಕಾ ಘಂಟಿಯವರಿಗೂ, ಪರಿಷತ್ತಿನ ಮುದ್ರಣ ವಿಭಾಗದವರಿಗೂ, ಎಲ್ಲ ಸಿಬ್ಬಂದಿ ವರ್ಗದವರಿಗೂ, ಪುಸ್ತಕಕ್ಕೆ ಅಕ್ಷರ ರೂಪ ಕೊಡಲು ಮತ್ತು ಕರಡು ತಿದ್ದುವಲ್ಲಿ ನೆರವಾದ ಜಿ.ಪ್ರೇಮಾ ಅವರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು. ಇಲ್ಲಿನ ಪ್ರಬಂಧಗಳನ್ನು ಸಹೃದಯ ಓದುಗರು ಪ್ರೀತಿಯಿಂದ ಸ್ವಾಗತಿಸುವರೆಂದು ಭಾವಿಸಿದ್ದೇವೆ.

**ಡಾ. ತಮಿಳ್ ಸೆಲ್ವಿ**

**ಶ್ರೀಮತಿ, ಬಾ.ಹ.ರಮಾಕುಮಾರಿ**

# ಪರಿವಿಡಿ


ಮುನ್ನುಡಿ

| | | | | |
|---|---|---|---|---|
| ೧. | ಹಾಗಾಗಬಾರದೇಕೆ? | - | ಟಿ. ಸುನಂದಮ್ಮ | ೧ |
| ೨. | ಕಿಶೋರರು | - | ನಾಗಲಕ್ಷ್ಮಿ ಹರಿಹರೇಶ್ವರ | ೭ |
| ೩. | ಪರವಾಯಿಲ್ಲ | - | ಭುವನೇಶ್ವರಿ ಹೆಗಡೆ | ೧೩ |
| ೪. | ಕೋಪ ಬಂದ ಕಾಲಕ್ಕೆ | - | ಜಯಶ್ರೀ ದೇಶಪಾಂಡೆ | ೧೯ |
| ೫. | ಕೀಟ ಪ್ರಿಯರನ್ನು ವರಿಸಿದಾಗ | - | ಜ್ಯೋತ್ಸ್ನಾ ಕಾಮತ್ | ೨೩ |
| ೬. | ಬರಹಗಾರ್ತಿಯ ಬವಣೆ | - | ಗುರುದೇವಿ ಹುಲ್ಲೆಪ್ಪನವರಮಠ | ೩೦ |
| ೭. | ಮೊಸರವಲಕ್ಕಿ | - | ಸುನಂದಾ ಬೆಳಗಾಂವಕರ | ೩೬ |
| ೮. | ಸೀರೆಗಾಗಿ ಕಂಚೀಯಾತ್ರೆ | - | ವರದಾ ಶ್ರೀನಿವಾಸ್ | ೪೬ |
| ೯. | ಹಚ್ಚಿಕೊಂಡಿ...ರಾ... ನೀವು? | - | ಜಯಾ ಯಾಜಿ ಶಿರಾಲಿ | ೫೪ |
| ೧೦. | ಬೇಡದ ಅತಿಥಿ | - | ಶಾರದಾ ಹೆಮ್ಮಿಗೆ | ೫೮ |
| ೧೧. | ನಾಯಿ ದೇವರು | - | ಶೈಲಾ ಛಬ್ಬಿ | ೬೫ |
| ೧೨. | ಎದ್ದು ಹೋಗುವ ಸಂಕಟ | - | ಡಾ. ಜಾನಕೀ ಸುಂದರೇಶ್ | ೭೧ |
| ೧೩. | ಪೊರಕೆಮಯಂ ಈ ಜಗತ್! | - | ಶ್ವೇತಾ ನರಗುಂದ | ೭೫ |
| ೧೪. | ಟೇಲ ಮೇಡ್ | - | ರುಚಿತಾ ಶಶಿಕಾಂತ್ (ಚೇನಾ) | ೮೧ |
| ೧೫. | “ಆssssssssssಕ್ಷಿ...' | - | ಜಿ.ವಿ.ನಿರ್ಮಲ | ೮೭ |
| ೧೬. | ನಿದ್ರೆ | - | ಭಾರತಿ ಬಿ.ಎಸ್ | ೯೭ |
| ೧೭. | ಹಬ್ಬಗಳ ಬಾಲ್ಯ | - | ನಾಗವೇಣಿ ಎಚ್. | ೧೦೪ |

೧೮. ಬದಲಾದ ದೃಷ್ಟಿಕೋನ - ಡಾ. ಶ್ಯಾಮಲ ರವಿಶಂಕ ೧೧೩

೧೯. ಹೆಂಡತಿ ತವರು ಮನೆಗೆ ಹೋದಾಗ - ಶಾಂತಾದೇವಿ ಹಿರೇಮಠ ೧೧೯

೨೦. ದೇವರ ಹುಡುಕಾಟದಲ್ಲಿ - ವಿಜಯಲಕ್ಷ್ಮಿ ಕೆ.ಎಂ. ೧೨೨

೨೧. ಕಾಟು ಮಾವೆಂದರೆ ಸಾಕೆ... - ಅನಿತಾ ನರೇಶ್ ಮಂಚಿ ೧೩೦

೨೨. ತಲೆಯಲ್ಲಿ ಕೂದಲಿಲ್ಲದಿದ್ದರೂ
ವಿಗ್ಗಿಗೆ ಮಲ್ಲಿಗೆ ಹೂ! - ಮುದ್ದು ತೀರ್ಥಹಳ್ಳಿ ೧೩೪

೨೩. ಹೀಗೊಂದು ದಂತಕತೆ - ಸಾಯಿಲಕ್ಷ್ಮಿ ೧೩೯

೨೪. ಹುಳಿ ಸಿಹಿ ಬಾಲ್ಯ - ಶಾರದಾ ವಿ ಮೂರ್ತಿ ೧೪೪



೨೫. ಪಾದುಕಾ ಪುರಾಣ ವಿಜಯ ಗುರುರಾಜ್ ೧೪೮

೨೬. ಊಟಕ್ಕೇನದ ಜಾಹ್ನವಿ ಆನಂದ ಹಳ್ಳೂರ ೧೫೧

೨೭. ಕಳೆಯದ ಬಳೆಯ ನಿನಾದ ಲಲಿತಾ ಹೊಸಪ್ಯಾಟಿ ೧೫೭

೨೮. ಹುಳಿ ಹುಳಿ ನೆನಪುಗಳು ವಿಜಯಾ ಶ್ರೀಧರ್ ೧೬೩

೨೯. ಭಾವಚಿತ್ರಗಳ ಭಾವನಾ ಲೋಕದಲ್ಲಿ ... ಸ್ಮಿತಾ ಅಮೃತರಾಜ್ ೧೬೬

೩೦. ಎರಡಂಕಿಯ ಬಿಂಕ ರೋಹಿಣಿ ಎಸ್. ರಾವ್ ೧೭೧

೩೧. ನನ್ನ ಬಾಲ್ಯ ಕದ್ದ ಕಾಗೆಗಳು ಗೀತಾ ಕುಂದಾಪುರ ೧೭೫

೩೨. ದಂಡಿಗೆ ಹೆದರಲ್ಲ, ದಾಳಿಗೆ ಹೆದರಲ್ಲ - ವಸುಮತಿ ಉಡುಪ ೧೮೦

| | | | | |
|---|---|---|---|---|
| ೩೩. | ಸರ್ಪವಿಷಹರ ಮದ್ದು | - | ಉಷಾ ನರಸಿಂಹನ್ | ೧೮೭ |
| ೩೪. | ಅಮ್ಮನ 'ಚಿಲ್ಲರೆ' ನೆನಪುಗಳು... | - | ಡಾ. ಕೆ.ಎಸ್. ಚೈತ್ರ | ೧೮೯ |
| ೩೫. | ಅಯ್ಯೋsss...ಜಿರಳೆ! | -- | ಗಾಯತ್ರಿ ಮೂರ್ತಿ | ೧೯೪ |
| ೩೬. | ಊರ ದನಗಳ ಕುರಿತ ನೂರೆಂಟು | | | |
| | ನೆನಪುಗಳು | - | ಸಹನಾ ಕಾಂತಬೈಲು | ೧೯೯ |
| ೩೭. | ಇರುವುದೋ ಇಲ್ಲದಿರುವುದೋ | - | ಪ್ರಜ್ಞಾ ಮತ್ತಿಹಳ್ಳಿ | ೨೦೪ |
| ೩೮. | ಪಾರ್ಟಿಗಳ ಪರದಾಟ | - | ಮಧುರ ಕರ್ಣಮ್ | ೨೦೯ |
| ೩೯. | 'ಯಾಕ್'ಗೆ ಶೇವ್ ಯಾಕೆ? | | ವಾಣಿ ಸುರೇಶ್ | ೨೧೪ |
| ೪೦. | ಹೃದಯ ಬಾಯಿಗೆ ಬರುವುದು | - | ಶೈಲಜಾ ಹಾಸನ್ | ೨೧೮ |
| ೪೧. | ಕಣ್ಣು | | ಡಾ. ಸುಧಾ ರಮೇಶ್ | ೨೨೧ |
| ೪೨. | ಭಾಷಾ (ಅವಾ)ಂತರಗಳು | | ಡಾ. ಕೆ.ಎಸ್.ಪವಿತ್ರ | ೨೨೪ |
| ೪೩. | ಅಮ್ಮ ಅಂದ್ರೆ... | - | ದೀಪ್ತಿ ಭದ್ರಾವತಿ | ೨೨೮ |
| ೪೪, | ಅತ್ತೆ, ಅಮ್ಮನಾಗುವ ಅಚ್ಚರಿ | – | ಡಾ. ವಸುಂಧರ ಭೂಪತಿ | ೨೩೨ |
| ೪೫. | ಜಾಹೀರಾತುಗಳು | - | ಮಾಲತಿ ಮುದಕವಿ | ೨೩೮ |
| ೪೬. | ಆರ್.ಎಚ್. ಡಯಾಗ್ನಾಸ್ಟಿಕ್ಸ್ | - | ಸುಧಾಮೂರ್ತಿ | ೨೪೩ |

## ೧. ಹಾಗಾಗಬಾರದೇಕೆ?

**- ಟಿ. ಸುನಂದಮ್ಮ**

ಹೌದು! ಬಾಳಿನುದ್ದಕ್ಕೂ ನಾವು ಕೇಳಿಕೊಳ್ಳುವ ಪ್ರಶ್ನೆ ಇದು. ದಿನಕ್ಕೊಮ್ಮೆಯಾದರೂ ಮನಸ್ಸಿನಲ್ಲಿ ಹಾದು ಹೋಗುವ ಭಾವನೆ ಅದು! ಹುಟ್ಟುವ ಮಗು (ನಮ್ಮ ಅಪೇಕ್ಷೆಯಂತೆ) ಗಂಡೇ ಆದೀತು, ಮಗ ಬೆಳೆದು ವಿದ್ಯಾವಂತನಾಗಿ ನಾಲಕ್ಕೂ ಆರೋ ಡಿಗ್ರಿಗಳನ್ನು ತನ್ನ ಹೆಸರಿಗೆ ತಗುಲಿಸಿಕೊಂಡಾನು... ದೊಡ್ಡ ವಿಜ್ಞಾನಿ ಆದಾನು... ಭಾರಿ ಅಧಿಕಾರಿ ಆದಾನು.. ಮಂತ್ರಿಯೇ ಆದಾನು...! ಮಗಳಾದರೆ ಮನಮೋಹಿನಿ ಯಾಕಾಗಬಾರದು? ಮೂರು ಸಾವಿರ ತರುವವನ ಮಡದಿ ಯಾಕಾಗಬಾರದು? ಅಥವಾ... ಕಲಾವಿದೆಯಾದಾಳು, ಸಂಗೀತ ಸಾಮ್ರಾಜ್ಞೆಯಾದಾಳು, ಮಿಂಚುವ ಮಿನುಗುವ ಚಿತ್ರತಾರೆಯೇ ಆದಾಳು!

ಅಂತೂ ಸಾಮಾನ್ಯಕ್ಕೆ ಮನುಷ್ಯ ಆಶಾವಾದಿ, 'ಆಶೆಯೆಂಬುದು ಅನರ್ಥಕ್ಕೆ ಕಾರಣ', 'ಆಶೆಯ ಬಿಡು, ಕೇಶವ ಕಳೆ' ಎಂದೆಲ್ಲ ಬೋಧನೆ ಮಾಡಿದ್ದಾರೆ, ಏನೋ ಕಾರಣದಿಂದ ತಮ್ಮ ಜೀವನದಲ್ಲಿ ಜಿಗುಪ್ಸೆ ಹೊಂದಿದ ಯಾರೋ ದಾಸರು! ಆದರೆ ನಿಜಕ್ಕೂ ಆಶೆ ಅವಶ್ಯ. ಅದು ಬಾಳಿಗೆ ಒಂದು ಬಗೆಯ ಶಕ್ತಿ ವರ್ಧಕ, ಕಣ್ಣಿಗೆ ಹೊಳಪು, ಮೈಗೆ ಹುರುಪು, ಮೆದುಳಿಗೆ ಚುರುಕು ಕೊಡುತ್ತದೆ-ಆಶಾವಾದಿತ್ವ.

ನಮ್ಮ ಆಶೆಗಳಿಗೆ ಮೊದಲು ಗುರಿಯಾಗುವವನು ದೇವರು! ವ್ಯಾಪಾರೀ ಮನೋಭಾವವನ್ನು ರಕ್ತಗತವಾಗಿಸಿಕೊಂಡಿರುವ ನಾವು, ತರಕಾರಿ ಕೊಳ್ಳುವುದರಲ್ಲಿ ತಕ್ಕಷ್ಟು ಜಾಣೆಯನ್ನು ತೋರಿಸದಿದ್ದರೂ - ಹರಕೆ ಹೊರುವಾಗ ಚೌಕಾಶೀ ಪ್ರವೀಣರಾಗುತ್ತೇವೆ. ಆಸೆಯ ಪೂರೈಕೆಗೆ ಭಕ್ತಿಯ ಮರೆ ಹೋಗುತ್ತೇವಲ್ಲ? ದೇವರಿಗೆ ಲಂಚದಾಶೆ ತೋರಿಸುತ್ತೇವಲ್ಲ? ಮಗನಿಗೆ ಪಾಸಾದರೆ ಅಷ್ಟೋತ್ತರ, ಫಸ್ಟ್ಕ್ಲಾಸ್ ಸಿಕ್ಕಿದರೆ- ಸಹಸ್ರನಾಮ, ಬ್ಯಾಂಕ್ ಬಂದರೆ-ರುದ್ರಾಭಿಷೇಕ... ದರ್ಜೇವಾರು ಸೇವಾರ್ಥ!

ಮೊನ್ನಿನ ಲಾಟರಿಯಲ್ಲಿ ಬಹುಮಾನ ಪಡೆದ ಭೀಮಯ್ಯ, ಹರಕೆ ಹೊತ್ತಿದ್ದುದ್ದುಂಟು, ತಿರುಪತಿ ತಿಮ್ಮಪ್ಪನ ಹುಂಡಿಗೆ ಒಂದು ಸಾವಿರ ಸಲ್ಲಿಸುತ್ತೇನೆಂದು, ಆತ ಹುಂಡಿಗೆ ಹಾಕಿ ಬಂದದ್ದು ಐವತ್ತು ರೂಪಾಯಿಗಳು! ಆತ ಕೊಟ್ಟ ವಿವರಣೆ- 'ಹರಿಯಾನದ ಟಿಕೆಟ್ಟೂ ತೆಗೆದಿದ್ದೆನಲ್ಲ, ಅದೇ ಹದಿನೈದು ಲಕ್ಷ ಯಾಕೆ ಬರಬಾರದಿತ್ತು? ಸಿಕ್ಕಿದ್ದು ಮೈಸೂರಿನ ಐವತ್ತು ಸಾವಿರ ತಾನೇ? ಅದರಿಂದಲೇ...!'

ಲಂಚದ ಸಂಚಿಗೆ ಸಿಕ್ಕಿ ಹಾಕಿಕೊಳ್ಳುವ ಸ್ಪೆಷಲ್ ದೇವತೆಯೆಂದರೆ ಗಣಪತಿ. ಅದೂ ವಿದ್ಯಾರ್ಥಿಗಳಿಂದ ವರ್ಷವಿಡೀ ಕ್ಲಾಸಿಗೆ ಚಕ್ಕರ್ ಹಾಕಿ 'ಫ್ರಾಕ್ಸಿ' ಹಾಜರಾತಿ ಹಾಕಿಸಿಕೊಂಡು (ಅಥವಾ ಚಳವಳಿ-ಮುಷ್ಕರ-ಬಂದ್-ಘೇರಾವ್‌ಗಳ ಚಕ್ರದ ಸುಳಿಯಲ್ಲಿ ಸಿಕ್ಕಿಕೊಂಡು) ಬಿಡುಗಡೆಯಾದ ಎಲ್ಲ ಚಿತ್ರಗಳನ್ನೂ ವೀಕ್ಷಿಸುವ ಹೃದಯ ವೈಶಾಲ್ಯ



ಹೊಂದಿ, ತೆರೆದಿಟ್ಟ ಸಮಸ್ತ ಉಪಹಾರ ಗೃಹಗಳಿಗೂ ತಪ್ಪದೆ ಭೇಟಿ ಕೊಟ್ಟು, ಮಹಾನವಮಿ ದಿನ ಪೂಜೆ ಮಾಡುವ ಸರಸ್ವತಿಯಂತೆ ಪಠ್ಯ ಪುಸ್ತಕಗಳನ್ನು ಕಪಾಟಿನಲ್ಲೇ ಜೋಡಿಸಿಟ್ಟಿದ್ದು, ಪರೀಕ್ಷೆ ಹತ್ತಿರವಾದಾಗ ಗಣಪತಿಯ ಮೇಲೆ ಭಾರ ಹೇರುತ್ತಾರೆ. ಆತನ ಶರೀರ ಭಾರವನ್ನೇ ತಡೆಯಲಾರದ ಮೂಷಿಕದ ಮೇಲೆ ಓವರ್ ಲೋಡ್!' ಇಪ್ಪತ್ತೊಂದು ವಡೆ ಸರದ, ನೂರೊಂದು ಕಡುಬಿನ ಹಾರದ, ಮೆಟ್ಟಿಲಿಗೊಂದು ತೆಂಗಿನ ಕಾಯಿನ ಆಸೆ ತೋರಿಸುತ್ತಾರೆ ಆತನಿಗೆ! (ನಿಜಕ್ಕೂ ನೀಡಿದ ನೈವೇದ್ಯವನ್ನು ದೇವರು ತಿನ್ನುವ ಹಾಗಿದ್ದರೆ ಬಹುಶಃ ಅಕ್ಕಿ ಕಾಳು ಪೆಪ್ಪರ್ ಮೆಂಟನ್ನೋ, ಬೆರಳುದ್ದದ ಬಾಳೆ ಹಣ್ಣನ್ನೋ ಅವನ ಮುಂದಿರಿಸುತ್ತಿದ್ದೇವೇನೋ?).

ಸಾವಿತ್ರಮ್ಮನ ಮನೆಗೆ ಹೋಗಿದ್ದೆ, ಆಕೆ ತಯಾರಿಸುತ್ತಿದ್ದ ಮೋದಕಗಳ ಆಕಾರ ಕಂಡು ಗಾಬರಿಯಾದೆ.

'ಇದೇನು, ಸಾತಮ್ಮ? ನವರಾತ್ರಿ ಗೊಂಬೆ ಬಾಗಿನ...? ಈಗ್ಯಾಕೆ...?'

'ಗೊಂಬೆ ಬಾಗಿನವೂ ಅಲ್ಲ, ಸಿಂಬೆ ಬಾಗಿನವೂ ಅಲ್ಲ, ಪುಟ್ಟಿಗೆ ಟೈಫಾಯ್ಡ್ ಜ್ವರ ಬಂದಿದ್ದಾಗ ಕಡುವಿನ ಸರ ಹಾಕ್ತಿನಿ ಅಂತ ಹರಸ್ಕೊಂಡಿದ್ದೆನಲ್ಲ...?'

ಪಾಪ! ಆ 'ಮಿನಿ' ಮೋದಕಗಳ ಮಾಲೆ ಧರಿಸಬೇಕಾದ ದುಃಸ್ಥಿತಿಗಾಗಿ ಗಣೇಶನ ಬಗೆಗೆ ಪೂರ್ಣ ಅನುತಾಪವೆನಿಸಿತು!

ಅಂದ ಹಾಗೆ, ಇತ್ತೀಚೆಗೆ ಮೈಲಾರಯ್ಯ ದಿನದಿನಕ್ಕೆ ಸಣ್ಣಗಾಗುತ್ತಿರುವುದನ್ನು ಗಮನಿಸುತ್ತಿದ್ದೀರಲ್ಲವೇ? ಆತನಿಗೇನಾದರೂ ರೋಗ ಬಡಿದಿದ್ದೀತು, ಆದ್ದರಿಂದಲೇ ಹೀಗೆ ಕ್ಷಾಮ ದೇವತೆಯಂತಾಗುತ್ತಿದ್ದಾನೆ ಎಂದು ನೀವು ಮರುಗಿರಬಹುದು! ಮರುಗದಿರಿ. ಕೊರಗದಿರಿ...! ನಿಜ ಸಂಗತಿಯೆಂದರೆ ಕಳೆದ ವರ್ಷ ಅವನು ಕಾಮಾಲೆಯಾಗಿ ಮಲಗಿ ಬೇರೊಂದು ಲೋಕದ ಬಾಗಿಲಿಗೆ ಹೋಗಿ ನಿಂತಿದ್ದಾಗ, 'ಇವರಿಗೆ ಗುಣ ಮಾಡು ಸ್ವಾಮೀ! ಇವರ ತೂಕ ಬೆಲ್ಲ ನಿನಗೆ ಸಲ್ಲಿಸುತ್ತೇನೆ' ಎಂದು ಎಲ್ಲರ ವ್ಯಾಧಿಯ ನಂಜನ್ನೂ ಉಣ್ಣುವ ನಂಜುಂಡೇಶ್ವರನಿಗೆ ಹರಕೆ ಮುಡಿಪು ಕಟ್ಟಿಟ್ಟಿದ್ದಳು, ಮೈಲಾರಯ್ಯನ ಅರ್ಧಾಂಗಿ ಸರಸು. ಆತನೇನೋ ಮರ್ತ್ಯಲೋಕಕ್ಕೆ ಹಿಂದಿರುಗಿದ. ಆದರೆ ಬೆಲ್ಲದ ಬೆಲೆ

ಗಗನಕ್ಕೇರಿರುವುದರಿಂದ, ತುಲಾಭಾರಕ್ಕಾಗಿ ಮೈಲಾರಯ್ಯನ ಮೈಭಾರವನ್ನು ಕನಿಷ್ಠಕ್ಕೆ ಇಳಿಸುವ ದೃಷ್ಟಿಯಿಂದ ಸರಸು ಆತನನ್ನು ಕಟ್ಟುನಿಟ್ಟಿನ 'ಡಯಟ್ಟಿನಲ್ಲಿರಿಸಿದ್ದಾಳಷ್ಟೇ!

"ಅತಿ-ಮಿತಿ' ಎನ್ನುವಂತೆ ಮಿತಿಯೊಳಗಿನ ಆಸೆ ಆರೋಗ್ಯಕರ, ಮಿತಿ ಮೀರಿದಾಗ 'ಅತಿ ಆಸೆ ಗತಿಗೇಡು' ಆಗುತ್ತದೆ. ಅತಿ ಆಸೆಯ ಮೂಲ, ಹಣ. ಕಷ್ಟ ಪಡದೆ ಶರೀರ ಶ್ರಮವಿಲ್ಲದೆ ಧನ ಸಂಪಾದನೆ ಮಾಡುವ ಚಪಲ ಅನೇಕರಿಗುಂಟು. 'ಅಶ್ವಮೇಧ ಯಾಗ!' ನಡೆಸುವವರು ಈ ಗುಂಪಿಗೆ ಸೇರಿದವರು. ತಲೆಮಾರಿನಿಂದ ಕೂಡಿಟ್ಟ ಹಣವಾಗಬಹುದು ಅಥವಾ ತನ್ನ ದುಡಿತದ ವರಮಾನವೇ ಇರಬಹುದು. ಅಂತೂ ಇವರು ರೇಸ್ ಸೀಸನ್ ಪ್ರಾರಂಭವಾಯಿತೆಂದರೆ ಬೇರೊಂದು ಪ್ರಪಂಚದಲ್ಲೇ ವಿಹರಿಸುತ್ತಾರೆ. ಅದೃಷ್ಟ ಲಕ್ಷ್ಮಿ ಅಕಸ್ಮಾತ್ ಒಲಿದು, ತಾವು ಹಾಕಿದ ಹಣದ ಹತ್ತಾರು,



ನೂರಾರು ಪಾಲು ಪ್ರತಿಫಲ ಸಿಕ್ಕಿದಾಗ ಸುಮ್ಮನೇ ಕೂಡುವವರೇ ಈ ಮಂದಿ? ವಿಷವ್ಯೂಹದಂತೆ ತಿರುಗುತ್ತದಲ್ಲ ಆ ಆಸೆಯ ಚಕ್ರ? ಮತ್ತೆ ಆ ಹಣವನ್ನು ಮುಂದಿನ ಕುದುರೆಯ ಬಾಲಕ್ಕೆ ಕಟ್ಟಿ ಕೈ ತೊಳೆದು ಕೂಡುವ ಜಾಯಮಾನ ಅವರದು!

ಮಗ್ಗುಲ ಮನೆ ಮಾಧವರಾಯ ಆದರ್ಶಪ್ರಿಯ, ಸಮತಾವಾದಿ. ಆದ್ದರಿಂದಲೇ ಅಜ್ಜಮುತ್ತಜ್ಜಂದಿರು ಗಳಿಸಿಟ್ಟಿದ್ದ ಇಡಿಗಂಟನ್ನು, 'ಅಶ್ವಸೇವೆ' ಮೂಲಕ ಸಾಕಷ್ಟು ಕರಗಿಸಿ, ಸಮತಾವಾದ ತತ್ವ ಪರಿಪಾಲನೆ ಮಾಡಿದ್ದು! ಸಕ್ಕರೆ ರೋಗದಿಂದ 'ಕೋಮ' ಹಿಡಿದು, ಮಗ ಬೆಂಕಿ ಹಿಡಿದು ಹೊರಡುವ ಪ್ರಸಂಗ ತೀರ ಹತ್ತಿರ ಬಂದಾಗ ಸಹ, ಬಿಗಿ ಮುಷ್ಟಿಯಲ್ಲಿ ರೇಸಿನ ಪುಸ್ತಕ ಹಿಡಿದಿದ್ದ ಆತ 'ಸಕ್ಕರೆ ಗೊಂಬೆ! ಶುಗರ್ ಡಾಲ್! ಕಮಾನ್ ಕಮಾನ್!' ಎಂದು ಹರಿನಾಮ ಸ್ಮರಣೆ ಬದಲು ಹಯಸ್ಮರಣೆ ಮಾಡುತ್ತಲೇ ನಾಲಿಗೆ ಮೇಲೆ ಗಂಗಾಜಲ ಸುರಿಸಿಕೊಂಡು ಕಡೆಯುಸಿರೆಳೆದದ್ದು!

ಎಲೆ ಹಂಚುವವರ ಹಣೆಬರಹವೂ ಇಂತಹುದೇ...! (ಎಲೆ ಎಂದರೆ ವಿಳ್ಳೇದೆಲೆ ಎಂದುಕೊಂಡಿರಾ ಅಥವಾ ಊಟದೆಲೆ ಅಂದುಕೊಂಡಿರಾ? ಐವತ್ತೆರಡು ಕಾರ್ಡುಗಳು! ಅದರ ಜೋಕರು, ರಾಜರಾಣಿಯರು, ಗುಲಾಮರ ಒಡನಾಟ, 'ವಜ್ರ', 'ಹೃದಯ', 'ಕಳಾವರು', 'ಸಲಿಕೆ'ಗಳೊಂದಿಗೆ ಸೆಣಸಾಣ. ಪೈಸೆಗಳ ಪಣವೊಡ್ಡಿ ರೂಪಾಯಿಗಳಾಗಿ ಮಾರ್ಪಡಿಸಿಕೊಳ್ಳುವ ಆಸೆ(ದುರಾಸೆ!). ಪಾನೀಯದ ಮತ್ತಿನಂತೆ, ಆಡಿದಷ್ಟೂ ಮತ್ತಷ್ಟು ಆಡುವ, ಅದೃಷ್ಟ ಪರೀಕ್ಷೆ ಮಾಡುವ ಹುಚ್ಚು ಕಾಲ ಸರಿದದ್ದು ತಿಳಿಯದೆ ಜೇಬು- ಪರ್ಸು-ಕೈ ಸಹ ಖಾಲಿಯಾಗುವವರೆಗೆ ತಿಳಿಯಾಗದ ಹುಚ್ಚು!

ನಗರದ ನಂಟನ ಮನೆಗೆ ಹೋಗಿದ್ದ ಗಾಂಪ ಶಿಷ್ಯನನ್ನು ಅವನ ಅತಿಥೇಯ ಅದೆಲ್ಲಿಗೋ ಕರೆದುಕೊಂಡು ಹೋದ. ದೊಡ್ಡ ಕಟ್ಟಡ, ಸುಂದರ ಹೂದೋಟ, ಬಣ್ಣಬಣ್ಣದ ನೀರು ಚಿಮ್ಮುವ ಕಾರಂಜಿ, ಮಿರುಮಿರುಗುವ ನೆಲ, ಕಾಲಿಟ್ಟರೆ ಹೂತು ಹೋಗುವ ಜಮಖಾನೆಗಳು, ದೀಪದ ಗೊಂಚಲುಗಳು, ಕಂಭಗಳಿಗಂಟಿದ್ದ ಕೊಳವೇ ದೀಪ, ಮೆತ್ತೆ ಕುರ್ಚಿಗಳು ಮಂಚದುದ್ದದ ಆರಾಮಾಸನಗಳು!

'ಇದಾವುದೋ ಮಾಜೀ ಮಹಾರಾಜನ ಅರಮನೆ ಇರಬೇಕು!' ಎಂದು ಅವನು ಅಂದುಕೊಳ್ಳುತ್ತಿರುವಾಗಲೇ, ಪಕ್ಕದ ಕೊಠಡಿಯ ಮುಚ್ಚಿದ ಬಾಗಿಲ ಹಿಂದಿನಿಂದ 'ಮುಳುಗಿದೆ..! ಸತ್ತೇ...! ಖನಿ...! ಕೊಲೆ...!' ಎಂದು ಆರ್ತನಾದ ಬಂದಾಗ ಯಾವ ಖಳನಿಂದ ಯಾವ ರಾಜಕುಮಾರನಿಗೇನು ಆಪತ್ತು ಬಂತೋ ಎಂದು ಗಾಬರಿಗೊಂಡ ಗಾಂಪ ಶಿಷ್ಯ ಬಿಳಿಶಿಲೆಯ ನಳಿನಾಕ್ಷಿಯ ಕೊರಳಿಗೆ ನೇತು ಹಾಕಿದ್ದ ಫೋನೆತ್ತಿ, 'ಹಲೋ! ಹಲೋ! ಪೊಲೀಸ್! ಇಲ್ಲಿ ಖನಿ ಆಗಿದೆ. ಈಗಲೇ ಬನ್ನಿ!' ಎಂದು ಕೂಗಿಯೇ ಬಿಟ್ಟ! ಅತಿಥೇಯ ಮಹಾಶಯ ಅವನ ಕೈನಿಂದ ಫೋನ್ ಕಿತ್ತಿರಿಸಿ ವಿವರಿಸಿದ... ಅಲ್ಲಾವ ಖನಿ, ಕೊಲೆಯೂ ನಡೆದಿಲ್ಲವೆಂದೂ, ಅದು ಕ್ಲಬ್ಬೆಂದೂ, ಇಸ್ಪೀಟಾಟ ಆಡುತ್ತಿರುವ ಆ ಕ್ಲಬ್ಬಿನ ಸದಸ್ಯನೊಬ್ಬ, ಸೋಲುವ ಪರಿಸ್ಥಿತಿ ಬಂದಾಗ ಬಳಸಿದ ಭಾಷೆ ಅದು ಎಂದು! (ಪುಣ್ಯಕ್ಕೆ ಗಾಂಪ ಶಿಷ್ಯ 'ಡಯಲ್' ಮಾಡದೇ ರಿಸೀವರನ ಬಾಯೊಳಕ್ಕೆ ಕಿರುಚಿದ್ದ).



'ಪಗಡೆಯಾಡಿ ಪಾಂಡವರು ಕೆಟ್ಟರು.. ಜೂಜಾಡಿ ನಳಮಹಾರಾಜ ನತದೃಷ್ಟನಾದ ಎಂದೆಲ್ಲ ಕೇಳಿರುವುದುಂಟು! 'ಮುಟ್ಟಿದ್ದೆಲ್ಲ ಚಿನ್ನವಾಗಲಿ' ಎಂದು ವರ ಪಡೆದ ಮೈದಾಸ, ಊಟ ಸಹ ಚಿನ್ನವಾದಾಗ ಹೊಟ್ಟೆಗಿಲ್ಲದೇ ನರಳಿ ಅತಿಯಾಸೆ ಪಡಬಾರದೆಂದು ಬುದ್ಧಿ ಕಲಿತನೆಂದೂ, ಮಿಡಲ್ ಸ್ಕೂಲ್ ಮಟ್ಟದಲ್ಲಿ ಓದಿರುವುದುಂಟು! ಆದರೆ, ಆ ನೀತಿ, ಪುರಾಣ-ಪಠ್ಯಪುಸ್ತಕಕ್ಕೆ ಮಾತ್ರ ಮೀಸಲು!

ಒಂದು ರೀತಿಯ ಜೂಜಾಡುವ ಮನೋಭಾವವನ್ನು ಈಚೆಗೆ ನಮ್ಮ ಘನಸರಕಾರಗಳೇ ಬೆಳೆಸಿಕೊಟ್ಟಿವೆ. 'ಲಾಟರಿ' ಎನ್ನುವ ಆಸೆಯ ಬಲೆಯೊಡ್ಡಿ ಬಡವ- ಬಲ್ಲಿದ, ಹುಡುಗ-ಮುದುಕ, ಹೆಣ್ಣು-ಗಂಡು ಎಲ್ಲರನ್ನೂ ಅದರ ವ್ಯೂಹದೊಳಗೆ ಸಿಕ್ಕಿಸಿ ಬಿಟ್ಟಿವೆ. 'ಈ ತಿಂಗಳಿಲ್ಲದಿದ್ದರೆ ಮುಂದಿನ ತಿಂಗಳೇಕೆ ಬರಬಾರದು...?', 'ಬಂಪರ್ ಬಹುಮಾನವೇ ಬಂದೀತು ಈ ಸಲದ "ಡ್ರಾನಲ್ಲಿ...', 'ಏನು ಮಹಾ! ಒಂದೋ, ಎರಡೋ ರೂಪಾಯಿ ತಾನೇ ನಾವು ಹಾಕುವುದು...?' ಹೀಗೆ ಅಂದುಕೊಳ್ಳುತ್ತ ಭಾರೀ ಮೊತ್ತ ಒಂದೇ ಬಾರಿ ಗಿಟ್ಟಿಸುವ ಕನಸಿನ ಗೋಪುರ ಕಟ್ಟಿಕೊಂಡು ಎಲ್ಲರೂ ಎಷ್ಟೋ ನೂರುಗಳನ್ನು ಕಳೆದದ್ದಾಗಿದೆ! 'ಛಾನ್ಸೆಸ್' ಹೆಚ್ಚಾಗುತ್ತದೆಂದು ಒಂದೊಂದು 'ಸೀರೀಸ್'ನಲ್ಲೂ

ಟಿಕೆಟ್‌ಗಳ ಮಾಲೆಯನ್ನೇ ಕೊಂಡವರು, ಕೊಳ್ಳುವವರೂ ಇದ್ದಾರೆ... ಅಕಸ್ಮಾತ್ ಲಕ್ಷ್ಮೀಕಟಾಕ್ಷಕ್ಕೆ ಪಾತ್ರರಾದ ಅಲ್ಪಸಂಖ್ಯಾತರು ದಿಢೀರ್ ಶ್ರೀಮಂತರಾಗಿಯೂ ಇದ್ದಾರೆನ್ನಿ!

ಆಶಾವಾದದ ಇನ್ನೊಂದು ರಂಗ ರಾಜಕೀಯ. ಇಂದಿನ ಪ್ರಜಾರಾಜ್ಯದಲ್ಲಿ ಎಲ್ಲರಿಗೂ ಆ ರಂಗದ ಮೇಲೆ ಕಣ್ಣು! ಸಣ್ಣಗೆ ಪುಟ್ಟಗೆ ಸಂಘಸಂಸ್ಥೆಗಳಲ್ಲಿ ಪ್ರವೇಶಿಸಿ, ಕ್ರಮೇಣ ಕಾರ್ಯದರ್ಶಿ-ಉಪಾಧ್ಯಕ್ಷ-ಅಧ್ಯಕ್ಷ ಪದವಿಗಳ ಹಂತವೇರಿ, ಪಂಚಾಯಿತಿ- ಹೋಬಳಿ-ತಾಲ್ಲೂಕುಗಳ ಮಟ್ಟದಲ್ಲಿ ಪ್ರತಿಷ್ಠೆ ಗಳಿಸಿ, ಚುನಾವಣೆಯ ಅಖಾಡಕ್ಕಿಳಿಯುತ್ತಾರೆ. ಜಟ್ಟಿ ಜಯಿಸಬಹುದು, ಸೋತು ಮಣ್ಣು ಮುಕ್ಕಬಹುದು! ಗೆದ್ದು ಮಂತ್ರಿಯೇ ಆಗಬಹುದು. ಸೋತು, 'ಬಸವನ ಹಿಂದೆ ಬಾಲ'ವಾಗಿ ಮಂತ್ರಿಯ ಚೇಲ, ಛತ್ರಿ, ಚಾಳೀಸ ಹೊರುವ ಕಂತ್ರಿಯೇ ಆಗಬಹುದು...!

ಮಿತಿಯೊಳಗಿನ ಆಶಾವಾದಕ್ಕೆ ಎಂದೂ ಸ್ವಾಗತ. ಅದರಿಂದ ಹಾನಿಯಂತೂ ಆಗುವುದಿಲ್ಲ. ಮಗ ಬಲಿಷ್ಠನಾಗಿ ಬೆಳೆದು ದಾರಾಸಿಂಗನ ಮರಿಯಾಗಲಿ ಎನ್ನುವ ಆಶೆಯಿಂದ 'ದಾರಾನಾಥ್' ಎಂದು ಹೆಸರಿಡುತ್ತಾರೆ. ಅವನು ಬೆದರುಬೊಂಬೆಯಂತಾಗಿ ಹೆಜ್ಜೆ ಹೆಜ್ಜೆಗೂ ಚುಚ್ಚುಮದ್ದು ಹಾಕಿಸಿಕೊಂಡು ಬೆಳೆದು 'ಸೂಜಿನಾಥ್'ನೇ ಆಗಬಹುದು! ಆದ ನಷ್ಟವೇನು? ಟಾನಿಕ್ಕು, ಗುಳಿಗೆ, ಔಷಧ, ವೈದ್ಯಶುಲ್ಕಕ್ಕೆ ಅವನ ತಂದೆತಾಯಿಗಷ್ಟು ಖರ್ಚು ಅಷ್ಟೇ!

ನೆರೆಮನೆ ನಾಗೂಬಾಯಿ, ಸುರಸುಂದರಿಯಾಗಲೆಂದು ಇಪ್ಪತ್ತೈದು ವರ್ಷಗಳ ಕೆಳಗೆ ಚಂದ್ರಮುಖಿ ಎಂದು ಕರೆದರು ಅದೇ ಭುವಿಗಿಳಿದು ಬಂದ ಅವರ ಮಗುವನ್ನು. ಚಂದ್ರನ ಇತ್ತೀಚಿನ ನಿಜ ಸ್ವರೂಪವನ್ನು ಬಯಲಿಗೆಳೆದ ವಿಜ್ಞಾನಿಗಳ ಸಾಧನೆಯನ್ನವಳು



ಸಾರ್ಥಕಗೊಳಿಸಿದ್ದಾಳೆ...! ವಿಪರೀತ ಮೊಡವೆ ಎದ್ದು ಮುಖದ ತುಂಬ ಹಳ್ಳತಿಟ್ಟುಗಳು ಮೂಡಿವೆಯಲ್ಲ!

ಅಂದ ಹಾಗೆ ಚಂದ್ರಮುಖಿಗೆ ಡಾಕ್ಟರನ್ನೇ ಮದುವೆಯಾಗುವ ಆಶೆ, ಅಂತೆಯೇ ಹಠ ಹಿಡಿದಿದ್ದಳು ಕೂಡ! ಕಳೆದ ವಾರ ಮದುವೆಯಾಯಿತು-ಡಾಕ್ಟರ ಸಮೀಪವರ್ತಿ 'ಕಾಂಪೌಂಡರ್' ಕಪನೀಪತಿಯೊಂದಿಗೆ!

ನಮ್ಮ ಅಂಬಕ್ಕನ ಮಗ ಗೊತ್ತುಂಟಲ್ಲ, ಅರ್ಜುನ? ಬಿಲ್ಲುವಿದ್ಯೆಯಲ್ಲಿ ಅವನೆಂತಹ ತಜ್ಞನಾಗಿದ್ದಾನೆ, ನಿಮಗೆ ಗೊತ್ತೇ? ಹೆಸರಾಂತ 'ಬಾಣದ ಮಾರ್ಕ್' ಸಿಗರೇಟ್ ಕಂಪೆನಿಯಲ್ಲಿ ಅವನು 'ಬಿಲ್ ರೈಟರ್' ಆಗಿದ್ದಾನೆ. ತಮ್ಮಂದಿರಾದ ಅಶೋಕ್ ಕುಮಾರ್, ದಿಲೀಪ್ ಕುಮಾರರು ಸ್ಥಳೀಯ ಸಿನಿಮಾ ಥಿಯೇಟರಿನಲ್ಲಿ 'ಅಟೆಂಡರ್'

ಆಗಿದ್ದಾರೆ...!

ಮರೆತೆ, ತಮಟೂರು ತಂಗಮ್ಮನ ಮಗಳು ಹುಟ್ಟಿದಾಗ ಇಟ್ಟಿದ್ದದ್ದು ಅವಳ ಅಜ್ಜಿಯ ಹೆಸರು-ಸುಬ್ಬಲಕ್ಷ್ಮಿ ಎಂದು. ತಂಗಮ್ಮನನ್ನು ಅವರ ಯಜಮಾನರು ಮುದ್ದಿನಿಂದ ಕೂಗುತ್ತಿದ್ದುದು, ಕೋಕಿಲ, ಕೋಕಿಲವಾಣಿ! ಈಗ ಅವಳಿಗೆ ಡಬ್ಬಲ್ ಗೊಗ್ಗರ ಧ್ವನಿ ಹೊರಡುತ್ತಿದ್ದುದರಿಂದ, ಗಂಟಲು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಿದ್ದಾರಂತೆ!

ಹಿಂದಿನ ಕಾಲದಲ್ಲಿ ಒಂದು ಪದ್ಧತಿ ಇತ್ತು. ಉದ್ಯೋಗ ಹಿಡಿಯಲಾರದೆ ಹೋದಾಗ, ಹೆಂಡತಿ ಮಕ್ಕಳನ್ನು ಸಾಕಲಾರದಾದಾಗ ಅಥವಾ ಆಸ್ತಿಪಾಸ್ತಿ ನಷ್ಟ ಹೊಂದಿ ಬೇಸರವಾದಾಗ, 'ದೇಶಾಂತರ ಹೋಗಿ ಬಿಡುವುದು...! ಇದನ್ನು ಹೇಡಿತನವೆಂದಾದರೂ ಅನ್ನಿ, ಸಮಸ್ಯೆಗೆ ಸುಲಭ ಪರಿಹಾರವೆಂದಾದರೂ ಅನ್ನಿ...! ಅಂತಹವರ ಹೆಂಡತಿಯರು ನಿಜವಾದ ಆಶಾವಾದಿಗಳು. ಎಂದೋ ಒಂದು ದಿನ ಗಂಡ ಹಿಂದಿರುಗುತ್ತಾನೆಂದು ನಿರೀಕ್ಷಿಸುತ್ತಲೇ ಇರುತ್ತಿದ್ದರು...! ನಮ್ಮೂರ ಗಂಗಮ್ಮ ಎಂಭತ್ತೈದು ವಯಸ್ಸಿನ ತುಂಬು ದಿನದಲ್ಲಿ ಮೊನ್ನೆ ಮೊನ್ನೆ ನಿಧನರಾದರು. ಊರಿಗೆ ಬಂದ ಸಾಧುಸಂತರನ್ನೆಲ್ಲ ತನ್ನ ಗಂಡ ಅವರಲ್ಲೊಬ್ಬನಿದ್ದಾನೇನೋ ಎಂದು ಪರೀಕ್ಷಿಸುತ್ತಾ, ಕಾಶೀ-ಪ್ರಯಾಗ-ಗಯಗಳಿಗೆ ಹೋಗಿ ಬಂದವರನ್ನು ಕಂಡಿರಾ...? ಎನ್ನ ಗಂಡನ್ನ ಕಂಡಿರಾ...!?' ಎಂದು ಪ್ರಶ್ನಿಸುತ್ತ, ಆಶಾವಾದಿಯಾಗಿದ್ದುದರಿಂದಲೇ ಈ ಸುಮಂಗಲಿ ದೀರ್ಘಾಯುವಾದದ್ದು!

ರಷ್ಯಾದ ಬ್ಯಾಲೆ ನೃತ್ಯ'ವೆಂದರೆ ಕಾಲ ಹೆಬ್ಬೆರಳ ಆಧಾರದ ಮೇಲೆ ಗಿರಿಗಿಟ್ಟೆ ಆಡಬೇಕಾದಂತಹುದು! ಪ್ರಸಿದ್ಧ 'ಬ್ಯಾಲೆ' ನೃತ್ಯತಾರೆಯೊಬ್ಬಳಿಗೆ ಇತ್ತೀಚೆಗೆ ಕಾಲಿನ ನರಗಳ ಪಾರ್ಶ್ವವಾಯು ಬಡಿದಾಗ, ವೈದ್ಯರು ಅವಳು ಗುಣ ಹೊಂದುವ ಆಶೆ ತೋರಿಸಲಿಲ್ಲ. ಆದರೆ ಆಕೆಯ ಆಶಾವಾದ ಅವಳ ಮನೋಧಾರ್ಢ್ಯ ಅವಳನ್ನು ಮೊದಲಿನಂತೆ ಮಾಡಿದೆ. ಅವಳೀಗ ಯಥಾಪ್ರಕಾರ ನೃತ್ಯ ಮಾಡುತ್ತಿದ್ದಾಳಂತೆ!

ನಮ್ಮ ಸಂಪಂಗೀ ದಂಪತಿಗಳೂ ಆಶಾವಾದಿಗಳೇ! ಇಬ್ಬರೂ ಗಿಡ್ಡಿಗೆ ಅಡ್ಡಡ್ಡಕ್ಕೆ ಇರುವುದರಿಂದ, ಮಕ್ಕಳೂ, 'ಲಿಲಿಪುಟ್'ಗಳಾಗಿ ಹುಟ್ಟಿದ್ದಾರೆ. 'ಇಂಜಕ್ಷನ್ ಕೊಡಿಸಿದರೆ ಎತ್ತರ ಬೆಳೆಯುತ್ತಾರೆ' ಎಂದು ಯಾರೋ ತಜ್ಞರು ಆಶ್ವಾಸನೆ ನೀಡಿದರಂತೆ! ಅದರಂತೆಯೇ ಪ್ರತಿಯೊಬ್ಬ ಮಕ್ಕಳಿಗೂ ಹನ್ನೆರಡನೆಯ ವಯಸ್ಸಿನಲ್ಲಿ ಮೊಣಕಾಲಿಗೆ ಮೂರು ಬಾರಿ ಚುಚ್ಚಿಸಿ, ಮೂರು ತಾಸು ವ್ಯಾಯಾಮ ಮಾಡಿಸುತ್ತಾರೆ. ಪ್ರತಿಫಲ ಈವರೆಗೆ ನಾಲ್ಕು

ಸೆಂಟಿಮೀಟರಿನಷ್ಟೂ ಕಂಡಿಲ್ಲವಾದರೂ, ತೆಂಗಿನ ಮರ ನೋಡಿದಾಗ ತಮ್ಮ ಸಂತಾನವನ್ನು ನೆನೆಸಿಕೊಳ್ಳುವುದು ಬಿಟ್ಟಿಲ್ಲ, ಸಂಪಂಗಿ ದಂಪತಿಗಳು!

ಪ್ರಕಟಣೆಯೊಂದು ಹೀಗಿತ್ತು... 'ಆಶೆ ಇಲ್ಲದ ಮನುಷ್ಯ ಕೆಲಸಕ್ಕೆ ಬೇಕಾಗಿದೆ! ನೂರಾರು ಅಭ್ಯರ್ಥಿಗಳು ಬಂದಾಗ, ಸಂದರ್ಶಿಸಿದ ಸಾಹೇಬ 'ನಿಮಗಾರಿಗೂ ಕೆಲಸ ಕೊಡುವುದಿಲ್ಲ. ಸಂಬಳದ ಆಸೆ ಇದ್ದುದರಿಂದಲೇ ಅಲ್ಲವೇ ನೀವು ಬಂದಿರುವುದು?' ಎಂದನಂತೆ! ಅವನೆಲ್ಲೋ ತುಘಲಕನ ಸಾಕುಮಗನ ವಂಶದವನಿರಬೇಕು...!

ಪ್ರವಾಹದಿಂದ ಮನೆಯೊಂದು ಮುಳುಗಿದಾಗ, ತೋಟವೆಲ್ಲ ಕೊಚ್ಚಿ ಹೋದಾಗ ಜೀವ ಉಳಿಸಿಕೊಳ್ಳಲು ಆ ಮನೆಯ ಮಾಳಿಗೆಯ ಮೇಲೆ ಕೂತಿದ್ದ ಯಜಮಾನನಿಗೂ, ಹಾದಿಯಲ್ಲಿ ಹೋಗುತ್ತಿದ್ದ ಮತ್ತೊಬ್ಬ ಗ್ರಾಮವಾಸಿಗೂ ನಡೆದ ಸಂಭಾಷಣೆ ಹೀಗಿತ್ತು...

“ಪಾಪ..! ಕೋಳಿಗಳು ಕೊಚ್ಚಿ ಹೋದವಲ್ಲ ಕೆಂಪಣ್ಣ?'

“ಹೌದು...! ಆದರೆ ನನ್ನ ಹುಂಜಗಳಿಗೆ ಈಜು ಬರುತ್ತೆ!'

'ಭತ್ತದ ಫಸಲೂ ಹೋಯ್ತು!

'ಹೋಗಲಿ ಬಿಡು, ಈ ವರ್ಷದ ಬೆಳೆ ಅಷ್ಟರಲ್ಲೇ ಇತ್ತು!'

'ಅರೇ! ನದೀ ನೀರು ನಿನ್ನ ಕಿಟಕಿ ಮೇಲಕ್ಕೆ ಹೋಗಿಬಿಟ್ಟಿದೆಯಲ್ಲ!?

'ಒಳ್ಳೇದಾಯ್ತು! ಹೇಗೂ ಸುಣ್ಣ ಬಣ್ಣ ಮಾಡುವಾಗ ತೊಳೀಬೇಕಿತ್ತಲ್ಲ!'

ಆಶಾವಾದದ ಪರಮಾಧಿಯ ನಿದರ್ಶನ ಇದು!

ಮಡದಿಯ ಪೀಪಾಯಿ ಶರೀರ ಕರಗಿ 'ಬಡ ನಡು ಬಳುಕುವ ಲತಾಂಗಿಯಾಗುವಾಸೆ, ಮೇಲಧಿಕಾರಿಯ ಕೃಪಾದೃಷ್ಟಿ ಬಿದ್ದು ಥಟ್ಟನೆ ನಾಲ್ಕು ಮೆಟ್ಟಿಲು ಮೇಲೇರುವಾಸೆ, ಕಟ್ಟುವ ಚೀಟಿಯಲ್ಲಿ ಮೊದಲ ತಿಂಗಳೇ ಸೀರೆಯೋ ಸ್ಟೀಲ್ ಕೊಳಗವೋ ಗಿಟ್ಟುವಾಸೆ, ಪ್ರಕಟಿಸಿದ ಪುಸ್ತಕಕ್ಕೆ ಪ್ರಶಸ್ತಿ ಸಿಗುವಾಸೆ, ಏರುತ್ತಿರುವ ಬೆಲೆಗಳಿಳಿದು ಸುಭಿಕ್ಷವಾಗಿ 'ರಾಮ ರಾಜ್ಯ ಕಾಣುವಾಸೆ, ಮೂರು ರೂಪಾಯಿಗೇರುವ ಪೆಟ್ರೋಲ್ ಮತ್ತೆ ಒಂದೂವರೆಗಿಳಿದು, ಬಹುದಿನದ ನಮ್ಮ ಬಯಕೆಯಂತೆ ಮಗ ಕಾರಿಟ್ಟು ಕಬ್ಬನಬನ, ಬನಶಂಕರಮ್ಮನ ಗುಡಿ, ಹೆಸರುಘಟ್ಟದ ಕೆರೆ, ಭೋಗನಂದಿಯಣ್ಣನ ಬೆಟ್ಟ, ಶೃಂಗೇರಿ ಶಾರದಾಂಬೆಯ ಪಾದ.. ಏನೆಲ್ಲ ತೋರಿಸುವಾಸೆ!

ಅಂತೂ ಇಂತಹ ಆಸೆಗಳು ಆರೋಗ್ಯಕರ, ಚೇತೋಹಾರಿ ಸಹ! ನನ್ನದೊಂದು ಆಸೆ, 'ಈ ಲೇಖನ ಓದುಗರ ಮೆಚ್ಚುಗೆಗೆ ಪಾತ್ರವಾಗಬಾರದೇಕೆ?!

(ಕೃಪೆ, ಹರಟೆಗಳು, ವಿವಿಧ ಲೇಖಕಿಯರು, ಕನ್ನಡ ಸಾಹಿತ್ಯ ಪರಿಷತ್ತು, ೧೯೭೬)

## ೧. ಕಿಶೋರರು

**- ನಾಗಲಕ್ಷ್ಮಿ ಹರಿಹರೇಶ್ವರ**

ಕಿಶೋರರೆಂದರೆ ಥಟ್ಟನೆ ಮನಸ್ಸಿನಲ್ಲಿ ಮೂಡುವ ಚಿತ್ರವೆಂದರೆ ಹದಿವಯಸ್ಸಿನ ಹಮ್ಮಿರರು. ಬಾಲ್ಯ ಕಳೆದು, ಯೌವನ ಮೊಳೆಯುವ ನಡುವಣ ಹಸುಳೆಗಳದು. 'ಹದಿ'-ಮೂರರಿಂದ ಹಿಡಿದು 'ಹದಿನೆಂಟರವರೆಗೆ(ಭಾಷಾ ವಿಜ್ಞಾನಿಗಳು ಮನ್ನಿಸಿದರೆ, ಹತ್ತೊಂಬತ್ತರವರೆಗೂ) ಬಾಲನ ಪರ್ವಕಾಲವನ್ನು 'ಹದಿ'ವಯಸ್ಸು ಎನ್ನುತ್ತಾರೆ, ಟೀನ್ ಏಜ್ ಎಂಬ ಇಂಗ್ಲಿಷ್ ಪದಕ್ಕೆ ಸಂವಾದಿಯಾಗಿ, ಜೀವನದ ಈ ವಯಸ್ಸಿನಲ್ಲಿ ಒಂದು ಅಪೂರ್ವ ಸೊಗಸಿದೆ, ಮುಂದಿನದೆಲ್ಲದರ ವಿಶ್ಲೇಷಣೆಗೆ ಹೊರಟಾಗ ಮೂಲ ಇಲ್ಲಿ ಸಾಮಾನ್ಯವಾಗಿ ದೊರಕುತ್ತದೆ.

ಶೈಶವ ತಾನೇ ತಾನಾಗಿ ಕಳೆದು ಹೋಗುತ್ತದೆ. ತನ್ನನ್ನು ಸಾಕುವವರ ಬೆಂಗಾವಲಿನಲ್ಲಿ ಬೆಳೆಯುವುದರಿಂದ (ಬಾಲ್ಯದ ಅಂಚಿನವರೆಗೆ) ಹಕ್ಕಿ ಹಾರಾಡಿಕೊಂಡಿರುತ್ತದೆ. ಈ ಗಡಿ ದಾಟಿ ಕಿಶೋರಾವಸ್ಥೆಗೆ ಬಂದ ನಂತರವೇ ನೋಡಿ, ವಾತಾವರಣಕ್ಕೆ ವಿದ್ಯುದಾಘಾತವಾಗುತ್ತೆ, ಚಿಟ್ಟೆಯನ್ನು ನೋಡಿದವರಾರೂ ಅದು ಮೊದಲು ಕಂಬಳಿ ಹುಳು ಆಗಿತ್ತೆಂದು ನಂಬಲು ಸ್ವಲ್ಪ ಕಷ್ಟವೇ. ಈಗ ಪ್ರಾಥಮಿಕ ಹಂತದಿಂದಲೇ ವಿಜ್ಞಾನವನ್ನು ಕಲಿಯುತ್ತಿರುವ ನಮಗೆ ಈ ರೂಪ ಪರಿವರ್ತನೆಯ ವಿಚಾರ ಗೊತ್ತು. ಆದರೆ ಅಷ್ಟಾದಶ ವರ್ಣನೆಗಳನ್ನೂ ಮಾಡಿ ಸುಸ್ತಾಗದ ನಮ್ಮ

ಮಹಾಕವಿಗಳಿಗೆ ಇದು ತೋಚಿರಲಿಲ್ಲವೇನೋ. ಏಕೆನ್ನುವಿರಾ? ಈ ಎರಡು ಹಂತಗಳ ನಡುವಣ ಕೋಶಾವಸ್ಥೆ ಕಿಶೋರರ ಬಾಳಿಗೆ ಎಂಥ ಅನುಪಮ ಸಾದೃಶ್ಯ! ಯಾವ ರೂಪಕ ಸಾಮ್ರಾಟನೂ ಇದನ್ನು ಮನಗಾಣದೆ ಹೋದನಲ್ಲ!

'ಹದಿ' ಎಂದರೆ ಬುನಾದಿ, ತಳಗಟ್ಟು ಎಂಬರ್ಥವೂ ಇದೆ ನಿಜ. ವ್ಯಕ್ತಿಯ ಬಾಳಿನ ರೂಪರೇಷೆಗಳನ್ನು ನಿರ್ಣಾಯಕವಾಗಿ ವಿನ್ಯಸಿಸುವ, ಭದ್ರವಾಗಿ ನಿಲ್ಲಿಸುವ ನೆಲಗಟ್ಟಿನ ಕೆಲಸ ನಡೆವುದು ಈ ವರುಷಗಳಲ್ಲೇ. ಬಳ್ಳಿ ಬಲು ಎಳಸಾಗಿದ್ದಾಗ ಬಗ್ಗಿಸುವುದು ಅಪಾಯ. ಬಲಿತ ಮೇಲೆ ಅಸಾಧ್ಯ. ಮಧ್ಯದಲ್ಲಿ? ಪರಿಸರದ ಪ್ರಭಾವವೂ ಇದರಂತೆಯೇ. ಕಬ್ಬಿಣಕ್ಕೆ ಆಗ ಹದ ಬಂದಿರುತ್ತದೆ. ಸನ್ನಿವೇಶದ ಪ್ರಭಾವ, ಕಿಶೋರನ ಸ್ವಭಾವವನ್ನು ಅನಾಯಾಸವಾಗಿ ರೂಪಿಸಿ ಬಿಡುತ್ತದೆ. 'ಸಹವಾಸ ದೋಷ' ಈಗ ತುಂಬಾ ಚಲಾವಣೆಯಲ್ಲಿರುವ ನಾಣ್ಯ. ಕಿಶೋರಾವಸ್ಥೆಯಲ್ಲಿ ಒಡನಾಡಿಗಳು ಏನು ಪರಿಣಾಮ ಬೀರಿದರೆಂಬುದರ ಮೇಲೆ ಇದರ ಬೆಲೆ. ಪುಣ್ಯವಂತನಾಗಿದ್ದರೆ ಇದು 'ದೋಷ'ವಾಗದೇ 'ಗುಣ'ವಾಗಲೂಬಹುದು. ಕೈಲಾಸಂನ ಪೋಲಿ ಕಿಟ್ಟಿ, ಗುಬ್ಬಚ್ಚಿಯಾಗಿದ್ದ ತನ್ನ ಗೆಳೆಯ 'ಮನು'ವನ್ನು 'ಹುಲಿ'ಯನ್ನಾಗಿ ಮಾಡಿದ ಪರಿವರ್ತನೆ ಸಹವಾಸದ ಗುಣ.



ತಂದೆ-ತಾಯಿಗಳ, ಸಾಕುವವರ ಜವಾಬ್ದಾರಿ ಇಲ್ಲಿ ಗುರುತರವಾದುದು. ಎಂಥ ವಾತಾವರಣದ ಸುಳಿಯೊಳಗೆ ಈ ಹಸುಳೆಯನ್ನು ಸಿಲುಕಿಸಿದೆವು ಎಂಬ ಯೋಚನೆ ಮಾಡಬೇಕಾದದ್ದು ಅವರು. ಚಾರ್ಲ್ಸ್ ಡಿಕನ್ಸ್‌ನ 'ಡೇವಿಡ್ ಕಾಫರ್ ಫೀಲ್'ನಲ್ಲಿ ಆ ಬಾಲಕನ ಹೃದಯವಿದ್ರಾವಕ ಅನುಭವಗಳನ್ನು ಓದುತ್ತಾ, ಡಿಕನ್ಸ್‌ಸನ್‌ನನ್ನೇ ನಾವಲ್ಲಿ ಗುರುತಿಸುವಾಗ ಇದರ ಅರಿವಾದೀತು. ತನ್ನ ಹೊಣೆಯನ್ನು ಮರೆತು, ಸಾಲ ಮಾಡಿ ಸೆರೆಯಾದಾಗ ಜೀವನೋಪಾಯಕ್ಕಾಗಿ ಕೆಲಸಕ್ಕೆ ತೊಡಗಬೇಕಾಗುತ್ತದೆ ಈ ಬಾಲಕ. ಅಬ್ಬಾ! ಅವನೆಷ್ಟು ಕಷ್ಟಗಳ ಮೂಸೆಯಲ್ಲಿ ಬೆಂದು ಪುಟಗೊಳ್ಳಬೇಕಾಗುತ್ತದೆ. ಬೇಕ್ ಕೇಳಿದಂತೆ 'ಕುರಿಮರಿಯನ್ನು ಮಾಡಿದವನೇ, ಹುಲಿಯನ್ನೂ ಮಾಡಿದನೇ?' ಎಂದು ಕೇಳಿಕೊಳ್ಳಬೇಕಾಗುತ್ತದೆ. ಹೌದು! ಕಿಶೋರನ ಈ ರೇಖಾಚಿತ್ರ ಮೂಡುವುದು ತಂದೆ- ತಾಯಿಗಳ ನಡವಳಿಕೆಯಿಂದಲೇ.

“ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ! ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ! ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಹು ಮಾಡಿ ನೀವಿರಿಸಿದಿರಿ ಎಂದರು ಬಸವಣ್ಣನವರು. ಡಾಂಭಿಕತನದಿಂದ ತುಂಬಿದೆ

ಪ್ರಪಂಚ. ಕೆಂಪಗೆ ಮಿದುವಾಗಿ ಹೊರನೋಟಕ್ಕೆ ಮಾಟವಾಗಿರುವ ಅತ್ತಿಯ ಹಣ್ಣು ಹುರುಳಿಲ್ಲದ್ದು, ಹುಳುಗಳು ಇದ್ದರೂ ಇರಬಹುದು. ಇಂಥ ಪ್ರಪಂಚಕ್ಕೆ ಕಿಶೋರರನ್ನು ತಳ್ಳಿ ಈ ಅತ್ತಿಯ ಹಣ್ಣಿನ ರೂಹಾಗಿಸಿದರೆ ಏನು ಮಾಡಲಾದೀತು? 'ತುಡುಗಣಿಯೊಂದು ಹಿಡಿದು ಬಡಿಯದಂತೆ', ಬೈಯ್ಯದಂತೆ, ಈ ಪಶುವನ್ನು ವೃಷಭನನ್ನಾಗಿಸುವುದು ಗುರುವಿಗೆ ಮಿಗಿಲಾದ ಹೆತ್ತವರ ಹೊಣೆ.

'ಪರ್ಪಸ್'ನಲ್ಲಿನ ಏಕಲವ್ಯನ ಆಶೋತ್ತರಗಳಿಗೆ ಕಾರಣಳಾದವಳು ಬಹುಮಟ್ಟಿಗೆ ಅವನ ತಾಯಿ. ಪಕ್ಕದ ಕಾಡಿನಲ್ಲಿ ಪ್ರಾಣಿಗಳೆಲ್ಲ ಸ್ವಜಾತಿ ವೈರವನ್ನು ಬಿಟ್ಟು, ಹೊಂದಿಕೊಂಡು ಬಾಳುತ್ತಿವೆಯಂತೆ! ಅಲ್ಲಿ ಹುಲಿ-ಹುಲ್ಲೆಗಳ ಒಡನಾಟದ ಗುಟ್ಟೇನು? ಅಲ್ಲೊಂದು ಆಶ್ರಮವಿದೆ. ಅಲ್ಲಿನ ಸನ್ಯಾಸಿಯ ತಪಃಪ್ರಭಾವದಿಂದ ಈ ಜಾತಿ ವೈರ ಇಲ್ಲವಾಗಿದೆಯಂತೆ. ತಾನೂ ಏಕೆ ಹಾಗೆ ಮಾಡಬಾರದು? ಆರ್ಯನಿಗೆ ಸಹಜವಾದ ತಪಸ್ಸಿನ ಮಾರ್ಗಕ್ಕಿಂತ, ನಿಷಾಧನಿಗೆ ಸಹಜವಾದ ಚಾಪ ವಿದ್ಯೆಯ ಪರಿಣತಿಯ ಮಾರ್ಗವೇ ತನ್ನ ಗುರಿ ಸಾಧನೆಯ ಏಕೈಕ ಮಾರ್ಗ. ಜಗತ್ತಿನ ಎಲ್ಲ ಕಾಡುಗಳಲ್ಲಿನ ಎಲ್ಲ ದುಷ್ಟ ಮೃಗಗಳನ್ನೂ ನಿರ್ನಾಮ ಮಾಡಿ ಹಾಕುವುದೊಂದೇ ತನ್ನ ಬಿಲ್ಲುಗಾರಿಕೆ ಕಲಿಕೆಯ ಪರಮ ಉದ್ದೇಶ ಎಂದುಕೊಂಡ ಏಕಲವ್ಯ ಕಿಶೋರನಾಗಿದ್ದಾಗ ಅವನ ಮನದಾಳದಲ್ಲಿ ಈ ಬೀಜವನ್ನು ಅವನ ತಾಯಿ ಬಿತ್ತಿದುದರಿಂದಲೇ, ಏಕಲವ್ಯ ತನ್ನ ಅಭೂತಪೂರ್ವ ಸಾಹಸದಿಂದ ಚಿರಂಜೀವಿಯಾದ.

ಸಾಹಸವೆಂದೊಡೆ ಡೇನಿಯಲ್ ಡೆಮೋನ ರಾಬಿನ್‌ಸನ್ ಕ್ರೂಸೋ ಚಿತ್ತಭಿತ್ತಿಯ ಮೇಲೆ ಮೂಡಿಯಾನು. ಕ್ರೂಸೋ ಸಾಹಸ ಚಾತುರ್ಯಗಳು ಮೈವೆತ್ತ ಹಮ್ಮಿರ. ಸಮುದ್ರ ಪ್ರಯಾಣದ ನಡುವೆ ಹಡಗು ಒಡೆದು ಈ ಕಿಶೋರ ನಿರ್ಜನ ನಡುಗಡ್ಡೆಯೊಂದನ್ನು ಸೇರಿದ. ಅಲ್ಲಿ ಒಬ್ಬಂಟಿಗನಾಗಿ ಹೇಗೆ ಹಲವು ತಿಂಗಳುಗಳನ್ನು



ಕಳೆದ, ತೀಕ್ಷ್ಣಮತಿ, ಧೈರ್ಯ, ಸ್ವಸಾಮರ್ಥ್ಯದಿಂದ ಬಾಳಿದ - ಎಂಬುದರ ರೋಮಾಂಚಕಾರಿ ನಿರೂಪಣೆಯ ಕಾದಂಬರಿಯನ್ನು ಓದಿ ಮೆಚ್ಚದವರಾರು? ವಿಕ್ಟರ್ ಹೂಗೋವಿನ “ಟ್ಲಾರ್ಸ್ ಆಫ್ ದಿ ಸೀನ, ಗಿಲಿಯಟ್' ಸಮುದ್ರದ ದೈತ್ಯ ಅಷ್ಟಪದಿ(ಆಕ್ಟೋಪಸ್)ಯೊಂದಿಗೆ ಸೆಣಸಿ ಜಯಿಸಿದುದನ್ನು ಓದುವಾಗ ಮಿಂಚಿನ ಹೊಳೆ ಮೈಯಲ್ಲೆಲ್ಲ ಹರಿದಾಡುವುದು.

ಗೋಗ್ರಹಣದ ಪ್ರಸಂಗದಲ್ಲಿ, ಚಕ್ರವ್ಯೂಹ ಭೇದನದಲ್ಲಿ ಅಭಿಮನ್ಯುವಿನ ಶೌರ್ಯವನ್ನು ಮೆಚ್ಚಿ, ಅವನ ಸಾವಿಗೆ ಕಣ್ಣೀರು ಕರೆಯದವರಿಲ್ಲ. ಮರಿಸಿಂಹ ಬಬ್ರುವಾಹನನ ರಣೋತ್ಸಾಹ, ಕುಶಲವರ ಸ್ವಾಭಿಮಾನ ಪೂರಿತ ಆರ್ಭಟ, ಹೆಸರಾಂತ ಅತಿರಥ ಮಹಾರಥರನ್ನು ಮಣ್ಣು ಮುಕ್ಕಿಸಿದ ವೃತ್ತಾಂತ ನೆನಹಿನ ಬುತ್ತಿಯ ಸ್ವಾದಂಶಗಳಲ್ಲವೇ? ಸಾಹಸ ತರುಣರ, ತತ್ರಾಪಿ ಕಿಶೋರರ ಬಹು ಸಹಜವಾದ ವೈಶಿಷ್ಟ್ಯ. 'ಕಾ ಚಿಂತಾ ಮರಣೇ ರಣೇ' ಎನ್ನುವುದು ಉಸಿರಾಡಿದಷ್ಟು ಸಲೀಸು. 'ನಿನ್ನ ತಾಯಿ ಎರೆದಿರುವ ಹಾಲು ಬೆಣ್ಣೆಗಳ ಗುರುತು ಕೆನ್ನೆಗಳಿಂದ ಇನ್ನೂ ಅಳಿಸಿ

ಹೋಗಿಲ್ಲ! ಧೈರ್ಯವಿದ್ದರೆ ನಿಂತು ಯುದ್ಧ ಮಾಡು, ಇಲ್ಲವಾದರೆ ಕಾಲಿಗೆ ಬೀಳು. ಕ್ಷಮೆ ಬೇಡಿ ನಿನ್ನ ನರಿಮೋರೆಯನ್ನು ನನ್ನೆದುರಿನಿಂದ ತೊಲಗಿಸಿಕೊಂಡು ಹೋಗು' ಎಂದು ರುಸ್ತುಂ ಕೆಣಕಿದಾಗ ತಾನೇ ಸೊಹ್ರಾಬ್ ಕನಲಿ ವೀರಾಲಾಪ ಮಾಡಿ, ರುಸ್ತುಮನೊಡನೆ ಹೋರಾಡಿದುದು? ತಮ್ಮ 'ಮಾನ'ಕ್ಕೆ 'ಕೀರ್ತಿ'ಗೆ ಕಳಂಕ ತರಬಲ್ಲ ಎಂತಹುದೇ ಕ್ರಿಯೆಗೂ ಎದುರಿಸಿ ಸೆಣಸುವುದೊಂದೇ ಪ್ರತಿಕ್ರಿಯೆ ಇದರಲ್ಲಿ.

ತನ್ನನ್ನಾಗಲೀ ತನ್ನವರನ್ನಾಗಲೀ ಹೀನೈಸುವಂತಹುದು ಏನೇ ತಲೆದೋರಿದರೂ, ಅದೆಷ್ಟೇ ಸೂಕ್ಷ್ಮವಾಗಿರಲಿ ಅದನ್ನು ಎದುರಿಸುವ ಎದೆಗಾರಿಕೆ ಕಿಶೋರರಲ್ಲಿ ಮೇಲುನೋಟಕ್ಕೆ ಗುರುತಿಸಬಹುದಾದ ಹೆಗ್ಗಳಿಕೆ. ತಾನೇನು ಕಮ್ಮಿ ಎಂಬ ಮನೋಭಾವನೆ. ಈ ಮೇಲರಿಮೆ ಸ್ವಾಭಿಮಾನದ ಹೊನ್ನುಡಿಗೆ ತೊಟ್ಟು ದುಸ್ಸಾಧ್ಯವಾದುದನ್ನೆಲ್ಲ ಸಾಧಿಸಲು ಪ್ರೇರಕವಾಗಿರುವುದನ್ನು ಹಲವು ನಿದರ್ಶನಗಳಲ್ಲಿ ಮನಗಾಣುತ್ತೇವೆ. ಆದ್ಯ ಶಂಕರರು ವೇದ, ವೇದಾಂಗಗಳನ್ನು ಕರತಲಾಮಲಕ ಮಾಡಿಕೊಂಡು ಸನಾತನ ಧರ್ಮದ ಉಳಿವಿಗಾಗಿ ಹೋರಾಟ ಪ್ರಾರಂಭಿಸಿದುದು ಕಿಶೋರಾವಸ್ಥೆಯಲ್ಲೇ! ಗಣಿತಶಾಸ್ತ್ರದ ಸಿದ್ಧಾಂತಿಗಳನ್ನೆಲ್ಲ ಬೆರಗುಗೊಳಿಸಿದ ಮಹಾಮೇಧಾವಿ ರಾಮಾನುಜಂ ತಲೆಯಲ್ಲಿ ಗಣಿತಶಾಸ್ತ್ರದ ಬೀಜ ಹೆಮ್ಮರವಾದುದೂ ಕಿಶೋರನಾಗಿದ್ದಾಗಲೇ. ತಾರುಣ್ಯಕ್ಕೆ ಅಡಿಯಿಡುವ ಮೊದಲೇ ಉಡುತಡಿಯ ಮಹದೇವಿ ಅನುಭಾವ ಪಥದಲ್ಲಿ ಹಲವಾರು ಹರದಾರಿ ಸಾಗಿ ಹೋಗಿದ್ದಳೆನ್ನಲು ಅವಳ ವಚನಗಳೇ ಸಾಕ್ಷಿ.

ಇವರ ಸ್ವಾಭಿಮಾನದ ಕಿಚ್ಚನ್ನು ಸರಿದಿಸೆಯಲ್ಲಿ ಹರಿಸಿದಾಗ ಸಿದ್ಧಿಸಿದ ಮಹತ್ಕಾರ್ಯಗಳು ಅಪಾರ, ವಿಶ್ವದ ಕ್ರಾಂತಿಗಳಲ್ಲೆಲ್ಲ ಕಿಶೋರರದೇ ಸಿಂಹಪಾಲು. ಅಂದಿನ ಫ್ರಾನ್ಸಿನ ಕ್ರಾಂತಿ, ಮೊನ್ನೆಯ ಭಾರತದ ಸ್ವಾತಂತ್ರ್ಯ ಸಂಗ್ರಾಮ, ಇಂದಿನ



ಫಿಲಿಫೈನ್ಸ್‌ನಲ್ಲಿ ವಿದ್ಯಾರ್ಥಿ ಕ್ರಾಂತಿ, ಅಷ್ಟೇಕೆ ಬೂಸಾ ಕ್ರಾಂತಿ... ಹೀಗೆ ನಿದರ್ಶನಗಳು ವಿಪುಲ. ಯುವ ಜನಾಂಗದ ಶಕ್ತಿಯನ್ನು ಕ್ರೋಡೀಕರಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಬಳಸಿಕೊಳ್ಳುವುದು ಅಂದಿನಿಂದ ಇಂದಿನವರೆಗೂ ಪ್ರಚಲಿತವಾದ ರಾಜನೀತಿ, ನೆತ್ತರೋಕುಳಿಯಲ್ಲಿ ಮೇಲೆ ಚಿಮ್ಮುವವರಲ್ಲಿ ಕಿಶೋರರೇನೂ ಕಡಿಮೆಯಿಲ್ಲ.

ಹಾಗೆ ಹೇಳುವುದಾದರೆ ಕ್ರಾಂತಿ ಮೊಳಕೆಯೊಡೆಯುವುದೇ ಕಿಶೋರರ ಸಹನಾತೀತ ತಲೆಯಲ್ಲಿ. ಆರ್ಥಿಕ ಅಸಮಾನತೆಯೇ ಮೂಲ ಕಾರಣವಾಗಿ, ಸಮಾಜದ ವಿಭಿನ್ನ ಅಂಗಗಳ ಮಧ್ಯೆ ಕಂದರ ಕಂಡಾಗ, ಇವರ ಮನಸ್ಸು ರೋಸಿ ಹೋಗುತ್ತದೆ. ಈ ಕೊರಕಲಿಗೊಂದು ಸೇತುವಿನ ಯೋಚನೆ ಮೊಳೆಯುತ್ತದೆ. ಹುಚ್ಚು ಕುದುರೆಯಂತೆ ಮುನ್ನುಗ್ಗುವ ಪ್ರವೃತ್ತಿ ತಾನೇ ಇವರದು? (ನಿಜ, ಕಿಶೋರ ಎಂದರೆ ಮರಿಗುದುರೆ, ಪೋತ, ದಿ ಯಂಗ್ ಆಫ್ ದಿ ಎನಿ ಅನಿಮಲ್ ಎನ್ನುತ್ತಾನೆ ಕಿಟೆಲ್. ಅಮರವೂ ಅಷ್ಟೆ. 'ಬಾಲಃ ಕಿಶೋರೋ ವಾಮ್ಯಸ್ವಾ..' ಎನ್ನುತ್ತದೆ). ಸೇತು

ಸಾಧ್ಯವಾಗದೆ, ದಡ ಸರಿದು ಕೊಳ್ಳ ಹಿರಿದಾಗುತ್ತಲೇ ಹೋದಾಗ ಜ್ವಾಲಾಮುಖಿಯ ಸ್ಫೋಟವಾಗುತ್ತೆ. ಕ್ರಾಂತಿಯ ರಣಕಹಳೆ ಮೊಳಗುತ್ತೆ. ಈ ಲಾವಾದ ಕುದಿಯುದಕದಲ್ಲಿ ಕೆಟ್ಟದ್ದು ಒಳಿತು ಎಲ್ಲಾ ಬೆಂದು ಹೋದದ್ದೂ ಉಂಟು.

ಪರಂಪರಾಗತ ಮೌಲ್ಯಗಳನ್ನು ಪ್ರಶ್ನಿಸುವ ಕಿಶೋರರ ಉದ್ಧಟತನ ಹಲವು ಹಿರಿಯರಿಗೆ ನುಂಗಲಾರದ ತುಪ್ಪವಾಗಿರುವುದೂ ನಿಜವೇ. ಬದಲಾಗುತ್ತಿರುವ ಸಮಾಜದ ನದಿ ಹಲವು ಪಾತ್ರಗಳನ್ನು ಕಾಣುತ್ತಾ, ಮೊದಲಿದ್ದ ದಡದಿಂದ ಬಹು ದೂರ ಸಾಗಿ ಹರಿಯುವುದನ್ನೂ, ಅದರೊಂದಿಗೆ ಹರಿಯಲಾರದ ಹಿಂದಿನ ಪೀಳಿಗೆಯವರನ್ನು ಕಂಡರೆ ಕಿಶೋರರಿಗೆ ಹುಸಿನಗು, ತುಸುಕೋಪ, ಕೆಸಬಿಯಾಂಕನ ಗೋತ್ರದವರು ಎಲ್ಲೋ ಕೆಲವರು ಅಲ್ಲಲ್ಲಿ ಗೋಚರಿಸಬಹುದಾದರೂ, ಸಂಪ್ರದಾಯ ಶರಣತೆ ಇವರಿಗೆ ಮೈಗೊಗ್ಗದ ಅಲರ್ಜಿ, ಅರ್ಥವಿಲ್ಲದ ಕಂದಾಚಾರಕ್ಕೆ ಎಂದೂ ಸಲಾಮು ಹಾಕರು. ಅನುಕೂಲ ಸಿಂಧುವಾದ ನಡವಳಿಕೆಗಳಲ್ಲಿ ಇವರಿಗೆ ಪಾವಿತ್ರ್ಯವೇನೂ ತೋರದು. ಜಿಗಣೆ ಕಚ್ಚಿದ ಕುದುರೆಯಾಗಿ ಕಿಶೋರರು ಸಿದ್ಧಮೌಲ್ಯಗಳ ಕಡಿವಾಣ ಜಗ್ಗತೊಡಗಿರುವುದು, ಈ ದಿನಗಳ ಗಾಳಿಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ದಟ್ಟವಾಗಿ ಹಬ್ಬಿರುವುದೇ ಕಾರಣ.

ಬದಲಾವಣೆ ಎದ್ದು ಕಾಣುವುದು ಕಿಶೋರರ ಉಡುಗೆ-ತೊಡುಗೆಗಳಲ್ಲಿ, ನಂತರ ಕೇಶವಿನ್ಯಾಸಗಳಲ್ಲಿ. ಗಂಡು ಯಾರು, ಹೆಣ್ಣು ಯಾರು ಗುರುತಿಸಲಾಗದಷ್ಟು ಹೊರನೋಟದ ವಿಚಿತ್ರ ಸಾಮ್ಯದ ಬಗ್ಗೆ ಮೊನ್ನೆ ಒಬ್ಬರು ಉದ್ಧರಿಸಿದ್ದರು. ಅವರವರಿಗೆ ಹೆಣ್ಣು ಯಾರು, ಗಂಡು ಯಾರು ಎಂದು ಗೊತ್ತಿದ್ದರೆ ಸಾಕು, ಎಂದು! ಮೊದಮೊದಲ 'ಸೋಶಿಯಲ್' ಸಹವಾಸಪ್ರಿಯ ಆಗಿರುವ ಮಾತು ಬಂತು. ಇದು 'ಪರಮಿಸೀವ್‌ನೆಸ್' (ಅನುಮೋದನೆ)ಗೆ ದಾರಿ ಮಾಡಿಕೊಟ್ಟಿತು. ಸಮಾನತೆಯ ಗುಂಗು, ಭಂಗಿ ಓಡಿಸಿದಂತಾಗಿ ಸ್ವಚ್ಛಂದ ಪ್ರವೃತ್ತಿಯ ದಿಡ್ಡಿ ಬಾಗಿಲು ತೆರೆದು ಬಿಟ್ಟಿತು. ಹಿಪ್ಪಿ ಯುಗಕ್ಕೆ ಇವರ ಕಾಣಿಕೆಯೂ ಹುಂಡಿ ತುಂಬಿಸುವಷ್ಟೇ ಇದೆ.



ಸಾಹಚರ್ಯದ ಬಗ್ಗೆ ವಿವೇಚಿಸಿದಾಗ ಒಂದು ವಿಚಾರ ಗೋಚರಿಸುತ್ತದೆ. ಪೊರೆ ಕಳಚಿದ ಹಾವಾದ ಕಿಶೋರರಿಗೆ ಸ್ತ್ರೀ ಸಾನ್ನಿಧ್ಯ, ಕಿಶೋರಿಯರಿಗೆ ಪುರುಷ ಸಾನ್ನಿಧ್ಯ ನಿಗೂಢವಾದ ಒಂದು ಬಯಕೆ. ಅಕ್ಕರೆಯ ತಾಯಿ, ಅಕ್ಕ ಯಾ ಅತ್ತಿಗೆ ಮನೆಯಲ್ಲಿದ್ದರೆ ಕಿಶೋರನ ಈ ಸ್ತ್ರೀ ಸಾನ್ನಿಧ್ಯದ ದಾಹಕ್ಕೆ ಇನಿವಾಲು ಅಲ್ಲೇ ಸಿಕ್ಕಿ ಬಿಡುತ್ತೆ. ಅದಿಲ್ಲದಿದ್ದರೆ ಬಂತು ನೋಡಿ ಫಜೀತಿ! ಕಸಿನ್‌ಗಳು ಪ್ರತ್ಯಕ್ಷವಾಗುವುದು ಈಗಲೇ. ನೆಂಟರ ಇಷ್ಟರ ಮನೆಯ ಮೃದುಭಾಷಿಣಿ ಮಹಿಳೆಯರ ಮೆಚ್ಚುಗೆಯ ಹಂಬಲವೂ ಈ ದಿನಗಳದ್ದೇ. ಇಂಗ್ಲಿಷಿನಲ್ಲಿ, ಕಾಫ್ ಲೌವ್ ಎಂಬ ಪದ ಪ್ರಯೋಗವಿದೆ(ಕಾಫ್ ಲೌವ್=ಎ ಯೂಥ್ ಫುಲ್ ಟ್ರಾನ್ಸಿಟರಿ ಅಟ್ಯಾಚ್‌ಮೆಂಟ್ ಟು ಒನ್ ಆಫ್ ದ ಆಪೋಸಿಟ್ ಸೆಕ್ಸ್). ಕಾಮದ ಸೋಂಕು ಇಲ್ಲದ ಸಂಘ ಸುಖದ ಏನೋ ಅನಿರ್ವಚನೀಯತೆ ಇದರ ಹಿನ್ನೆಲೆ, 'ಮೇರಾ ನಾಂ ಜೋಕರ್'ನ

ನಾಯಕ ಕಿಶೋರನಾಗಿದ್ದಾಗ ತನ್ನ ಉಪಾಧ್ಯಾಯಿನಿಯನ್ನು ತುಂಬಾ ಹಚ್ಚಿಕೊಂಡಿದ್ದುದು ಸ್ತ್ರೀ ಸಾನ್ನಿಧ್ಯದ ಹಂಬಲಕ್ಕೊಂದು ಸಮರ್ಥ ನಿದರ್ಶನ. ಕಾದಂಬರಿ 'ನಾಗರಹಾವಿನ ರಾಮಾಚಾರಿಯದೂ ಇಂತಹ ಕಿಶೋರ ಪ್ರಣಯವೇ.

ಕಿಶೋರಿಯರಲ್ಲಿ ಈ ಬಗೆಗೆ ಒಮ್ಮನ, ಇಮ್ಮನಗಳ ತಕ್ಕಡಿಯ ತೂಗಾಟ ಬಹಳ. ಒಮ್ಮೆ ಬಜಾರಿ, ಒಮ್ಮೆ ಮುಗುದೆ! ತನ್ನತನ ಬೆಳೆಸಿಕೊಳ್ಳುವ ಹೆಣಗು, ತನ್ನವರ ಪ್ರೀತಿಯ ಕೊರಗು. ಹೆತ್ತವರ ಅಂಕೆ, ಹರಿದೆಸೆದೋಡುವ ದಾಷ್ಟ್ರ... ಹೀಗೆ ತ್ರಿವಿಕ್ರಮತೆ ಅವಳಲ್ಲಿ ಮೈಯ್ಯುಂಡು ಬಿಟ್ಟಿರುತ್ತೆ. 'ಹೃದಯ ಬಲು ದಣಿದಿಹುದು. ಉಸಿರಾಡಬೇಕು. ಒಲುಮೆಗೂ ಬಿಡುವು ಬೇಕು' ಎಂದ ಭೈರನ್ ಮಾತು ಕಿಶೋರಿಯ ಆಕ್ರಂದನದ ಪ್ರತಿಸ್ಪಂದನ. ಈ ಆಮೆಗೆ ಪರಿಸರದ ತೆಳು ನೀರ ಸೀಳಿ ಮುಳುಗುವ ಚಪಲ. ಜೊತೆಗೇ, ತನ್ನ ಸೆರಗು ಕೆಂಡ ಹಿಡಿದಿದೆ ಎಂಬುದನ್ನೂ ಮರೆಯಲಾರಳು. ಎಷ್ಟೇ ಸುತ್ತಿದರೂ, ಕೇಂದ್ರದಿಂದ ವಿಮುಖಳಾಗಿ ಅಲ್ಲ. ಅವಳಿಗೆ ಗೊತ್ತು, ತಾನು ಪ್ರಥಮಥಃ ಹೆಣ್ಣು, ನಂತರ ಮಿಕ್ಕುದೆಲ್ಲ! 'ಪುಷ್ಪವತಿ' ಎಂಬ ಪದವನ್ನು ಚಲಾವಣೆಗೆ ಬಿಟ್ಟ ಆ ಶಬ್ದಬ್ರಹ್ಮ ನಿಜಕ್ಕೂ ಕಾವ್ಯ ಜೀವಿ! ಎಷ್ಟೆಲ್ಲ ಧ್ವನಿ ಆ ಪದದೊಳಗೆ ಅಡಕವಾಗಿದೆ! ಅಲೆಕ್ಸಿಸ್ ಕೆರಿಲ್‌ನು 'ಮ್ಯಾನ್ ದಿ ಅನ್ ನೋನ್'ನಲ್ಲಿ ಹೆಣ್ಣು ಹೆಣ್ಣಾಗಿಯೇ ಏಕೆ ಬಾಳಬೇಕೆಂಬುದರ ತಥ್ಯವನ್ನು, ಪ್ರಕೃತಿ ನಿಯತಿಯನ್ನು ವಿಶ್ಲೇಷಿಸುತ್ತಾ, ಕಿಶೋರಿಯರ ಕಣ್ಣೆರೆಸುವ ಹಲವು ನುಡಿಮುತ್ತುಗಳನ್ನು ಕೋದಿದ್ದಾನೆ. ಅಸ್ತಿತ್ವವಾದದ ಜೀನ್ ಪಾಲ್ ಸಾರ್ತ್ರೆಯ 'ದಿ ಏಜ್ ಆಫ್ ರೀಸನ್'ನಲ್ಲಿ ಚಕ್ಕಂದ, ಸ್ವಚ್ಛಂದದ ಪರಿಣಾಮ ಏನು ಎಂಬುದನ್ನು ಓದಿ, ನಾವು ಅರಗಿಸಿಕೊಳ್ಳಬಲ್ಲ ಡೋಸೇಜ್ ಎಷ್ಟು ಎನ್ನುವುದನ್ನು ಕಿಶೋರಿಯರು ನಿರ್ಧರಿಸಬಹುದು. ರೂಸೋ ಹೇಳಲಿಲ್ಲವೇ, 'ಮನುಷ್ಯ ಹುಟ್ಟುವಾಗ ಸ್ವತಂತ್ರ, ಆದರೆ ಎಲ್ಲೆಲ್ಲಿಯೂ ಆತ ಇರುವುದು ಸರಪಣಿಗಳಲ್ಲೇ!' ಹುಸಿ-ಗಂಟಿನ ಈ ಹಗ್ಗದ ಸಂಕಲೆ ಕತ್ತರಿಸಿ ಒಗೆಯುವುದು ಎಷ್ಟರ ಕೆಲಸ? ಇದ್ದರೇನಾದರೂ ಒಳಿತುಂಟೇ? ಯೋಚಿಸಬೇಕಾದ ವಿಷಯ. ಒಡನಾಟ, ಸತ್ಯ, ಪ್ರಣಯದ ಹಂತಗಳ ಪರ್ಯವಸಾನ,



ಎಲ್ಲ ಸರಿ ಹೋದರೆ ಪರಿಣಯ. ನಮ್ಮ ಶೆಲ್ಲಿ ಸಹ ವಿದ್ಯಾರ್ಥಿನಿ ಹಾರಿಯೆಟ್ ವೆಸ್ಟ್ ಬ್ರೂಕ್ ಎಂಬ ರೂಪಸಿಯೊಡನೆ ಓಡಿ ಹೋದದ್ದೂ ತನ್ನ ಹತ್ತೊಂಬತ್ತನೆಯ ವಯಸ್ಸಿನಲ್ಲಿ. ಬಿಸಿ ರಕ್ತದ ಈ ಹಸಿಹಸಿ ಪ್ರಣಯ ಬಹುಕಾಲ ಉಳಿಯಲಿಲ್ಲವೆಂಬ ಮಾತು ಬೇರೆ, ತನಗಿಂತ ಎಂಟು ವರ್ಷ ಹಿರಿಯಳಾದ ಅನೇ ಹ್ಯಾಥವೇಯನ್ನು ಮದುವೆಯಾದಾಗ ಷೇಕ್ಸ್‌ಫಿಯರ್‌ನಿಗೆ ಹದಿನೆಂಟು ವರ್ಷ. ಮಹಾರಸಿಕ ಲಾರ್ಡ್ ಭೈರನ್‌ನ ಕವನ ಸಂಕಲನ 'ಸೋಮಾರಿತನದ ಗಳಿಗೆಗಳು' ಪ್ರಕಟವಾದಾಗ ಅವನಿಗೆ ಹದಿನೆಂಟು ಆಗತಾನೇ ಕಳೆದಿತ್ತು. ಭಾವ ಜೀವಿಗಳ

ಕಿಶೋರ ಪ್ರಣಯ ಅವರ ಬಾಳಿನುದ್ದಕ್ಕೂ ಪ್ರಭಾವ ಬೀರಿರುವುದನ್ನು ಅವರ ಕೃತಿಗಳಿಂದ ಓದುಗರು ಗುರುತಿಸಿದ್ದಾರೆ. 'ಬಾವಿಗೆ ಬೀಳ್ತಿನಿ' ಅಂತ ಮನೆಯ ಅಜ್ಜಿ ಬೆದರಿಕೆ ಹಾಕಿದಾಗಲೋ, ಹಿರಿಯರು, “ನಿನಗೇಕಯ್ಯಾ ನಮಗಿದೆಲ್ಲ ಬಿಡು. ಅಷ್ಟಕ್ಕೂ ನಿನಗೆ ಇದರ ಬಗ್ಗೆ ಏನು ತಾನೇ ಗೊತ್ತಿದೆ?' ಎಂದು ಬಾಯಿ ಹೊಡೆದು ತಾವೇ ನಿಷ್ಕರ್ಷಿಸಿದ ವರ-ವಧುಗಳ ಸಮಾಗಮದ ಚರ್ಚೆ ನಮಗೆ ಈಗ ಬೇಕಿಲ್ಲ. ದೈಹಿಕವಾಗಿ ಏನೇ ವಯಸ್ಸಾಗಿದ್ದರೂ ಮಾನಸಿಕವಾಗಿ ಇನ್ನೂ ಕಿಶೋರರಾಗಿರುವವರು ಈ ತಳಮಳದ ಉಮ್ಮಳದ ಸುಳಿಗೆ ಸಿಗುವವರೇ. ನಾವೂ ನೀವೂ ಅಂದು ಕಿಶೋರರಾಗಿದ್ದಾಗ ಏನೆಲ್ಲ ಆಟ ಆಡಿದೆವೆಂಬುದನ್ನು ಮೆಲುಕು ಹಾಕಿದರೆ ಮನಸಾರೆ ನಕ್ಕೇವು.

(ಕೃಪೆ, 'ಹರಟೆಗಳು', ವಿವಿಧ ಲೇಖಕಿಯರು, ಕನ್ನಡ ಸಾಹಿತ್ಯ ಪರಿಷತ್ತು, ೧೯೭೯)

## ೩. ಪರವಾಯಿಲ್ಲ...!

**- ಭುವನೇಶ್ವರಿ ಹೆಗಡೆ**

ಒಂದೇ ಸಮಯದಲ್ಲಿ ಒಂದೇ ಸ್ಥಳದಲ್ಲಿ ಇಬ್ಬರು ವ್ಯಕ್ತಿಗಳ ನಡುವೆ ಒಂದೇ ಶಬ್ದವು ಸಮವೂ ವಿರುದ್ಧವೂ ಆದ ಅರ್ಥದಲ್ಲಿ ಬಳಸಲ್ಪಡಬಹುದೇ? ಎಂಬುದೊಂದು ಪ್ರಶ್ನೆಯನ್ನು ನಿಮಗೆ ಕೇಳಿದರೆ ಪ್ರಶ್ನೆಯನ್ನು ಮತ್ತೊಮ್ಮೆ ಓದಿ

ನೋಡಿದ ನೀವು 'ಸಾಧ್ಯವಿಲ್ಲ' ಎಂದು ಉತ್ತರಿಸುವ ಸಾಧ್ಯತೆ ಬಹಳ ಇದೆ. ಆದರೆ ಕೆಲವು ಸಾಕ್ಷಾನುಭವಗಳ ಆಧಾರದ ಮೇಲೆ ನಾನು ಅದು 'ಸಾಧ್ಯವಿದೆ' ಎನ್ನುತ್ತೇನೆ.

ಒಂದು ದಿನ ನಾನು ಬಸ್ಸಿನಲ್ಲಿ ಮೂಸಂಬಿ ಹಣ್ಣು ತಿನ್ನುವಾಗ ಪಕ್ಕದಲ್ಲಿ ಕೂತಾಕೆಗೆ ಒಂದೆರಡು ತೊಳೆ ನೀಡಿದೆ. ಆಗ ಅವಳು 'ಪರವಾಯಿಲ್ಲ, ಥ್ಯಾಂಕ್ಸ್' ಅಂದು ಸುಮ್ಮನಾದಳು. ಆದರೆ ಒಂದೇ ಸಲಕ್ಕೆ ನಾನು ಸುಮ್ಮನಾಗಿ ತಿನ್ನಲು ಶುರು ಮಾಡಿ ಬಿಡುವುದು ಶಿಷ್ಟಾಚಾರವಾಗಲಿಕ್ಕಿಲ್ಲವೆಂದುಕೊಂಡು 'ಪರವಾಯಿಲ್ಲ, ಒಂದೆರಡು ತೊಳೆ ತೊಗೊಳ್ಳಿ' ಅಂದೆ. ಅವಳು ಮತ್ತೆ 'ನಂಗೆ ಬೇಡಾರೀ, ನೀವು ತಿನ್ನಿ ಪರವಾಯಿಲ್ಲ' ಅಂದಳು. ಮತ್ತೆ ನಾನು 'ಪರವಾಯಿಲ್ಲ ತಗೊಳ್ಳಿ' ಎಂದೆನ್ನುತ್ತ ಒಂದೆರಡು ತೊಳೆ ಅವಳ ಕೈಯಲ್ಲಿರಿಸಿದೆ. ಅದೇ ಕ್ಷಣದಲ್ಲೇ ಈ ಮೇಲಿನ ಉದ್ದ ಪ್ರಶ್ನೆ ನನ್ನ ತಲೆಯಲ್ಲಿ ಉದ್ಭವಿಸಿದ್ದು! ನನಗೆ ಆಶ್ಚರ್ಯವಾಗಿದ್ದೆಂದರೆ ನಾನು ಎಷ್ಟು ಸಹಜವಾಗಿ ಮತ್ತು ಸರಿಯಾಗಿ ಆ ಶಬ್ದವನ್ನು ಬಳಸಿದ್ದೇನೋ, ಅವಳೂ ಅಷ್ಟೇ ಸಹಜವಾಗಿ ಮತ್ತು ಸರಿಯಾಗಿ ಆ ಶಬ್ದವನ್ನು ಬಳಸಿದ್ದಳು. ಆದರೆ ಉದ್ದೇಶ ಮಾತ್ರ ಪರಸ್ಪರ ವಿರುದ್ಧವಾಗಿತ್ತು.

ನಮ್ಮ ಪ್ರಯಾಣ ದೀರ್ಘವಾಗಿತ್ತಾದ್ದರಿಂದ ನನಗೆ ಮಾತಾಡಲು ಯಾರನ್ನಾದರೂ ಎಳೆಯಬೇಕಿತ್ತು. ಮತ್ತೆ ಅವಳನ್ನೇ 'ಹಣ್ಣು ಹೇಗಿದೆ ಇವರೆ?' ಎಂದು ಕೇಳಿದೆ. ಮತ್ತೆ ಅವಳು 'ಪರವಾಯಿಲ್ಲ' ಎನ್ನಬೇಕೆ? ಸರಿ, ಅದು ಪೂರ್ಣವಿರಾಮದ ಹಾಗೆ ಗೋಚರಿಸಿದ್ದರಿಂದ ನಾನು ಸುಮ್ಮನಾಗಬೇಕಾಯ್ತು.

ಸ್ವಲ್ಪ ಹೊತ್ತಿನ ನಂತರ ನಮ್ಮ ಹಿಂದಿನ ಸೀಟಿನಲ್ಲಿ ಮಾತಾಡುತ್ತ ಕೂತ ಒಬ್ಬರು, 'ಪರವಾಗಿಲ್ಲ ನೋಡಯ್ಯ, ಆಗ್ಲೆ ಶಿವಮೊಗ್ಗಾಕ್ಕೆ ಬಂದ್ದಿಟ್ಟಿದ್ದಾನೆ' ಅಂದದ್ದು ಕೇಳಿಸಿತು. ಇದು ನಾವು ಹಣ್ಣಿನ ಕುರಿತಾಗಿ ಬಳಸಿದ ಪರವಾಯಿಲ್ಲಕ್ಕಿಂತ ಸ್ವಲ್ಪ ಭಿನ್ನವಾಗಿ ಬಳಸಲ್ಪಟ್ಟಿತ್ತು. ಶಿವಮೊಗ್ಗದಲ್ಲಿ ಬಸ್ಸು ನಿಂತಾಗ ಕಂಡಕ್ಟರನ ಹತ್ತಿರ ನಾನು, 'ಕಾಫಿ ಕುಡಿಯಲಿಕ್ಕೆ ಇಳಿಯಬಹುದೇ' ಎಂದು ಕೇಳಿದೆ. ಆತ ತಕ್ಷಣ, 'ಪರವಾಯಿಲ್ಲ, ನಿಧಾನಕ್ಕೆ ಕುಡಿದು ಬನ್ನಿ, ೧೫ ನಿಮಿಷ ನಿಲ್ಲುತ್ತೆ' ಅಂದ. ನಂತರ ನಮ್ಮೂರಿನ



ಸ್ಟಾಪಿನಲ್ಲಿಳಿದಾಗ ಬಸ್‌ಸ್ಟಾಪಿಗೆ ಬಂದಿದ್ದ ತಮ್ಮ, 'ಪರವಾಯಿಲ್ಲ, ಬರ್ತೀನಿ ಅಂದ ದಿನವೇ ಬಂದುಬಿಟ್ಟು ರೆಕಾರ್ಡ್ ಬ್ರೇಕ್ ಮಾಡಿಬಿಟ್ಟೆ!" ಅನ್ನಬೇಕೆ?

ಹೀಗೆ ಆ ಒಂದು ದಿನದಲ್ಲಿಯೇ ಈ ಪರವಾಯಿಲ್ಲವು ಎಷ್ಟು ವಿಧದಲ್ಲಿ ಬಳಸಲ್ಪಟ್ಟಿದ್ದನ್ನು ನೋಡಿದೆನೆಂದರೆ, ಕನ್ನಡದಲ್ಲಿ ಇದರಂಥ ಬಾರ್ಥಕ ಶಬ್ದ ಬೇರೊಂದಿಲ್ಲ ಎಂಬ ನಿರ್ಣಯಕ್ಕೆ ನಾನು ಅಂದೇ ಬಂದುಬಿಟ್ಟೆ. ಇಂಥ ಬಹುರೂಪೀ ಶಬ್ದವೊಂದು ಕನ್ನಡದಲ್ಲಿರುವುದು ಹೆಮ್ಮೆಯ ವಿಚಾರವಲ್ಲವೇ?

ನೀವು ಯಾವುದೇ ಪರೀಕ್ಷಾರ್ಥಿಯನ್ನು 'ಪರೀಕ್ಷೆ ಹೇಗೆ ಮಾಡಿದ್ದೀಯಾ?' ಎಂದು ಕೇಳಿ, ತಕ್ಷಣ ಬರುವ ಉತ್ತರ 'ಪರವಾಯಿಲ್ಲ, ಸುಮಾರಾಗಿ ಮಾಡಿದೀನಿ' ಎಂಬುದು. ಆದರೆ ಹೀಗೆ ಉತ್ತರಿಸುವ ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರತಿ ವರ್ಷ ಫೇಲಾಗುವುದನ್ನು ನೋಡಿದರೆ ಅವರು ಬಳಸುವ 'ಪರವಾಯಿಲ್ಲ' ಎಂಬುದು 'ಸುಮಾರಾಗಿ ಮಾಡಿದೀನಿ' ಎಂಬುದಕ್ಕೆ ಪೂರಕವಾಗಿರಲಿಕ್ಕಿಲ್ಲವೆಂಬ ಅನುಮಾನ ಏಳುತ್ತದೆ. ಅದಕ್ಕೇ ಅವೆರಡೂ ಶಬ್ದಗಳನ್ನು ಬಿಡಿ ಬಿಡಿಯಾಗಿ ಹೀಗೆ ಅರ್ಥೈಸಬಹುದೆಂಬ ತರ್ಕಕ್ಕೆ ನಾನು ಬಂದಿದ್ದೇನೆ. 'ಪ್ರಶ್ನೆ ಪತ್ರಿಕೆ ಪರವಾಯಿತ್ತು (ಅಷ್ಟು ಕಠಿಣವಿರಲಿಲ್ಲ), ಆದರೆ ನಾನು ಬರೆದದ್ದು ಮಾತ್ರ ಸುಮಾರಾಗಿ!'. ಸುಮಾರು ಎಂಬುದಕ್ಕೆ ಇನ್ಸಲ್ಟ್ ಆಗು ಎಂಬರ್ಥವೂ ನಮ್ಮಲ್ಲಿದೆ. ವಿದ್ಯಾರ್ಥಿ ತನಗೆ ಕಲಿಸಿದ ಅಧ್ಯಾಪಕನಿಗೆ ಸುಮಾರಾಗುವ ಹಾಗೆ ಬರೆದಿರಬಹುದೆಂಬ ಅರ್ಥವನ್ನೂ ಇದು ಸೂಚಿಸಬಹುದು.

ಮೇಲ್ನೋಟಕ್ಕೆ ನೋಡಿದರೆ ಎಲ್ಲಿ ಬೇಕೆಂದಲ್ಲಿ, ಹೇಗೆ ಬೇಕೋ ಹಾಗೆ ಬೇಕಾಬಿಟ್ಟಿ ಬಳಸಬಹುದಾದ ಶಬ್ದ ಇದು ಎನಿಸಿದರೂ, ಒಮ್ಮೊಮ್ಮೆ ಸಂದರ್ಭಕ್ಕನುಗುಣವಾಗಿ ಈ ಪರವಾಯಿಲ್ಲ ಎಂಥ ಶಕ್ತಿಯೂ ಬಂದುಬಿಡಬಹುದು. ಒಮ್ಮೆ ನಮ್ಮೂರಿನ ಸಿಂಹಿಣಿ (ಲಯನ್ಸ್ ಕ್ಲಬ್‌ನ ಮಹಿಳಾ ವಿಭಾಗ)ಯರೆಲ್ಲ ಸೇರಿ ಪಿಕ್‌ನಿಕ್‌ಗೆಂದು ಹೋಗಿದ್ದೆವು. ಅಲ್ಲಿದ್ದವರಲ್ಲೇ ಅತಿ ಹೆಚ್ಚು ಪ್ರತಿಷ್ಠಿತಳಾದ ಓರ್ವ ಸಿಂಹಿಣಿಯನ್ನು ಎಲ್ಲರೂ 'ಹಾಡಿ, ಹಾಡಿ...' ಎಂದು ಒತ್ತಾಯಿಸತೊಡಗಿದರು. ಒತ್ತಾಯ ಹೆಚ್ಚಿದಂತೆಲ್ಲ ಆ ಸಿಂಹಿಣಿಯ ಪ್ರತಿಷ್ಠೆ ಹೆಚ್ಚಾಗತೊಡಗಿತ್ತು. ನೋಡಿ ನೋಡಿ ಸಾಕಾದ ನಾನು ಕೊನೆಗೊಮ್ಮೆ ಕಣ್ಣನ್ನು ಕಿರಿದುಗೊಳಿಸಿ 'ಪರವಾಯಿಲ್ಲ, ಒಂದು ಹಾಡು ಹೇಳಿ ಮುಗಿಸಿಬಿಡಿ' ಎಂದುಬಿಟ್ಟೆ. ನಾನು ಹಾಗಂದಿದ್ದೇ ಅಂದಿದ್ದು, ಒಮ್ಮೆಲೇ ತನ್ನ ಬೆಲೆ ಇಳಿದು ಹೋದ ಹಾಗೆ ಹಾಗೂ ಬೆಲೆ ಇಳಿಸಿದ ಕೆಲಸವನ್ನು ನಾನು ಉದ್ದೇಶಪೂರ್ವಕವಾಗಿ ಮಾಡಿದೆನೆನ್ನುವ ಹಾಗೆ ಮುಖ ಉಬ್ಬಿಸಿಕೊಂಡ ಆ ಸಿಂಹಿಣಿ ನನ್ನನ್ನೇ ದುರುದುರು ನೋಡಿದಳು. ನನ್ನ ಅದೃಷ್ಟಕ್ಕೆ ಆ 'ಪರವಾಯಿಲ್ಲ'ದಲ್ಲಿ ಅವಳು ಇಷ್ಟಪಡುವ ಒತ್ತಾಯದ ಬದಲು ಒಂದು ರೀತಿಯ ಉದಾಸೀನತೆ ಇತ್ತೆಂಬುದು ಮಾತ್ರ ಅವಳಿಗೆ ಅರ್ಥವಾಗಿತ್ತೇ ವಿನಾ ಅದರಲ್ಲಿ ನಾನು ಹುದುಗಿಸಿಟ್ಟ ಅರ್ಥ ಅವಳ ತಲೆಗೆ ಹೋಗಿರಲಿಲ್ಲ. ನಾನು ಆ ಶಬ್ದದಲ್ಲಿ ಹೇಳಲು ಉದ್ದೇಶಿಸಿದ್ದು, 'ನೀವು ಹಾಡುವುದರಿಂದ

ನಮಗೆಲ್ಲ ಆಗುವ ಖುಷಿ ಅಷ್ಟರಲ್ಲೇ ಇದೆ. ಸುಮ್ಮನೇ ಏಕೆ ಜಂಭ ಮಾಡುತ್ತೀರಿ? ಒಂದು ಹಾಡು ಹಾಡುವ ಶಾಸ್ತ್ರ ಮುಗಿಸಿ, ಬೇಗ ಮನೆಗೆ ಹೋಗೋಣ' ಎಂಬುದಾಗಿತ್ತು! ಇಷ್ಟೆಲ್ಲ ಒಳಾರ್ಥ ಇತ್ತೆಂಬುದೇನಾದರೂ ಅವಳಿಗೆ ತಿಳಿದಿತ್ತಾದರೆ ನನ್ನ ಅವಸ್ಥೆ ಮುಗಿಯುತ್ತಿತ್ತು. ಸದ್ಯ, ಆ ಸಿಂಹಿಣಿ ಕೇವಲ 'ತಾತ್ಪರ್ಯ ಗ್ರಾಹಿಣಿ' ಮಾತ್ರ ಆಗಿದ್ದಳೇ ವಿನಾ 'ಗೂಢಾರ್ಥ ವಿಶ್ಲೇಷಿಣಿ' ಆಗಿರಲಿಲ್ಲ - ನಾನು ಬಚಾವಾದೆ.

ನೀವು ಯಾವುದಾದರೂ ಸಿನಿಮಾಕ್ಕೆ ಹೋಗುವ ಮುನ್ನ ಅದನ್ನು ಆಗಲೇ ನೋಡಿದವರ ಬಳಿ ಹೇಗಿದೆ ಎಂದು ಕೇಳಿ, ಅವರು 'ಪರವಾಯಿಲ್ಲ, ಹೋಗಬಹುದು' ಎಂದರೇನೇ ಆ ಸಿನಿಮಾಕ್ಕೆ ಹೋಗುವ ಅಭ್ಯಾಸ ಇರಿಸಿಕೊಂಡಿದ್ದೀರಾ? ಹಾಗಾದರೆ ಎಂತೆಂಥ ಸಿನಿಮಾಗಳಿಗೋ ಆ ಪರವಾಯಿಲ್ಲ ಸರ್ಟಿಫಿಕೇಟ್ ಸಿಕ್ಕು ಅಂಥವಕ್ಕೆ ಹೋಗಿ, ನೀವು ತಲೆನೋವು ತರಿಸಿಕೊಂಡಿರಬಹುದು. ಅದಕ್ಕೆ ನಾನು ನಿಮಗೆ ಕೊಡುವ ಸಲಹೆಯೆಂದರೆ ಹಾಗೆ ಸಿಕ್ಕಸಿಕ್ಕವರ ಪರವಾಯಿಲ್ಲ ಸರ್ಟಿಫಿಕೇಟ್‌ಗಳನ್ನು ನಂಬದೆ, ಹಾಗೆ ವಿಮರ್ಶಿಸುವವರು ಪರವಾಯಿಲ್ಲವೆನಿಸಿದರೆ ಮಾತ್ರ ಸಿನಿಮಾಕ್ಕೆ ಹೋಗಿ.

ಒಮ್ಮೆ ಒಬ್ಬ ವ್ಯಕ್ತಿಗಾಗಲೀ, ವಸ್ತುವಿಗಾಗಲೀ ಈ ಪರವಾಯಿಲ್ಲದ ಮುದ್ರೆ ಬಿತ್ತೆಂದರೆ ಅದು ಶಾಶ್ವತವಾಗಿ ಉಳಿಯುತ್ತದೆ ಎಂದು ಮಾತ್ರ ಹೇಳಲಿಕ್ಕಾಗದು. ಯಾವ ಕ್ಷಣಕ್ಕೂ ಅದನ್ನು ಕಳೆದುಕೊಳ್ಳುವ ಹಕ್ಕು ಅದನ್ನು ಗಳಿಸಿಕೊಂಡವರಿಗೆ ಇರುತ್ತದೆ. ಈಗ ಕೆಲವರ್ಷದ ಹಿಂದೆ ನಮ್ಮ ಭಾರತದ ಕ್ರಿಕೆಟ್ ಪಟುಗಳು ಇಂಗ್ಲೆಂಡಿನಲ್ಲಿ ಅದ್ಭುತವಾಗಿ ಆಡಿ ಜಗತ್ತಿನ ಎಲ್ಲ ಕ್ರಿಕೆಟ್ ಪ್ರೇಮಿಗಳ ಬಾಯಲ್ಲೂ 'ಪರವಾಯಿಲ್ಲ' ಅನ್ನಿಸಿಕೊಂಡರು. ಆದರೆ ಪಾಪ, ಮರಳಿ ಭಾರತಕ್ಕೆ ಬರುವ ತನಕವೂ ಅದನ್ನು ಉಳಿಸಿಕೊಳ್ಳಲು ಆಗಲಿಲ್ಲ. ಮನೆಗೆ ಬರುವ ಮುಂಚಿನ ದಿನ ಅಂಗಡಿಯೊಂದರಲ್ಲಿ ನಮ್ಮ ಕ್ರೀಡಾಪಟುವೊಬ್ಬ ಕಾಲುಚೀಲದಂಥ ಕೆಳದರ್ಜೆ ವಸ್ತುವನ್ನು ಕದ್ದು ಸಿಕ್ಕಿಹಾಕಿಕೊಂಡು ಇಡೀ ಟೀಮಿನವರು 'ಪರವಾಯಿಲ್ಲದಿರುವಿಕೆಯನ್ನು ಕಳೆದುಕೊಂಡು ಮರ್ಯಾದೆ ಇಲ್ಲದವರಾಗಿ ವಾಪಾಸು ಬಂದರು.

ಪರವಾಯಿಲ್ಲ ಹಾಗೂ ಪರವಾಗಿಲ್ಲ ಈ ಎರಡೂ ಶಬ್ದಗಳನ್ನು ನಾವು ಸಮವಾಗಿ ಬಳಸುತ್ತೇವಾದರೂ, ಯಾವುದು ಶುದ್ಧ ರೂಪ ಎಂಬುದು ನನಗಿನ್ನೂ ಗೊತ್ತಾಗಿಲ್ಲ. ಎರಡರಲ್ಲೂ ಹುಳಿಯಿದ್ದು, ಎರಡನ್ನೂ ನೆಲ್ಲಿಕಾಯಿ ಎಂದು ಕರೆಯುತ್ತೇವಾದರೂ ನೆಲ್ಲಿಕಾಯಿ ಹಾಗೂ ರಾಜನೆಲ್ಲಿಕಾಯಿಗಳಲ್ಲಿ ವ್ಯತ್ಯಾಸವಿಲ್ಲವೇ, ಹಾಗೆ ಇವೆರಡೂ ಸ್ವಲ್ಪ ಸೂಕ್ಷ್ಮ ಹಾಗೂ ಭಿನ್ನವಾದ ಉಪ ವ್ಯತ್ಯಾಸವನ್ನು ಹೊಂದಿರುವಂತೆ ನನಗೆ ಭಾಸವಾಗುತ್ತದೆ.

ಪರವಾಗಿಲ್ಲ ಎಂಬುದು ನಾಮವಿಶೇಷಣ (ಉದಾ: ಡ್ರೈವರು ಪರವಾಗಿಲ್ಲ, ಸಿನಿಮಾ ಪರವಾಗಿಲ್ಲ) ಹಾಗೂ ಪರವಾಯಿಲ್ಲ ಎಂಬುದು ಕ್ರಿಯಾವಿಶೇಷಣ (ಉದಾ:

ಹಾಡಿ ಪರವಾಯಿಲ್ಲ, ಹಣ್ಣು ತಿನ್ನಿ ಪರವಾಯಿಲ್ಲ) ಎಂದು ಒಂದು ಸ್ವಯಮನುಮಾನಾಸ್ಪದವಾದ ನಿರ್ಧಾರಕ್ಕೆ ಬಂದಿದ್ದೇನೆ. ಅರ್ಥದಲ್ಲಿಯೂ ಅಷ್ಟೇ ಪರವಾಗಿಲ್ಲವೆಂಬುದು 'ನಾಟ್ ಗುಡ್, ಬಟ್ ನಾಟ್ ಬ್ಯಾಡ್' ಎಂಬ ಅರ್ಥವನ್ನು ಹೊಂದಿದ್ದರೆ, ಪರವಾಯಿಲ್ಲವೆಂಬುದು ಕೆಲವೊಮ್ಮೆ "ಓ.ಕೆ... ಅಡ್ಡಿಲ್ಲ...' ಎಂಬರ್ಥ ಪಡೆಯುತ್ತದೆ.

ನನ್ನೀ ವಿಂಗಡಣೆಯನ್ನು ಭಾಷಾ ಅಧ್ಯಾಪಕರುಗಳೇನಾದರೂ ನೋಡಿದರೆ ಖಂಡಿತ ಅವರ ಬಾಯಲ್ಲಿ ಪರವಾಯಿಲ್ಲವಾಗಲೀ ಪರವಾಗಿಲ್ಲವಾಗಲೀ ಹೊರಬರಲು ಸಾಧ್ಯವೇ ಇಲ್ಲವೆಂಬುದು ಗೊತ್ತಿದ್ದರೂ, ನನ್ನ ನಿಮ್ಮಂಥವರ ಮುಂದೆ ನಡೆಯುತ್ತದೆಂಬ ಹುಚ್ಚು ಧೈರ್ಯ ಇದನ್ನು ಎದುರಿಸಲು ಪ್ರೇರೇಪಿಸಿದೆ.

ಪರವಾಗಿಲ್ಲ ಎಂಬುದೇ ಮೆಚ್ಚುಗೆ ಹೆಚ್ಚಾಗಿ ಉದ್ಧಾರವಾಚಕ ರೂಪ ತಳೆದರೆ 'ಪರವಾಗಿಲ್ವೆ' ಎಂದಾಗುತ್ತದೆ. ಅದರಲ್ಲೂ ಈ ಮೆಚ್ಚುಗೆಯ ಹಿಂದೆ ಹದಿಹರೆಯದ ಪ್ರೀತಿ ಅಡಗಿದಾಗ ಈ ಶಬ್ದಕ್ಕೆ ಯಾವ ನಾದ ಬರುತ್ತದೆಯೆಂಬುದನ್ನು ಅರಿಯಲು ನೀವು ವಿವಿಧ ಭಾರತಿಯಲ್ಲಿ ಬರುವ ಟೂತ್ ಪೇಸ್ಟ್ ಒಂದರ ಜಾಹೀರಾತನ್ನು ಕೇಳಬೇಕು; ಅದು ಹೀಗಿದೆ :

ಆತ : ಇಲ್ನೋಡಿ, ನೀವು ಫೋರ್ ಹಾನ್ಸ್ ಟೂತ್‌ಪೇಸ್ಟಿನಿಂದ ತಾನೇ ಹಲ್ಲುಜ್ಜದು? (ಸುಂದರವಾದ ನಿಮ್ಮ ಹಲ್ಲುಗಳನ್ನು ನೋಡಿ...) ಮತ್ತೊಂದ್ಮಾತು, ನಿಮ್ಮ ಹಲ್ಲುಗಳೇ ಇಷ್ಟು ಸುಂದರವಾಗಿರುವಾಗ....

ಆಕೆ: ಪರವಾಗಿಲ್ವೆ... ನೀವು ತುಂಬಾ ಕಿಲಾಡಿ (ಕ್ಕಿಕ್ಕಿಕ್ಕಿಕ್ಕಿ ನಗು)

ನಾನು ಈ ಸಂಭಾಷಣೆಯನ್ನು ದಿನಾಲೂ ಕೇಳುತ್ತೇನೆ. ಈ 'ಪರವಾಗಿಲ್ವೆ'ಗೆ ದಿನಕ್ಕೊಂದು ಅರ್ಥ ಗೋಚರಿಸುತ್ತದೆ ನನಗೆ. 'ಈತ ನನ್ನ ಎದುರಿನ ಹಲ್ಲುಗಳನ್ನಷ್ಟೇ ನೋಡಿದ್ದಾನೆ. ಸದ್ಯ, ಕುಳಿಬಿದ್ದ ದವಡೆ ಹಲ್ಲುಗಳನ್ನು ಕಂಡಿಲ್ಲ' ಎಂದೊಂದು ದಿನ ಅನ್ನಿಸಿದರೆ, ಮತ್ತೊಂದು ದಿನ ಆತ ಅರ್ಧಕ್ಕೆ ಬಿಟ್ಟ ವಾಕ್ಯವನ್ನು ತನಗೆ ಬೇಕಾದ ಹಾಗೆ ಪೂರ್ತಿಗೊಳಿಸಿಕೊಂಡು ಆದ ಖುಷಿಯಿಂದ ಈ ಶಬ್ದ ಹೊರಬಂದ ಹಾಗೆನಿಸುತ್ತದೆ.

ಯಾವ ಅರ್ಥದಲ್ಲಿಯೇ ಬಳಸಿರಲಿ, ಈ ಪರವಾಯಿಲ್ಲ, ಪರವಾಗಿಲ್ಲ, ಪರವಾಗಿಲ್ವೆಗಳು ತಮ್ಮಷ್ಟಕ್ಕೆ ತಾವು ಬರುತ್ತವೆ, ಹೋಗುತ್ತವೆ. ನಾವಾಗಿ ಹೋಗಿ ಸಿಕ್ಕಿಹಾಕಿಕೊಂಡ ಹೊರತು ನಮಗೆ ಅವುಗಳಿಂದ ಉಪದ್ರವವಿಲ್ಲ. ಆದರೆ 'ಪರವಾಯಿಲ್ಲ'ದ ಮುಂದೇನಾದರೂ 'ತಾನೇ?' ಎಂಬುದು ಜೋಡಿಸಲ್ಪಟ್ಟು ಪ್ರಶ್ನಾರ್ಥಕ ರೂಪ ತಾಳಿ 'ಪರವಾಯಿಲ್ಲ ತಾನೇ?' ಎಂಬುದಾಗಿ ಯಾರಿಂದಲಾದರೂ ನಿಮ್ಮ ಮುಂದಿರಿಸಲ್ಪಟ್ಟಿತೋ, ಆಗ ನೀವು ಜಾಗರೂಕರಾಗಿರಬೇಕಾಗುತ್ತದೆ. ಬಸ್‌ಸ್ಟ್ಯಾಂಡಿನಲ್ಲಿ ನೀವು ಕೂತಿದ್ದ ಪ್ಲಾಟ್‌ಫಾರ್ಮಿನಲ್ಲೇ ಬಹಳ ಹೊತ್ತಿನಿಂದ ಕೂತ

ಜೋಡಿಯೊಂದು ನೀವೂ ಅವರೂ ಒಂದೇ ಬಸ್ಸು ಹತ್ತುವುದೆಂಬುದನ್ನು ನಿಮ್ಮಿಂದಲೇ ಗೊತ್ತು ಮಾಡಿಕೊಂಡು 'ನಾವಿಲ್ಲೇ ಹಣ್ಣಿನ ಅಂಗಡಿ ತನಕ ಹೋಗಿಬರ್ತೀವಿ. ಸ್ವಲ್ಪ ಹೊತ್ತು ಈ ಸೂಟ್‌ಕೇಸು ನಿಮ್ಮ ಹತ್ರ ಇದ್ರೆ ಪರವಾಯಿಲ್ಲ ತಾನೆ?' ಎಂದು ಕೇಳಿ ನೀವು ದಾಕ್ಷಿಣ್ಯಕ್ಕೆ ಒಳಗಾದ ಲಕ್ಷಣ ಗೋಚರಿಸುತ್ತಲೇ ಹೊರಗೆ ನಡೆದುಬಿಡುತ್ತಾರೆ. ಆಮೇಲೆ ನಿಮ್ಮೂರ ಬಸ್ಸು ಬಂದು ನೀವು ನಿಮ್ಮ ಲಗೇಜ ಸಹಿತ ಬಂದು ಸೀಟು ಹಿಡಿಯುವುದೇ ಅಲ್ಲದೆ ಅವರ ಸೂಟ್‌ಕೇಸ್ ಸಹಿತ ಅವರಿಗೊಂದು ಸೀಟ್ ಹಿಡಿಯುವ ತನಕದ ದಾಕ್ಷಿಣ್ಯಕ್ಕೆ ಒಳಗಾಗಬೇಕಾಗುತ್ತದೆ. ನಿಮ್ಮ ಮುಖ ನೋಡಿಯೇ ನೀವು ಇಷ್ಟು ಮಾಡಿ ಕೊಡುವವರೆಂಬುದು ಗೊತ್ತಾಗಿತ್ತು ಎಂದು ಹೇಳುತ್ತಿರುವ ಹಾಗೆ ಶಿಸ್ತಾಗಿ ಪಾನು ಮೆಲ್ಲುತ್ತ ಬಂದ ಆ ಜೋಡಿಯ ಗಂಡನಾದವನು, “ಹೆ ಹೆ! ಹೋಟಲಲ್ಲಿ ಲೇಟ್ ಆಗೋಯ್ತು (ಹೇಳಿ ಹೋಗಿದ್ದು ಹಣ್ಣಿನಂಗಡಿಗೆ), ಅಷ್ಟರಲ್ಲಿ ಬಸ್ಸು ಬಂದಿಟ್ಟಿದೆ. ಏನೋ ನೀವಿದ್ರಿ ಪರವಾಯಿಲ್ಲ, ಇಲ್ಲಾಂದ್ರೆ ಫಜೀತೀನೆ ಆಗ್ತಿತ್ತು, ಹಿಹಿ...' ಎಂದೆನ್ನುತ್ತಾ ತಮ್ಮ ಸೀಟಿನಲ್ಲಿ ಒರಗುತ್ತಾರೆ.

ಇದು ಒಂದು ಉದಾಹರಣೆ ಮಾತ್ರ. ಇಂಥ ಸಾವಿರಾರು 'ಪರವಾಯಿಲ್ಲ ತಾನೆ'ಗಳ ಹಿಂಸೆಗೆ ನಾವು ದಿನನಿತ್ಯ ಒಳಗಾಗಬೇಕಾಗುತ್ತದೆ. 'ರ್ರೀ, ನಿಮ್ಮ ನಿಟ್ಟಿಂಗ್ ಕಡ್ಡಿಯನ್ನು ನಮ್ಮ ವಂದಾ ಕಳೆದು ಬಿಟ್ಟೂರೀ, ಬೇರೆ ತಬ್ಬಿ ಕೊಡೋಕೆ ಒಂದೆರಡು ದಿನ ತಡವಾದ್ರೆ ಪರವಾಯಿಲ್ಲ ತಾನೆ?', 'ನಮ್ಮಕ್ಕನ ಹುಡುಗರು ಬಂದಿದ್ದಾರೆ. ನಮ್ಮನೆ ಸಣ್ಣದು. ಒಂದೆರಡು ದಿನ ನಿಮ್ಮ ರೂಮ್ನಲ್ಲಿ ಮಲ್ಗೋಕೆ ಕಳಿಸಿದ್ರೆ ಪರವಾಯಿಲ್ಲ ತಾನೆ?'.... ಇಂಥ ಎಷ್ಟೋ 'ಪರವಾಯಿಲ್ಲ ತಾನೆ'ಗಳು ಯಾವ ನಿಬಂಧನೆಗಳಿಗೂ ಒಳಪಡದೆ ನಮ್ಮ ಮೇಲೆ ಪ್ರಯೋಗಿಸಲ್ಪಡುತ್ತಿರುತ್ತವೆ. ಈ ಪರವಾಯಿಲ್ಲ ತಾನೆ ಎಂಬ ಅಸ್ತ್ರ ನಮ್ಮ ಎದುರಾಳಿಯ ಬಾಯತ್ತಳಿಕೆಯಿಂದ ಹೊರಟ ತಕ್ಷಣ ಅದನ್ನು ಅರ್ಧಕ್ಕೆ ತುಂಡರಿಸಿ ಬಿಡುವ ಒಂದು ವಿರುದ್ಧಾರ್ಥಕ ಶಬ್ದಾಸ್ತ್ರವನ್ನು ಸಿದ್ಧಪಡಿಸಿಟ್ಟು ಕೊಳ್ಳಬೇಕೆಂಬ ಯೋಚನೆ ಅನೇಕ ಸಲ ನನಗೆ ಬಂದಿದೆ. 'ಪರವಾಯಿಲ್ಲ' ಎಂಬ ಶಬ್ದದ ವಿರುದ್ಧಾರ್ಥಕ ಪದವೂ 'ಪರವಾಯಿಲ್ಲ'ವೇ ಆಗಬಹುದು ಎಂಬುದನ್ನು ಮೊದಲಿನ ಹಣ್ಣಿನ ಪ್ರಸಂಗದಲ್ಲಿ ಹೇಳಿದ್ದೇನಾದರೂ, 'ಪರವಾಯಿಲ್ಲ ತಾನೆ?'ಗೆ ಅದು ವಿರುದ್ಧಾರ್ಥಕ ಪದವಾಗಲಾರದು. ಬದಲು ಒಪ್ಪಿಗೆ ಸೂಚಿಸುವ ಪದವಾಗಿ ಬಿಡುತ್ತದೆ. ಆದ್ದರಿಂದ 'ಪರವಾಯಿಲ್ಲ ತಾನೆ?'ಗೆ ಎದುರಾಳಿಯಾಗಿ 'ಪರವಾಯಿದೆ' ಎಂಬುದನ್ನು ತಂದು ನಿಲ್ಲಿಸಿದರೆ ಹೇಗಾಗಬಹುದು ಎಂಬ ಯೋಚನೆ ಬರುತ್ತಿದೆ. ಅದನ್ನು ಪ್ರಯೋಗಿಸಿದಾಗ ಉಂಟಾಗುವ ಶಬ್ದ ಕ್ರಾಂತಿಯ ಪರಿಣಾಮವೇನಾಗಬಹುದೆಂಬ ಕುತೂಹಲವೂ ಇದೆ. ಬರೀ ಕುತೂಹಲದಿಂದ ಏನಾಗುತ್ತದೆ? ಧೈರ್ಯದಿಂದ ಪ್ರಯೋಗಕ್ಕೆ ತಂದು ನೋಡಿ ಎಂದು ನಿಮ್ಮಲ್ಲಾರಾದರೂ ಸವಾಲೆಸೆಯಬಹುದು. ಛೇ, ಅದಕ್ಕೆ ಎಂದಾದರೂ ಹಿಂದುಮುಂದು ನೋಡುವುದುಂಟೆ? ರೆಕ್ಕೆ ಬಿಚ್ಚದ ಉಪಗ್ರಹಗಳ ಹಾರುವಿಕೆಯ ಪ್ರಯೋಗಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು

ಭಾರತದಂಥ ಬಡದೇಶವೇ ಖರ್ಚು ಮಾಡುತ್ತಿರುವಾಗ, ಆ ದೇಶದ ಪ್ರಜೆಗಳಾದ ನಾವು ಖರ್ಚಿಲ್ಲದ ಒಂದು ಹೊಸ ಪದಪ್ರಯೋಗಕ್ಕೆ ಅನುಮಾನಿಸುವವರೇ? ಪ್ರಯೋಗಗಳೇ ಬೆಳವಣಿಗೆಯ ಲಕ್ಷಣ ಎಂದೊಬ್ಬ ಶಾಸ್ತ್ರಜ್ಞ ಹೇಳಿಲ್ಲವೆ?

ಸರಿ, ನಮ್ಮ ಪ್ರಯೋಗವನ್ನು ಬಸ್‌ಸ್ಟ್ಯಾಂಡಿನಲ್ಲೇ ಶುರು ಮಾಡೋಣ. 'ಈ ಚೀಲ ನಿಮ್ಮ ಬಳಿ ಸ್ವಲ್ಪ ಹೊತ್ತು ಇದ್ದರೆ ಪರವಾಯಿಲ್ಲ ತಾನೆ?' ಎಂಬ ಪ್ರಶ್ನೆ ನಿಮ್ಮ ಕುರಿತಾಗಿ ಬಂದ ತಕ್ಷಣ (ದಾಕ್ಷಿಣ್ಯದ ಮೌನಕ್ಕೆ ಇನಿತೂ ಆಸ್ಪದವಿಲ್ಲದಂತೆ) ನೀವು ಗಂಭೀರವಾಗಿ 'ಪರವಾಯಿದೆ ಸ್ವಾಮಿ' ಎಂದು ಉತ್ತರಿಸಬೇಕು. ಇದೊಂದು ಆಶ್ಚರ್ಯಕರವೂ, ಆಘಾತಕಾರಿಯೂ ಆದ ಪ್ರತಿಕ್ರಿಯೆಯಾದ್ದರಿಂದ ಆ ಚೀಲಧಾರಿಯ ಮುಖ ಒಮ್ಮೆಲೇ ಪೆಚ್ಚಾಗಬಹುದು. ಆತ ಸ್ವಲ್ಪ ಚುರುಕು ಮಿದುಳಿನವನಾಗಿದ್ದರೆ ಕಣ್ಣುಗಳು ಆಶ್ಚರ್ಯದಿಂದ ಮಿನುಗಬಹುದು. ನಮ್ಮಂತೆ ಪ್ರಯೋಗಗಳಲ್ಲಿ ಆಸಕ್ತಿ ಇದ್ದವನಾದರೆ ಮೆಚ್ಚುಗೆಯ ನಗೆಯೊಂದು ಹೊರಬರಬಹುದು. ಏನೂ ಇಲ್ಲದ ಕೊರಟರಾಯನಾಗಿದ್ದರೆ 'ನೀನೋರ್ವ ಅರೆ ಹುಚ್ಚನೇನೋ' ಎಂಬ ಭಾವನೆ ಮುಖದಲ್ಲಿ ಸುಳಿದಾಡಬಹುದು. ಚೀಲಧಾರಿಯ ಮುಖದಲ್ಲಿನ ಪ್ರತಿಕ್ರಿಯೆ ಏನೇ ಇದ್ದರೂ ನೀವು ಮಾತ್ರ ಒಂದೇ ಒಂದು ಎಳೆ ನಗುವನ್ನೂ ಹೊರಚೆಲ್ಲಬಾರದು. ನಿಮ್ಮ ಮುಖ ಗಂಭೀರವಾಗಿದ್ದಷ್ಟೂ ನಿಮಗೇ ಲಾಭ, ಸ್ವಲ್ಪ ಹೊತ್ತು ನಿಮ್ಮ ಮುಖವನ್ನೇ ಅವಲೋಕಿಸಿ ನಿರಾಶನಾದ ಆತನ ಮುಖದಲ್ಲಿ ನಂತರ 'ಬಂದ ದಾರಿಗೆ ಸುಂಕವಿಲ್ಲ'ವೆಂಬ ಹತಾಶ ಭಾವನೆಯೊಂದು ಗೋಚರಿಸಬಹುದು. ಅಲ್ಲಿಗೆ ನಿಮ್ಮ ಪದಪ್ರಯೋಗ ಯಶಸ್ವಿಯಾಯಿತು. ನಿಮಗೆ ಅಂಟಬಹುದಾಗಿದ್ದ ಚೀಲರೂಪೀ ಪೀಡೆಯೂ ಕಳೆಯಿತು. ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯುಷ್ಯವಂತೆ!

ಯಾವುದೋ ಧೈರ್ಯದಲ್ಲಿ ನಿಮ್ಮ ಮುಂದೆ ಕೊರೆದಂತೂ ಆಯ್ತು. ಈಗ ಸಂಪಾದಕರಿಗೆ 'ಈ ಲೇಖನವನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಕಳಿಸುತ್ತಿದ್ದೇನೆ, ಪರವಾಯಿಲ್ಲ ತಾನೇ?' ಎಂದು ಬರೆದು ಕೇಳಬೇಕಾಗಿದೆ. ಸಂಪಾದಕರು 'ಪರವಾಯಿಲ್ಲ' ಎನ್ನುತ್ತಾರೋ 'ಪರವಾಯಿದೆ' ಎಂಬ ಪದಪ್ರಯೋಗ ಮಾಡಿಬಿಡುತ್ತಾರೋ ಹೇಳುವುದು ಕಷ್ಟ. ಪ್ರಕಟಿಸಲು ಪರವಾಯಿಲ್ಲವೆನಿಸಿದರೆ ನನಗೆ ಸಿಗುವ ಉತ್ತರ 'ಪರವಾಯಿಲ್ಲ. ಅದಿಲ್ಲದೆ ಅವರ ಬಲಬದಿಯ ಬುಟ್ಟಿಗೆ ಬೀಳಲು ಪರವಾಯಿಲ್ಲವೆಂದೆನಿಸಿದರೆ ನನಗೆ ಸಿಗುವ ಉತ್ತರ 'ಪರವಾ ಇದೆ' ಎಂಬುದೂ ನನಗೆ ಈಗಾಗಲೇ ಗೊತ್ತಾಗಿಹೋಗಿದೆ.

**('ಮುಗುಳು', ೧೯೮೬)**

# ೪. ಕೋಪ ಬಂದ ಕಾಲಕ್ಕೆ

**- ಜಯಶ್ರೀ ದೇಶಪಾಂಡೆ**

"ಅರಿಷಡ್ವರ್ಗಗಳಲ್ಲಿ ಒಂದೆಂಬ ಗರಿಮೆಯುಳ್ಳ ಕ್ರೋಧ ಆವರಿಸಿರದ ನರ, ಅರ್ಥಾತ್ ಸರಳವಾದ ಶಬ್ದಗಳಲ್ಲಿ ಹೇಳಬೇಕೆಂದರೆ 'ಕೋಪ ಬಾರದಿರುವ ಮನುಷ್ಯರು' ಇದ್ದಾರೆ ಎಂದರೆ ನಂಬೋದು ಕಷ್ಟವೇ. ಅದೂ ಈಗಿನ ಕಾಲದಲ್ಲಿ, ಅಲ್ಲ ಯಾವ ಕಾಲವಾದರೇನು? ಕೋಪ ಬರುವುದರಲ್ಲಿ ಒಂದಿನಿತು ಹೆಚ್ಚು ಕಡಿಮೆ ಇದ್ದಿರಬಹುದಾದರೂ ಕೋಪವೇ ಬರಲ್ಲ ಅನ್ನುವವರು ಊಂ ಊಂ... ಇರಲಿಕ್ಕಿಲ್ಲ ಅಥವಾ ಕೋಪ ಬಂದರೂ ತೋರಗೊಡದವರು ಇರಲಿಕ್ಕೂ ಸಾಕು. ಹಾಗಂತ ಅವರಿಗೆ ಕೋಪವೇ ಬರದು ಎಂದು ಜನರಲೈಸ್ ಮಾಡಿ ಸಾರಾಸಗಟು ಹೇಳಲಿಕ್ಕಾಗದು. ಕೋಪ ಬರುವುದು ಬೇರೆ, ಅದನ್ನು ಪ್ರಕಟಪಡಿಸುವುದು ಬೇರೆ ಅಲ್ಲವೆ?

ಹಾಗೆ ನಮ್ಮ ಪುರಾಣಪುರುಷರಾದ ದೇವಾನುದೇವತೆಗಳ, ಋಷಿಮುನಿಗಳ ತಂಡದಲ್ಲಿ ಕೋಪಕ್ಕೆ ಹೆಸರಾದವರಿಲ್ಲವೆ? ಧಂಡಿಯಾಗಿ ಇದ್ದಾರೆ! ಅದರಲ್ಲೂ ದೇವತೆಗಳ ಕೋಪ ಅಂದರೆ ಯಾವುದೋ ಜೀವ, ಯಾವುದೋ ಸೃಷ್ಟಿಗೆ ಕುತ್ತು ಬಂತೂಂತಲೇ ಲೆಕ್ಕ!

ಇನ್ನು ಋಷಿಮುನಿಗಳಷ್ಟು ಕೋಪಿಷ್ಠರು ಜಗತ್ತಿನಲ್ಲೇ ವಿರಳ ಅಂದರೆ ತಪ್ಪಿಲ್ಲ. ಬೃಗು ಮುನಿಯ ಕೋಪದ ಕಥೆ ಕೇಳಿದ್ದೀರಾ? ಕೋಪ ಬಂದಾಕ್ಷಣ, ಅಪಾಯಿಂಟ್‌ಮೆಂಟು ಕೂಡಾ ತೆಗೆದುಕೊಳ್ಳದೆ, ಪಾಪ! ಲಕ್ಷ್ಮಿಯಿಂದ ಕಾಲೊತ್ತಿಸಿಕೊಳ್ಳುತ್ತಿದ್ದ ಶ್ರೀಮನ್ನಾರಾಯಣನೆದುರು 'ಧೀಂ' ಎಂದು ಹೋಗಿ ನಿಂತಿದ್ದೂ ಅಲ್ಲದೆ, ಉದ್ರೇಕ ಮೀರಿ ಅವನನ್ನು ಒದ್ದೂ ಬಿಟ್ಟು, ಅಷ್ಟೂ ಸಾಲದೆ 'ಮಾನವ ಗರ್ಭದಲ್ಲಿ ಭೂಮಿಯಲ್ಲಿ ಹುಟ್ಟು' ಅಂತ ಶಾಪವನ್ನೂ ಕೊಟ್ಟು ಬಿಡಬೇಕೆ? ಬೃಗುಮುನಿ ಫುಟ್‌ಬಾಲ್ ಪ್ರವೀಣನೇನಾದರೂ ಇದ್ದನೋ ಅಂತ ನನ್ನನುಮಾನ! ಅಥವಾ ಕರಾಟೆ ಕಿಕ್ ಎಕ್ಸ್‌ಪರ್ಟೋ?!

ಇನ್ನು 'ದೂರ್ವಾಸ' ಎನ್ನಲೂ ಕೊಂಚ ಭಯವೆ. ಅವನನ್ನು ತಡವಿ ಎಲ್ಲಾದರೂ ಸ್ವರ್ಗದಿಂದಲೇ ಒಂದು ಶಾಪವನ್ನು ಟೆಲಿಪಥಿ ಮೂಲಕ ಭೂಮಿಗೆ ರವಾನಿಸಿ ಬಿಟ್ಟರೆ? ಇನ್ನು ಜಮದಗ್ನಿ, ವಿಶ್ವಾಮಿತ್ರ, ಪರಶುರಾಮ, ಕೌಶಿಕ... ಒಬ್ಬರೇ? ಇಬ್ಬರೇ?... ಮನ್ವಂತರಗಳು ಅಖಂಡ ತಪ್ಪಸನ್ನಾಚರಿಸಿ ಎಂಥೆಂತಾ ದೇವತೆಗಳನ್ನೂ, ಅದ್ಭುತಾನೇಕ

ಶಕ್ತಿಗಳನ್ನೂ ಕೈವಶಪಡಿಸಿಕೊಂಡ ಇವರುಗಳೇ ಕೋಪವನ್ನು ಗೆಲ್ಲದಿದ್ದಾಗ ಇನ್ನು ನಮ್ಮ ನಿಮ್ಮಂಥವರು ಏನು ಲೆಕ್ಕ ಬಿಡಿ!



ಕೋಪದ ಸಹೋದರರಾದ ಕಾಮ, ಲೋಭ, ಮೋಹ, ಮದ, ಮತ್ಸರಗಳಿಗಿಂತ ಕೋಪವೇ ಪ್ರಕಟಿಸಲು ಹೆಚ್ಚು ಸುಲಭ ಅನ್ನಿಸುತ್ತದೆ. ಈ ಕೋಪ ಪ್ರಕಟಣೆಯಲ್ಲೂ ಹಲವು ಹತ್ತು ವಿಧಗಳಿರಬಹುದು. ಮುಖಗಂಟಿಕ್ಕಿ, ಕಣ್ಣು ಕೆಕ್ಕರಿಸಿ, ಹಲ್ಲು ಕಚ್ಚಿ, ಮುಖವನ್ನು (ಕಪ್ಪಗಿದ್ದರೂ) ಕೆಂಪಗಾಗಿಸಿಕೊಂಡು, ತಾರಕಕ್ಕೆ ಸ್ವರವನ್ನೊಯ್ದು ಗರ್ಜಿಸುವ ಸಿಂಹರಾಶಿಯವರಿರಬಹುದು. 'ವಟ.. ವಟ ವಟ...'ವೆಂದು ಅಲ್ಲಲ್ಲೇ ಅಷ್ಟಷ್ಟೇ ಬೈದು ಅಸಮಾಧಾನ ಪ್ರಕಟಿಸುವವರೂ ಇದ್ದಾರೆ. ಯಾರದೋ ಮೇಲಿನ ಸಿಟ್ಟನ್ನು, ಇನ್ನಾರನ್ನೋ ಬೈಯುವುದರ ಮೂಲಕವೂ ಪ್ರಕಟಿಸುವವರಿರುವಂತೆ ಮಹಿಳಾ ವರ್ಗ ಕಿಚನ್ನಿನ ಸಲಕರಣೆಗಳನ್ನು ಬೀಸಿಯೋ, ಕುಕ್ಕಿಯೋ ಕೋಪವನ್ನು ಬಹಿರ್ಗತಗೊಳಿಸುವುದೂ ಉಂಟು. 'ಅತ್ತೆಯ ಮೇಲಿನ ಕೋಪ ಕೆತ್ತಿಯ ಮೇಲೆ' ಎಂಬ ಗಾದೆಯೂ ಇದೆ!

ಕೈಯೊಳಗಿನ ಪೌಡರ್ ಡಬ್ಬವನ್ನು ಟಕ್ಕು ಟಕ್ಕೆಂದು ನೆಲಕ್ಕೆ ಕುಟ್ಟಿ ಭೋಂ' ಎಂದು ಅಳುವ ಕಂದನೂ ಪ್ರಕಟಿಸುತ್ತಿರುವುದು ಅದರದೇ ಭಾಷೆಯ ಕೋಪ. ಆಟವಾಡುವ ಮಕ್ಕಳಲ್ಲಂತೂ ಮಾತು ಮಾತಿಗೂ ತಲೆಹಾಕುವುದು ಕೋಪವೇ. ಕೈಕೇಯಿಯಂತೆ ರೂಂ ಹೊಕ್ಕು, (ಬೋರಲು?) ಬಿದ್ದು ತೋರ್ಪಡಿಸುವ ಕೋಪ ಪ್ರದರ್ಶನವೂ ಒಂದು ವಿಧ. ಬಯಸಿದ ವಸ್ತು ಸಿಕ್ಕಲಿಲ್ಲ ಎಂದು ಮಡದಿ ಮಕ್ಕಳೂ, ಊಟ-ತಿಂಡಿ ಸಮಯಕ್ಕೆ ಒದಗಲಿಲ್ಲ ಎಂದು ಪತಿವರ್ಯರೂ ಮುನಿಸುಕ್ಕಿಸುವುದು ಸರ್ವೇಸಾಮಾನ್ಯ! ನಮ್ಮ ರಾಮಣ್ಣನ ಕೋಪ ಪ್ರದರ್ಶನ ಒಂದು ವಿಚಿತ್ರ ರೀತಿ, ಕುರ್ಚಿಯೊಂದರಲ್ಲಿ ಕುಳಿತು, 'ನನಗೆ ಭಾಳ ಸಿಟ್ಟು ಬಂದದನೋ... ಭಾಳಾ..." ಎಂದು ರಾಗವಾಗಿ ಹೇಳಿದರೆ ಆ ಸಿಟ್ಟಿಗೆ ಆ 'ಭಾಳಾ' ಎಷ್ಟು ಹೆದರಬೇಕೆನ್ನುವುದು ಅವನಿಗೆ ಬಿಟ್ಟಿದ್ದು. ಅಂತಿಂಥ ಘೋರನಲ್ಲ ಅವನು!

'ಸಿಟ್ಟಲಾ? ಬರ್ಲಿ.. ಬರ್ಲಿ...!' ಎಂದು ನಕ್ಕು-ಚಿಮ್ಮಿ ಓಟ ಕಿತ್ತಿದ್ದೇ!

ಕೆಲವರ ಕೋಪದ ಪರಿಣಾಮ ಅವರ ಸ್ಥಾನಮಾನ, ಸಾಮರ್ಥ್ಯ, ಆರ್ಥಿಕ ವರಮಾನ, ಅಧಿಕಾರ ಅಂತಸ್ತುಗಳನ್ನವಲಂಬಿಸಿ ರೂಪ ಪಡೆಯುವುದುಂಟು. ಎಷ್ಟು 'ದೊಡ್ಡ'ವರೋ ಅಷ್ಟೇ 'ತೂಕ'ದ ಕೋಪ ಹಾಗೂ

ಪರಿಣಾಮ! ಉದಾಹರಣೆಗೆ ಜವಾನನಿಗೆ ಕೋಪ ಬಂದು ಸಿಡಾರೆಂದಾಗ 'ಕ್ಯಾರೇ' ಅನ್ನದೆ ಮುಂದೆ ಹೋಗುವಂತೆ, 'ದಿವಾನ'ನಿಗೆ ಕ್ರೋಧವೇರಿ ಗುಟುರು ಹಾಕಿದಾಗ ಮಾಡಲು ಸಾಧ್ಯವೆ?

ಕೋಪಕ್ಕೂ ಅಂತಸ್ತುಗಳಿರುತ್ತವೆ. ಅದರಲ್ಲೂ ಪ್ರಿನ್ಸಿಪಾಲರ ಕೋಪಕ್ಕೂ, ಹೆಡ್‌ಮಾಸ್ಟರ್ ಕೋಪಕ್ಕೂ 'ಡಿಗ್ರಿಯಲ್ಲಿ ವ್ಯತ್ಯಾಸವುಂಟು. ಅಷ್ಟೇ ಏಕೆ? ಕೆಲವು ಗೃಹಗಳಲ್ಲಿ ಯಜಮಾನ ಹಾಗೂ ಯಜಮಾನತಿಯ ಕೋಪಕ್ಕೆ ನೀಡಬೇಕಾದ ಬೆಲೆಯನ್ನೂ, ಇಂಪಾರ್ಟೆನ್ಸ್‌ನ್ನೂ ನಿರ್ಧರಿಸುವುದು ಆ ಮನೆಯ ಜ್ಯೂನಿಯರ್ ಮೆಂಬರುಗಳು ಮತ್ತು ಆಳುಕಾಳುಗಳು! ಒಬ್ಬರು-ಸಾಮಾನ್ಯವಾಗಿ ಯಜಮಾನನೇ-ಸಿಟ್ಟು ಬ್ರಹ್ಮರಂಧ್ರಕ್ಕೇರಿ ಕಿರುಚಾಡಿದರೂ, 'ಅಯ್ಯೋ, ಅಪ್ಪ ತಾನೇ...! ಐದ್ ನಿಮಿಷ ಕೂಗಿ ತಾವೇ ಸುಮ್ಮನಾಗ್ತಾರೆ



ಬಿಡು...' ಎಂದುಕೊಂಡು ತಮ್ಮ ಪಾಡಿಗೆ ಟಿ.ವಿ ನೋಡುವಾಗ, ಬ್ರಹ್ಮರಂಧ್ರಕ್ಕಿಂತಲೂ ಮೇಲಿನ ಜಾಗ ಇದ್ದಿದ್ದರೆ ಆ ಕೋಪ ಅಲ್ಲಿಗೇ ಖಂಡಿತ ಹೋಗ್ತಿತ್ತೋ ಇಲ್ಲವೋ ಹೇಳಿ! ಅದೇ 'ಯಜಮಾನತಿ'ಯ ಒಂದೇ ಒಂದು 'ಏನೋ ಅದು...?' ಎನ್ನುವ 'ಹೂಂ'ಕಾರ ಎಂಥಾ ಗಲಿಬಿಲಿ ಎಬ್ಬಿಸಿತೋ? ಅಶಿಸ್ತನ್ನು ಕಣ್ಮುಚ್ಚಿ ಕಣ್ ತೆರೆಯುವಷ್ಟರಲ್ಲಿ 'ಸರಿ' ಪಡಿಸಿತೋ ಗೊತ್ತಷ್ಟೇ! ಹೋಗಲಿ ಬಿಡಿ, ಇದು ಮನೆಮನೆಯ ಕಥೆ. ಇನ್ನು "ಅಮ್ಮಾವ್ರ ಗಂಡಂ'ದಿರು ಇರುವಂತೆ 'ಅಪ್ಪಾವ ಹೆಂಡಂದಿ'ರೂ ಇರಬಹುದು. ಯಾಕೆಂದರೆ ಪ್ರತಿಯೊಂದು ವಿಷಯಕ್ಕೂ 'ಅಪವಾದ'ಗಳಿರುತ್ತವೆ!

ಕೋಪತಾಪಗಳನ್ನು ಕಣ್ಣಿಗೆ ಕಟ್ಟುವಂತೆ, ಮನಕ್ಕೆ ನಾಟುವಂತೆ ವರ್ಣಿಸುವುದರಲ್ಲಿ ಕವಿಗಳನ್ನು ಸಾಹಿತಿಗಳನ್ನು ಮೀರಿಸುವವರುಂಟೆ?

ಇಗೋ.... ಇದನ್ನು ಪರಾಂಬರಿಸಿ. ದಕ್ಷನ ಮನೆಯಲ್ಲಿ ಯಜ್ಞ ನಡೆದಿದೆ. ಅನಾಹ್ವಾನಿತಳಾದರೂ ದಾಕ್ಷಾಯಿಣಿ ಶಿವನ ಅಸಮ್ಮತಿಯನ್ನು ಗಣಿಸದೆ ಅಲ್ಲಿಗೆ ತೆರಳಿ ಶಿವನಿಂದೆಯನ್ನು ಸಹಿಸಲಾಗದೆ ಹೋಮಕುಂಡದಲ್ಲಿ ಧುಮುಕಿ ಆತ್ಮಾರ್ಪಣೆಗೈದಳಷ್ಟೆ? ರುದ್ರ... ಕಾಲರುದ್ರನಾಗಿಬಿಟ್ಟ, ಪತ್ನಿವಿಯೋಗದ ವಿಷಯವನ್ನರಿತ ಈಶ್ವರ ಆಗ.

ಬಿದಿರ್ದೆ ಖಟ್ವಾಂಗಮಂಬರವು ಕಪ್ಪಳಿಕೆ

ಕೋಟಿ ರವಿಕಾಂತಿಯಿಂ ವದನವ ಸೂಸುತಿರ

ತಾನಾಡೆಯುಮೆಯಾಡೆ ಹರಿಯಜ ಸುರರಾಡೆ

ನೋಡುತಿರ್ದಾ ಗಣಂಗಳ್ ನೋಡಲಮ್ಮಮ್ಮಾ!!

ಎಂದು ವರ್ಣಿಸುತ್ತಾನೆ ಕವಿ, ಶಿವತಾಂಡವದ ದೃಶ್ಯವೇ ಕಣ್ಣೆದುರು ಚಿತ್ರಿತವಾಗುವಂತಿರುವ ಇಲ್ಲಿ ರೌದ್ರರಸ ರಭಸವಾಗಿ ಹರಿದು ಬಂದಿದೆ.

ಇನ್ನು ಜನಪದ ಕವಿತೆಗಳಲ್ಲಿ ಮುನಿಸಿನ ಬಗೆಗಿನ ಸುಂದರ ಪದ್ಯವೊಂದು ಪ್ರೇಯಸಿ ತನ್ನ ಪ್ರಿಯನನ್ನು ಓಲೈಸುವವಳೆಂದು ಹೀಗೆ ಬಿಡಿಸಿ ಹೇಳುತ್ತಿದೆ.

ಸಿಟ್ಟಾಕೊ ಸಿಡುಕ್ಯಾಕೊ ನನ ಜಾಣಾ

ಇಟ್ಟಾಯ್ತು ನಿನಮ್ಯಾಲೆ ನನ ಪ್ರಾಣಾ

ಒಟ್ಟಿಗೆ ಇರುವಾ ಒಟ್ಟಾರೆ ಮಡಿವಾ

ಕಟ್ಟಾಣಿ ಕೊಟ್ಟೆನ್ನ ಕೈಗೊಳ್ಳೋ...

ಹೇಗಿದೆ? ಇನ್ನು ಗದ್ಯದಲ್ಲೂ 'ಕೆಂಡಾಮಂಡಲ' ಕೋಪವನ್ನು ವರ್ಣಿಸುವ ಸಾಹಿತಿಗಳು ನಾನಾ ವಿಧದ ಪದಪುಂಜಗಳನ್ನು ಬಳಸುವುದುಂಟು. ಬದ್ಧ ಬೃಕುಟಿ, ಉದ್ದಿಷ್ಟ ನೇತ್ರದ್ವಯಗಳು.. ರಂಜಿತ ನಾಸಿಕಾಗ್ರ, ಜ್ವಲಿತಾಕ್ಷಿಗಳು.. ಅರ್ಥಾತ್ ಗಂಟಿಕ್ಕಿದ ಹುಬ್ಬು, ಉದ್ರೇಕಿತ ಕಣ್ಣುಗಳು, ಕೆಂಪು ಕೆಂಪಾದ ಮೂಗಿನ ತುದಿ (ಕೋಪದಿಂದ), ಉರಿಯುವ ಕಣ್ಣುಗಳು.. ಇತ್ಯಾದಿ. ಇನ್ನು ಸ್ತ್ರೀಯರಲ್ಲಾದರೆ 'ಏರಿಳಿಯುವ ಎದೆ' ಎಂಬ ಇನ್ನೊಂದು ವಿಶೇಷಣವೂ ಸೇರಿಕೊಂಡೀತು!



ಸ್ತ್ರೀಯರ ಕೋಪ ಎಂಬುದು 'ಅಳು' ಎಂಬ ಬ್ರಹ್ಮಾಸ್ತ್ರವಾಗಿ ಪರಿವರ್ತಿತವಾಗುವುದು ಬಲು ಶೀಘ್ರ ಕೋಪಕ್ಕೆ ಜಪ್ಪೆನ್ನದ ಗಂಡು ಕೊನೆಗೊಮ್ಮೆ ಆ ಅಸ್ತ್ರಕ್ಕೆ ಶರಣಾಗದಿರನೆ? ಅಲ್ಲಿಗೆ ಕೊನೆ. ಅರ್ಥಾತ್ ಕೋಪ ಇಳಿಯಿತೆಂದು ಲೆಕ್ಕ. ಹಾಗೆ ಪುರುಷರೂ ಕೆಲವೊಂದು ಸಂದರ್ಭಗಳಲ್ಲಿ ತಮ್ಮ ಕೋಪವನ್ನು ನಾರ್ಮಲ್‌ಗೆ ತರಲು ಅವರಿಗೆಂದೇ ಮೀಸಲಾದ 'ಶಮನಕಾರಿಗಳಿಗೆ ಮೊರೆ ಹೋಗುವುದು ಸತ್ಯವಷ್ಟೆ?

'ಕೋಪ ಎಂಬುದು ಅನರ್ಥ ಸಾಧನ' ಎನ್ನುತ್ತಾರಾದರೂ ಒಳಮನಸ್ಸನ್ನು ಹೊರಹಾಕಿ, ಒತ್ತಡಗಳನ್ನು ಕಳಚಿಕೊಳ್ಳುವ ಸಾಧನವಾಗಿಯೂ ಇದು ಬಳಕೆಯಲ್ಲಿದೆ. ಆದರೆ 'ಅತಿ ಸರ್ವತ್ರ ವರ್ಜಯೇತ್' ಎಂಬಂತೆ 'ಅತಿಯಾದ ಕೋಪ ಖಂಡಿತಕ್ಕೂ ಅಪಾಯಕಾರಿ', ಸಂಸ್ಕೃತ ಶ್ಲೋಕವೊಂದು ಹೀಗೆನ್ನುತ್ತದೆ...

ಉತ್ತಮೇಸ್ಯಾತ್ ಕ್ಷಣಂ ಕೋಪಂ

ಮಧ್ಯಮೆ ಘಟಿಕಾದ್ವಯಂ

ಅಧಮೇ ಸ್ಯಾದಹೋರಾತ್ರಂ

ಪಾಪಿಷ್ಠೆ ಮರಣಾಂತಿಕಂ!!

ಉತ್ತಮರಲ್ಲಿ ಅರ್ಥಾತ್ ಒಳ್ಳೆಯವರಲ್ಲಿ ಕ್ಷಣ ಕಾಲ, ಸಾಧಾರಣದವರಲ್ಲಿ ಎರಡು ಗಳಿಗೆ, ಕೀಳು ಜನರಲ್ಲಿ ಇಡೀ ದಿನ ಕೋಪವಿದ್ದರೆ, ಮಹಾ ಪಾಪಿಗಳಲ್ಲಿ ಸಾಯುವವರೆಗೂ ಕೋಪವಿರುವುದಂತೆ.

ಇನ್ನು ಯಾರು ಯಾವ ಕೆಟಗರಿಗೆ ಸೇರಿದವರು ಎಂಬುದನ್ನು ನಾವು ನಾವೇ ನಿರ್ಧರಿಸಿಕೊಳ್ಳಬೇಕೆಂದು ಹೇಳಿದರೆ ಕೋಪವಿಲ್ಲ ತಾನೆ?

**(ಕರ್ಮವೀರ, 21.7.1996)**

## ೫. ಕೀಟಪ್ರಿಯರನ್ನು ವರಿಸಿದಾಗ...

### - ಜ್ಯೋತ್ಸ್ನಾ ಕಾಮತ್

ನಾನು ಪಾಂಡಿತ್ಯಪ್ರೇಮಿ! ವರಿಸಿದರೆ, ವಿದ್ವಾಂಸನೊಬ್ಬನನ್ನೇ ವರಿಸುವುದು! ಎಂದು ಚಿಕ್ಕಂದಿನಿಂದಲೇ ನಿರ್ಧರಿಸಿದ್ದೆ. ಹೀಗಾಗಿ ಅಮೇರಿಕೆಯಲ್ಲಿ ಡಾಕ್ಟರೇಟು ಮಾಡಿದಾತ, ಘನ ವಿದ್ವಾಂಸನೇ ಸರಿ, ಎಂದು ಹಿಂದೆ ಮುಂದೆ ವಿಚಾರಿಸದೇ ರಾಯರನ್ನು ಬಾಳ ಸಂಗಾತಿಯನ್ನಾಗಿ ಮಾಡಿಕೊಂಡಿದ್ದೆ. ಆದರೆ ಮದುವೆಯಾದ ಹೊಸದರಲ್ಲೇ ಅವರು ನುಸಿ, ನೊಣ, ಸೊಳ್ಳೆ, ಜಿರಳೆಗಳ ಪಂಡಿತರು ಎಂದು ತಿಳಿದು ಮೋಸ ಹೋದದ್ದು ಅರಿವಾಯಿತು! 'ಪಾಲಿಗೆ ಬಂದದ್ದೇ ಪಂಚಾಮೃತ' ಎಂದು ಸಮಾಧಾನ ಮಾಡಿಕೊಳ್ಳದೇ ನಿರ್ವಾಹವೇ ಇರಲಿಲ್ಲ. ಅಂತೆಯೇ ಅವರು ರಾಜಾಸ್ಥಾನದ ಕೃಷಿ ವಿಶ್ವವಿದ್ಯಾಲಯದಲ್ಲಿ ಕೀಟ ಪಂಡಿತರು ಎಂದು ನೌಕರಿಗೆ ಸೇರಿಕೊಂಡಾಗ ರಾಮನನ್ನು ನಂಬಿದ ಸೀತೆ ವನವಾಸಕ್ಕೆ ಹೊರಟಂತೆ ನಾನೂ ನೀರಿಲ್ಲದ, ಮರುಭೂಮಿಯ ಒಣವಾಸಕ್ಕೆ ರಾಯರನ್ನು ಅನುಸರಿಸಿದ್ದೆ. ಆ ರೇಗಿಸ್ತಾನದಲ್ಲಿ ಅತ್ಯುಗ್ರ ಕೀಟಗಳಿಗೆ ಮೀಸಲಾದ ಅವರ ಗಮನ, ಲಕ್ಷ್ಯ-ಆರೈಕೆಗಳು ಇನ್ನು ಮುಂದೆ ನನಗೇ ಮೀಸಲು ಎಂದು ಭಾವಿಸಿದ್ದೆ! ನನ್ನ ಸಕಲ ಊಹೆಗಳೂ ಹುಸಿ ಹೋದಾಗ ನವ ವಿವಾಹಿತೆಯ ಮನಃಸ್ಥಿತಿ ಊಹಿಸುವುದು ಇತರರಿಗೆ ಬಿಟ್ಟದ್ದು!

ಬೆಡ್‌ರೂಮಿನ ತುಂಬ ಮಾಟವಾದ ತೇಗಿನ ಅಂದ-ಚಂದದ ಪೆಟ್ಟಿಗೆಗಳನ್ನು ರಾಯರು ಓರಣವಾಗಿ ಜೋಡಿಸಿಟ್ಟಿದ್ದರು. ಒಳ್ಳೆಯ ಛಾಯಾಚಿತ್ರಕಾರರೆಂದು ಗೊತ್ತಿದ್ದರಿಂದ ಅವುಗಳಲ್ಲಿ ಸುಂದರವಾದ ಛಾಯಾಚಿತ್ರಗಳಿರಬಹುದು, ಕೆಲವುಗಳಲ್ಲಾದರೂ ನೋಟಿನ ಕಂತೆಗಳನ್ನೋ, ಬೆಳ್ಳಿಯ ನಾಣ್ಯಗಳನ್ನೋ ಇಟ್ಟಿರಬಹುದು ಎಂದು ಪುಳಕಗೊಂಡಿದ್ದೆ. ಕೆಲ ದಿನ ಕಳೆದ ಬಳಿಕ ಕುತೂಹಲ ತಡೆಯದೇ ಕೇಳಿಯೂ ಬಿಟ್ಟೆ. ಉತ್ತರ ರೂಪದಲ್ಲಿ ನಸುನಗುತ್ತಾ ರಾಯರು ಆ ಪೆಟ್ಟಿಗೆಗಳನ್ನು ಇಳಿಸಿ ಹಾಸಿಗೆಯ ಮೇಲೆ ಇರಿಸಿ ಮುಚ್ಚಳ ತೆಗೆದರು. ವ್ಯಾಕ್! ನಾನು ಹೆದರುತ್ತಿರುವ, ಅಸಹ್ಯಪಟ್ಟುಕೊಳ್ಳುತ್ತಿರುವ ಕೀಟಕೋಟಿಯ ಕೆಲ ಮಾದರಿಗಳು ಪೆಟ್ಟಿಗೆಯಲ್ಲಿ ವಿರಾಜಮಾನವಾಗಿದ್ದವು! ಮುಖ ಗಂಟಿಕ್ಕಿ ಅಲ್ಲಿಂದ ಕಂಬಿ ಕೀಳಲಿದ್ದಾಕೆಯನ್ನು ಇವರು ತೋಳು ಹಿಡಿದು ನಿಲ್ಲಿಸಿದರು. ಇವು ನನಗೆ ಪಂಚಪ್ರಾಣ! ಇನ್ನು ಮುಂದೆ ನೀನು ನನಗಿಂತ ಮಿಗಿಲಾಗಿ ಈ ಕೀಟ-ಧನವನ್ನು ಪ್ರಯತ್ನಪೂರ್ವಕವಾಗಿ ಪ್ರೀತಿಸು' ಎಂದು ಅನುನಯದಲ್ಲೇ ಕೇಳಿಕೊಂಡರು. ಕೀಟಪ್ರಿಯರನ್ನು ಪ್ರಿಯತಮನನ್ನಾಗಿಸಿ ಆರಿಸಿದ್ದಕ್ಕೆ ಈ ಬೆಲೆ ಅಲ್ಲವೇ! ಇದು ಕ್ರಿಮಿ ಸಮಾನ! ಎಂದೆನಿಸಿದರೂ ಆಗಲಿ ಎಂದೆ. 'ಒಳ್ಳೆ ಹುಡುಗಿ!' ಎಂದು ಬೆನ್ನು ತಟ್ಟಿದರು. ಅಲ್ಲಿಂದ ನನಗೆ ಕೀಟಲೋಕದ ಪರಿಚಯ ನೀಡಲಾರಂಭಿಸಿದರು.



ಒಂದು ರವಿವಾರ, ತಮ್ಮ ಕೀಟ ಖಜಾನೆ'ಯ ೧೩ನೇ ನಂಬರಿನ ಪೆಟ್ಟಿಗೆಯನ್ನು ಪ್ರದರ್ಶಿಸುತ್ತ ವಿವರಣೆ ನೀಡಲಾರಂಭಿಸಿದರು. 'ನಮ್ಮದು ಬಡದೇಶವೆಂದು ಪಾಶ್ಚಿಮಾತ್ಯರು ಹೇಳುತ್ತ ಬಂದರೂ, ಇಂಥ ಜೀವಕೋಟಿಯಲ್ಲಿ ನಮ್ಮನ್ನು ಸರಿಗಟ್ಟುವವರು ಬೇರಾರೂ ಇಲ್ಲ. ನಮ್ಮಲ್ಲಿರುವ ಕೀಟ ವೈವಿಧ್ಯದಿಂದ ಅಮೇರಿಕನ್ನರಿಗೆ ಹೊಟ್ಟೆ ಕಿಚ್ಚಾಗಿದೆ! ಅವುಗಳನ್ನು ಅಪಹರಿಸಲೆಂದೇ, ಮಹಮ್ಮದ ಗಝನಿಯನ್ನು ಮೀರಿಸಿ ಐವತ್ತು ಬಾರಿ ಭಾರತಕ್ಕೆ ದಾಳಿ ಮಾಡಿದರೂ ಆಶ್ಚರ್ಯವಿಲ್ಲ! ಆದರೆ ಈ ವೈಜ್ಞಾನಿಕ ದಾಳಿ, ಬೆಳ್ಳಿ-ಬಂಗಾರಗಳಿಗಾಗಿ ಅಲ್ಲವಾದ್ದರಿಂದ ಯಾರ ಗಮನಕ್ಕೂ ಬರುವುದಿಲ್ಲ! ಆದ್ದರಿಂದ ಮೊದಲೇ ಎಚ್ಚರ ನೀಡುತ್ತೇನೆ, ನಮ್ಮಲ್ಲಿರುವ ಕೀಟ ಸಂಪತ್ತಿನ ಕುರಿತು ಯಾರಲ್ಲಿಯೂ ಬಾಯಿ ಬಿಡಕೂಡದು! ಬಚ್ಚಿಟ್ಟ ಬೆಳ್ಳಿ, ಬಂಗಾರ, ಮುತ್ತು, ರತ್ನ, ಆಸ್ತಿಪಾಸ್ತಿಗಳಿಗಾಗಿ ಆದಾಯಕರ ಇಲಾಖೆಯವರು ಸಂದೇಹಾಸ್ಪದ ಜನರ ವಾಸಸ್ಥಾನಗಳ ಮೇಲೆ ದಾಳಿ ಮಾಡುವಂತೆ ಶೀಘ್ರದಲ್ಲಿ ಈ ಅಪೂರ್ವ ಕೀಟ ಸಂಗ್ರಹಕ್ಕಾಗಿ ದಾಳಿ ಪ್ರಾರಂಭವಾದರೆ ಆಶ್ಚಯವೇ ಇಲ್ಲ' ಎನ್ನುತ್ತ ಪೆಟ್ಟಿಗೆಗಳನ್ನು ತೆರೆಯಲಾರಂಭಿಸಿದರು.

"ಇಕೋ! ಈ ಜಿಟ್ಟೆ ನೋಡು, ಜಗತ್ತಿನಲ್ಲೇ ಅತಿ ವಿರಳವಾದ ಜಾತಿಯದು. ಬಂಗಾರದಲ್ಲಿ ತುಲಾಭಾರ ಮಾಡಬೇಕಾದದ್ದು ಮತ್ತೆ ಈ ಜೀರುಂಡೆ, ಅಮೇರಿಕೆಯ ಸೂಚಿಪರ್ಣಿ ವೃಕ್ಷಗಳನ್ನು ಭಕ್ಷಿಸುವ ಕೀಟಗಳನ್ನು

ನಿಯಂತ್ರಿಸುತ್ತದೆ. ಈ ಜೈವಿಕ ನಿಯಂತ್ರಣ ಪ್ರಯೋಗಕ್ಕಾಗಿ ಇದರ ಸಂತಾನಕ್ಕೆ ವಿಪರೀತ ಬೇಡಿಕೆ! ಚಿನ್ನದ ಮೊಟ್ಟೆಯಿಡುವ ಕುಕ್ಕುಟ ಎಂದೇ ತಿಳಿ! ಅನುಕೂಲ ಕೂಡಿ ಬಂದಾಗ ಅವುಗಳ ಸಂತಾನಾಭಿವೃದ್ಧಿ ಕೈಕೊಂಡು ಅಮೇರಿಕೆಗೆ ಅವನ್ನು ರಫ್ತು ಮಾಡಿ ಕೈತುಂಬ ಸಂಪಾದನೆ ಮಾಡಬೇಕು ಎಂದು ಕನಸು ಕಟ್ಟಿದ್ದೇನೆ... ಈಜಿಪ್ತಿನ ಕ್ಲಿಯೋಪಾತ್ರಳಿಗೂ ಮುಜುಗರ ಉಂಟು ಮಾಡುವ ಸುವರ್ಣಾಭರಣಗಳನ್ನು ನಿನಗೆ ತೊಡಿಸುತ್ತೇನೆ" ಎಂದು ಅಭಿಮಾನದಿಂದ ನುಡಿದರು. 'ಕ್ಲಿಯೋಪಾತ್ರಳ ಆಭರಣಗಳು ಅಷ್ಟೊಂದು ವೈಶಿಷ್ಟ್ಯಪೂರ್ಣವಾದುವೇ?' ಎಂದು ಕುತೂಹಲದಿಂದ ವಿಚಾರಿಸಿದಾಗ, 'ಅಲ್ಲವೇ ಮತ್ತೆ? ಕೈರೋ ವಸ್ತು ಸಂಗ್ರಹಾಲಯದಲ್ಲಿ ಅವನ್ನು ಕಣ್ಣಾರೆ ಕಂಡಿದ್ದೇನೆ! ಸುವರ್ಣದಲ್ಲಿ ಜೀರುಂಡೆಗಳನ್ನು ನಿರ್ಮಿಸಿ, ವಜ್ರ ವೈಡೂರ್ಯಗಳಿಂದ ಕೆಚ್ಚಿ ಕೊರಳ ಸರಗಳನ್ನು ಕಲಾತ್ಮಕವಾಗಿ ರಚಿಸಿದ್ದಾರೆ. ಇಂದು ಅಂಥ ಒಂದೇ ಒಂದು ಸರ ನಿರ್ಮಿಸಲು ಕನಿಷ್ಠ ೧೦ ಲಕ್ಷ ರೂಪಾಯಿ ಬೇಕು...' ಎನ್ನುತ್ತಿದ್ದಂತೆ, 'ಅವು ನಿಜವಾದ ಕೀಟಗಳಲ್ಲವಲ್ಲ! ಆದ್ದರಿಂದ ನನಗೂ ಅಂಥ ಕಂಠಾಭರಣ ಧರಿಸುವ ಆಸೆ! ರಾಯರು ಮಾಡಿಸಿದ್ದು! ಎಂದು ತೊಟ್ಟು ಅಭಿಮಾನದಿಂದ ಮೆರೆಯುತ್ತೇನೆ!" ಎಂದು ಮುಗ್ಧತೆಯಿಂದ ನುಡಿದಾಗ, 'ಕೀಟ ವ್ಯಾಪಾರದಿಂದ ಕೋಟಿ ಗಳಿಸುವ ಸಂದರ್ಭ ಬಂದಲ್ಲಿ ಖಂಡಿತ ಎರಡೆಳೆಯ ಜೀರುಂಡೆಯ ಸರ ಮಾಡಿಸುತ್ತೇನೆ' ಎಂದು ಖಚಿತ ವಾಗ್ದಾನ ಮಾಡಿದಾಗ ಉಬ್ಬಿ ಹೋಗಿದ್ದೆ.

ಸಾಯಂಕಾಲ. ತಮ್ಮ ಕೃಷಿ ವಿಶ್ವವಿದ್ಯಾಲಯದ ಆಸ್ತಿಪಾಸ್ತಿ ಚಟುವಟಿಕೆಗಳ ಕಲ್ಪನೆ ಕೊಡಲು, 'ವಿಹಾರ'ಕ್ಕೆ ಕರೆದೊಯ್ದರು. ಜೋಬನೇರದ ಹಳ್ಳಿಗೆ ಹೊಂದುವ



ಯಾವ ಸೀರೆ ರವಿಕೆ ಧರಿಸಲಿ? ಎಂದು ಯೋಚಿಸುತ್ತಿದ್ದಾಗ, ನಿನ್ನನ್ನು ಅಲ್ಲಿ ಯಾರೂ ನೋಡುವುದಿಲ್ಲ! ಆ ಪ್ರಾಣಿ ಪ್ರಪಂಚವನ್ನು ನೀನೇ ಕಣ್ಣಾರೆ ನೋಡಬೇಕು!' ಎಂದು ಹಾಸ್ಯ ಮಾಡಿದರು. ಯಥೇಚ್ಛ ತಿಂದುಂಡು ಆನೆಗಳಂತೆ ಬೆಳೆದು ನಿಂತಿದ್ದ ಗೋವುಗಳನ್ನು ನೋಡಿ ತಬ್ಬಿಬ್ಬಾದೆ(ಕರಾವಳಿಯ ಆಡುಗಳಂತಹ ಆಕಳು ನೋಡಿದಾಕೆ ನಾನು!). ರಾಯರು, 'ಗುಲಾಬ್ ಸಿಂಗ್! ಸುಖವಾಗಿದ್ದೀಯಾ? ದನಕರುಗಳ ಉಣ್ಣೆ ಕಾಟ ಹೇಗಿದೆ?' ಎಂದು ವಿಚಾರಿಸಿದರು. ನಿಮ್ಮ ನಿವಾರಣೋಪಾಯದಿಂದ ಈಗ ನಿಯಂತ್ರಣಗೊಂಡಿದೆ ಬಾಬೂಜೀ...' ಎಂದು ವಿನಯದಿಂದ ಉತ್ತರಿಸಿದ. ಮುಂದೆ ಕುಕ್ಕುಟ ರಾಜ್ಯಕ್ಕೆ ಹೋದೆವು. ಅಲ್ಲಿಯ ಅಧಿಪತಿ ಭಂವರ್ ಲಾಲ್‌ಗೆ, 'ಕೋಳಿಗಳ, ಹೇನು ಬಾಧೆ ಹೇಗಿದೆ?' ಎಂದು ಕೇಳಿದರು. 'ಈಗ ಅದೆಷ್ಟೋ ವಾಸಿ!' ಎಂದು ಆತ ಉತ್ತರಿಸಿದ. ಮೊಣಕೈ ಉದ್ದದ ಬೆಂಡೆಕಾಯಿ, ಹಾಲುಗುಂಬಳದ ಅಳತೆಯ ಬದನೆಕಾಯಿ, ಭಾರವಾಗಿ ಬೆಳೆದು ನಿಂತ ಕೋಸು, ಅರೆಯುವ ಕಲ್ಲಿನ ಆಕಾರದ

ಹೂಗೋಸು, ಬಂಗಾರದ ತೆನೆಯಂತೆ ಹೊಳೆಯುತ್ತಿದ್ದ ಗೋದಿಯ ತೆನೆಗಳನ್ನು ಹೊತ್ತು ನಿಂತ ಹೊಲಗಳು, ಕಣ್ಣಿಗೆ ಹಬ್ಬವುಂಟು ಮಾಡಿದವು.

ಅಡಿಗೆ ಮನೆಯಲ್ಲಿ ನನ್ನ ಕೈಗೆ ಸುಲಭವಾಗಿ ಎಟುಕದಷ್ಟು ಎತ್ತರದ ನಾಗೊಂದಿಗೆಯ ಮೇಲೆ ಗಾಜಿನ ಭರಣಿಗಳನ್ನು ಸಾಲಾಗಿ ಜೋಡಿಸಿಟ್ಟಿದ್ದರು. ಒಮ್ಮೆ ಸ್ಟೂಲು ಹತ್ತಿ ಅವನ್ನು ಇಳಿಸಲು ಯತ್ನಿಸುವಷ್ಟರಲ್ಲಿ ರಾಯರು ಪ್ರತ್ಯಕ್ಷರಾದರು! 'ಮುಟ್ಟಬೇಡ! ಅವುಗಳಲ್ಲಿರುವ ಕೀಟಗಳನ್ನು ಕ್ರಮವಾಗಿ ಅರ್ಥೈಸುತ್ತಿದ್ದೇನೆ' ಎಂದರು. ವಿವಿಧ ಬಾಟ್ಲಿಗಳಲ್ಲಿದ್ದ ಕೀಟ-ಧನವನ್ನು ಕ್ರಮವಾಗಿ ಪರಿಚಯಿಸಲಾರಂಭಿಸಿದರು. ಇದು ಪಚ್ಚೆಸರಿನ ಕೀಟ, ಕಾಳುಗಳ ಮೇಲೆ ಮೂರು-ನಾಲ್ಕು ಮೊಟ್ಟೆ ಇಡುತ್ತದೆ. ಅವುಗಳಿಂದ ಹೊರ ಬಂದ ಕೀಟಮರಿಗಳು ಒಳಸೇರಿ ಪಿಷ್ಟಪದಾರ್ಥವನ್ನೆಲ್ಲ ತಿಂದು ದಷ್ಟಪುಷ್ಟವಾಗಿ ಬೆಳೆದು ಕಾಳನ್ನು ಪೋಲು ಮಾಡುತ್ತವೆ. ಸಕಾಲದಲ್ಲಿ ಸಂಗ್ರಹವನ್ನು ಪರೀಕ್ಷಿಸದಿದ್ದರೆ, ಏನೂ ಉಳಿಯುವುದಿಲ್ಲ! ಇಲ್ಲಿ ನೋಡು, ವಠಾಣಿ ಕಾಳಿನಿಂದ ಹೊರಬಂದ ಕೀಟಗಳು, ಪ್ರಣಯದಾಟ ನಡೆಸಿವೆ! ಮತ್ತೆ ಈ ಅಕ್ಕಿ-ಕೀಟಗಳು ತಮ್ಮ ಎಂಜಲಿನಿಂದ ಹೊರ ಹೊಮ್ಮಿಸಿದ ರೇಶಿಮೆಯಂಥ ಎಳೆಯಿಂದ ಹತ್ತಾರು ಕಾಳುಗಳನ್ನು ಜೋಡಿಸಿ ಅದರಲ್ಲಿ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಮೈದಾ, ಗೋಧಿ ಹಿಟ್ಟುಗಳಲ್ಲಿ ಬರಿಗಣ್ಣಿಗೆ ಕಾಣಿಸದ ಸೂಕ್ಷ್ಮ ಕೀಟಗಳು ಅಸಂಖ್ಯ ಪ್ರಮಾಣದಲ್ಲಿರುತ್ತವೆ.' ಎಂದೆಲ್ಲ ಹೇಳುತ್ತಿರುವಾಗಲೇ ಅವುಗಳ ಬಗ್ಗೆ ಜುಗುಪ್ಸೆ ಉಂಟಾಗಿ... 'ಇವುಗಳೆಲ್ಲ ನನ್ನ ಅಡಿಗೆ ಮನೆಯಲ್ಲಿ ಬೇಡವೇ ಬೇಡ! ನಿಮ್ಮ ಅಧ್ಯಯನ ಕೊಠಡಿಗೆ ವರ್ಗಾಯಿಸಿ!' ಎಂದು ದೃಢ ನಿರ್ಧಾರದ ಧ್ವನಿಯಲ್ಲಿ ಹೇಳಿದಾಗ, ರಾಯರು ಬೆಚ್ಚಿದರೂ, 'ಆಯಿತು, ಮಹಾರಾಯತಿ!' ಎಂದು ಆ ಕೂಡಲೇ ಕಾರ್ಯೋನ್ಮುಖರಾದರು.

ರಾಯರು ತಂದಿಟ್ಟ ಧಾನ್ಯಗಳು ಕೀಟ ಪೀಡಿತವೆಂದು, ತರಕಾರಿಗಳನ್ನು ತರಿಸಿದೆ. ಕೈಚೀಲದಿಂದ ತೆಗೆದ ತರಕಾರಿ ದರ್ಶನದಿಂದಲೇ ಪಿತ್ಥ ನೆತ್ತಿಗೇರಿತು. ಎರೆಹುಳುವಿನಂತೆ



ಸುತ್ತಿಕೊಂಡಿದ್ದ ಬೆಂಡೆಕಾಯಿ, ಹಾವಿನಂತೆ ಅಕರಾಳ-ವಿಕರಾಳವಾಗಿದ್ದ ಬದನೆಕಾಯಿ, ಮೈ-ಕೈಗೆಲ್ಲ ಕಜ್ಜಿಯಾಗಿದ್ದ ಗಜ್ಜರಿ, ಕೋಸು! 'ಅಲ್ರೀ, ಕಣ್ಣು ಬಿಟ್ಟು ನೋಡಿಯೇ ಈ ತರಕಾರಿ ತಂದಿದ್ದೀರಿ ತಾನೇ?' ಎಂಬ ನನ್ನ ವ್ಯಂಗ್ಯ ಪ್ರಶ್ನೆಗೆ, 'ಹಾಗಲ್ಲ ಕಣೆ! ಇದ್ದ ಒಂದೇ ಜೋಡಿ ಕಣ್ಣನ್ನು ಹತ್ತು ಮಾಡಿ, ನೋಡಿಯೇ ನಾನು ಆರಿಸಿದ್ದೇನೆ...' ಎಂಬ ವಿವರಣೆ ಬಂದಿತು. ನನ್ನ ಸಿಟ್ಟು ಇನ್ನಷ್ಟು ಹೆಚ್ಚಿತು. ತರಕಾರಿಯವನಿಗೇ ಆರಿಸಲು ಹೇಳಿದ್ದರೆ, ಅರ್ಧದಷ್ಟಾದರೂ ಒಳ್ಳೆಯ ತರಕಾರಿ ಸಿಗುತ್ತಿತ್ತೋ ಏನೋ!' ಎಂದೆ. "ನನ್ನಂತೆ ನೀನೂ ಕೀಟಶಾಸ್ತ್ರ ಅಭ್ಯಾಸಿಸಿದ್ದರೆ, ನೀನೂ ಹೀಗೆಯೇ ಮಾಡುತ್ತಿದ್ದಿ. ಕೃಷಿ ವಿಶ್ವವಿದ್ಯಾಲಯದ ಫಾರ್ಮಿನಲ್ಲಿ ಬೆಳೆದ, ಹುಲುಸಾದ ಕೀಟ ರಹಿತ ತರಕಾರಿ ನೀನು ನೋಡಿರುವಿ

ಎಂದು ಗೊತ್ತು! ಆದರೆ ಅವುಗಳ ಆಕರ್ಷಣೆಯೆಲ್ಲ ಬಳಸಿದ ರಾಸಾಯನಿಕ ಗೊಬ್ಬರ ಮತ್ತು ಸಿಂಪಡಿಸಿದ ಅತ್ಯಂತ ವಿಷಕಾರಿ ಕೀಟನಾಶಕಗಳಿಗೆ ಸೇರಿ ಹೋಗುತ್ತದೆ. ಅವುಗಳ ಸೇವನೆ, ಅನಾರೋಗ್ಯಕ್ಕೆ ಅಮಂತ್ರಣವಿತ್ತಂತೆ! ನಾನು ತಂದ ಈ ತರಕಾರಿಯಲ್ಲಿ ಕೀಟಗಳು ಸುಖವಾಗಿ ವಾಸ ಮಾಡಿದ್ದರಿಂದ, ಅವುಗಳ ಮೇಲೆ ರಾಸಾಯನಿಕಗಳ ರಾಮಬಾಣ ಪ್ರಯೋಗವಾಗಿಲ್ಲ ಎಂಬುದು ಖಚಿತ! ಅಕಸ್ಮಾತ್ ಒಂದೆರಡು ಕೀಟಗಳು ಉದರಕ್ಕೆ ಇಳಿದರೂ ಅದರಿಂದ ಯಾವ ಹಾನಿಯೂ ಇಲ್ಲ. ಜನಸಂಖ್ಯೆ ಬೆಳೆಯುತ್ತಲೇ ಇರುವುದರಿಂದ ಕೀಟಗಳನ್ನೇ ಆಹಾರವಾಗಿ ಸೇವಿಸುವ ದಿನಗಳೂ ಮುಂದೊಮ್ಮೆ ಬರಲಿವೆ!' ಎಂದು ದೀರ್ಘ ವಿವರಣೆ ಕೊಟ್ಟರು. ಅದೇನೇ ಇರಲಿ, ಇಂಥ ತರಕಾರಿ ಮುಟ್ಟುವ ನನಗೆ ಅಳುಕು. ಅದನ್ನು ನೀವೇ ತೊಳೆದು, ಕೀಟಗಳನ್ನು ಕಳೆದು ಹೆಚ್ಚಿ ಕೊಡಿ!' ಎಂದು ಅವರಿಗೆ ಕೆಲಸ ಹಚ್ಚಿದೆ. ಮುಂದೆ ಇದೇ ನೆವ ಮಾಡಿ ತರಕಾರಿ ತಂದಾದ ಮೇಲೆ ತೊಳೆದು ಹೆಚ್ಚಿ ಕೊಡುವ ಕೆಲಸ ಅವರಿಗೆ ಮೀಸಲಾಯಿತು ಎಂದು ಬೇರೆ ಹೇಳಬೇಕಿಲ್ಲವಷ್ಟೇ!

ನನ್ನ ಅತ್ಯಮೂಲ್ಯ ಇತಿಹಾಸ ಗ್ರಂಥಗಳಿಂದ ಹುಡಿ ಉದುರಲಾರಂಭಿಸಿತು! ಕೀಟ ಪಂಡಿತರನ್ನು ಕೂಗಿ ಕರೆದು ತೋರಿಸಿದೆ. 'ಇದೇನು ಮಹಾ! ಮಾನವರಲ್ಲಿ ಪುಸ್ತಕ ಕೀಟಗಳಿರುವಂತೆ ಕೀಟಲೋಕದಲ್ಲಿ ಗ್ರಂಥ ಷಟ್ಪಾದಿಗಳಿವೆ! ಮಾನವನು ಓದು ಬರಹಗಳನ್ನು ಪ್ರಾರಂಭಿಸುವ ಕೋಟ್ಯಂತರ ವರ್ಷಗಳ ಪೂರ್ವದಿಂದಲೇ ಇವು ಕಾಣಿಸಿಕೊಂಡಿವೆ! ಮನುಷ್ಯನಿಗಿಂತ ನಿಕಟವಾಗಿ, ಮೊದಲಿನಿಂದ ಮಳೆ, ಚಳಿ, ಬಿಸಿಲುಗಳಿಗೆ ಮೈಯೊಡ್ಡುವ ಬದಲಿಗೆ ಸುಭದ್ರವಾದ ಕಪಾಟುಗಳಲ್ಲಿ ಬೀಡು ಬಿಟ್ಟಿವೆ. ಈ ಪ್ರವೃತ್ತಿಯಲ್ಲಿ ತಪ್ಪೇನಿದೆ? ಅವು ನಿನ್ನ ಪುಸ್ತಕಗಳ ಹೊರ ಕವಚ, ಬೆನ್ನೆಲುಬುಗಳನ್ನು ಛಿದ್ರ ಮಾಡಿದರೂ ಅವುಗಳಲ್ಲಿದ್ದ ಘಟನೆಗಳನ್ನು ತಿಂದು ತೇಗುವುದಿಲ್ಲವಲ್ಲ!' ಎಂದು ತನ್ನ ಕೀಟ ಬಾಂಧವ್ಯ- ಪ್ರೀತಿ ತೋರ್ಪಡಿಸಿದಾಗ, ಅವರ ಬೆನ್ನಿಗೊಂದು ಗುದ್ದುವುದನ್ನು ಬಿಟ್ಟು ಇನ್ನೇನು ಮಾಡಲು ಸಾಧ್ಯವಿತ್ತು?

ಒಂದು ರಾತ್ರಿ ಸರ್ ಸರ್! ಭರ್ ಭರ್ ಎಂದು ಸದ್ದು ಪ್ರಾರಂಭವಾದಾಗ, ಸುಖ ನಿದ್ರೆಯಲ್ಲಿದ್ದ ರಾಯರು ಧಿಗ್ಗನೆದ್ದು ದೀಪ ಹಾಕದೇ ಕೈಯಲ್ಲಿ ಟಾರ್ಚ್ ಹಿಡಿದು



ಬೆಡ್ ರೂಂ ಶೋಧಿಸಲಾರಂಭಿಸಿದರು. ಏನೋ ಅಪರೂಪದ ಅವಕಾಶ ಕಳೆದುಕೊಳ್ಳಬೇಡ, ಎನ್ನುವವರಂತೆ ನನ್ನನ್ನೂ ಬಡಿದೆಬ್ಬಿಸಿದರು. ಟಾರ್ಚ್ ಬೆಳಕಿನಲ್ಲಿ ಜೊಂಡಿಗ ಸಂಸಾರವನ್ನು ಕಂಡು ಕಿರುಚಿಕೊಳ್ಳುವಂತಾಯಿತು! 'ಶ್! ಶ್! ಸುಮ್ಮನಿರು! ಅವುಗಳ ಪ್ರಣಯ ಪ್ರಸಂಗಕ್ಕೆ ಆತಂಕ ಮಾಡಬೇಡ' ಎಂದು ಪಿಸುಮಾತಿನಲ್ಲಿ ಹೇಳಿದರು. 'ಜೊಂಡಿಗ ಶೃಂಗಾರ ವೀಕ್ಷಣೆಯ ರಸಿಕ ಶಿರೋಮಣಿಗಳೇ' ಎಂದು ಮೂದಲಿಸಿದೆ. 'ಕಾಮ ಚೇಷ್ಟೆಗಳೆಲ್ಲ ಕೇವಲ ಮಾನವರ ಸೊತ್ತು ಎಂದು ಬಗೆದೆಯಾ? ಋತು ಸ್ನಾನವಾದ ಜಿರ್ಳೆ ಕುಮಾರಿಯ ಮೈಯಿಂದ ಹೊರ ಸೂಸುತ್ತಿರುವ

ಸುಗಂಧಕ್ಕೆ ಆಕರ್ಷಿತನಾಗಿ ಜೊಂಡಿಗ ರಾಜಕುಮಾರ ಧಾವಿಸಿ ಬಂದಿದ್ದಾನೆ. ಸತತವಾಗಿ ಮೀಸೆ ಅಲ್ಲಾಡಿಸುತ್ತ ಅವಳನ್ನು ಆಘ್ರಾಣಿಸುತ್ತ ಮುಂದುವರೆಯುತ್ತಿದ್ದಾನೆ. ನೋಡು!' ಎಂದರು. “ಓಹ್! ಗಂಡು-ಹೆಣ್ಣು ಎಂದು ಈ ಕತ್ತಲೆಯಲ್ಲಿ ಕೀಟ ಪಂಡಿತರು ಹೇಗೆ ಗುರುತಿಸಿದರೋ!' ಎಂಬುದು ನನ್ನ ಕೊಂಕು. 'ಹೆಣ್ಣಿನ ಹೊಟ್ಟೆ ನೋಡಲ್ಲ! ಮೊಟ್ಟೆಗಳನ್ನು ತುಂಬಿಕೊಂಡು ಊದಿಕೊಂಡಿದೆ. ಕುಕ್ಕುಟಗಳಂತೆ ಹೆಣ್ಣುಕೀಟಗಳೂ ಗಂಡಿನೊಡನೆ ಕೂಡಿಕೊಳ್ಳುವ ಮುನ್ನವೇ ಭಾವಿ ಪೀಳಿಗೆಯನ್ನು ಬರಮಾಡಿಕೊಳ್ಳುವ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿರುತ್ತವೆ... ಸಂಭೋಗದಲ್ಲಿ ಜಿರ್ಳೆ ಕುಮಾರಿಯನ್ನು ಬಿಗಿದಪ್ಪಲು ಗಂಡಿಗೆ ಒಂದು ಜೋಡಿ ಹೆಚ್ಚಿನ ಬಾಹುಗಳಿವೆ. ತಿಳಿದುಕೊಳ್ಳಲು ಇಷ್ಟು ಸಾಕು!' ಜಿರಳೆ ಕೀಟ ಶರೀರ ವಿಜ್ಞಾನವನ್ನು ರಾಯರು ಸ್ವಲ್ಪದರಲ್ಲಿ ತಿಳಿಯಪಡಿಸಿದರು.

ನೋಡನೋಡುತ್ತಿದ್ದಂತೆ ಗಂಡು, ಉದ್ದ ಮೀಸೆಗಳಿಂದ ಹೆಣ್ಣಿನ ಅಂಗಾಂಗಗಳನ್ನು ಸ್ಪರ್ಷಿಸಲಾರಂಭಿಸಿತು. ಜೊಂಡಿಗ ಜೋಡಿಗೆ ತಮ್ಮ ಪಿಸು ಮಾತು ಕೇಳಿಸಬಾರದು ಎಂಬ ಎಚ್ಚರಿಕೆಯ ಮೆಲು ಪಿಸು ಮಾತಿನಲ್ಲಿ 'ಜಿರ್ಲೆ ಕುವರಿ, ನೀ ಬಲು ಸುಂದರಿ, ಎಷ್ಟು ಡೌಲು ವೈಯ್ಯಾರಿ!' ಎಂದರು. ಅದಕ್ಕೆ ಸರಿ ಹೊಂದುವಂತೆ ಜಿರಳೆ ಕಾಮಣ್ಣ, ತನ್ನೆರಡು ಗರಿ ಬಿಚ್ಚಿ ನವಿಲಿನ ವೈಯ್ಯಾರದಿಂದ(!) ನೃತ್ಯ ಪ್ರಾರಂಭಿಸಿತು. ಈ ಕೇಕೆಗೆ ಮರುಳಾದ ಕೀಟ ಕನ್ಯ, ತನ್ನ ಜನನೇಂದ್ರಿಯ ಹಿಗ್ಗಿಸಿ ಸ್ನೇಹಿತನನ್ನು ಸ್ವಾಗತಿಸಿದಳು. ಕ್ಷಣಾರ್ಧದಲ್ಲಿ ಗಂಡು-ಹೆಣ್ಣು ಒಂದಾಗಿದ್ದವು. ಈ ನೋಟವನ್ನು ಸಹಿಸಲಾಗದ ಇನ್ನೊಬ್ಬ ಜೊಂಡಿಗ ಖಳನು ತನ್ನ ಉದ್ದ ಮೀಸೆಗಳನ್ನು ಭರ್ಜಿಯಂತೆ ತಿರುಗಿಸುತ್ತ, ಹತ್ತಿರಕ್ಕೆ ಬರುತ್ತಿದ್ದಂತೆ ಪ್ರೇಮ ಬಂಧಿತ ಜೋಡಿ ಅರೆಕ್ಷಣದಲ್ಲಿ ಕಾಲಿಗೆ ಬುದ್ಧಿ ಹೇಳಬೇಕೇ? ಜೀವದಾಸೆಗೆ ಅವು ಮಾಯವಾದ ಪರಿ ನೋಡಿ ಕನಿಕರವೆನಿಸದಿರಲಿಲ್ಲ. 'ಪಾಪ! ಅವಕ್ಕೂ ಆಸೆ-ಆಕಾಂಕ್ಷೆಗಳು ಇರುತ್ತವೆ. ತೀರ ಅಸಹಾಯಕ ಸ್ಥಿತಿಯಲ್ಲಿ ಅವನ್ನು ಆಹುತಿ ತೆಗೆದುಕೊಳ್ಳುವುದು ಬುದ್ದಿಜೀವಿ ಎಂದು ಕರೆಸಿಕೊಳ್ಳುವ ಮಾನವನಿಗೆ ಗೌರವ ತರುವಂತಹುದಲ್ಲ!' ಎಂದು ನನ್ನಲ್ಲಿ ಬೌದ್ಧಿಕ ಜಾಗೃತಿಯನ್ನುಂಟು ಮಾಡುತ್ತಿದ್ದಂತೆ ಅಲ್ಲಿ ನೆರೆದಿದ್ದ ಜೊಂಡಿಗಗಳೆಲ್ಲ ಕಣ್ಮರೆಯಾಗಿ ಬಿಟ್ಟಿದ್ದವು.

ಮರುದಿನ ಮುಂಜಾನೆ ನಾಸ್ತಾ ತಯಾರಿ ಮಾಡುತ್ತಿದ್ದಾಗ ಹೆಣ್ಣು ಜಿರಳೆಯೊಂದು ತನ್ನ ಮೊಟ್ಟೆಗಳ ಚೀಲ ಹೊತ್ತು ಅತ್ತಿತ್ತ ಅಲೆದಾಡುವುದು ಕಂಡಿತು. ಅದನ್ನು ಕಂಡ



ರಾಯರು, ಅದರ ಚೀಲದಲ್ಲಿ ಹದಿನಾರು ಮೊಟ್ಟೆಗಳಿರುತ್ತವೆ. ಅತ್ಯಂತ ಸುರಕ್ಷಿತ ಸ್ಥಳದಲ್ಲಿ ಚೀಲವನ್ನು ಅಂಟಿಸಿ ಸುರಕ್ಷಿತತೆಗಾಗಿ ಸುತ್ತಮುತ್ತಲಿನ ಸುಣ್ಣ ಮಣ್ಣಿನಿಂದ ಮುಚ್ಚಿ ಬಿಡುತ್ತವೆ. ಹೊರ ಬಂದ ಮರಿಗಳಿಗೆ ಗರಿಗಳು ಇಲ್ಲದಿದ್ದರೂ, ಉಳಿದೆಲ್ಲ ರೀತಿಯಲ್ಲಿ ಅವು ಪಾಲಕರನ್ನೇ ಹೋಲುತ್ತವೆ... ಒಂದು ಹೆರಿಗೆಯಲ್ಲಿ ಹದಿನಾರು ಮೊಟ್ಟೆಗಳು

ಇರುವುದರಿಂದ ಅವುಗಳ ಸಂತಾನ ಬಲು ಬೇಗ ವರ್ಧಿಸುತ್ತದೆ...' ಎಂದು ಹೇಳುವಷ್ಟರಲ್ಲಿಯೇ ನಡುವೆಯೇ ಬಾಯಿ ಹಾಕಿ, 'ಮನೆ ತುಂಬ ಜಿರಲೆಗಳ ವಾಸ! ಅವುಗಳ ಮಲ-ಮೂತ್ರ ವಿಸರ್ಜನೆಯ ದುರ್ನಾತ ಅಸಹ್ಯವಾಗಿದೆ! ಅವನ್ನು ನೋಯಿಸದೆಯೇ ನಿಯಂತ್ರಿಸಬಾರದೇ?' ಎಂದು ಕೇಳಿಕೊಂಡೆ. 'ಯಾವ ಮನೆಯೂ ಜಿರಳೆಗಳಿಂದ ಮುಕ್ತವಾಗಿಲ್ಲ. ಅವುಗಳನ್ನು ನಿಯಂತ್ರಿಸಲು ಕಂಡು ಹಿಡಿದ, ಬಳಸುತ್ತಿರುವ ವಿಪೌಷಧಿಗಳು ನಮಗೂ ಎಷ್ಟೊಂದು ಅಪಾಯಕಾರಿ ಎಂದು ಆಧುನಿಕರು ಅರಿತಂತೆ ಇಲ್ಲ! ಮೊನ್ನೆ ಓರ್ವ ಗೃಹಿಣಿ ತನ್ನ ಸ್ವಾನುಭವದಿಂದ, “ಜಿರಳೆಗಳನ್ನು ನಿಯಂತ್ರಿಸಲಾಗದಿದ್ದರೆ, ಅವುಗಳ ಪಾಡಿಗೆ ಅವನ್ನು ಬಿಟ್ಟುಬಿಡಿ!” ಎಂಬ ನಿಜವಾದ ಹಿತೋಕ್ತಿ ಕೊಡ ಮಾಡಿದ್ದಾಳೆ. ಅಮೇರಿಕೆಯಂಥ ಮುಂದುವರೆದ ರಾಷ್ಟ್ರದಲ್ಲಿಯೂ ಜೊಂಡಿಗಗಳ ಸಂಖ್ಯೆ ಅಪಾರವಾಗಿದ್ದು, ಅವುಗಳಿಂದ ಮಕ್ಕಳ ಕಾಯಿಲೆಗಳು ಹೆಚ್ಚುತ್ತಿರುವುದನ್ನು ಕಂಡು ಹಿಡಿದಿದ್ದಾರೆ. ನಮಗೆ, ಜಿರಳೆಗಳೊಂದಿಗೆ ಸಹಜೀವನ ನಡೆಸುವುದೊಂದೇ ನಿರಪಾಯಕಾರಿ ಮಾರ್ಗ!' ಎಂದು ತಮ್ಮ ತೀರ್ಪನ್ನಿತ್ತರು.

ಆದರೆ ಕಾಟ ವಿಪರೀತ ಹೆಚ್ಚಿತು. ಹಾಲು, ಮೊಸರು, ಬೆಣ್ಣೆ, ತುಪ್ಪ, ಸ್ವಲ್ಪವೇ ಸಡಿಲಾದ ಮುಚ್ಚಳದ ಡಬ್ಬಗಳಲ್ಲೆಲ್ಲ ಜೊಂಡಿಗಗಳು ಭದ್ರವಾದ ಸಾಮ್ರಾಜ್ಯ ಕಟ್ಟಲು ಹವಣಿಸಲಾರಂಭಿಸಿದವು. ಈಗ ಮಾತ್ರ ರಾಯರಿಗೆ ಅವುಗಳ ಹತೋಟಿ ಅನಿವಾರ್ಯವಾಯಿತು. ಕಲೆ ಹಾಕಿದ ಖಾಲಿ ಟೂತ್ ಪೇಸ್ಟ್ ಡಬ್ಬಗಳನ್ನು ತಂದರು. ಪ್ರತಿಯೊಂದಕ್ಕೂ ಮಾಟವಾದ ವರ್ತುಲಾಕಾರದ ಕಂಡಿಗಳನ್ನು ಮಾಡಿದರು. ಅವುಗಳ ಒಳಗೆ ಕಾಗದದ ಚೂರು ಸೇರಿಸಿ ಜಿರಳೆಗಳಿಗೆ ಮನೆಗಳನ್ನು ಕಟ್ಟಿ ಹಾಸಿಗೆಯನ್ನು ಸಿದ್ಧಪಡಿಸಿದರು! ಜಿರಳೆಗಳ ಓಡಾಟದ ಹಾವಳಿ ಹೆಚ್ಚು ಇರುವಲ್ಲಿ ಈ ನಾಲ್ಕಾರು ಮನೆಗಳನ್ನು ಇರಿಸಿದರು. ಇವು ಜಿರಳೆಗಳಿಗೆ ಅತ್ಯಂತ ನೆಮ್ಮದಿ ನೀಡುವ ಸುಖ ನಿವಾಸಗಳು! ಎಂದು ಘೋಷಿಸಿದರು. ರಾಯರ ಸಂಶೋಧನೆ ಹುಸಿ ಹೋಗಲಿಲ್ಲ. ಕೆಲ ದಿನಗಳ ಬಳಿಕೆ ಪ್ರತಿಯೊಂದು ಪೆಟ್ಟಿಗೆಯನ್ನೂ ತೆರೆದು ತೋರಿಸಿದಾಗ ಪ್ರತಿಯೊಂದರಲ್ಲೂ ಹತ್ತಿಪ್ಪತ್ತು ಜಿರಳೆಗಳು ಕಾಗದದ ಚೂರುಗಳಲ್ಲಿ ಮರೆಮಾಚಿಕೊಂಡಿದ್ದವು. ಹೊರ ಜಗಲಿಯಲ್ಲಿ, 'ಜಿರ್ಲೆ ನಿವಾಸ್'ಗಳನ್ನು ಒಂದೊಂದಾಗಿ ತಂದು, ಜಾಗ್ರತೆ ಒಂದೊಂದಾಗಿ ಬೀಳಿಸಿ ಅವು ಅತ್ತಿಂದಿತ್ತ ಧಾವಿಸಿದಾಗ ತಾಂಡವ ನೃತ್ಯ ಮಾಡುತ್ತ, ಕಾಲಿನಿಂದ ಮೆಟ್ಟಿ ಯಮ ಸದನಕ್ಕೆ ಕಳಿಸಿದರು. ಮರಿಗಳಿಗೆ ಕಥಕ್ಕಳಿ ಹಾಗೂ ಮೊಟ್ಟೆಗಳಿಗೆ ಮಣಿಪುರಿ ಪ್ರಕಾರಗಳನ್ನು ಮೀಸಲಿಟ್ಟರು. ಕಣ್ಣು ತಪ್ಪಿಸಿ ಗೋಡೆಗೇರಿದವುಗಳನ್ನು ಕೈಯಲ್ಲಿದ್ದ ಚರ್ಮದ ಪಟ್ಟೆಯಿಂದ ಮುಂದಾಗಿಯೇ ವೈಕುಂಠಕ್ಕೆ ಅಟ್ಟಿದರು.

ಇನ್ನು ಈ ಜಿರಳೆಗಳ ಕಳೇಬರಗಳ ಸದುಪಯೋಗ ಮಾಡುವಲ್ಲಿ ರಾಯರ ಪ್ರಯೋಗ ಅಪೂರ್ವದ್ದೆಂದು ಹೇಳಲೇಬೇಕು! ಮನೆಯಲ್ಲಿ ಅವರೇ ನಿರ್ಮಿಸಿದ ಚಿಕ್ಕ ಕೈತೋಟದಲ್ಲಿ ಕೆಂಪು ಇರುವೆಗಳು ತಮ್ಮ ಸಂತಾನ ಕೋಟಿಯನ್ನು ಏಕಪ್ರಕಾರವಾಗಿ ನಿರ್ಮಿಸಿದ್ದವು. ನೆಟ್ಟ ಹೂ ಗಿಡಗಳನ್ನು ಹಾಳುಗೆಡವುದಲ್ಲದೇ, ಆಹಾರದ ಕೊರತೆಯೆನಿಸಿದಾಗ ಮನೆಯ ಒಳಗೂ ನುಗ್ಗಿ ಬರಲಾರಂಭಿಸಿದ್ದವು. ಈಗ ರಾಯರು ಸತ್ತ ಜಿರಳೆಗಳನ್ನು ನಾಲ್ಕು ಗುಂಪುಗಳಲ್ಲಿ ವಿಭಾಗಿಸಿದರು. ಇರುವೆ ಸಾಲುಗಳ ಮಾರ್ಗದಲ್ಲಿ ಅವನ್ನು ಇರಿಸಿದರು. ವಿಪುಲವಾದ ಪೌಷ್ಟಿಕ ಮಾಂಸಾಹಾರ ಲಭ್ಯವಿದ್ದ ಸಂತೋಷದ ಸಮಾಚಾರವನ್ನು ಇರುವೆ ಸೈನಿಕರು ಒಬ್ಬರಿಂದ ಒಬ್ಬರಿಗೆ ಶೀಘ್ರವಾಗಿ ದಾಟಿಸಿದರು! ಗೂಡಿನಲ್ಲಿದ್ದ ಸಕಲ ಸೈನಿಕ ಪಡೆಯೂ ಈ ಅಪರೂಪದ ಅವಕಾಶವನ್ನು ಹುಸಿ ಹೋಗಗೊಡದೇ ಆಹಾರದ ವರ್ಗಾವಣೆಗೆ ಸನ್ನದ್ಧವಾಗಿ ಜಿರಳೆಗಳ ಸುತ್ತ ಜಮಾಯಿಸಿದವು. ಈ ಅವಕಾಶಕ್ಕಾಗಿಯೇ ಕಾದಿದ್ದ ರಾಯರು, ಅವುಗಳ ಮೇಲೆ ಬಿಸಿ ನೀರು ಸುರಿದು ಜಲ ಸಮಾಧಿ ಮಾಡಿಸಿದರು. ಬದುಕುಳಿದವಕ್ಕೆ ಪಂಪಿನಿಂದ ಸೀಮೆಎಣ್ಣೆ ಸೇಚನ ಮಾಡಿದರು. ಯಾವ ವಿಷಕಾರಿ ರಾಸಾಯನಿಕವನ್ನೂ ಬಳಸದೇ ಹೆಚ್ಚು ಖರ್ಚು ಮಾಡದೇ ಪರಪೀಡೆಗೆ ಹೆಸರಾದ ಜೊಂಡಿಗಗಳನ್ನೂ, ಇರುವೆಗಳನ್ನೂ ಏಕಕಾಲಕ್ಕೆ ನಿಯಂತ್ರಿಸಿದ ರಾಯರ ಕೀಟ ಪಾಂಡಿತ್ಯಕ್ಕೆ ತಲೆದೂಗುವಂತೆ ಆಯಿತು.

ತಮ್ಮ ವಿಜಯೋತ್ಸಾಹದಲ್ಲಿ, 'ನೋಡು, ಈ ಕೀಟಗಳೇ ಮಾನವರಿಗಿಂತ ಮೇಲು! ಅವಕಾಶ ಸಿಕ್ಕಲ್ಲಿ ತಿಂದುಂಡು ತೇಗಿ ಸಂತಾನೋತ್ಪತ್ತಿ ಮಾಡುತ್ತ ನೆಮ್ಮದಿಯಾಗಿರುತ್ತವೆ. ಅದಿಲ್ಲ! ಇದಿಲ್ಲ! ಎಂದು ದುಃಖ ಪಡುವುದಿಲ್ಲ! ಮಾನವನು ಅನಾಚಾರ ಮಾಡಿದರೂ ಪ್ರತಿಭಟಿಸದೇ ವೀರ ಸ್ವರ್ಗ ಪಡೆಯುತ್ತವೆ... ಮುಂದಿನ ಜನ್ಮದಲ್ಲಿ ಕೀಟವಾಗಿ ಹುಟ್ಟೋಣವೇ?' ಎಂದು ನನ್ನ ಪ್ರತಿಕ್ರಿಯೆಗೆ ಕಾದರು. 'ಬೇಡಪ್ಪ! ಈ ಇರುವೆಯ ಕಷ್ಟ, ಜಿರಲೆಗಳ ತರಲೆಗೆ ನಾನು ತಯಾರಿಲ್ಲ!' ಎಂದೆ. 'ಹಾಗಾದರೆ ಬಣ್ಣ-ಬಣ್ಣದ ಪಾತರಗಿತ್ತಿಯಾಗಿ ಹೂವಿನಿಂದ ಹೂವಿಗೆ ಹಾರುತ್ತ, ಮಧು ಹೀರುವ ವಿಲಾಸ ಜೀವನ ಹೇಗೆ?" ಎಂದರು. 'ಪರವಾಗಿಲ್ಲ! ಆಗ ಜೇನು ಇದ್ದ ದಾಸವಾಳ ಹೂಗಳನ್ನೆಲ್ಲ ನೀವು ನನಗೆ ಮೀಸಲಿಟ್ಟರೆ ಒಪ್ಪಿಗೆ!' ಎಂದಾಗ ಇಬ್ಬರೂ ಮನಸ್ವೀ ನಕ್ಕೆವು!

**(ಕರ್ಮವೀರ, ದೀಪಾವಳಿ ವಿಶೇಷಾಂಕ ೧೯೯೬)**

# ೬. ಬರಹಗಾರ್ತಿಯ ಬವಣೆಗಳು

**- ಡಾ. ಗುರುದೇವಿ ಹುಲೆಪ್ಪನವರಮಠ**

ಇತ್ತಿತ್ತಲಾಗಿ ಯಾರಾದರೂ ನನ್ನನ್ನು ಪರಿಚಯಿಸುತ್ತ ಇವರೂ ಬರೀತಾರೆ ಎಂದೇನಾದರೂ ಹೇಳಿದರೆ ನನ್ನೆದೆ ಡವಡವ ಹೊಡೆದುಕೊಳ್ಳುತ್ತದೆ. ಕೈ-ಕಾಲಲ್ಲಿಯ ಶಕ್ತಿ ಉಡುಗಿ ನಾಲಗೆಯ ಪಸೆ ಆರಿ ಆರು ತಿಂಗಳು ಅಜಾರಿ ಬಿದ್ದು ಎದ್ದವರನುಭವಿಸುವ ಸುಸ್ತನ್ನು ಅನುಭವಿಸುತ್ತೇನೆ. ಬರಹಗಾರ್ತಿಯೆಂದು ಕರೆಸಿಕೊಳ್ಳಲು ನಾನು ನಿರಾಕರಿಸುತ್ತಿರುವುದಕ್ಕೆ ಇರುವ ಕಾರಣಗಳನ್ನು ತಿಳಿದರೆ ನೀವು ಖಂಡಿತ ಕನಿಕರಿಸುತ್ತೀರಿ, ಅನುಕಂಪದ ಹೊಳೆ ಹರಿಸುತ್ತೀರಿ.

ಮೊನ್ನೆ ಸಂಜೆ ಸ್ನೇಹಿತೆಯೊಡನೆ ಅವಳ ಪರಿಚಯದವರ ಮನೆಗೆ ಹೋಗಿದ್ದೆ. ಆ ಮನೆಯ ಯಜಮಾನಿ ತವರಿಗೆ ತೆರಳಿದ್ದರಿಂದ ಪತಿ ಪ್ರಾಣಿ ಬೇಸತ್ತು ಮಾತನಾಡಲು ಮಾನವ ಪ್ರಾಣಿಗಳಿಗಾಗಿ ಕಾಯ್ದು ಕುಳಿತಿದ್ದರು. ನಮ್ಮಿಬ್ಬರನ್ನು ಕಂಡೊಡನೆ ಸಂತೆಯನ್ನೆಲ್ಲಾ ಸುತ್ತಿ ಸಿಟಿ ಬಸ್‌ಸ್ಟಾಂಡ್‌ಗೆ ಬರುವಷ್ಟರಲ್ಲಿ ಬೇಕಾದ ಬಸ್ಸೇ ಕಣ್ಣಿಗೆ ಬಿದ್ದಾಗ ನಾವೆಲ್ಲ ಅನುಭವಿಸುವ ಸಂಭ್ರಮ, ಸಡಗರಗಳನ್ನು ಪಟ್ಟು ಹೃದಯದುಂಬಿ ಸ್ವಾಗತಿಸಿ ಹರಟೆಗಿಳಿದರು.

ತಾಸೆಂಟು ತಾಸು ಹರಟಿ ಮೇಲೆದ್ದು ಮನೆಗೆ ಹೊರಡುವಾಗ ನನ್ನ ಗೆಳತಿ ನನ್ನನ್ನು ತೋರಿಸಿ, “ಓಹ್ ಮರೆತೇ ಬಿಟ್ಟಿದ್ದೆ ಅಂಕಲ್, ಇವರು ನನ್ನ ಗೆಳತಿ, ಒಳ್ಳೆಯ ಬರಹ ಗಾರ್ತಿ, ಒಂದೆರಡು ಪುಸ್ತಕಗಳನ್ನು ಹೊರತಂದಿದ್ದಾಳೆ ?' ಎಂದು ಪರಿಚಯಿಸಿದ್ದೇ ತಡ, ಆ ಅಸಾಮಿ ಸಮಗ್ರ ಆಸ್ತಿಯೇ ಕೈಬಿಟ್ಟು ಹೋದವರಂತೆ ಮುಖ ಮಾಡಿ ಕೈ ಕೈ ಹಿಸುಕಿಕೊಳ್ಳುತ್ತ 'ಛೇ, ಛೇ, ಇವರು ಬರೀತಾರೆ ಅಂತ ಬಂದ ಕೂಡ್ಲೆ ಯಾಕೆ ಹೇಳಿಲ್ಲ ? ಎಂಥಾ ತಪ್ಪು ಮಾಡಿದ್ರಿ ?' ಅಂದರು.

ನನ್ನ ಗೆಳತಿ ಗಾಬರಿ ಕುತೂಹಲಗಳಿಂದ, `ಯಾಕ್ರೀ ಏನಾದ್ರೂ ಬರೆಯೋದಿತ್ತಾ?' ಎಂದಳು.

'ಇನ್ನೇನಿಲ್ಲ, ಅವರಿಗೆ ಪ್ರಸಿದ್ಧಿ ಹಾಗೂ ಪ್ರಶಸ್ತಿ ಎರಡನ್ನೂ ತರಬಲ್ಲ ಒಂದು ಕಾದಂಬರಿಯ ಇಂಟರೆಸ್ಟಿಂಗ್ ಥೀಮ್ (ಕಥಾವಸ್ತು) ನನ್ನ ತಲೆಯಲ್ಲಿದೆ. ಅದನ್ನವರು ಬರೆದರೆ ಖಂಡಿತ ಒಳ್ಳೆಯ ಭವಿಷ್ಯ ಇದೆ' ಅನ್ನುತ್ತ ನಮಗೆ ಬಾಯ್ದಿಡಲು ಅವಕಾಶ ಕೊಡದೇ ಜಾನಪದ ಶೈಲಿಯ ಪ್ರೇಮಗೀತೆಯೊಂದನ್ನು ಎಷ್ಟು ನೀರಸವಾಗಿ ಹೇಳಬಹುದೋ ಅಷ್ಟು ನೀರಸವಾಗಿ ಹಿಂಜಿ ಹಿಂಜಿ ಸುಮಾರು ಎರಡು ತಾಸು ಕೊರೆದರು. ಕುಳಿತು ಕುಳಿತು ಕಾಲೆಲ್ಲ ಜೋಮು, ತಲೆ ಗಿಮಿ ಗಿಮಿ ಸುತ್ತತೊಡಗಿತು.

ಹೊಟ್ಟೆಯಲ್ಲಿ ತಾಳ ಬಾರಿಸತೊಡಗಿತು. ಅವರನ್ನು ಒಂದೇ ಸವನೇ ದಿಟ್ಟಿಸಿ ಕೊನೆ ಕೊನೆಗೆ ಅವರ ಮಾತು ಕೇಳಿಸದೇ ಬರೀ ಅವರ ತುಟಿಗಳ ಅಲುಗಾಟವಷ್ಟೇ ಕಾಣಿಸತೊಡಗಿತು.

ಹೇಗೋ ಸಾವರಿಸಿಕೊಂಡು ಮೇಲೆದ್ದು ಹೊರಟು ನಿಂತವರನ್ನು ಬಾಗಿಲಲ್ಲಿ ಮತ್ತೆ ತಡೆದು ನಿಲ್ಲಿಸಿ, 'ಈಗ ಹೇಳಿದ ಕಥಾವಸ್ತುವನ್ನಾಧರಿಸಿ ಕಾದಂಬರಿಯನ್ನಂತೂ ಬರೀರಿ. ಅದು ಪ್ರಿಂಟಾದ ಮೇಲೆ ಇನ್ನೊಂದು ಇದಕ್ಕಿಂತ ರೋಚಕವಾದ ಕಥಾವಸ್ತು ನನ್ನಲ್ಲಿದೆ. ಅದು ಯಾರೂ ಕಲ್ಪಿಸಲಾರದ್ದು ಅದನ್ನು ಹೇಳೀನಿ' ಎಂದು ಕಣ್ಣರಳಿಸಿ ಗಲ್ಲ ಉಬ್ಬಿಸಿ ಹೇಳಿದವರನ್ನು ಅನಾಮತ್ತಾಗಿ ಎತ್ತಿ ಕುಕ್ಕಿ ಓಡಿ ಹೋಗಬೇಕೆನಿಸಿದ್ದು ನಿಮ್ಮಾಣೆಗೂ ನಿಜ.

ತುಂಬ ತಡವಾಗಿ ಮನೆಗೆ ಹೋದೊಡನೆ, 'ಹೆಣ್ಮಕ್ಕಳು ಹಿಂಗ ಸರೂ ರಾತ್ರ್ಯಾಗ ತಿರಗಿದ್ರ ಮಂದಿ ಏನಂತಾರ ಗೊತ್ತೇನು?' ಅನ್ನುತ್ತಲೇ ಬಾಗಿಲು ತೆಗೆದ ಅಜ್ಜಿ ಅರ್ಧ ಗಂಟೆ ಬುದ್ಧಿವಾದ ಹೇಳಿದಳು. ದುರ್ವಾಸ ಮುನಿಯ ಅಪರಾವತಾರವಾದ ಅಣ್ಣನಂತೂ “ಇನ್ನಮ್ಯಾಲಿಂದ ನೀ ಬರೆಯೊದೂ ಬ್ಯಾಡ, ಯಾವ ಭೂಪನೂ ನಿನಗ ಕಥಾವಸ್ತು ಹೇಳಿ ಕೊಡ್ತಾ ಕೂರೂದೂ ಬ್ಯಾಡ, ನೀನೇನಾದ್ರೂ ಬರದದ್ದು ನೋಡಿದ್ರ ನಾನ ಹರಿದು ಹಾಕ್ತಿನಿ' ಎಂದು ತಾಕೀತು ಮಾಡಿದ.

“ಎಲ್ಲಿ ಹೋಗೋಕು, ಎಷ್ಟು ಹೊತ್ತು ಹೋಗೋಕು, ಅನ್ನೋದನ್ನ ನಿನ್ನಂಥ ತಿಳಿದಾಕೀಗೆ ಹೆಂಗ ತಿಳಿಸೋದು ? ಅದನ್ನು ನೀನ ತಿಳ್ಕೊಬೇಕು” ಎಂದು ಅಪ್ಪ ಬೆಣ್ಣೆಯಲ್ಲಿ ಕೂದಲೆಳೆಯನ್ನೆಳೆದಂತೆ ಉಪದೇಶ ನೀಡಿದರು.

ಅಮ್ಮನ ಮುಸಿಮುಸಿ ಅಳುವಂತೂ ಇಡೀ ರಾತ್ರಿ ನಡೆದಿತ್ತು. ಮನೆಯವರ ಒಂದೊಂದು ನಮೂನೆಯ ಪ್ರತಿಕ್ರಿಯೆಗಳ ಭೀಕರ ಬಾಣಗಳ ಶಯ್ಯೆಯ ಮೇಲೆ ಮಲಗಿದವಳಿಗೆ ನಿದ್ದೆ ತುಂಬ ಹೊತ್ತಿನ ಮೇಲೆ ಹತ್ತಿ ಬೆಳಿಗ್ಗೆ ಜೊಂಪು ಹತ್ತಿದಾಗ ಎಬ್ಬಿಸಿದ್ದು ಫೋನಿನ ಟ್ರಿಣ್ ಟ್ರಿಣ್ ಗಂಟೆ.

'ಹಲೋ' ಎಂದೆ. ಆ ಕಡೆಯ ವ್ಯಕ್ತಿ, 'ಮ್ಯಾಡಂ, ನಾನು ನಿಮ್ಮ ಅತ್ಯಂತ ಹಳೆಯ ಶಿಷ್ಯ. ನಿಮಗೆ ನೆನಪೂ ಇದೆಯೋ ಇಲ್ಲವೋ? ಮಿ. ಕ(ಪಿ)ವಿರಾಜ ಮಾತಾಡ್ತಿರೋದು. ನಿಮ್ಮ ಹತ್ತಿರ ಒಂದು ಕೆಲ್ಸ ಇದೆ. ಯಾವಾಗ ಬರ್ಲಿ?' ಕೇಳಿದ. 'ಯಾವ ಕೆಲ್ಸ' ಅಂತ ಕೇಳಿದರೆ ಆತ ಗಂಟೆಗಟ್ಟಲೇ ಕೊರೆದಾನೆಂದು ಅಂಜಿ ಧಡಕ್ಕನೇ 'ಇನ್ನೊಂದು ಗಂಟೆ ತಡೆದು ಬರ್ರಿ' ಎಂದೆ. ಕಣ್ಣುರಿಯುತ್ತಿದ್ದರೂ ಬೇಗ ಎದ್ದು ಬೆಳಗಿನ ವಿಧಿಗಳನ್ನು ಮುಗಿಸುತ್ತಿದ್ದಾಗ ಆತನ ಆಟೋ ಬಾಗಿಲಲ್ಲಿ ನಿಂತಿತು. ಆತ ಎರಡೂ ಕೈಗಳಲ್ಲಿ ಎರಡು ದೊಡ್ಡ ಜ್ಯೂಟ್ ಬ್ಯಾಗ್‌ಗಳನ್ನು ಹಿಡಿದುಕೊಂಡು ಒಳ ಬಂದ, ಆಟೋ ಚಾಲಕ ಇನ್ನೊಂದು ಚೀಲವನ್ನು ಹೊರಲಾರದೇ ಹೊತ್ತು ತಂದು ಒಳಗಿಟ್ಟು, ನಿಟ್ಟುಸಿರು ಬಿಟ್ಟು ದುಡ್ಡು ಪಡೆದು ಟಾಟಾ ಹೇಳಿದ.

ಹೊರಬಂದ ನಾನು ಮೂಟೆಗಳತ್ತ ಕುತೂಹಲದ ದೃಷ್ಟಿ ಚೆಲ್ಲಿ, 'ಏನಯ್ಯಾ ಇದ್ಯಾವ ರಾಶಿ ?' ಕೇಳಿದೆ. ಆತ ಕೈ ಮುಗಿದು ಹಲ್ಕಿರಿದು, 'ಇದು ನನ್ನ ಕಾವ್ಯರಾಶಿ ಮ್ಯಾಡಂ, ಕಾಲೇಜು ದಿನಗಳಲ್ಲಿ ನೀವು ನನ್ನಲ್ಲಿ ಬಿತ್ತಿ ನೀರು ಗೊಬ್ಬರ ಹಾಕಿ ಬೆಳೆಸಿದ ಕಾವ್ಯ ಸಸಿ, ಇಂದು ಹೆಮ್ಮರವಾಗಿ ಇಷ್ಟೊಂದು ಫಲಪುಷ್ಪಗಳನ್ನು ಕೊಟ್ಟಿದೆ. ಎಲ್ಲವೂ ನಿಮ್ಮ ಆಶೀರ್ವಾದ' ಎನ್ನುತ್ತ ಆ ಚೀಲಗಳಿಂದ ಕವನಗಳನ್ನೆಲ್ಲಾ ಒಂದೊಂದಾಗಿ ಹೊರಗೆ ತೆಗೆದು ನನ್ನೆದುರು ಭಕ್ತಿಯಿಂದ ಹಿಡಿಯತೊಡಗಿದ.

ನನಗೆ ಆತಂಕ, ಆಭಾಸ, ಅಭಿಮಾನ, ಆನಂದ... ಏನೇನೋ ಒಮ್ಮೆಲೇ ಆಗಿ ನಿಮ್ಮ ಕಾವ್ಯರಾಶಿಯ ಗಾತ್ರ, ನೀವು ಕಾವ್ಯ ಕ್ಷೇತ್ರದಲ್ಲಿ ಆಡುತ್ತಿರುವ ಪಾತ್ರ ಸಂತಸ ತಂದಿದೆ. ಆದ್ರೆ ಎಲ್ಲವನ್ನೂ ಯಾಕೆ ತಂದೀ ತಿಳೀಲಿಲ್ಲ. ಒಂದು ನೋಟ್‌ಬುಕ್ ತಂದಿದ್ರೆ ಓದಿ ಅಭಿಪ್ರಾಯ ತಿಳಿಸ್ತಿದ್ದೆ. ಅನ್ನದ ಪರೀಕ್ಷೆ ಅಗುಳಿನ ಮೇಲೆ ಅಲ್ಲವೆ?' ಅಂದೆ, ಕಿರಿಕಿರಿಪಟ್ಟುಕೊಂಡು.

ಆತ ಅತ್ಯಂತ ಗೆಲುವಿನಿಂದ, 'ಮ್ಯಾಡಂ, ಇದರಲ್ಲಿ ನನ್ನ ಒಗರು-ಚಿಗುರು ತುಡಿ-ಮಿಡಿ, ಕುಡಿ-ಕಿಡಿ, ಹುಳಿ-ಹೀಚು ಎಲ್ಲಾ ನಮೂನೆಯ ಕವನಗಳಿವೆ. ಅವುಗಳಲ್ಲಿಯ ಒಳ್ಳೆಯದನ್ನು ಆಯ್ದು ಒಂದು ಕವನಸಂಕಲನ ಪ್ರಿಂಟಿಸುವ ಕೆಲಸ ತಮ್ಮಿಂದಾಗಬೇಕು" ಎಂದು ಸಾಷ್ಟಾಂಗ ಹಾಕಿದ.

"ನೀವು ತಿದ್ದುವವರೆಗೆ ಇವೆಲ್ಲ ಇಲ್ಲೇ ನಿಮ್ಮ ಮಡಿಲಲ್ಲಿ ಬಿದ್ದಿರಲಿ' ಎಂದು ಹೇಳಿ ಕಾಲ್ಕಿತ್ತ. ಆ ಮೇಲಿನ ನನ್ನ ಕಥೆ ದೇವರಿಗೇ ಪ್ರೀತಿ. ಅತಿಥಿ ರೂಮನ್ನು ಅರ್ಧ ಆಕ್ರಮಿಸಿದ ಆ ಚೀಲಗಳನ್ನು ಎತ್ತಿಟ್ಟು ಕಸ ಗುಡಿಸುವಾಗೊಮ್ಮೆ ನಮ್ಮಜ್ಜಿ, ಆ ಭಾರವಾದ ಮೂಟೆಗಳನ್ನು ಕಸಬರಿಗೆಯಿಂದ ತಿವಿದು ಮನೆಮಂದಿಗೆಲ್ಲ ಕೇಳಿಸುವಂತೆ, 'ಆ ಮೂಳಾ ಈ ಗಂಟಗೋಳ ತಂದಿಟ್ಟ. ಈ ಮಹಾರಾಣಿ ಇಸಿದಿಟ್ಟಳು. ಎಷ್ಟು ದಿನ ಅಂತ ಇವನ್ನು ಎತ್ತಿಟ್ಟು ಕಸಾ ಗೂಡಿಸ್ತೀ? ಇನ್ನೊಂದೆರಡು ದಿನಾ ನೋಡೇನಿ, ಇವಳು ಇವನ್ನ ಸಾಗ ಹಾಕಿದ್ದು ಚೊಲೋ, ಇರದಿದ್ರ ಇವಕ್ಕೇನ ಗತಿ ಕಾಣಸ್ತೇಕೋ ಕಾಣಿಸ್ತೀನಿ' ಎಂದು ಭಯೋತ್ಪಾದಕರ ಧಾಟಿಯಲ್ಲಿ ಎಚ್ಚರಿಸತೊಡಗಿದಳು. ತಡ ಮಾಡಿದರೆ ಶಿಷ್ಯನ ಕವನದ ಕಟ್ಟುಗಳು ಅಜ್ಜಿಯ ಅಗ್ನಿಗಾಹುತಿಯಾದಾವೆಂದು ಅಂಜಿ ಕಾಲೇಜಿಗೆ ರಜೆ ಬರೆದು ತಿದ್ದಲು ಕುಳಿತೆ.

ಮಧ್ಯಾಹ್ನ ಊಟ, ನಿದ್ದೆ ತೊರೆದು ತಿದ್ದುತ್ತ ಕುಳಿತಿದ್ದಾಗ ಪ್ರತ್ಯಕ್ಷನಾದ ನನ್ನ ಇನ್ನೊಬ್ಬ ಹಾಲೀ ಸ್ಟುಡೆಂಟು. ಅಲ್ಲಲ್ಲಿ ಪ್ರಕಟವಾದ ನನ್ನ ಲೇಖನಗಳನ್ನು ಪ್ರಸ್ತಾಪಿಸಿ, ಪ್ರಶಂಸಿಸಿ, 'ಮ್ಯಾಡಂ, ನಿಮ್ಮಂತೆ ನನಗೂ ಬರಹಗಾರನಾಗಬೇಕೆಂಬ ಆಸೆ ಏನು ಮಾಡಬೇಕು? ಕೇಳಿದ. 'ಬರಹಗಾರ ಆಗಲು ಬರುವುದಿಲ್ಲ. ಬರೆವ ಕಲೆ ಅಂತರ್ಗತವಾಗಿರದೆ. ಆದರೂ ನಿಮ್ಮಿಷ್ಟದಂತೆ ಬರೆಯಲು, ಕಲಿಯಬೇಕಾದರೆ ಬಹಳಷ್ಟು ಓದಬೇಕು. ಅವರಿವರ ನಡೆ-ನುಡಿ ನಿರೀಕ್ಷಿಸಬೇಕು. ಹಿರಿಯ ಸಾಹಿತಿಗಳ ಮಾತು ಕೇಳಿರಬೇಕು, ಇತ್ಯಾದಿಯಾಗಿ ಕೊರೆದೆ.

ತೃಪ್ತಗೊಳ್ಳದ ಆತ, 'ಅದೆಲ್ಲ ಆಯ್ತು ಮಾಡ್ತೇನೆ. ಏನಾದ್ರೂ ಬರೀಬೇಕಾದ್ರೆ ಹೇಗೆ ಪ್ರಾರಂಭಿಸಬೇಕು? ಮಧ್ಯ ಹೇಗಿರಬೇಕು? ಕೊನೆಗೊಳಿಸುವುದು ಹೇಗೆ? ಯಾವ ವಿಷಯದ ಕುರಿತು ಬರೆದರೆ ಜನಾ ಓದ್ತಾರೆ? ಯಾವ ಸಾಹಿತಿಯಂತೆ ಬರೆದರೆ ಒಳ್ಳೆಯದು?' ಮುಂತಾದ ಪ್ರಶ್ನೆಗಳ ಮಳೆಗರೆದು ನನ್ನ ತಲೆ ತಿನ್ನತೊಡಗಿದ್ದನ್ನು ಗಮನಿಸಿ ಕೆಂಡಾಮಂಡಲವಾದ ನಮ್ಮಜ್ಜಿ ಅವನನ್ನು ಎಬ್ಬಿಸಲು ಚಹದ ಕಪ್ಪು ತಂದು ಮುಂದಿಟ್ಟಳು. ಚಹ ಗುಟುಕರಿಸುತ್ತ ಮೈತುಂಬ ಕೈಯ್ಯಾಡಿಸಿಕೊಳ್ಳತೊಡಗಿದ. ಒಮ್ಮೆಲೇ ಎದ್ದು ನಿಂತು ಶರ್ಟು, ಫ್ಯಾಂಟು ಝಾಡಿಸಿದ. ಒಂದೆರಡು ನಿಮಿಷ ಕುಳಿತವ ಹೊರಟು ನಿಂತ. ನನಗವನ ನಡತೆ ವಿಚಿತ್ರ ಅನ್ನಿಸಿತು. ನಮ್ಮ ಮಾತಿನ್ನೂ ಮುಗಿಯದಿರುವಾಗಲೇ ಹೊರಟು ಹೋದ.

ಆತನಿನ್ನೂ ಅಂಗಳ ದಾಟದಿರುವಾಗಲೇ ನನ್ನಲ್ಲಿಗೆ ಬಂದ ಅಜ್ಜಿ, 'ಮಾತಿಗೆ ಕುಂತ್ರ ಮುಗದ ಹೋತು, ಯಾವುದರ ಖಬರೂ ಇಲ್ಲ. ನಿನಗೂ ಮಾತು ಅಂದ್ರ ಮುಗೀತು. ನನಗೂ ಕೇಳಿ ಕೇಳಿ ಸಾಕಾತು, ಅದಕ್ಕೆ ಚಹ ಕೊಟ್ಟಂಗ ಮಾಡಿ, ಅವನ ಹಂತೇಕ ಬಂದು ಅವನ ಅಂಗ್ಯಾಗ ಎರಡು ತಗಣೀ ಮರಿ ಬಿಟ್ಟೆ. ಹೆಂಗ್ ಹೇಳ ಕೇಳ ಎದ್ದು ಹ್ವಾದ ನೋಡು, ಇಂಥಾ ಮಂದೀಗ ಹಿಂಗ ಮಾಡೋಕು. ಇನ್ನೊಮ್ಮೆ ಬಲ್ಲಿ ಮತ್ತ ಬ್ಯಾರೇ ಮಾಡ್ತೀನಿ' ಎಂದು ವಿಚಿತ್ರ ವಿಜಯೋತ್ಸಾಹದಿಂದ ನಕ್ಕು, ಆತ ಕುಳಿತಿದ್ದ ಕಟ್ಟಿಗೆಯ ಕುರ್ಚಿ ಒಯ್ದು ಬಿಸಿಲಿಗಿಟ್ಟಳು.

ಸಂಜೆಯವರೆಗೂ ಶಿಷ್ಯನ ಕವನಗಳನ್ನು ಆಯ್ದು ಮುಗಿಸಿ ಸುಸ್ತಾಗಿ ಸಂಜೆ ಹೂದೋಟದಲ್ಲಿ ತಿರುಗಾಡುತ್ತಿದ್ದಾಗ ನಮ್ಮ ಓಣಿಯ ಖಡಕ್ ಮಹಿಳಾ ಮಂಡಳದ ಅಧ್ಯಕ್ಷೆ, ಒಂದಿಬ್ಬರು ಸದಸ್ಯೆಯರೊಂದಿಗೆ ಬಂದಳು.

ಕ್ಷೇಮ ಸಮಾಚಾರ ಮುಗಿದ ನಂತರ 'ಮ್ಯಾಡಂ, ಮುಂದಿನ ತಿಂಗಳು ನಮ್ಮ ಮಂಡಳದಲ್ಲಿ ಒಂದು ಸಭೆ ಇದೆ. ಖ್ಯಾತ ಮಹಿಳಾ ಲೇಖಕಿ ಸೌ. ಬೋರಮ್ಮನವರು ಬರಲಿದ್ದಾರೆ. ನಮಗೂ, ಸಾಹಿತ್ಯಕ್ಕೂ ಅಜಗಜಾಂತರ, ನಿಮ್ಮದಂತೂ ಮೂರು ಹೊತ್ತೂ ಬರೆಯೋದೇ ಕೆಲಸ, ದಯವಿಟ್ಟು ನಮಗೆ ಸ್ವಾಗತ ಭಾಷಣ, ಅತಿಥಿ ಪರಿಚಯ, ವಂದನಾರ್ಪಣೆ ಮತ್ತೇನೇನು ಬೇಕೋ ಅದನ್ನೆಲ್ಲ ಬರೆದು ಕೊಡಿ. ಸಂಘಕ್ಕೆ ನಿಮ್ಮ ಸೇವೆ ಬೇಕು. ನಾಳೆಯಿಂದ ಆ ಸಮಾರಂಭದ ತಯಾರಿ ಮಾಡೇಕು. ಈಗಲೇ ಬರೆದು ಕೊಟ್ಟು ಬಿಡಿ, ಬರೆಯೂದು ಅಂದ್ರೆ ನಿಮಗಂತೂ ನೀರು ಕುಡಿದಂತೆ...' ಎಂದು ಒತ್ತಾಯಿಸ ತೊಡಗಿದಳು.

ಲೇಖನಿ ಪೆನ್ನು ನೋಡಿದರೆ ಓಡಿ ಹೋಗಬೇಕೆನ್ನುವಷ್ಟು ಬೇಸರವಾಗಿದ್ದರೂ ಅವರ ಒತ್ತಾಯಕ್ಕೆ ಮಣಿದು ಬರೆದು ಕೊಟ್ಟೆ, ಕೊಂಚ ದೀರ್ಘವಿದ್ದ ಅತಿಥಿ ಪರಿಚಯ ನನಗೆ ಬೇಡ, ತನಗೆ ಬೇಡ ಎಂದು ಒಂದತ್ತು ನಿಮಿಷ ಎಲ್ಲರೂ ಕಿತ್ತಾಡಿದರು. ಕೊನೆಗೊಬ್ಬಳು ಓದಲು ಮುಖ ಉಬ್ಬಿಸಿ ಒಪ್ಪಿಕೊಂಡು ನನ್ನೆದುರಿಗೆ ತಪ್ಪಾಗಿ ಓದತೊಡಗಿದಳು. ಅವಳಿಗೆ ಓದುವುದನ್ನು ಹೇಳಿಕೊಟ್ಟೆ. ಆಕೆ ಇನ್ನೊಮ್ಮೆ ಮತ್ತೊಮ್ಮೆ

ನನ್ನೆದುರಿಗೆ ಓದಿ ತೃಪ್ತಿಪಟ್ಟಳು! ಅವಳು ಸರಿಯಾಗಿ ಓದಲು ಕಲಿತದ್ದನ್ನು ಕಂಡ ಇನ್ನುಳಿದವರೂ ತಮ್ಮದನ್ನು ಓದಿ, ತಪ್ಪಿದ್ದಲ್ಲಿ ತಿದ್ದಲು ಕೇಳಿಕೊಂಡರು. ಅವರೆಲ್ಲ ತಂತಮ್ಮ ಭಾಷಣಗಳನ್ನು ಕಲಿತು ಮೇಲೆದ್ದಾಗ ರಾತ್ರಿ ಹನ್ನೊಂದು ಗಂಟೆ

ನನ್ನ ಪ್ರತಿಯೊಂದು ಚಲನವಲನವನ್ನೂ ಆತಂಕದಿಂದ ಗಮನಿಸಿದ ಅಜ್ಜಿ ಅವರಿನ್ನೂ ನಿರ್ಗಮಿಸದಿರುವಾಗಲೇ, 'ಇಷ್ಟು ದಿನಾ ಬರೇ ಬರು ಕೊಡ್ತಿದ್ದಿ, ಈಗ ಬರದ್ದನ್ನು ಬಾಯಿಪಾಠ ಮಾಡಿಸಿ ಕಳ್ಳಾಕ ಸುರೂ ಮಾಡಿದೆ. ಇದಾ ಪದ್ಧತಿ ಚಾಲೂ ಇಟ್ಟರ ನಾವೆಲ್ಲ ಹೊರಗೆ ಹೋಕ್ಕೇವಿ. ನೀನ ಒಬ್ಬಾಕೇ ಇರೂವಂತಿ, ನಮಗಂತೂ ನೀ ಈ ಪರಿ ಬರೆಯೂದು ನೋಡಾಕ ಆಗವಲ್ಲದು' ಎಂದು ದೊಡ್ಡ ದನಿಯಲ್ಲಿ ವಿವರಿಸಿದಳು. ಮಂಡಳದ ಸದಸ್ಯೆಯರು ತಮ್ಮನ್ನು ತಾವು ನೋಡಿಕೊಳ್ಳುತ್ತ ನಿರ್ಗಮಿಸಿದರು !

ನಾನು ಬರೆದು ಕೊಟ್ಟಿದ್ದು ಮಹೋಪಕಾರವೆಂದು ತಿಳಿದಿದ್ದ ಮಂಡಳದವರು ಸಭೆಗೆ ಕಾರಿನಲ್ಲಿ ಕರೆದೊಯ್ದರು. ಸಭೆ ಚೆನ್ನಾಗಿ ಜರುಗಿತು. ಸಭೆಗೆ ಬಂದಿದ್ದ ಓರ್ವ ಸಾಹಿತಿ ಶ್ರೀಮತಿ, 'ಮ್ಯಾಡಂ ನೀವು ಸಾಹಿತಿ ಅಂತ ಗೊತ್ತು. ನಿಮ್ಮ ಪುಸ್ತಕಗಳಿದ್ದರೆ ಕೊಡಿ. ನಾನು ಖರೀದಿಸಿ ನಮ್ಮ ಮನೆಯಲ್ಲಿ ಯಾವುದಾದರೂ ಸಮಾರಂಭವಿದ್ದರೆ ಬಂಧುಗಳಿಗೆ ನಿಮ್ಮ ಪುಸ್ತಕಗಳನ್ನೇ ಕಾಣಿಕೆಗಳನ್ನಾಗಿ ಕೊಡುತ್ತೇನೆ. ನಮ್ಮ ಜನತೆಗೆ ಪುಸ್ತಕ ಪ್ರೀತಿ ಕಲಿಸಬೇಕಾಗಿದೆ. ಸಾಹಿತಿಗಳಾದ ನಾವೂ ಬೆಳೆಯಬೇಕಾಗಿದೆ. ಸರಕಾರ, ಸಂಘ-ಸಂಸ್ಥೆಗಳು ನಮ್ಮನ್ನು ಬೆಳೆಸಲೆಂದು, ಪ್ರೋತ್ಸಾಹಿಸಲೆಂದು ನಿರೀಕ್ಷಿಸುವುದು ಬೇಡ, ನಾವು ನಮ್ಮ ಕೃತಿಗಳನ್ನು ನಮ್ಮೊಳಗೇ ಖರೀದಿಸಿ ಪ್ರೋತ್ಸಾಹಿಸಿ ಕೊಳ್ಳೋಣ' ಎಂದೆಲ್ಲ ಕೊರೆದು ನನ್ನೊಡನೆ ಮನೆಗೆ ಬಂದು ಇಪ್ಪತ್ತು ರೂಪಾಯಿ ಬೆಲೆಯ ನನ್ನ ಹತ್ತು ಪುಸ್ತಕಗಳನ್ನು ಖರೀದಿಸಿ ಎರಡು ನೂರನ್ನು ಕೈಗಿಟ್ಟಾಗ ನಾನು ಬರೆದದ್ದು ಸಾರ್ಥಕವೆನಿಸಿತು. ಆ ರಾತ್ರಿ ಬಹಳಷ್ಟು ಬರೆದ ಕನಸು ಕಂಡೆ. ಮಾರನೆಯ ಸಂಜೆ ಮತ್ತೆ ಪ್ರತ್ಯಕ್ಷಳಾದ ನನ್ನ ಪುಸ್ತಕ ಖರೀದಿಸಿದ್ದ ಆ ಸಾಹಿತಿ ಮಾನಿನಿ, ತಾನು ಬರೆದ “ವಂದೇ ಪಾರ್ವತಿ ಪಾರಾಯಣ'ದ ಹತ್ತು ಪುಸ್ತಕಗಳನ್ನು ನನ್ನ ಕೈಗಿಟ್ಟು ನನ್ನಿಂದ ಎರಡು ನೂರ ಐವತ್ತು ಗಿಟ್ಟಿಸಿ, 'ಹೀಗೆ ಪರಸ್ಪರ ಬರವಣಿಗೆಯನ್ನು ಪ್ರೋತ್ಸಾಹಿಸೋಣ?' ಎಂದುಪದೇಶಿಸಿ ಕಾಲ್ಕಿತ್ತಾಗ ನಾನು ಇಂಗು ತಿಂದ ಮಂಗ !

ಮಾರಾಟವಾಗದೇ ಮೂಲೆ ಹಿಡಿದು ಕುಳಿತ ನನ್ನ ಪ್ರಕಟಿತ ಸಾಹಿತ್ಯವನ್ನೂ, ಮುದ್ರಣಗಾಣದೇ (ಮುಂಗಾಣದೇ ?) ಕಾಗದದ ಕಟ್ಟುಗಳಲ್ಲಿ ವಿರಮಿಸಿರುವ ನನ್ನ ಅಪ್ರಕಟಿತ ಸಾಹಿತ್ಯವನ್ನೂ ಕಂಡು ನನ್ನ ಮನೆಯವರೆಲ್ಲ ಕೆಂಡಕಾರುವುದುಂಟು. ಅವರು ಟೆಂಪರ ಏರಿಸಿಕೊಂಡಾಗಲೆಲ್ಲ ಕಸಿವಿಸಿಗೊಳ್ಳುವ ನಾನು ತಾತ್ಕಾಲಿಕ ಬರಹ ವೈರಾಗ್ಯ ತಾಳುವುದುಂಟು. ಹಾಗಾಗಿ ಮೊನ್ನೆ ಕಾಲೇಜಿಗೆ ಅವಸರವಸರದಿಂದ ಹೊರಟವಳನ್ನು ತಡೆದು ನಿಲ್ಲಿಸಿದ ಪರಿಚಯದವರು, 'ಇದೇ ಇತ್ತಿತ್ತಲಾಗಿ ಪತ್ರಿಕೆಗಳಲ್ಲಿ ನಿಮ್ಮ ಲೇಖನಗಳೇ ಇಲ್ಲ?', 'ನೋಡಿ ಮ್ಯಾಡಂ,

ಪತ್ರಿಕೆಯವರು ಪ್ರಕಟಿಸಲಿ ಬಿಡಲಿ, ಜನರು ಓದಲಿ ಬಿಡ್ಲಿ, ನಾನಂತೂ ನಿಮ್ಮ ಬರಹಗಳನ್ನ ಭಾಳ ಓದ್ತೇ, ರಾತ್ರಿ ನಿದ್ದಿ ಬರಿಲ್ಲಂದ್ರ ಕಚೇರಿಯೊಳಗ



ಬಾಸ್ ಬೈಯ್ಯುವಾಗ, ಮನಿಯೊಳಗ ಹೆಂಡತಿ ಪಿಟಿಪಿಟಿ ಹಚ್ಚಿದಾಗ ನಿಮ್ಮ ಸಾಹಿತ್ಯಕ್ಕ ಶರಣ ಹೋಗ್ತಿನಿ. ಮನಸ್ಸಿಗೆ ಒಂಥರದ ತಂಪ ಅನ್ನಿಸಿ ಮಬ್ಬ ಕವಿದು ಯಾರ ಏನು ಅಂದರೂ ಕೇಳಿಸುವುದಿಲ್ಲ. ನೀವು ಕೊಟ್ಟ ಪುಸ್ತಕಗಳು ಬಸ್ಸಿನ್ಯಾಗ ಸೀಟು ಹಿಡೀಲಾಕ, ಬಸ್ಸಿನ್ಯಾಗ ಬ್ಯಾಡಾದವರಿದ್ರ ಮುಖಕ್ಕೆ ಹಿಡಿದು ಕೊಂಡು ಕೂಡ್ರಲಾಕ ಭಾಳ ಸಹಾಯ ಮಾಡ್ತಾವು' ಎಂದು ಮುಂತಾಗಿ ನನ್ನ ಬರಹದ ಬಗೆಗೆ ಅತ್ತ ಪ್ರಶಂಸಿಸದೇ ಇತ್ತ ಟೀಕಿಸದೇ ವಿಚಿತ್ರ ರೀತಿಯಲ್ಲಿ ಕಮೆಂಟ ಮಾಡಿ ಟಾಟಾ ಹೇಳಿದಾಗ ಸರಿಯಾಗಿ ಹನ್ನೊಂದು ಗಂಟೆ!

ಅರ್ಧಗಂಟೆ ತಡವಾಗಿ ಕಾಲೇಜಿಗೆ ಹೋದೆ, ಬಾಗಿಲಲ್ಲಿ ಭೇಟಿಯಾದ ಪ್ರಾಚಾರ್ಯರು, 'ಯಾಕಿಷ್ಟು ತಡ?' ಕೇಳಿದರು.

ಪರಿಚಿತರೊಡನೆ ಮಾತಾಡುತ್ತ ನಿಂತಿದ್ದೆ ಎಂದರೆ ಸರಿಯಾಗದೆಂದು 'ಸರ್ ಸ್ವಲ್ಪ ಹಾಸ್ಟೆಲ್‌ಗೆ ಹೋಗಿದ್ದೆ. ಅಲ್ಲಿ ಕ್ಯೂ ಇತ್ತು ಹಾಗಾಗಿ...' ಅನ್ನುತ್ತಿದ್ದಂತೆ ಅವರು, “ನೀವು ಸಾಹಿತಿಗಳು ನಿಜ ಹೇಳ್ತಿರೋ ಕಲ್ಪಿಸಿಕೊಂಡು ಹೇಳ್ತಿರೋ ತಿಳಿಯುವುದಿಲ್ಲ. ನಾವೇನಾದ್ರೂ ಅಂದರೆ ಅದನ್ನೂ ಬರಹದಲ್ಲಿ ಕಾಣಿಸ್ತೀರಿ, ಅಂದವರನ್ನು ಬಿಡುವುದಿಲ್ಲ, ನಿಮ್ಮ ಜೊತೆಗೆ ವ್ಯವಹರಿಸುವುದೇ ಕಷ್ಟ' ಎಂದರು ನತವದನರಾಗಿ,

ಇಡೀ ದಿನ ಒಂಥರ ಹಳಹಳಿ, ಬೇಸರ ನನ್ನನ್ನಾವರಿಸಿ ಸಂಜೆ ಮನೆಗೆ ಬರುವಷ್ಟರಲ್ಲಿ ಅಜ್ಜಿ 'ಗೊಳೋ' ಎಂದು ಅಳುತ್ತಿದ್ದಾಳೆ! ತನ್ನ ತಮ್ಮನ ಗುಣಗಾನ ಮಾಡುತ್ತ ಕಣ್ಣೀರ್ಗರೆಯುತ್ತಿದ್ದಾಳೆ ! ಗಾಬರಿ, ಭಯ, ಆತಂಕಗಳಿಂದ, 'ಯಾಕಜ್ಜಿ ಯಾರಿಗೆ ಏನಾಗಿದೆ?' ಅಂದೆ, ಆಕೆ ಕೈಯಲ್ಲಿಯ ಪತ್ರವನ್ನು ಕೈಗಿಡುತ್ತ, 'ನನ್ನ ತಮ್ಮಗೆ ಆರಾಮಿದ್ದಿದ್ದಿಲ್ಲ, ಅಂವ ತೀರಿಕೊಂಡಿರಬೇಕು ಅದಕ್ಕೆ ಅರ್ಧಾ ಪತ್ರ... ಬಂದೈತಿ... ನೋಡಿಲ್ಲಿ... ಊಂ ಊಂ...” ಎಂದು ಕಣ್ಣು ಮೂಗು ಒರೆಸಿಕೊಳ್ಳತೊಡಗಿದಳು. ಪತ್ರ ಇಸಿದುಕೊಂಡು ಓದಿದೆ. 'ಮಾನ್ಯರೇ, ನಿಮ್ಮ ಲೇಖನ ಸ್ವೀಕೃತವಾಗಿದೆ. ಮುಂದಿನ ತಿಂಗಳು ಪ್ರಕಟಿಸುತ್ತೇವೆ. ಧನ್ಯವಾದಗಳು' ಎಂದು ಪತ್ರಿಕೆಯ ಸಂಪಾದಕರೋರ್ವರು ಬರೆದಿದ್ದರು! ಅಜ್ಜಿಗೆ ವಿಷಯ ತಿಳಿಸಿದೆ. ಏಕ್‌ದಂ ಅಳುವುದನ್ನು ನಿಲ್ಲಿಸಿದ ಅಜ್ಜಿ, 'ಪತ್ರದ ತುಂಬ ಬರದಿದ್ರ ಅವರಿಗೇನಾಗ್ತಿತ್ತು ? ನನಗೆಷ್ಟು ಗಾಬರಿ ಆತು ಏನ್ ಕತಿ? ಇನ್ನೊಮ್ಮೆ ಬರೆಯೋದಿದ್ದರೆ ಪತ್ರದ ತುಂಬ ಬರಿ ಅಂತ ಹೇಳು. ಇಲ್ಲದಿದ್ದರೆ ಬರಯೂದ ಬ್ಯಾಡ, ನೀನೂ ಅವರಿಗೆ ಬರೀಬ್ಯಾಡ. ಅದಕ್ಕ... ಅದಕ್ಕೆ ಈಗೀಗ ಈ ಬಾವನ್ನ ಕಂಡ್ರು ಆಗವಲ್ಲದು......?' ಎಂದು ಬರಹಗಾರರನ್ನೂ, ಬರೆದ ಕ್ರಿಯೆಯನ್ನೂ ಮನಸ್ವೀ ಶಪಿಸಿದಳು.

ನನ್ನ ಬರಹದ ಕಾರಣದಿಂದಾಗಿ ಉದ್ಭವಿಸುತ್ತಿರುವ ಈ ಅನಾಹುತಗಳಿಗಂಜಿ ಬರಹಗಾರ್ತಿಯೆಂದು ಕರೆಸಿಕೊಳ್ಳಲು ಭಯ ಪಡುತ್ತಿದ್ದೇನೆ. ಇವರೂ ಬರೀತಾರೆ' ಎಂದು ನನ್ನನ್ನುದ್ದೇಶಿಸಿ ನುಡಿದರೆ ಬೆಚ್ಚಿ ಬೀಳುತ್ತಿದ್ದೇನೆ.

**(ಸಂಯುಕ್ತ ಕರ್ನಾಟಕ, ೧೯೯೬)**

## ೭. ಮೊಸರವಲಕ್ಕಿ

### ಸುನಂದಾ ಬೆಳಗಾಂವಕರ

ಛಟ್ ಎಂದು ಸೀನಿದೆ. ಮೈಯನ್ನು ಹಿಂದಕ್ಕೂ ಮುಂದಕ್ಕೂ ದೂಡುತ್ತ ಹಣ್ಣು ಮೆಣಸಿನಕಾಯಿಯ ರಂಜಕ ಅರೆಯುತ್ತಿದ್ದ ತಾಯಿ ಅಂದರು...

ಇನ್ನೊಂದು ಸೀನು, ಒಂಟಿ ಸೀತಿಯಲ್ಲ!' ಅವರ ಮಾತು ಮುಗಿಯುತ್ತಿದ್ದಂತೆ ಛಟ್‌ಟ್ ಛಟ್‌ಟ್ ಎಂದು ಒಂದರ ಮೇಲೊಂದು ಸೀನಿದೆ.

“ನಿನ್ನೆ ಇಡೀ ಮಳಿಯೊಳಗ ತೋಯ್ದಿಗೊಂಡು ಬಂದಿ. ನೆಗಡಿ ಆಗೇದ...' ಎಂದು ತಮ್ಮಷ್ಟಕ್ಕೆ ತಾವೇ ನುಡಿದುಕೊಳ್ಳುತ್ತ, ರಂಜಕ ಅರೆಯುವುದನ್ನು ನಿಲ್ಲಿಸಿ, ಕೈ ತೊಳೆದು ಒಂದು ಮುಷ್ಟಿ ಒಣ ಅವಲಕ್ಕಿ ತಂದರು.

'ಈ ಒಣ ಅವಲಕ್ಕಿ ಮುಕ್ಕು, ಥಂಡಿ ತಲೀ ಬಿಟ್ಟು ಕೆಳಗ ಇಳೀತದ' ಅಂದರು.

ಈ ಒಣ ಅವಲಕ್ಕಿಗೂ ಥಂಡಿಗೂ ಏನು ಸಂಬಂಧ! ಯಾವ ವೈದ್ಯಶಾಸ್ತ್ರದಲ್ಲಿ ಅವಲಕ್ಕಿ ಥಂಡಿಗೆ ಔಷಧಿ ಎಂದು ಬರೆದಿದ್ದಾರೆ ಎಂದೆನಿಸಿತು. ಆದರೆ ತಾಯಿಯಿತ್ತ ವಿಷವೂ ಅಮೃತ. ಈ ಒಣ ಅವಲಕ್ಕಿ ರಾಮಬಾಣ ಏಕಾಗಬಾರದು.

ಸಾಗರ ಶಾಯಿಯಾದ ಶ್ರೀಕೃಷ್ಣ ಪರಮಾತ್ಮನಿಗೂ ಶೀತವಾಗಿತ್ತೇ? ಅಂತಲೇ ಗೆಳೆಯ ಸುಧಾಮನನ್ನು ನೆನೆಸಿರಬೇಕು. ಅತ್ತಿಗೆ ಕಳಿಸಿದ ಒಣ ಅವಲಕ್ಕಿಯನ್ನೇ ಮುಕ್ಕಿ 'ಶ್ರೀಕೃಷ್ಣಾರ್ಪಣಮಸ್ತು' ಅಂದುಬಿಟ್ಟ!

ನಾನು ಒಣ ಅವಲಕ್ಕಿಯನ್ನು ಒಂದು ಮುಕ್ಕು ಮುಕ್ಕಿದೆ. ತಂಗಿ ಅಂದಳು, 'ಅವ್ವಾ, ಒಣ ಅವಲಕ್ಕಿಗೆ ಮೊಸರು ಹಾಕಲ್ಲ'.

“ಹೌದು ಮೊಸರು ಅವಲಕ್ಕಿ, ಚಟ್ನಿಪುಡಿ...' ಎಂದೆ. ತಾಯಿ ನಕ್ಕರು.

'ಏನ ವಿಚಾರ ನಮ್ಮವ್ವಾ, ನೆಗಡಿ ಆಗದ ಅಂತ ಒಣ ಅವಲಕ್ಕಿ ಕೊಟ್ಟರ ಮೊಸರ ಹಾಕಿಸಿಗೋತಿದೆ' ಎನ್ನುತ್ತಾ, ತಾಯಿ ಮೊಸರವಲಕ್ಕಿಯನ್ನೇ ಕಲಸಿ ತಂದರು. ಎಂಥ ಹಿರಿ ಜೀವ ಸಮಾಧಾನದ ಮೂರ್ತಿ, ಸಿಟ್ಟಿಗೆದ್ದು ಗೊತ್ತಿಲ್ಲ.

ಮೊಸರವಲಕ್ಕಿ, ಚಟ್ನಿಪುಡಿ ಹಾಕಿ ಕೊಟ್ಟರು. ಮೊಸರವಲಕ್ಕಿ ಬಾಯಿಗೆ ಹಾಕಿಕೊಂಡೆ. ತಾಯ ಕೈಯ ಮೊಸರವಲಕ್ಕಿ ಏನು ರುಚಿ!

ಮನಸ್ಸು ಪಕ್ಕ ಪಕ್ಕವಾಗಿ ಬಿಚ್ಚಿ ಹಕ್ಕಿಯಾಗಿ ಎಲ್ಲೆಲ್ಲೋ ಹಾರಿತು!

## ಮೊಸರವಲಕ್ಕಿ ೨೮

ಮೊಸರವಲಕ್ಕಿ ಅಂದರೆ ಮೊಸರು-ಅವಲಕ್ಕಿ, ಅವಲಕ್ಕಿ-ಮೊಸರಲ್ಲ. ಮೊಸರವಲಕ್ಕಿಯ ರುಚಿ ಅವಲಕ್ಕಿ ಮೊಸರಿಗೆ ಬರದು. ಮೊಸರು, ಕೆನೆಕೆನೆಯಾಗಿ ಗಟ್ಟಿ ಇರಲೇಬೇಕು. ಗಡಿಗೆ ಮೊಸರಿದ್ದರಂತೂ ಬಲು ಸೊಗಸು. ಆ ಮೊಸರಿಗೆ ಅವಲಕ್ಕಿ ಉಪ್ಪು ಬೆರೆಸಿ, ಜೊತೆಗಿಷ್ಟು ಚಟ್ನಿಪುಡಿ ಇದ್ದರಾಯಿತು ಪಂಚಪಕ್ವಾನ್ನ ಉಂಡುದಕ್ಕಿಂತ ಹೆಚ್ಚು ತೃಪ್ತಿ.

ಚೈತ್ರ ಪೂರ್ಣಿಮೆಯ ರಾತ್ರಿ ನದಿ ತೀರದಲ್ಲಿ ಮೊಸರವಲಕ್ಕಿ ತಿಂದವರಿಗೆ ಅದರ ರುಚಿ ಗೊತ್ತು. ಮನೆಯಲ್ಲಿ ಹಬ್ಬದ ದಿನ ಊಟ ಹೊತ್ತಾದಾಗಲೆಲ್ಲ ಮೊಸರವಲಕ್ಕಿ ಕಲಸಿ ಕೊಟ್ಟರೆ ಅಥವಾ ಹಚ್ಚಿದ ಅವಲಕ್ಕಿಗೆ ಮೊಸರು ಹಾಕಿದರೆ ಆಗುವ ಸಂಭ್ರಮ ವರ್ಣನಾತೀತ, ಶ್ರೀಕೃಷ್ಣಜನ್ಮಾಷ್ಟಮಿ, ಚೈತ್ರ ಮಾಸದ ಗೌರಿಯನ್ನು ಕಳಿಸುವ ದಿನ ಆ ಮೊಸರವಲಕ್ಕಿಯನ್ನು ರುಚಿಸಿದ ರಸಸ್ಮೃತಿಯನ್ನು ನಾನು ಈ ದಿನದವರೆಗೂ ಮರೆತಿಲ್ಲ.

ನನ್ನ ತಾಯಿಯ ತೌರು ಮನೆಗೆ ಹೋದಾಗಲೆಲ್ಲ ಅವಳ ಸೋದರತ್ತೆಯರು ಕಲಸುತ್ತಿದ್ದ ಮೊಸರವಲಕ್ಕಿ ನೆನಪಾಗುತ್ತದೆ... ಆ ವಿಧವೆ ಮಡಿ ಹೆಂಗಸರು ರಾತ್ರಿ ಫಲಹಾರ ಮಾಡುವುದನ್ನೇ ಕಾಯುತ್ತ ಕುಳಿತಿರಬೇಕು. ಅವರು ಮಡಿ ಉಟ್ಟುಕೊಳ್ಳುವುದೇ ತಡ ನಿದ್ರೆ ತುಂಬಿದ ಕಣ್ಣುಗಳನ್ನು ಬೆಳ್ಳಿಯ ಬಟ್ಟಲದಂತೆ ತೆಗೆದು ಕಳ್ಳ ಬೆಕ್ಕಿನಂತೆ ಅಡಿಗೆ ಮನೆ ಸೇರಬೇಕು. ಅವರನ್ನು ನೆನೆಸಿದಾಗೊಮ್ಮೆ ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೋ' ಎಂಬ ಬೇಂದ್ರೆಯವರ ಮಾತು ಮರ್ಮಕ್ಕೆ ಹತ್ತಬೇಕು.

ಅವರಿಬ್ಬರ ಜೀವನ ಕಥೆ ತುಂಬಾ ವಿಷಾದಕರ, ಬಾಲ ವಿಧವೆಯರು, ಸಣ್ಣತ್ಯಾ, ದೊಡ್ಡತ್ಯಾ ಇಬ್ಬರೂ ಮೊಸರವಲಕ್ಕಿ ನಮ್ಮ ಕೈಗೆ ಹಾಕಬೇಕು. ಅದರ ರುಚಿ ನಾಲಿಗೆಯ ಮೇಲೆ ಇನ್ನೂ ಉಳಿದಿದೆ. ಅವರಿಬ್ಬರ ಜೀವನವೂ ಅವಲಕ್ಕಿಯಂತೆಯೇ, ಕೆಸರಿನೊಳಗೆ ಬೆಳೆದು, ಕಾಲ ಕೆಳಗೆ ತುಳಿದು, ಕುಟ್ಟಿಕುಟ್ಟಿ ಬಿಳಿಯ ಪರಿಯಾಗಿ ನಿಂತ ಅವಲಕ್ಕಿ.

ಆ ಮೊಸರವಲಕ್ಕಿ ಆಸೆಗೆ ನಾನೂ ಅವರಂತೆ ಆದಾಗ ನಿತ್ಯ ಮೊಸರವಲಕ್ಕಿ ತಿನ್ನಬಹುದಲ್ಲ ಎಂಬ ವಿಚಾರ ಮೂಡುತ್ತಿತ್ತು. ಆ ಮುಗ್ಧ ಮನಸ್ಸಿನ ಆಸೆ ಈಗ ನೆನೆದಾಗ ಎದೆ ಬಿರಿಯುತ್ತದೆ. ಯಾವ ಸೌಭಾಗ್ಯಕ್ಕೆ ಆ ಮೊಸರವಲಕ್ಕಿ!

*

ತಾಯಿ ಕಲಸಿದ ಮೊಸರವಲಕ್ಕಿಗೆ ಅದೇ ರುಚಿ, ಮೊಸರವಲಕ್ಕಿ ಕಲಸುವ ಕಲೆ ರಕ್ತಗತವಾಗಿ ಬಂದಿರಬೇಕು. ಕೈಯಲ್ಲಿದ್ದ ಮೊಸರವಲಕ್ಕಿ ಬಾಯಿಗೆ ಹಾಕಿದೆ. ತಾಯಿ ಕೇಳಿದರು, 'ಹುಳಿ ಆತೇನ? ಹಾಲು ಬೇಕೇನ?

'ಬ್ಯಾಡ, ರುಚಿ ಆಗೇದ'

ತಾಯಿ ಮತ್ತೆ ರಂಜಕ ಅರೆಯಲು ಕುಳಿತರು. ನಿಂಬೇಹಣ್ಣಿನ ರಸ ಬೆರೆತ ಅರ್ಧಮರ್ಧ ನುರಿತ ಮೆಣಸಿನಕಾಯಿಗಳನ್ನು ಕಟ್ಟಿಗೆಯ ಚಮಚೆಯಿಂದ ಸರಿಸುತ್ತಿದ್ದರು.



ಪಟ್‌ಪಟ್ ಎಂದು ಸಪ್ಪಳ ಮಾಡುತ್ತ ಮೆಣಸಿನ ಕಾಯಿಗಳು ಒರಳಿನಲ್ಲಿ ನುಣ್ಣಗಾಗುತ್ತಿದ್ದವು. ಖಾರವಾಸನೆ ಆ ಕೋಣೆಯಲ್ಲೆಲ್ಲ ಹರಡಿತ್ತು. ಇದ್ದಿಲು ಒಲೆಯ ತನುಗೆಂಡದ ಮೇಲೆ ಹಾಲು ಕಾಯುತ್ತಿತ್ತು. ದೇವರ ಮುಂದಿನ ನಂದಾದೀಪದ ಎಣ್ಣೆ ಸೋರಿ ಗೋಡೆಯನ್ನೆಲ್ಲ ಜಿಡ್ಡಾಗಿಸಿತ್ತು. ಈ ದೇವರ ಪೂಜೆಗೆ ಬರುವ ಆಚಾರ್ಯರಿಗೆ ಸ್ವಚ್ಛತೆಯ ಅರಿವೇ ಇಲ್ಲ. ಸಾಲಿಗ್ರಾಮದ ನೆತ್ತಿಗಿಷ್ಟು ನೀರು ಹೊಯ್ದು, ಗಂಧವನ್ನಿಷ್ಟು ತೇಯ್ದು, ಯಾರ ಮನೆಯ ಪಂಚಾಯಿತಿಯನ್ನೆಲ್ಲ ಹೇಳುತ್ತ, ಮಂತ್ರ ಮರೆತು ದಕ್ಷಿಣೆ ಗಿಟ್ಟಿಸಿ ಹೋಗುವ ಆಚಾರ್ಯರ ಬಗ್ಗೆ ಕೋಪ ಬಂದಿತ್ತು.

ತಮ್ಮ, ಗೆಳೆಯನೊಂದಿಗೆ ಬಂದ. ನಾವು ಮೊಸರವಲಕ್ಕಿ ತಿನ್ನುವುದನ್ನು ನೋಡಿ, “ಅವ್ವಾ, ನನಗ' ಎಂದು ಕೈ ಮುಂದೆ ಮಾಡಿದ. ಆತನ ಮುಂದೆ ಚಾಚಿದ ಕೈ ನೋಡಿ ತಾಯಿ, 'ಪ್ಲೇಟ ತಗೋ ಹಾಕ್ತಿನಿ' ಅಂದರು. ಅವರ ಕಣ್ಣಲ್ಲಿ ನೀರಿತ್ತು.

'ಯಾಕ ಏನಾತು?' ನಾನು ಪ್ರಶ್ನಿಸಿದೆ.

'ಏನಿಲ್ಲ' ಖಾರದ ಕೈ ತೊಳೆದು ಸೆರಗಿನಿಂದ ಕಣ್ಣೀರನೊರಸಿಕೊಂಡರು.

'ಕಣ್ಣಾಗ ಮೆಣಸಿನಕಾಯಿ ಸಿಡಿತೇನು?'

'ಸುಮ್ಮನಿರು' ಸನ್ನೆ ಮಾಡಿದರು.

ತಮ್ಮನಿಗೂ ಆತನ ಗೆಳೆಯನಿಗೂ ಮೊಸರವಲಕ್ಕಿ ಕೊಟ್ಟು ಅವರು ತಮ್ಮ ಕೋಣೆಗೆ ಹೋಗುವುದನ್ನೇ ಕಾಯುತ್ತಿದ್ದ ತಾಯಿ ಹೇಳಿದರು.

“ಅವನ ಕೈ ನೋಡಿದರ ಏನೆಲ್ಲ ನೆನಪಾಗ್ತದ' ಅವರ ನೆನಪಿನ ಕೊಂಡಿ ಕಳಚಿತ್ತು. ತಂದೆಯವರ ಕೈಯನ್ನೇ ಹೋಲುವ ತಮ್ಮನ ಕೈ ತಾಯಿಯವರಿಗೆ ದುಃಖ ತರುತ್ತದೆ...

ತಂದೆಯವರಿಗೆ ಮೊಸರವಲಕ್ಕಿ ಬಲು ಪ್ರೀತಿ, ತಾಯಿ ಮೊಸರವಲಕ್ಕಿ ಕಲಸುವುದೇ ತಡ, ಅವರು ಕೈಯೊಡ್ಡಿ ಮೊಸರವಲಕ್ಕಿ ತುತ್ತು ಹಾಕಿಸಿಕೊಂಡು ತಿನ್ನುವುದು. ಪ್ಲೇಟ ಚಮಚೆಯಲ್ಲಿ ಅವರಿಗೆ ಅದು ರುಚಿಸುತ್ತಿರಲಿಲ್ಲ.

ಕೈ ನೆಕ್ಕುತ್ತ, ಬೆರಳು ಚೀಪುತ್ತ ಸುವೊಂದು ಸಪ್ಪಳ ಮಾಡುತ್ತ, ಅಡ್ಡಾಡುತ್ತ ಮೊಸರವಲಕ್ಕಿ ತಿನ್ನುತ್ತಲೇ ಇರಬೇಕು.

“ಕೈ ಚೀಪಿಗೋಳೋ, ಹಾಲು ಮೊಸರು ಸೋರತದ. ಯಾರದಾದ್ರೂ ಕಣ್ಣ ಹತ್ಯಾವೋ' ಎಂದು ಅಜ್ಜಿಯ ಜೀವ ಏನೆಲ್ಲ ಆಡುತ್ತಿರಬೇಕು. ಆ ತಾಯ ಮಾತಿನ ಪರಿವೆಯಿಲ್ಲದೇ ಅವರು ಮೊಸರವಲಕ್ಕಿ ತಿನ್ನುತ್ತಿರಬೇಕು.

ನನ್ನ ಕಕ್ಕಂದಿರಿಬ್ಬರಿಗೂ ಮೊಸರವಲಕ್ಕಿ ಪ್ರೀತಿ, ಅಣ್ಣತಮ್ಮಂದಿರು ಚಿಕ್ಕವರಿರುವಾಗ ತಾಯಿ ಮೊಸರವಲಕ್ಕಿ ಕೊಡುತ್ತಿರಲಿಲ್ಲ. ಆಗ ಈ ಮೂವರೂ ಒಬ್ಬರಿಗೆ ಒಬ್ಬರು



ಹೇಳಿಕೊಳ್ಳುತ್ತಿದ್ದರಂತೆ, 'ಅವ್ವ ಸತ್ತರ ಮೊಸರವಲಕ್ಕಿ ಸಿಗ್ತದ' ಎಂದು. ಆ ಮಾತನ್ನು ದೊಡ್ಡವರಾದ ಮೇಲೆ ನೆನೆಸಿ ನಗುತ್ತ ಮೊಸರವಲಕ್ಕಿ ಮಹಿಮೆ ಹೇಳುತ್ತಿದ್ದರು.

ಒಮ್ಮೊಮ್ಮೆ ತಂದೆಯವರೇ ಸ್ಪೆಷಲ್ ಮೊಸರವಲಕ್ಕಿ ತಯಾರಿಸಬೇಕು. ಹಸಿಮೆಣಸಿನಕಾಯಿ, ಕೊತ್ತಂಬರಿ, ಉಳ್ಳಾಗಡ್ಡಿ ಸಣ್ಣಗೆ ಹೆಚ್ಚಿ ಬೆರೆಸಬೇಕು. ಮೇಲೆ ತುಪ್ಪದ ಒಗ್ಗರಣೆ. ಒಗ್ಗರಣೆ ಮಾಡುವುದು ಅವರಿಗೆ ತಿಳಿಯದು. ತಮ್ಮ ತಾಯಿಯನ್ನು ಕೇಳಬೇಕು. ನಂತರ, ನೀವು ಹೆಂಗಸರಿಗೆ ಹ್ಯಾಂಗ ರುಚಿ ಮಾಡಬೇಕು ಅನ್ನೋದು ಗೊತ್ತಿಲ್ಲ. ನಿಮಗೆ ವೈರಾಯಿಟಿ ಇಲ್ಲ. ನಾ ಹ್ಯಾಂಗ ರುಚಿ ಮಾಡೇನಿ' ಎಂದು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಳ್ಳುತ್ತ ಎಲ್ಲರ ಕೈಗೂ ಮೊಸರವಲಕ್ಕಿ ತುತ್ತು ಹಾಕಬೇಕು. ಮೆಣಸಿನಕಾಯಿಯನ್ನು ಕಟ್ಟನೇ ಕಡಿದು ನಾವು 'ಹಾ' ಎಂದು ಚೀರಿಕೊಂಡು,

ಬಾಯಲ್ಲಿಯ ತುತ್ತನ್ನು ಹೂ ಎಂದು ಉಗುಳಿ ನೀರು ಕುಡಿಯಲು ಓಡಿದಾಗ, 'ಹೇಡಿಗಳು ಮೆಣಸಿನಕಾಯಿ ತಿನ್ನಲಿಕ್ಕೆ ಆಗೋದಿಲ್ಲ' ಎಂದು ಬೈಯ್ಯಬೇಕು.

ತಂದೆಯವರು ಈಗಿಲ್ಲ. ಮೊಸರವಲಕ್ಕಿಯ ಮೇಲಿದ್ದ ಅವರ ಪ್ರೀತಿ ನಮಗೆಲ್ಲ ಅವರ ಮಧುರ ಸ್ಮೃತಿ.

ಕೂತಲ್ಲಿಂದ ಕಿಡಕಿಯಾಚೆ ಕಣ್ಣಾಡಿತು. ಮೂರು ದಿನದಿಂದ ಕಣ್ಣು ಮುಚ್ಚಿ ಧೋ ಎಂದು ಸುರಿಯುತ್ತಿದ ಮಳೆ ನಿಂತಿದ್ದರೂ ಮೋಡಗಳು ಹನಿಯೊಡೆಯಲು ಕಟ್ಟಿಕೊಂಡು ನಿಂತಿದ್ದವು. ಬಕುಲದ ಗಿಡದಿಂದ ಹೂಗಳು ನೆಲಕ್ಕೆಲ್ಲಾ ಸುರಿದಿದ್ದವು. ನುಗ್ಗಿಯ ಕಾಯಿ ತುಂಬಾ ಬಿಟ್ಟಿದ್ದವು. ನಾಳೆ ಗುರುಪಾದನಿಗೆ ಹೇಳಿ ನುಗ್ಗಿ ಕಾಯಿ ತೆಗೆಯಿಸಬೇಕು. ತಂದೆಯವರಿದ್ದಾಗ ಈ ಮನೆಗೆ ಯಾವ ವೈಭವ! ಏನು ದರಬಾರ! ಸಂಜೆ ಅಂಗಳದ ತುಂಬೆಲ್ಲ ಅವರ ಮಿತ್ರ ಮಂಡಳಿ, ಒಲೆಯ ಮೇಲಿನ ಚಹದ ಪಾತ್ರೆ ಕೆಳಗಿಳಿಯುತ್ತಿರಲಿಲ್ಲ. ಎಷ್ಟೊಂದು ಜನ ನಿತ್ಯ ಊಟಕ್ಕೆ! ಎಷ್ಟು ಬಡ ವಿದ್ಯಾರ್ಥಿಗಳು ಮನೆಯಲ್ಲಿ! ಆ ದಿನ ನಾನು ನನ್ನ ಸಹಪಾಠಿಗಳನ್ನೂ, ಪ್ರಾಧ್ಯಾಪಕರನ್ನೂ ಕರೆದುಕೊಂಡು ರಾತ್ರಿ ಮನೆಗೆ ಬಂದಾಗ, ತಂದೆ ಪಿಕ್‌ನಿಕ್‌ನಿಂದ ದಣಿದ ಅವರಿಗೆಲ್ಲ ಮೊಸರವಲಕ್ಕಿ ಮಾಡಿಸಿ ಕೊಟ್ಟು ಆದರದ ಸ್ವಾಗತ ಮಾಡಿದ ನೆನಪು ಬಂದು ಮೊಸರವಲಕ್ಕಿಯ ತುತ್ತು ಗಂಟಲದಲ್ಲಿ ಸಿಕ್ಕಿತು. ನಾನು ಬಿಕ್ಕಿದೆ.

'ಅಲ್ಲ ಮೊಸರವಲಕ್ಕಿ ತಿನ್ನು... ಏನ ನೆನಪಾತು? ಅಳತೀ ಯಾಕ? ಹಿಂದಿನದೆಲ್ಲಾ ಕನಸು ಮರೆತು ಬಿಡಬೇಕು' ಎಂದು ತಾಯಿ ಹೇಳಿದರು.

ಹೊರಗೆ ಗುಡುಗುಡು ಶಬ್ದ. ಮನಸ್ಸು ಕದಡಿತ್ತು. ತಾಯಿ ರಂಜಕ ಅರೆಯುವುದನ್ನು ಮುಗಿಸಿದ್ದರು. ಒಲೆಯ ಮೇಲಿಟ್ಟ ಹಾಲು ಕಾದು ಉಕ್ಕು ಬಂದಿತ್ತು. ತಾಯಿ ತುದಿಬಟ್ಟೆನಿಂದ ಹಾಲಿನ ಪಾತ್ರೆ ಕೆಳಗಿಳಿಸಿ ಪಕ್ಕದಲ್ಲಿದ್ದ ಕಬ್ಬಿಣ ಸೌಟಿನ ಹಿಂಬದಿಯಿಂದ ಕೆಂಡ ಕೆದರಿ, ಆಡಿಸಿ, ಬೂದಿ ಕೆಳಗಿಳಿಸಿದರು. ಒಲೆಯಲ್ಲಿ ಮತ್ತೆ ಇದ್ದಿಲು ತುಂಬಿ ಕಡೆದು ತೆಗೆದಿಟ್ಟ ಬೆಣ್ಣೆ ಕಾಯಿಸಲು ಒಲೆಯ ಮೇಲಿಟ್ಟರು.



ನಾನು ಮೊಸರವಲಕ್ಕಿ ತುತ್ತು ಮತ್ತೆ ಬಾಯಿಗೆ ಹಾಕಿಕೊಂಡೆ. ಕಣ್ಣಲ್ಲಿ ನೀರಿತ್ತು. ಕೆಚ್ಚಲ ಗುದ್ದಿ ಹಾಲು ಕುಡಿಯುತ್ತಿದ್ದರೂ, ಆ ನೋವನ್ನು ಸಹಿಸಿಕೊಂಡು ಕರುವಿನ ಮೈ ನೆಕ್ಕಿ ಮೂಸಿ ಮೂಸಿ ನೋಡಿ ಪ್ರೀತಿಸುವ ಆಕಳದಂತೆ ತಾಯಿ ಬೆನ್ನ ಮೇಲೆ ಕೈಯಾಡಿಸಿ ಹೇಳಿದರು. 'ಸಮಾಧಾನ ಮಾಡಕೋ. ಮೊಸರವಲಕ್ಕಿ ತಿನ್ನು, ಬೆರೆತ ಹೋಗತದ' ಅಂದರು.

ತಲೆ ಬುಗುರಿಯಾಗಿ ಸುತ್ತಿತು.

*

ಆ ದಿನ... ಮಟಮಟ ಮಧ್ಯಾಹ್ನ. ಬಿಸಿಲಿನ ತಾಪಕ್ಕೆ ಮೆಲುಕಾಡಿಸುವುದನ್ನು ಬಿಟ್ಟು ಗಿಡದ ನೆರಳಿಗೆ ಮಲಗಿದ ಎಮ್ಮೆಗಳು, ಗಾಳಿಯ ಸುಳಿವಿಲ್ಲದೇ ದಂಡನಾಯಕರ ಆಜ್ಞೆಯನ್ನು ಕಾಯುತ್ತ ನಿಂತ ಸೈನಿಕರಂತೆ ಅಲುಗಾಡದೇ ನಿಂತ ಗಿಡಗಳು. ಭರ್‌ಭ ಒಂದರ ಮೇಲೊಂದು ಓಡುತ್ತಿದ್ದ ಬಸ್ಸುಗಳು. ನನ್ನ ನೆರಳನ್ನೇ ನಾನು ತುಳಿಯುತ್ತ ಕಾಲೇಜಿನ ಪಾಠ ಮುಗಿಸಿ ಮನೆಗೆ ಹೊರಟಿದ್ದೆ.

ಹುಬ್ಬಳ್ಳಿಯ ಅಶೋಕ ನಗರದಲ್ಲಿ ನಮ್ಮ ಮನೆ. ವಿದ್ಯಾನಗರ ಕಾಲೇಜಿನಲ್ಲಿ ನಾನು ಪ್ರಾಧ್ಯಾಪಕಿ, ಕರ್ನಾಟಕ ಮೆಡಿಕಲ್ ಕಾಲೇಜಿನ ಹತ್ತಿರ ಬಂದಾಗ, ಧಾರವಾಡ ಬಸ್ಸಿಗೆ ಬಂದ ಮಾವನವರು ಅಲ್ಲಿಯೇ ಇಳಿದು, ಮೆಡಿಕಲ್ ಕಾಲೇಜಿನ ಕ್ಯಾಂಪಸ್ಸಿನಲ್ಲಿ ಹಾದು ಮನೆಗೆ ಹೊರಟಿದ್ದರು.

ಶುಭ್ರ ಧೋತರ, ತಲೆಗೊಂದು ಕರಿ ಟೊಪ್ಪಿಗೆ, ಅರ್ಧ ಬಿಳಿ ಶರ್ಟಿನ ಮೇಲೆ ಉಲನ್ ಕೋಟು, ಕಾಲಲ್ಲಿ ಚರ್ಮದ ಚಪ್ಪಲಿ, ಉದ್ದ ಕೋಲು ದೇಹದ ಮಾವನವರ ನಡಿಗೆ ದೂರದಿಂದಲೇ ಗುರುತಿಸಿದೆ.

'ಮಾವಾ' ಎಂದು ಕೂಗಿದೆ. ತಿರುಗಿ ತಿರುಗಿ ನೋಡಿ ನಿಂತರು. ಧಾವಿಸಿ ಹೋಗಿ ಅವರನ್ನು ಕೂಡಿದೆ.

'ಈಗ ಕಾಲೇಜಿನಿಂದ ಬಂದೇನವ್ವಾ, ನೀ ಭೆಟ್ಟಿಯಾದ್ದು ಭಲೋ ಆತು. ಇಲ್ಲಾಂದ್ರ ನೀ ಬರೋತನಕ ಬಾಗಲದಾಗ ಕೂಡಬೇಕಾಗತಿತ್ತು'

'ಎಂಥಾ ಬಿಸಿಲಾಗ ಬಂದ್ರಿ, ಆಟೋ ರಿಕ್ಷಾ ತಗೊಂಡು ಮನಿಗೆ ಹೋಗೋಣೇನು' 'ಬ್ಯಾಡವ್ವಾ, ಆ ಹಂದಿ ಮೂತಿ ರಿಕ್ಷಾದಾಗ ಕೂಡೂದಕ್ಕಿಂತ ದೇವರ ಕೊಟ್ಟ ನಮ್ಮ ಕಾಲ ಭಲೋ...' ಎಂದು ನಕ್ಕರು.

ಮಾವನವರಿಗೆ ರಿಕ್ಷ ಅಂದರೆ ಬಲು ವಿರೋಧ. ಹೊಟ್ಟೆಯಲ್ಲಿಯ ಕರುಳನ್ನೇ ಬಾಯಿಗೆ ತರಿಸುವ ಆ ರಿಕ್ಷಾಗಳ ಓಟ ಅವರಿಗೆ ಎಳ್ಳಷ್ಟೂ ಹಿಡಿಸುತ್ತಿರಲಿಲ್ಲ.

'ಈ ರಿಕ್ಷಾದಾಗ ಕೂತ್ರ ದಿನ ತುಂಬಿದ ಗರ್ಭಿಣಿ ಹೆಂಗಸೂರಿಗೆ ಸುಸೂತ್ರ ಪ್ರಸವ' ಎಂದು ನಕ್ಕು ನಗಿಸಿದರು.

“ನೀವು ಈಗ ಬೆಳಗಾಂವಿಯಿಂದ ಬಂದ್ರೇನು?' ಎಂದು ಪ್ರಶ್ನಿಸಿದೆ.

'ಇಲ್ಲ. ಮುಂಜಾನೆ ಧಾರವಾಡಕ್ಕೆ ಬಂದಿದ್ದೆ. ಅಲ್ಲೇ ಊಟಾ ಮಾಡಿ ಹೊಂಟೆ' ಅಂದರು.

ಮಾವನವರೊಡನೆ ನಡೆಯುವುದು ಬಲು ಕಠಿಣ. ಅವರ ಒಂದು ಹೆಜ್ಜೆಗೆ ನನ್ನ ಐದು ಹೆಜ್ಜೆ ಬೀಳುತ್ತಿದ್ದವು. ಇಂಥ ವಯಸ್ಸಿನಲ್ಲೂ ಎಷ್ಟು ಹುರುಪಿನ ತೀವ್ರ ನಡಿಗೆಯೆನಿಸಿತು.

`ಯಾಕವ್ವ  ದಮ್ಮು ಹತ್ತೇನು? ನನ್ನ ಜೋಡಿ ನಡಿಯೂದಂದ್ರ...' ಎಂದು ಆ ಮಾತು ಅರ್ಧಕ್ಕೆ ನಿಲ್ಲಿಸಿದರು... “ಊರಿಗೆ ಹೋಗಬೇಕಾಗಿತ್ತಲ್ವಾ.. ಎಲ್ಲೂ ಟಾಂಗಾ ಸಿಗಲಿಲ್ಲ. ನಮ್ಮ ಮನ್ಯಾಗ ಇವರೂ ನಾನೂ ಕೂಡೇ ಹೊರಟೇವಿ. ನಾ ಸ್ಟೇಷನಕ್ಕ ಮುಟ್ಟಿ ಚಹಾ ಕುಡದು ಇನ್ನೂ ಯಾಕ ಇವರ ಬಂದಿಲ್ಲಾಂತ ಹುಡುಕಿ ಹೊರಟರ ಅರ್ಧಾ ರಸ್ತೆಕ್ಕ ಸಿಕ್ಕರು. ಅವರದು ಆಮೆ ನಡಿಗೆ' ಎಂದು ಹೆಂಡತಿಯನ್ನು ನೆನಸಿ ನಕ್ಕರು.

ಅತ್ತೆ ಮಾವನವರಲ್ಲಿ ಎಲ್ಲದರಲ್ಲೂ ವ್ಯತ್ಯಾಸ. ಆದರೆ ಅವರಿಬ್ಬರಲ್ಲಿದ್ದ ಪ್ರೀತಿ ನಮಗೆಲ್ಲ ಆದರ್ಶ.

ಅತ್ತೆ ನಿಧಾನ, ಮಾವ ತ್ವರಿತ, ಅತ್ತೆಯವರದು ಮುತ್ತಿನಂತೆ ಹೊಳೆಯುವ ಕೆಂಪು ಬಣ್ಣ, ಮಾವನವರದು ಸಾಲಿಗ್ರಾಮ ಮಿಂಚು. ಅತ್ತೆ ಚೆಲುವೆ. ಕೊಲ್ಲಾಪುರ ಮಹಾಲಕ್ಷ್ಮಿಯ ರೂಪ, ಅದೇ ಗಿಡ್ಡ ಮಾಟ ಮೈಕಟ್ಟು. ಮಾವನವರದು ಉದ್ದ ನೀಳ ದೇಹ, ನೀಟವಾದ ಮೂಗು, ತೇಜಃಪುಂಜಿತ ಕಣ್ಣುಗಳು. ಗದುಗಿನ ವೀರನಾರಾಯಣನನ್ನು ನೋಡಿದಂತೆ!

ಒಂದು ದಿನ ನನ್ನ ಯಜಮಾನರು ತಾಯಿಗೆ ಕೇಳಿದರಂತೆ. 'ಅವ್ವಾ, ನೀಯೆಷ್ಟು ಕೆಂಪು ಇದ್ದೀ, ಮಾವಾ ಕಪ್ಪು ಇದ್ದಾರ. ಹ್ಯಾಂಗ ಲಗ್ನ ಮಾಡಿಕೊಂಡಿ?' ಎಂದು.

ಅದಕ್ಕೆ ಅತ್ತೆಯವರು ಮಗನ ತುಂಟ ಮಾತಿಗೆ 'ಕರೇ ಕಸ್ತೂರಿ ವರಹಕ್ಕೆ ಸೇರು' ಎಂದು ಉತ್ತರಿಸಿದರಂತೆ.

ಅಷ್ಟೊಂದು ಪತಿಯ ಬಗ್ಗೆ ಆದರ, ಪ್ರೀತಿಯಿದ್ದ ಅತ್ತೆಯವರು ಮಾವನವರ ಮಾತನ್ನು ಜೀವನದಲ್ಲಿ ಎಂದೂ ತೆಗೆದು ಹಾಕಲಿಲ್ಲ. ಮಾವನವರಿಗೆ ಪ್ರಿಯವಾದ ಒಂದು ವಿಷಯ ಇಸ್ಪೀಟು ಆಟ, ಅದಕ್ಕಾಗಿ ಅವರಿಬ್ಬರಲ್ಲಿ ವೈಮನಸ್ಸಾಗಿ ಮನಸ್ತಾಪವಾದಾಗ ಅದನ್ನು ಅವರು ಎಂದಿಗೂ ಮುಂದುವರಿಸಲಿಲ್ಲ. ಮಾವನವರು ಅಳಿಯ ದೇವರನ್ನೇ ಕರೆದುಕೊಂಡು ಆಡಲು ಹೋಗಿ ಬಿಡುತ್ತಿದ್ದರು. ಮನೆಯಲ್ಲಿ ಹೆಂಡತಿಯೆದುರಿಗೆ ಎಂದೂ ಆಡಲಿಲ್ಲ. ಹೆದರಿಕೆ ಅಲ್ಲ, ಹೆಂಡತಿಗೆ ಅವರು ಕೊಡುತ್ತಿದ್ದ ಮರ್ಯಾದೆ.

ಮನೆ ಮುಟ್ಟಿ ಚಹಾ ಕುಡಿದೆವು. ಆ ಮಾತು ಈ ಮಾತು ಆಡುವುದರಲ್ಲಿ ಸಂಜೆಯಾಗಿತ್ತು. ಮಗನ ದಾರಿ ಕಾಯುತ್ತ, ಮನೆಯೆದುರಿನ ಕಟ್ಟೆಯ ಮೇಲೆ ಕುಳಿತ ಅವರಿಗೆ ನಾನು ಕೇಳಿದೆ, 'ಮಾಮಾ ಮೊಸರವಲಕ್ಕಿ ಕಲಸಿ ಕೊಡಲೇನು?'

'ವ್ಹಾ! ಭೇಷ್ ಕಲಸವ್ವಾ!'

ತುಪ್ಪದ ಒಗ್ಗರಣೆ ಹಾಕಿ ಕೆನೆ ಮೊಸರಿನಲ್ಲಿ ಅವಲಕ್ಕಿ ಕಲಸಿದೆ. ಸಂಡಿಗೆಗುಂಬಳ ಖಾರ ಸಂಡಿಗೆ, ಅವಲಕ್ಕಿ ಹಪ್ಪಳ ಕರಿದೆ. ಅವರಿಗೆ ಬಲು ಖುಷಿಯಾಯಿತು. ಅದೇ ಮೊದಲ ಸಲ ನಾನವರಿಗಾಗಿ ತಿಂಡಿ ತಯಾರಿಸಿ ಕೊಟ್ಟಿದ್ದು. ಮೊಸರವಲಕ್ಕಿ ಬಾಯಿಗೆ ಹಾಕಿದ ಅವರು, 'ಏನ ಅಪರೂಪ ಆಗೇದವ್ವಾ!' ಎಂದರು.

ತಿಂದು ಮುಗಿಸಿದ ಮೇಲೆ, ಭಾಳ ಆರಾಮ ಮಾಡಿಸಿದೆವ್ವಾ, ಹೊಟ್ಟೆ ಶಾಂತ ಆತು. ಅನ್ನ ದಾತಾ ಸುಖೀ ಭವ' ಎಂದು ತೇಗಿದರು.

ಆ ತುತ್ತು ಮೊಸರವಲಕ್ಕಿಯಿಂದ ತೃಪ್ತಿಪಟ್ಟ ಆ ಹಿರಿ ಜೀವ ನನ್ನನ್ನು ಸಂಪೂರ್ಣ ಮನಸ್ಸಿನಿಂದ ಆಶೀರ್ವದಿಸಿತ್ತು.

ಈ ಅವಲಕ್ಕಿಯ ಮಹಿಮೆಯೇ ಅಂತಹುದು. ಒಂದು ಮುಕ್ಕು ಒಣ ಅವಲಕ್ಕಿ ಮುಕ್ಕಿದ ಶ್ರೀಕೃಷ್ಣ ಸುಧಾಮನಿಗೆ ಐಶ್ವರ್ಯವನ್ನೇ ಕೊಟ್ಟ. ಪಾಪ ಸುಧಾಮನ ಮನೆಯಲ್ಲಿ ಎಣ್ಣೆ ಒಗ್ಗರಣೆ ಕಾಳಿಗೂ ಗತಿಯಿರಲಿಲ್ಲ. ಗೆಳೆಯನಿಗಾಗಿ ಚಿಂದಿ ಅರಿವೆಯ ಗಂಟಿನಲ್ಲಿ ಒಣ ಅವಲಕ್ಕಿ ತಂದಿದ್ದ. ಶ್ರೀಕೃಷ್ಣ ಮುಕ್ಕಿದ್ದು ಒಣ ಅವಲಕ್ಕಿಯಲ್ಲ, ಸುಧಾಮನ ಪ್ರೀತಿ.

ಮಾನವನವರು ಹೇಳಿದರು, 'ತಿನ್ನಲಿಕ್ಕೆ ಕೊಡೋ ಮುಂದೆ ಮುಕ್ತ ಮನಸ್ಸಿನಿಂದ ಕೊಡಬೇಕವ್ವಾ, ಎಲ್ಲರ ರುಚಿ ಅಭಿರುಚಿ ತಿಳಿದಿರಬೇಕು. ಅವರಿಗೆ ಹೊಟ್ಟೆಗೆ ಹಿತವಾಗುವಂತಹ ತಿನಿಸು ಹಸಿವಾದಾಗ ಕೊಟ್ರ ಪುಣ್ಯಾ ಬರದವ್ವಾ'.

ಬಿಸಿಲಿನ ತಾಪದಿಂದ ಬಳಲಿ ಬಂದ ಆ ಮುಪ್ಪಿನ ಜೀವಕ್ಕೆ ನಾನಿತ್ತ ಮೊಸರವಲಕ್ಕಿ ಹಿತಕರವಾಗಿತ್ತು. ಅವರಿಗೆ ಮೊಸರವಲಕ್ಕಿ ಅತ್ಯಂತ ಪ್ರೀತಿಯ ಖಾದ್ಯ.

ಮಗನನ್ನು ಭೆಟ್ಟಿಯಾಗಿ ಊರಿಗೆ ಹೊರಡುವಾಗ 'ಮೊಸರವಲಕ್ಕಿ ಭಾಳ ಅಪರೂಪ ಆಗಿತ್ತಲ್ವಾ, ರುಚಿ ಅಭಿರುಚಿ ತಿಳೀತು. ನಿನಗ ಅಡಿಗಿ ಬಂತು' ಎಂದು ಹೇಳಿದರು.

'ಗಣೇಶ ಚೌತಿಗೆ ಬೆಳಗಾಂವಿಗೆ ಬನ್ನಿ ಅಂತ ಹೇಳ್ಯಾಳ. ಇಬ್ಬರೂ ಬರಿ' ಎಂದು ಮಗನಿಗೆ ಹೆಂಡತಿ ಕಳಿಸಿದ ಸುದ್ದಿ ಮುಟ್ಟಿಸಿ, ಆಕಿ ನೆನಸತಿರತಾಳ ಪತ್ರಾ ಬರಿ' ಎಂದು ಹೇಳಿ ಹೊರಟರು.

ಬೆಳಗಾಂವಿಗೆ ಹೋಗಿ ಮಾವನವರು ನನ್ನನ್ನು ಮೊಸರವಲಕ್ಕಿ ಎಕ್ಸ್‌ಪರ್ಟ್ ಎಂದು ಪ್ರಸಿದ್ಧಿ ಮಾಡಿಯೇ ಬಿಟ್ಟರು. ಅತ್ತೆಯವರಿಗೆ ಹೇಳಿದರಂತೆ, 'ಎಂಥಾ ಮೊಸರವಲಕ್ಕಿ



ಕಲಸಿದ್ದಳು ನಿನ್ನ ಸೊಸಿ, ಭಾಳ ಅಪರೂಪ ಆಗಿತ್ತು" . ಮನೆಗೆ ಬಂದು ಹೋಗುವವರಿಗೆಲ್ಲ, ಬಳಗಕ್ಕೆ, ಸೊಸೆಯ ಮೊಸರವಲಕ್ಕಿ ವರ್ಣನೆ ಅವರು ಮಾಡಲೇ ಬೇಕು.

ಅವರ ಹೊಗಳಿಕೆಯಿಂದ ಬೇಸತ್ತ ಜನರೂ ಇದ್ದರು. 'ಮೊಸರವಲಕ್ಕಿ ಕಲಸೂದೇನೂ ಮಹಾ. ಮೊಸರು ರುಚಿ ಇದ್ರ ಮೊಸರವಲಕ್ಕಿ ತಾನ ರುಚಿಯಾಗತದ ಎಂದು ಅವರ ಮಾತಿಗೆ ಪ್ರತಿ ಮಾತನಾಡಿದವರೂ ಇದ್ದರು.

ತೀಕ್ಷ್ಣಮತಿಗಳು ಅಸೂಯೆಯಿಂದ, 'ಮೊಸರವಲಕ್ಕಿಗೆ ನೈಸರ್ಗಿಕ ರುಚಿ ಅದ. ಅದಕ್ಕ ಪಾಕ ಕಲಾದ ಅವಶ್ಯಕತೆಯಿಲ್ಲ' ಎಂದು ಚುಚ್ಚಿ ನುಡಿದಿದ್ದರಂತೆ.

ಅದಕ್ಕೆ ಮಾವನವರು, 'ದೇವರಿ, ಸೌಂದರ್ಯಕ್ಕೆ ಅಲಂಕಾರ ಬೇಕು. ಯೋಗ್ಯ ಅಲಂಕಾರ ಒದಗಿಸೋದ ಕಲಾ. ಹಾಂಗ ಮೊಸರು, ಅವಲಕ್ಕಿ ಎರಡರ ನೈಸರ್ಗಿಕ ರುಚಿಯನ್ನು ಅಧಿಕಗೊಳಿಸುವುದ ಮೊಸರವಲಕ್ಕಿ ಕಲಸೋ ಕಲಾ' ಎಂದು ಹೇಳಿ ಜನರ ಬಾಯಿ ಮುಚ್ಚಿಸಿದರಂತೆ.

ಈ ಮಾತನ್ನು ಅವರು ನನ್ನೆದುರಿಗೆ ಹೇಳಿದಾಗ ಹೃದಯ ತುಂಬಿ ಬಂದಿತ್ತು. ಅನ್ನವಾದದ್ದು ತಿಳಿಯದ ನನಗೆ ಅವರ ಅಂತಃಕರಣದ ಪ್ರಶಂಸನೆಯಿಂದ ಅಡಿಗೆ ಮಾಡಲು ಬಂತು.

ಸವದತ್ತಿಗೆ ಹೊಲದ ಕೆಲಸಕ್ಕೆ ಮೇಲಿಂದ ಮೇಲೆ ಹೋಗುತ್ತಿದ್ದ ಅವರು ಧಾರವಾಡಕ್ಕೆ ಬಂದಾಗಲೊಮ್ಮೆ ಹುಬ್ಬಳ್ಳಿಗೆ ಬರುತ್ತಿದ್ದರು. ಆ ದಿನ ರಾತ್ರಿ ಮೊಸರವಲಕ್ಕಿ ಪ್ರೋಗ್ರಾಮ ಆಗಲೇಬೇಕು. ಪ್ರತಿಸಾರೆ ಅವರು ನನ್ನನ್ನು ಹೊಗಳಲೇಬೇಕು. ಅವರ ಹೊಗಳಿಕೆಯಿಂದ ನನ್ನ ಮೊಸರವಲಕ್ಕಿಗೆ ರುಚಿ ಏರಬೇಕು.

'ಈ ಮೊಸರವಲಕ್ಕಿಗೆ ನಿನ್ನ ಅಂತಃಕರಣ ಕೂಡಿ ಪರಿಮಳ ಬಂದದ ನೋಡವ್ವಾ ಎಂದು ಒಂದು ದಿನ ಹೇಳಿದರು. ಅದೇ ನಾನವರಿಗೆ ಕೊನೆಯ ಸಾರೆ ಕಲಸಿಕೊಟ್ಟ ಮೊಸರವಲಕ್ಕಿಯಾಗಿತ್ತು.

ಬರಬರುತ್ತ ಅವರ ಪ್ರಕೃತಿ ಕ್ಷೀಣವಾಗಿ ಮೇಲಿಂದ ಮೇಲೆ ಹುಬ್ಬಳ್ಳಿಗೆ ಬರುವುದಾಗುತ್ತಿರಲಿಲ್ಲ. ನಾವು ಬೆಳಗಾವಿಗೆ ಹೋದಾಗಲೊಮ್ಮೆ ಹೇಳಬೇಕು.

'ಮೊಸರವಲಕ್ಕಿ ಪ್ರೋಗ್ರಾಮ್ ಮಾಡಸವ್ವಾ' ಎಂದು. ಅವರ ನಾಲಿಗೆಗೆ ರುಚಿ ಕಡಿಮೆಯಾಗಿತ್ತು.

ಅತ್ತೆಯವರು ಹೇಳಬೇಕು. 'ಪ್ರತಿ ದಿನಾ ನಿನ್ನ ನೆನಸತಾರ. ನಿನ್ನ ಮೊಸರವಲಕ್ಕಿ ನೆನಪಾತು ಅಂದ್ರ ಅವರಿಗೆ ಹುಬ್ಬಳ್ಳಿಗೆ ಹೋಗಬೇಕು ಅನ್ನಸತದ'.

ರಸಿಕರಾದ ಮಾವನವರಿಗೆ ಊಟದ ರುಚಿ ಹೆಚ್ಚು. ಅತ್ತೆಯವರ ಕೈ ಅಡಿಗೆ ಬಲು ರುಚಿ, ಪ್ರಸಿದ್ಧ. ಹೆಂಡತಿಯನ್ನು ಹೊಗಳಿದಷ್ಟು ತೆಗಳುತ್ತಿದ್ದುದೂ ಉಂಟು.



'ಏನ ಅಪರೂಪ ಆಗೇದ ಸಾರು!" ಎಂದು ಹೊಗಳುವ ಅವರು, 'ಸಾರೋ ಸೀಗೇಕಾಯಿ ನೀರೋ?' ಎಂದು ಕೇಳಿದ್ದೂ ಉಂಟು.

'ಚಕ್ಕಲಿ ರಬ್ಬರ ಎಳದ್ದಾಂಗ ಆಗ್ಯಾವ', 'ಒಗ್ಗರಣೆ ಕಾಸಿದ ಭಾಂಡಿಯೊಳಗ ಬಟಾಟಿ ಹೋಳು ಒರಸಿ ತಗದ್ದಂಗ ಆಗೇದ, ಬಟಾಟಿ ಪಲ್ಯಾನ ಇದು' ಎಂದು ನಕ್ಕಿದ್ದೂ ಉಂಟು.

“ನಿಮಗ ವಯಸ್ಸಾತು. ಅಡಿಗೆ ಮರತ ಹೋಗೇದ. ಹಲಸಿನ ಕಾಯಿ ಪಲ್ಯಾಕ್ಕ ಉಪ್ಪ ಹಾಕಿಲ್ಲ' ಎಂದು ಹೆಂಡತಿಗೆ ಎಚ್ಚರಿಸಿದಾಗ,

ಮರೆತಿರಬೇಕು. ಉಪ್ಪು ಹಚ್ಚಿಕೊಳ್ಳಿರಿ' ಎಂದರೆ, 'ಎಲ್ಯಾಗ ಉಪ್ಪು ಹಚ್ಚಿಕೊಂಡ್ರ ಪದಾರ್ಥದ ರುಚಿ ಮುಗೀತು' ಎಂದು ಮಾತಿಗೆ ಪೂರ್ಣ ವಿರಾಮ ಕೊಡುತ್ತಿದ್ದರು.

ಅಂತಹ ರುಚಿಯಿದ್ದ ಮಾವನವರಿಂದ ಮೊಸರವಲಕ್ಕಿ ತಜ್ಞಳೆಂದು ಬಿರುದು ಪಡೆದ ನನಗೆ ಅವರ ಬಿರುದನ್ನು ಹೆಮ್ಮೆಯಿಂದ ಇಂದಿಗೂ ಹೇಳಿಕೊಳ್ಳಬೇಕೆನಿಸುತ್ತದೆ.

*

ಕೈಯಲ್ಲಿದ್ದ ಮೊಸರವಲಕ್ಕಿ ತುತ್ತು ಬಾಯಿಗೆ ಮತ್ತೆ ಬಿತ್ತು. ಮನಸ್ಸಿನಲ್ಲಿ ತೆರೆ ಎದ್ದಿತ್ತು. ಹೊರಗೆ ಮತ್ತೆ ಗುಡುಗಿತ್ತು. ಮೋಡ ಕವಿದು ಕತ್ತಲು ಮನೆಯಲ್ಲೆಲ್ಲ ತುಂಬಿತು.

ಮಾವನವರು ಇಂದಿಲ್ಲ. ಆದರೆ ಮೊಸರವಲಕ್ಕಿ ಅವರ ಮಧುರ ಸ್ಮೃತಿ ತರುವ ದಿವ್ಯ ಖಾದ್ಯ.

ನಮ್ಮವರು ತಂದೆಯ ತಿಥಿಯ ದಿನ ರಾತ್ರಿ ಮೊಸರವಲಕ್ಕಿ ತಿನ್ನುತ್ತಾರೆ. ಆ ದಿನ ನಮ್ಮ ಮಗಳು ಮೊಸರವಲಕ್ಕಿ ಬೇಡವೆಂದಳು. ಮಗಳನ್ನು ಬಿಟ್ಟು ತಿನ್ನಲಾರದೇ ಹೇಳಿದರು,

'ಮೊಸರವಲಕ್ಕಿ ತಿನ್ನು ಅದು ಅಜ್ಜಾಗ ಭಾಳ ಪ್ರೀತಿ,

'ಯಾವ ಅಜ್ಜಾಗ?' ಮಗಳು ಪ್ರಶ್ನಿಸಿದಳು.

“ಇಬ್ಬರೂ ಅಜ್ಜಾಗ

'ಯಾಕ ತಿನ್ನಬೇಕು?'

“ಅದು ಪ್ರಸಾದ

ನಮ್ಮವರು ಆ ದಿನ ಆಡಿದಂತೆ ಮೊಸರವಲಕ್ಕಿ ನನಗೊಂದು ಪ್ರಸಾದ. ಆ ಎರಡು ಅಂತಃಕರಣದ ಜೀವಗಳ ಮಧುರ ಸ್ಮೃತಿ ತರುವ ಪ್ರಸಾದ. ಹೊಟ್ಟೆ, ಬೆನ್ನು ನನ್ನೆದುರು ತಕ್ಕಡಿಯ ಎರಡು ಪರಡಿಗಳಾಗಿ ತೂಗಿದವು.

ತಂದೆಯವರು ತೀರಿ ಹೋಗಿದ್ದರು. ಮನೆ ಮನಸ್ಸು ಎಲ್ಲ ಭಣಭಣ. ನನ್ನನು ಭೆಟ್ಟಿಯಾಗಲೆಂದು ಬಂದ ಮಾವನವರು ಅಳುತ್ತಿದ್ದ ನನ್ನನ್ನು ಸಂತೈಸಿ ಹೇಳಿದರು,

"ಅಳಬ್ಯಾಡವ್ವಾ ನಾ ಇದ್ದೀನಿ...' ತಂದೆಯವರ ಅಂತಃಕರಣದ ಕೊರಕಲನ್ನು ಅವರು ತುಂಬಿದ್ದರು. ತಾವು ಸಾಯುವವರೆಗೆ ನನ್ನನ್ನು ತಂದೆಯಾಗಿ ಜೋಕೆಗೈದ ಅವರ ಮನಸ್ಸು ಸಾಗರದಷ್ಟು ವಿಶಾಲ. ಅದರ ಆಳಕ್ಕೆ ಇಳಿದರೆ ಮುತ್ತನ್ನು ತಂದವನಿದ್ದ, ಚಿಪ್ಪನ್ನು ತಂದವನಿದ್ದ.

ಗಣೇಶ ಚತುರ್ಥಿಯ ಹಿಂದಿನ ದಿನ ಮಾವನವರ ತಿಥಿ, ಮರುದಿನ ತಂದೆಯವರ ತಿಥಿ. ಗಣೇಶನ ಹಬ್ಬ ನಮ್ಮಿಬ್ಬರ ಉಬ್ಬ ಕಳೆದರೂ ಮೊಸರವಲಕ್ಕಿ ನಮಗೆ ಆ ದಿನಗಳಲ್ಲಿ ಪ್ರಸಾದ.

ನನ್ನ ಜೀವನದಲ್ಲಿ ಮೊಸರವಲಕ್ಕಿಯ ಪಾತ್ರ ಬಲು ಹಿರಿದು. ಆ ಹಿರಿ ಜೀವಗಳ ಮಧುರ ಸ್ಮೃತಿ, ತಾಯಿ ವಿಧವೆ ಸೋದರತ್ತೆಯರ ದುಃಖ, ಅಕ್ಕತಂಗಿಯರೊಟ್ಟಿಗೆ ಹಬ್ಬದ ದಿನ ಮೊಸರವಲಕ್ಕಿ ಕಲಸಿದಾಗ ಸಮನಾಗಿ ಹಂಚಿ ತಿನ್ನುವ ದಾಯಾದಿತ್ವ 'ಸುಖ ದುಂಖೇ ಸಮೇಕೃತ್ವಾ' ಎಂಬ ಗೀತೆಯ ವಾಕ್ಯವನ್ನು ನೆನಪಿಗೆ ತರುವ ಸಾಂಕೇತಿಕ ಸಾಮಾನ್ಯ ಉಪಹಾರ ಮೊಸರವಲಕ್ಕಿ,

ಹೊಟ್ಟೆ ಬೆನ್ನು ಮತ್ತೆ ನನ್ನೆದುರು ತಕ್ಕಡಿಯ ಪರಡಿಗಳಾಗಿ ತೂಗಿದವು. ಹೆತ್ತ ಹೊಟ್ಟೆಯಿಂದ ಜಾರಿ ಬೆನ್ನ ಮೇಲೆ ಬಿದ್ದಾಗ ಹೊಟ್ಟೆಯಂತೆ ಪ್ರೀತಿಯಿಂದ ಆ ಭಾರ ಹೊತ್ತು ಪ್ರೀತಿ ಸುರಿಸಿದ ಮಾವನವರನ್ನು ಮೊಸರವಲಕ್ಕಿ ಕಲಸಿದಾಗೊಮ್ಮೆ ನೆನಸುತ್ತೇನೆ.

ಮಳೆ ತಡೆಗಟ್ಟಿ ಹಿಡಿದ ಮೋಡಗಳು ಚಲಿಸಿದವು. ಮಳೆ ಸುರಿಯಿತು. ಕಣ್ಣೀರು ಕೋಡಿಯಾಗಿ ಹರಿಯಿತು. ತಾಯಿ ಅಂದರು, 'ತಾಸು ಮಾಡಿಕೋಬ್ಯಾಡ. ನಾನು ನಿಮ್ಮತ್ತಿ ಎಲ್ಲಾ ದುಃಖ ಮರತು ಮುಂದ ಹರಿಯೋ ನೀರಿನ ಪ್ರವಾಹದ ಜೋಡಿ ಈಸಿ ಹೊರಟೇವಿ

ತಾಯಿ ಅತ್ತೆಯರು ಕಣ್ಣೆದುರು ದೃಢವಾಗಿ ನಿಂತರು. ಅವರು ಉರಿಯುತ್ತಿದ್ದಂತೆ ಕರಗುವ ಮೇಣದ ಗೊಂಬೆಯಲ್ಲ. ಕಲ್ಲಿನ ಪ್ರತಿಮೆ, ನೋವುಂಡು ಇನ್ನೂ ಕಲ್ಲಾಗಿದ್ದಾರೆ. ಕೈಯಲ್ಲಿದ್ದ ಮೊಸರವಲಕ್ಕಿ ಕಹಿಯೆನಿಸಿತ್ತು. ಆದರೆ ನಮ್ಮವರು ಆ ದಿನ ಆಡಿದ ಮಾತು ನೆನಪಾಯಿತು. 'ಮೊಸರವಲಕ್ಕಿ ತಿನ್ನಬೇಕು. ಅಜ್ಜಾಗ ಪ್ರೀತಿ, ಮೊಸರವಲಕ್ಕಿ ಪ್ರಸಾದ. ನನ್ನ ನೆನಪಿನ ಪುಟದಲ್ಲಿ ಅಚ್ಚಳಿಯದೇ ನಿಂತ ಮೊಸರವಲಕ್ಕಿ ಪ್ರಸಾದ!

**(ಕಜ್ಜಾಯ, ಪ್ರಿಯದರ್ಶಿನಿ ಪ್ರಕಾಶನ, ವಿಜಯನಗರ, ಬೆಂಗಳೂರು ೪೦, ೧೯೯೭)**

# ೮. ಸೀರೆಗಾಗಿ ಕಂಚೀಯಾತ್ರೆ

**- ವರದಾ ಶ್ರೀನಿವಾಸ್**

'ಸೀರೆ' ಎಂದರೆ 'ತಾರೆ' ಅನ್ನದ ನೀರೆಯರಿದ್ದಾರೆಯೇ? ಇಲ್ಲ, ಖಂಡಿತಾ ಇಲ್ಲ. ಎಳೆಯ ಹೆಣ್ಣು ಮಗುವಿನಿಂದ ತೊಡಗಿ ಅಜ್ಜಿಯರಿಗೂ ಸೀರೆಯ ಮೇಲೆ ಮೋಹವೇ. ನಿತ್ಯ ನಿಕ್ಕರ್-ಶರ್ಟ್, ಬರ್ಮುಡ-ಶರ್ಟ್, ಪ್ಯಾಂಟ್-ಶರ್ಟ್ ಹಾಕಿಕೊಂಡರೂ ಅಮ್ಮಂದಿರ ಸೀರೆಯನ್ನು ಸುತ್ತಿಕೊಂಡು ಜಾಹೀರಾತಿಗಾಗಿ ಭಂಗಿ ಕೊಡುವ ಮಾದರಿಯಲ್ಲಿ ಬಿಡಿಸಿದ ಸೆರಗನ್ನು ಅತ್ತಿಂದಿತ್ತ ವಾಲಾಡಿಸಿ, ಬೆಕ್ಕಿನ ನಡಿಗೆಯಲ್ಲಿ ಓಡಾಡದ ಹೆಣ್ಣುಮಕ್ಕಳೇ ಇಲ್ಲ.

ಹರೆಯದ ನೀರೆಯರಿಗೂ ಸಾಂಪ್ರದಾಯಿಕ ಸೀರೆಯೆಂದರೆ ಇಷ್ಟವೇ. ನೂಲಿನ ಸೀರೆಯಿಂದ ಆರಂಭಿಸಿ, ರೇಷ್ಮೆಯ ಸೀರೆಗಳ ಜಾಹೀರಾತಿಗಾಗಿ ಪ್ರದರ್ಶನ ನೀಡುವ ಈ ಸುಂದರ ತರುಣಿಯರ ಮೋಹಕ ಭಂಗಿಗಳನ್ನು ಮೆಚ್ಚದವರೇ ಇಲ್ಲ. ಸೀರೆಯ ಅಂಚು, ಸೆರಗು, ನೆರಿಗೆಗಳಿಗೆ ಆದ್ಯತೆ ನೀಡುವ ಸಂದರ್ಭದಲ್ಲಿ ಸೀರೆಯಿಂದ ನಾರಿ ಚಂದವೋ, ನಾರಿಯಿಂದ ಸೀರೆ ಚಂದವೋ ಎಂಬ ಭ್ರಮೆಯೂ ಉಂಟಾಗುತ್ತದೆ.

ಚೀರಂ-ಸೀರೆ-ಸಾರಿ-ಸಾಡಿ ಎಂದು ಬೇರೆ ಬೇರೆ ಭಾಷೆಯಲ್ಲಿ ಕರೆಯಲಾಗುವ ಈ ಸೀರೆಯ ಇತಿಹಾಸ ಇಂದು ನಿನ್ನೆಯದಲ್ಲ. ಈಗ ತಯಾರಾಗುವ ಬಟ್ಟೆಯ ಇತಿಹಾಸವೇ ಎಂಟು ಶತಮಾನಗಳಷ್ಟು ಹಿಂದಿನದು. ಇನ್ನು ಉಳಿದಂತೆ ಇದರ ಇತಿಹಾಸ ಎಂಟು ಸಾವಿರ ವರ್ಷಗಳಷ್ಟು ಪುರಾತನವಾದುದು.

ಈ ಸೀರೆಯ ಮೇಲಿನ ಆಸೆ ಬಹುಶಃ ಹೆಣ್ಣುಮಕ್ಕಳಿಗೆ ಜನ್ಮಜಾತವಾಗಿಯೇ ಬಂದಿದೆ. ದಿನನಿತ್ಯದ ಬಳಕೆಗೆ ನೂಲಿನ ಸೀರೆ, ಸಿಂಥೆಟಿಕ್ ಸೀರೆಗಳಿಗೇ ಆದ್ಯತೆ. ಅದರಲ್ಲೂ ಈಗ ಎಷ್ಟೊಂದು ವೈವಿಧ್ಯಮಯವಾದವುಗಳು ಬಂದಿವೆ. ದಿನದಿನಕ್ಕೂ ಫ್ಯಾಶನ್-ಡಿಸೈನ್ ಹೊಸದಾಗುತ್ತಿರುವ ಈ ಕಂಪ್ಯೂಟರ್-ಜೀನ್ಸ್ ಪ್ಯಾಂಟ್ ಯುಗದಲ್ಲೂ ಸೀರೆಗಳ ಬೇಡಿಕೆ ಕುಗ್ಗಿಲ್ಲ.

ಸೀರೆ ಬಗ್ಗೆ ವಿವರಣೆ ಏಕೆ ಅಂತೀರಾ? ಈಗ ಸಾಧಾರಣ ಸೀರೆಯಿಂದ ಕಂಚಿ ಸೀರೆಗೆ ಬರುತ್ತಿದ್ದೇನೆ. ಇದ್ದಕ್ಕಿದ್ದಂತೆ ನನ್ನ ಮಗಳ ಮದುವೆ ನಿಶ್ಚಿತವಾದಾಗ ರೇಷ್ಮೆ ಸೀರೆಗಳನ್ನು ತರಲು ಕಂಚಿಗೇ ಹೋಗಬೇಕೆಂದು ತೀರ್ಮಾನವಾಯಿತು.

ಸಾಮಾನ್ಯವಾಗಿ ಕಂಚಿ ಸೀರೆ ದುಬಾರಿಯೇ. ಬೆಂಗಳೂರಿನ ಮಾರುಕಟ್ಟೆಯ ದರಕ್ಕೂ ಕಂಚಿಯಲ್ಲಿ ದೊರೆಯುವ ದರಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಕಂಚಿಗೆ ಹೋಗಿ



ತಂದರೆ ಹಣವೂ ಉಳಿತಾಯ-ಕಂಚೀಯಾತ್ರೆಯ ಪುಣ್ಯವೂ ಲಭಿಸುತ್ತದೆ ಎಂದು ಈ ಹಿಂದೆ ಕಂಚೀ ಪ್ರಯಾಣ ಮಾಡಿದವರು ಸಲಹೆ ನೀಡಿದಾಗ ನಾನು ಸೀರೆಗಾಗಿ ಕಂಚೀ ಯಾತ್ರೆ ಮಾಡಿದೆ.

ಈ ಯಾತ್ರೆ ನನಗೊಂದು ಸ್ಮರಣೀಯ ಅನುಭವವಾಯಿತು. ನಾನು ಕಾಲೇಜು ದಿನಗಳಲ್ಲಿ ಬಾದಾಮಿ, ಪಟ್ಟದಕಲ್ಲು, ಐಹೊಳೆ, ಅಜಂತಾ, ಎಲ್ಲೋರ, ಮುಂಬಯಿ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ್ದೆ. ಆದರೆ ದಕ್ಷಿಣದ ಪ್ರಸಿದ್ಧ ಸ್ಥಳವಾದ ಕಂಚಿಯನ್ನು ನೋಡಲು ಅವಕಾಶವೇ ಆಗಿರಲಿಲ್ಲ. ಈ ಯಾತ್ರೆಗಾಗಿ ಒಂದು ಮ್ಯಾಕ್ಸಿ ಕ್ಯಾಬ್ ನಮಗಾಗಿ ಸಿದ್ಧವಾಗಿತ್ತು. ನಾವು, ಎಂದರೆ ನನ್ನ ಮಗಳು, ಇನ್ನೊಬ್ಬಳು ಮದುವೆಯ ಹೆಣ್ಣು, ಆಕೆಯ ತಂದೆ-ತಾಯಿ, ಸೀರೆ ಆಯ್ಕೆ ಮಾಡುವವರು, ಕಂಚಿಯಲ್ಲಿನ ಸೀರೆ ಅಂಗಡಿಗಳ ಪರಿಚಯ ಹೊಂದಿದ್ದವರು... ಹೀಗೆ ಹದಿನೈದು ಮಂದಿ ಈ ಯಾತ್ರೆಯಲ್ಲಿ ಪಾಲ್ಗೊಂಡೆವು. ಮುಂಜಾವ ಆರು ಗಂಟೆಗೆ ಹೊರಟ ನಾವು ಮಧ್ಯಾಹ್ನ ಒಂದೂವರೆಯ ಹೊತ್ತಿಗೆ ಕಂಚಿಯಲ್ಲಿದ್ದೆವು. ಎಲ್ಲರಲ್ಲೂ ಉತ್ಸಾಹ-ಸಂತೋಷ ಮಾತುಕತೆ, ಹರಟೆಯಲ್ಲಿ ಪ್ರಯಾಣ ಸಾಗಿದ್ದೇ ತಿಳಿಯಲಿಲ್ಲ. ನಾನು ಚಿಕ್ಕಮ್ಮನ ಬಳಿಯಲ್ಲೇ ಕುಳಿತಿದ್ದೆ. ಸೀರೆಗಳ ಬಗ್ಗೆ, ರೇಷ್ಮೆ ಸೀರೆಗಳ ಬಗ್ಗೆ ಅವರು ನನಗೆ ವಿವರಿಸುತ್ತಿದ್ದರು. ನಾನಾಗ ಉದ್ಯೋಗಸ್ಥ ಮಹಿಳೆಯಾಗಿದ್ದರೂ, ಗೃಹಿಣಿಯಾಗಿ ಅವರು ಅರಿತಷ್ಟು ಸೀರೆಗಳ ಮಾಹಿತಿ ನನಗೆ ತಿಳಿದಿರಲಿಲ್ಲ. ಅವರ ಸೀರೆಯ ಪರಿಜ್ಞಾನ ಕಂಡು ನನಗೆ ಅಚ್ಚರಿಯಾಗಿತ್ತು. ಸೀರೆಗಳ ವರ್ಣ ಸಾಮರಸ್ಯ, ಅಂಚುಸೆರಗುಳ್ಳ ಸಾಂಪ್ರದಾಯಿಕ ಸೀರೆಗಳ ಮಹತ್ವ ಒಡಲು-ಅಂಚುಗಳ ಬಣ್ಣಗಳ ಹೊಂದಾಣಿಕೆ, ಶುದ್ಧವಾದ ಚಿನ್ನದ ಜರಿ, ಬೆಳ್ಳಿಯ ಜರಿ, ಟೆಸ್ಟೆಟ್ ಜರಿಗಳು... ಮಾಸುವ ಕಡು ಬಣ್ಣಗಳ ಬಗ್ಗೆ, ಇಟ್ಟಲ್ಲೇ ಬಣ್ಣ ಕಳೆದುಕೊಳ್ಳುವ ನಸು ಬಣ್ಣಗಳ ಬಗ್ಗೆ, ರೇಷ್ಮೆ ಸೀರೆಗಳನ್ನು ಬಣ್ಣ ಹರಡದಂತೆ ಮನೆಯಲ್ಲೇ ಒಗೆಯುವ ಬಗೆ... ಹೀಗೆ ಅವರು ನೀಡಿದ ವಿವರಣೆಗೆ ನಾನು ಸುಸ್ತಾಗಿ ಹೋದೆ. ಕೇವಲ ಸೀರೆಗಳ ಬಗ್ಗೆ ಅಷ್ಟೇ ಅಲ್ಲ, ಅವರ ಇತರ ಜ್ಞಾನ-ಅನುಭವ ನೀಡಿದ ಪಕ್ವತೆಗೆ ತಲೆಬಾಗಿದೆ. ನೀವೊಬ್ಬರು ಅದ್ಭುತ ಮಹಿಳೆ' ಎಂದು ಅವರನ್ನು ಪ್ರೀತಿಯಿಂದ ಪ್ರಶಂಸಿಸಿದಾಗ ಅವರು ಬಾಯಿ ತುಂಬಾ ನಕ್ಕು ಬಿಟ್ಟರು. ಆಗ ನನಗೆ ನನ್ನ ಅಮ್ಮನ ನೆನಪಾಯಿತು.

ಕಂಚಿ ದೇವಸ್ಥಾನಗಳ ಊರು ಹೇಗೋ ಹಾಗೇ, ಸೀರೆಗಳ ಊರೂ ಹೌದು! ಕಂಚಿಯಲ್ಲಿ ಸಾವಿರ ದೇವಸ್ಥಾನಗಳಿವೆ. ಹಾಗೇ ಕಂಚಿ ಸೀರೆ ವ್ಯಾಪಾರ ಮಾಡುವ ಮಳಿಗೆಗಳೂ ಅಷ್ಟೇ ಇವೆ. ಒಂದು ಸಣ್ಣ ಕೊಠಡಿಯಂಥ

ಅಂಗಡಿಯಿಂದ ಆರಂಭವಾಗಿ ವಿಶಾಲವಾದ ಮಳಿಗೆಗಳಲ್ಲಿ ಕಂಚಿಸೀರೆ-ರೇಷ್ಮೆ ಸೀರೆಗಳ ವ್ಯಾಪಾರ ನಡೆಯುತ್ತದೆ. ಅಲ್ಲಿ ಸೀರೆ ಅಂಗಡಿಗಳು ನಮ್ಮ ಬೆಂಗಳೂರಿನ 'ಸ್ಯಾರಿ ಶಾಪ್'ಗಳಂತೆ ಹೊರಗೆ ಆಡಂಬರಯುತವಾಗಿ ಆಕರ್ಷಕವಾಗಿರುವುದಿಲ್ಲ. ಹೊರಗೆ ಸಾಧಾರಣವಾಗಿ ಕಾಣಿಸುವ ಸೀರೆ ಅಂಗಡಿಗಳು ಒಳಗೆ ವೈಭವ ಪೂರ್ಣವಾಗಿದ್ದು ಅಲ್ಲಿ ಸೀರೆಗಳೊ ಸೀರೆಗಳು.



ನಾವು ಒಂದು ಪ್ರಸಿದ್ಧ ಮಳಿಗೆಗೆ ಹೋದೆವು. ಅದು ಕಂಚಿಯ ಶೇಕ್‌ಪೇಟೆಯ ನಡುರಸ್ತೆಯಲ್ಲಿರುವ 'ಬಾಬುಷಾ ಅವರ ಮಳಿಗೆ', ಆಕಾಶದಲ್ಲಿ ತಾರಾಲೋಕ ಹೇಗೋ ಹಾಗೆ ಮಳಿಗೆ ಒಳಗೆ ಸಾರೀ ಲೋಕ, ಹೋಗುವ ಮೊದಲು ನನ್ನ ಚಿಕ್ಕಮ್ಮನ ಮೊಮ್ಮಗಳು ನನ್ನೊಡನೆ, “ಆಂಟಿ, ರೇಷ್ಮೆ ಸೀರೆಯ ಇತಿಹಾಸ ನಿಮಗೆ ಗೊತ್ತಾ? ಅದು ಸುಮಾರು ಎಷ್ಟು ವರ್ಷಗಳ ಹಿಂದೆ ಇತ್ತು?' ಎಂದು ನನ್ನ ಸೀರೆ ಮಾಹಿತಿಯ ಜ್ಞಾನಕ್ಕೆ ಸವಾಲೆಸೆದಳು. ಎಂದೋ ಓದಿದ ವಿಷಯ ಆವತ್ತು ಉಪಯೋಗಕ್ಕೆ ಬಂತು. ನಾನು ಹೇಳಿದೆ. 'ನನಗೆ ನೆನಪಿರುವಂತೆ ರೇಷ್ಮೆ ವಿಚಾರ ಕಂಡು ಹಿಡಿದದ್ದು ಮೊದಲು ಚೀನಾ ದೇಶ. ಕ್ರಿ.ಪೂ.೨೬೦೦ರ ಸುಮಾರಿನಲ್ಲಿ, ಚೀನಾ ದೇಶದ ರಾಣಿ ಸ್ನಾನ ಮಾಡುವಾಗ ರೇಷ್ಮೆಗೂಡೊಂದು ಅಕಸ್ಮಾತ್ ಬಿಸಿನೀರಿನಲ್ಲಿ ಬಿತ್ತಂತೆ. ಆಗ ಅದರಿಂದ ಸೂಕ್ಷ್ಮಾತಿಸೂಕ್ಷ್ಮವಾದ ಎಳೆಗಳು ಬೇರ್ಪಟ್ಟುವಂತೆ. ಆ ಎಳೆಗಳು ಬಲವಾಗಿದ್ದುದರಿಂದ ಇದರಿಂದ ಬಟ್ಟೆ ತಯಾರಿಸಬಹುದೆಂದು ಆಕೆಗೆ ಅನ್ನಿಸಿತಂತೆ. ಆಗ ಆಕೆ ಅಂಥ ರೇಷ್ಮೆ ಹುಳುಗಳನ್ನು ಬೆಳೆಸಬಹುದೆಂದುಕೊಂಡು, ಅದರ ಆಹಾರ ಹಿಪ್ಪನೇರಳೆ ಸೊಪ್ಪೆಂಬುದನ್ನು ತಿಳಿದುಕೊಂಡು, ರೇಷ್ಮೆಗೂಡನ್ನು ತಯಾರಿಸುವ ವಿಧಾನವನ್ನು ಕಂಡುಕೊಳಂಡಳಂತೆ. ರೇಷ್ಮೆ ಬಟ್ಟೆ ಅಂದಿನಿಂದ ಆರಂಭವಾಯಿತಂತೆ. ಚೀನಾದಲ್ಲಿ ನಂತರದ ಸಾವಿರ ವರ್ಷಗಳಲ್ಲಿ ರೇಷ್ಮೆ ವ್ಯವಸಾಯ ಬಹಳ ಚೆನ್ನಾಗಿ ನಡೆಯತೊಡಗಿತು. ಕಪ್ಪಕಾಣಿಕೆ ಕೊಡುವ ಸಂದರ್ಭಗಳಲ್ಲಿ, ಇತರ ಮಹತ್ವದ ಸಂದರ್ಭಗಳಲ್ಲಿ ಅದನ್ನು ಬಳಸಲಾಗುತ್ತಿತ್ತು ಎಂಬುದು ಅದರ ಇತಿಹಾಸ' ಎಂದು ನಾನು ನನ್ನ ಭಾಷಣ ಮುಗಿಸಿದೆ.

ಕೇಳಿಸಿಕೊಂಡ ಉಳಿದವರು ಅಷ್ಟು ಹಿಂದೆ ರೇಷ್ಮೆಯ ಬಳಕೆ ಇತ್ತೇ? ಎಂದು ಆಶ್ಚರ್ಯದಿಂದ ಉದ್ಧರಿಸಿದರು. ಮುಂದುವರೆದು ನಾನು ತಿಳಿಸಿದೆ. 'ಶತಮಾನಗಳ ಹಿಂದೆಯೇ ಬೆಂಕಿ ಪೊಟ್ಟಣಗಳಲ್ಲಿ ಇಡಬಹುದಾದಷ್ಟು ತೆಳು ರೇಷ್ಮೆ ಸೀರೆಯನ್ನು ಭಾರತದಲ್ಲಿ ನೇಯುತ್ತಿದ್ದರು. ನಮ್ಮ ದೇಶದ ಈ ನಾಜೂಕು ಕೌಶಲ್ಯ ಇತರ ರಾಷ್ಟ್ರಗಳ ವ್ಯಾಪಾರಿಗಳನ್ನು ಆಕರ್ಷಿಸಿದ್ದು ಇತಿಹಾಸದ ವಿಷಯ. ನಿನಗೆ ಗೊತ್ತಿರಬೇಕಲ್ಲ?' ಎಂದು ನಾನು ನನ್ನನ್ನು ಪ್ರಶ್ನಿಸಿದ ಹುಡುಗಿಯನ್ನು ಕೇಳಿದೆ. 'ಗೊತ್ತು ಆಂಟಿ' ಎಂದಳು ಅವಳು.

ಆಗ ನಾನು, 'ಈಗ, ಈ ಇತಿಹಾಸದ ಮರುಸೃಷ್ಟಿ ಆಗಿರುವುದು ನಿನಗೆ ಗೊತ್ತಿದೆಯೇ?' ಎಂದು ಇತಿಹಾಸ ಓದುತ್ತಿರುವ ಅವಳಿಗೆ ಸವಾಲೆಸೆದಾಗ 'ಸಾರಿ ಆಂಟಿ ನನಗೆ ಗೊತ್ತಿಲ್ಲ, ನೀವೇ ತಿಳಿಸಿ' ಎಂದಾಗ, 'ಸುಂಕದ ನೇಕಾರ ನಾರಾಯಣಪ್ಪ ಎಂಬುವವರು ತಮ್ಮ ಮನೆಯ ಅಟ್ಟದಲ್ಲಿದ್ದ ೧೫೦ ವರ್ಷಗಳ ಹಳೆಯ ಲಾಳಿ ಹಿಡಿದು ಐದು ತಿಂಗಳು ತಪಸ್ಸಿನಂತೆ ಬೆಂಕಿ ಪೊಟ್ಟಣದೊಳಗೆ ಮಡಿಸಿಡಬಹುದಾದಷ್ಟು ತೆಳುವಾದ ರೇಷ್ಮೆ ಸೀರೆಯನ್ನು ನೇಯ್ದರು. ಅವರ ೩೦ ವರ್ಷಗಳ ಅನುಭವ, ಅವರ ಮನೆಯವರ ಸಹಕಾರಗಳಿಂದ ೬.೫ ಮೀಟರ್ ಉದ್ದ, ೧ ಮೀಟರ್ ಅಗಲದ ೩೦ ಗ್ರಾಂ ತೂಕದ ಸೀರೆಯನ್ನು ಬೆಂಕಿಪೊಟ್ಟಣದಲ್ಲಿ ತುಂಬಿ ಧನ್ಯರಾದರು. ಈ ಸಹಸ್ರಮಾನಕ್ಕೆ



ಅವರ ಕೊಡುಗೆ ಹೇಗಿದೆ?' ಎಂದೆ. ಈ ವಿಷಯ ಕೇಳಿದವರೆಲ್ಲರೂ ಆಶ್ಚರ್ಯದಿಂದ ಕಣ್‌ಕಣ್ ಬಿಟ್ಟರು.

ಆಗ ಚಿಕ್ಕಮ್ಮ, 'ರೇಷ್ಮೆ ಸೀರೆಯ ವಿಷಯ ಕೇಳಿರೋ? ರೇಷ್ಮೆ ಸೀರೆ ಆರಿಸೋಕೆ ಒಳಗೆ ಹೋಗ್ತಿರೋ? ಸೀರೆ ಆರಿಸುತ್ತ ಕುಳಿತ್ರೆ ಸಮಯ ಜಾರುವುದೇ ಗೊತ್ತಾಗಲ್ಲ! ಆಮೇಲೆ ದೇವಸ್ಥಾನಗಳನ್ನು ಎಲ್ಲವನ್ನೂ ನೋಡೋಕಾಗಲ್ಲ. ಮುಖ್ಯವಾದವುಗಳನ್ನಾದ್ರೂ ನೋಡೋಕಲ್ಲ?' ಎಂದು ಮಧ್ಯ ಪ್ರವೇಶ ಮಾಡಿದಾಗ ನಾವೆಲ್ಲ ಮಳಿಗೆ ಪ್ರವೇಶ ಮಾಡಿದೆವು.

ಮಳಿಗೆಯ ಒಳಗಿನ ಹಾಲ್ ವಿಶಾಲವಾಗಿತ್ತು. ನೂರಕ್ಕೂ ಹೆಚ್ಚಿನ ಮಹಿಳೆಯರು ಅಲ್ಲಿದ್ದರು. ಪುರುಷರ ಸಂಖ್ಯೆ ಕಡಿಮೆ ಇತ್ತು. ಬೇರೆ ಬೇರೆ ರಾಜ್ಯಗಳಿಂದ (ಅವರನ್ನು ನೋಡುತ್ತ ನಾನು ಊಹಿಸಿದ್ದು, ತರುವಾಯ ನಿಜವಾಯಿತು) ಬಂದ ಮಹಿಳೆಯರು, ಒಂದೊಂದು ಗುಂಪುಗಳಾಗಿ ವೃತ್ತಾಕಾರವಾಗಿ ಕುಳಿತು ಸೀರೆಗಳನ್ನು ನೋಡುತ್ತಿದ್ದರು. ಅಂಥ ಒಂದು ಗುಂಪಲ್ಲಿ ಎಂಟು, ಹತ್ತು ಮಹಿಳೆಯರು, ಇಬ್ಬರು ಮೂವರು ಪುರುಷರು ಇದ್ದರು. ಮಳಿಗೆಯ ಸಿಬ್ಬಂದಿಯವರು ಅವರು ಕೇಳಿದ ತೋರಿಸಿದ, ಸೀರೆಗಳನ್ನು ಅವರ ಮುಂದೆ ಇರಿಸುತ್ತಿದ್ದರು. ಹಗಲು ಹೊತ್ತಿನಲ್ಲೂ ಒಳಗೆ ಮರ್ಕ್ಯುರಿ ದೀಪದ ಪ್ರಶಾಂತ ಬೆಳಕು! ಒಂದೆಡೆ ಕಣ್ಣು ಕೋರೈಸುವ ಬಣ್ಣಗಳು, ಮಧ್ಯೆ ಕಡು ಬಣ್ಣಗಳು, ನಸು ಬಣ್ಣಗಳು... ಸಾವಿರಾರು ಛಾಯೆಯ ಬಣ್ಣಗಳು ಸೀರೆಯ ಒಡಲು-ಅಂಚು- ಸೆರಗುಗಳನ್ನು ಆವರಿಸಿದ್ದು, ಜರಿಯಂಚು-ಸೆರಗಿನ ಜರಿಯ ಹೊಳಪು... ಎಲ್ಲ ಕಿನ್ನರ ಲೋಕದಲ್ಲಿದ್ದಂತೆ ನನಗೆ ಭಾಸವಾಗುತ್ತಿತ್ತು. 'ಆ ದೃಶ್ಯ ನೋಡಲು ನೂರು ಕಣ್ಣು ಸಾಲವು' ಎಂದೆನಿಸಿತು ನನಗೆ.

ನಾವು ಕುಳಿತ ಹಾಲ್‌ನ ಮೂರೂ ಕಡೆಯ ಗೋಡೆಗಳ ತುಂಬಾ ಶೆಲ್ಫ್‌ಗಳು. ಅದರಲ್ಲಿ ಸಾಲುಸಾಲಾಗಿ ಜೋಡಿಸಿಟ್ಟ ಮಡಿಸಿದ ಸೀರೆಗಳು, ಕಂಚಿಯ ರೇಷ್ಮೆಯ ಸೀರೆಗಳಲ್ಲಿ ಕಡಿಮೆ ಬೆಲೆಯವು ಎಂದರೆ ಒಂದೂ ಮುಕ್ಕಾಲು ಸಾವಿರದವು. ಅತಿ ವೆಚ್ಚದವು ಅಂದರೆ ಟಿಬ್ಯೂ, ಬೊಕೆಡ್ ಮಾದರಿಯವು. ಈ ಸೀರೆಗಳ ಒಡಲು ಪೂರ್ಣ ಜರಿ ಆವರಿಸಿತ್ತು. ಅಂಚು ಸೆರಗುಗಳಲ್ಲೂ ಜರಿ ಹೆವಿ ಆಗಿತ್ತು. ಇಂಥ ಸೀರೆಗಳ ಬೆಲೆ ಐವತ್ತು ಸಾವಿರ ಅಂತ ಹೇಳಿದಾಗ ನಾನು, 'ಬಡವರ ಮದುವೆಯ ವೆಚ್ಚ' ಅಂದುಕೊಂಡೆ. ಅಷ್ಟೊಂದು ದುಬಾರಿ ಏಕೆಂದು ಕೇಳಿದ್ದಕ್ಕೆ ಅವರು, 'ಇದು ಪ್ಯೂರ್ ಜರಿ, ಅಂದರೆ ಶುದ್ಧ ಚಿನ್ನದ್ದು. ಟೆಸ್ಟೆಡ್ ಚಿನ್ನದ್ದಲ್ಲ. ಶುದ್ಧ ಜರಿಯ ಹೊಳಪು ಬಹಳ ಕಾಲದವರೆಗೆ ಇರುತ್ತದೆ. ಟೆಸ್ಟೆಡ್ ಜರಿಯ ಹೊಳಪು ತಾತ್ಕಾಲಿಕ' ಎಂಬ ಉತ್ತರ ನೀಡಿದರು.

ಅಲ್ಲದೆ, 'ಎರಡು ಕನಸು ಚಲನಚಿತ್ರದಲ್ಲಿನ ನಾಯಕಿಯರು ಕಂಚಿ ರೇಷ್ಮೆ ಸೀರೆಗಳನ್ನು ಉಟ್ಟು ಹಾಡಿರುವುದನ್ನು ನೀವು ಗಮನಿಸಲಿಲ್ಲವೇ? ಈ ಇಪ್ಪತ್ತೈದು ವರ್ಷಗಳಿಂದ ಕಂಚಿ ಸೀರೆ ಕ್ರೇಜ್ ಜಾಸ್ತಿ ಆಗಿದೆ. ಆಗೆಲ್ಲ ಬಿನ್ನಿ ರೇಷ್ಮೆ, ಮೈಸೂರು



ರೇಷ್ಮೆ ಎಂದು ಮುಗಿ ಬೀಳುತ್ತಿದ್ದ ಮಹಿಳೆಯರು ಈಗ ಕಂಚಿ ರೇಷ್ಮೆ ಸೀರೆಗೆ ಮುಗಿ ಬೀಳುತ್ತಿದ್ದಾರೆ. ನಮ್ಮ ಮಳಿಗೆಯ ಸೀರೆಗಳ ಗುಣಮಟ್ಟದ ಬಗ್ಗೆ ಎರಡು ಮಾತಿಲ್ಲ' ಎಂದು ಹೆಮ್ಮೆಯಿಂದ ನುಡಿದರು.

ನಾವು ಹದಿನೈದು ಮಂದಿಯೂ ವೃತ್ತಾಕಾರವಾಗಿ ಕುಳಿತೆವು. ಮಧ್ಯದಲ್ಲಿ ಚಿಕ್ಕಮ್ಮ ಕುಳಿತರು. ಉಭಯ ಕಡೆಯವರೂ ಆರಿಸಿದ ಸೀರೆಯ ಅಂತಿಮ ಅನುಮತಿಗೆ ಆದೇಶಿಸುವ ನಿರ್ದೇಶಕರಂತೆ!

ನಾನು ಒಮ್ಮೆ ಇಡೀ ಹಾಲ್ ಕಡೆ ಕಣ್ಣು ಹಾಯಿಸಿದೆ. ಎಲ್ಲರ ಕೈಯಲ್ಲೂ ಒಂದೆರಡಲ್ಲ ಹಲವಾರು ಸೀರೆಗಳು. ಅವೂ ಬಿಡಿಸಿದ ಸೀರೆಗಳು. ಏಕಾಗ್ರ ಚಿತ್ತದಿಂದ ಪರೀಕ್ಷೆಗೆ ಉತ್ತರಿಸುವ ವಿದ್ಯಾರ್ಥಿಗಳಂತೆ ಎಲ್ಲರ ಮನಸ್ಸು ಸೀರೆ ಆಯ್ಕೆಯೆಡೆಗೆ ವಾಲಿತ್ತು. ನನಗೆ ಒಮ್ಮೆ 'ಅಬ್ಬಾ ಇದೇನು ಮೋಹ ಈ ಸೀರೆ ಬಗ್ಗೆ' ಎಂದೆನಿಸಿದರೆ, ಮತ್ತೊಮ್ಮೆ, 'ನೀರೆ ಮರುಳೋ ಸೀರೆ ಮರುಳೋ' ಎಂದೆನಿಸಿತು, 'ಸೀರೆಯೊಳಗೆ ನೀರೆಯೋ, ನೀರೆಯೊಳಗೆ ಸೀರೆಯೋ ಎಂದೆನಿಸಿತು ಮಗದೊಮ್ಮೆ.

ನಾನು ಮಗಳೊಡನೆ ಹೇಳಿದೆ, 'ನೀನೇ ಆಯ್ಕೆ ಮಾಡು. ನೀನು ಹೇಳಿದ್ದು ನನಗೆ ಒಪ್ಪಿಗೆ'. ನನಗಾಲೇ ತಲೆನೋವು ಆರಂಭ ಆಗಿತ್ತು. ಸೀರೆ ಆಯ್ಕೆಯ ಬದಲು ನನ್ನ ಮನಸ್ಸು ಆಲೋಚಿಸಿದ್ದು ಕಂಚಿಯಲ್ಲಿ ಯಾರ ಕಾಲದಿಂದ ಈ ರೇಷ್ಮೆ ಸೀರೆ ಪ್ರಚಲಿತವಿತ್ತು ಎಂಬುದಾಗಿ

ಮುಹೂರ್ತದ ಸೀರೆಗಾಗಿ ಕೆನೆ ಬಣ್ಣದ ಸೀರೆಯನ್ನು ಮಗಳು ಆಯ್ಕೆ ಮಾಡಿದ್ದಳು. ಅದರ ಸೆರಗು ಮೆರೂನ್ ಬಣ್ಣದ್ದು. ಮೂರಿಂಚು ಅಗಲದ ಅಂಚು-ಜರಿಯಂಚು. ತುಂಬ ಸುಂದರವಾದ ಸೀರೆ! ಅವಳಿಗಾಗಿ ಇನ್ನೆರಡು ಸೀರೆ ಆಯ್ಕೆ ಮಾಡಿದ ನಂತರ ಹತ್ತಿರದ ಸಂಬಂಧಿಕರಿಗೆಂದು ಒಂದೊಂದು ರೀತಿಯ ದರದಲ್ಲಿ ನಮಗೆ ಬೇಕಾದ ಸಂಖ್ಯೆಯ ಸೀರೆಗಳನ್ನು ಕೇವಲ ಅರ್ಧ ಗಂಟೆಯಲ್ಲಿ ಮಗಳು ಆಯ್ಕೆ ಮಾಡಿ ನನ್ನೆದುರು ಜೋಡಿಸಿದಳು. ಎಲ್ಲ ಹೊಸ ಮಾದರಿಯ ಸೀರೆಗಳು. ಎಲ್ಲವೂ ನೋಡಲು ಹೊಸಹೊಸ ನಸು ಬಣ್ಣದವುಗಳಾಗಿದ್ದರೂ, ಬ್ರೈಟ್ ಆಗಿ ಕಾಣುತ್ತಿದ್ದವು. ನನಗೊಂದು ಸೀರೆಯನ್ನು ಆರಿಸಿ, ಅದನ್ನು ನನ್ನೆಡೆಗೆ ಸಾಗಿಸಿದರು ನಮ್ಮ ಚಿಕ್ಕಮ್ಮ. ಹೊಸ ಡಿಸೈನ್ ಹಾಗೂ ಹೊಸ ವರ್ಣ ಸಾಮರಸ್ಯದ ರೇಷ್ಮೆ ಸೀರೆ. ನನಗೆ ಮೊದಲ ನೋಟಕ್ಕೇ ಇಷ್ಟವಾಯಿತು. ನಮ್ಮ  ಸೀರೆಯ ಆಯ್ಕೆ ಮುಗಿದು ಬಿಲ್ ಹಾಕುವಷ್ಟರಲ್ಲಿ ಹತ್ತಿರ ಹತ್ತಿರ ಒಂದು ಗಂಟೆಯೇ ಆಯಿತು.

ನಮ್ಮ ಜೊತೆಯಲ್ಲಿ ಬಂದ ಇನ್ನೊಂದು ಗುಂಪಿನವರ ಆಯ್ಕೆ ಇನ್ನೂ ಮುಗಿದಿರಲಿಲ್ಲ. ನಾನು ಸೇಲ್ಸ್ ಹುಡುಗರನ್ನು ವಿಚಾರಿಸಿದೆ, 'ಕಂಚಿಯ ರೇಷ್ಮೆ ಸೀರೆಗೆ ಹೆಚ್ಚಿನ ಬೇಡಿಕೆ ಎಲ್ಲಿಂದ?' ಎಂದು. ಆತ, 'ಬೆಂಗಳೂರು' ಎಂದ. 'ತರುವಾಯ ದೇಶದ ಪ್ರಮುಖ ನಗರಗಳಾದ ದೆಹಲಿ, ಹೈದರಾಬಾದ್, ಮುಂಬಯಿ, ಕಲ್ಕತ್ತಾಗಳಿಂದಲೂ



ಬೇಡಿಕೆ ಇದೆ. ಕಂಚಿ ಸೀರೆಗಳೆಂದರೆ ಮುಗಿ ಬೀಳುವವರು ಬೆಂಗಳೂರು ನಗರದವರೇ ಹೆಚ್ಚು' ಎಂದ. ಮದುವೆ ಸಂದರ್ಭಗಳಲ್ಲಿ ಮಾತ್ರ ರೇಷ್ಮೆ ಸೀರೆ ಮಾರಾಟವೇ? ಎಂದು ಕೇಳಿದ ನನ್ನ ಪ್ರಶ್ನೆಗೆ ಅವರು, 'ಕಂಚಿಯ ಹೆಚ್ಚಿನ ರೇಷ್ಮೆ ಸೀರೆ ಮಳಿಗೆಗಳಲ್ಲಿ ವರುಷದ ಮುನ್ನೂರ ಅರುವತ್ತೈದು ದಿನವೂ ದೇಶದ ಎಲ್ಲೆಡೆಯಿಂದಲೂ ಸೀರೆ ಕೊಳ್ಳಲು ಬರುವವರ ಸಂಖ್ಯೆ ದಿನದಿನವೂ ಹೆಚ್ಚುತ್ತಲೇ ಇದೆ. ಕಂಚಿಯ ರೇಷ್ಮೆ ಸೀರೆ ಬಾಳಿಕೆ ಜಾಸ್ತಿ. ಅದರ ಹೊಳಪು ಮತ್ತು ವರ್ಣ ಸಾಂಗತ್ಯ ಬಹಳ ಪ್ರಸಿದ್ಧವಾದುದು' ಎಂದು ಸೇಲ್ಸ್‌ಮೆನ್ ತಿಳಿಸಿದಾಗ, 'ಕಂಚಿ ಸೀರೆಯೇ ಇದೆನು ನಿನ್ನ ಮಾಯೆ? ಎತ್ತಣ ದೆಹಲಿ, ಎತ್ತಣ ಮುಂಬಯಿ, ಎತ್ತಣ ಬೆಂಗಳೂರು, ಎತ್ತಣ ಕಂಚಿ? ಎತ್ತಣಿಂದೆತ್ತ ಸಂಬಂಧ?! ಸೀರೆಯ ಸಂಬಂಧ ಎಲ್ಲರನ್ನೂ ಹೇಗೇಗೋ ಬೆಸೆದು ಎಳೆದುಕೊಂಡು ಬರುತ್ತಿದೆಯಲ್ಲ' ಎಂದು ಮನಸ್ಸಲ್ಲೇ ಗೊಣಗುವಾಗ, ಇನ್ನೊಂದು ಗುಂಪು ಮಳಿಗೆ ಪ್ರವೇಶ ಮಾಡಿತು. ಅದರಲ್ಲಿ ವಿದೇಶೀಯರೂ ಇದ್ದರು. ಅಮೆರಿಕದಲ್ಲಿ

ನೆಲೆಸಿರುವ ಒಂದು ಕುಟುಂಬ, ತಮ್ಮ ವಿದೇಶೀ ಮಿತ್ರರೊಡನೆ ಅಲ್ಲಿಗೆ ಆಗಮಿಸಿತ್ತು ಸೀರೆ ಖರೀದಿಸಲು! ಅವರ ಮಗಳ ಮದುವೆಯಂತೆ! ಅಮೇರಿಕದಲ್ಲಿರುವ ಆಕೆಗೆ ಕಂಚಿ ಸೀರೆಯೇ ಬೇಕಂತೆ ಎಂದು ನಾನು ಅವರನ್ನು ವಿಚಾರಿಸಿದಾಗ ತಿಳಿಯಿತು!

ಮೂರು ಗಂಟೆಯ ಹೊತ್ತಿಗೆ ಮಳಿಗೆ ಪ್ರವೇಶಿಸಿದ ನಾವು ಹೊರ ಬರುವಾಗ ಆರು ಗಂಟೆ ಆಗಿತ್ತು. ನಮ್ಮ ಗುಂಪಿನ ಸೀರೆಗಳ ಆಯ್ಕೆ ಬೇಗನೆ ಮುಗಿದಿತ್ತು. ನಮ್ಮ ಜೊತೆಯಲ್ಲಿ ಬಂದವರಿಗೆ ಸೀರೆ ಆಯ್ಕೆ ಮಾಡಲು ನಾವು ನೆರವಾದೆವು. ಅವರ ಆಯ್ಕೆಯೂ ನಿಧಾನ. ಆರಿಸಿದ ಸೀರೆಗಳ ಬಗೆಗೂ ಸಹಮತವಿರಲಿಲ್ಲ. 'ಅಂಚು ಸೆರಗು ಚೆನ್ನಾಗಿದ್ದರೆ ಒಡಲು ಚೆನ್ನಾಗಿಲ್ಲ. ಎಲ್ಲ ಸರಿ, ಎಂದರೆ ಬಣ್ಣ ಚೆನ್ನಿಲ್ಲ... ಹೀಗೆ ಒಂದಲ್ಲ ಒಂದು ಟೀಕೆ, ಆರೋಪಗಳಿಂದ ಸಮಯ ಅರಿವಿಲ್ಲದೆ ಜಾರತೊಡಗಿದಾಗ ನಾನು, 'ಯಾರೂ ತಪ್ಪು ತಿಳಿಯದಿದ್ದರೆ ನನ್ನದೊಂದು ಸಲಹೆ' ಎಂದೆ. 'ಏನು?' ಎಂದು ಎಲ್ಲರೂ ಕೇಳಿದಾಗ ನಾನು ತಿಳಿಸಿದೆ. 'ಸಾವಿರಾರು ಸೀರೆಗಳ ಮಧ್ಯೆ ಹಾಗನ್ನಿಸುವುದು ಸಹಜ. ಅಂಗಡಿಯಿಂದ ಹೊರಬಂದು ಆಯ್ಕೆ ಮಾಡಿದ ಸೀರೆಗಳನ್ನು ಗಮನಿಸಿದರೆ ನಿಮ್ಮ ಆಯ್ಕೆ ಶ್ರೇಷ್ಠವೇ ಹೊರತು ಕನಿಷ್ಠ ಅಲ್ಲ ಅಂತ ನಿಮಗೇ ಅನ್ನಿಸುತ್ತದೆ. ಅಷ್ಟೇ ಅಲ್ಲದೆ, ಊರಿಗೆ ಹೋಗಿ ನೋಡಿದರೆ ಒಂದಕ್ಕಿಂತ ಒಂದು ಚೆನ್ನ ಅಂತಲೂ ಅನ್ನಿಸುತ್ತೆ. ಇನ್ನೂ ಆಯ್ಕೆ ಮಾಡುತ್ತಲೇ ಇದ್ದರೆ ಸಮಯ ಕಳೆಯುತ್ತದೆ, ಆಯ್ಕೆ ಮುಂದುವರೆಯುತ್ತಲೇ ಇರುತ್ತದೆ. ಇನ್ನೂ ದೇವಸ್ಥಾನಗಳನ್ನು ನೋಡುವ ಕಾರ್ಯಕ್ರಮವಿದೆಯಲ್ಲ?' ಎಂದೆ. ಉಳಿದವರು ನನ್ನ ಮಾತನ್ನು ಗಂಭೀರವಾಗಿ ಪರಿಗಣಿಸಿ, ಚುರುಕಾಗಿ ಆಯ್ಕೆ ಕಾರ್ಯ ಮುಗಿಸಿದರು. ಅವರು ಬಿಲ್ ಹಾಕುವಷ್ಟರಲ್ಲಿ ನಮ್ಮ ಗುಂಪಿನವರು ಹೊರಗೆ ಬಂದು, ಅಕ್ಕಪಕ್ಕದ ಸೀರೆ ಮಳಿಗೆಗಳಿಗೆ ನುಗ್ಗಿ, 'ಸುಮ್ಮನೆ ಸೀರೆ ನೋಡಿ' ಬಂದೆವು.

ಒಂದು ಮಳಿಗೆಯ ವೃದ್ಧರನ್ನು ಕಂಚಿಯ ರೇಷ್ಮೆ ಸೀರೆಯ ಪ್ರಖ್ಯಾತಿ ಹಾಗೂ



ಬಳಕೆ ಬಗ್ಗೆ ವಿಚಾರಿಸಿದಾಗ, 'ಮುನ್ನೂರು ವರ್ಷಗಳಿಂದ ಕಂಚಿ ರೇಷ್ಮೆ ಸೀರೆ ಪ್ರಸಿದ್ಧವಾಗಿದೆ. ರಾಜವಂಶಗಳಲ್ಲಿ ಇಂಥ ಸೀರೆಗಳ ಬಳಕೆ ಹೆಚ್ಚಾಗಿ ಇತ್ತು. ಈಗ ಶ್ರೀಮಂತರು ಬಡವರೆನ್ನದೆ ಕಂಚಿ ಸೀರೆ ಬಯಸುತ್ತಾರೆ. ಬಡವರು ಕಂತು ಮೂಲಕ ಸೀರೆ ಖರೀದಿಸಿ ತಮ್ಮಾಸೆ ಪೂರೈಸಿಕೊಳ್ಳುತ್ತಾರೆ' ಎಂದು ವಿವರ ನೀಡಿದರು.

ಆಗ ನನಗೆ ನೆನಪಾಯಿತು, ಬೆಂಗಳೂರಲ್ಲಿ ರೇಷ್ಮೆ ಇಲಾಖೆಯ ಅಧಿಕಾರಿಯೊಬ್ಬರ ಭೇಟಿ ಆದಾಗ ಅವರು ಹೇಳಿದ ಕೆಲವು ಸಂಗತಿಗಳು. 'ಕರ್ನಾಟಕದಲ್ಲಿ ರಾಜವಂಶಗಳು ಮತ್ತು ತುಂಬಾ ಶ್ರೀಮಂತರು ಮಾತ್ರ ರೇಷ್ಮೆ

ಸೀರೆಗಳನ್ನು ಬಳಸುತ್ತಿದ್ದರಂತೆ. ಅದನ್ನು "ಮೈಸೂರು ರೇಷ್ಮೆ" ಎಂದು ಕರೆಯುತ್ತಿದ್ದರು. ಶತಮಾನಗಳಷ್ಟು ಹಿಂದೆಯೇ ಕರ್ನಾಟಕದಲ್ಲಿ ರೇಷ್ಮೆಯ ಬಳಕೆ ಆಗಿದೆ. ರೇಷ್ಮೆ ಕೈಗಾರಿಕೆಯನ್ನು ಕ್ರಮಬದ್ಧವಾಗಿ ಕರ್ನಾಟಕದಲ್ಲಿ ಪ್ರಾರಂಭಿಸಿದವರು ಹೈದರಾಲಿ ಮತ್ತು ಟಿಪ್ಪು ಸುಲ್ತಾನ್, ನಂತರ ಇದರ ಬಳಕೆ ಇಳಿಮುಖವಾಯಿತಂತೆ. ತರುವಾಯ ಮೈಸೂರು ಸಂಸ್ಥಾನದ ದಿವಾನ ಸರ್.ಎಂ.ವಿಶ್ವೇಶ್ವರಯ್ಯನವರ ಪ್ರಯತ್ನದಿಂದಾಗಿ ೧೯೧೧ರಲ್ಲಿ ರೇಷ್ಮೆ ಕೃಷಿ ಇಲಾಖೆ ಆರಂಭವಾಯಿತು. ಅಲ್ಲದೆ, ಭಾರತದ ಒಟ್ಟು ರೇಷ್ಮೆಯಲ್ಲಿ ೮೦.೭ರಷ್ಟು ರೇಷ್ಮೆಯನ್ನು ಕರ್ನಾಟಕ ರಾಜ್ಯ ಪೂರೈಸುತ್ತದೆ' ಎಂದು ಹೇಳಿದ ವಿವರವನ್ನು ಅಲ್ಲಿಯ ವೃದ್ಧರಿಗೆ ತಿಳಿಸಿದಾಗ, ಅವರು ನನ್ನ ನೆನಪಿನ ಶಕ್ತಿಗೆ ಶಹಭಾಸ್ ಗಿರಿ ನೀಡಿದರು.

ಆರೂವರೆಯ ಹೊತ್ತಿಗೆ ನಾವು ಕಂಚಿಯ ದೇವಸ್ಥಾನಗಳನ್ನು ನೋಡಲು ಹೊರಟೆವು. ಕಂಚಿಯಲ್ಲೇ ೨೦೦ ದೇವಸ್ಥಾನಗಳಿವೆ. ಕಂಚಿಯ ಸುತ್ತಮುತ್ತ ನೂರಕ್ಕೂ ಮಿಕ್ಕ ದೇವಸ್ಥಾನಗಳಿವೆ. ಕಂಚಿಯ ಪ್ರಸಿದ್ಧ ಮಠವಾದ 'ಕಾಮಕೋಟಿ ಪೀಠ' ಇರುವುದು ಇಲ್ಲೇ.

ನಾವು ಮೊದಲು ಕಾಮಾಕ್ಷಿ ದೇವಸ್ಥಾನಕ್ಕೆ ಹೋದೆವು. ಅದು ೧೪ನೇ ಶತಮಾನದಲ್ಲಿ ಚೋಳರ ಕಾಲದಲ್ಲಿ ಕಟ್ಟಿದ ದೇವಸ್ಥಾನ. 'ಕಾಮಾಕ್ಷಿ' ಎಂಬುದು ಪಾರ್ವತಿಯ ಹೆಸರು. ಅದಕ್ಕೆ ಅಲ್ಲಿ ಒಂದು ದಂತ ಕಥೆಯಿದೆ. 'ಗೌರಿ ಶಂಕರರು ಪಗಡೆ ಆಡಲು ಆರಂಭಿಸಿದ್ದರಂತೆ. ಇಬ್ಬರಲ್ಲಿ ಜಗಳ ಆರಂಭವಾಯಿತಂತೆ. ಗೌರಿಯಿಂದ ನಿಂದಿತನಾದ ಶಿವ ಗೌರಿಗೆ ಕುರೂಪಿಯಾಗಲು ಶಾಪವಿತ್ತನಂತೆ. ಒಂಟಿ ಮಾವಿನ ಮರದ ಕೆಳಗೆ ಕುಳಿತು ಕುರೂಪಿಗೌರಿ ಶಿವನ ಆರಾಧನೆ ಮಾಡಿದಳಂತೆ, ಕೊನೆಗೆ ವಿಷ್ಣುವಿನ ಅನುಗ್ರಹದಿಂದ ರೂಪವತಿ ಆಗಿ ಅಲ್ಲಿ ನೆಲೆಸಿದಳಂತೆ'.

ಅದಕ್ಕೆ ಸಾಕ್ಷಿ ಎಂಬಂತೆ ಈಗಲೂ ಒಂದು ದೊಡ್ಡ ಮಾವಿನ ಮರ ಅಲ್ಲಿದೆ. ಅದರ ಬಳಿಯಲ್ಲಿ ಮಾವಿನ ಮರದ ಬೃಹತ್ ಗಾತ್ರದ ಕಾಂಡ ಇದೆ. ಅದು ಸಾವಿರದ ಐನೂರು ವರ್ಷಗಳ ಹಿಂದಿನದು ಎಂಬುದು ಅಲ್ಲಿಯವರ ಹೇಳಿಕೆ.

ತರುವಾಯ ನಾವು ಶಿವಕಂಚಿ, ವಿಷ್ಣುಕಂಚಿಗಳನ್ನು ನೋಡಿ, ಶ್ರೀವರದರಾಜಸ್ವಾಮಿ ದೇವಸ್ಥಾನಕ್ಕೆ ಹೋದೆವು. ನೂರು ಕಂಬಗಳುಳ್ಳ ವಿಶಾಲ ಪ್ರಾಂಗಣ. ವರದರಾಜ

ಸ್ವಾಮಿಯ ಭವ್ಯ ವಿಗ್ರಹ ಗರ್ಭಗುಡಿಯಲ್ಲಿ, ಸೀರೆ ಅಂಗಡಿಯಲ್ಲಿ ವೈಭೋಗದ ಮೋಹ ನಮ್ಮನ್ನು ಆವರಿಸಿದರೆ, ಈ ದೇವಸ್ಥಾನದ ಭವ್ಯತೆಯಲ್ಲಿ ಒಂದು ರೀತಿಯ ಅನುಭಾವದ ದಿವ್ಯಮೋಹ ಕಾಡಿತು. ನೂರು ಕಂಬಗಳ ಮಧ್ಯೆ ಓಡಾಡುವಾಗಲೆಲ್ಲ ಪಲ್ಲವ ಅರಸರ ಕಾಲದಲ್ಲಿಯೇ ನಾವಿದ್ದೇವೆ ಏನೋ ಎಂಬಂತೆ ಭಾಸವಾಯಿತು.

ಕಂಚಿಗಾಗಿ ಸೀರೆ ತರಲು ಹೊರಟ ನಾವು ಅಲ್ಲಿಯ ಮಹಿಳೆಯರ ಸೀರೆಗಳನ್ನು ಗಮನಿಸಿದೆವು. ಹೆಚ್ಚಿನ ಮಹಿಳೆಯರು ಸೀರೆ ಕೊಳ್ಳಲು ಬಂದವರು, ನಮ್ಮಂತೆ ದೇವಸ್ಥಾನ ದರ್ಶನಕ್ಕೆ ಬಂದಿದ್ದರು. 'ಹಿತ್ತಲ ಗಿಡ ಮದ್ದಲ್ಲ' ಎಂಬಂತೆ ಅಲ್ಲಿಯವರಿಗೆ 'ಕಂಚಿಯ ಸೀರೆ'ಯ ಮೋಹ ಇತ್ತೇ, ಇರಲಿಲ್ಲವೇ? ಎಂಬುದನ್ನು ತಿಳಿಯಲು ನನಗೆ ಸಾಧ್ಯವಾಗಲಿಲ್ಲ.

ಒಂದಂತೂ ನಿಜ. ಕಂಚಿಯ ರೇಷ್ಮೆಯ ಸೀರೆಯ ಮೋಹಕ ಬಣ್ಣ-ಹೊಳಪು, ಚೆನ್ನದ ಜರಿಯಂಚು, ವೈಭವಯುತ ಜರಿಯ ಸೆರಗು, ಎಲ್ಲರನ್ನೂ ಆಕರ್ಷಿಸುತ್ತದೆ, ಮೋಹಗೊಳಿಸುತ್ತದೆ. ಹದಿನೆಂಟರ ಹರೆಯದ ಹೆಣ್ಣಿನಿಂದ ಎಂಭತ್ತರ ವೃದ್ಧೆಯರಿಗೂ ಅದು ಒಂದು ಹೊಸಕಳೆಯನ್ನು, ಹೊಸ ನೋಟವನ್ನು ನೀಡುವಂತೆ ಮಾಡಿ, ಉಟ್ಟು ತೊಟ್ಟ ಸಂದರ್ಭವನ್ನು ಸುಂದರವಾಗಿಸುತ್ತದೆ. ಸ್ಮರಣೀಯವಾಗಿಸುತ್ತದೆ. ಅದಕ್ಕೇ ಮಹಿಳೆಯರು 'ಕಂಚಿಯ ರೇಷ್ಮೆ ಸೀರೆ'ಗೆ ಮುಗಿ ಬೀಳುವುದು!

ನನ್ನ ಕಂಚಿಯಾತ್ರೆ ಸುಗಮವಾಗಿ ನೆರವೇರಿತು. ಕಂಚಿಯ ಸೀರೆಗಳು ಕೊಡಬೇಕಾದವರ ಮಡಿಲು ತುಂಬಿದವು, ಮಗಳ ಮದುವೆಯಲ್ಲಿ, ನಾನು ಸಾರ್ಥಕ ಭಾವದಿಂದ ಆ ಯಾತ್ರೆಯನ್ನು ಆಗಾಗ್ಗೆ ನೆನಪಿಸಿಕೊಳ್ಳುತ್ತಿರುತ್ತೇನೆ.

**(ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೦೨.೦೨.೨೦೦೦)**

# ೯. ಹಚ್ಚಿಕೊಂಡಿ...ರಾ... ನೀವು?

**ಜಯಾ ಯಾಜಿ ಶಿರಾಣ**

ಹಾಂ, ಹಚ್ಚಿಕೊಳ್ಳುವುದು ಅಂದರೆ ಲಿಪ್‌ಸ್ಟಿಕ್, ನೇಲ್ ಪಾಲಿಶ್, ಪೌಡರ್, ಕ್ರೀಮ್... ಇತ್ಯಾದಿ ಅಂಡ್ಕೊಂಡಿರಾ? ಅಲ್ಲಲ್ಲ, ಈ ಹಚ್ಚಿಕೊಳ್ಳುವುದರ ಅರ್ಥ ನಮ್ಮನ್ನು ಯಾರಾದರೂ ಹಚ್ಚಿಕೊಳ್ಳುವುದು ಅರ್ಥಾತ್ ನೆಚ್ಚಿಕೊಳ್ಳುವುದು. ಈ ಹಚ್ಚಿಕೊಳ್ಳುವ ಶಬ್ದದ ಅರ್ಥ ನನಗೆ ನನ್ನೂರು ಬಿಟ್ಟು ಬರುವ ಮೊದಲು ಗೊತ್ತಿರಲಿಲ್ಲ. ಆಮೇಲೆ ಕಟ್ಟಿಕೊಂಡವನೊಂದಿಗೆ ಊರೂರು ಅಂತ ವರ್ಷಕ್ಕೊಮ್ಮೆ ಅಲೆದಾಡಲು ಪ್ರಾರಂಭ ಮಾಡಿದೆ ನೋಡಿ, ಅಂದಿನಿಂದ ಈ 'ಹಚ್ಚಿಕೊಳ್ಳುವ' ಚಟ ಅಂಟಿತೆನ್ನಬೇಕು. ಚಟ ಅಂತ ಯಾಕೆ ಹೇಳಿದೆ ಅಂದರೆ ಎಷ್ಟೋ ಸಲ ಈ ಹಚ್ಚಿಕೊಳ್ಳುವಿಕೆಯಿಂದ ನನ್ನವರ ಹತ್ತಿರ... ಇತ್ತೀಚೆಗೆ ನನ್ನ ಮಕ್ಕಳಿಂದಲೂ ಅನ್ನಿಸಿಕೊಳ್ಳುವುದುಂಟು. ಅಂದ ಮೇಲೆ ಇದೊಂದು ವೈಯಕ್ತಿಕ 'ಚಟ'ವೆನ್ನುವುದರಲ್ಲಿ ತಪ್ಪೇನು?

ಮೊದಮೊದಲಿಗೆ, ಅಂದರೆ ಮದುವೆಯಾದ ಹೊಸತರಲ್ಲಿ ಊರು ಬಿಟ್ಟು ದೂರದ ಊರಿಗೆ ಬಂದು ನೆಲೆಸಿದಾಗ ಆಚೆ-ಈಚೆಯವರನ್ನೆಲ್ಲ ನಾನು ಹಚ್ಚಿಕೊಂಡಂತೆ ಅವರೂ ಹಚ್ಚಿಕೊಂಡಿದ್ದು ನಾವು ವರ್ಗವಾಗಿ ಊರುಬಿಟ್ಟು ಬರುವಾಗ ತಿಳಿಯುತ್ತಿತ್ತು. ಆಗಾಗ ಹೊಸ ತಿನಿಸು, ಉಪ್ಪಿನಕಾಯಿ, ಊರಿಂದ ತಂದ ನುಚ್ಚಿನುಂಡೆ ನಮ್ಮ ಮನೆಗೆ ಬಂದು, ನಮ್ಮ ಕರಾವಳಿಯ ನೀರು ದೋಸೆ, ಪತ್ರೊಡೆ ಇನ್ನಿತರ ತಿಂಡಿ ಅವರಲ್ಲಿ ಹೋಗಿ... ಒಂಥರಾ 'ಕೊಡುಕೊಳ್ಳುವಿಕೆ'ಯಲ್ಲಿ ನಂತರ ನಾವು ನೆರೆಯವರು ಪರಸ್ಪರ ಹಚ್ಚಿಕೊಂಡಿದ್ದೆವು. ವರ್ಗವಾಗಿ ಊರು ಬಿಡುವ ದಿನ ನನ್ನ ಹಚ್ಚಿಕೊಂಡವರೆಲ್ಲ ಕರೆದು ಕುಂಕುಮ ಕೊಟ್ಟು ಉಡಿ ತುಂಬಿಸಿ ಕಣ್ಣೀರು ಹರಿಸುತ್ತಾ ಕಳಿಸುವಾಗ ಅಳದೇ ನಾನೇನು ಮಾಡಲಿ...? ನನಗೂ ಅಳು ಉಕ್ಕಿಯೇ ಬರುತ್ತಿತ್ತು. ನನ್ನ ಮತ್ತು ನನ್ನ ಹಚ್ಚಿಕೊಂಡ ನೆರೆಯವರ ಮಧ್ಯ ಒಂಥರಾ ಅಳು ಸ್ಪರ್ಧೆ ಏರ್ಪಟ್ಟು... ನನ್ನವರಿಗೆ ಇದೊಂದು ತರದ ಮುಜುಗರವಾಗಿ ಈ ಹಚ್ಚಿಕೊಳ್ಳುವ ಚಟಕ್ಕೆ

ಮೊದಲ ಸಲ ನನ್ನವರಿಂದ ಅನ್ನಿಸಿಕೊಂಡೆ, ಹೋದ ಊರನ್ನೆಲ್ಲ ಬಿಡುವಾಗ ಇದೇ ಪುನರಾವರ್ತನೆ. ಮಕ್ಕಳು ಹುಟ್ಟಿದ ಮೇಲೆ ನನ್ನ ಜೊತೆಗೆ ಅವೂ ಸೇರಿಕೊಂಡವು. ಹೋದ ಊರಲ್ಲೆಲ್ಲ ನೆರೆಯವರನ್ನೇ ತಾತಾ-ಅಜ್ಜಿ, ಅಂಕಲ್-ಆಂಟಿ ಎಂದೆಲ್ಲಾ ಹಚ್ಚಿಕೊಂಡ ಮಕ್ಕಳು ಊರು ಬಿಡುವಾಗ ಮಾಡುವ ಹಾರಾಟವೆಷ್ಟು? ಈ ಮಕ್ಕಳ 'ಹಚ್ಚಿಕೊಳ್ಳುವಿಕೆ'ಯಿಂದ ಊರುಬಿಟ್ಟು ದೂರದ ಊರಿಗೆ ವರ್ಗವಾಗಿ ಹೋದರೂ ಮಕ್ಕಳ ಹಟಕ್ಕೆ ಕಟ್ಟುಬಿದ್ದು ವರ್ಷಕ್ಕೆ ಒಂದೆರಡು ಸಾರಿಯಾದರೂ ಬಿಟ್ಟು ಬಂದ ಊರಿಗೆ ಹೋಗಿಬರಬೇಕಾಗಿತ್ತು. ಅಲ್ಲದೆ ನಾಯಿ-ಬೆಕ್ಕುಗಳನ್ನು ಹಚ್ಚಿಕೊಂಡ ಮಕ್ಕಳು ಮನೆಯ ಸಾಮಾನಿನೊಂದಿಗೆ ಅವುಗಳನ್ನೂ ಪ್ಯಾಕ್ ಮಾಡಿ ಲಾರಿಗೆ ಏರಿಸುತ್ತಿದ್ದರು!

ಹಚ್ಚಿಕೊಂಡಿ...ರಾ... ನೀವು? ೫೫

ಹೀಗೆ ದಿನ ಉರುಳಿದಂತೆ, ಮಕ್ಕಳು ದೊಡ್ಡವರಾದಂತೆ ಹಚ್ಚಿಕೊಳ್ಳುವುದರಿಂದ ದೂರವಾದರೂ ನಾನು ಬಲವಾಗಿ ಅಂಟಿಕೊಂಡು ಬಿಟ್ಟಿದ್ದೆ.

ಒಮ್ಮೊಮ್ಮೆ ಈ 'ಹಚ್ಚಿಕೊಳ್ಳುವ ಚಟ' ನಮ್ಮನ್ನು ಬಹಳ ಇಕ್ಕಟ್ಟಿಗೆ ಸಿಕ್ಕಿಸಿದ್ದೂ ಉಂಟು.....

ಕಳೆದ ತಿಂಗಳು ಪಕ್ಕದ ಮನೆ ಅಂಬುಜ ಊರಿಗೆ ತನ್ನ ತಂಗಿಯ ಮದುವೆಗೆಂದು ಹೊರಟು ನಿಂತವಳು ತನ್ನ ಆರು ವರ್ಷದ ಮಗು 'ಪಿಂಕಿ'ಯನ್ನು ಊರಿಗೆ ಒಯ್ಯದೆ ಸ್ಕೂಲು ತಪ್ಪುತ್ತೆ ಎನ್ನುವ ನೆವ ಮಾಡಿಕೊಂಡು 'ಹಚ್ಚಿಕೊಂಡ' ನಮ್ಮ ಮನೆಯಲ್ಲಿ ಬಿಟ್ಟು ಹೋಗಬೇಕೆ...? ತಾಯಿ-ತಂದೆಯನ್ನು ಬಿಟ್ಟು ಎಂದೂ ಇಲ್ಲದ ಆ ಪೋರಿಯನ್ನು ಸಂಭಾಳಿಸುವುದು ನಮಗೆ ಸಾಕು ಸಾಕಾಯಿತು.

ಹೆಣ್ಣು ಮಕ್ಕಳಿಲ್ಲದ ನಮ್ಮ ಮನೆಯಲ್ಲಿ ಪಿಂಕಿಯನ್ನು ತುಸು ಹೆಚ್ಚೇ ಹಚ್ಚಿಕೊಂಡಿದ್ದು ನಿಜ. ಆಕೆ ನಮ್ಮನೆಗೆ ಬಂದಾಗೆಲ್ಲ ಕಲ್ಲುಸಕ್ಕರೆ, ಮಂಡಕ್ಕಿ, ಹುರಿಗಡಲೆ ಕೊಡುತ್ತಿದ್ದ ನನ್ನನ್ನೇ ತನ್ನಮ್ಮನಿಗಿಂತ ಹೆಚ್ಚು ಹಚ್ಚಿಕೊಂಡಿದ್ದಾಳಂತ ಅವಳಮ್ಮ ನಮ್ಮನೆಗೆ ಕೇಳುವಂತೆ ಎದುರು ಮನೆ ಭಾರತಿಯ ಹತ್ತಿರ ಹೇಳುತ್ತಿರುವುದನ್ನು ಅಂದು ಕೇಳಿಸಿಕೊಂಡಿದ್ದೆ. ಮದುವೆಗೆಂದು ಊರಿಗೆ ಪಿಂಕಿಯ ಅಮ್ಮ-ಅಪ್ಪ ಹೊರಡುವುದೆಂದು ತೀರ್ಮಾನಿಸಿದಾಗ ಮಗುವನ್ನು ರಮಿಸಿ 'ಪಕ್ಕದ ಮನೆ ಆಂಟಿ ಮನೇಲಿ ಇದ್ದೀಯ? ನಾವು ಊರಿಂದ ಬೇಗ ಬಂದು ಬಿಡ್ತೀವಿ' ಅಂತ ಕೇಳಿದಾಗ ಆ ಪೋರಿಗೆ ನಾವು ಕೊಡುವ ಕಲ್ಲುಸಕ್ಕರೆ, ಮಂಡಕ್ಕಿ ನೆನಪಾಯಿತೇನೋ...! “ಸಂತೆಯಿಂದ ಬೇಗ ಬಾಳಲ್ಲಾ... ಅಷ್ಟೇ ಬೇಗ ಬಾಳೆ' ಅಂತ ಅಂದುಕೊಂಡಿರಬಹುದು. ಊರಿಗೆ ಹೊರಡುವಾಗ ಪಿಂಕಿಯನ್ನು ನಮ್ಮನೆಗೆ ಕರೆತಂದು ಆಕೆಯ ತಾಯ್ತಂದೆ, 'ರೀ, ಈಕೆ ಊರಿಗೆ ನಾನು ಬರೋದೇ ಇಲ್ಲಾ. ಆಂಟೀ ಮನೇಲಿ ಇದ್ದೀನಿ... ಅನ್ತಾ ಇದ್ದಾಳೆ' ಎಂದಾಗ ನಾನು ಹೇಗೆ

ಬೇಡವೆನ್ನಲಿ? ಅಳುಕುತ್ತಾ, 'ಆಕೆ ಇರೋದಾದ್ರೆ ನಮ್ಮೂ ಸಂತೋಷ. ಇಲ್ಲಿ ಬಿಡಿ, ನಮಗೇನೂ ತೊಂದರೆ ಇಲ್ಲ, ನೀವು ಊರಿಗೆ ಹೋಗಿ ಬನ್ನಿ' ಎನ್ನಬೇಕಾಯಿತು. ಅಂತೇ ಹೇಳಿದೆ.

ಅಪ್ಪ ಅಮ್ಮ ಹೊರಟಾಗ ನಗುತ್ತಾ ಟಾ ಟಾ ಮಾಡಿದ ಪಿಂಕಿ ಅವರೆಲ್ಲಾ ಹೋದ ಮೇಲೆ ಮಂಕಾಗಿ ಕುಳಿತಳು. ಕರುಳು ಚುರ್ ಅನಿಸಿತು. ಪಾಪ ಪುಟ್ಟ ಮಗು ಎಂದು, ಒಂದು ತುಂಡು ಕಲ್ಲು ಸಕ್ಕರೆ ಕೊಟ್ಟೆ. ಮಂಡಕ್ಕಿ ಕೊಟ್ಟೆ, ಹುರಿಗಡಲೆ ಕೊಟ್ಟೆ, ನೆಲಗಡಲೆ, ಕೊಬ್ಬರಿ, ಸಕ್ಕರೆ... ಒಂದಾದ ನಂತರ ಒಂದರಂತೆ ಕೊಡುತ್ತಾ ಹೋದೆ. ಕೊಡಲು ಸ್ವಲ್ಪ ನಿಧಾನವಾದರೆ ತುಟಿ ಬಿಕ್ಕಲು ಸಜ್ಜಾಗಿ ನಿಂತಂತೆ ಇರುತ್ತಿತ್ತು! ನೋಡುತ್ತಲಿದ್ದ ನನ್ನವರು "ಲೇ, ನೀನು ಆ ರೀತಿ ತಿನ್ನಿಸಿದ್ರೆ ನಾಳೆ ಖಂಡಿತ ಆಸ್ಪತ್ರೆಗೆ ಕಕ್ಕೊಂಡು ಹೋಗೋಕಾಗುತ್ತೆ ಕಣೆ' ಎಂದರು. ನನಗೂ ಹೌದೆನ್ನಿಸಿತು. ಪಿಂಕಿಯನ್ನು ರಮಿಸುತ್ತ 'ಈಗ ಇಷ್ಟು ಸಾಕು, ಇನ್ನು ಆಟ ಆಡೋ...' ಎಂದೆ. ಹೇಳಿ ಮುಗಿಸುವಷ್ಟರಲ್ಲಿ ಆಕೆ ಅಳಲಿಕ್ಕೇ ಶುರು ಮಾಡಿಬಿಟ್ಟಳು. ಬಿಸ್ಕೆಟು, ಚಾಕಲೇಟು ತರಿಸಿಕೊಟ್ಟೆ. ನಿಮಿಷದಲ್ಲಿ



ಮಾಯ. ಮತ್ತೆ ಅಳು ಪ್ರಾರಂಭಿಸಿದಳು. ಕೈಗೆ ಬಳೆ, ಜಡೆಗೆ ರಿಬ್ಬನ್ನು, ಹೇರ್‌ಪಿನ್ನು, ನೇಲ್‌ಪಾಲಿಶ್... ಅಬ್ಬಬ್ಬಾ! ಒಂದೇ... ಎರಡೇ... ಅವಳು ಹೇಳಿದ್ದನ್ನೆಲ್ಲಾ ಕೊಡಿಸಿದೆ. ನಿಮಿಷ ನಿಮಿಷಕ್ಕೆ ಪಿಂಕಿಯ ಬೇಡಿಕೆ ಏರುತ್ತಲೇ ಇತ್ತು. ಸಂಜೆ ಅಪ್ಪ-ಅಮ್ಮ ಬಂದು ಬಿಟ್ಟರೆ ತನ್ನ ಕೋರಿಕೆ ನೆರವೇರದು ಎಂದುಕೊಂಡೋ ಏನೋ, ಪಿಂಕಿ ತನಗೆ ಬೇಕೆನಿಸಿದ್ದನ್ನೆಲ್ಲಾ ಕತ್ತಲಾಗುವಷ್ಟರಲ್ಲಿ ತರಿಸಿಕೊಂಡು ಬಿಟ್ಟಳು!

ತನ್ನ ಬೇಡಿಕೆಯನ್ನೆಲ್ಲಾ ಈಡೇರಿಸಿಕೊಳ್ಳುತ್ತಾ ನಾಲ್ಕು ದಿನ ಪಿಂಕಿ ಹಾಯಾಗಿ ಕಳೆದುಬಿಟ್ಟಳು-ನಮ್ಮನೆಯಲ್ಲಿ. ಎರಡು ದಿನಕ್ಕೆ ಬರುತ್ತೇನೆಂದು ಊರಿಗೆ ಹೋದ ಪಿಂಕಿಯ ಅಪ್ಪ-ಅಮ್ಮ ನಾಲ್ಕನೆಯ ದಿನವೂ ಬರಲಿಲ್ಲ. ತಮ್ಮ ಮಗಳು ಹೇಗಿದ್ದಾಳೆ? ನಿಮಗೆ ಉಪದ್ರವ ಕೊಟ್ಟಳಾ ಎಂದು ಕೇಳಿ ಒಂದು ಫೋನ್ ಕೂಡ ಮಾಡದಿದ್ದಾಗ ನನ್ನವರು, ಮಕ್ಕಳು ಜೊತೆಯಾಗಿ ಬಯ್ಯತೊಡಗಿದರು ನನಗೆ. 'ಪಿಂಕಿಯ ಅಪ್ಪ- ಅಮ್ಮ ತಮ್ಮ ಮಗುವನ್ನು ಅಷ್ಟು ಹಚ್ಚಿಕೊಂಡಿಲ್ಲ ಬಿಡು' ಎಂದು ಹಾಸ್ಯ ಮಾಡತೊಡಗಿದರು.

ಪಿಂಕಿ ತುಸು ಅತ್ತರೂ, ಆಕೆಯ ಬಾಯಿ ಬೊಂಬಾಯಿಯಾಗಿದ್ದುದರಿಂದ ಆಚೆ-ಈಚೆಯ ಹೆಂಗಸರೆಲ್ಲಾ ಕ್ಷಣದಲ್ಲಿ ಮುತ್ತಿಗೆ ಹಾಕಿ, 'ಏನಮ್ಮಾ ಪಿಂಕಿ? ಏನಾಯ್ತು? ಬಿದ್ದೆಯಾ? ಊಟ ಮಾಡಿಲ್ಲವಾ? ತಿಂಡಿ ತಿಂದಿಲ್ಲವಾ? ಆಂಟಿ ಹೊಡೆದರಾ?' ಎಂದು ನೂರೆಂಟು ಪ್ರಶ್ನೆ ಹಾಕಿ, ಪಿಂಕಿ ಯಾವ ಪ್ರಶ್ನೆಗೆ ಉತ್ತರ ಕೊಡಲಿ ಎಂದು ತಿಳಿಯದೆ ತಲೆಯನ್ನು ಅತ್ತ ಇತ್ತ ಅಲುಗಾಡಿಸಿದಾಗ... 'ಪಾಪ ಕಣೋ, ಮಗುವಿಗೆ ತಿಕ್ಲಿಕ್ಕಾದರೂ ಕೊಟ್ಟರೋ ಇಲ್ಲವೋ! ಹೀಗೆಲ್ಲ ಹೊಡೆಯೋ

ಬದಲು, ಇಳ್ಕೊಳ್ಳಿಕ್ಕೆ ಆಗಲ್ಲ ಎಂದಿದ್ದರೆ ಏನಾಗ್ತಿತ್ತು?' ಅಂತ ನನ್ನ ಕಿವಿಗೆ ಅಪ್ಪಳಿಸುವಂತೆ ಹೇಳಿದಾಗ ನನಗೆ ಅಳು ಗಂಟಲಿನವರೆಗೆ ಬಂದಿತ್ತು.

ಅಂತೂ ಆರನೆ ದಿನ ಸಂಜೆ ಪಿಂಕಿಯ ಅಪ್ಪ ಅಮ್ಮ ಜಾಲಿಯಾಗಿ ಊರಿನ ಪ್ರವಾಸ ಮುಗಿಸಿ ಬಂದರು. 'ಏನ್ರಿ, ಊರಿಗೆ ಹೋದವರು ಮಗಳ ಬಗ್ಗೆ ಕೇಳಿ ಒಂದು ಫೋನಾದರೂ ಮಾಡ್ದಾರಾಗಿತ್ತಾ' ಎಂದು ಕೇಳಿದರೆ ಆ ಮಹಾ ಮಹಿಮರು, 'ಫೋನೇಕೆ ಮಾಡೋಕು ಆಂಟಿ, ಪಿಂಕಿಯನ್ನು ಬಿಟ್ಟಿದ್ದು ನಿಮ್ಮನೆಯಲ್ಲಿ ಅಂತ ನಾವಂತೂ ನಿಶ್ಚಿಂತೆಯಿಂದ ಇದ್ವಿ.." ಅನ್ನೋದಾ! 'ಆಡಲು ಹೋದ ಪಿಂಕಿ ಕೈಕಾಲು ಫ್ರಾಕಿಗೆ ಕೊಳೆ ಅಂಟಿಸಿಕೊಂಡು ಬಂದಿದ್ದು ಕಂಡು (ಆಡಲು ಹೋದ ಮಕ್ಕಳು ಮತ್ತೆ ಹೇಗಿರುತ್ತಾರೆ?), ಆಕಾಶ ಹರಿದು ಬಿದ್ದವರಂತೆ, 'ಅಯ್ಯೋ ನಮ್ಮ ಪಿಂಕಿ ನೋಡಿ! ನಾಲ್ಕು ದಿನಕ್ಕೆ ಎಷ್ಟು ಸೊರಗಿ ಬಿಟ್ಟಿದ್ದಾಳೆ!' ಎನ್ನುತ್ತಾ, ನನಗೊಂದು ಕೃತಜ್ಞತೆಯನ್ನೂ ಹೇಳದೆ ಪಿಂಕಿಯನ್ನು ಎತ್ತಿಕೊಂಡು ಮನೆ ಕಡೆ ಹೊರಟ ಅಂಬುಜ ನನಗೆ ಸರಿಯಾಗಿ ಕೇಳಿಸುವಂತೆ, 'ಚೆನ್ನಾಗಿ ಸ್ನಾನ ಮಾಡಿಸೋದು ಇಲ್ಲಿ, ಊಟಾನಾದ್ರೂ ಹೊಟ್ಟೆ ತುಂಬಾ ಹಾಕಿದ್ದಾರೋ ಇಲ್ಲವೋ...' ಎಂದು ಗೊಣಗಿಕೊಳ್ಳುತ್ತ ಹೋಗುವಾಗ ನನಗೆ ಹೇಗಾಗಿರಬೇಡ?

ಇಂಥ ಘಟನೆ ಆದರೂ ಈ 'ಹಚ್ಚಿಕೊಳ್ಳುವಿಕೆಯಿಂದ ದೂರವಾಗಲಿಕ್ಕೆ ಆಗುವುದಿಲ್ಲ ನನ್ನ ಹತ್ತಿರ.

ಹಚ್ಚಿಕೊಂಡಿ...ರಾ... ನೀವು? ೫೭

ವಾರದ ಪತ್ರಿಕೆಯನ್ನು ಪೇಪರ್ ಹಾಕುವ ಹುಡುಗ ನಮ್ಮನೆಗೆ ಹಾಕುವುದನ್ನೇ ಕಿಡಕಿಯಲ್ಲಿ ಮುಖವಿಟ್ಟು ನೋಡುವ ಎದುರುಗಡೆ ಮನೆ ದೊಡ್ಡ ಹುಡುಗಿ, ಅವನು ಬಂದ ತಕ್ಷಣ ತಮ್ಮನನ್ನು ನಮ್ಮನೆಗೆ ಓಡಿಸುತ್ತಾಳೆ. ನಾವು ನೋಡಿಲ್ಲವೆಂದರೆ ಹಾಗೇ ಪತ್ರಿಕೆ ಎತ್ತಿಕೊಂಡು ಹೋಗುವ ಆ ಪೋರ ನಾವು ಅಕಸ್ಮಾತ್ತಾಗಿ ಕಂಡರೆ, ಆಂಟಿ, ನಮ್ಮಕ್ಕ ಈ ಪತ್ರಿಕೆಯನ್ನು ತುಂಬ ಹಕ್ಕೊಂಡಿದ್ದಾಳೆ. ಪತ್ರಿಕೆ ಬರಿಕ್ಕೆ ಅರ್ಧ ಗಂಟೆ ಲೇಟಾದ್ರೂ ಎಷ್ಟೊಂದು ಪೇಚಾಡುತ್ತಾಳೆ ಗೊತ್ತಾ?' ಅನ್ನುತ್ತಾ ನಮ್ಮ ಉತ್ತರವನ್ನೂ ಬಯಸದೇ ಪತ್ರಿಕೆಯನ್ನು ಎತ್ತಿಕೊಂಡು ಹೊರಟೇ ಬಿಡುತ್ತಾನೆ! ಹೇಗಿದೆ ನೋಡಿ ಈ 'ಹಚ್ಚಿಕೊಳ್ಳುವ' ಚಟ?!

ನಾಯಿ ಬೆಕ್ಕುಗಳೂ ಅಷ್ಟೆ. ಅವು ನಮ್ಮನ್ನು ಎಷ್ಟು 'ಹಚ್ಚಿಕೊಳ್ಳುತ್ತವೆ' ಎಂದರೆ ನಾವು ಎಷ್ಟೇ ಮನೆ ಬದಲಾಯಿಸಿ, ಯಾವ ಬೀದಿಗೇ ಹೋಗಲಿ, ಅಲ್ಲಿಗೆ ಅವುಗಳೂ ಹಾಜರ್ ಆಗಿ ಬಿಡುತ್ತವೆ. ಒಮ್ಮೆ ನಾವು ಸಾಕಿದ ಬೆಕ್ಕೊಂದು ಕದ್ದು ತಿನ್ನುವ ಅಭ್ಯಾಸವನ್ನು ಅಂಟಿಸಿಕೊಂಡಿತ್ತು. ಎಷ್ಟು ಜಾಗ್ರತೆ ವಹಿಸಿದರೂ ಆ ಬೆಕ್ಕು ಅದು ಹೇಗೋ ಕದ್ದು ಮುಚ್ಚಿ ಬಂದು ದಿನಕ್ಕೊಮ್ಮೆಯಾದರೂ ಹಾಲನ್ನೋ, ಮೊಸರನ್ನೋ ಕದ್ದು ತಿನ್ನದೇ ಇರುತ್ತಿರಲಿಲ್ಲ. ಬೇಸರಿಸಿದ ನಾವು ಗೋಣಿ ಚೀಲದಲ್ಲಿ ಕಟ್ಟಿ ನಾಲ್ಕು ಕಿ.ಮೀ ದೂರ ಇರುವ ನಮ್ಮ ಕೆಲಸದವಳ ಹತ್ತಿರ ಕೊಟ್ಟು ಕಳಿಸಿದೆವು.

ಬೆಳಗಾಗುವಷ್ಟರಲ್ಲಿ ಆ ಬೆಕ್ಕು ಬಾಗಿಲು ತೆರೆಯುತ್ತಿದ್ದಂತೆ ಹಾಜರ್ ಆಗಬೇಕೇ... ಅದು ನಮ್ಮನ್ನು ಅಷ್ಟೊಂದು ಹಚ್ಚಿಕೊಂಡಿದೆ ಅನ್ನಿಸಿತು ನನಗೆ.

ಒಟ್ಟಿನಲ್ಲಿ 'ಹಚ್ಚಿಕೊಳ್ಳುವ' ಚಟ ಮಾನವರಿಗಷ್ಟೇ ಅಲ್ಲ. ಪ್ರಾಣಿಗಳಿಗೂ ಅಂಟಿರುತ್ತೆ ಅಲ್ಲವಾ?

**(ಹೊಸತು, ಸೆಪ್ಟೆಂಬರ್ ೨೦೦೦, ಪ್ರಬಂಧ, ೨೦೦೦)**

## ೧೦. ಬೇಡದ ಅತಿಥಿ

### ಶಾರದಾ ಹೆಮ್ಮಿಗೆ

ಅತಿಥಿ ಸತ್ಕಾರ ಒಂದು ಸತ್ ಸಂಪ್ರದಾಯ. ಇದು ಎಲ್ಲಾ ವರ್ಗದವರಲ್ಲೂ ಇರುವಂಥದ್ದು. ಮೇಲ್ವರ್ಗದವರಿಗೆ ಇದರಿಂದ ಯಾವ ವ್ಯತ್ಯಾಸವೂ ಇರುವುದಿಲ್ಲ. ಇನ್ನು ಕೆಳವರ್ಗದವರಲ್ಲಿ ಈ ಅತಿಥಿಗಳ ಆಗಮನ ಅಷ್ಟಾಗಿ ಇರುವುದಿಲ್ಲ. ಹಾಗೆ ಬಂದರೂ ಅತೀ ಆಪ್ತರಾಗಿರುವವರಷ್ಟೇ ಅಪರೂಪವಾಗಿ ಬರಬಹುದು. ಬರುವ ಅತಿಥಿಗಳೂ ಕಷ್ಟಸುಖ ಅರಿತವರಾದ್ದರಿಂದ ಒಂದು ಹೊತ್ತು ಇರಬಹುದು ಅಥವಾ ಒಂದು ದಿನವಿದ್ದು ಹೊರಟು ಬಿಡುವರು. ಇದು ಸಂತೋಷ, ಸಮಾಧಾನ ತರುವ ವಿಷಯಗಳು.

ಇವೆರಡರ ಮಧ್ಯೆ, ಮಧ್ಯಮ ವರ್ಗದವರು ಇದ್ದಾರಲ್ಲ? ಬಂದವರೆದುರಿಗೆ ತಮ್ಮ ಸಣ್ಣತನ ಎಲ್ಲಿಯೂ ತೋರಗೊಡಬಾರದೆಂದು ಬಹು ಪ್ರಯಾಸದಿಂದ ತೊಳಲಾಡುವರು.

ಆರ್ಥಿಕ ಸ್ಥಿತಿಯಿಂದ ಹೆಚ್ಚಾಗಿ ಒದ್ದಾಡುವ ಜನರೇ ಈ ಮಧ್ಯಮ ವರ್ಗದವರು. 'ಹಾಸಿಗೆ ಇದ್ದಷ್ಟು ಕಾಲು ಚಾಚುವ ಸ್ವಭಾವ ಇವರದ್ದಲ್ಲ. ಏನೆಲ್ಲಾ ಸೌಲಭ್ಯಗಳನ್ನು ಹೊಂದಿಸಿಕೊಳ್ಳುವ ಆಸೆ. ಈ ಆಸೆಗೆ ತಕ್ಕಡಿ ಏಳಲಾರದೆ ಯಾವಾಗಲೂ ಕಡಿವಾಣ ಹಾಕಿ ಹಿಂದೆ ಎಳೆಯುತ್ತಿರುತ್ತದೆ. ಪರಿಸ್ಥಿತಿಯ ಅರಿವಿದ್ದರೂ ಎಲ್ಲರೆದುರೂ ದೊಡ್ಡತನದಿಂದ ಮೆರೆಯುವ ಹಂಬಲ ಇವರಿಗೆ, ಹಾಗಾಗಿ ಬರುವ ಅತಿಥಿಗಳಿಗೆ ಈ ವರ್ಗದಲ್ಲಿ ಆದರೋಪಚಾರ ಆಡಂಬರದಿಂದಲೇ ನಡೆಯುತ್ತದೆ.

ಬಂದ ಅತಿಥಿಗಳು ಒಂದೆರಡು ದಿನಕ್ಕೆ ಜಾಗ ಖಾಲಿ ಮಾಡಿದರೆ ಮನೆಯವರಿಗೂ ಬಂದವರಿಗೂ ಇಬ್ಬರಿಗೂ ಮರ್ಯಾದೆ ಇರುತ್ತದೆ. ಹಾಗಾಗದಿದ್ದರೆ ಇಬ್ಬರಲ್ಲೂ ಕಿರಿಕಿರಿ ಇದ್ದದ್ದೇ.

ಕೆಲವರು ಹಿತವಾದ ಆದರೋಪಚಾರಕ್ಕೆ ಸಂತೋಷಿಸಿ ಮತ್ತೂ ಎರಡು ದಿನ ಉಳಿಯುವುದೂ ಉಂಟು. ಈಗಿನ ಕಾಲಕ್ಕೆ ಅದು ಕಠಿಣವೆನಿಸುತ್ತದೆ. ಆಗ ಮನೆಯವರಿಗೆ ಇಂಥ ಅತಿಥಿಗಳು 'ನುಂಗಲೂ ಆಗದ ಉಗುಳಲೂ ಆಗದ ಬಿಸಿ ತುಪ್ಪದಂತಾಗುತ್ತಾರೆ.

'ಈ ದಿನ ಸೋಮವಾರ, ನನಗೆ 'ಒಪ್ಪೊತ್ತು' ಎನ್ನುತ್ತಾರೆ. 'ನಾಳೆ ಏಕಾದಶಿ ಫಲಾರಕ್ಕೆ ಏನಾದರೂ ಲಘುವಾಗಿ ಒಂದಷ್ಟು ಮಾಡಿ ಬಿಡಮ್ಮ' ಎಂದು, ಯಾವ ಸಂಕೋಚವೂ ಇಲ್ಲದೆ ಹೇಳಿದಾಗ, ಬಹು ಕಷ್ಟದಿಂದಲೇ ಇವರ ಬೇಕುಬೇಡಗಳನ್ನು ಅನುಸರಿಸಿ ಮಾಡುತ್ತಿರುವ ಮನೆಯವರಿಗೆ ಮೈ ಪರಚಿಕೊಳ್ಳುವಷ್ಟು ಸಿಟ್ಟಾದರೂ



ನಗುನಗುತ್ತಾ 'ಅದಕ್ಕೇನಂತೆ ಮಾಡಿದರಾಯಿತು' ಎಂದು ನಟಿಸುತ್ತಾ ಮನದಲ್ಲಿ ಶಪಿಸಿಕೊಳ್ಳಬೇಕಾದ ಸಂದರ್ಭಗಳೂ ಬರುವುದುಂಟು.

ಕೆಲವರಿರುತ್ತಾರೆ. ತಮ್ಮ ಮನೆಗಳಲ್ಲಿ ಸೊಲ್ಲೇ ಇಲ್ಲದಂತಿದ್ದರೂ ಮತ್ತೊಬ್ಬರ ಮನೆಗೆ ಬಂದಾಗ ಮಾತ್ರ ಇಂಥವರ ಪ್ರತಿಷ್ಠೆ ಚಿಗುರೊಡೆಯುತ್ತದೆ. ಮಾತು ಮಾತಿಗೂ ತಮ್ಮ ಮನೆಯಲ್ಲಿ ಹಾಗೆ, ತಮ್ಮ ಮನೆಯಲ್ಲಿ ಹೀಗೆ ಎಂದು ರೈಲು ಬಿಡುತ್ತಿರುತ್ತಾರೆ. ಅವರ ಮನೆಯ ಒಳಹೊರಗನ್ನೆಲ್ಲಾ ತಿಳಿದಿರುವ ಮನೆಯವರಿಗೆ ಇವರ ಮಾತೆಲ್ಲಾ ಬರೇ 'ಜೊಳ್ಳು' ಎಂದು ತಿಳಿದು ನಗು ಬಾರದಿರದು.

ಈಗಿನ ಕಾಲದಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ, ನೀರಿನ ಸರಬರಾಜು ಸರಿಯಿರುವುದಿಲ್ಲ. ದಿನ ಬಿಟ್ಟು ದಿನವೋ ಅಥವಾ ವಾರಕ್ಕೆರಡು ದಿನವೋ ನೀರು ಬಿಡಲಾಗುತ್ತದೆ. ಈ ಅಡಚಣೆಗೆ ಹೊಂದಿಕೊಂಡು ಮನೆಗಳಲ್ಲಿ ನೀರಿನ ಬಳಕೆಯನ್ನು ಹೇಗೋ ನಿಭಾಯಿಸಿಕೊಂಡಿರುವುದನ್ನು ರೂಢಿಸಿಕೊಂಡಿರುತ್ತಾರೆ. ಕೊಳವೆ ಬಾವಿ ಇರುವ ಮನೆಗಳಾದರೆ ತೊಂದರೆ ಇರುವುದಿಲ್ಲ. ಅದಿಲ್ಲದ ಮನೆಗಳಲ್ಲಿ ನೀರಿನದೇ ಒಂದು ಸಮಸ್ಯೆ ಅತಿಥಿಗಳು, ಕೆರೆಯೋ ಭಾವಿಯೋ ಅಥವಾ ಹೊಳೆಯಿರುವ ಊರಿನಿಂದ ಬಂದವರಾಗಿದ್ದರೆ ಅಂಥವರಿಗೆ ನೀರಿನ ಅಭಾವದ ಅಭ್ಯಾಸವಿರುವುದಿಲ್ಲ. ಸ್ನಾನಕ್ಕೆ ಎರಡು ಬಕೆಟ್ ನೀರು, ಬಟ್ಟೆ ಶುಚಿಗೊಳಿಸಲು ನಾಕಾರು ಬಕೆಟ್, ಇನ್ನು ಕೈಕಾಲು ತೊಳೆಯಲು ಆಗಾಗ ಧಾರಾಳವಾಗಿ ನೀರಿರಲೇ ಬೇಕು.

ಊಟ, ತಿಂಡಿ, ಉಪಚಾರಗಳು ಹೇಗೋ ನಡೆದೇ ನಡೆಯುತ್ತವೆ. ಆದರೆ ಈ ನೀರಿನ ವಿಚಾರದಲ್ಲಿ ಮಿತವಾಗಿರಬೇಕೆಂದು ಹೇಗೆ ಹೇಳುವುದು? ಬಂದವರು ಅಲ್ಲಿ ಇಲ್ಲಿ ಹೋದಾಗ, 'ಅಯ್ಯೋ! ಅವರ ಮನೆಯಲ್ಲಿ ನೀರಿಗೂ ಬರ' ಎಂದೇನಾದರೂ ಅಂದು ಬಿಟ್ಟರೆ ಇಂಥವರಿಗೆ ಮಾಡಿದ್ದೆಲ್ಲಾ ವ್ಯರ್ಥವಾಗಿ, ಬರೇ ನೀರಿಗೂ ಜಿಪುಣತನ ತೋರಿದರೇ ಈ ಜನ! ಎಂದು ಎಲ್ಲರ ಬಾಯಲ್ಲೂ ಮಾತು ಕೇಳಬೇಕಾದೀತೆಂದು ಮನಸ್ಸು ಮುಜುಗರಗೊಳ್ಳುತ್ತದೆ.

ಓದುವ ಮಕ್ಕಳಿರುವ ಮನೆಗಳಲ್ಲಂತೂ ಹೀಗೆ ನಾಕಾರು ದಿನ ಇರಲು ಬರುವ ಅತಿಥಿಗಳಿಂದ ಮನೆಯವರಿಗಲ್ಲದೆ ಮಕ್ಕಳಿಗೂ ಏನೋ ಕಿರಿಕಿರಿ ಆಗುವುದುಂಟು. ಹೈಸ್ಕೂಲು, ಕಾಲೇಜಿನಲ್ಲಿ ಓದುವ ಮಕ್ಕಳಾದರೆ ಒಂದೈದು ನಿಮಿಷ ಅಥವಾ ಹತ್ತು ನಿಮಿಷ ಮಾತಾಡಿ ತಮ್ಮಷ್ಟಕ್ಕೆ ತಾವು ಓದಿಕೊಳ್ಳಲು ಹೋಗಿ ಬಿಡುತ್ತಾರೆ. ಅವರಿಗೆ ತಮ್ಮ ಓದಿನ ಬಗ್ಗೆ ಜವಾಬ್ದಾರಿ ತಿಳಿದಿರುತ್ತದೆ. ಚಿಕ್ಕ ಪುಟ್ಟ ಕ್ಲಾಸಲ್ಲಿ ಓದುವ, ಅಂದರೆ ಪ್ರೈಮರಿ ಮಿಡಲ್ ಸ್ಕೂಲುಗಳಲ್ಲಿ ಓದುವ ಹುಡುಗರಾದರೆ ಅವಕ್ಕೆ ತಮ್ಮ ದೈನಂದಿನ ವಿಷಯಗಳಲ್ಲಿ ಸ್ವಲ್ಪ ಏರುಪೇರಾಗುವುದರಲ್ಲಿ ಗಮನವಿದ್ದರೂ, ಮನೆಗೆ ಹೊಸಬರೊಬ್ಬರ ಆಗಮನವಾದಾಗ ಅವರು ಹೇಳುವ ಅನೇಕ ವಿಷಯಗಳನ್ನು ತಮಗೆ ಅರ್ಥವಾಗಲೀ ಅರ್ಥವಾಗದಿರಲೀ ಕೇಳಲು ಖುಷಿ ಪಡುತ್ತವೆ. ಹುಡುಗುಬುದ್ಧಿಯಾದ್ದರಿಂದ ಅವಕ್ಕೆ



ಜವಾಬ್ದಾರಿ ಕಡಿಮೆ. ಸ್ಕೂಲಿನ ಹೋಂವರ್ಕ್, ಪಾಠ ಪ್ರವಚನಗಳನ್ನು ಮರೆತು ಹಿರಿಯರ ಮಾತಿಗೆ ಕಿವಿ ನೆಟ್ಟಗೆ ಮಾಡಿ ಕುಳಿತು ಬಿಡುವುದುಂಟು. ಅಂಥಹ ಸಂದರ್ಭದಲ್ಲಿ ತಂದೆ ತಾಯಿಗಳು 'ಹೋಗು, ಓದಿಕೋ' ಎನ್ನುವ ಎಚ್ಚರಿಕೆಯ ಮತುಗಳು ಅವುಗಳ ಕಿವಿ ಹೊರಗೇ ಉಳಿಯುತ್ತವೆ. ಎರಡುಮೂರು ಸಲ ಎಚ್ಚರಿಸಿದರೂ ಎದ್ದು ಹೋಗದಿದ್ದಾಗ ಹುಡುಗರ ಬೆನ್ನಿಗೆ ಎರಡೇಟು ಬಿಗಿದೇ ಅವರನ್ನು ಓದಿಗೆ ತೊಡಗಿಸಬೇಕಾಗುತ್ತದೆ. ಇದರಿಂದ ಅತಿಥಿಗಳಿಗೆ

ಮುಜುಗರವಾಗುವುದುಂಟು. ಒಂದು ದಿನ ಓದಿ ಬರೆಯದಿದ್ದರೆ ಏನು ಮಹಾ!' ಎಂಬ ಧೋರಣೆಯಿಂದ ಅವರು ಹೇಳದಿರುವುದಿಲ್ಲ.

ಈಗಿನ ಕಾಲದ ಪಾಠ, ಪ್ರವಚನ, ಹೋಂವರ್ಕ್, ಹೊರೆಹೊರೆ ಪುಸ್ತಕಗಳಿಂದ ಮೂರು ನಾಲ್ಕು ಭಾಷೆಯ ಬೋಧನೆಗಳು, ಆ ಚಿಕ್ಕ ಮಕ್ಕಳ ತಲೆಗೆ ಬೇರೆಬೇರೆ ಭಾಷೆಗಳನ್ನು ತುಂಬಿಸಲು ಟೀಚರುಗಳು ಪಡುವ ದುಸ್ಸಾಹಸ, ಅವುಗಳನ್ನೆಲ್ಲಾ ಅರಗಿಸಿಕೊಳ್ಳಲಾಗದ ಚಿಣ್ಣರು ಪಡುವ ಪಾಡು, ಎಲ್ಲವನ್ನೂ ನೆನೆದರೆ ಒಂದೊಂದು ದಿನದ ಪಾಠಗಳೂ ಎಳೆಯ ಬಾಲರಿಗೂ ಎಷ್ಟು ಕಠಿಣ ಎನ್ನಿಸದಿರದು.

ಹೊರಗಿನಿಂದ ಬಂದವರಿಗೆ ಇವು ಅರ್ಥವಾಗದ ವಿಷಯ. ಅವರು ಮನಸ್ಸಿನಲ್ಲಿ, 'ಈಗಿನಿಂದಲೇ ತಮ್ಮ ಮಕ್ಕಳನ್ನು ದೊಡ್ಡ ವಿದ್ವಾಂಸರನ್ನಾಗಿಸಿ ಬಿಡುವ ಹಮ್ಮು ಇವರಿಗೆ ಎಂದುಕೊಳ್ಳಲೂಬಹುದು. ಇಂಥ ಸಂದರ್ಭಗಳನ್ನು ನಿಭಾಯಿಸುವುದು ಹೇಗೆ?

ಈಗಿನ ಕಾಲದಲ್ಲಿ ಮಧ್ಯಮ ವರ್ಗದವರು, ಎಷ್ಟೇ ಕಷ್ಟಕಾರ್ಪಣ್ಯಗಳಿದ್ದರೂ ಎಲ್ಲವನ್ನೂ ಬದಿಗಿರಿಸಿ ಮೊದಲು ಒಂದು ದ್ವಿಚಕ್ರವಾಹನವನ್ನು ಖರೀದಿಸುತ್ತಾರೆ, ಸೆಕೆಂಡ್ ಹ್ಯಾಂಡಿನದಾದರೂ ಸರಿಯೇ! ಅದರ ಬಳಕೆ ಸದಾ ಅಗತ್ಯವಾಗಿರುವುದರಿಂದ, ಅಂದರೆ ಬೆಳಗ್ಗೆ ಸ್ಕೂಲಿಗೆ ಮಕ್ಕಳನ್ನು ಕರೆದುಕೊಂಡು ಹೋಗಿ ಬಿಡುವುದು, ನಂತರ ಮನೆಯಾತ ಆಫೀಸಿಗೆ ಹೋಗಿ ಬರುವುದು, ಮನೆಗೆ ಬಂದ ಮೇಲೆ ತರಕಾರಿ, ಸಾಮಾನು ಏನಾದರೂ ಕೊಳ್ಳಲು ಆಚೆ ಹೋಗಲು ಹೀಗೆ ಅದರ ಉಪಯೋಗ ಇದ್ದೇ ಇರುತ್ತದೆ. ಒಂದು ವೇಳೆ ಇದು ಹೆಚ್ಚು ಬಳಕೆಯಲ್ಲಿಲ್ಲದಿದ್ದರೂ ಮನೆಯಲ್ಲಿ ಒಂದು ಬೈಕಂತೂ ಇದ್ದೇ ಇರುತ್ತದೆ. ಇದು ಖಂಡಿತ ತಪ್ಪಲ್ಲ. ಈಗಿನ ಕಾಲದಲ್ಲಿ ಗಂಟೆಗಟ್ಟಲೆ ಸಿಟಿ ಬಸ್ಸಿಗಾಗಿ ಕಾಯುವುದೆಂದರೆ ಅದೊಂದು ಸಾಹಸದ ಕಾರ್ಯವೇ ಸರಿ. ಮನೆಗೊಂದು ಬೈಕಿರುವುದು ವಿಹಿತ. ಮತ್ತೂ ಕೆಲವರು ತಮಗೆ ಅಸಾಧ್ಯವೆನಿಸಿದರೂ ಹೇಗೋ ತಿಪ್ಪರಲಾಗ ಹಾಕಿಯಾದರೂ ಕಾರನ್ನೇ ಕೊಂಡು ತಮ್ಮ ಪ್ರತಿಷ್ಠೆ ಮೆರೆದದ್ದೂ ಇಲ್ಲದಿಲ್ಲ. ಎಲ್ಲಾ ಅವರವರ ಇಷ್ಟಕ್ಕೇ ಬಿಟ್ಟ ವಿಷಯ ಅನ್ನಿ.

ನಮ್ಮ ಮನೆಯ ವಿಷಯ ಹೇಳಬೇಕೆಂದರೆ ಸಧ್ಯಕ್ಕೆ ಬಹಳ ದಿನಗಳ ಹಿಂದೆ ಕೊಂಡ ಒಂದು ಹಳೇ ಬೈಕಿದೆ. ಮೇಲೆ ಹೇಳಿದಂತೆ, ಬಿಡುವಿಲ್ಲದ ದುಡಿತದಿಂದ ಅದು ಜರ್ಜರಿತವಾಗಿದೆ. ತಿಂಗಳು ಎರಡು ತಿಂಗಳಿಗೊಂದು ಸಲ ಅದು ರಿಪೇರಿಗೂ



ಹೋಗುವುದಿದೆ. ಮನೆಗೆ ಅತಿಥಿಗಳು ಆಗಮಿಸಿದರಂತೂ ಬೈಕಿಗೆ ಡಬ್ಬಲ್ ಡ್ಯೂಟಿ ಆರಂಭವಾಗಿ ಬಿಡುತ್ತೆ. ಮನೆಯವರು ಆಫೀಸಿನಿಂದ ಬಂದದ್ದೇ ತಡ, 'ಏನಯ್ಯಾ, ನನ್ನನ್ನು ಸ್ವಲ್ಪ ಚೆನ್ನಪ್ಪನ ಮನೆಗೆ ಕರೆದುಕೊಂಡು

ಹೋಗಬೇಕಪ್ಪಾ, ಅವನಲ್ಲಿ ನನಗೊಂದು ಅರ್ಜೆಂಟು ಕೆಲಸವಿದೆ' ಎಂದು ರಾಗ ಎಳೆಯುತ್ತಾರೆ, ಅತಿಥಿ ಮಹಾಶಯರು.

ಬೆಳಗ್ಗಿನಿಂದ, ತಿಂದುಂಡು ಮಧ್ಯಾಹ್ನ ಮುಸುಕಿಟ್ಟು ಮಲಗಿದ ಈ ಮಹಾರಾಯರಿಗೆ ಆಗಲೇ ಹೋಗಿ ಈ ಚೆನ್ನಪ್ಪನ್ನ ಕಂಡು ಬರಲಾಗುತ್ತಿರಲಿಲ್ಲವೇ? ಎಂದು ಮೈ ಪರಚಿಕೊಳ್ಳುವಷ್ಟು ಸಿಟ್ಟು ಬರುತ್ತದೆ. ಆದರೂ ಸಮಾಧಾನದ ಮುಖವಾಡ ಧರಿಸಿ, 'ಆಗಲಿ ಹೋಗೋಣ' ಎಂದು ಹೇಳಲೇಬೇಕಾಗುತ್ತದೆ.

ಈಗಿನ ಕಾಲದಲ್ಲಿ ಕೆಲಸವಿಲ್ಲದೆ ಅಥವಾ ಕಾರಣವಿಲ್ಲದೆ ಒಬ್ಬರ ಮನೆಗೆ ಒಬ್ಬರು ಹೋಗಿ ಬರುವುದೇ ಅಪರೂಪ. ಅದಕ್ಕೆ ಕಾರಣವೆಂದರೆ ಪ್ರತಿಯೊಬ್ಬರೂ ಬೆಳಿಗ್ಗೆ ಕೆಲಸಕ್ಕೆ ಹೋದರೆ ಸಂಜೆ ಮನೆಗೆ ಬರುವವರು. ಮನೆಗಳಲ್ಲೂ ತರಕಾರಿ, ಸಾಮಾನು ಸರಂಜಾಮು ತರಲೆಂದು ಆಚೆ ಹೋಗಿ ಬಂದರೆ ಸ್ವಲ್ಪ ಕಾಲ ಟಿ.ವಿ. ಅದೂ ಇದೂ ಎಂದು ಕಾಲ ಸರಿ ಹೋಗಿ ಬಿಡುತ್ತದೆ ಹಾಗೂ ಏನಾದರೂ ಕಾಣಲೇಬೇಕಾದರೆ ಒಂದು ಕಡೆಯಿಂದ ಒಂದು ಕಡೆಗೆ ಹತ್ತು ಕಿಲೋಮೀಟರ್ ಕ್ರಮಿಸಿ ಹೋಗುವುದಕ್ಕಿಂತ, ಫೋನಿದ್ದರೆ ಒಂದು ಫೋನು ಕುಕ್ಕಿ ಮಾತಾಡುವುದು ಎಷ್ಟು ವಿವೇಕ! ಇದು ಎಲ್ಲರೂ ಕಂಡುಕೊಂಡ ಸುಲಭೋಪಾಯ. ಇದರಿಂದ ಯಾರೂ ಅನ್ಯಥಾ ಭಾವಿಸುವವರಲ್ಲ. ಎಲ್ಲರ ಪರಿಸ್ಥಿತಿಯೂ ಒಂದೇ ತಾನೇ.

ಹೊರಗಿನಿಂದ ಬಂದವರಿಗೆ ಈ ಪದ್ಧತಿ ಹೊಂದುವುದಿಲ್ಲ. ಅವರು ತಾವು ನೋಡಬೇಕಾದವರನ್ನು ಎದುರಿಗೆ ನೋಡಿ ಸಂದರ್ಶಿಸಿ, ಹೇಳಬೇಕಾದ್ದನ್ನು ಹೇಳಿ, ಕೇಳಬೇಕಾದ್ದನ್ನು ಕೇಳಿ, ಊರ ವಿದ್ಯಮಾನವನ್ನೆಲ್ಲಾ ಹರಟೆ ಹೊಡೆದು, ಅವರು ಮಾಡಿಕೊಟ್ಟಿದ್ದನ್ನು ಸಂತೋಷವಾಗಿ ಸ್ವೀಕರಿಸಿ, ಅಲ್ಲಿಂದ ಹೊರಟು ಬಂದಾಗಲೇ ಸಮಾಧಾನ

ಹೀಗೆ ತಮಗೆ ಬೇಕಾದವರು ಬೇಡವಾದವರೆನ್ನದೆ ತಿಳಿದವರೆಲ್ಲರ ಮನೆಗೂ ಮನೆಯಾತ ಸಂಜೆ ಕೆಲಸದಿಂದ ಹಿಂದಿರುಗಿ ಬಂದ ಮೇಲೆ, ಹೋಗಿ ಕಂಡುಬರುವ ಚಪಲ ಕೆಲ ಅತಿಥಿಗಳಿಗೆ, ಆಯಾಸವಿಲ್ಲದೆ, ಬಸ್ಸಿಗೆ ಕಾಯುವ ತಾಪತ್ರಯವಿಲ್ಲದೆ, ನಿರಾಯಾಸವಾಗಿ ಸ್ಕೂಟರಲ್ಲಿ ಹೋಗುವುದರಲ್ಲಿ ಯಾರಿಗೆ ಸಂತೋಷವಿಲ್ಲ. ಆದರೆ ಇಂತಹ ಅತಿಥಿಗಳಿಂದ ಮನೆಯ ಅನೇಕ ಕೆಲಸ ಕಾರ್ಯಗಳಿಗೆ ತೊಂದರೆ, ಅಲ್ಲದೆ, ಮನೆಯಾತ ತನಗಿಷ್ಟವಿಲ್ಲದಿದ್ದರೂ ಯಾರದೋ ಮನೆಗೆ ಭೇಟಿ ಕೊಡುವುದಂತೂ ಆತನಿಗೆ ಒಗ್ಗದ ವಿಚಾರ. ಆದರೂ ಕೆಲ ಅತಿಥಿಗಳು ಭಂಡರಿರುತ್ತಾರೆ. ಎಲ್ಲಾ ತಿಳಿದೂ ತಮ್ಮ ಸೌಲಭ್ಯಗಳನ್ನಷ್ಟೇ ಅವರು ಯೋಚಿಸುವರು.

ಒಂದು ಬಾರಿ ನಮ್ಮ ಮನೆಗೆ ಒಬ್ಬರು ಅತಿಥಿಗಳು ಬಂದರು. ಅಂದು ಶನಿವಾರ. ಆಫೀಸು, ಸ್ಕೂಲು ಎಲ್ಲವೂ ಒಪ್ಪತ್ತೇ ಇರುವುದರಿಂದ ಅಂದಿನ ಊಟ ತಿಂಡಿಗಳಲ್ಲಿ

ಸ್ವಲ್ಪ ವ್ಯತ್ಯಾಸವಿರುತ್ತದೆ. ಬೇಗ ಬೇಗ ಅಡಿಗೆ ಮಾಡುವ ಅಗತ್ಯವಿರುವುದಿಲ್ಲ. ತಿಂಡಿ ಮಾಡಿ ಎಲ್ಲರನ್ನೂ ಕಳುಹಿಸಿಬಿಟ್ಟರೆ, ಅಡಿಗೆ ನಿಧಾನವಾಗಿ ಮಾಡಬಹುದು. ಎಷ್ಟು ನಿಧಾನವೆಂದರೂ ಅಭ್ಯಾಸ ಬಲದಿಂದ ಹನ್ನೆರಡಕ್ಕೆಲ್ಲಾ ಅಡಿಗೆ ಆಗೇ ಬಿಡುತ್ತದೆ. ಬಂದ ಅತಿಥಿಗಳು ನಮ್ಮ ದೂರದ ಬಳಗವೂ ಆಗಿದ್ದುದರಿಂದ ಅವರನ್ನು ಕಂಡು ನನಗೆ ಸಂತೋಷವೇ ಆಯಿತು. ಹುಡುಗರು ಸ್ಕೂಲಿಂದ ಬರುವ ವೇಳೆ ಹನ್ನೆರಡು ಗಂಟೆ ಸಮಯ. ಬಂದವರಿಗೆ ಕಾಫಿ ಮಾಡಿಕೊಟ್ಟೆ. 'ಊಟಕ್ಕೇಳಿ' ಎಂದು ಹೇಳಿದಾಗ, "ಮಕ್ಕಳೂ ನಿನ್ನ ಗಂಡ ಬರಲಮ್ಮ ಏನವಸರವಿಲ್ಲ' ಎಂದು ಪೇಪರು ಓದುತ್ತಾ ಕುಳಿತರು. ಸ್ವಲ್ಪ ಸಮಯದಲ್ಲೇ ಎಲ್ಲರೂ ಬಂದಾಯಿತು. ಎಲ್ಲರಿಗೂ ತಟ್ಟೆಯಿಟ್ಟು ಅತಿಥಿಗಳು ಹಿರಿಯರಾದರಿಂದ ಅವರಿಗೆ ಎಲೆ ಹಾಕಿ, ಎಲ್ಲರನ್ನೂ ಊಟಕ್ಕೆಬ್ಬಿಸಿದೆ.

ಮನೆಯವರೂ ಹಿರಿಯರು ಬಂದಿದ್ದರಿಂದ ಸಂತೋಷ ವ್ಯಕ್ತಪಡಿಸಿದರು. 'ನಮಗಾಗಿ ಇಷ್ಟು ಹೊತ್ತು ಏಕೆ ಕಾದಿದ್ದು? ಊಟ ಮಾಡಿಬಿಡಬೇಕಾಗಿತ್ತು' ಎಂದು ಉಪಚರಿಸಿದರು. ನೀನೂ ಬರಲೀ ಜೊತೆಗೇ ಊಟ ಮಾಡೋಣ ಎಂದು ಕಾದೆ. ಎಲ್ಲರೂ ಒಟ್ಟಾಗಿ ಕೂಡೋಣ ಬಾ' ಎಂದು ಉಪಚರಿಸುತ್ತಾ ಎಲೆ ಮುಂದೆ ಕುಳಿತರು ಮಾಮ(ನಮ್ಮಲ್ಲಿ ಹಿರಿಯರಾದರೆ ಮಾಮ ಎನ್ನುವ ರೂಢಿಯಿದೆ). ನಮ್ಮ ಮನೆಯಲ್ಲಿ ಹುಳಿ ಮಾಡಿದರೆ ಸಾರು ಮಾಡುವ ಪದ್ಧತಿಯಿಲ್ಲ. ಹುಡುಗರೂ ಸಹಾ ಸಾರನ್ನು ಹಾಕಿಸಿಕೊಳ್ಳುವುದಿಲ್ಲ. ಆದ್ದರಿಂದ ನಾನು ಅಚ್ಚುಕಟ್ಟಾಗಿ, ಹುರಿದು ಅರೆದು, ತುಂಬಾ ತರಕಾರಿ ಹಾಕಿ ಹುಳಿ ಮಾಡಿದರೆ ಸಾರು ಮಾಡುವುದೇ ಇಲ್ಲ.

ಅಂದು ಶನಿವಾರವಾದ್ದರಿಂದ ಅಡಿಗೆಗೆ ಅವಸರವಿರಲಿಲ್ಲ. ಆದ್ದರಿಂದ ಸಣ್ಣ ಈರುಳ್ಳಿಯನ್ನು ನಿಧಾನವಾಗಿ ಸುಲಿದು, ಅದರ ಜೊತೆಗೆ ಆಲೂಗಡ್ಡೆ, ಬದನೇಕಾಯಿ ಹಾಕಿ ಹುಳಿ ಮಾಡಿದ್ದೆ. ಎಲ್ಲರಿಗೂ ಅನ್ನ ಬಡಿಸಿ, ತುಪ್ಪ ಬಡಿಸಿದೆ. ನಾವು ದಿನಾ ತುಪ್ಪ ಬಡಿಸಿಕೊಳ್ಳುವುದಿಲ್ಲ. ಅದರ ಬದಲು ಈಗ ಡಾಕ್ಟರುಗಳು ಹೇಳುವಂತೆ ತುಂಬಾ ತರಕಾರಿ, ಸ್ವಲ್ಪ ಹಣ್ಣು ತಿನ್ನುವುದು ಪದ್ಧತಿ. ತುಪ್ಪ ಇರುತ್ತದೆಯಾದರೂ ಅದನ್ನು ಬಳಸುವುದು ಅಪರೂಪವಾಗಿ ಮಾತ್ರ ಈ ದಿನ ಮಾಮ ಬಂದಿದ್ದರಿಂದ ತುಪ್ಪ ಬಡಿಸಲೇಬೇಕು. ಅನ್ನದ ಮೇಲೆ ತುಪ್ಪ ಹಾಕಿದ ನಂತರ, ಪರಿಶೇಚನ ಎಂದು ಕೈಲಿ ನೀರು ಬಗ್ಗಿಸಿಕೊಂಡು ಅನ್ನದ ಎಲೆಗೆ ಪ್ರದಕ್ಷಿಣೆ ಬಳಸಿ ಮೊದಲು ಮೂರು ಸಲ ದೈವವನ್ನು ನೆನೆಸಿ ಸ್ವಾಹಾ ಎಂದು ಅರ್ಪಿಸಿದ ಬಳಿಕ ಊಟದ ಆರಂಭ. ಇದು ಬ್ರಾಹ್ಮಣ ಗಂಡಸರಲ್ಲಿ ಮುಂಜಿ ಆದಾಗಿನಿಂದ ಊಟ ಮಾಡುವ ವಿಧಾನ. ಮಾಮ ಪರಿಶೇಚನ ಮಾಡಿ ಅನ್ನ ಕಲಸಿದರು. ನಾನು ಎಲ್ಲರಿಗೂ ಹುಳಿ ಬಡಿಸಿದಂತೆ ಅವರಿಗೂ ಬಡಿಸಿದೆ. ಅವರು ವಾಸನೆಯಿಂದ ಅದು ಈರುಳ್ಳಿ ಸಾಂಬಾರ್ ಎಂದು ತಿಳಿದು, 'ಏನಮ್ಮಾ ಈರುಳ್ಳಿ ಸಾಂಬಾರೇ? ನನಗಿವೊತ್ತು ಶನಿವಾರ, ಒಪ್ಪಿತ್ತು. ನಾನು ಈ ದಿನ ಈರುಳ್ಳಿ ತಿನ್ನೋಲ್ಲಮ್ಮ' ಎಂದು ಸುಮ್ಮನೆ ಕುಳಿತರು.

ನಾನೋ ಸಾರು ಮಾಡಿಲ್ಲ. ಮತ್ತೇನು ಬಡಿಸಲಿ? ಸಾರು ಮಾಡಿಲ್ಲ ಎಂದು ಹೇಳಲು ಬಲು ಸಂಕೋಚವಾಯಿತು.

ನಾನು, 'ಆ ಎಲೆಯ ಮೇಲೆ ಇನ್ನೊಂದು ಎಲೆ ಹಾಕಿ ಅನ್ನ ಬಡಿಸುತ್ತೇನೆ. ಸ್ವಲ್ಪ ಉಪ್ಪಿನಕಾಯಿ ರಸದಲ್ಲಿ ತಿಂದು, ಮತ್ತೆ ಮೊಸರನ್ನು ಹಾಕಿಸಿಕೊಳ್ಳಿ' ಎಂದೆ.

ಮಾಮ, ಎಲ್ಲಾದರೂ ಉಂಟೇನಮ್ಮಾ, ಎರಡು ಎಲೆ ಹಾಕಿ ಊಟ ಮಾಡುವ ದಿನವೇ ಬೇರೆ. 'ಬಿಡ್ತು ಅನ್ನು. ಹಾಗೆಲ್ಲಾ ಹೇಳಬಾರದು. ಅದು ನಿಷಿದ್ಧ. ಒಂದೇ ಎಲೆಯಲ್ಲೇ ಒಂದು ಕೊನೆಗಿಷ್ಟು ಅನ್ನ ಬಡಿಸಿ, ಮೊಸರು ಬಡಿಸಿಬಿಡಮ್ಮ' ಎಂದರು.

ನಾನು, 'ಆ ಎಲೆ ಬೇಡವೇ ಬೇಡ. ಈ ಕಡೆ ಬನ್ನಿ, ಬೇರೆ ಎಲೆ ಹಾಕಿ ಬಡಿಸುತ್ತೇನೆ' ಎಂದೆ. ಅದಕ್ಕೂ ಮಾಮ ಒಪ್ಪಲಿಲ್ಲ. ಈ ದಿನ ಶನಿವಾರ ಎಂದೆನಲ್ಲ. ಒಂದು ಸಲ ಎಲೆ ಮುಂದೆ ಕುಳಿತು ಪರಿಶೇಚನ ಮಾಡಿದ ಮೇಲೆ ಮತ್ತೊಂದೆಲೆಯಲ್ಲಿ ಕೂತು ಊಟ ಮಾಡಿದರೆ, ಎರಡು ಸಲ ಉಂಡಂತಲ್ಲವೇನಮ್ಮಾ, ನೀನೇ ಹೇಳು' ಎಂದರು. ನನಗೆ ಅದೂ ನಿಜವೆನ್ನಿಸಿ ಅವರು ಹೇಳಿದಂತೆಯೇ ಅದೇ ಎಲೆ ಕೊನೆಗೆ ಒಂದಷ್ಟು ಅನ್ನ ಬಡಿಸಿ ಮೊಸರು ಹಾಕಿ ಉಪ್ಪಿನಕಾಯಿ ಎಲೆ ತುದಿಗಿಟ್ಟೆ. ಇಷ್ಟಾಗುವ ವೇಳೆಗೆ ನಮ್ಮ ಮನೆಯವರೆಲ್ಲರದೂ ಊಟವಾಗಿತ್ತು. ರಾತ್ರಿಯಾದರೂ ನಿಧಾನವಾಗಿ ಸರಿಯಾಗಿ ಫಲಾರ ಮಾಡಲೆಂದು ದಿನಾ ಮಾಡುವುದಕ್ಕಿಂತಲೂ ಹೆಚ್ಚು ಮುತುವರ್ಜಿಯಿಂದ ಚಪಾತಿ, ಚಟ್ನಿ ಮಾಡಿದೆ.

ಸಂಜೆ ಸಂಧ್ಯಾವಂದನೆ ಮಾಡಿದ ಮಾಮ ಸ್ವಲ್ಪ ಹೊತ್ತು ಟಿವಿ ನೋಡುತ್ತಿದ್ದರು. ನಾನು, 'ಮಾಮ, ಚಪಾತಿ ಮಾಡಿದ್ದೀನಿ. ಬಿಸಿ ಆಗಿರುವಾಗಲೇ ಫಲಾರ ಮಾಡಿಬಿಡಿ. ಬೆಳಿಗ್ಗೆಯೂ ಸರಿಯಾಗಿ ಊಟ ಮಾಡಲಿಲ್ಲ' ಎಂದು ಕಳಕಳಿಯಿಂದ ಹೇಳಿದೆ. ಮಾಮ, 'ಊಟದ್ದೊಂದು ವಿಚಾರವೇನಮ್ಮಾ! ಆಯಿತಲ್ಲ ಮೊಸರನ್ನ ತಿನ್ನಲಿಲ್ಲವೇ. ಅದೇ ಅಮೃತದಂತಿತ್ತು. ಈಗ ನನಗಾಗಿ ಚಪಾತಿ ಮಾಡಿದೆಯಾ? ನಾನು ಒಪ್ಪೊತ್ತಿನ ದಿನಗಳಲ್ಲಿ ಏನೂ ತೆಗೆದುಕೊಳ್ಳುವುದಿಲ್ಲಮ್ಮ' ಎಂದು ಹೇಳಿ ಒಂದು ಚೊಂಬು ನೀರು ಕುಡಿದು ನಿರಾಳವಾಗಿ ಮಲಗಿ ಬಿಟ್ಟರು. ವಿಶ್ವಾಸದ ಅತಿಥಿಗಳು ಅವರಾಗಿದ್ದರೂ, ಮನಸ್ಸಿಗಂತೂ ಕಿರಿಕಿರಿಯಾಯಿತು. ಅವರಿಗಾಗಿ ಮಾಡಿದ್ದರೂ ಚಪಾತಿಯೇನೂ ದಂಡವಾಗಲಿಲ್ಲ! ಮನೆಯಲ್ಲಿ ಚಪಾತಿ, ಸಾಂಬಾರ್ ತಿನ್ನುವುದೆಂದರೆ ಎಲ್ಲರಿಗೂ ಇಷ್ಟವೇ! ಆದರೂ ಮನೆಗೆ ಬಂದವರು ಉಪವಾಸವಿದ್ದು, ನಾವು ಊಟ ಮಾಡಬೇಕಾದಾಗ ಮನಸ್ಸಿಗೆ ಮುಜುಗರವೇ ಆಯಿತು. ಮನೆಯವರು ಮಾಮನಿಗೆ, ಒಂದು ಲೋಟ ಹಾಲನ್ನಾದರೂ ಕುಡಿದು ಮಲಗಿ' ಎಂದು ಎಷ್ಟು ಬಲವಂತಪಡಿಸಿದರೂ ಏನೂ ಪ್ರಯೋಜನವಾಗಲಿಲ್ಲ. ನಾವು ಊಟಕ್ಕೆ ಕೂಡುವ ವೇಳೆಗೆ ಮಾಮ ಮಲಗಿ ಗೊರಕೆ ಹೊಡೆಯುತ್ತಿದ್ದರು.

ಹಾಲು ಎಂದೊಡನೆಯೇ ಮತ್ತೊಂದು ನೆನಪಾಗುತ್ತಿದೆ. ಎಲ್ಲಾ ವಸ್ತುಗಳೂ ಬೆಲೆ ಏರಿದಂತೆ ಹಾಲೂ ಸಹ ಬಹಳ ದುಬಾರಿಯಾಗಿ ಏರಿ ಹೋಗಿದೆ. ಇದು ಎಲ್ಲರೂ ತಿಳಿದ ಸಂಗತಿಯೇ ಆಗಿದೆ. ಅಪರೂಪಕ್ಕೆ ಯಾರಾದರೂ ಮಕ್ಕಳೊಡನೆ



ಅಂದರೆ ಚಿಕ್ಕವೇನಲ್ಲ, ಹದಿನಾರು-ಹದಿನೆಂಟರ ಮಕ್ಕಳಾದರೂ-ಬಂದರೆ, ಅವಕ್ಕೆ ಹಾಲು ಕುಡಿದೇ ಅಭ್ಯಾಸ' ಎಂದು ನಿಸ್ಸಂಕೋಚವಾಗಿ ತಮ್ಮ ಮಕ್ಕಳಿಗೆ ಹಾಲೇ ಆಗಬೇಕೆಂದು ತಿಳಿಸುತ್ತಾರೆ. ಒಂದು ಹೊತ್ತಲ್ಲ, ಎರಡು ಹೊತ್ತು. ಅದೂ ಎಳೆ ಮಕ್ಕಳಂತೆ ಅರ್ಧ ಲೋಟದಷ್ಟು ಕೊಡಲಾಗುವುದಿಲ್ಲ. ದೊಡ್ಡ ಹುಡುಗರಾದ್ದರಿಂದ ಭರ್ತಿ ಒಂದು ಲೋಟ ಕೊಡಲೇಬೇಕು. ಹೀಗೆ ಎರಡು ಮೂರು ದಿನ ಸುಧಾರಿಸುವುದರಲ್ಲಿ ಮನೆಯವರಿಗೆ ಸುಸ್ತೋ ಸುಸ್ತು. ಇದೊಂದು ತರಹ ಧಿಮಾಕಿನಿಂದಲೇ ಎಲ್ಲವನ್ನೂ ಮಾಡಿಸಿಕೊಳ್ಳುವ ಅತಿಥಿಗಳ ವರಸೆ.

ಮಾರನೆಯ ದಿನ ಬೆಳಿಗ್ಗೆ ಐದು ಗಂಟೆಗೇ ಎದ್ದ ಮಾಮ, ಸ್ನಾನ ಸಂಧ್ಯಾವಂದನೆ ಮಾಡಿ ಒಂದು ಲೋಟ ಕಾಫಿ ಕುಡಿದು ಹೊರಟು ಬಿಟ್ಟರು.

ಹೊರಡುವಾಗ ಅವರು, ನನ್ನ ಮೊಮ್ಮಗನಿಗೆ ಇಂಜಿನಿಯರಿಂಗ್ ಸೀಟಿಗೆ ಅಪ್ಪೆ ಮಾಡಿತ್ತು. ಅದಕ್ಕಾಗಿ ನನಗೆ ತಿಳಿದವರೊಬ್ಬರು, ಭಾನುವಾರ ಬೆಳಿಗ್ಗೆ ಎಂಟು ಗಂಟೆಗೆ ಬನ್ನಿ' ಎಂದು ತಿಳಿಸಿದ್ದರು. ಅವರನ್ನು ನೋಡಿಕೊಂಡು ಹಾಗೇ ಊರಿಗೆ ಹೊರಟು ಬಿಡ್ತೀನಿ' ಎಂದು ಹೇಳಲು ಮರೆಯಲಿಲ್ಲ.

ಅತಿಥಿಗಳಲ್ಲಿ ಅನೇಕ ವಿಧ. ಕೆಲವರು, ನನಗೆ ಆ ತರಕಾರಿ ಮೈಗಾಗುವುದಿಲ್ಲ, ಎಂದರೆ ಮತ್ತೆ ಕೆಲವರು, 'ಅಯ್ಯೋ! ಇದನ್ನು ನಾನು ಕಾಶಿಯಲ್ಲಿ ಬಿಟ್ಟು ಬಂದಿದ್ದೇನೆ' ಎಂದುದೂ ಉಂಟು. ಅಂದು ನಾನು ಗೋರಿಕಾಯಿ ಪಲ್ಯ ಮಾಡಿದ್ದೆ. ಅತಿಥಿಗಳು ಗೋರಿ ಕಾಯಿಯನ್ನು ಕಾಶಿಗೊಪ್ಪಿಸಿ ಬಂದಿದ್ದರಂತೆ. ಹಾಗೆಂದು ಹೇಳಿ ಬರೀ ತಿಳಿಸಾರು ಉಂಡರು. ತಕ್ಷಣಕ್ಕೆ ಏನು ಮಾಡಲು ಸಾಧ್ಯ? ಹೀಗೇ ಬರೆಯುತ್ತಾ ಹೋದರೆ ಇದು ಒಂದು ಪುಸ್ತಕದ ಹೊರೆಯೇ ಆದೀತು, ಅನ್ನಿ!

**(“ಕಣ್ಣಿಗೆ ಕಂಡಷ್ಟು, ನೆಲಮನೆ ಪ್ರಕಾಶನ, ಶ್ರೀರಂಗಪಟ್ಟಣ, ೨೦೦೦)**

## ೧೧. ನಾ ದೇವರು!

**ಶೈಲಾ ಛಬ್ಬಿ**

**ತಾಯಿ ದೇವರೆಂದು ವೇದ ಬಾಯಿ ಬಿಟ್ಟು ಹೇಳುತಿಹುದು |**

**ತಾಯಿ ದೇವರೆಂದು ತಿಳಿದವರೆಲ್ಲರೊರೆವರು ||**

ಎಂಬ ಪದ್ಯ ತಾಯಿಯ ಮಹಿಮೆಯನ್ನು ಸಾರಿ ಹೇಳುತ್ತದೆ. ಮಾತೃದೇವ, ಪಿತೃದೇವ, ಗುರುದೇವ, ಅತಿಥಿದೇವ ಇವೆಲ್ಲ ಪ್ರಚಲಿತ ಶಬ್ದಗಳೇ. ಆದರೆ 'ನಾಯಿದೇವ' ಎಂಬ ಹೊಸ ಶಬ್ದ ಯಾವುದಪ್ಪ ಎಂದು ಕೆಲವರು ಯೋಚಿಸಿದರೆ, ಮತ್ತೆ ಕೆಲವರು ಇದೇನಿದು ತಾಯಿದೇವರೆಂದು ಬರೆವಾಗ ಮುದ್ರಾರಾಕ್ಷಸನ ದಾಳಿಗೆ ಒಳಗಾಗಿ 'ನಾಯಿದೇವರು' ಎಂದಾಗಿರಬಹುದೇ ಎಂದೂ ಭಾವಿಸಬಹುದು. ಮಡಿವಂತರು ಈ ಶೀರ್ಷಿಕೆಯನ್ನು ಕಂಡು ಕೆಂಡಾಮಂಡಲರಾಗಿರಬಹುದು. ನಾಯಿ ಮೈಲಿಗೆ ಎಂದು ತಿಳಿದು ಮಾರು ದೂರ ಹಾರುವವರು ನನಗೆ ಹಿಡಿಶಾಪ ಹಾಕಿಯಾರು. ಆದರೆ ನಾನೇನು ಮಾಡಲಿ? ನಮ್ಮ ಮನೆಯ ವಸ್ತುಸ್ಥಿತಿಯನ್ನೇ ನಿಮ್ಮ ಮುಂದಿಟ್ಟಿದ್ದೇನೆ. ನಮ್ಮ ಮನೆಯಲ್ಲಿ ನಾಯಿಯೇ ದೇವರು!

ನಾನು ಮದುವೆಯಾಗಿ ಅತ್ತೆ ಮನೆ ಸೇರಿದಾಗ ಇಲ್ಲಿ ನಾಯಿಮರಿ ಇದ್ದದ್ದು ಕಂಡು ಹೌಹಾರಿದ್ದೆ. ನನಗೆ ನಾಯಿ ಕಂಡರೆ ಆಗದು. ಅದನ್ನು ಮುಟ್ಟುವುದಂತೂ ದೂರದ ಮಾತು. ಅದು ಮೊದಮೊದಲು ನನ್ನ ನೋಡಿ ಗುರುಗುಟ್ಟಿದರೂ ಕ್ರಮೇಣ ನಾನೂ ಮನೆಯ ಒಬ್ಬ ಸದಸ್ಯೆ ಎಂದು ಒಪ್ಪಿಕೊಂಡಿತು. ಮುಂದೆ ಅದು ನನ್ನ ಬೆನ್ನು ಹತ್ತಿ ಅಡ್ಡಾಡತೊಡಗಿದಾಗಲಂತೂ ನಾನು ಹೆದರಿ ಕಿರುಚುತ್ತಿದ್ದೆ. ಇಲ್ಲವೇ ಕುರ್ಚಿಯೋ ಮಂಚವೋ ಸೋಫಾನೋ ಏರಿ ನಿಲ್ಲುತ್ತಿದ್ದೆ. ಅದು ಏನೂ ಮಾಡುವುದಿಲ್ಲ ಎಂದು ಎಲ್ಲರೂ ಸಮಾಧಾನಪಡಿಸಿ ಇಳಿಸುತ್ತಿದ್ದರು. ನಾನು ಇಳಿಯುತ್ತಲೂ ಅದು ನನ್ನ ಸುತ್ತ ಸುಳಿಯುತ್ತ ಕಾಲುಕಾಲಲ್ಲಿ ಅಡ್ಡಾಡುತ್ತ ಕೊನೆಗೆ ಕಾಲು ತಬ್ಬಿಕೊಂಡು ಬಿಡುತ್ತಿತ್ತು. ಇದೊಳ್ಳೆ ಪೀಕಲಾಟ ಬಂತಲ್ಲಾ, ಯಾಕಾದರೂ ನಾಯಿ ಸಾಕಿದ ಗಂಡನನ್ನು ಮಾಡಿಕೊಂಡೆ ಎಂದು ಪೇಚಾಡುತ್ತಿದ್ದೆ (ಗಂಡನನ್ನೇ ನಾಯಿಯಂತೆ ನೋಡಿಕೊಳ್ಳುವ ಹೆಂಡಿರಿದ್ದಾರೆ. ಆ ಮಾತು ಬೇರೆ.) ನಮ್ಮವರಿಗಂತೂ ನಾಯಿಯೆಂದರೆ ಪಂಚಪ್ರಾಣ. ಬಾಟ್ಲಿ ಹಾಲು ಕುಡಿಸಿ ಅದನ್ನು ಬೆಳೆಸಿದ್ದರಂತೆ. ಈಗ ತಾವೇ ತುತ್ತು ಮಾಡಿ ಕೆನೆಹಾಲುಅನ್ನ, ಬ್ರೆಡ್ಡು-

ಹಾಲು ತಿನ್ನಿಸುತ್ತಿದ್ದರು. “Familiarity, people say, breeds contempt. Nay, it breeds liking too' ಎಂಬ ರಾಬರ್ಟ್ ಲಿಂಡನ ವಾಣಿಯಂತೆ, ಮೊದಲಿಗೆ ನಾನು ನಾಯಿಯನ್ನು ಇಷ್ಟಪಡದಿದ್ದರೂ, ಅದರ ಸಾನ್ನಿಧ್ಯದಲ್ಲಿದ್ದುಕೊಂಡು ಕಾಲಕ್ರಮೇಣ ಅದನ್ನು ಪ್ರೀತಿಸದಿದ್ದರೂ ಕನಿಷ್ಠ ಸಹಿಸಿಕೊಳ್ಳುವಂತಾದೆ.

ನನ್ನ ಮದುವೆಯಾದ ಹೊಸದರಲ್ಲಿ ನನ್ನ ಅಜ್ಜಿ ಒಮ್ಮೆ ನಮ್ಮ ಮನೆಗೆ ಬಂದಿದ್ದಳು.



ಆಕೆ ಮಡಿ-ಮಡಿ ಎಂದು ಅಡಿಗಡಿ ರುವವಳು. ನಾಯಿ ಮುಟ್ಟಿದರೆ ಅಲ್ಲ, ನೋಡಿದರೂ ಸ್ನಾನ ಮಾಡುವ ಪೈಕಿ. ಆಕೆ ಸ್ನಾನ ಮಾಡಿ ತುಳಸಿಪೂಜೆ ಪೂರೈಸಿ ಪ್ರದಕ್ಷಿಣೆ ಹಾಕತೊಡಗಿದಂತೆ ನಾಯಿಮರಿಯೂ ಅವಳ ಬೆನ್ನ ಹಿಂದೆ ಅಡ್ಡಾಡತೊಡಗಿತು. ಬಹುಶಃ ಅದಕ್ಕೂ ಪ್ರದಕ್ಷಿಣೆ ಹಾಕುವ ಮನಸ್ಸಾಗಿರಬೇಕು. ಅಜ್ಜಿ 'ಹಚ್-ಹುಚ್ ಎಂದು ಗದರಿದರೂ ಅವಳ ಜೊತೆಜೊತೆಗೇ ಇದ್ದು ಕೊನೆಗೂ ಅವಳನ್ನು ಮುಟ್ಟೇ ಬಿಟ್ಟಿತು. 'ಥ ದರಿದ್ರ ನಾಯಿ ಮುಂಡೇದೇ' ಎಂದು ಶಪಿಸುತ್ತ ಆಕೆ ಮತ್ತೆ ಬಚ್ಚಲು ಹೊಕ್ಕಳು.

ನಮ್ಮ ಮದುವೆಯಾಗಿ ಎಷ್ಟೋ ವರ್ಷಗಳು ಕಳೆದ ಮೇಲೂ, ಅಜ್ಜಿ ನಮ್ಮ ಮನೆಗೆ ಬಂದಾಗಲೆಲ್ಲ ನಮ್ಮ ನಾಯಿ ಓಡಿ ಹೋಗಿ ಅವಳನ್ನು ಅಪ್ಪಿಕೊಳ್ಳಬೇಕು ಎಂದು ಹಾತೊರೆಯುತ್ತಿತ್ತು. ಯಾವ ಜನ್ಮದ ನಂಟೋ ಅದಕ್ಕೆ ಅವಳು ಚೀರುತ್ತಿದ್ದಳು ಇಲ್ಲವೆ ಗದರುತ್ತಿದ್ದಳು. ನಾವು ನಾಯಿಯನ್ನು ಹಿಡಿದು ಕಟ್ಟಿದ ಮೇಲೇ ಅವಳು ಕಾಂಪೌಂಡು ಪ್ರವೇಶಿಸುತ್ತಿದ್ದಳು. ಒಮ್ಮೆ ಏನಾಯಿತೆಂದರೆ ನಾಯಿ ಹೇಗೋ ಬಿಚ್ಚಿಕೊಂಡು ಬಂದು ಅವಳನ್ನು ತಬ್ಬಿಕೊಂಡು ಕೆನ್ನೆಗೆ ಮುತ್ತಿಕ್ಕಿ ಬಿಟ್ಟಿತು. ಅವಳೆತ್ತರಕ್ಕೆ ಅದು ನಿಂತಾಗ ಹುಲಿಯೇ ಆಕೆಯನ್ನು ತಬ್ಬಿದಂತೆ ಕಾಣುತ್ತಿತ್ತು. ಇನ್ನು ಆ ನಾಯಿಯನ್ನು ಹೊರಹಾಕುವವರೆಗೆ ತಾನು ನಮ್ಮಲ್ಲಿ ಕಾಲು ಹಾಕುವುದಿಲ್ಲವೆಂದು ತಾಕೀತು ಮಾಡಿ ಹೋದವಳು ಹಾಗೇ ಸ್ವರ್ಗದ ದಾರಿ ಹಿಡಿದೇ ಹೋದಳು ಪಾಪ!

ನಮ್ಮವರಿಗೆ ಕಲ್ಲುದೇವರ ಬಗ್ಗೆ ಇರುವ ಭಕ್ತಿ-ವಿಶ್ವಾಸ ಅಷ್ಟಕ್ಕಷ್ಟೇ. ಅವರು ಜೀವರಲ್ಲೇ ದೇವರನ್ನು ಕಾಣುವವರು. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕುಲದವರು. ಅದರಲ್ಲೂ ನಾಯಿಯೆಂದರೆ ಅವರಿಗೆ ಸಾಕ್ಷಾತ್ ದೇವರೇ, ನಮ್ಮ ನಾಯಿಯ ಹೆಸರು ಬಾಜಿರಾಯ. 'ಬಾಜಿ' ಮುದ್ದಿನ ಹೆಸರು. ಯಾವುದೇ ತಿಂಡಿ- ತಿನಿಸು ಮಾಡಲಿ ಇವರು ಬಾಜಿಗೆ ಮೊದಲ ನೈವೇದ್ಯ ತೋರಿ ಅನಂತರ ತಾವು ತಿನ್ನುತ್ತಾರೆ. ನಾಯಿಯನ್ನು ಹೀಗಳೆದರೆ, ಅದು ದತ್ತಾತ್ರೇಯನ ವಾಹನ, ಅದಕ್ಕೆಲ್ಲಿಯ ಮೈಲಿಗೆ' ಎಂದು ವಾದಿಸುತ್ತಾರೆ. ನಾನು ಚಕ್ಕುಲಿ ಮಾಡುತ್ತಿದ್ದರೆ ಕರಿದು ಇಟ್ಟಂತೆ ಅದು ಕರಗುತ್ತಿರುತ್ತದೆ. ಅರರೆ! ಎಷ್ಟೊಂದು ಮಾಡಿದ್ದೆನಲ್ಲ, ಇಷ್ಟೇ ಉಳಿದಿದೆ ತಟ್ಟೆಯಲ್ಲಿ...!' ಎಂದು ನೋಡಿದರೆ, ಅಲ್ಲಿ ಹೊರಗೆ ಬಾಜಿಗೆ ಭರಪೂರ ಸಮರ್ಪಣೆಯಾಗುತ್ತಿರುತ್ತದೆ. ಮನೆಯಲ್ಲಿ ನಾವಿಬ್ಬರು ಹಾಗೂ

ಮಕ್ಕಳು, ಯಾರೂ ಪೇಡಾ ಇಷ್ಟಪಡದಿದ್ದರೂ ಇವರು 'ನಾನು ತಿನ್ನುತ್ತೇನೆ' ಎನ್ನುತ್ತ ವಾರವಾರವೂ ತರುತ್ತಲೇ ಇರುತ್ತಾರೆ. ನನ್ನೆದುರು ಒಂದು ಚೂರು ಬಾಯಿಗೆ ಹಾಕಿಕೊಂಡಂತೆ ಮಾಡಿ ಹೊರಗೆ ಹೋಗಿ ಉಳಿದ ಮುಕ್ಕಾಲು ಪಾಲನ್ನು ಬಾಜಿಗೆ ತಿನ್ನಿಸುತ್ತಾರೆ. ಬಾಜಿಗೆ ಕರಿದ ಪದಾರ್ಥ, ಬೆಣ್ಣೆ, ತುಪ್ಪ, ಹಾಲು, ಇಡ್ಲಿ ದೋಸೆಗಳೆಂದರೆ ಎಲ್ಲಿಲ್ಲದ ಪ್ರೀತಿ, ಮನೆಯಲ್ಲಿ ನಾಲ್ಕಾರು ದಿನಗಳಿಗಾಗಿ ತಯಾರಿಸಿಟ್ಟ ಕುರುಕಲು ತಿಂಡಿಗಳು, ಉಂಡಿ... ಇತ್ಯಾದಿಗಳು ಎರಡೇ ದಿನದಲ್ಲಿ ಖಾಲಿಯಾಗಿರುತ್ತವೆ. 'ಎಲಾ, ನಾನು ಇನ್ನೂ ತಿಂದೇ ಇಲ್ಲ. ಇಷ್ಟು ಬೇಗ ಮುಗಿಯಿತೇ?' ಎಂದು ಯೋಚಿಸಿದರೆ ಅದೆಲ್ಲ ನಾಯಿ ಪಾಲಾಗಿರುತ್ತದೆ. ತಂದೆಯಂತೆ ಮಕ್ಕಳು. ಎಲ್ಲರೂ ನಾಯಿಗೆ ಹಾಕೇ ತಮ್ಮ ಬಾಯಿಗೆ ಹಾಕುವವರು. ನನ್ನ ಪಾಲಿಗೆ ಮಾತ್ರ



ಖಾಲಿ ಡಬ್ಬಿ ಅರ್ಥಾತ್ ನನ್ನದು ನಾಯಿಪಾಡು ಬಾಜಿಗೆ ದಿನವೂ ಊಟದಲ್ಲಿ ಸಿಹಿ ಬೇಕೇಬೇಕು. ಚಪಾತಿಯೊಂದಿಗೆ ಉಂಡಿ, ಫೇಡೆ ಹೀಗೆ ಯಾವುದೇ ಮಿಠಾಯಿ ಬೆರೆಸಿದ್ದರೂ ಉಣ್ಣಲು ಸೋಗು ಬೇರೆ. ಆಗ ಇವರು ಮತ್ತಿಷ್ಟು ಸಿಹಿ, ತುಪ್ಪ ಇಲ್ಲವೇ ಬೆಣ್ಣೆ ಸುರಿದು ಮಸ್ಕಾ ಹಚ್ಚಿಹಚ್ಚಿ ತಿನಿಸುತ್ತಾರೆ. ನಾನು ತಕರಾರು ಮಾಡಿದರೆ ತಾವು ತಮ್ಮ ಪಾಲಿನ ಬೆಣ್ಣೆ, ತುಪ್ಪ ಮೊದಲಾದವುಗಳನ್ನು ವರ್ಜಿಸಿ ಆ ಪಾಲನ್ನು ನಾಯಕರಿಗೆ ಉಣಬಡಿಸುತ್ತಾರೆ. ಎಂಥ ಹುಚ್ಚುತನ! ಹಾಗೆ ನೋಡಿದರೆ ಮನೆಯಲ್ಲಿ ಬಾಜಿಯೇ ನಮ್ಮ ಮೆನು(Menu) ನಿರ್ಧರಿಸುತ್ತದೆ. ಅದಕ್ಕೆ ಇಷ್ಟವಾಗದ್ದನ್ನು ನಾವು ತಯಾರಿಸುವಂತಿಲ್ಲ. ಅದರ ರುಚಿಯೇ ನಮ್ಮ ರುಚಿ. ಯಾವುದೋ ವ್ಯಂಜನ ನಮಗೆ ಹಿಡಿಸಲಿಲ್ಲವೆಂದು ನಾವು ಬಾಜಿಗೆ ಹಾಕುವಂತಿಲ್ಲ. ನಮಗೇ ಇಷ್ಟವಾಗದ್ದು ಅದಕ್ಕೆ ಹೇಗೆ ಸೇರೀತು? ನಿಮಗೆ ಅರ್ಥವಾಗಿರಬಹುದಲ್ಲವೆ ನಮ್ಮ ನಾಯಕರ ಸ್ಟ್ಯಾಂಡರ್ಡು!

ಬಾಜಿ ಅಲ್ಲಲ್ಲಿ ತನ್ನ ಮೈ ಕೆರೆದುಕೊಳ್ಳುತ್ತಿದ್ದರೆ, 'ಅಯ್ಯೋ, ಪಾಪ! ಬಾಜಿಗ ತುರಸಲಿಕ್ಕ ಹತ್ತೇದ, ಬಾ ಮರಿ, ಬಾ... ನಾ ನಿಂಗ ತುರಸ್ತೇನಿ' ಎನ್ನುತ್ತ ಯಜಮಾನರು ಅದರ ಮೈ ತುಂಬ ತುರಿಸಿ ಸಮಾಧಾನಪಡಿಸುತ್ತಾರೆ. ಒಂದು ದಿನ ನನ್ನ ತಲೆನೋವಿಗೆ ಮುಲಾಮು ಹಚ್ಚಿ ತಿಕ್ಕದ ಈ ಆಸಾಮಿ ನಾಯಿಗೆ ಒಂದು ಚೂರು ತೊಂದರೆಯಾದರೂ ಸೇವೆಗೆ ಸನ್ನದ್ಧ. ಮನೆಯಲ್ಲಿ ಬಾಜಿ ಹಾಗೂ ನಾನು ಒಟ್ಟಿಗೆ ಆರಾಮವಿಲ್ಲದಾಗ ಇವರು ಫ್ಯಾಕ್ಟರಿಯಿಂದ ಬಂದ ತಕ್ಷಣ ಮೊದಲಿಗೆ ವಿಚಾರಿಸುವುದು ನಾಯಿಯ ಯೋಗಕ್ಷೇಮ. ಆನಂತರ ನನ್ನದು. ತಮ್ಮ ಆರೋಗ್ಯವನ್ನೂ ಅಲಕ್ಷಿಸಿ ನಾಯಿಯ ಆರೋಗ್ಯದ ಕಾಳಜಿ, ಸೇವೆ ಮಾಡುತ್ತಾರೆ. ಅದೆಂಥ ವ್ಯಾಮೋಹವೋ! ಇವರು ದೇವರ ಸೇವೆಯನ್ನು ಇಷ್ಟು ಶ್ರದ್ಧೆಯಿಂದ ಮಾಡಿದ್ದರೆ ದೇವರೇ ಪ್ರತ್ಯಕ್ಷನಾಗುತ್ತಿದ್ದನೇನೋ!

ನಮ್ಮಲ್ಲಿ ನಾಯಿಗೆ ಆಗಾಗ ಅಭ್ಯಂಜನ ಸ್ನಾನವಾಗುತ್ತಿರುತ್ತದೆ. ಅದಕ್ಕಾಗಿ ಆರು ಬಕೆಟು ಬಿಸಿ ನೀರಿನ ಸ್ನಾನ (ಬಾಣಂತಿಗೆ ಹಾಕುವ ಹಾಗೆ)! ಕಿಮ್ಮತ್ತಿನ ಸುಗಂಧ ಶಾಂಪೂ, ಮೈಗೆ ಪೂಸಲು ಪರಿಮಳಯುಕ್ತ ಪೌಡರು, ಮಲಗಲು

ವಿಶೇಷ ಹಾಸಿಗೆ. ಅಂತೂ ಬಾಜಿ ಪುಣ್ಯ ಮಾಡಿ ಹುಟ್ಟಿದ್ದಾನೆ. ಹೋದ ಜನ್ಮದಲ್ಲಿ ನಾವು ಅವನ ಋಣ ಇಟ್ಟುಕೊಂಡು ಸತ್ತಿದ್ದೆವೋ ಏನು ಕಥೆಯೋ, ಈ ಜನ್ಮದಲ್ಲಿ ತೀರಿಸುತ್ತಿದ್ದೇವೆ. ಇವರಂತೆ ಇನ್ನೂ ಎಷ್ಟೋ ನಾಯಿಪ್ರಿಯರನ್ನು ನೋಡಿ ನಾನು ದಂಗಾಗಿದ್ದೇನೆ. ನಮ್ಮ ಪರಿಚಿತರೊಬ್ಬರ ಮನೆಯಲ್ಲಿ ಹೆಂಡತಿ ಶ್ವಾನಪ್ರಿಯೆ, ದಿನವೂ ಆ ನಾಯಿ ಈ ಯುವದಂಪತಿಗಳ ಮಧ್ಯ ಮಲಗುತ್ತದೆ. ಅದರ ಯಜಮಾನತಿ ಪಾಯಖಾನೆಗೆ ಹೋದರೂ ಅದು ಅವಳ ಅಗಲಿಕೆಯನ್ನು ತಾಳದೆ ಮಗುವಿನಂತೆ ಹೊರಗೆ ಬಾಗಿಲಲ್ಲೇ ಕಾಯುತ್ತ ಕುಳಿತಿರುತ್ತದೆ. ನಾಯಿಯ ಬಗೆಗಿನ ಅತಿಯಾದ ಮೋಹದಿಂದಾಗಿ ಆಕೆ ತನಗೆ ಮಕ್ಕಳೇ ಬೇಡವೆಂದು ನಿರ್ಧರಿಸಿ ತನ್ನ ಹೆಣ್ಣುನಾಯಿಯ ಜೊತೆಗೊಂದು ಗಂಡು ನಾಯಿಯನ್ನೂ ಸಾಕಿ ಅವನ್ನೇ ಮಕ್ಕಳಂತೆ ಬೆಳೆಸಿದ್ದಾಳೆ. ಈ ಮಕ್ಕಳಿಗೆ ಕುನ್ನಿಗಳು ಹುಟ್ಟಿ ಈಗ ಆಕೆ ಅಜ್ಜಿಪಟ್ಟವನ್ನು ಆನಂದಿಸುತ್ತಿದ್ದಾಳೆ. ಅತ್ಯಂತ ಉತ್ಸುಕತೆಯಿಂದ ಬಾಣಂತನ ಮಾಡುತ್ತಿದ್ದು, ಕುನ್ನಿ ಮೊಮ್ಮಕ್ಕಳನ್ನೂ ತಾನೇ ಸಾಕುತ್ತಾಳಂತೆ. (ನಮ್ಮದು



ಗಂಡುನಾಯಿಯಾದ್ದರಿಂದ ಸದ್ಯ ನನಗೆ ಅದರ ಬಾಣಂತನದ ಚಾಕರಿ ತಪ್ಪಿದೆ. ಸಣ್ಣವಯಸ್ಸಿಗೇ ಅಜ್ಜಿಯಾಗುವ ಕುಯೋಗವೂ ತಪ್ಪಿದೆ). ಅವಳ ಗಂಡನದು ನೋಡಿ ನಾಯಿಪಾಡು, ನನ್ನಂತೆ! ಅವನ ಹೆಂಡತಿ, ಮಕ್ಕಳು ಬೇಡವೆಂದು ತೀರ್ಮಾನಿಸಿದ್ದು ಒಂದು ರೀತಿಯಿಂದ ಒಳ್ಳೆಯದೇ. ಇದೇ ರೀತಿ ನಾಯಿಪ್ರಿಯರೆಲ್ಲ ತೀರ್ಮಾನಿಸಿ ಬಿಟ್ಟರೆ ಜನಸಂಖ್ಯಾ ಸ್ಫೋಟ ನಿಲ್ಲುವ ಸಾಧ್ಯತೆಯಿದ್ದರೂ ಶ್ವಾನಸಂಖ್ಯಾ ಸ್ಫೋಟವಾಗುವ ಭೀತಿ ಹುಟ್ಟಿಕೊಳ್ಳದಿದ್ದರೆ ಸಾಕು. ನಮ್ಮ ಬಡಾವಣೆಯ ಹುಡುಗನೊಬ್ಬ ಒಂದು ಪೊಮರೇನಿಯನ್ ನಾಯಿ ಸಾಕಿದ್ದು, ಮಗುವಿನಂತೆ ಅದನ್ನು ಯಾವಾಗಲೂ ಅವುಚಿಕೊಂಡೇ ಅಡ್ಡಾಡುತ್ತಾನೆ. ತಾನು ಉಣ್ಣುವಾಗ ಅದರ ಬಾಯಿಗೂ ತುತ್ತು ಹಾಕುತ್ತಿರುತ್ತಾನೆ. ತನ್ನ ಹಾಸಿಗೆಯಲ್ಲೇ ಅದಕ್ಕೆ ಸ್ಥಳ ಕೊಟ್ಟು ತನ್ನ ಹೊದಿಕೆಯಲ್ಲೂ ಪಾಲು ಕೊಟ್ಟಿದ್ದಾನೆ. ನನ್ನವರ ಬಂಧುವೊಬ್ಬ ತನ್ನ ಮನೆಯ ಮುಂದೆ ತನ್ನ ಹೆಂಡತಿಯ ಹಾಗೂ ತನ್ನ ಹೆಸರಿನ ನಾಮಫಲಕದಲ್ಲಿ ತಮ್ಮ ನಾಯಿಯ ಹೆಸರನ್ನೂ ಸೇರಿಸಿದ್ದಾನೆ. ಸದ್ಯ ನನ್ನ ಪತಿರಾಯರು ಬಾಜಿಯ ಹೆಸರನ್ನೂ ತಮ್ಮ ನಾಮಫಲಕದಲ್ಲಿ ಸೇರಿಸಿಲ್ಲವಲ್ಲ, ಅದೇ ನನ್ನ ಪುಣ್ಯ ಎಂದು ಸಮಾಧಾನಪಟ್ಟುಕೊಳ್ಳುತ್ತಿದ್ದೇನೆ.

ಮನೆಗೆ ಅತಿಥಿಗಳು ಬಂದರೆ ನಮ್ಮವರಿಂದ ಬಾಜಿಯ ಗುಣಗಾನ ಶುರುವಾಗಿ ಬಿಡುತ್ತದೆ. ಹರಿಕಥೆ ಹೇಳಿದಂತೆ ನಾಯಿ ಪುರಾಣ ಬಿಚ್ಚುತ್ತಾರೆ. ಬಂದವರು ಯಾವಾಗ ಇದರಿಂದ ಬಿಡುಗಡೆಯಾದೀತೋ ಎಂದು ಒದ್ದಾಡುತ್ತಿರುತ್ತಾರೆ. ಹೀಗಾಗಿ ನಾಯಿಪ್ರಿಯರು ಮಾತ್ರ ನಮ್ಮನೆ ಪ್ರವೇಶಿಸುವ ಧೈರ್ಯ ಮಾಡುತ್ತಾರೆ. ಬಾಜಿ ನಮ್ಮವರ ಜಟಿಥಿ ಒಚಿಡಿ. ಇವರು ಯಾರನ್ನಾದರೂ, ಏನನ್ನಾದರೂ ಪ್ರೀತಿಸುತ್ತಿದ್ದರೆ ಎಷ್ಟು ಎಂದು ತಿಳಿಸಲು, 'ಬಾಜಿಯಷ್ಟು ಪ್ರೀತಿಸುತ್ತಾರೆ' ಎಂದು ಹೇಳಿದರೆ ಅದು ೧೦೦% ಅಥವಾ ಸ್ಟ್ಯಾಂಡರ್ಡ್ ಎಂದು ಅರ್ಥ. ಬಾಜಿಯೊಂದಿಗೆ ತುಲನೆ ಮಾಡಿಯೇ ನಾವು ಅವರ ಪ್ರೀತಿಯನ್ನು ಅಳೆಯುವುದು. ಕನ್ಯೆಯರೇ, ನಿಮಗೆ ನನ್ನದೊಂದು

ಕಿವಿಮಾತು. ಮದುವೆಗೆ ಮುನ್ನ ಜಾತಕ ಹಾಗೂ ರಕ್ತ ಹೊಂದಾಣಿಕೆಯ ಜೊತೆಗೆ ವರನ ಶ್ವಾನಪ್ರೇಮದ ಬಗೆಗೂ ವಿಚಾರಿಸುವುದು ಒಳ್ಳೆಯದು. ಇಲ್ಲವಾದರೆ ನನ್ನಂತೆ ನಾಯಿಪಾಡಾದೀತು ನಿಮ್ಮ ಬಾಳು.

ಅಂದ ಹಾಗೆ ನಮ್ಮ ಮನೆಯಲ್ಲಿ ಈಗಾಗಲೇ ಅನೇಕ ನಾಯಿಗಳು ಬಂದು ಹೋಗಿವೆ. ಅರ್ಥಾತ್ ನಾವು ಕಾಲಕಾಲಕ್ಕೆ ಬೇರೆ ಬೇರೆ ನಾಯಿಗಳನ್ನು ಸಾಕಿಕೊಂಡಿದ್ದು, ಅವು ಮರಿ ಇರುವಾಗಲೇ ಕಳೆದು ಹೋಗಿವೆ ಅಥವಾ ದೊಡ್ಡದಾಗಿ ಓಡಿ ಹೋಗಿವೆ ಅಥವಾ ಸತ್ತು ಹೋಗಿವೆ. ಆದರೆ ಯಾವುದೇ ನಾಯಿ ಇರಲಿ ಬಾಜಿರಾಯ ಎಂಬುದು ಅವೆಲ್ಲವುಗಳಿಗೂ ಇರುವ ಸಾಮಾನ್ಯ ಹೆಸರು. ಈಗಿರುವುದು ಬಾಜಿರಾಯ ನಂ. ೭! ಹಿಂದಿನ ಕಾಲದಲ್ಲಿ ಅರಸರು ತಮ್ಮ ಮಕ್ಕಳು, ಮೊಮ್ಮಕ್ಕಳಿಗೆ ತಮ್ಮ ಹೆಸರನ್ನೇ ಇಟ್ಟು ಒಂದನೆಯ ಬಾಜಿರಾವ ಪೇಳ್ವೆ, ಎರಡನೆಯ ಬಾಜಿರಾವ ಪೇಳ್ವೆ, ಮೂರನೆಯ ಜಾರ್ಜ್, ನಾಲ್ಕನೆಯ ಜಾರ್ಜ್ ಎಂದು ಗುರುತಿಸುತ್ತಿದ್ದಿಲ್ಲವೇ ಹಾಗೆ, ನಮ್ಮದು ೭ನೇ ಬಾಜಿರಾಯ,

ನಮ್ಮವರು ಬಾಜಿಯನ್ನು ಹಾಗೆಲ್ಲ ಒಂಟಿಯಾಗಿ ಹೊರಗೆ ಬಿಡುವುದಿಲ್ಲ. ಅದರ ವಾಕಿಂಗು ಮಾಡಿಸುವುದು ಅವರದೇ ಜವಾಬ್ದಾರಿ. ಅವರು ಆಫೀಸಿನಿಂದ ಬಂದಾಕ್ಷಣ ಕೇಳುವ ಮೊದಲ ಪ್ರಶ್ನೆ 'ಬಾಜಿ ಎಲ್ಲಿ?'



ಅಂದು ನನ್ನ ಚಿಕ್ಕಮ್ಮ ಊರಿಂದ ಬಂದಿದ್ದಳು. ಅವಳನ್ನು ಸುತ್ತಾಡಿಸಲು ಕಾಲೊನಿಯ ಪಾರ್ಕಿಗೆ ಕರೆದೊಯ್ದಿದ್ದೆ. ಬಾಜಿಗೆ ಆಗ ಸುಮಾರು ೭-೮ ತಿಂಗಳ ಪ್ರಾಯ. ಅದು ತಾನೂ ಬರುವೆನೆಂದು ಕೂಗತೊಡಗಿತು. ಪಾಪ ಕರೆದುಕೊಂಡು ಹೋದರಾಯಿತೆಂದು, ಅದರ ಕತ್ತಿಗೆ ಚೈನು ಬಿಗಿದು ಉದ್ಯಾನವನಕ್ಕೆ ಹೊರಟೆ.

ನಾಯಿ ಕಟ್ಟಲು ಅಲ್ಲಿ ಯಾವುದೇ ಕಂಬಗಳು ಇಲ್ಲದ್ದರಿಂದ ಚೈನನ್ನು ಬಿಚ್ಚಿ ಸ್ವತಂತ್ರವಾಗಿ ಅಡ್ಡಾಡಲು ಬಿಟ್ಟೆ. ಅದಕ್ಕೂ ಅಲ್ಲಿಯ ವಾತಾವರಣ ಹೊಸದು. ದೂರ ಹೋಗದೇ ನಮ್ಮ ಮುಂದೇ ಓಡಾಡಿಕೊಂಡಿತ್ತು. ಚಿಕ್ಕಮ್ಮ ಹಾಗೂ ನನ್ನ ಹರಟೆಯಲ್ಲಿ ಸಂಜೆ ಕಳೆದು ಕತ್ತಲು ಆವರಿಸಿತು. ಹೊರಡಲು ನೋಡುತ್ತೇನೆ. ನಾಯಿ ನಾಪತ್ತೆ! ಬಾಜಿ ಬಾಜಿ ಎಂದು ಕೂಗಿ ಕೂಗಿ ಇಟ್ಟೆ. ಪಾರ್ಕೆಲ್ಲ ಹುಡುಕಾಡಿದೆ. ಎಲ್ಲೂ ಇಲ್ಲ. ನನ್ನೆದೆ ಧಡಧಡ ಹೊಡೆದುಕೊಳ್ಳ ಹತ್ತಿತು. ಬಾಜಿ ಕಳೆದರೆ ಏನೂ ಚಿಂತೆಯಿಲ್ಲ. ಹೋಯಿತು ಪೀಡೆ ಎಂದುಕೊಳ್ಳುತ್ತೇನೆ. ಇಲ್ಲವೆ ಇನ್ನೆಲ್ಲಿ ಹೋಗುತ್ತದೆ? ತುಸು ಹೊತ್ತಿನ ನಂತರ ತಾನೇ ಬರುತ್ತದೆ ಎಂದು ಸಮಾಧಾನ ತಾಳುತ್ತೇನೆ. ಆದರೆ ನನ್ನ ಪತಿಪರಮೇಶ್ವರರು ಕೇಳಬೇಕಲ್ಲ? ಅವರು ರಾತ್ರಿ ಫ್ಯಾಕ್ಟರಿಯಿಂದ ಮರಳುವಾಗ ಇದು ಅವರ ಮುಂದೆ ಪ್ರತ್ಯಕ್ಷವಾಗಿ ಬಾಲ ಅಲ್ಲಾಡಿಸುತ್ತ, ಮೈನೆಕ್ಕುತ್ತ, ಸುತ್ತುತ್ತ

ಕಾದಿರಬೇಕು ತಾನೆ? ನಾಯಿ ಅಲ್ಲೆಲ್ಲೋ ಹೋಯಿತೆಂದರೆ ಇವರಿಗೆ ಮಕ್ಕಳೇ ಕಳೆದಷ್ಟು ಭಯ, ಚಿಂತೆ, ವ್ಯಾಕುಲತೆ. ಇನ್ನು ಹೇಗಪ್ಪಾ ನಾಯಿಯಿಲ್ಲದೆ ಮನೆ ಸೇರಲಿ ಎಂದು ಕಳವಳಗೊಂಡೆ. ಚಿಕ್ಕಮ್ಮನಿಗೂ ಇವರ ವೀರಭದ್ರ ಅವತಾರ ಗೊತ್ತಿತ್ತು. ಅವರು ಬರುವುದರೊಳಗಾಗಿ ನಾಯಿ ಸಿಕ್ಕು ಮನೆ ಸೇರಿದರೆ ಸಾಕೆಂದು ಚಡಪಡಿಸಹತ್ತಿದೆವು. ಪಾರ್ಕಿಲ್ಲ ಖಾಲಿಯಾದರೂ ಬಾಜಿಯ ಪತ್ತೆ ಇಲ್ಲ. ನಾವಾದರೂ ಎಷ್ಟು ಹೊತ್ತು ಕಾಯಲು ಸಾಧ್ಯ? ಆದರೆ ಖಾಲಿ ಕೈಯಿಂದ ಹೋಗುವ ಧೈರ್ಯವೂ ಇಲ್ಲ. ನಾನು ನಾಚಿಕೆ ಬಿಟ್ಟು 'ಬಾಜಿ ಬಾಜಿ' ಎಂದು ಕೂಗುತ್ತ ಕಾಲೊನಿಯ ಬೀದಿಬೀದಿಗಳಲ್ಲಿ ಮೂಲೆ ಮೂಲೆಗಳಲ್ಲಿ ಅನ್ವೇಷಿಸತೊಡಗಿದೆ. ಪರಿಚಿತರಿಗೆ, 'ಅಮ್ಮಾ ನಿಮ್ಮ ಮನೆಗಳಲ್ಲಿ ನಮ್ಮ ಶ್ವಾನನ ಕಂಡೀರ್ಯಾ?' ಎಂದೋ, 'ಕೂಸು ಕಂಡೀರ್ಯಾ ರಹವಾಸಿಗಳೆ ಶ್ವಾನ ಕಂಡೀರ್ಯಾ! ಬಾಜಿನಾಮದ, ಕಂದು ಬಣ್ಣದ ಜೊಲ್ಲು ಸುರಿಸುವ | ಶ್ವಾನ ಕಂಡೀರ್ಯಾ' ಎನ್ನುತ್ತಲೋ, 'ತೂ ಕಹಾ ಏ ಬತಾ ಇಸ ಅಂಧೇರಿ ರಾತಮೆ' ಎಂದೋ, ಮತ್ತೊಮ್ಮೆ 'ಬಾಜಿ ನೀನು ಬೇಗ ಬಾರೋ | ಎನ್ನ ಮನಕೆ ಕೃಪೆ ತೋರೋ' ಎನ್ನುತ್ತಲೋ ಕೇರಿಕೇರಿ ಅಲೆದೆ. ಅಪರಿಚಿತರು ನನ್ನ ನೋಡಿ 'ಯಾರು ನಿಮ್ಮ ಮಗಾ ಕಳದಾನೇ?' ಎಂದು ಪ್ರಶ್ನಿಸಿದರು. ಗೊತ್ತಿದ್ದ ಕೆಲವರು ಮುಸಿಮುಸಿ ನಗುತ್ತಿದ್ದರು. ಮತ್ತೆ ಕೆಲವರು 'ನಾಯಿ ಸಿಕ್ಕಿತೇನ್ರಿ?' ಎಂದು ಕೇಳಿ ನನ್ನತ್ತ ಅನುಕಂಪದ ದೃಷ್ಟಿ ಬೀರುತ್ತಿದ್ದರು. ನಿಮ್ಮ ನಾಯಿನ್ನ ಪಾರ್ಕಿನ ಹತ್ರ ನೋಡಿದ್ದಂಗಾತು. ಅಲ್ಲೇ, ನಾಯಿಗಳ ಸಂತಿ ಕೂಡಿತ್ತು. ಎಲ್ಲಾ ಝುಗಳಾಡಲಿಕ್ಕೆ ಹತ್ತಿದ್ದು' ಎಂದು ಒಬ್ಬರು ಹೇಳಿದಾಗ ಮತ್ತೆ ಪಾರ್ಕಿನತ್ತ ಪಾದ ಬೆಳೆಸಿದೆವು. ಬೇಡ ನನ್ನ ಅವಸ್ಥೆ. ಅಲ್ಲಿ ನಾಯಿಯೂ ಇಲ್ಲ ನೊಣವೂ ಇಲ್ಲ. ಆ ಕಗ್ಗತ್ತಲಲ್ಲಿ ಗುಂಗಾಡುಗಳು ನಮ್ಮನ್ನು ಕಚ್ಚಿ ತಿನ್ನುತ್ತಿದ್ದವು. ನನಗೆ ಅಳು ಬರುವುದೊಂದೇ ಬಾಕಿ. ಆಗ ಚಿಕ್ಕಮ್ಮ "ನೋಡು, ನಿನ್ನ ಗಂಡ ಮೊದಲ ಮಹಾಮುಂಗೋಪಿ, ನಾಯಿ ಕಾಣದಿದ್ರ ವಿಶ್ವಾಮಿತ್ರ ಆಗಿ ಬಿಡ್ತಾನ. ಅನ್ನಾ, ನೀರು ಬಿಟ್ಟು ನಾಯಿ ಹುಡಕ್ಕೋತ ಊರೆಲ್ಲಾ ಅಲಿತಾನ. ಈಗ



ಉಳಿದಿರೋದು ಒಂದೇ ಉಪಾಯ. ನೀನು ಯಾವುದಾದರೂ ವತಾ ಆಚರಸ್ತೇನಿ ಅಂತ ಬೇಡಕೊ, ದೇವು ಕಣ್ಣ ತಗದಾನು' ಎಂದು ಸಲಹೆಯಿತ್ತಳು. 'ಛೇ ಎಂಥಾ ಹುಚ್ಚತನ. ನಾಯಿ ಸಲುವಾಗೇ ಯಾರು ಮಾಡ್ತಾರ? ನೀವೊಂದು ಏನಾರು ಹೇಳಬ್ಯಾಡ್ರಿ' ಎಂದು ನಿರಾಕರಿಸಿ ಬಿಟ್ಟೆ. ಆದರೆ ಏನು ಮಾಡುವುದು? ಇವರು ಬರುವ ಸಮಯ ಸಮೀಪಿಸುತ್ತಿದೆ. ಡೊಂಕುಬಾಲದ ನಾಯಕರು ಪ್ರತ್ಯಕ್ಷವಾಗುತ್ತಿಲ್ಲ. ಕೊನೆಗೆ 'ದಾರಿ ಕಾಣದಾಗಿದೆ ರಾಘವೇಂದ್ರನೇ' ಎನ್ನುತ್ತ ಯಾವ ವ್ರತ ಆಚರಿಸಬೇಕೆಂದು ಯೋಚಿಸ ಹತ್ತಿದೆ. ವೈಭವಲಕ್ಷ್ಮೀ ವ್ರತ, ಸಂತೋಷಿಮಾ ವ್ರತ, ಏಕಾದಶಿ ವ್ರತ, ಸಂಕಷ್ಟಿ ವ್ರತ, ಉರುಳು ಸೇವೆ, ಪಾದಸೇವೆ ಮುಂತಾದ ಹತ್ತು ಹಲವು ವ್ರತಗಳು ಕಣ್ಣ ಮುಂದೆ ಹಾದು

ಹೋದವು. ಅಂತೂ, 'ದೇವಾ, ಕಳೆದು ಹೋದ ಬಾಜಿ ಪ್ರತ್ಯಕ್ಷ ಆದ್ರ ನಾನೂ ಸೋಳಾ ಸೋಮಾರ ವ್ರತಾ ಮಾಡತೇನಿ, ದಯ ಮಾಡಿ ಕೃಪಾ ಮಾಡು' ಎಂದು ಕಣ್ಣುಮುಚ್ಚಿ ಕೈಮುಗಿದು ಏಕಚಿತ್ತದಿಂದ ಬೇಡಿಕೊಂಡೆ. ಕಣ್ಣು ತೆರೆದು ನೋಡುತ್ತೇನೆ. ಆಶ್ಚರ್ಯ! ಪರಮಾಶ್ಚರ್ಯ!! ಬಾಜಿ ವಾಯುವೇಗದಿಂದ ನಮ್ಮತ್ತಲೇ ಓಡಿ ಬರುತ್ತಿದೆ. ದೇವ ಬಂದಾನೋ, ನಮ್ಮ ಸ್ವಾಮಿ ಬಂದನೋ!' ಎಂಬಷ್ಟು ಖುಷಿಯಾಯಿತು. ಆದರೆ ಒಂದೇ ಕ್ಷಣದಲ್ಲಿ ನನ್ನ ಹುಬ್ಬುಗಳು ಗಂಟಿಕ್ಕಿದವು. 'ಸಾಯಿ, ಅರಿಷ್ಟ ನಾಯಿ ಮುಂಡೇದೇ! ಒಂದರ್ಧಾ ಮಿನಿಟು ಮೊದಲು ಬಂದಿದ್ರ ನಿನ್ನ ಗಂಟೇನು ಹೋಗ್ತಿತ್ತು? ಈಗ ನೋಡು, ನಾ ನಿನ್ನ ಸಲುವಾಗಿ ಸೋಳಾ ಸೋಮವಾರ ವ್ರತಾ ಮಾಡಬೇಕು. ಖಡಕ್ ವ್ರತ ಬ್ಯಾರೆ. ಎಂದೂ ಉಪವಾಸ, ವನವಾಸ ಮಾಡೇ ಗೊತ್ತಿಲ್ಲಾ. ಎಲ್ಲಾ ನಿನ್ನ ಕಿತಾಪತಿ' ಎಂದು ತಿವಿಯುತ್ತ ಚೈನು ಕಟ್ಟಿ ಮನೆಗೆ ಎಳೆತಂದೆ. ನಾನು ಮನೆ ಸೇರುತ್ತಲೂ ಇವರೂ ಆಗಮಿಸಿದರು. ಅಂತೂ ನಾನು ಬಚಾವಾದೆ.

ಆದರೆ ಈಗ ಸೋಳಾ ಸೋಮ ವಾರ ವ್ರತ ಮಾಡುತ್ತಿದ್ದೇನೆ. ನೀವೆಂದಾದರೂ ನಾಯಿಗಾಗಿ ವ್ರತಾದಿಗಳನ್ನು ಆಚರಿಸುವವರನ್ನು ಬಲ್ಲಿರಾ? 'ಮಾನವ ಜನ್ಮ ದೊಡ್ಡದು' ಎಂಬುದು ದಾಸವಾಣಿ. ಅಧಿಕ ಪುಣ್ಯದ ಫಲವಾಗಿ ಜೀವಿಗೆ ಮಾನವ ಜನ್ಮ ಪ್ರಾಪ್ತವಾಗುವುದಂತೆ. ಆದರೆ ಬಾಜಿ ಹಾಗೂ ನನ್ನ ಜೀವನ ಹೋಲಿಸಿದರೆ ನನಗನಿಸುತ್ತದೆ ಹೆಚ್ಚೆಚ್ಚು ಪುಣ್ಯ ಗಳಿಕೆಯಿಂದ ಮಾನವನ ನಂತರದ ಜನ್ಮ-ಅದೇ ಬಾಜಿಯ ಜನ್ಮ ಪ್ರಾಪ್ತವಾಗುತ್ತದೆ ಎಂದು. 'ತಂದೆ ಶಿವನೇ, ಮುಂದಿನ ಜನ್ಮವೆಂಬುದೇನಾದರೂ ಇದ್ದರೆ ನನಗೆ ನಾಯಿ ಜನ್ಮವೇ ಸಿಗಲಿ, ಇಂದು ನಾನು ಪಡುತ್ತಿರುವ ನಾಯಿಪಾಡು ಕಳೆದು ಮುಂದಿನ ಜನ್ಮದಲ್ಲಿ ನನ್ನ ಪತಿದೇವರ ಸಾಕುತಾಯಿಯಾಗುವ ಅರ್ಥಾತ್ ನಾಯಿದೇವರಾಗುವ ಭಾಗ್ಯ ನನ್ನದಾಗಲಿ, ಅದಕ್ಕಾಗಿ ಇಂದಿನಿಂದಲೇ ಪುಣ್ಯ ಸಂಚಯದಲ್ಲಿ ತೊಡಗುತ್ತೇನೆ!'

**(ಸುಧಾ, ೨೮ ಜೂನ್, ೨೦೦೧)**

## ೧೨. ಎದ್ದು ಹೋಗುವ ಸಂಕಟ

### ಡಾ. ಜಾನಕೀ ಸುಂದರೇಶ್

ಮುಂದಿನ ಸೀಟಿನಲ್ಲಿ ಕೂತಿದ್ದ ಮಹಿಳೆಯ ಭುಜದ ಮೇಲೆ ಆಗೊಂದು ಈಗೊಂದು ಹನಿ ಟಾಪಿನಿಂದ ಇಳಿದು ಬೀಳುತ್ತಿತ್ತು. ಕಿಟಕಿ ಸರಿಯಾಗಿ ಮುಚ್ಚಿಕೊಳ್ಳದೇ ಕಟಕಟ ಸದ್ದು ಮಾಡುತ್ತಿತ್ತು. ಆಕೆಯ ಪಕ್ಕ ಕೂತಿದ್ದ ಕಮಟು ನಾತದ ಧಡಿಯ, ಅಗತ್ಯಕ್ಕಿಂತ ಜಾಸ್ತಿಯೇ, ತಿರುವುಗಳಲ್ಲಿ ಆಕೆಯ ಮೈಮೇಲೆ ವಾಲುತ್ತಿದ್ದ. ಅವನನ್ನೊಂದು ಸಲ

ಕೆಕ್ಕರುಗಣ್ಣಿನಿಂದ ನೋಡಿ ಆಕೆ ಕರಿ ಮಣಿಸರವನ್ನು ಉದ್ದಕ್ಕೆ ಎಳೆದು ಎದೆಯ ಮೇಲೆ ಹಾಕಿಕೊಂಡಳು. ಸ್ವಲ್ಪ ಹೊತ್ತಿನ ನಂತರ ನನ್ನ ಪಕ್ಕದಲ್ಲಿದ್ದ ದಂಪತಿ ಇಳಿದು ಹೋದರು. 'ನೋಡಿ, ಇಲ್ಲಿಬೇಕಾದ್ರೆ ಬನ್ನಿ, ಆರಾಮವಾಗಿ ಕೂತ್ಕೋಬಹುದು' ಎಂದು ಕರೆದ. ಆಕೆ ಹಿಂದಿರುಗಿ ನೋಡಿ, ಆಚೆಈಚೆ ದೃಷ್ಟಿ ಹರಿಸಿ, ಏಳಲೋ ಬೇಡವೋ ಎಂಬ ಅನಿಶ್ಚಿತತೆಯ ಮುಖಭಾವ ಮಾಡಿ ಇರಲಿ ಬಿಡಿ ಪರವಾಗಿಲ್ಲ, ಥ್ಯಾಂಕ್ಸ್' ಎಂದಳು.

ಅಷ್ಟು ಒದ್ದಾಡಿಕೊಂಡು ಅದೇ ಜಾಗದಲ್ಲಿ ಕೂತಿರುವುದನ್ನೇ ಆಕೆ ಆಯ್ದುಕೊಂಡಿದ್ದು ನನಗೇನೂ ವಿಚಿತ್ರವೆನಿಸಲಿಲ್ಲ. ಮನುಷ್ಯನ ಎಲ್ಲ ವರ್ತನೆಗಳೂ rationality ಯ ಹಿನ್ನೆಲೆಯಲ್ಲೇ ಇರುತ್ತವೆಂದು ಹೇಳುವಂತಿಲ್ಲ. ಆಕೆಯ ಸ್ಥಾನದಲ್ಲಿದ್ದರೆ ಬಹುಶಃ ನಾನೂ ಹಾಗೆಯೇ ಮಾಡುತ್ತಿದ್ದೆನೋ ಏನೋ. ಕೂತಲ್ಲಿಂದ ಎದ್ದು ಸೀಟು ಬದಲಾಯಿಸುವುದೆಂದರೆ ಅದೇನೋ ಹಿಂಜರಿತ. ಎದ್ದರೆ ಎಲ್ಲರೂ ನನ್ನನ್ನೇ ನೋಡುತ್ತಾರೇನೋ ಎನ್ನುವ ಅಳುಕು. ಹಾಗೆ ನೋಡಿದರೆ ಕಳೆದುಕೊಳ್ಳುವುದು ಏನೂ ಇಲ್ಲ ಎನ್ನುವುದು ತಲೆಗೆ ಹೋಗುವುದಿಲ್ಲ. ಜೊತೆಗೇ, “ಅಯ್ಯೋ ಯಾರು ಜಾಗ ಬದಲಾಯಿಸುತ್ತಾರೆ, ಇನ್ನು ಸ್ವಲ್ಪ ಹೊತ್ತು ತಾನೇ, ಹೇಗೋ ಅಡ್ಜಸ್ಟ್ ಮಾಡಿಕೊಂಡರಾಯ್ತು' ಎನ್ನುವ ಸೋಂಭೇರಿತನ, ಜಡತ್ವ, ಅನಿವಾರ್ಯ ಪ್ರಸಂಗ ಬರದ ಹೊರತು ಕೂತಲ್ಲಿಂದ ಏಳುವ ಮನಸ್ಸಾಗುವುದಿಲ್ಲ. ಒಂದು ವೇಳೆ ಎದ್ದು ಇನ್ನೊಂದು ಸೀಟಿಗೆ ಹೋದರೆ ಅಲ್ಲಿಯೂ ಇಂಥದೇ ಅನಾನುಕೂಲ ಆಗಬಾರದೆಂದೇನೂ ಇಲ್ಲವಲ್ಲ ಎನ್ನುವ ನಿರಾಶಾವಾದ. “Known devil is better than an unknown one'ಪಾಲಿಸಿ!

ಹಿಂದೊಮ್ಮೆ ಯಾವುದೋ ಟ್ರೈನಿಂಗಿಗೆ ಹೋಗಿದ್ದೆ. ಎಲ್ಲಿ ಬೇಕಾದರೂ ಕೂರುವ ಕುರ್ಚಿ ಬದಲಾಯಿಸುವ ಸ್ವಾತಂತ್ರ್ಯ ಇದೆಯೆನ್ನುವುದು ಅರಿವಿ? ಬಾರದವರಂತೆ ಟ್ರೈನಿಂಗಿಗೆ ಬಂದಿದ್ದ ಇಪ್ಪತ್ತು ಜನ ಅಧಿಕಾರಿಗಳೂ ಐದು ದಿನ, ಮೊದಲ ದಿನ



ಕೂತ ಕುರ್ಚಿಗಳಲ್ಲೇ ಕೂತಿದ್ದೊಂದು ತಮಾಷೆ, ಪ್ರೈಮರಿ ಸ್ಕೂಲಲ್ಲಿದ್ದಾಗ ಬೆಂಚು ಬದಲಾಯಿಸಿ ಕೂತರೆ ಟೀಚರು ಉರ್‌ಬೈಸ್ ಹೊಡೆಸುತ್ತಿದ್ದರು. ಮೊಣಕಾಲು ಹಾಕಿಸುತ್ತಿದ್ದರು. ಇಲ್ಲಿ ಟ್ರೈನರ್ ಕನಸುಮನಸಲ್ಲೂ ಅಂಥ ಶಿಕ್ಷೆ ವಿಧಿಸುವುದನ್ನು ಇಮ್ಯಾಜಿನ್ ಮಾಡಲಾರರು. ಹಾಗಿದ್ದೂ ಪ್ರತಿಯೊಬ್ಬರೂ ಪಿತ್ರಾರ್ಜಿತ ಸಿಂಹಾಸನಕ್ಕೆ ಅಂಟಿಕೊಂಡ ಹಾಗೆ ಅದೇ ಕುರ್ಚಿ, ಅದೇ ಜಾಗಕ್ಕೆ ಅಂಟಿ ಕೂತಿದ್ದು ಯಾಕೆ?

ಎದುರು ಕುಳಿತಿದ್ದಾಕೆ ಮೂರು ನಾಲ್ಕು ಸಲ ತಿರುತಿರುಗಿ ನೋಡಿದರು. ಯಾಕೆ ನಾನು ಕರೆದಿದ್ದೇನಾದ್ರೂ ಸರಿಯಾಗಲಿಲ್ಲವೇ? ಎನಿಸಿದ ಬೆನ್ನಿಗೇ ಈ ಮುಖವನ್ನು ಎಲ್ಲೋ ನೋಡಿದ್ದೇನೆಂದು ಅನುಮಾನ ಬಂತು.

'ಸರೋಜ ಅಲ್ವಾ?' ಎಂದೆ. 'ಏ ನೀನೇನೇ ಮಾರಾಯ್ತಿ?!' ಎಂದು ಉದ್ಗರಿಸುತ್ತಾ ಆಕೆ ಯಾವ ಹಿಂಜರಿತವೂ ಇಲ್ಲದೆ ಸರಕ್ಕನೆ ಎದ್ದು ಧಡಿಯನನ್ನು ದೂಡಿ ಒತ್ತರಿಸಿಕೊಂಡು ನನ್ನ ಪಕ್ಕ ಬಂದು ಕೂತಳು.

'ಎಷ್ಟೊಂದು ಚೇಂಜ್ ಆಗಿದೀಯಾ?', 'ದಪ್ಪ ಆಗಿದೀಯಲ್ಲೇ?', 'ನಿನ್ನ ಜಡೆ ಏನಾಯ್ತೇ, ಅಷ್ಟುದ್ದ ಇದ್ದಿದ್ದು?'... ಇತ್ಯಾದಿಯಾಗಿ ಕಾಲ ಸಹಜ ಬದಲಾವಣೆಗಳ ಬಗ್ಗೆ ಕಾಲಾತೀತರಂತೆ ಆಶ್ಚರ್ಯ ವ್ಯಕ್ತಪಡಿಸಿದೆವು. ಮಕ್ಕಳು-ಮರಿ, ಊರುಕೇರಿ, ಕೆಲಸಗಳ ಬಗ್ಗೆ ಪರಸ್ಪರ ವಿಚಾರಿಸಿಕೊಂಡೆವು. ಹಳೆ ಸ್ನೇಹಿತೆಯರು ಯಾರಾರು ಎಲ್ಲೆಲ್ಲಿದ್ದಾರೆ, ಆ ಮೇಷ್ಟ್ರು ಸತ್ತರಂತೆ, ಈ ಮೇಡಮ್ಮು ಸೂಯಿಸೈಡಾದರಂತೆ, ಮೂರನೇ ಬೆಂಚಿನ ವನಜಾ ಪಾಪ ಡೈವೋರ್ಸ್ ಆಯ್ತಂತೆ... ಇತ್ಯಾದಿ ಗಾಸಿಪ್‌ಗಳು ಮುಗಿದು ಸ್ವಲ್ಪ ಹೊತ್ತು ಮೌನವಾಗಿ ಕೂತೆವು. ಅವತ್ತು ಹೈಸ್ಕೂಲಲ್ಲಿ ಓದುತ್ತಿದ್ದಾಗ ಇದೇ ಸರೋಜಾ ಆತ್ಮೀಯವಾಗಿದ್ದಿದ್ದೇನೋ ನಿಜ. ಆದರೆ ಆ ಹಳೆಯ ಭಾವನೆಗಳ ಬಲದ ಮೇಲೆ ಇವತ್ತಿನ ಸಮಸ್ಯೆಗಳನ್ನು ಹಂಚಿಕೊಳ್ಳುವುದು ಉಚಿತವಾದೀತೇ ಎಂದು ಯೋಚಿಸಿದೆ. ಹತ್ತಾರು ವರ್ಷಗಳ ಅನಂತರ ಭೇಟಿಯಾದರೆ ಹೆತ್ತ ತಾಯಿ ಕೂಡಾ ಪರಿಚಯದ ಪರಿಧಿಯಾಚೆ ಇದ್ದಂತೆ ಭಾಸವಾಗಬಹುದು. ಸರೋಜ ಮಾತ್ರ ತಾನಾಗೇ ಪರಿಧಿಯನ್ನು ದಾಟಿ ಹತ್ತಿರ ಬಂದು ತನ್ನ ಹಳ್ಳಿಮನೆ, ಬದುಕಿನ ಕಷ್ಟಗಳನ್ನು ಹೇಳಿಕೊಳ್ಳತೊಡಗಿದಳು.

ಗದ್ದೆಗೆ ನೀರಿಲ್ಲ, ಕೂಲಿಗೆ ಜನವಿಲ್ಲ. ಅಡಿಕೆ ಸಸಿ ನೆಟ್ಟಿದ್ದು ಗರಿಗಳು ಹಳದಿಯಾಗಿ ಸಿಂಗಾರ ಕಣ್ಣೀರು ಉದುರಿದಂತೆ ಉದುರುತ್ತಿದೆ. ಎಂಟು ಸಾವಿರ ಸುರಿದು ತಂದ ಜರ್ಸಿ ದನಕ್ಕೆ ಕೆಚ್ಚಲು ನೋವಾಗಿ ಹಾಲು ಮೂರು ಲೀಟರಿಗಿಳಿದಿದೆ. ಬಾವಿಕಟ್ಟೆಯ ಕಲ್ಲು ಕುಸಿದು ಬಿದ್ದು ಪಂಪ್‌ಸೆಟ್ ಹಾಳಾಗಿ ನೀರು ಸೇದಿ ಸೇದೀ ಸೊಂಟ ನೋವಾಗಿದೆ. ನೆಟ್ಟಗೆ ಕೂತರೆ ನೋವು ಸ್ವಲ್ಪ ಕಡಿಮೆಯಾಗುವುದೆಂದು ಸೆಟೆದುಕೊಂಡು ಕೂತರೆ ಹಾಳಾದ ಧಡಿಯ ಇನ್ನಷ್ಟು ಹತ್ತಿರ ಬಂದು ಮೈಮೇಲೆ ಬಿದ್ದ. ಎಲ್ಲ ಕಷ್ಟಗಳೇ ಗೋಳುಗಳೇ ನೋವುಗಳೇ, ಈ ಬದುಕೇ ಸಾಕಪ್ಪಾ ಎನಿಸುವಂತೆ!



ಬಸ್ಸಿನ ಶಬ್ದದೊಂದಿಗೆ ಹೋರಾಡುತ್ತಾ ತನ್ನ ದನಿ ಏರಿಸಿ ಹೇಳಿಕೊಂಡು ಹಗುರಾದಂತೆ ನಿಟ್ಟುಸಿರು ಬಿಟ್ಟಳು. ಕೈಬ್ಯಾಗಿನಿಂದ ನೀರಿನ ಬಾಟಲಿ ತೆಗೆದು ಗಟಗಟನೆ ಖಾಲಿ ಮಾಡಿ ಬೆವರೊರೆಸಿಕೊಂಡು ಹೇಳಿದಳು. ಅದ್ಯಾರೋ

ಗಲ್ಲಿನಿಂದ ಬಂದವನಂತೆ. ನಮ್ಮ ಇಡೀ ಫ್ಲಾಟನ್ನು ನಲವತ್ತು ಲಕ್ಷಕ್ಕೆ ಕೇಳ್ತಿದಾನೆ. ನಮಗಿರೋದು ಒಬ್ಬಳೇ ಮಗಳು. ಜಮೀನು ಮಾರಿ, ದುಡ್ಡನ್ನ ಬ್ಯಾಂಕಿನಲ್ಲಿಟ್ಟರೆ ಬಡ್ಡಿಯಲ್ಲೇ ಜುಮ್ಮಂತ ಇರಬಹುದು. ನಮ್ಮನೆಯವರಿಗೆ ಬಿಸಿನೆಸ್ ನಾಲೆಡ್ಜ್ ಇದೆ. ಏನಾದ್ರೂ ವ್ಯಾಪಾರ ಮಾಡಬಹುದು. ಈ ಜಮೀನಿನ ಗೋಳು ಸಾಕಾಯ್ತು...'

'ಹಾಗಾದ್ರೆ ಜಮೀನು ಮಾಡ್ತಿದೀರಾ ಅನ್ನು' ನಾನು ಕೇಳಿದೆ. ಅವಳು ಹಾವು ತುಳಿದವಳಂತೆ ಹಾರಿ ಬಿದ್ದು 'ಅಯ್ಯೋ, ಇಲ್ಲಪ್ಪಾ... ಜಮೀನು ಮಾರಲ್ಲಪ್ಪಾ...' ಎಂದಳು. “ಯಾಕೆ? ಅಷ್ಟು ಕಷ್ಟವಾದರೆ ಮಾರೋದೇ ಒಳ್ಳೇದಲ್ಲಾ' ಎಂದರೆ,

'ಕಷ್ಟ ಆಯ್ತು ಅಂತ ಮಾರೋಕಾಗುತ್ತಾ? ಜಾಗ ನಮ್ಮದು ಅಂತ ಆದ ಮೇಲೆ ಎಷ್ಟು ಕಷ್ಟ ಪಟ್ಟಿದ್ದೇವೆ! ಅಷ್ಟು ಸುಲಭದಲ್ಲಿ ಬಿಟ್ಟುಹೋಗೋಕಾಗುತ್ತಾ?' ಎಂದು ಪ್ರಶ್ನೆ ಹಾಕಿದಳು.

“ಯಾಕೆ ಆಗೋಲ್ಲ' ಎಂದು ನಾಲಿಗೆಗೆ ಬಂದ ಮಾತನ್ನು ಹಾಗೇ ನುಂಗಿಕೊಂಡೆ. ಹೌದಲ್ಲ, ಇದು ನಮ್ಮ ಜಾಗ. ಎಷ್ಟೋ ವರ್ಷಗಳ ಮೊದಲು ಈ ಜಾಗದಲ್ಲಿ 'ನಾನು' ಎನ್ನುವ ಬೀಜ ಬಿದ್ದು, ಮೊಳೆತು ಬೇರೂರಿ ಮರವಾಗಿ ನಿಂತು, ಮರದ ಅಡಿಯ ಜಾಗವೆಲ ಮರದ್ದೇ ಆಗಿ ಹೋಗಿದೆ. ಅದನ್ನು 'ಬಿಡು' ಎಂದರೆ ಬಿಡುವುದಾದರೂ ಹೇಗೆ? ಮರವನ್ನು ಕಡಿದುರುಳಿಸಿ ಬೇರನ್ನು ಅಗೆದಗೆದು ಕಿತ್ತು ತೆಗೆದರೂ ಸಣ್ಣ ತಂತು ಬೇರುಗಳು ನೆಲದೊಳಗೇ ಉಳಿದು, ಆ ಸ್ಥಳ ಒಂದು ಮಟ್ಟದಲ್ಲಿ ಭಾವನಾತ್ಮಕವಾಗಿಯಾದರೂ ಆ ಮರದ್ದೇ ಆಗಿ ಉಳಿಯುತ್ತದೆ. ಬೊಂಬಾಯಿಯಲ್ಲಿ ಸೆಟಲ್ ಆಗಿ ಆಸ್ತಿ, ಮಕ್ಕಳು ಮರಿ ಆದವರು ಕೂಡಾ, 'ನಮ್ಮ ಊರಾ? ಮಂಗಳೂರು ಹತ್ತಿರ' ಎಂದ ಹಾಗೆ, ನಿಂತ ನೆಲದಿಂದ ಹೆಜ್ಜೆ ಎತ್ತಿಟ್ಟ ಹಾಗಲ್ಲ ಬೇರು ಕಿತ್ತು ಹೊರಡುವುದೆಂದರೆ. ಬೇರುಗಳು ನೀರಿನ ಸೆಲೆಯ ತನಕ ಟಿಸಿಲೊಡೆದು ಬೆಳೆದು ಆ ಮಣ್ಣಿನಲ್ಲೇ ನೀರು, ಗೊಬ್ಬರ, ಬೆಂಬಲ, ಅವಕಾಶ ಪಡೆದುಕೊಂಡು 'ನಾನಿಲ್ಲಿ ಪರ್ಮನೆಂಟ್' ಎಂದುಕೊಂಡಿದ್ದಾಗ 'ಎದ್ದು ಹೋಗು' ಎಂದು ಅನುಲ್ಲಂಘನೀಯ ಆಜ್ಞೆ ನೀಡಿದರೆ ಆಗುವ ನೋವು ಸಂಕಟ ಅಳತೆಗೆ ನಿಲುಕಲಾರದ್ದು. ಅನುಭವಿಸಿದವರಿಗೇ ಗೊತ್ತು ಈ ಮರಣ ಸಂಕಟ.

ಪ್ರಯಾಣದುದ್ದಕ್ಕೂ ಸರೋಜಾ ತನ್ನರಿವಿಲ್ಲದೇ ನನಗೆ ಜೀವನದ ವಾಸ್ತವತೆ, ಆಳ, ಅಗಲ, ವಿಸ್ತಾರಗಳ ಕಲ್ಪನೆ ಮೂಡಿಸುತ್ತಾ ಹೋದಳು.

'ಹೋದ ತಿಂಗಳು ನಮ್ಮ ಮಾವ ತೀರಿಕೊಳ್ಳುವ ತನಕ ನನ್ನ ಮೈದುನ ತಾನಾಯ್ತು ತನ್ನ ಕೆಲಸವಾಯ್ತು ಅಂತ ಸುಮ್ಮನಿದ್ದ. ಅಪ್ಪನ ವೈಕುಂಠ ಮುಗಿದು

ಮೂರು ಗಳಿಗೆ ಕಳೆಯೋದೊಳಗೇ ಆಸ್ತಿ ಪಾಲು ಕೊಡಿ ಅಂತ ಶುರು ಮಾಡಿದ. ಇಷ್ಟು ವರ್ಷ ನಾವು ಎಷ್ಟೆಲ್ಲ ಕಷ್ಟಪಟ್ಟು ರೂಢಿಸಿದ ಜಮೀನು ಅದು. ಪಂಪ್‌ಸೆಟ್ಟು ಕರೆಂಟಿಗೇ ಇವರು ನಾಯಿ ತಿರುಗಿದ ಹಾಗೆ ತಿರುಗಿದ್ದು, ಈಗ ಲಾಟರಿ ಹೊಡೆದ ಹಾಗೆ ಅವನಿಗೆ ಅರ್ಧ ಹೋಗುತ್ತೆ."

"ನಿಮ್ಮ ಮಾವನಿಗೆ ಏನಾಗಿತ್ತು?'

"ಆಗೋದೇನು, ಪ್ರಾಯ ಆಗಿತ್ತು, ಕ್ಯಾನ್ಸರು ಅಂದ್ರು, ಮೂರು ತಿಂಗಳು ಒದ್ದಾಡಿ ಬಿಟ್ಟು, ಅವರ ಸಂಕಟ ನೋಡೋಕಾಗ್ತಿರಲಿಲ್ಲ. ವಯಸ್ಸಾಗಿದೆ ಕೀಮೋಥೆರಪಿ ತಡೆದುಕೊಳ್ಳಕ್ಕಾಗಲ್ಲ ಅಂತ ಡಾಕ್ಟು ಹೇಳಿದರೆ, ಹಾಗಾದ್ರೆ ನನ್ನನ್ನು ಹಂಗೇ ಬಿಟ್ಟುಬಿಡ್ತೀರಾ? ಅಂತ ಕೇಳಿದರು. ನಮಗೆಲ್ಲ ಒಂಥರಾ ಹುಚ್ಚು ಹಿಡಿದ ಹಾಗಾಗಿತ್ತು. ಅಂತಾ ನೋವು ತಿಂದರು, ಒಂದು ಸಲ ಜೀವ ಹೋದರೆ ಬಿಡುಗಡೆಯಾಗುತ್ತಿಲ್ಲಪ್ಪಾ ಎನಿಸಿಬಿಟ್ಟಿತ್ತು" .

ಸಾವು ಎಂದರೆ ಬಿಡುಗಡೆ ನಿಜ. ಆದರೆ ಬುದ್ಧಿ ತಿಳಿದಾಗಿನಿಂದ ಜಾಗ್ರತೆಯಾಗಿ ನೋಡಿಕೊಂಡು, ಆರೈಕೆ ಮಾಡಿ ಸಾಕಿಕೊಂಡ ಈ ದೇಹವೆಂಬುದು ಕಷ್ಟಬಿದ್ದು ರೂಢಿಸಿಕೊಂಡ ಜಮೀನಿನಂತೆ, ಅನಂತ ಅವಕಾಶದಲ್ಲಿ ಅಲೆದಾಡುತ್ತಿದ್ದ ಆತ್ಮಕ್ಕೆ ನಿಲ್ಲಲು ಸಿಕ್ಕಿದ ನೆಲೆ. ನೆಲೆಯೊಳಗೆ ಇಳಿದ ಜೀವಸೆಲೆ ತಾನಾಗಿ ಅಷ್ಟು ಸುಲಭದಲ್ಲಿ ಆರುತ್ತದೆಯೇ? ಇಲ್ಲ. ಅದು ಆರುತ್ತಿದ್ದರೂ, ಆದಷ್ಟೂ ಆದ್ರತೆಯನ್ನು ಹೀರಿಕೊಂಡು ಹಸಿರಾಗಿ ಚಿಗುರುವ ಯತ್ನದಲ್ಲಿ ಸದಾ ಮಗ್ನವಾಗಿರುತ್ತದೆ. ಔಷಧಿ ಪಥ್ಯ, ಹರಕೆ, ಪೂಜೆ, ಮಂತ್ರ, ತಂತ್ರಗಳ ಬಲದಿಂದ ಹೇಗಾದರೂ ಇಲ್ಲೇ ಉಳಿಯಲು ಹೆಣಗಾಡುತ್ತದೆ; ಸಿಕ್ಕಿದ ಸೀಟನ್ನು ಬಿಟ್ಟು ಏಳುವುದಿಲ್ಲವೆಂದು ಮೊಂಡು ಹಿಡಿಯುತ್ತದೆ. ಮೊಂಡಾಟ ಮಾಡಿದಷ್ಟೂ ಎದ್ದು ಹೋಗುವುದು ಕಷ್ಟವಾಗುತ್ತದಲ್ಲದೇ, ಕೂತಲ್ಲೇ ಸದಾಕಾಲ ಕೂತಿರಲು ಸಾಧ್ಯವಿಲ್ಲವಲ್ಲ! ಬಸ್ಸು ನಿಲ್ದಾಣಕ್ಕೆ ಬಂದು ನಿಂತ ಮೇಲೆ 'ಸೀಟು ನನ್ನದು' ಎಂದು ಕೂತಿರುವ ಕಲ್ಪನೆಯೇ ಅಸಂಬದ್ಧ. ನಮ್ಮ ನಿಲ್ದಾಣ ಬಂದಾಗ ಇಳಿಯಲೇಬೇಕಲ್ಲ! ಎಲ್ಲರೂ ಎದ್ದು ಹೋಗುವವರೇ, ಎಲ್ಲರೂ ಇಳಿದು ಹೋಗುವವರೇ!

**(ಕೃಪೆ - ಸುವರ್ಣ ಲಲಿತ ಪ್ರಬಂಧ, ಕನ್ನಡ ಸಂಸ್ಕೃತಿ ಇಲಾಖೆ, ೨೦೦೬)**

## ೧೩. ಸೊರಕೆ ಮಯಂ ಈ ಜಗತ್!

**- ಶ್ವೇತಾ ನರಗುಂದ**

'ಕಸಬರಿಗೆ' ಅರ್ಥಾತ್ ಸೊರಕೆ ಅರ್ಥಾತ್ ಬರಲು ಅನ್ನೂ ಬಹೂಪಯೋಗಿ ಅತ್ಯಾವಶ್ಯಕ ವಸ್ತುವನ್ನ ಪ್ರೀತಿಯಿಂದ ಹಿಡಿ, ಭಾರಗಿ, ಕಸಪರಕಿ, ಕಸಬರಿ ಅಂತನೂ ಕರೀತಾರ, ನಾಲಗೀಗೆ ಸ್ವಲ್ಪ ವ್ಯಾಯಾಮ ಬೇಕು ಅಂದ್ರೆ ಈ ಮಹಾನ್ ವಸ್ತುವನ್ನ ಕಸಕಲ್, ಕಸಕಿಲ್, ತೊಡಪ ಅಂತನೂ ಕರೀಬಹುದು. ಪರಭಾಷಾ ವ್ಯಾಮೋಹಿಗಳು ತುಟಿಗೆ ತುಟಿ ಹಚ್ಚಿ ಬೂಮ್ ಅಂತ ಸ್ಟೈಲಿಶ್ ಆಗಿ ಉಸುರಿದರ, ಹಿಂದೀ ಸಿನೇಮಾ ಗುಂಗಿನಲ್ಲಿರೋರು, ರಾಷ್ಟ್ರಭಾಷಾ ತರ್ಕ ಪ್ರವೀಣರು ಇಷ್ಟಗಲ ಬಾಯಿ ತಗದು ಝಾಡೂ ಅಂತ ಭಾರೀ ಶಬ್ದ ಮಾಡತಾರ. ಹ್ಯಾಂಗರ ಕರೀಲಿ; ಕಸಬರಿಗಿ ಅನ್ನೂ ಮಹಾನ್ ವಸ್ತು ತನ್ನ ಜಾತಿ, ಉಪಜಾತಿ, ಒಳಜಾತಿ ಪ್ರಭೇದಗಳ ಬಂದು ಬಾಂಧವರನ್ನೊಡಗೂಡಿ, ಜಗತ್ತಿನ ಮೂಲೆಮೂಲೆಯ ಮೇಲೆ ಕಬ್ಬಾ ಮಾಡ್ಯಾವ ಅನ್ನೂ ಮಾತ ಮಾತ್ರ ನೂರಕ್ಕ ನೂರರಷ್ಟು ಖರೆ ಅದ. 'ಶುಚೀ ಕಾರಣ ಪೊರಕೆ ಮಯಂ ಜಗತ್!'

ಶಬ್ದ ಕೋಶದ ವಿವರಣೆ ಪ್ರಕಾರ ಕಸಬರಿಗೆ ಅಂದ್ರ 'ಕಸ ಕಳೆಯುವ ಸಾಧನ', ಈ ಜಗತ್ತಿನಾಗ ಕಸ ಇಲ್ಲದ ಜಾಗಾನ ಇಲ್ಲ. ಅವಳ ಪಾತಾಳ ಮೈಮ ಭೂಮದ ತುಂಬೆಲ್ಲಾ ಕಸ! ಆದಮ್ ಮತ್ತ ಈವ್ರರ ಜೋಡೀನ ಶ್ರೀ ಗಿಫ್ಟ್ ರೂಪದಾಗ ಬಂದಿರಬೇಕು ಈ ಕಸ, ಅಂದಮ್ಯಾಲೆ ಅದಕ್ಕೂ ಮನಶ್ಯಾನಷ್ಟೇ ಪುರಾತನವಾದ ಇತಿಹಾಸ ಅದ. ಮನಶ್ಯಾನ ಜೋಡಿ ಪೈಪೋಟಿಯಿಂದ ಅದು ಕೂಡಾ ಭೂ ಜಲ ವಾಯುಗಳನ್ನ ಆಕ್ರಮಿಸಲಿಕತ್ತದ. ಸಮುದ್ರ, ನದಿ, ಸರೋವರ, ಕೊಳ್ಳ, ಬೆಟ್ಟ, ವಾಯುಮಂಡಳ- ನೋಡಿದಲ್ಲೆಲ್ಲಾ ಕಸ! ನಮ್ಮ ನೋಟದ ವ್ಯಾಪ್ತಿಯನ್ನ ಸ್ವಲ್ಪ ಸೀಮಿತಗೊಳಿಸಿಕೊಂಡ ರಸ್ತೆದ ಮ್ಯಾಲೆ ಕಸಾ, ಗಟಾರದ ಒಳಗ ಕಸಾ, ಕಂಪೌಂಡ್ ವಳಗ ಕಸಾ, ಹೊರಗ ಕಸಾ, ಹೊಸ್ತಲ ಒಳಗ ಕಸಾ, ಹೊರಗ ಕಸಾ, ನೆಲಾ ಗ್ವಾಡಿ ಬಾಗಲಾ ಬಿಡಕಿ ಜಂತಿ ಮ್ಯಾಲೂ ಕಸಾ, ಹಾಲ್ಲು ಬೆಡ್‌ರೂಮು ಕಿಚನ್ನು ಬಚ್ಚಲದಾಗೂ ಕಸಾ, ಟೇಬಲ್ಲು ಖುರ್ಚಿ ಮಂಚಾ ಕಪಾಟು ಟೀವಿ ಫ್ಯಾನ್ನು ಫ್ರಿಜ್ಜು ಮೈಕ್ರೋವೇವು.. ಉಫ್ ನೋಡಿದಲ್ಲೆಲ್ಲಾ ಕಸಾ! ಈ ಸರ್ವವ್ಯಾಪಿ ಕಸದ ವೈರಿಯಾಗಿ ಕಸಬರಿಗೆಗಳು ಅವ ಅಂತ ಜೀವನ ಸಹ್ಯವಾಗದ. ಈ ಕಸಬರಿಗಿ ಕೈಗೋಳು ನಾವು ಊಹಾ ಮಾಡದಂಥಾ ಸೈಟ್‌ಗೋಳನೆಲ್ಲಾ ವಿಜಿಟ್ ಮಾಡಿ, ಕನಸ ಮನಸನ್ಯಾಗ ಎಣಿಸದಂಥಾ ಜಗಾ ಎಲ್ಲಾ ಸವರಿ ಬರತಾವ. 'ಆಡ ಮುಟ್ಟದ ಗಿಡಾ ಇಲ್ಲಾ, ಕಸಬರಿಗಿ ಮುಟ್ಟದ ಜಾಗಾ ಇಲ್ಲಾ!'

ಈ ಚಿರಂಜೀವಿ ಚಿರಂಜೀವಿ ಯಾಕ ಅಂತೀನಿ ಅಂದ್ರ ಕಸಾ ಇರೂ ತನಕಾ ಕಸಬರಿಗಿ ಇರೂವ, ಮತ್ತೆ ಕಸಕ್ಕೆ ಸಾವಿಲ್ಲಾ- ಬಹೂಪಯೋಗಿ ಕಸಬರಿಗೆಯ ಬಗ್ಗೆ ಹತ್ತನೆ ವರ್ಗದ ಪಠ್ಯದಾಗ 'ಕಸಬರಿಗೆ ಕಥಾನಕ' ಅಂತ ಒಂದು ಪಾಠ ಸೇರಸಬೇಕು

ಅಂತ ನನ್ನ ಪ್ರತಿಪಾದನೆ. ಇಷ್ಟ ಮಹತ್ವಪೂರ್ಣ ವಸ್ತುವಿನ ಬಗ್ಗೆ ಮಕ್ಕಳಿಗೆ, ಅವರಿಗಷ್ಟ ಯಾಕ ಎಲ್ಲಾರಿಗೂ ಸಂಪೂರ್ಣ ಮಾಹಿತಿ ಇರೂದು ಅವಶ್ಯ ಅದ. ಕಸಬರಿಗೆಯ ಜನನ ಯಾವಾಗ ಆತು, ಅದರ ಮೂಲ ಸ್ವರೂಪ ಏನಿತ್ತು, ಅದರ ವಿಕಸನದ ಹಂತಗಳು ಯಾವುವು, ಈಗ ಕಸಬರಿಗೆ ಎಷ್ಟು ಪ್ರಬೇಧಗಳಲ್ಲಿ ವಿಜೃಂಭಿಸುತ್ತಿದೆ... ಇತ್ಯಾದಿ ಇತ್ಯಾದಿ ತಿಳವಳಿಕೆ ಅಗತ್ಯ ಅದ. ಡಾಕ್ಟರೇಟ ಪ್ರಬಂಧಕ್ಕೆ ಕೂಡಾ ಇದು ಒಳ್ಳೆ ವಿಷಯ.

ನೆಲ ಅಗದ ತಗದು, ಒಂದು ಕಸಬರಿಗೆ ಕಡ್ಡಿ ಪಳೆಯುಳಿಕೆಯನ್ನ ಹುಡುಕಿ, ಅದರ ಕಾರ್ಬನ್ ಡೇಟಿಂಗ್ ಮಾಡಿ, ಕಸಬರಿಗೆಗಳು ಇಂಥಾ ಸಂವತ್ಸರ, ಇಂಥಾ ತಿಥಿ, ಇಂಥಾ ರಾಶಿ, ನಕ್ಷತ್ರದಾಗ, ಇಂಥಾ ಘಳಗಿಯೊಳಗ, ಇಂಥಾ ಜಾಗಾದಾಗ ಹುಟ್ಟಿತು ಅಂತ ಹೇಳೂ ಸಂಶೋಧನ ಕ್ರಿಯೆಯನ್ನು ನನಗೆ ತಿಳದ ಮಟ್ಟಿಗೆ ಇನ್ನೂ ತನಾ ಯಾರೂ ಮಾಡಿಲ್ಲಾ. ಕಸ ಅನ್ನೂ ಪದದ ಹುಟ್ಟಿನ ಹಿಂದನ ಕಸಬರಿಗಿ ಹುಟ್ಟಿರಬಹುದು ಅಥವಾ ಕಸಾ ಗುಡಸಬೇಕು, ಸ್ವಚ್ಛ ಮಾಡಬೇಕು ಅನ್ನೂ ಹುಳಾ ಮನಶ್ಯಾನ ತಲ್ಯಾಗ ಕಿಲಿಬಿಲಿ ಮಾಡಲಿಕತ್ತ ಕೂಡಲೇ ಕಸಬರಿಗಿ ತತ್ತಿ ಹುಟ್ಟಿರಬೇಕು. ಆದಿ ಕಸಬರಿಗೆಯ ರೂಪದೊಳಗ ಎಲಿ ತುಂಬಿದ ಟೊಂಗೆಗಳನ್ನ ಕೂಡಿಸಿ ಹಿಡದು ಅಥವಾ ಹುಲ್ಲಿನ ಜಾತಿ ಗಿಡಗಳನ್ನ ಕೂಡಿಸಿ ಹಿಡದು ಕಸಾ ಉಡಗಿ ಒಗದ ಬಿಡತಿದ್ರಂತ. ಆವಾಗಿನ ಕಾಲದಾಗನ 'ಯೂಜ್ ಆ್ಯಂಡ್ ಫ್ರೀ' ಸಂಸ್ಕೃತಿ ಇತ್ತು ಅನ್ನೋದಕ್ಕ ಕಸಬರಗೀನ ಸಾಕ್ಷಿ ಅಥವಾ 'ಪರಿಸರ ಸ್ನೇಹಿ' ವಸ್ತುಗಳನ್ನು ಉಪಯೋಗಿಸಬೇಕು ಅನ್ನೂ ತಿಳವಳಿಕೆ ಮನಶ್ಯಾಗ ಆವಾಗ ಇತ್ತು ಅನಬಹುದು. ಆದರ, ಮನಶ್ಯಾಗ ಹೊಸಾಹೊಸಾದನ್ನ ಹುಡಕಿಕೋತ ಹೋಗೂ ಚಟಾ, ಫಾರ್ ಗುಡ್ ಆರ್ ಫಾರ್ ಬ್ಯಾಡ್. ಅವನ ಇದೇ ಪ್ರವತ್ತಿಯಿಂದ ಇವತ್ತ ಕಸಬರಗಿ ಮಾರಾಟ ಮಾಡಿ ಮಂದಿ ಅರಮನಿ ಕಟಿಗೋತಾರ. ಆ ಮಾತ ಇಲ್ಲಿ. ಉಪಯೋಗದ ದೃಷ್ಟಿಯಿಂದ, ಅನುಕೂಲದ ದೃಷ್ಟಿಯಿಂದ, ಉಳಿತಾಯದ ದೃಷ್ಟಿಯಿಂದ ಈ ಆದಿ ಮೊರಕೆಯೊಳಗ ಬದಲಾವಣೆ ತರೂದು ಸೂಕ್ತ ಅಂತ ಅನಸಿರಬೇಕು. ಒಬ್ಬ ಮಹಿಳೆಯ ತಲೀ ವಳಗನ ಈ ವಿಚಾರ ಬಂದಿರಲಿಕ್ಕೆ ಬೇಕು. ಮಹಿಳೆ ಅಂತ ಯಾಕ ಅಂತೀನಿ ಅಂದ್ರ, ಕಸಬರಿಗೆ ಹಿಡಿದು ನೃತ್ಯ ಮಾಡುವ ಮಹಾನ್ ಭಾಗ್ಯವನ್ನ ಪುರುಷರು ಉದಾರ ಮನಸ್ಸಿನಿಂದ, ಮಹಿಳೆಯರಿಗೆ ಥೋಲೊ ವ್ಯಾಯಾಮ ಆಗಲಿ, ಅವರ ಆರೋಗ್ಯ ನಳನಳಿಸಲಿ, ಅವರು ನೂರು ಕಾಲ ಬಾಳಿ ಪುರುಷರ ಸೇವಾ ಮಾಡಿಕೋತ ಇರಲಿ ಅನ್ನೋ ಉದಾತ್ತ ವಿಚಾರದಿಂದ ಮಹಿಳೆಯರಿಗೇ ಬಿಟ್ಟುಕೊಟ್ಟಾರಲ್ಲಾ ಅದಕ್ಕೆ ಕಸಬರಿಗೆಯ ಗುಣ ಅವಗುಣಗಳು, ಅನುಕೂಲ ಅನಾನುಕೂಲಗಳು, ಕಷ್ಟ ಸುಖಗಳು ಕಸಬರಿಗೆಯನ್ನುಪಯೋಗಿಸುವ ಮಹಿಳೆಗೇ ಗೊತ್ತಾಗೋದ್ರಿಂದ, ಅವಳಿಗೇ ಕಸಬರಿಗೆಯನ್ನು ಸುಧಾರಿಸುವ ವಿಚಾರ ಬಂದಿರಬೇಕು. ಅಷ್ಟಕ್ಕೂ 'ಅಗತ್ಯವೇ ಹೊಸ ಸೃಷ್ಟಿಯ ಮಾತೆ. ಪರಿಣಾಮವಾಗಿ, ಮೊರಕೆಯ ಕಡ್ಡಿಗಳನ್ನ ಕೂಡಿಸಿ ಬಳ್ಳಿಯಿಂದ ಯಾ ನಾರಿನಿಂದ ಕಟ್ಟಿ, ಉಡಗಿ, ನಾಳಿಗೆ ಬರತದ ಅಂತ ಮೂಲೀವಳಗ ಇಡಲೀಕತ್ತರು. ಈ ಸುಧಾರಿತ ಪ್ರಭೇದದ ಉದಯದಿಂದ ಕಸಬರಗಿಗೆ ಅಂತ ಒಂದ ಜಾಗಾ, ಮನಿ ಸಿಕ್ತು. ಮುಂದ, ಅದರ

ದಂಡ ಮುಂಡಗಳ ಉದ್ದ ಅಗಲದೊಳಗ ಸ್ವಾಮಿನಿಯ ಕುಪ್ಪಸದಂತೆ ನಿರಂತರವಾಗಿ ಏರಿಳಿತಗಳಾಗಲಿಕತ್ತಿತು. ಕಸಬರಿಗೆಯ ಮೂಲ ಸಾಮಗ್ರಿ ವಳಗ ಬದಲಾವಣೆಗಳಾಗಿ, ಇವತ್ತಿನ ದಿವಸ ಲೆಕ್ಕವಿಲ್ಲದಷ್ಟು ತರದ ಕಸಬರಿಗೆಗಳು, ಕಸಬರಿಗೆ ಅಂಗಡಿ ಅರ್ಥಾತ್ 'ಬೂಮ್ ಸ್ಟೋರ್' ಶೋಕೇಸುಗಳಲ್ಲಿ ವಿಜೃಂಭಿಸಲಿಕತ್ತಾವ, ಗೋಡೆ ಜಂತಿಯಿಂದ ತೂಗಾಡತಿರತಾವ, ಬಣ್ಣದ ಪ್ಲಾಸ್ಟಿಕ್ ಡ್ರಮ್ಮುಗಳೊಳಗ ವೈಯ್ಯಾರದಿಂದ ನಿಂತಿರತಾವ.

ಕಸಬರಿಗೆ ಹಿಡಿದು ನಡೆ ಬಗ್ಗಿಸಲಾಗದೆ ಪರದಾಡುತ್ತಿದ್ದ ಹೆಂಡತಿಯ ಬವಣೆ ನೋಡಲಾರದೆ ಒಬ್ಬ ಪತಿರಾಯ, ಮೂಲೆಯಲ್ಲಿದ್ದ ಕೋಲಿಗೆ ಹುಲ್ಲು ಬಿಗಿದು ಕೊಟ್ಟು, ಇನ್ನ ನಿಂತ ಕಸಾ ಉಡಗು ಅಂತ ಹೇಳಿ, ಘನಂದಾರಿ ಕಾರ್ಯ ಮಾಡಿದ ಧನ್ಯತೆಯಿಂದ ವಿರಾಜಮಾನನಾದ ಮೇಲೆ, ಕಸಬರಿಗೆಯ ಎತ್ತರ ಸಾಧಾರಣ ಮನಶ್ಯಾಗ ಸರಿಸಮಾ ಆತಂತ. ಅದ ಕ್ಷಣದೊಳಗ ಸನ್ನೆಗೋಲು ಅನ್ನೂ ಶಬ್ದದ ಉತ್ಪತ್ತಿ ಆಗಿರಬೇಕು ಅಂತ ನಾ ಅಂತೀನಿ. ಯಾಕಂದ್ರ ಇನ್ನೂತನಕಾ 'ಸನ್ನೆಗೋಲು' ಶಬ್ದ ಯಾವಾಗ ಹುಟ್ಟಿತು ಅನ್ನೂದು ಯಾರಿಗೂ ಗೊತ್ತಿಲ್ಲ! ಈ ನಮ್ಮ ಕಸಬರಿಗಿ ನೋಡೇ ಸನ್ನೆಗೋಲಿನ ಕಲ್ಪನೆ ಮನಶ್ಯಾನ ತಲ್ಯಾಗ ಬಂದಿರಬೇಕೆನ್ನುವುದರಿಂದ 'ಜಗತ್ತಿನ ಪ್ರಥಮ ಸರಳ ಯಂತ್ರ' ಅನ್ನೋ ಬಿರುದು ಕಸಬರಿಗೀಗೇ ಸಿಗಬೇಕು ಅಂತ ನನ್ನ ಬಲವಾದ ಪ್ರತಿಪಾದನೆ. ಈಗಿಗೆ ಸವ್ವಾ ಎರಡ ಸಾವಿರ ವರ್ಷದ ಹಿಂದ, 'ನನಗೆ ನಿಲ್ಲಲು ಸ್ಥಳ ಮತ್ತು ಒಂದು ಉದ್ದನೆಯ ಕೋಲು ಕೊಟ್ಟರೆ, ನಾನು 'ಭೂಗೋಳವನ್ನೇ ಎತ್ತಿಡುತ್ತೇನೆ' ಅಂತ ಹೇಳಿ ರಾತ್ರೋ ರಾತ್ರಿ ಆರ್ಕಿಮಿಡೀಸ್ ಅನ್ನೊ ವಿಜ್ಞಾನಿ ಇಡೀ ಜಗತ್ತಿಗೇ ಪ್ರಸಿದ್ಧ ಆಗಿದ್ದರ ಶ್ರೇಯ ಖರೇವಂದ್ರ ಕಸಬರಿಗೀಗೇ ಸಿಗಬೇಕು.

ವನಿತೆಯ ಕೈಯೊಳಗಾಡೂ ವಸ್ತು ಈ ಕಸಬರಿಗಿ ಅಂದ ಮ್ಯಾಲೆ ನಾಜೂಕುತನಾ, ಸುಂದರತೆ ಮತ್ತು ವಿವಿಧ ಬಗೆಗಳು ಎಷ್ಟೇ ಇದ್ದರೂ ಸಾಲದು. ಕಸಬರಿಗೆಯ ಹಿಡಿ ಕೋಮಲ ಕೈಗಳನ್ನ ತರಚದಂತೆ ಒತ್ತದಂತೆ ಇರಬೇಕು, ಅದರ ಆಕಾರ ಗಾತ್ರ ಕಸ ಗುಡಿಸುವ ತೋಳುಗಳನ್ನು ದಣಿಸದಂತಿರಬೇಕು, ಕಸಗುಡಿಸುವವಳ ಮನಸ್ಸು ಪ್ರಫುಲ್ಲವಾಗಿರುವಂತೆ ಕಸಬರಿಗೆ ಶೃಂಗಾರಗೊಂಡಿರಬೇಕು, ತಾಳಿಕೆ ಬರುವಂತಿರಬೇಕು... ಅನ್ನೊ ನಾನಾ ನ್ಯಾಯಯುತವಾದ ಬೇಡಿಕೆಗಳಿಂದ, ಕಟ್ಟಿಗೆಯ, ಕಬ್ಬಿಣದ, ಪ್ಲಾಸ್ಟಿಕ್ಕು ಪೀವೀಸಿಯ ಹಲವು ಬಣ್ಣ ಆಕಾರ ವಿನ್ಯಾಸದ ದಂಡ ಹೊತ್ತ ಕಸಬರಿಗೆಗಳು ಜನ್ಮ ತಾಳ್ಯಾವ. ಅದರಂತೆ ಕಸಬರಿಗೆ ಮುಂಡದ ಆಕಾರ ಗಾತ್ರ ಮತ್ತು ಸಾಮಗ್ರಿ, ಮಾಡುವ ಕೆಲಸಕ್ಕೆ ತಕ್ಕಂತೆ ಬಹಳಷ್ಟು ಥರದೊಳಗ ಉಪಲಬ್ದ ಅವ. ಮುಂಜಾನೆದ್ದು ಅಂಗಳ ಉಡಗಲಿಕ್ಕೆ ಉಪಯೋಗಿಸೊ ಟೆಂಗಿನ ಕಸಬರಗೀಗೆ ಗಾಳಿಗೆ ಹಾರಿಬಂದ ಕಾಗದಾ ಪ್ಲಾಸ್ಟಿಕ್ಕು ದಪ್ಪ ಕಸಾ ಉಡಗಲಿಕ್ಕೆ, ಮತ್ತ

ಬಚ್ಚಲ ಒಂದ ಬಿಟ್ಟ ಮನಿ ವಳಗ ಬ್ಯಾರೆ ಎಲ್ಲೂ ಪ್ರವೇಶ ಇಲ್ಲ. ಮನಿ ಉಡಗಲಿಕ್ಕೆ ಉಪಯೋಗಸೂದು ಮೂರೂವರೆ ಫೂಟು ಉದ್ದದ, ಟ್ರಿಮ್ ಮಾಡದ ಗುಂಡು ಕಸಬರಿಗಿ, ಹತ್ತರಿಂದ ಹನ್ನೆರಡ ಫೂಟು ಬೆಳೆಯೊ 'ಸೋರ್ಘಮ್ ವಲ್ಗರ್' (ಖಂಡಿರುಣಟ ಗಿಣಟಂಚಿಡಿಜ) ಅನ್ನೂ ಹುಲ್ಲಿನ ಜಾತಿ ವಾರ್ಷಿಕ ಸಸ್ಯದ ಬೀಜ ಕುಚ್ಚುಗಳನ್ನ ಬೀಜ ಬಲಿಯೂ ಮದಲ ಕತ್ತರಸಿ, ಒಣಗಿಸಿ, ತೂಕಾ ಮಾಡಿ ಕಟ್ಟಿ, ಹಸಿರು ನೀಲಿ ಕೆಂಪು ಬಣ್ಣದ ಪ್ಲಾಸ್ಟಿಕ್ ಹಿಡಿವಳಗ ಇಳಿಸಿದ



ಕಸಬರಿಗೆಗಳು 'ಜಜಜ', 'ಮಂಕಿ ಬ್ರ್ಯಾಂಡ್' ಅನ್ನೂ ಹೆಸರು ಹೊತ್ತು. ಪ್ಲಾಸ್ಟಿಕ್ ಪರದಾ ಹಕ್ಕೊಂಡು ಸೂಪರ್ ಮಾರ್ಕೆಟ್‌ನಾಗ ಕೂತು ಅಂದ್ರೆ ಕಿಮ್ಮತ್ತ ಮಸ್ತ ಏರಿರತದ. ಕುಶಲ ಕಾರ್ಮಿಕರು ಹುಲ್ಲಿನ ಕುಚ್ಚುಗಳನ್ನ ಟ್ರಿಮ್ ಮಾಡಿ ಜೋಡಿಸಿ ಹೊಲದು, ತ್ರಿಕೋನಾಕಾರದ ಮುಂಡವನ್ನು ತಯಾರು ಮಾಡಿ, ದಂಡಕ್ಕೆ ಜೋಡಿಸಿದ ಬ್ರೂಮ್‌ಗಳು ಕೂಡ ಯಾವ ವಸ್ತುವಿಗೂ ಕಡಿಮೆ ಇಲ್ಲದ ಮಯ್ಯಾದೆಯಿಂದ ಮಾರಾಟ ಆಗತಾವ. ನಮ್ಮಲ್ಲೇ ಈ ಜಾತಿ ಕಸಬರಿಗಿ ಮನಿ ಎಲ್ಲಾ ಓಡ್ಯಾಡೀದ್ರೂ ಅದಕ್ಕ ಅಡಿಗೀಮನಿ ದೇವರ ಮನೀ ವಳಗ ಪ್ರವೇಶ ಇಲ್ಲ. ಅಡಗಿಮನಿ ಉಡಗೂ ಸ್ಪೆಶಲ್ ಗೌರವಕ್ಕ ಪಾತ್ರ ಆಗಿರೋದು ಒಂದು ಫೂಟಿನಷ್ಟು ಎತ್ತರದ ಮೆದಿ ಹುಲ್ಲಿನ ಕಸಬರಿಗಿ, ಇದು ಅಡಗೀಮನಿ ಸ್ವಚ್ಛ ಮಾಡೂದಪ್ಪ ಅಲ್ಲ, ಅತ್ತೀಮನಿ ಸೊಸೆಯಂದಿರು ಮಣಕಾಲು ಮಡಚದ, ನಡ ಬಾಗಿಸಿ ಕಸ ತೆಗೆಯಬೇಕೆನ್ನುವ ಪದ್ಧತಿ ಇರುವದರಿಂದ, ತನ್ನ ಯಜಮಾನಿಗೂ ಸಾಕಷ್ಟು ವ್ಯಾಯಾಮ ಮಾಡಸತದ. ಇನ್ನ ದೇವರ ಕಟ್ಟಿ ಮ್ಯಾಲೆ ಪ್ರವೇಶ ಮಾಡೂ ಕಸಬರಿಗಿ ಅಂದ್ರ ಕಲ್ಹಾರಿನ ಕಸಬರಿಗಿ, ಕೊಲ್ಹಾಪುರದ ಅಂಬಾಬಾಯಿ ಗುಡಿಗೆ ಹೋದವರು ಆಗ ಇಂಚಿನ ಇಂಥಾ ಕಸಬರಗಿಗೋಳ ಮರೀಲಾರದ ತೊಗೊಂಡು ಬರತಾರ. ಇಡೀ ಮನಿ ವಳಗ ಮನಶ್ಯಾ ಏಕಾಂತದೊಳಗ ತನಗ ತಾನ ಇರೂ ಜಾಗಾ ಅರ್ಥಾತ್ ಸ್ನಾನಗೃಹ ಮತ್ತೆ ಶೌಚಗೃಹ ಸ್ವಚ್ಛ ಮಾಡೂ ಟೆಂಗಿನ ಕಸಬರಿಗಿ ಜಾಗಾದಾಗ ಈಗಿನ ಮಾಡರ್ನ್ ಮನೀವಳಗಿನ 'ಆಲ್ ಇನ್ ವನ್' ಬಾಥ್‌ರೂಮ್‌ದಾಗ, ಪೀವೀಸಿ ಯಾ ನೈಲಾನ್ ಗಿಡ್ಡ ಉದ್ದ ಗುಂಡ ಚಪಟ ಡೊಂಕ ನಾನಾ ನಮೂನಿ ಬ್ರಶ್‌ಗಳು ಅರ್ಥಾತ್ ಸಿರಿಗನ್ನಡದ ಕಸಬರಿಗೆಗಳು ಶೋಭಾಯಮಾನ ಆಗ್ಯಾವ. ಹಿತ್ತಲ ಉಡಗೊ, ಕೊಟ್ಟಿಯೊಳಗಿನ ಶಗಣಿ ಗಂಜಲ ಉಡಗೊ ಸಿಂಧಿ ಕಸಬರಿಗೆಗಳ ದಲಿತ ಸ್ಥಾನಮಾನ, ಅವು ಹೆಂಡದ ಮರದಿಂದ ಉದ್ಭವಿಸಿರುವುದರಿಂದ ಅನ್ನೋದಕ್ಕಿಂತ ಅವು ಮಾಡುವ ಕೆಲಸ ದಿಂದ ಅನ್ನೂದು ಹೆಚ್ಚು ಸಮಂಜಸ ಅನಸತದ.

ಜೇಡರ ಹುಳಗಳ ಜನ್ಮ ಜನ್ಮಾಂತರದ ವೈರಿಗಳ ಪಟ್ಟ ನಮ್ಮ ಕಸಬರಗೀಗೆ ಯಾವ ಸಮಾರಂಭ ಇಲ್ಲದ ಸಿಕ್ಕಬಿಟ್ಟದ. ಈ ಮನಿಮುರಕ ಕಸಬರಿಗಿ ತಲಿ ಎತಗೊಂಡು ಕಾಲ ಮ್ಯಾಲೆ ಡಾನ್ಸ ಮಾಡೂವಂಥಾದ್ದು... ಉಳದೆಲ್ಲಾ

ಕಸಬರಿಗಿಗೋಳು ತಲಿ ಕೆಳಗ ಮಾಡಿ ಓಡ್ಯಾಡತಾವ. ಒಂಟಿ ಕಾಲಿನಂಥಾ, ಒಂಟಿ ಕಾಲಿನ ಮ್ಯಾಲೆ ಕುಂಟಿಗೋತ, ಚೆಂವ್‌ಗಣ್ಣಿನ ಗೊಂಬಿ ಮಾರಿ ಜಪಾನಿ ಹುಡಗ್ಯಾರ ಕೈಯ್ಯಾಗ ಪಟಾಪಟಾ ಮಾಡೂ ಬೀಸಣಗಿ ಗತೆ ಕೂದಲಾ ಹೊತ್ತು ಬರೂ ಈ ಕಸಬರಿಗಿ ಕಂಡ ಕೂಡಲೇ, ಜೇಡಗಳು ತಮ್ಮ ಕಡ್ಡಿ ಕಾಲಲೆ ದಾಪುಗಾಲಿಟ್ಟು ಮನಿ (ನಮ್ಮ ಮನವಳಗಿನ ತಮ್ಮ ಮನಿ) ಬಿಟ್ಟು ಓಡಿ ಹೋಗತಾವ.

ಈ ಎಲ್ಲಾ ಕಸಬರಗಿಗೋಳ್ನ  ಜೋಳಗ್ಯಾಗ ಹಾಕ್ಕೊಂಡು, ಬಗಲಾಗ ಕೂಸಿನ್ನ ಹೊತಗೊಂಡು, ತಲಿ ಹೊರಿ ಹೊತಗೊಂಡು ಬರೂ ಹೆಂಗಸಿಗೆ ಒಂದು ಭಕ್ರಿ ಹಾಕಿ, ಎರಡ ಕೊಡು ಮೂರ ಕೊಡು ಅಂತ ನಮ್ಮ ಅಜ್ಜಿ ಚೌಕಾಸಿ ಮಾಡಿ ಖರೀದಿ ಮಾಡತಿದ್ದದ್ದು ನೆನಸಿಗೊಂಡ್ರ, ಕಸಬರಿಗೆಗಳ ಸಾಮಾಜಿಕ ಸ್ಥಾನಮಾನ ಕಿಮ್ಮತ್ತು ಈಗ ಭಾಳ ಸುಧಾರಿಸೇದ ಅಂತ ಹೇಳಬಹುದು.



ತುಟ್ಟಿ ಸಾಮಾನುಗಳಾದ ಹುಚ್ಚರ ಪೆಟ್ಟಿಗೆ, ಗಣಕಯಂತ್ರ, ನಾಲ್ಕು ಕಾಲಿನ ವಾಹನಗಳನ್ನಾಕ್ರಮಿಸಿದ ಧೂಳುಕಸ ತೆಗೆಯಲು ಶಾಂಪೂ ವಾಶ್ ಮಾಡಿದ ಮೃದು ಕೂದಲಿನಂಥ ರೇಶಿಮೆಯಷ್ಟು ನವಿರಾದ ಎಳೆಗಳ, ಹಸಿರು ಹಳದಿ ಗುಲಾಬಿ ಪಟ್ಟಿಗಳ ಕುಚ್ಚು ಕಸಬರಿಗೆಗಳಂತೂ ಇವು ಶೋಕೇಸಿನ ಹೂದಾನಿಯಲ್ಲಿಡಲಿಕ್ಕೆ ಲಾಯಕ್ಕು ಅನ್ನೂ ಹಂಗ ಇರತಾವ.

ಈಗೀಗ ವಾಯುದೇವನನ್ನ ಹಿಡದು ತಂದು ಹೆಡಮುರಿಗಿ ಕಟ್ಟಿ, ಯಂತ್ರದೊಳಗ ತೂರಿಸಿ, ಅವನ ಕಡಿಂದ ಕಸಾ ಉಡಗೂ ಕೆಲಸಾ ಮಾಡಿಸಲಿಕತ್ತಾನ ಮನಶ್ಯಾ. ಅದೇ, ನಮ್ಮ ನಿರ್ವಾತ ಕಸಬರಿಗೆ ಅರ್ಥಾತ್ ವ್ಯಾಕ್ಯುಮ್ ಕ್ಲೀನರ್ ಹಾವಿನಂಥಾ ಮೂಗು ಹಿಡಕೊಂಡು ಮನಿ ತುಂಬ ಓಡ್ಯಾಡಿ ಬಿಟ್ರ ಸಂದಿಗೊಂದ್ಯಾಗಿನ ಕಸಾ ಸೈತ ಶರಣಾಗತದ. ಬೃಹತ್ ಗಾತ್ರದ ವ್ಯಾಕ್ಯೂಮ್ ಕ್ಲೀನರ್‌ಗಳನ್ನ ರಸ್ತೆ ಉಡಗೂದಕ್ಕೂ ಉಪಯೋಗ ಮಾಡತಾರ. ಹನ್ನೆರಡು-ಹದಿನೈದು ಫೂಟು ಅಗಲದ ಈ ನಿಶಾಚರ ಯಂತ್ರ ಒಂದು ಸುತ್ತು ಊರಿನ ಬೀದಿಗಳಲ್ಲಿ ತಿರಗಿ ಬಂದ್ರ, ಕಸಕಡ್ಡಿ ಧೂಳು ಎಲ್ಲಾ ಮಾಯ! ನಮ್ಮ ದೇಶದಾಗ ಇಂಥಾ ಕಸಬರಿಗಿಗೋಳು ಬಂದ್ರ, ಕಸಬರಿಗೆಯ ತ್ರಿಕೋನ ಮುಂಡವನ್ನ ಊರುಗೋಲು ಮಾಡಿಕೊಂಡು, ಎಲಿ ಅಡಕಿ ತಿಂದು ಉಗಳಿಕೋತ, ರಸ್ತೆಕ ಮಾರಿ ತೋರಸಿ ಹೋಗೂ ಕೋಟಿಗಟ್ಟೆ ಪೌರಕಾರ್ಮಿಕರ ಹೊಟ್ಟಿ ಮ್ಯಾಲೆ ಕಾಲ ಕೊಟ್ಟಂಗ ಆಗತದ. ಅಷ್ಟೇ ಅಲ್ಲಾ, ಪ್ಲಾಸ್ಟಿಕ್ ಚೀಲ ಕಾಗದಾ ಕಸಾಕಡ್ಡಿ ನಡವ ದಾರಿ ಮಾಡಿಕೊಂಡು ಓಡಾಡೋ ನಮ್ ಜನರಿಗೂ ಇರಿಸುಮುರಿಸ ಆಗತದ ಅನ್ನೂ ಕಾಳಜಿಯನ್ನು ಸಂಬಂದಪಟ್ಟವರು ತೋರಿಸಿರಬೇಕು!

ಮನಶ್ಯಾನ ದೇಹ ಸ್ವಚ್ಛ ಮಾಡೂದ್ರಾಗೂ ಕಸಬರಿಗೆಗಳು ಹಿಂದ ಬಿದ್ದಿಲ್ಲ! ಮುಂಜಾನೆದ್ದು ಮೂವತ್ತೆರಡು ಹಲ್ಲು ತಿಕ್ಕಿತಿಕ್ಕಿ ಮುತ್ತಿನ್ಹಂಗ ಮಾಡೂ ಬ್ರಶ್‌ನೂ ಒಂಥರದ ಕಸಬರಿಗೀನ, ಹಣಿಗೆಗಳನ್ನ ಕೂಡ ಈ ಜಾತಿಗೆ ಸೇರಸಬಹುದು. ದೇಹದೊಳಗಿನ ಕಸಾ ತಗಿಯೂ ಕಸಬರಿಗಿ ಬಗ್ಗೆ ಕೇಳಿದರ ಇಂಟರ್‌ವೆನ್ಷನಿಸ್ಟ (Interventionist)ಗಳು ಒಂದು ಪುಸ್ತಕಕ್ಕಾಗೂವಷ್ಟು ಮಾಹಿತಿ ಹೇಳತಾರ, ಆದರ, ಮನಶ್ಯಾನ ಮನಸು ಸ್ವಚ್ಛ ಮಾಡೂ ಕಸಬರಿಗಿ ಇನ್ನೂ ಬಂದಂಗಿಲ್ಲ.

ಕಸಾ ಗುಡಸೂದಲ್ಲ  ಇನ್ನೂ ಎಷ್ಟೋ ಉಪಕಸಬುಗಳು ಅವ ಕಸಬರಿಗೀಗೆ ನಮ್ಮಲ್ಲಿ ಕಸಬರಿಗೆ ಲಟ್ಟಣಿಗೆ ಎರಡೂ ಮನೆಯೊಡತಿಯ ಅತೀ ಪರಿಣಾಮಕಾರಿ ಆಯುಧಗಳು. ಕಸಬರಿಗಿ ಹೊಡೆತದ ನೆನಪು ಗಂಡ ್ರನ್ನ ಕಂಟ್ರೋಲ್‌ದೊಳಗಿಡೂದರಿಂದನ ಹೆಂಗಸರು ಕಸಬರಿಗೀಗೆ ಸಂಪತ್ತಿನ ಅಧಿದೇವತೆ ಲಕ್ಷ್ಮೀರೂಪ ಅಂತ ಪಟ್ಟ ಕೊಟ್ಟಾರ. ಬ್ಯಾರೆ ಯಾವದ ರೂಪದಾಗ ಶ್ರೀದೇವಿಯ ಪೂಜೆ ಆಗೂದಕ್ಕಿಂತಾ ಮದಲ ಕಸಬರಿಗೆಯ ಪೂಜೆ ಆಗಬೇಕಂತ. ಹೊಸಾ ಮನೀವಳಗ ಕಾಲ ಇಡೂಮುಂದ ಹೊಸಾ ಕಸಬರಿಗಿ ತೊಗೊಂಡು ಹೋದರ, ಮನಿ ಸಂಪತ್ತಿನಿಂದ ತುಂಬಿ ತುಳಕತದಂತ. ಮುರಾದಾಬಾದದ ಸದತಬಾದಿ ಅನ್ನೂ ಹಳ್ಳಿವಳಗ ಇರೂ ಪಟಲೇಶ್ವರ (ಶಿವ) ದೇವಸ್ಥಾನದೊಳಗ, ಪ್ರತಿ ಸೋಮವಾರ ಭಕ್ತರು ಕಸಬರಗಿ ಅರ್ಪಣ ಮಾಡಿ ತಮ್ಮ ದುಃಖ ನಿವಾರಿಸಿಕೊಳ್ಳತಾರಂತ. ಅದರೊಳಗೂ



ಚರ್ಮವ್ಯಾಧಿಗಳು ಗುಣಾ ಆಗತಾವ ಅನ್ನೂ ನಂಬಿಕೆ ಅದ ಅಂತ. ಇನ್ನು ನೀವು ದೋಸೆ ಪ್ರಿಯರಾಗಿದ್ದರ, ಕರುನಾಡ ಹೆಮ್ಮೆಯ ನಗರಿ ಬೆಂಗಳೂರು ವಾಸಿ ಆಗಿದ್ದರ, ರಸ್ತೆ ಬದಿಯ ದೋಸೆ ಕ್ಯಾಂಪುಗಳಿಗೆ ನುಗ್ಗುವವರಾಗಿದ್ದರೆ, ಬಿಸಿಬಿಸಿ

ಹಂಚಿನ ಮೈಯ್ಯನ್ನು ಕಸಬರಿಗೆ ಒಮ್ಮೆ ಸವರಿದ ಮ್ಯಾಲೆ ಗರಿಗರಿ ದೋಸೆ ಎದ್ದ ಬರತಾವ ಅನ್ನೂದನ್ನ ನೋಡೇ ಇರತೀರಿ.

ಇನ್ನ ಮನಶ್ಯಾರ ಹಿಡಕೊಂಡಿರೊ ದೆವ್ವಾ ಭೂತಾ ಬಿಡಸೂವವರ ಮುಖ್ಯ ಆಯುಧ ಕಸಬರಗೀನ ಅನ್ನೋದು ಸಾಮಾನ್ಯ ಜ್ಞಾನ, ಕಸಬರಗೀಲೆ ಹೊಡಿಸಿಕೊಂಡು ದೆವ್ವ ಓಡಿ ಹೋಗತಾವಂತ. ಜಗತ್ತಿನ ಎಲ್ಲಾ ಕಡೆ ಎಲ್ಲೆಲ್ಲ ವಿಜ್‌ಕ್ರಾಪ್ಟ ನಡೀತದೊ ಅಲ್ಲೆಲ್ಲಾ ಕಸಬರಗಿ ಪಾತ್ರ ಮಹತ್ವದ್ದದ. ನೆಲದಿಂದ ಸ್ವಲ್ಪ ಮ್ಯಾಲೆ ನೆಲ ಮುಟ್ಟದ್ದಂಗ ಕಸಬರಗಿ ಆಡಸಿ ತಮ್ಮ ಮಂತ್ರ ತಂತ್ರಗಳಿಗೆ ಅಡ್ಡಬರುವ ದುಷ್ಟ ಶಕ್ತಿಗಳನ್ನ ಮಾಟಗಾತಿಯರು ಉಡಗಿ ದೂರ ಸರಸತಾರಂತ, ಮಾಟಗಾತಿಯರು ಕಸಬರಗಿ ಮ್ಯಾಲೆ ಕೂತು ಹಾರತಿದ್ರು ಅನ್ನೂ ನಂಬಕೀನೂ ಅದ. ಕಸಬರಗಿ ಮ್ಯಾಲೆ ಕೂತು ಹಾರೂದು ಅಂದ ಕೂಡ್ಲೆ ಹ್ಯಾರಿಪಾಟರ್ ಅಂತೂ ಕಣ್ಣ ಮುಂದ ಬಂದ ಬಿಡತಾನ.

ಜಗತ್ತಿನ ಎಲ್ಲಾ ದೇಶದಾಗ ಈ ಕಸಬರಗಿ ತನ್ನ ಕಾರ್ಯವ್ಯಾಪ್ತಿ ಬಿಟ್ಟು ಅಲೀತದ. ವೇಲ್ಸ್ ದೇಶದಾಗ ನವ ವಧೂವರರು ಕೈ ಕೈ ಹಿಡಿದುಕೊಂಡು ಅಡ್ಡ ಕಸಬರಿಗೆಯನ್ನು ಹಾರಿ ದಾಟುವುದು ಮದುವೆಯ ವಿಧಿ ವಿಧಾನಗಳಲ್ಲಿ ಒಂದಂತ. ಇದರಿಂದ ಆ ಜೋಡಿಯ ದಾಂಪತ್ಯ ಜೀವನದಲ್ಲಿ ಸುಖ ಶಾಂತಿ ಸಮೃದ್ಧಿಗಳು ತುಂಬಿ ಬರತಾವಂತ. ಇದಕ್ಕಾಗಿ ಮುತ್ತು ರತ್ನ ಶೋಭಿತ ಕಸಬರಿಗೆಗಳು ಮಾರುಕಟ್ಟೆಯ ಶೋಕೇಸುಗಳಲ್ಲಿ ತುಂಬಿರತಾವಂತ. ಇನ್ನ ಕ್ಯಾನಡಾ ದೇಶದ ಮೆಟಿಸ್ ಜನಾಂಗದವರ ಪಾರಂಪರಿಕ ನೃತ್ಯ ಅಂದ್ರ ಕಾಲುಗಳನ್ನ ವೇಗವಾಗಿ ಕುಣಿಸುತ್ತ ಕಸಬರಿಗೆ ಹಿಡಿದು ಜಿಗಿಯುವ ಲಾಲಿತ್ಯಪೂರ್ಣ 'ಬ್ರೂಮ್ ಡಾನ್ಸಿಂಗ್', ಜಗತ್ತಿನಾದ್ಯಂತ ವ್ಯಾಪಾರಿ ನಾವಿಕರು ಹಿಂದಿರುಗುವಾಗ ದಡದ ಸಮೀಪ ಬಂದೊಡನೆ, ಹಡಗಿನ ಅತಿ ಎತ್ತರದ ಕಂಬಕ್ಕೆ ಕಸಬರಿಗೆಯಿಂದ ಹೊಡೆದು ವ್ಯಾಪಾರದ ಯಶವನ್ನು ಸಾರುತ್ತಾರಂತೆ. ಆಟದ ಮೈದಾನದಲ್ಲೂ ಕಸಬರಿಗೆ ಹಿಂದೆ ಬಿದ್ದಿಲ್ಲ. ಕರ್ಲಿಂಗ್ ಅನ್ನೊ ಬರ್ಫದ ಮೇಲೆ ಆಡುವ ಆಟದಲ್ಲಿ ಕರ್ಲಿಂಗ್ ಬ್ರೂಮ್ ಇರುತ್ತದೆ. ಈ ಆಟದ ವಿಶೇಷ ಕಸಬರಿಗೆಗೆ ಕ್ರಿಕೆಟ್‌ನಲ್ಲಿ ಬ್ಯಾಟ್‌ಗಿರುವಷ್ಟೇ ಮಹತ್ವ

ಕಸಬರಗಿ ಅಕಸ್ಮಾತ್ ಭೂಮಂಡಲದ ಮ್ಯಾಲೆ ಇದ್ದಿದ್ದಿಲ್ಲಾ ಅಂದ್ರ ಏನಾಗಬಹುದಿತ್ತು ಅನ್ನೂದನ್ನ ನೆನಸಿಕೊಂಡ್ರನ ಮನಸ್ಸು ಖಿನ್ನ ಆಗತದ. ಇಷ್ಟು ಘನಂದಾರಿ ವಸ್ತುವಾದ ಕಸಬರಗಿ ಅರ್ಥಾತ್ ಪೊರಕೆಗೆ ಅದಕ್ಕೆ ಸಿಗಬೇಕಾದಷ್ಟು ಗೌರವ ಪುರಸ್ಕಾರ ಸಿಕ್ಕಿಲ್ಲಾ ಅನ್ನೂದು ಅತ್ಯಂತ ದುಃಖದ ವಿಷಯ. ಸಂಬಂದಪಟ್ಟವರು ಇನ್ನಾದರೂ ಈ ನಿಟ್ಟಿನೊಳಗೆ ಗಮನ ಹರಿಸಿ ಯೋಗ್ಯ ಕ್ರಮ ಕೈಕೊಳ್ಳಬೇಕು ಅಂತ ನನ್ನ ಕಳಕಳಿಯ ಕೋರಿಕೆ.

**(ಮಯೂರ, ಡಿಸೆಂಬರ್ ೨೦೦೮)**

## ೧೪. ಟೇಲರ್ ಮೇಡ್

**ರುಚಿತಾ ಶಶಿಕಾಂತ್(ಚೇನಾ)**

ಮೊನ್ನೆ ಮೊನ್ನೆ ಗೆಳತಿಯೊಬ್ಬಳು ಒಂದು ಟೈಲರ್ ಜೋಕ್ ಹೇಳಿದಳು. ಒಂದೂರಲ್ಲಿ ಒಬ್ಬನೇ ಒಬ್ಬ ಟೈಲರಿದ್ದನಂತೆ. ಆತನ ಬಳಿ ಒಂದು ಮೀಟರು ಬಟ್ಟೆ ಕೊಟ್ಟರೆ ವಾಪಸು ಬರುತ್ತಾ ಇದ್ದದ್ದು ಅರ್ಧ ಮೀಟರು ಬಟ್ಟೆಯೇ. ಆತನ ಸಂಸಾರ ಬೆಳೆಯುತ್ತಾ ಹೋದ ಹಾಗೆ ಅದು ಕಾಲು ಮೀಟರಿಗೆ ಬಂದು ನಿಂತಿತು. ಜನ ರೋಸಿ ಹೋದರು. ಇನ್ನಾವುದೋ ಊರಿನಿಂದ ಇನ್ನೊಬ್ಬ ಟೈಲರನ್ನು ಕರೆದು ಊರಿನಲ್ಲಿ ಸೆಟಲ್ ಮಾಡಿಸಿದರು. ಆತ ಒಂದು ಮೀಟರ್ ಬಟ್ಟೆ ಇಸಿದುಕೊಂಡು ಮುಕ್ಕಾಲು ಮೀಟರು ಬಟ್ಟೆ ಕೊಟ್ಟ. ಊರ ಜನ ಸೇರಿಕೊಂಡು ಜಗಳ ಮಾಡಿದರು. ಅವ ಜೋರಾಗಿ, 'ಹಯ್ಯೋ, ಅದಕ್ಯಾಕೆ ಬಡ್ಕೊತೀರಿ? ನನ್ ಮನೇಲಿ ಒಂದೇ ಕೂಸಿರೋದು. ಆ ಟೈಲರನೇಲಿ ಮೂರಿದಾವೆ ಗೊತ್ತಾ?' ಅಂತನ್ನಬೇಕೆ?

ಜೋಕುಗಳು ಹಾಗಿರಲಿ, ಟೈಲರುಗಳು ನಮ್ಮ ಜೀವನದ ಅವಿಭಾಜ್ಯ ಅಂಗ ಅಂತನ್ನಬಹುದು. ಕೆಲವು ಹೆಣ್ಣುಮಕ್ಕಳಿಗೆ ರೆಡಿಮೇಡ್ ಬಟ್ಟೆ ಕೊಳ್ಳುವ ಅಭ್ಯಾಸ ಇದ್ದರೆ ಇನ್ನು ಕೆಲವರಿಗೆ ಕಂಪಲ್ಸರಿಯಾಗಿ ಕ್ಲಾಥ್ ಪೀಸುಗಳನ್ನು ಕೊಂಡುಕೊಂಡೇ ಸಲ್ವಾರ್ ಕಮೀಜ್, ಮಕ್ಕಳಿಗೆ ಫ್ರಾಕು ಇತ್ಯಾದಿ ಹೊಲಿಸುವ ಅಭ್ಯಾಸ. ಸೀರೆಯುಡುವ ಹೆಣ್ಣುಮಕ್ಕಳು ರವಿಕೆ ಹೊಲಿಸಲೇಬೇಕು. ಹೇಗಾದರೂ ಟೈಲರು ಯಾವುದೇ ರೂಪದಲ್ಲಾದರೂ ನಮಗೆ ಬೇಕೇ ಬೇಕು. ಟೈಲರ್ ಎಂದರೆ ನನಗೆ ಥಟ್ಟನೆ ನೆನಪಿಗೆ ಬರುವುದು ಇಬ್ಬರು ಹೆಂಗಸರು. ನಾನು ಪುಟ್ಟ ಹುಡುಗಿಯಾಗಿದ್ದಾಗಿನಿಂದ ನನಗೆ ಥರಾವರಿ ಬಟ್ಟೆ ಹೊಲಿದು ಕೊಡುತ್ತಿದ್ದ ನಮ್ಮ ಬೀದಿಯ 'ಟೇಲರಾಂಟಿ' ಒಬ್ಬರಾದರೆ, ತನಗೆ ಗೊತ್ತಿದ್ದ ಹೊಲಿಗೆ ಕಾಯಕವನ್ನು ನೂರಾರು ಹೆಣ್ಣುಮಕ್ಕಳಿಗೆ ದಿನಾಲೂನೂ ಹೇಳಿ ಕೊಟ್ಟು ಅವರೆಲ್ಲರ ಪುಡಿಕಾಸು ಸಂಪಾದನೆಗೆ ದಾರಿಯಾಗುತ್ತಿದ್ದ ಕೆಳಗಿನ ಬೀದಿಯ ನನ್ನ ಫ್ರೆಂಡು ದೀಪಳ ಅಮ್ಮ.

ಅದು ಬಿಟ್ಟರೆ ಶಾಲೆಯ ಯೂನಿಫಾರ್ಮ್ ಹೊಲಿಸಲಿಕ್ಕಾಗಿಯೇ ವರ್ಷಕ್ಕೊಂದಾವರ್ತಿ ನೆನಪಾಗುತ್ತಿದ್ದ ಟೈಲರಾಗಿದ್ದ ನನ್ನ ತಂಗಿಯ ಫ್ರೆಂಡು ರೇಣುವಿನ ಅಪ್ಪ, ಈ ಮೂವರಲ್ಲಿ ಅರ್ಜೆಂಟಾಗಿ ಹೊಲಿಸಬೇಕಿದ್ದ, ರಿಪೇರಿಯಾಗಬೇಕಿದ್ದ ಬಟ್ಟೆಗಳು ಟೇಲರಾಂಟಿಯ ಬಳಿ ಹೋದರೆ, ಹೊಸಾ ಡಿಸೈನು ಅವಶ್ಯವಿದ್ದ ಬಟ್ಟೆಗಳು ತಿಂಗಳ ಮೊದಲೇ ದೀಪಾಳ ಅಮ್ಮನ ಮನೆ ಸೇರುತ್ತಿದ್ದವು. ಬಟ್ಟೆ ಕೊಡುವ, ಕೇಳುವ ನೆಪದಲ್ಲಿ ನಾವು ಇವರುಗಳ ಮನೆಗಳಿಗೆ ಆಗಾಗ ಭೇಟಿ ನೀಡಿ ಅಲ್ಲಿ ಹೇರಳವಾಗಿ ಕಾಣ

ಬರುತ್ತಿದ್ದ ಮಕ್ಕಳ ಜತೆ ಆಟೋಟ ಮುಗಿಸಿ ಮನೆಗೆ ಮರಳುವ ವೇಳೆಗೆ ಬ್ಲೈಯಿಸಿಕೊಳ್ಳಲು ರೆಡಿಯಾಗಿರುತ್ತಿದ್ದೆವು.

ಎಲ್ಲ ಟೇಲರುಗಳೂ ನಾವು ಹೆಣ್ಣುಮಕ್ಕಳಿಗೆ ಹೊಂದಿಕೆಯಾಗುವುದಿಲ್ಲ. ನಾಲಕೈದು ಮಂದಿಯೊಡನೆ 'ಟ್ರಯಲ್ ಎಂಡ್ ಎರರ್' ನಡೆದ ನಂತರವೇ ಯಾರಾದರೊಬ್ಬರು ಮನಸ್ಸಿಗೆ ಹೊಂದುವುದು. ಒಂದು ಥರಾ ವಧುವರಾನ್ವೇಷಣೆ ಮಾಡಿದ ಹಾಗೇ ಇದೂ! ಶಿವಮೊಗ್ಗೆಯಲ್ಲಿ ನಾನು ಓದುತ್ತಿರುವಾಗ ನಾವಿದ್ದ ಜಯನಗರದಲ್ಲಿ ಒಬ್ಬ ಟೈಲರ್ ಬಹಳ ಹೆಸರುವಾಸಿಯಾಗಿದ್ದ. ಹೆಚ್ಚಿನ ಒಳ್ಳೆಯ ಟೈಲರುಗಳೆಲ್ಲಾ ಗಂಡಸರೇ ಆಗಿರುವುದೊಂದು ವಿಶೇಷ ಅನ್ನಿಸುತ್ತೆ ನನಗೆ. ಈತನ ಬಳಿ ಒಮ್ಮೆ ಒಬ್ಬ ಹೆಂಗಸು ಅಳತೆ ಕೊಟ್ಟು ಬಟ್ಟೆ ಹೊಲಿಸಿಕೊಂಡಳೆಂದರೆ ಮುಗಿಯಿತು. ಆತನಿಗೆ ಪುನಃ ಅಳತೆ ಕೊಡುವ ಅವಶ್ಯಕತೆಯೇ ಬರುತ್ತಿರಲಿಲ್ಲ. ಆ ಹೆಣ್ಣುಮಗಳು ದಪ್ಪಗಾದರೂ ತೆಳ್ಳಗಾದರೂ ಅಂದಾಜು ಮಾಡಿಯೇ ಈತ ಬಟ್ಟೆ ಹೊಲಿದು ಕೊಡುತ್ತಿದ್ದ ಮತ್ತು ಅದು ಕರಾರುವಾಕ್ಕಾಗಿರುತ್ತಿತ್ತು.!

ಜತೆಗೆ ಆತನ ಮಾತಿನ ಶೈಲಿ ಅತ್ಯಾಕರ್ಷಕ. ಒಮ್ಮೆ ಆತನ ಅಂಗಡಿಗೆ ಭೇಟಿ ನೀಡಿದ ಹೆಣ್ಣುಮಕ್ಕಳು ಬೇರೆಲ್ಲೂ ಹೋಗುತ್ತಿರಲಿಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕೆ? ಆತನ ಒಂದೇ ಕೊರತೆ ಎಂದರೆ ಕಾಯಿಸುವುದು, ಎಂದೂ ಆತ ಹೇಳಿದ ತಾರೀಖೀಗೆ ಬಟ್ಟೆ ಕೊಟ್ಟ ಉದಾಹರಣೆಯೇ ಇಲ್ಲ. ಯಾವಾಗ ಆತನ ಅಂಗಡಿಗೆ ಹೋದರೂ ಅಲ್ಲಿ ಆತನನ್ನು ಬೈದಾಡುವ ಹೆಂಗಸೊಬ್ಬಳೂ, ಆಕೆಗೆ ನಗುಮುಖದಿಂದ ಸಮಾಧಾನ ಹೇಳುವ ಟೈಲರನೂ ಕಂಡು ಬರುತ್ತಿದ್ದರು. ನಾಲ್ಕೈದು ಬಾರಿ ಹೋಗಿ ಬಂದು ಬೇಸತ್ತು ಕೆಟ್ಟದಾಗಿ ಬೈದುಕೊಂಡರೂ ಮುಂದಿನ ಸಾರಿ ಆತನ ಬಳಿಯೇ ಹೋಗುವುದು ಮಾಮೂಲು.

ಮೈಸೂರಿನ ಲಷ್ಕರ್ ಮೊಹಲ್ಲಾ ಬಳಿಯ ರಫೀಕನೂ ಬಹಳ ಒಳ್ಳೆಯ ಟೈಲರನೇ. ಆದರೆ ಅವನ ಬಳಿ ಡಿಸಿಪ್ಲಿನಿನ ಕೊರತೆಯಿತ್ತು. ಒಮ್ಮೊಮ್ಮೆ ಬೆಳಗ್ಗೆ ಕೊಟ್ಟ ಬಟ್ಟೆ ಸಂಜೆಗೇ ಹೊಲಿದು ಕೊಟ್ಟರೆ ಇನ್ನೊಮ್ಮೆ ಬಟ್ಟೆಯನ್ನು ಒಟ್ಟಿದ ರಾಶಿಯ ನಡುವೆ ಕಳೆದು ಹಾಕಿ ನಮಗೆ ಹುಡುಕಲು ಹೇಳುತ್ತಿದ್ದ, ಯಾವುದೋ ಡಿಸೈಸು ಹೇಳಿ ಹೋದರೆ ಇನ್ಯಾವುದೋ ಡಿಸೈನು ನಮ್ಮ ಕೈಗೆ ಬರುವುದು. ಇದೂ ಚೆನ್ನಾಗಿದೆ ಬಿಡಿ ದೀದಿ' ಎಂದು ಆತ ಹಲ್ಲು ಕಿರಿಯುವಾಗ ಆತನ ಅಂಗಡಿಗೆ ಕಲ್ಲು ಹೊಡೆಯುವಷ್ಟು ಕೋಪ ಬರುತ್ತಿತ್ತು. ನನ್ನ ಮದುವೆಯ ಎಲ್ಲ ಬಟ್ಟೆಗಳನ್ನೂ ಮಾತ್ರ ಆತ ಶ್ರದ್ಧೆಯಿಂದ ಹೇಳಿದ ಸಮಯದೊಳಗೆ ಸುಂದರವಾಗಿ ಹೊಲಿದು ಕೊಟ್ಟಿದ್ದು, ನನ್ನ ಮಗುವಿಗೆ ತಾನೇ ಡಿಸೈನು ಮಾಡಿ ಮುದ್ದಾದ ಫ್ರಾಕು, ಜಂಪರುಗಳನ್ನು ಹೊಲಿದದ್ದು ನೆನೆಸಿ ಸುಮ್ಮನಾಗುತ್ತೇನೆ.

ಆತನ ಹೊಲಿಗೆಯ ಜತೆಗೇ ಆತನ ಕುಟುಂಬದ ಕಷ್ಟಸುಖಗಳೂ ನಮ್ಮ ಮನೆ ತಲುಪುತ್ತಿದ್ದುದರಿಂದ ಆತನಿಗೆ ಈ ಮಾರ್ಜಿನ್ ಇತ್ತು.

ಲೇಡೀಸ್ ಟೈಲರಾಗಿರುವುದು ಸುಲಭದ ಕೆಲಸವೇನಲ್ಲ. ಆತನ ಬಳಿ ಮೂರು ತರಹದ ಕ್ಲೈಂಟುಗಳು ಬರುತ್ತಾರೆ.

ಮೊದಲನೆಯವರು ತೀರ ಟ್ರೆಡಿಷನಲ್ ಶೈಲಿಯ ಬಟ್ಟೆ ಬಯಸುವವರು. ಇವರನ್ನು ಸಂಭಾಳಿಸುವುದು ನುರಿತ ಟೈಲರನಿಗೆ ಆರಾಮು ಕೆಲಸ. ಎರಡನೆಯ ವರ್ಗದವರು ಟೈಲರನ ಮರ್ಜಿ ಕೇಳುವವರು. ಅವರಿಗೆ ತಮಗೆ ಯಾವ ರೀತಿಯ ಬಟ್ಟೆ ಹೊಂದುತ್ತದೆ ಅಂತಲೇ ಗೊತ್ತಿರುವುದಿಲ್ಲ. ಟೈಲರು ಸಜೆಸ್ಟ್ ಮಾಡಿದ್ದನ್ನೇ ತಕರಾರು ಮಾಡದೇ ಒಪ್ಪಿಕೊಂಡು ಬಿಡುತ್ತಾರೆ. ಇವರು ಟೈಲರನಿಗೆ ಬಲು ಪ್ರಿಯವಾದ ಕ್ಯಾಟಗರಿ. ಇವರ ಬಳಿ ಟೈಲರನಿಗೆ ತನ್ನ ವೃತ್ತಿ ನೈಪುಣ್ಯವನ್ನು ಆರಾಮವಾಗಿ ಪ್ರಯೋಗಿಸುವ ಅವಕಾಶ ದೊರೆಯುತ್ತದೆ. ಮೂರನೆಯ ವರ್ಗದವರು ಬಯಸುವುದು ಟ್ರೆಂಡೀ, ಫ್ಯಾಶನಬಲ್ ಬಟ್ಟೆಗಳನ್ನು, ಯಾವುದೋ ಸೀರಿಯಲ್ಲಿನಲ್ಲೋ, ಮೂವಿಯಲ್ಲೋ ನೋಡಿದ ಯಾವುದೋ ರವಿಕೆ, ಸಲ್ವಾರು, ಕುರ್ತಾ ಇವರಿಗೆ ಹಿಡಿಸಿ ಬಿಟ್ಟಿರುತ್ತದೆ. ಅದೇ ಡಿಜೈನು ಟೈಲರನಿಂದಲೂ ಬಯಸುತ್ತಾರೆ.

ಆತನೂ ಅದೇ ಸೀರಿಯಲ್, ಸಿನಿಮಾ ನೋಡಿದ್ದರೆ ಪರವಾಗಿಲ್ಲ. ಸಾಧಾರಣವಾಗಿ ಈ ವರ್ಗದವರಿಂದ ಟೈಲರ್ ಪರದಾಡುವ ಅವಕಾಶಗಳು ಹೆಚ್ಚು. ಹೊಸ ಫ್ಯಾಶನೊಂದು ಮಾರ್ಕೆಟ್‌ನಲ್ಲಿ ಜನಪ್ರಿಯವಾಗುತ್ತಿದ್ದಂತೆಯೇ ಟೈಲರುಗಳು ಅಪ್‌ಡೇಟ್, ಅಪ್‌ಗ್ರೇಡ್ ಆಗದೆ ಹೋದರೆ ಔಟ್‌ಡೇಟೆಡ್ ಆಗುವ ಅಪಾಯಗಳೇ ಜಾಸ್ತಿ.

ಈಗೀಗ ನಗರಗಳಲ್ಲಿ ಹೆಚ್ಚಾಗಿ ಕಾಣಬರುತ್ತಿರುವ 'ಬೂಟಿಕ್'ಗಳು ಈ ದಿಸೆಯಲ್ಲಿ ಹೆಚ್ಚು ಜನಪ್ರಿಯವಾಗುತ್ತಿವೆ. 'ಹೊಸದಾದ ಯಾವುದೇ ಟ್ರೆಂಡಿನ ಬಟ್ಟೆ ಹೊಲಿಸಬೇಕೇ? ಬೂಟಿಕ್‌ಗೆ ಹೋಗಿ, ಟೈಲರನಿಗೆ ಕೊಡುವ ಮಮೂಲಿ ಚಾರ್ಜಿಗಿಂತ ಮೂರರಷ್ಟು ಕೊಟ್ಟರೂ ಪರವಾಗಿಲ್ಲ, ಫ್ಯಾಷನಬಲ್ ಕಟ್ ಇರುವುದಲ್ಲವಾ? ನಾವು ಚೆನ್ನಾಗಿ ಕಾಣುವುದಕ್ಕೆ ಬೆಲೆ ಕಟ್ಟಲಿಕ್ಕಾಗುತ್ತದೆಯೇ?' ಅನ್ನುತ್ತಾಳೆ ಗೆಳತಿ ಉಮಾ. ಅವಳ ಜೊತೆ ರಾಜಾಜಿನಗರದ ಹೆಸರಾಂತ ಬೂಟಿಕ್ ಒಂದಕ್ಕೆ ಭೇಟಿ ನೀಡಿದೆ. ಅದರ ಒಡತಿ, ಉಮಾ ತಂದ ಬಟ್ಟೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಅದರ ಕ್ವಾಲಿಟಿಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದಳು. ಇನ್ಯಾರೋ ಆಗ ತಾನೇ ಕೊಟ್ಟು ಹೋಗಿದ್ದ ಬಟ್ಟೆಯೊಂದನ್ನು ಎತ್ತಿ ತೋರಿಸಿ, 'ಇದು ನೋಡಿ ಉಮಾ, ಇಂತ ಕಚಡಾ ಕ್ವಾಲಿಟಿ ಬಟ್ಟೆ ಎಲ್ಲ ಕೊಟ್ಟು ಚೆನ್ನಾಗಿ ಹೊಲೀರಿ ಅಂತಾರೆ. ಇವು ಫ್ಯಾಷನ್ ಅಂದ್ರೆ ಏನೆಂದುಕೋಬಿಟ್ಟಿದ್ದಾರೋ? ನಿಮ್ ಥರ ಸೆನ್ಸ್ ಆಫ್ ಫ್ಯಾಷನ್ ಇರೋದು ಕಡಿಮೆ ಬಿಡಿ' ಎಂದು ಹೊಗಳಿದಾಗ ಉಮಾ ಉಬ್ಬಿ ಹೋದಳು!

“ಐದು ವರ್ಷದಿಂದ ಉಮಾ ನಮ್ ಹತ್ರಾನೇ ಬರ್ತಿದಾರೆ' ಎಂದು ಆಕೆ ನನ್ನ ಬಳಿ ಹೇಳಿದಾಗಲಂತೂ ಉಮಾ ಇನ್ನೈದು ವರ್ಷ ಹೋಗುವುದು ಖಾತ್ರಿಯಾಗಿ ಹೋಯಿತು. ಉಮಾ ಯಾವುದೋ ಒಂದು ಡಿಸೈನು ಸೆಲೆಕ್ಟ್ ಮಾಡಿದಾಗ ಅದನ್ನು



ಬೂಟಿಕಮ್ಮ ಖಡಾಖಂಡಿತವಾಗಿ ನಿರಾಕರಿಸಿ, 'ಇದು ನಿಮಗೊಪ್ಪಲ್ಲ ಬಿಡಿ ಉಮಾ. ಹೊಲಿಯೋಳೂ ನಾನು, ಐ ನೋ ದ ಫ್ಯಾಬ್ರಿಕ್, ನಾನು ಹೇಳ್ತೀನಿ, ನಿಮ್ಮ ಪರ್ಸನಾಲಿಟಿಗೆ ಇದೇ ಡಿಸೈನ್ ಹೊಂದೋದು' ಎಂದು ಫರ್ಮಾನು ಹೊರಡಿಸಿದ ರೀತಿಗೆ ಉಮಾ ಮರುಳಾಗಿ ಬೆಕ್ಕಿನಂತೆ ಮುದುರಿ ಹೂಂಗುಟ್ಟಿದಳು. ಹೊರಗೆ ಬಂದ ಮೇಲೆ, “ಎಂಥ ಅಮೇಜಿಂಗ್ ಡಿಸೈನರ್ ಗೊತ್ತಾ ಅವಳು!' ಎಂದು ಉಮಾ ಹೇಳುತ್ತಿದ್ದರೆ ನನಗೆ ನಗು ಉಕ್ಕಿ ಬರುತ್ತಿತ್ತು. ಬೂಟಿಕಮ್ಮ ಏನೇ ಹೇಳಲಿ, ಆಕೆ ನೀಡಿದ ಬಟ್ಟೆಗಳನ್ನು ಹೊಲಿಯುವಾತನೂ ಟೈಲರನೇ, ನಮ್ಮ ಇಡೀ ಫ್ಯಾಷನ್ ಉದ್ಯಮವೇ ಇಂತಹ ಸಾವಿರಾರು ನಿಷ್ಣಾತ ಟೈಲರುಗಳನ್ನು ಅವಲಂಬಿಸಿರುವಂತಹುದು.

ಇನ್ನು ಟೈಲರುಗಳ ಬಗ್ಗೆ ಸಾಹಿತ್ಯಕ ಉಲ್ಲೇಖಗಳೂ ಅನೇಕವಿವೆ. ಜರ್ಮನಿಯ ಪ್ರಸಿದ್ಧ ಕಥೆಯಾದ 'ದ ಫಾಲ್ಸ್ ಪ್ರಿನ್ಸ್' ಬಹಳ ಮಹತ್ವಾಕಾಂಕ್ಷಿಯಾದ ಯುವ ಟೈಲರ್ ಲಬಾಕಾನನ ಕಥೆ. ತನ್ನ ಒಡೆಯನ ಮನೆಯಿಂದ ಬಹಳ ಬೆಲೆ ಬಾಳುವ ಬಟ್ಟೆ ಕದ್ದು ಪಲಾಯನ ಮಾಡುವ ಲಬಾಕಾನನಿಗೆ ರಾಜಕುಮಾರ ಓಮರನ ಸಖ್ಯ ದೊರೆಯುತ್ತದೆ. ತನ್ನ ತಂದೆ-ತಾಯಂದಿರಿಂದ ಬಹುಕಾಲ ದೂರವಿದ್ದ ಓಮರನಿಂದ ಆತನೇ ರಾಜಕುಮಾರನೆಂದು ತೋರ್ಪಡಿಸುವ, ಎಲ್ಲ ದಾಖಲೆಗಳನ್ನೂ ಕದ್ದುಕೊಳ್ಳುವ ಲಬಾಕಾನ ರಾಜನ ಬಳಿ ಹೋಗುತ್ತಾನೆ. ನಿಜವಾದ ಓಮರ್ ಅಲ್ಲಿ ಬಂದಾಗ ಗೊಂದಲವಾಗಿ ಇಬ್ಬರ ಮಧ್ಯೆ ನಿಜವಾದ ರಾಜಕುಮಾರ ಯಾರೆಂದು ತಿಳಿಯಲು ಸ್ಪರ್ಧೆ ಏರ್ಪಡುತ್ತದೆ. ರಾಣಿ ನಿಜವಾದ ರಾಜಕುಮಾರನಿಗೆ ಒಂದು ಪೋಷಾಕು ತಯಾರಿಸಲು ಇಬ್ಬರಿಗೂ ಹೇಳಿದಾಗ ಲಬಾಕಾನ ವಿಜಯಿಯಾಗುತ್ತಾನೆ. ಕೊನೆಗೆ ದೇವತೆಯೊಬ್ಬಳು ಬಂದು, ಇಬ್ಬರೆದುರಿಗೆ ಎರಡು ಪೆಟ್ಟಿಗೆಗಳನ್ನಿಟ್ಟು ಒಂದನ್ನು ಆಯ್ದುಕೊಳ್ಳಲು ಹೇಳುತ್ತಾಳೆ. ಆಗ ರಾಜಕುಮಾರ ಓಮರ್ ಕೀರ್ತಿ ಮತ್ತು ವೈಭವದ ಪೆಟ್ಟಿಗೆಯನ್ನು ಆಯ್ದುಕೊಂಡರೆ ಲಬಾಕಾನ ಐಶ್ವರ್ಯ ಮತ್ತು ಸಂತಸದ ಪೆಟ್ಟಿಗೆಯನ್ನು ತೆಗೆದುಕೊಳ್ಳುತ್ತಾನೆ. ಓಮರನ ಪೆಟ್ಟಿಗೆಯಲ್ಲಿ ಕಿರೀಟವಿದ್ದರೆ, ಲಬಾಕಾನನಿಗೆ ಸಭಿಸುವುದು ಸೂಜಿ ಮತ್ತು ದಾರ. ಓಮರನ ಕ್ಷಮೆಯಿಂದ ಮನೆಗೆ ಮರಳುವ ಲಬಾಕಾನ ತನ್ನ ಒಡೆಯನ ಬಟ್ಟೆ ಕದ್ದಿದ್ದಕ್ಕೆ ಶಿಕ್ಷೆ ಅನುಭವಿಸುತ್ತಾನೆ. ನಂತರ ಮತ್ತೊಂದು ಊರಿಗೆ ಹೋಗಿ ತನ್ನ ಶ್ರಮದಿಂದ ದುಡಿದು ಗಳಿಸಲು ಆರಂಭಿಸುತ್ತಾನೆ. ಆತನ ಪೆಟ್ಟಿಗೆಯಲ್ಲಿದ್ದ ಸೂಜಿ-ದಾರಗಳು ಆತನಿಗೆ ಬಟ್ಟೆ ಹೊಲಿದು ಕೊಟ್ಟು ಖ್ಯಾತಿ ಗಳಿಸುವಂತೆ ಸಹಾಯ ಮಾಡುತ್ತವೆ.

ಇನ್ನು ತನ್ನ ಗಂಡ ಯೂಲಿಸಿಸ್ ಯುದ್ಧಕ್ಕೆ ಹೋದಾಗ ತನ್ನನ್ನು ಮದುವೆಯಾಗ ಬಂದ ಗ್ರೀಕ್ ವೀರನನ್ನು, ತನ್ನ ವರುಷಗಟ್ಟಲೆ ಮುಗಿಯದ ಹೊಲಿಗೆ, ನೇಯ್ಗೆಗಳಿಂದ ದೂರವಿಟ್ಟ ಪೆನೆಲಪಿಯ ಪ್ರೇಮ್ ಗ್ರೀಕ್ ಸಾಹಿತ್ಯದಲ್ಲಿ ಹೆಸರುವಾಸಿಯಾಗಿದೆ. ಹ್ಯಾನ್ ಕ್ರಿಶ್ಚಿಯನ್ ಅಂಡರ್ಸನ್ ಬರೆದಿರುವ ಸುಪ್ರಸಿದ್ಧ ಕತೆ 'ದ ಎಂಪರರ್ಸ್ ನ್ಯೂ ಕ್ಲೌದ್ಸ್'ನಲ್ಲಿ ಠಕ್ಕರಿಬ್ಬರನ್ನು ತನ್ನ ಬಟ್ಟೆ ಹೊಲಿಯಲು ನಿಯಮಿಸುವ ವಿಲಾಸೀ ರಾಜನೊಬ್ಬ ಫಜೀತಿಗೊಳಗಾದ ವಿವರಣೆಯಿದೆ. ಠಕ್ಕರಿಬ್ಬರು ತಮ್ಮ ಬಳಿಯಿರುವ ವಿಶೇಷ ಬಟ್ಟೆ



ಕೇವಲ ಬುದ್ಧಿವಂತರಿಗೆ ಮಾತ್ರ ಕಾಣುವುದೆಂದೂ ಪೆದ್ದರಿಗೆ ಕಾಣದೆಂದೂ ಹೇಳಿ ತಾವು ಪೆದ್ದರೆಂದು ಒಪ್ಪಿಕೊಳ್ಳಲು ರೆಡಿಯಿಲ್ಲದ ರಾಜನಾದಿಯಾಗಿ ಎಲ್ಲರಿಗೂ ಮಂಕುಬೂದಿ ಎರಚಿ ಕೊನೆಗೆ ನಗ್ನನಾಗಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತಾರೆ. ಮಗುವೊಂದು ಜೋರಾಗಿ ನಕ್ಕು ಎಲ್ಲರ ಪೆದ್ದುತನವನ್ನೂ ಬಯಲು ಮಾಡುತ್ತದೆ.

'ಸೀಮ್ಸ್'ಆಫ್ ಸಾಲ್ಸ್ ಬರಿ' ಎಂಬ ಆಂಗ್ಲ ಜಾನಪದ ಕಥೆಯಲ್ಲಿ ತನ್ನ ಭಾವೀ ಪತ್ನಿಯನ್ನು ಆಯ್ಕೆ ಮಾಡಲು ಆಗಮಿಸಿರುವ ರಾಜಕುಮಾರನನ್ನು ಬರಮಾಡಿಕೊಳ್ಳಲು ಕಾತರರಾದ ಆಸ್ಥಾನದ ಹೆಂಗಸರು ತಮ್ಮ ಬಟ್ಟೆ ಹೊಲಿಯಲು ಟೈಲರಳೊಬ್ಬಳನ್ನು ನೇಮಿಸುತ್ತಾರೆ. ಆಕೆಗೆ, ತಮ್ಮ ಬಟ್ಟೆಗೆ ಹೆಚ್ಚು ಹೆಚ್ಚು ಫ್ರಿಲ್, ಭೋ ಇತ್ಯಾದಿ ಹಾಕಿ ಸುಂದರವನ್ನಾಗಿಸಲು ಅಣತಿ ನೀಡುತ್ತಾರೆ. ಆ ಬಟ್ಟೆಗಳು ಎಷ್ಟು ಭಾರವಾಗುತ್ತವೆಯೆಂದರೆ ಅವರೆಲ್ಲರ ನಡುವೆ ಸರಳವಾದ ವಸ್ತ್ರ ಧರಿಸಿ ನಿಂತ ಟೈಲರಳೇ ಸರಿಯೆಂದು ನಿರ್ಧರಿಸಿದ ರಾಜಕುಮಾರ ಆಕೆಯನ್ನೇ ವರಿಸುತ್ತಾನೆ.

ಫ್ಯಾಷನ್ ಶೋಗಳಲ್ಲಿ ಗೊಂಬೆಗಳ ರೀತಿ ಬಟ್ಟೆ ಧರಿಸಿ ವಯ್ಯಾರದಿಂದ ಕ್ಯಾಟ್‌ವಾಕ್ ಮಾಡುತ್ತ ಬ್ಯಾಂಪಿನ ಮೇಲೆ ಓಡಾಡುವ ಲಲನೆಯರ ಚೆಂದದ ಹಿಂದೆ ನೂರಾರು ಟೈಲರುಗಳ ಹಗಲು ರಾತ್ರಿಗಳ ಶ್ರಮವಿದೆ. ಇಡೀ ದಿನ ಹೊಲಿಗೆ ಯಂತ್ರದೆದುರು ಕೂತು ಒಂದೇ ಸವನೆ ಹಲವಾರು ಥರದ ಬಟ್ಟೆ ಹೊಲಿಯುವುದು ಸುಲಭದ ಕೆಲಸವೇನಲ್ಲ. ಬೆಂಗಳೂರಿನ ಹಾಗೂ ಸುತ್ತಮುತ್ತಲ ಪ್ರದೇಶಗಳ ಟೆಕ್ಸ್‌ಟೈಲ್ ಹೊಲಿಗೆ ಉದ್ಯಮ ಸಾವಿರಾರು ಹೆಣ್ಣುಮಕ್ಕಳಿಗೆ ಉದ್ಯೋಗ ದೊರಕಿಸಿದೆ. ಇವರ ಬಿಡುವಿರದ ದುಡಿಮೆ, ಪಾಡುಗಳ ಬಗ್ಗೆ ಇತ್ತೀಚೆಗೆ ಜೋರಾಗಿ ಚರ್ಚೆ ಕೂಡ ನಡೆಯುತ್ತಿದೆ. ಎಷ್ಟೋ ಹೆಸರಾಂತ ಡಿಸೈನರುಗಳು ಬ್ರಾಂಡುಗಳಿಗಾಗಿ ಇಂದು ಪ್ಯಾರಿಸ್, ಮಿಲಾನುಗಳವರೆಗೂ ತಮ್ಮ ನೈಪುಣ್ಯವನ್ನು ಕೊಂಡೊಯ್ದಿದ್ದಾರೆ. ಜತೆಗೇ ಜನಪ್ರಿಯವಾಗುತ್ತಿರುವ ವೈಭವೋಪೇತ ಭಾರತೀಯ ಮದುವೆಗಳ ಮೂಲಕವೂ ನಮ್ಮ ಟೈಲರುಗಳ ಕುಶಲತೆ, ನಾಜೂಕು ಎಲ್ಲದಕ್ಕೂ ಹೊಸ ಮಾರುಕಟ್ಟೆ ದೊರಕತೊಡಗಿದೆ. ಫ್ಯಾಷನ್ ಶೋಗಳಿದ ಹಿಡಿದು ಮದುವೆಗಳವರೆಗೂ, ನಗರಗಳಿಂದ ಹಿಡಿದು ನಮ್ಮ ಹಳ್ಳಿಯ

ಬೀದಿಯವರೆಗೂ ಸರ್ವವ್ಯಾಪಿಯಾಗಿ ನಮ್ಮ ರಂಗುರಂಗಿನ ಬಟ್ಟೆಗಳಿಗೆ ತಮ್ಮ ಹೊಲಿಗೆಯ ಮೆರುಗು ನೀಡುವ ನಮ್ಮ ಟೈಲರುಗಳಗೊಂದು ಪುಟ್ಟ ವಂದನೆ.

**(ಸಖಿ, ಆಗಸ್ಟ್ ೧೫, ೨೦೦೯, ಪ್ರಬಂಧ ೨೦೦೯)**

೮೬

## ೧೫. 'ಅssssssssಕ್ಷಿ...

## ಜ.ಏನಿರ್ಮಲ

“ಆssssssಕ್ಷಿ...' ಎಂದು ಗಟ್ಟಿಯಾಗಿ ಸೀನಿದಾಗ ಅದೆಷ್ಟು ಸಮಾಧಾನ. ಸುತ್ತಮುತ್ತ ಯಾರೂ ಇಲ್ಲದೆ, ಯಾವ ಅಡ್ಡಿ ಅಡಚಣೆ ಇಲ್ಲದೆ ನಿರಾತಂಕವಾಗಿ ಎಂದಾದರೂ ನೀವು ಸೀನಿದ್ದೀರಾ? ಹಾಗೆ ಸೀನಿದ್ದರೆ ಮಾತ್ರ ನಿಮಗೆ ಇದರ ಅನುಭವವಾಗಿರುತ್ತದೆ. ಹೀಗೆ ಸ್ವೇಚ್ಛೆಯಾಗಿ ಸೀನುವುದಕ್ಕೂ ಪುಣ್ಯ ಮಾಡಿರಬೇಕು. ಗುಂಪಿನಲ್ಲಿಯೋ, ಸಭೆ, ಸಮಾರಂಭಗಳಲ್ಲಿಯೋ ಹಿಡಿ ಹಿಡಿದು, ನೀವೊಂದು ಹಿಡಿಯಾಗಿ, ಬಾಯಿಗೆ ಅಡ್ಡ ಇಟ್ಟುಕೊಂಡು ಸಭ್ಯವಾಗಿ ಸೀನಿ 'ಎಕ್ಸ್ಕ್ಯೂಸ್ ಮಿ' ಎಂದಾಗ ಆನಂದವಾಗಲು ಸಾಧ್ಯವೇ? ಒಮ್ಮೆ ಯೋಚಿಸಿ ನೋಡಿ, ಹಾಗೆಯೇ ನೀವು ಧಾರಾಳವಾಗಿ ಬಾಯಗಲಿಸಿ, ತಲೆ ಮೇಲೆ ಮಾಡಿ, ಕಣ್ಮುಚ್ಚಿಕೊಂಡು ಯಾವ ಕಟ್ಟುಪಾಡೂ ಇಲ್ಲದೆ ಸೀನಿದಾಗ ನಿಮ್ಮ ಎದುರಿಗೆ ಯಾರಾದರೂ ಇದ್ದರೆ ಅವರ ಪಾಡು ಏನಾಗುತ್ತದೆ ಎಂದೂ ಚಿಂತಿಸಿ. ನಿಮ್ಮ ಬಾಯಿಂದ ಉದ್ಭವವಾದ ಸಪ್ತನದಿ ತೀರ್ಥಗಳು ಅವರ ಮೈಮೇಲೆಲ್ಲಾ ಸಿಂಚನವಾಗುತ್ತವೆ. ಇದರಿಂದ ರೋಗಗಳು ಹರಡುತ್ತವೆ. ಆದ್ದರಿಂದ ಸೀನುವಾಗ ಒಳತೋಳಿನಲ್ಲಿ ಸೀನುವ, ಕರವಸ್ತ್ರ ಬಾಯಿಗೆ ಅಡ್ಡ ಹಿಡಿದುಕೊಳ್ಳುವ ಅಭ್ಯಾಸ ಮಾಡಿಕೊಳ್ಳಲೇಬೇಕು. ಇಲ್ಲದಿದ್ದರೆ ನಿಮಗೆ ಬೈಗುಳ ಖಂಡಿತ. ಹಾಗಾಗದಿರಲಿ ಎಂದು ಬಯಸುವವರು ಈ ಮುಂದಿನ ಸಾಲುಗಳನ್ನು ಗುಣುಗುಣಿಸಿ ಏಕಾಂತದಲಿ ಸೀನುವ ಅನುಗ್ರಹವಾಗಲಿ ಎಂದು ಬೇಡಿಕೊಳ್ಳಿ.

ಸೀನಿದರೆ ಸೀನಬೇಕು ಏಕಾಂತದಲಿ

ಆಗುವಾನಂದದಲಿ ಸೇರಬಹುದು ಶ್ರೀಕಾಂತನಲ್ಲಿ

ಬಾಯ್ಗುಗಳಿಂದ ಜಿಗಿದ್ದ ಸೀನಿನ ಆನಂದ ನಮಗೆ ಇರಲಿ

ಹೊರಬೀಳುವ ಶಬ್ದದಲ್ಲಿ ಮಾತ್ರ ನಿಮಗೆ ಪಾಲಿರಲಿ

ವೇಗದಲ್ಲಿ ಧಾವಿಸುವ ಸೀನಿನೆದುರಿಗೆ ಯಾರೂ ಇಲ್ಲದಿರಲಿ

ನಮ್ಮ ಬಾಂಚನವೆಂದಿಗೂ ಅವರಿಗಾಗದಿರಲಿ

ರೋಗ ರುಜಿನಾದಿಗಳು ಹರಡದಿರಲಿ

ಸ್ವೇಚ್ಛೇಸೀನಿನ ಸುಖ ಸಂತಸಗಳು ನಮ್ಮದಾಗಲಿ

ನಮ್ಮ ತಂದೆಯಂತೂ ಧಾರಾಳವಾಗಿ ಸೀನಿ, ನಿರಾಳವಾದಾಗ ಅತ್ಯಾನಂದ ಪಡುತ್ತಿದ್ದರು. ಅಕ್ಕಪಕ್ಕದವರು ಬೆಚ್ಚಿ ಬಿದ್ದಾಗ, ಅದರಲ್ಲೂ ಚಿಕ್ಕ ಮಕ್ಕಳು ಎದುರಿಗಿದ್ದಾಗ "ಓ! ಹಿಡಿ ಹಿಡಿ..., ನನ್ನ ಮೂಗು ಎಲ್ಲೋ ಹಾರಿ ಹೋಯಿತು, ಆ ಟೇಬಲ್ ಕೆಳಗೆ ಹೋಯಿತು. ಕಿಟಕಿಯಿಂದ ಹೊರಕ್ಕೆ ಜಿಗಿಯಿತು' ಎಂದು ಗಲಾಟೆ ಎಬ್ಬಿಸಿ, ಮೊದಲೇ ಅವರ ಸೀನಿನ ಅಬ್ಬರಕ್ಕೆ ಬೆಚ್ಚಿದ್ದ ಮಕ್ಕಳನ್ನು ಮತ್ತಷ್ಟು ತಬ್ಬಿಬ್ಬು ಮಾಡುತ್ತಿದ್ದರು.



ಅವರದ್ದು ಯಾವಾಗಲೂ ಬಹಳ ಅಬ್ಬರದ ಸೀನು. ಅವರಿಗೆ ಅವರ ಸೀನಿನ ಮೇಲೆ ಅಪಾರ ಪ್ರೀತಿ, ಗೌರವ. ತೊಟ್ಟಿಲಿನಲ್ಲಿದ್ದ ಅವರ ಮೊಮ್ಮಕ್ಕಳಂತೂ ಅವರ ಸೀನಿನ ಆರ್ಭಟಕ್ಕೆ ಬೆಚ್ಚಿ, ಎದ್ದು ಅತ್ತಿದ್ದು ಹಲವು ಬಾರಿ. ನಾವೇನಾದರೂ `ಸ್ವಲ್ಪ ಮೆತ್ತಗೆ ಸೀನಬಾರದಾ?' ಎಂದು ಆಕ್ಷೇಪವೆತ್ತಿದರೆ, ಅದು ಮಾತ್ರ ಸಾಧ್ಯವಿಲ್ಲ. ಧಾರಾಳವಾಗಿ ಸೀನಿದಾಗಲೇ ಮೂಗಿಗೆ ಹಿತ' ಎಂದು ವಾದಿಸುತ್ತಿದ್ದರು. ವಯಸ್ಸಾದ ನಂತರ ಹಲವಾರು ಖಾಯಿಲೆಗಳ ಆಗರವಾಗಿದ್ದ ಅವರ ಶ್ವಾಸಕೋಶಕ್ಕೆ ಸೀನುವುದು ಪ್ರಮುಖ ಕಾರ್ಯವಾಗಿತ್ತು. 'ಅಬ್ಬಬ್ಬಾ, ಏನೀ ಮೂಗಿನ ಪ್ರತಾಪ! ಇದ್ದಕ್ಕಿದ್ದಂತೆ ಸುಳಿವು ಸೂಚನೆ ಕೊಡದೆ ಮಳೆಯ ಮಧ್ಯೆ ಸಿಡಿಯುವ ಸಿಡಿಲಿನಂತೆ ಈ ಸೀನುಗಳು ಒಮ್ಮೆಗೇ ಬರುತ್ತದಲ್ಲಾ!' ಎಂದು ಸರಾಗವಾಗಿ ಸೀನಿ, ರಾಗವಾಗಿ ಉಲಿದು, ಉದಾರವಾಗಿ ಬೆರಗಾಗುತ್ತಿದ್ದರು. ಒಮ್ಮೊಮ್ಮೆ ಸರಣಿ ಸೀನುಗಳೂ ಏಕಾಏಕಿ ಬಂದು ಅವರನ್ನು ಸುಸ್ತು ಮಾಡುತ್ತಿದ್ದವು. 'ಜ್ವರದಿಂದ ನರಳುತ್ತಿದ್ದರೂ ಸೀನು ಬಂದಾಗ ದೇಹಕ್ಕೆ ಎಲ್ಲಿಂದ ಅಷ್ಟು ಶಕ್ತಿ ಬರುತ್ತದೋ? ದಮ್ಮು, ಸೀನುಗಳಿಂದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಸಾಧ್ಯವೇ?' ಎಂದು ಉದ್ಗಾರ

ಮಾಡಿದ್ದೂ ಉಂಟು. ಹೀಗೆ ಅವರದ್ದು ದೈವದತ್ತವಾದ ಬೊಂಬಾಟ್ ಸೀನು, ನನಗೂ ಅಂತಹ ಸೀನುವಿಕೆ ಬಳುವಳಿಯಾಗಿ ಬಂದಿದೆ.

ಸೀನಿನ ಬಗ್ಗೆ ನಿಮಗೆಷ್ಟು ಗೊತ್ತು? 'ಅರೆ, ಏನು ಹೀಗೆ ಕೇಳುತ್ತೀರಾ? ನನಗೂ ಸೀನುವುದಕ್ಕೆ ಬರತ್ತೆ? ಅದೇನು ಬ್ರಹ್ಮ ವಿದ್ಯೆಯೇ? ಹುಟ್ಟಿದ ಕಂದಮ್ಮಗಳು, ತೊಟ್ಟಿಲ ಹಸುಗೂಸುಗಳೂ ನಿರಾಯಾಸವಾಗಿ ಸೀನುತ್ತವೆ. ಸೀನುವುದು, ಕೆಮ್ಮುವುದನ್ನು ಪಾಠ ಹೇಳಿಸಿಕೊಂಡು ಕಲಿಯಬೇಕೆ?' ಎಂದು ಕೇಳುತ್ತಿರುವಿರಾ? ಆಹಾ, ಅದು ನನಗೂ ಗೊತ್ತು. ಪಾಠ ಹೇಳಿಸಿಕೊಂಡು ಸುಶ್ರಾವ್ಯವಾಗಿ ಸೀನುವ ಅವಶ್ಯಕತೆ ಇಲ್ಲ. ಅದು ನಿಮಗರಿವಿಲ್ಲದೆ ಧುತ್ತೆಂದು ಪ್ರತ್ಯಕ್ಷವಾಗುತ್ತದೆ. ಬೇಕೆಂದಾಗ ಸೀನುವುದು, ಬರಲು ಬಯಸುವ ಸೀನನ್ನು ತಡೆಯುವುದು ಸುಲಭವಲ್ಲ. ನಾನು ಕೇಳುತ್ತಿರುವುದು ಸೀನಿನ ಕಾರ್ಯವೈಖರಿಯ ಬಗ್ಗೆ. ಅಂದರೆ, ಸೀನಿನ ಮೆಕ್ಯಾನಿಸಮ್ ನಿಮಗೆ ಗೊತ್ತಾ, ಸೀನು ಯಾಕೆ ಮತ್ತು ಹೇಗೆ ಹೊರಹೊಮ್ಮುತ್ತದೆ ಎಂದು? ಕೆಮ್ಮು, ಆಕಳಿಕೆಯಂತೆ ಈ ಸೀನು ಕೂಡ ನಮ್ಮ ಹಿಡಿತಕ್ಕೆ ಸಿಕ್ಕದೆ ತಾನಾಗಿ ತಾನೇ ನಡೆಯುವ ಕ್ರಿಯೆ. ವೈದ್ಯವಿಜ್ಞಾನದಲ್ಲಿ ಸೀನುವಿಕೆಗೆ 'sternutation' ಎನ್ನುತ್ತಾರೆ. ಈ ಹೆಸರು ಕೇಳಿದರೇ ಏನೋ ಪ್ರಮಾದವೆನ್ನಿಸುವುದಿಲ್ಲವೆ? ಇರಲಿ ಬಿಡಿ. ಇದರಿಂದ ಸೀನಿನ ಲಕ್ಷಣಗಳಲ್ಲಿ ಬದಲಾವಣೆಯೇನೂ ಆಗುವುದಿಲ್ಲ. ಸೀನು ಸೀನೇ. ಈಗ ಸೀನು ಉದ್ಭವಿಸುವುದು ಯಾವಾಗ ಎಂದು ವೈದ್ಯವಿಜ್ಞಾನದ ರೀತಿ ತಿಳಿದುಕೊಳ್ಳೋಣ. ಸಾಕಷ್ಟು ಹೊರಗಿನ ಕಣಗಳು ಅಥವಾ ಬಾಹ್ಯ ಪ್ರಚೋದಕಗಳು ಅಂದರೆ ಘಾಟು, ಧೂಳು ಇತ್ಯಾದಿಗಳು ನಮ್ಮ ಮೂಗಿನಲ್ಲಿರುವ ರೋಮ ರಾಶಿಯಲ್ಲಿ ನುಗ್ಗಿ, ಮುಂದೆ ಸಾಗುತ್ತಾ ಅಲ್ಲಿರುವ ಲೋಳೆ ಸುರಿಸುವ ಪೊರೆಯನ್ನು ತಾಗಿತೆನ್ನೋಣ. ಆಗ ಅಲ್ಲಿ ನಮ್ಮ ದೇಹವನ್ನು ಕಾಪಾಡಲು ಶಿಸ್ತಿನ ಸಿಪಾಯಿಗಳಂತೆ ಸಿದ್ಧವಾಗಿರುವ ಹಿಸ್ಟಮಿನ್‌ಗಳು, 'ನಾವು ನಿಮ್ಮನ್ನು



ಒಳನುಗ್ಗಲು ಬಿಡುವುದಿಲ್ಲ' ಎಂದು ದೇಹದಿಂದ ಹೊರಹೊಮ್ಮಿ ಯುದ್ಧ ಸಾರುತ್ತವೆ. ಇವೆರಡರ ಜಗಳದಿಂದ ಮೂಗಿನಲ್ಲಿರುವ ನರಮಂಡಲಕ್ಕೆ ಕಿರಿಕಿರಿಯಾಗುತ್ತದೆ. ಈ ನರಗಳ ಪಿರಿಪಿರಿ ತ್ರಿಕೋನ (trigeminal) ನರದ ಮೂಲಕ ನರಮಂಡಲದ ಹೆಡ್‌ಕ್ವಾರ್ಟರ್ಸ್‌ಗೆ ಅಂದರೆ ಮೆದುಳಿಗೆ ರವಾನೆಯಾಗುತ್ತದೆ. ಅದು ಕೂಡಲೇ 'ಫೈರ್' ಎಂದು ಆದೇಶ ನೀಡುತ್ತದೆ. ಈ ಆದೇಶದಲ್ಲಿ ಶ್ವಾಸಕೋಶದಲ್ಲಿರುವ ಗಾಳಿಯನ್ನು ಹೆಚ್ಚು ಪ್ರಮಾಣದಲ್ಲಿ ಮತ್ತು ವೇಗವಾಗಿ ಹೊರಕ್ಕೆ ದಬ್ಬಿ ತನ್ಮೂಲಕ ಅಲ್ಲಿರುವ ಬಾಹ್ಯ ವಸ್ತುಗಳನ್ನು ದಬ್ಬುವಂತೆ ಸೂಚನೆ ಇರುತ್ತದೆ. ಇಷ್ಟೇ ಅಲ್ಲ, ಹಾಗೆ ಹೊರಬರುವ ಗಾಳಿ ದೇಹದ ಬೇರೆಡೆಗೆ ನುಗ್ಗದಂತೆ ಗಂಟಲಿನಲ್ಲಿ, ಆಹಾರನಾಳದಲ್ಲಿ ತಡೆ ಏರ್ಪಡುತ್ತವೆ! ಒಂದು

ಸೀನಿನ ಕ್ರಿಯೆಯಲ್ಲಿ ವಪೆ, ಹೊಟ್ಟೆ, ಎದೆ ಮತ್ತು ಗಂಟಲಿನ ನರಗಳು ಭಾಗವಹಿಸುತ್ತವೆ. ಅಬ್ಬಬ್ಬಾ ಆ ಸೃಷ್ಟಿಕರ್ತನ ಇಂಜಿನಿಯರಿಂಗ್ ಹೇಗಿದೆ! ಕ್ಷಣಾರ್ಧದಲ್ಲಿ ನಿಮ್ಮ ಮುಂದೆ ಹಾಜರಾಗುವ ಸೀನಿನ ಜನನದ ಹಿಂದೆ ಇಷ್ಟೆಲ್ಲಾ ಕಾರ್ಯಗಳು ನಡೆಯುತ್ತವೆ. ಹೀಗೆ ಹೊರದೂಡುವ ಗಾಳಿಯಲ್ಲಿ ನಮ್ಮ ದೇಹದ ಮೇಲೆ ದಾಳಿ ಮಾಡಲು ನುಗ್ಗಿದ್ದ ಬಾಹ್ಯ ಕಣಗಳು ಧೂಳೀಪಟವಾಗುತ್ತವೆ.

ನನ್ನ ಚೊಚ್ಚಲ ಮಗ ತೊಟ್ಟಿಲ ಮಗುವಾಗಿದ್ದಾಗ ದೀಪ ಹಚ್ಚಿದ ಕೂಡಲೇ ನಿದ್ರೆಯಲ್ಲಿದ್ದರೂ ಸೀನುತ್ತಿದ್ದ. 'ಈ ಮಗುವಿಗೆ ನಿದ್ದೆ ಮಾಡುವಾಗಲೂ ಲೈಟ್ ಹಾಕುವುದು ಹೇಗೆ ಗೊತ್ತಾಗುತ್ತದೆ!" ಎಂದು ಆಶ್ಚರ್ಯ ಪಡುತ್ತಿದ್ದೆ. ಆದರೆ ಹೀಗೆ ಬೆಳಕು ಬಂದಾಗ ಸೀನುವ ಸೀನಿಗೆ "photic sneeze' ಎನ್ನುತ್ತಾರೆ. ಹೀಗೆ ಸೀನುವವರನ್ನು 'Sun- sneezer ಎಂದು ಗುರುತಿಸುತ್ತಾರೆ ಎಂದು ನನಗೆ ಇತ್ತೀಚೆಗೆ ತಿಳಿಯಿತು. ಸಾಧಾರಣವಾಗಿ ಸೀನುವಾಗ ಮೂಗಿನ ನರಮಂಡಲದೊಳಗೆ ಕಿರಿಕಿರಿಯಾಗುತ್ತದೆ. ಕಣ್ಣುಗಳು ಸ್ವಯಂಚಾಲಿತವಾಗಿ ಮುಚ್ಚಿಕೊಳ್ಳುತ್ತವೆ. ಕಣ್ಣಿನ ಪಾಪೆಗಳು ಮುಚ್ಚಿಕೊಂಡಾಗ ಮೆದುಳು ಸಂಬಂಧಿಸಿದ ಅವಯವಗಳಿಗೆ ಸೀನುವಂತೆ ಆದೇಶ ನೀಡುತ್ತದೆ. ಆದರೆ ಇದ್ದಕ್ಕಿದ್ದಂತೆ ಬೆಳಕಿಗೆ ಬಂದಾಗಲೂ ಪಾಪೆಗಳು ಮುಚ್ಚಿಕೊಂಡು ಮೆದುಳಿಗೆ ಸಂಕೇತ ಕಳುಹಿಸುತ್ತವೆ. ಆದರೆ ಕೆಲವರಲ್ಲಿ ನರಮಂಡಲದ ರಚನೆಯಲ್ಲಿಯೇ ಗೊಂದಲವಿದ್ದು ಪಾಪೆಗಳು ಮುಚ್ಚಿದ್ದು ಬೆಳಕಿಗೋ, ಮೂಗಿನಲ್ಲಿ ಉಂಟಾದ ಕಿರಿಕಿರಿಗೋ ಎಂದು ತಿಳಿಯದಿರುವ ಸಂದರ್ಭಗಳಿರುತ್ತವೆ. ಹೀಗಾಗಲು ತ್ರಿಕೋನ ನರ ಮತ್ತು ಕಣ್ಣಿನ ನರ (optical nerve) ಅಕ್ಕಪಕ್ಕದಲ್ಲಿರುವುದೇ ಕಾರಣ. ಮೆದುಳಿನಿಂದ ಸೀನುವ ಆದೇಶ ಹೊರಡುತ್ತದೆ. ಹೀಗಾಗಿ ಬೆಳಕಿಗೆ ಬಂದಾಗಲೂ ಕೆಲವರು ಸೀನುತ್ತಾರೆ. ಇವರೇ 'ಸೂರ್ಯ ಸೀನಿಗರು' ಈಗಲೂ ನನ್ನ ಮಗ ಬೆಳಗ್ಗೆ ಎದ್ದ ಕೂಡಲೇ ಸೀನುತ್ತಾನೆ. ಅವನಿಗೆ ಪ್ರತಿನಿತ್ಯವೂ 'ಸುಪ್ರಭಾತ' ಹೇಳುವುದೇ ಅವನ ಸೀನುಗಳು. ಆದರೆ ಈ ಸೂರ್ಯ ಸೀನಿಗರಲ್ಲಿ ಎಷ್ಟೋ ಜನರಿಗೆ ಈ ವಿಷಯ ತಿಳಿದಿರುವುದೇ ಇಲ್ಲ. ಇದೊಂದು ನಿರಪಾಯಕಾರಿ ಕ್ರಿಯೆಯಾದ್ದರಿಂದ ಏನೂ ಯೋಚನೆ ಇಲ್ಲ. ನೀವು ಸೂರ್ಯ ಸೀನುಗರಾ ಎಂದು ಪರೀಕ್ಷಿಸಿಕೊಳ್ಳಿ. ಮತ್ತೆ ಕೆಲವರು ಹೊಟ್ಟೆ ಭಾರವಾದಾಗಲೂ ಸೀನುತ್ತಾರಂತೆ. ವೈದ್ಯರ ಪ್ರಕಾರ ಇದು ಒಳ್ಳೆಯ ಲಕ್ಷಣವಲ್ಲ.



ಸೀನು ಯಾವ ವೇಗದಲ್ಲಿ ಬರುತ್ತದೆ ಎಂದು ವಿಜ್ಞಾನಿಗಳು ಅಳತೆ ಮಾಡಿದ್ದಾರೆ ಎಂದರೆ ನಂಬುತ್ತೀರಾ? ಕ್ರಿಕೆಟ್‌ನ ಚೆಂಡು ಯಾವ ವೇಗದಲ್ಲಿ ಬಂದು ಬ್ಯಾಟ್‌ಗೆ ತಗುಲಿತು ಎಂದು ಅಂಕಿ ಅಂಶಗಳನ್ನು ಕೇಳಿಸಿಕೊಂಡಾಗಲೂ

ನನಗೆ ಆಶ್ಚರ್ಯವಾಗುತ್ತಿತ್ತು. ಆದರೆ ಅದಕ್ಕಾದರೂ ಬೌಲ್ ಮಾಡಿದ ನಂತರ ಚಿತ್ರ ತೆಗೆದು ವೇಗವನ್ನು ಲೆಕ್ಕಾಚಾರ ಮಾಡಬಹುದು ಎಂದು ವಿವರಣೆ ನೀಡಿ ಸಮಾಧಾನ ಹೊಂದಬಹುದು. ಆದರೆ ಈ ಸೀನನ್ನು ಚಿತ್ರದಲ್ಲಿ ಸೆರೆ ಹಿಡಿಯುವುದು ಹೇಗೆ? ಇದಕ್ಕೆ ರೂಪವಿಲ್ಲ, ಆಕಾರವಿಲ್ಲ. ಆಕಾರವಿರುವುದು ಸೀನಿದವರಿಗೆ ಮಾತ್ರ ಈ ಅದೃಶ್ಯ ರೂಪಿಯ ವೇಗವನ್ನು ಗಣಿಸಿರುವುದು ಹೇಗೆ? ಇದೋ ಇಲ್ಲಿದೆ ಈ ಪ್ರಶ್ನೆಗೆ ಉತ್ತರ. ವಿಜ್ಞಾನಿಗಳು ನೆರಳುನಕ್ಷೆ ಪ್ರತಿಬಿಂಬ (shadowgraph imaging) ತಂತ್ರಜ್ಞತೆಯಿಂದ ಸೀನಿನ ವೇಗದ ಲೆಕ್ಕಾಚಾರ ಹಾಕಿದ್ದಾರೆ. ಸ್ವಯಂಸೇವಕರ ಮೂಗಿಗೆ ಮೆಣಸಿನ ಘಾಟನ್ನು ಮೂಸಿಸಿ, ಸೀನು ಬರಿಸಿ ಬಹಳ ಸೂಕ್ಷ್ಮ ಹಾಗೂ ನಿಖರವಾದ ಸೀನಿನ ನಕ್ಷೆ ಮೂಡಿಸಿ ಲೆಕ್ಕಾಚಾರ ಮಾಡಿದಾಗ ಅದರ ವೇಗ ಸರಾಸರಿ ಸೆಕೆಂಡಿಗೆ 4.5 ಮೀಟರ್ ಎಂದು ತಿಳಿದು ಬಂದಿದೆ. ಈ ವೇಗ ಸೀನುವವರ ಶಕ್ತಿ, ತೂಕ ಇತ್ಯಾದಿಗಳ ಮೇಲೆ ಅಲ್ಪಸ್ವಲ್ಪ ಬದಲಾಗುತ್ತದೆ. ಆದರೆ ಒಂದು ಸಾಮಾನ್ಯ ಸೀನು ನಿಮ್ಮ ದೇಹದ ಗಾಳಿಯನ್ನು ಗಂಟೆಗೆ ನೂರು ಮೈಲಿ ವೇಗದಷ್ಟು ವೇಗದಲ್ಲಿ ಹೊರದೂಡುತ್ತದಂತೆ ಎಂದೂ ವಿಜ್ಞಾನಿಗಳು ಅಂದಾಜಿಸಿದ್ದಾರೆ.

ಇಂತಹ ವೇಗದಲ್ಲಿ ಬರುವ ಸೀನನ್ನು ತಡೆಹಿಡಿಯುವುದು ಅಪಾಯ. ಯಾವುದೇ ಕಾರಣಕ್ಕೂ ಮೂಗು ಹಿಡಿದು ತಡೆದರೆ ಆ ವೇಗವು ಹಿಂದಕ್ಕೆ ಬಡಿದು ದೇಹದ ಒಳಭಾಗಗಳಿಗೆ ಹಾನಿಯಾಗಬಹುದು. ಕಿವಿ, ಮೂಗು, ಗಂಟಲುಗಳು ಒಳಗೊಳಗೇ ಸಂಪರ್ಕ ಹೊಂದಿರುವುದರಿಂದ ಸೀನು ಹಿಂದಕ್ಕೆ ಬಡಿದಾಗ ಕಿವಿ ಕಿವುಡಾಗಬಹುದು. ಮೆದುಳಿಗೂ ತಲುಪಿ ಅಲ್ಲಿಯ ರಕ್ತನಾಳಗಳಿಗೆ ಹಾನಿಯಾಗಬಹುದು. ಇನ್ನು ಮುಂದೆ ಸೀನು ಬಂದರೆ ಧಾರಾಳವಾಗಿ ಸೀನಿ, ಯಾರಾದರೂ ಮುಖ ಸಿಂಡರಿಸಿಕೊಂಡರೆ ಅವರಿಗೆ ಈ ಮಾಹಿತಿ ನೀಡಿ, ಅವರಿಗೂ ಧಾರಾಳವಾಗಿ, ಮುಕ್ತವಾಗಿ ಸೀನುವಂತೆ ಉತ್ತೇಜಿಸಿ. ಅವರೂ ಧಾರಾಳವಾಗಿ ಸೀನಿದಾಗ ಅಪಾಯವೂ ಇಲ್ಲ; ಆನಂದವೂ ಸಿಕ್ಕುತ್ತದೆ. ಅನಂತರ ಅವರಿಗೆ ಇದು ಒಂದು ಚಟವಾಗಿ ಬಿಡುತ್ತದೆ. ಅದಕ್ಕೆ ಅವರು ಎಷ್ಟು ದಾಸರಾಗುತ್ತಾರೆಂದರೆ 'ಅಯ್ಯೋ ಇಂದು ನನಗೆ ಸೀನೇ ಬಂದಿಲ್ಲವಲ್ಲಾ' ಎಂದು ಹಲಬುತ್ತಾರೆ. ನಿಜ, ಉಸಿರಾಡುವುದು ನಿರಂತರ ಕ್ರಿಯೆ. ಆದರೆ ಸೀನದೆ ಬದುಕಬಹುದು. ಬಂದ ಸೀನು ಬಿಡುಬೀಸಾಗಿ ಹಾಯಾಗಿ ನಿಮ್ಮಿಂದ ದೂರವಾಗಿ ಹಾರುವಾಗ ಅತ್ಯಾನಂದವಾಗುವುದರಲ್ಲಿ ಸಂದೇಹವೇ ಇಲ್ಲ. ಇದು ಅಂಕೆ ಶಂಕೆ ಇಲ್ಲದ ನಿತ್ಯಾನಂದವೂ ಆಗಬಹುದು (ತಪ್ಪಾಗಿ ಅರ್ಥೈಸಿಕೊಂಡರೆ ನಾನು ಜವಾಬ್ದಾರಳಲ್ಲ ).

ಸೀನಬೇಕೆಂದು ಬಯಸುವ ಅನೇಕ ಮಂದಿ ಮಹತ್ವಾಕಾಂಕ್ಷಿಗಳು ನಮ್ಮ ಮಧ್ಯೆ ಇದ್ದಾರೆ. ಅವರಾರು ಗೊತ್ತೆ? ನಶ್ಯ ಹಾಕುವ ಚಟವುಳ್ಳವರು. ಯಾವುದೋ

ಕಾರಣಕ್ಕೆ ಅವರ ಅಭ್ಯಾಸ(ದುರಭ್ಯಾಸ) ಆರಂಭವಾಗುತ್ತದೆ. ಅದರಿಂದ ಅವರಿಗೆ ಮೊದಲು ಕೆಲವು ಸುಖ, ಸೌಕರ್ಯಗಳು ಕಾಣಬರುತ್ತವೆ. ಅನಂತರ ಅದು ಚಟವಾಗಿ ಪರಿಣಮಿಸುತ್ತದೆ. ಸಿಗರೇಟು ಸೇದುವುದನ್ನು ಬಿಡಲು ಹೋಗಿ ನಶ್ಯಕ್ಕೆ ದಾಸರಾಗುವರು ಎಷ್ಟೋ ಮಂದಿ ಇದ್ದಾರೆ. ಆತಂಕವನ್ನು ದೂರ ಮಾಡಿ ಮನಶ್ಯಾಂತಿಗಾಗಿ ಪ್ರಾರಂಭವಾಗುವ ಈ ಅಭ್ಯಾಸ ಕ್ಯಾನ್ಸರ್‌ನಂತಹ ರೋಗಕ್ಕೂ ಕಾರಣವಾಗಬಹುದು.

ನಾವು ಸಾಧಾರಣವಾಗಿ ಎಲ್ಲಾ ವಿಷಯಗಳಿಗೂ ಪಾಶ್ಚಾತ್ಯರನ್ನು ಅನುಕರಿಸುತ್ತೀವಲ್ಲವೆ? ಈ ಸೀನಿನ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿ ಯಾವ ವಿಚಾರಗಳಿವೆ ಎಂದು ಗಮನಿಸೋಣ. ಬಹಳ ಹಿಂದೆ ಅಂದರೆ 17ನೆಯ ಶತಮಾನದಲ್ಲಿ ಸೀನುವ ಕ್ರಿಯೆ ಮನಸ್ಸನ್ನು ತಿಳಿಗೊಳಿಸುತ್ತದೆ ಎಂದೇ ನಂಬಿದ್ದರು. ಅಷ್ಟೇ ಅಲ್ಲ ಪ್ರತಿಷ್ಠಿತ ಸಮಾಜದ ಸಭೆಗಳಲ್ಲಿ ಸೀನುವುದು ಒಂದು ಘನವಾದ ಕ್ರಿಯೆ ಎಂದು ಭಾವಿಸಲಾಗುತ್ತಿತು. ನೀವು ಹೆಚ್ಚು ಸೀನಿದಷ್ಟೂ ನಿಮ್ಮ ಗೌರವ ಪ್ರತಿಷ್ಠೆಗಳು ಹೆಚ್ಚಾಗುತ್ತಿದ್ದು, ಒಂದು ವಿಧದಲ್ಲಿ ಸೀನುವುದಕ್ಕೆ ಪೈಪೋಟಿ ಏರ್ಪಟ್ಟಿತು ಎಂದೇ ಹೇಳಬಹುದು. ಸರಿಯಾದ ಸಮಯದಲ್ಲಿ ಸೀನನ್ನು ಉತ್ಪಾದಿಸಲು ಜನ ಒಂದು ಉಪಾಯ ಕಂಡುಕೊಂಡರು. ಅದೇ ನಶ್ಯ. ಚಿಕ್ಕ-ಚಿಕ್ಕ ಡಬ್ಬಿಗಳಲ್ಲಿ ನಶ್ಯವನ್ನು ತುಂಬಿಸಿಕೊಂಡು ಒಂದು ಚಿಟಕೆ ನಶ್ಯವನ್ನು ಮೂಗಿನೊಳಗೆಳೆದುಕೊಂಡು ಸಭಾ ಕಲಾಪಗಳ ಮಧ್ಯೆ ಸರಿಯಾದ ಸಮಯಕ್ಕೆ ಒಂದು ಸೀನನ್ನು ಉದಾರವಾಗಿ ಉದುರಿಸಿದರೆ ನೆರೆದಿದ್ದ ಜನ ನಿಮ್ಮ ಕಡೆ ತಿರುಗಿ ನೋಡುತ್ತಾರಲ್ಲವೇ? ಇದು ಗಮನ ಸೆಳೆಯುವ ಉಪಾಯವೇ ಆಗಿತ್ತು. ಹೀಗೆ ಹತ್ತಾರು ಜನ ಏಕಕಾಲಕ್ಕೆ ಸೀನಿದಾಗ ಏನಾಗುತ್ತಿತ್ತೋ! ಆದರೆ ಹೀಗೆ ಸೀನುವುದೂ ಕೂಡ ಕೇವಲ ಧನಿಕರಿಗೆ ಮಾತ್ರ ಸಾಧ್ಯವಾಗುತ್ತಿತ್ತು. ಏಕೆಂದರೆ ಬಗೆ ಬಗೆಯ ನಶ್ಯಗಳು ದುಬಾರಿಯಾಗಿದ್ದು ಅದು ಕೇವಲ ದುಡ್ಡಿದ್ದವರಿಗೆ ಮಾತ್ರ ಎಟುಕುತ್ತಿತ್ತು. ಅದು ನಿಜಕ್ಕೂ ದುಬಾರಿ ಸೀನು, ನಿಮಗೆ ಬೇಕಾದಾಗ ಸೀನಬಲ್ಲವರಾದರೆ ನೀವು ಧನಿಕರು ಎಂದೇ ಎಣಿಸಲಾಗುತ್ತಿತ್ತು. ಸೀನು ದೊಡ್ಡಸ್ತಿಕೆಯ ಸಂಕೇತವಾಗಿತ್ತು. ಆ ನಶ್ಯದ ಡಬ್ಬಿಗಳೂ ಕೂಡ ಅತಿ ಬೆಲೆಬಾಳುವ ನಾಜೂಕಿನ ಡಬ್ಬಿಗಳಾಗಿರುತ್ತಿದ್ದವು.

ಇಂಗ್ಲೀಷ್‌ನಲ್ಲಿ "Not to be sneezed at' ಎಂಬ ನುಡಿಗಟ್ಟಿದೆ. ಇದಕ್ಕೆ ಕಾರಣವೇನೆಂದು ಬಲ್ಲಿರಾ? ಇಂಗ್ಲೆಂಡ್‌ನಲ್ಲಿ ೧೭ನೆಯ ಶತಮಾನದಲ್ಲಿ ಧನಿಕರು ಬಹಳ ಐಷಾರಾಮಿ ಜೀವನ ನಡೆಸುತ್ತಿದ್ದರು. ಸಾಯಂಕಾಲವಾದ ನಂತರ ಸಭೆ ಸೇರಿ ಹರಟೆ, ಆಟಪಾಟ, ಪಾನೀಯಗಳ ಸೇವನೆ ಇತ್ಯಾದಿ ಚಟುವಟಿಕೆಗಳಲ್ಲಿ ಕಾಲ ಕಳೆಯುತ್ತಿದ್ದರು. ಇಂತಹ ಸಭೆಗಳಲ್ಲಿ ತಮ್ಮ ಜ್ಞಾನವನ್ನು (ಅಜ್ಞಾನ?) ತೋರ್ಪಡಿಸಿಕೊಳ್ಳಲು ಕೆಲವರು ಬಹಳ ಹೆಚ್ಚು ಮಾತಾಡುತ್ತಿದ್ದರು. ಯಾರ ಮಾತಾದರೂ ಮತ್ತೊಬ್ಬನಿಗೆ ಹಿಡಿಸದಿದ್ದರೆ ಒಂದು ಸೀನು ಸಿಡಿಸಿ 'ಸಾಕು ಕಂಡಿದ್ದೇನೆ'

ಎಂದು ಸೂಚನೆ ನೀಡುತ್ತಿದ್ದರಂತೆ. ಆತ ಮಾತನಾಡುತ್ತಿರುವ ವಿಷಯ ಸ್ವಾರಸ್ಯಕರವಾಗಿಲ್ಲ ಎಂದು ಸೂಚಿಸುವುದಕ್ಕೂ ಸೀನಿನ ಬೆನ್ನು ಹಿಡಿಯುತ್ತಿದ್ದರಂತೆ. ಹೀಗಾಗಿ ಒಂದು ಸಂಭಾಷಣೆಯ ಅಥವಾ



ಭಾಷಣದ ಮಧ್ಯೆ ಯಾರೂ ಸೀನದಿದ್ದರೆ ಅದು ಸ್ವಾರಸ್ಯಪೂರ್ಣವಾಗಿದೆ ಎಂಬುದರಲ್ಲಿ ಯಾವುದೇ ಸಂದೇಹವಿರುತ್ತಿರಲಿಲ್ಲ.

ಇನ್ನೊಂದು ವಿಷಯ. ಮಕ್ಕಳು ಸೀನಿದಾಗ 'ಶತಾಯುಷ್ ಚಿರಂಜೀವಿ' ಎಂದು ಹಾರೈಸುತ್ತೇವೆ. ಕೆಲವರು ತಾವು ಸೀನಿದಾಗ 'ನಾರಾಯಣ, ಕೃಷ್ಣ, ವಾಸುದೇವ, ಶ್ರೀನಿವಾಸ' ಎಂದೋ ಅಥವಾ ತಮ್ಮ ಮನಸ್ಸಿಗೆ ಹತ್ತಿರವಾದ ಮತ್ಯಾವುದಾದರೂ ದೇವರ ಸ್ಮರಣೆ ಮಾಡುತ್ತಾರೆ. ನನಗೂ ಇಂತಹ ಅಭ್ಯಾಸವಿದೆ. ಒಮ್ಮೆ ನಾನು, ನನ್ನ ಪತಿ, ನಮ್ಮ ಸ್ನೇಹಿತರೊಂದಿಗೆ ಪ್ರವಾಸಕ್ಕೆ ಹೋಗಿದ್ದಾಗ ಜೋರಾಗಿ ಸೀನಿದ ನಂತರ 'ಶ್ರೀನಿವಾಸ' ಎಂದು ಉದ್ಧರಿಸಿದಾಗ ನನ್ನ ಪಕ್ಕದಲ್ಲಿದ್ದ ನನ್ನ ಗಂಡನ ಸ್ನೇಹಿತರು 'ಏನು ಕರೆದಿರಾ?' ಎನ್ನಬೇಕೆ! ನನಗೆ ಆ ಕ್ಷಣದಲ್ಲಿ ತಬ್ಬಿಬ್ಬಾಯಿತು. ಹೀಗೆ ದೇವರ ಹೆಸರು ಹೇಳಲೂ ಕಾರಣವಿದೆ. ಸೀನನ್ನು ಹೊರತಳ್ಳುವ ಕ್ಷಣದಲ್ಲಿ ಒಂದೇ ಗತಿಯಲ್ಲಿ ಬಡಿಯುವ ಹೃದಯ ಕ್ಷಣಕಾಲ ನಿಧಾನಿಸಿ ಮತ್ತೆ ತನ್ನ ಗತಿಯಲ್ಲಿ ಬಡಿದುಕೊಳ್ಳುತ್ತದೆ. ನಡೆಯುತ್ತಿರುವಾಗ ದಿಣ್ಣೆ ಅಥವಾ ಕಲ್ಲು ಅಡ್ಡ ಬಂದರೆ ನಡಿಗೆ ನಿಧಾನವಾಗುವಂತೆ. ಆ ಸೀನು ಹೊರಕ್ಕೆ ಬಂದ ನಂತರ ಮತ್ತೆ ಹೃದಯದ ಬಡಿತ ಸಮರ್ಪಕವಾಗಿ ಪ್ರಾರಂಭವಾಗಿದ್ದಕ್ಕೆ ದೇವರಿಗೆ ಕೃತಜ್ಞತಾಪೂರ್ವಕವಾಗಿ ವಂದಿಸಿ, ನಾಮಸ್ಮರಣೆ ಮಾಡುವುದು ವಾಡಿಕೆಯೆಂದೂ, ಇದೇ ಅನೂಚಾನವಾಗಿ ನಡೆದು ಬಂದ ಪದ್ಧತಿಯಾಗಿ ಬೆಳೆದು ಬಂದಿದೆಯೆಂದೂ ತಿಳಿದು ಬಂದಿದೆ. ಇದು ಕೇವಲ ನಮ್ಮ ಸಂಸ್ಕೃತಿಯಲ್ಲಿ ಮಾತ್ರವಲ್ಲ. ಪಾಶ್ಚಾತ್ಯರಲ್ಲೂ ಈ ಅಭ್ಯಾಸವಿದೆ. ಅವರು 'Bless you” ಎಂದು ಹೇಳಿ ಸೀನಿದವರಿಗೆ ಶುಭ ಕೋರುತ್ತಾರೆ. ಚೈನಾ, ಜಪಾನ್ ದೇಶಗಳಲ್ಲಿ ಸೀನಿದವರನ್ನು ಯಾರೋ ನೆನೆಪು ಮಾಡಿಕೊಳ್ಳುತ್ತಿದ್ದಾರೆ. ಕೇವಲ ನೆನಪು ಮಾಡಿಕೊಳ್ಳುವುದಲ್ಲದೆ ಯಾರೋ ಬೈದುಕೊಳ್ಳುತ್ತಿದ್ದಾರೆ ಎಂಬ ನಂಬಿಕೆಯೂ ಇದೆ. ನಮ್ಮಲ್ಲಿ ಯಾರಿಗಾದರೂ ನೆತ್ತಿ ಹತ್ತಿ ಕೆಮ್ಮಲು ಪ್ರಾರಂಭಿಸಿದರೆ 'ಯಾರೋ ಬೈದುಕೊಳ್ಳುತ್ತಿದ್ದಾರೆ' ಎಂದುಕೊಳ್ಳುವ ಸಂಪ್ರದಾಯವಿದೆ. ಇಸ್ಲಾಂ ಧರ್ಮದಲ್ಲಿಯೂ ಕೂಡ ಯಾರಾದರೂ ತಾವು ಸೀನಿದಾಗ 'ಅಲ್-ಹಂದು-ಲಿಲಾಹ್' ಅಂದರೆ 'ಅಲ್ಲಾನಿಗೆ ಎಲ್ಲಾ ಪ್ರಶಂಸೆಯೂ ಸಲ್ಲಲಿ' ಎಂದು ಹೇಳುತ್ತಾರಂತೆ. ಜೊತೆಗಿದ್ದವರು 'ದೇವರು ನಿನಗೆ ಒಳ್ಳೆಯದನ್ನು ಮಾಡಲಿ” ಎಂದು ಹಾರೈಸುತ್ತಾರೆ.

ಬಹಳ ಹಿಂದೆ ಗ್ರೀಕರು ಕೂಡ ಈ ಸೀನಿನ ಬಗ್ಗೆ ಅನೇಕ ನಂಬಿಕೆಗಳನ್ನು ಇಟ್ಟುಕೊಂಡಿದ್ದರು. ಬಹಳ ವರ್ಷಗಳ ನಂತರ ಒಡೆಸ್ಸಿಯಸ್ ಭಿಕ್ಷುಕನಂತೆ ವೇಷ ಮರೆಸಿಕೊಂಡು ತನ್ನ ಹೆಂಡತಿ ಪೆನಲೋಪ್ ಬಳಿ ಮಾತನಾಡುತ್ತಿದಾಗ, ಅವಳು ತಾನು ತನ್ನ ಗಂಡನ ಬರವಿಗಾಗಿ ಕಾಯುತ್ತಿರುವುದಾಗಿ ಹೇಳುತ್ತಾಳೆ. ಭಿಕ್ಷುಕನಂತೆ ಬಂದಿರುವವನು ತನ್ನ ಗಂಡನೇ ಎಂದು ಅವಳಿಗೆ ತಿಳಿದಿರುವುದಿಲ್ಲ. ಅಷ್ಟರಲ್ಲಿ ಅವರಿಬ್ಬರ ಮಗ ಒಂದು ಸೀನು ಸೀನುತ್ತಾನೆ. ಆಗ ಪೆನಲೋಪ್ ಬಹಳ ಸಂತಸದಿಂದ ಅದು ದೇವರಿಂದ ಬಂದ ಶುಭ ಸೂಚನೆ ಎಂದು ಸಂಭ್ರಮಿಸುತ್ತಾಳೆ. ಈ ನಂಬಿಕೆಗಳಿಗೆಲ್ಲಾ



ಮುಖ್ಯ ಕಾರಣ ಸೀನು ಇದ್ದಕ್ಕಿದ್ದಂತೆ ಬರುವುದೇ ಆಗಿರಬೇಕು. ನಮ್ಮಲ್ಲಿ ಒಂಟಿ ಸೀನು ಅಪಶಕುನವೆಂದು ಹಲವರ ನಂಬಿಕೆ. ಶುಭ ಕಾರ್ಯದ ಮಾತಾಡುತ್ತಿದ್ದಾಗ ಯಾರಾದರೂ ಒಂಟಿ ಸೀನು ಸೀನಿದರೆ ಅವರ ಮೂಗೆಳೆದಾದರೂ ಮತ್ತೊಂದು ಸೀನು ಸೀನುವಂತೆ ಒತ್ತಾಯಿಸುವುದು ಸಾಮಾನ್ಯ. ಹಾಗೆ ಎರಡು ಸೀನುಗಳನ್ನು ಸೀನಿದರೆ ಅಲ್ಲಿದ್ದವರಿಗೆ ಸಂತೋಷ, ಕೆಲಸ ಆದ ಹಾಗೆ ಎಂಬ ಸಮಾಧಾನ. ಇದು ಇಂತಹ 'ಸೀನ್'ನಲ್ಲಿ ಸೀನಿನ ಪಾತ್ರ, ಯಾವುದಕ್ಕೂ ನೆಗಡಿ ಬಂದವರನ್ನು ದೂರವಿಟ್ಟೆ ಶುಭ ಕಾರ್ಯಗಳ ಬಗ್ಗೆ ಮಾತನಾಡುವುದು ಕ್ಷೇಮ.

ಇನ್ನು ನಮ್ಮ ಪುರಾಣಗಳತ್ತ ಒಂದು ನೋಟ ಬೀರೋಣ. ನಮ್ಮಲ್ಲಿ ಹಲವಾರು ದೇವರುಗಳಿಗೆ ಒಂದಕ್ಕಿಂತ ಹೆಚ್ಚು ಮೂಗುಗಳಿವೆ. ಷಣ್ಮುಖ, ಬ್ರಹ್ಮ, ದತ್ತಾತ್ರೇಯ... ಹೀಗೆ, ದೇವರುಗಳಿಗೆ ನೆಗಡಿ, ಕೆಮ್ಮು ಅಲರ್ಜಿ ಇತ್ಯಾದಿಗಳು ತಗಲುವುದಿಲ್ಲ. ಅದಕ್ಕೆ ಅವರಿಗೆ ಯಾವ ಚಿಂತೆಯೂ ಇಲ್ಲ ಎಂದು ವಾದಿಸಬಹುದು. ಆದರೆ ಕೃಷ್ಣದೇವರಾಯನ ಆಸ್ಥಾನದಲ್ಲಿ ಹಾಸ್ಯಕವಿಯಾಗಿದ್ದ ತೆನಾಲಿ ರಾಮಕೃಷ್ಣನ ಕಥೆಯನ್ನು ಕೇಳಿದ್ದೀರಲ್ಲವೆ? ಕಡುಬಡವನಾಗಿ ವಿದ್ಯಾಭ್ಯಾಸ ಮಾಡಲು ಸಾಕಷ್ಟು ಹಣವಿಲ್ಲದೆ ಬೇಕಾಬಿಟ್ಟಿ ಅಲೆಯುತ್ತಿದ್ದ ರಾಮಕೃಷ್ಣ ಕಾಳಿಯನ್ನು ಕುರಿತು ಜಪ ಮಾಡಿದ. ಅವನ ಮುಗ್ಧ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷಳಾದ ಕಾಳಿ ಮಾತೆಯ ಹಲವು ತಲೆಗಳು, ಬಾಯಿಗಳು, ಅವುಗಳ ಒಳಗಿಂದ ಹೊರಚಾಚಿದ್ದ ನಾಲಗೆಗಳನ್ನು ನೋಡಿ ರಾಮಕೃಷ್ಣ ಸ್ವಲ್ಪವೂ ಭಯಗೊಳ್ಳಲಿಲ್ಲ. ಬದಲಾಗಿ ನಗಲು ಪ್ರಾರಂಭಿಸಿದ. ಅವನ ನಗುವಿಗೆ ಕಾರಣವೇನೆಂದು ಕಾಳಿಕಾಂಬೆಯು ಕೇಳಿದಾಗ "ಅಮ್ಮಾ, ನನಗೆ ಒಂದು ಮೂಗಿದ್ದೇ ನೆಗಡಿ ಬಂದು ಸೀನಿದಾಗ ಮುಜುಗರವಾಗುತ್ತದೆ. ನಿನಗೆ ನೆಗಡಿ ಬಂದರೆ ನಿನ್ನ ಪಾಡು ಹೇಗಾಗಬಹುದೆಂದು ನೆನೆದು ನಗು ಬಂತು' ಎಂದು ಉತ್ತರಿಸುತ್ತಾನೆ. ರಾಮಕೃಷ್ಣನ ಮಾತಿನಿಂದ ಪ್ರಸನ್ನಳಾದ ಕಾಳಿಕಾಂಬೆ ತಾನೂ ಕೂಡ ಮನಸಾರೆ ನಕ್ಕು ಅವನಿಗೆ ಹಾಸ್ಯಕವಿಯಾಗುವಂತೆ ಆಶೀರ್ವದಿಸುತ್ತಾಳೆ. ಒಂದಕ್ಕಿಂತ ಹೆಚ್ಚು ಮೂಗಿರುವ ದೇವರುಗಳು ಸೀನುವುದು

ಹೇಗೆ ಎಂದು ರಾಮಕೃಷ್ಣನಂತೆ ನಾವೂ ಯೋಚಿಸೋಣ. ಒಟ್ಟಿಗೆ ಸೀನಿದರೆ ಬಹಳ ಶಬ್ದ ಹಾಗೂ ಒಂದೇ ಶರೀರದಿಂದ ಅಷ್ಟೊಂದು ಗಾಳಿಯನ್ನು ಹೊರದೂಡುವುದು ಬಹಳ ಕಷ್ಟ. ಶರೀರಕ್ಕೆ ಆಯಾಸ. ಒಂದು ಮೂಗಿನ ನಂತರ ಮತ್ತೊಂದರಂತೆ ಸರಣಿಯೋಪಾದಿಯಲ್ಲಿ ಸೀನಲು ಪ್ರಾರಂಭಿಸಿದರೆ ಆನೆ ಪಟಾಕಿ ಸರ ಸಿಡಿದಂತೆ ಆಗಬಹುದು ಅಥವಾ ಮೂಗುಗಳ ಮಧ್ಯೆ ನಾ ಮುಂದು ತಾ ಮುಂದು ಎಂದು ಸ್ಪರ್ಧೆ ಏರ್ಪಟ್ಟರೆ ಮತ್ತೊಂದು ಬಗೆಯ ಕಷ್ಟ; ಗೊಂದಲ, ಅಬ್ಬಾ ಮನುಷ್ಯರಿಗಂತೂ ಈ ಪಾಡಿಲ್ಲವಲ್ಲ! ರಾವಣನಿಗೆ ಹತ್ತು ತಲೆಗಳಿದ್ದವಲ್ಲಾ. ಅವನಿಗೆ ಸೀನಿದಾಗ ಯಾವ ಅನುಭವವಾಗುತ್ತಿತ್ತು? ಬಹು ಮುಖ್ಯವಾಗಿ ಯಾವ ಮೂಗು ಯಾವಾಗ ಸೀನುತ್ತದೆ. ಅಥವಾ ಆ ಕ್ಷಣದಲ್ಲಿ ಯಾವ ಮೂಗು ಸೀನನ್ನು ಸೀತಿತು ಎಂದು ಹೇಗೆ ತಿಳಿಯುತ್ತಿದ್ದ ಇತ್ಯಾದಿ ಸಂದೇಹಗಳು ಮೂಡಬಹುದು.

ಇಲ್ಲಿ ರಾವಣ ಮತ್ತು ಸೀತೆಯ ಬಗ್ಗೆ ಉತ್ತರ ಭಾರತದ ಕೆಲವು ರಾಮಾಯಣಗಳಲ್ಲಿ



ಪ್ರಚಲಿತವಾಗಿರುವ ಒಂದು ಕಥೆಯನ್ನು ಹೇಳ ಬಯಸುತ್ತೇನೆ. ಸೀತೆಗೆ 'ಸೀತ' ಎಂದು ಹೆಸರು ಬರಲು ಕಾರಣ ಗೊತ್ತೆ? ಅವಳು ಸೀನಿನಿಂದ ಹುಟ್ಟಿದವಳು ಎಂಬ ಕಾರಣಕ್ಕಾಗಿ. ಅದು ಯಾರು ಸೀನಿದಾಗ? ಸಾಕ್ಷಾತ್ ರಾವಣ ಸೀತಾಗ, ರಾವಣ ಮತ್ತು ಮಂಡೋದರಿಯರು ತಮಗೆ ಹೆಣ್ಣು ಮಕ್ಕಳಿರಲಿಲ್ಲವೆಂದು ದೇವರಿಗೆ ಪೂಜೆ ಮಾಡಿ ಪ್ರಸಾದ ರೂಪದಲ್ಲಿ ಒಂದು ಕಲಶದಲ್ಲಿ ನೀರು ಪಡೆದುಕೊಂಡು ವಾಪಸ್ಸು ಬರುತ್ತಿದ್ದರಂತೆ. ಮಾರ್ಗ ಮಧ್ಯದಲ್ಲಿ ರಾವಣನಿಗೆ

ಬಹಳ ಬಾಯಾರಿಕೆಯಾಗಿ ತಡೆಯಲಾರದೆ ಕಲಶದ ನೀರನ್ನು ಕುಡಿದನಂತೆ. ಅದು ಮಂಡೋದರಿಯ ಗರ್ಭಕ್ಕೆ ಸೇರಬೇಕಿದ್ದ ಮಂತ್ರದ ನೀರು. ಅದನ್ನು ರಾವಣ ಕುಡಿದಿದ್ದರಿಂದ ಮಗುವಿನ ಜನನ ರಾವಣನ ಮೂಲಕವೇ ಆಗಬೇಕಾದ ಪರಿಸ್ಥಿತಿ ಉದ್ಭವವಾಯಿತು. ನಂತರ ರಾವಣನು ಜೋರಾಗಿ ಸೀನಿದನೆಂದೂ, ಆಗ ಜನಿಸಿದ ಮಗು ಅವನ ಮೂಗಿನಿಂದ ಹಾರಿ ಹೋಗಿ ಮಿಥಿಲೆಯ ಭೂಮಿಯೊಳಗೆ ತೂರಿ ನಂತರ ಜನಕನ ಅರಮನೆ ಸೇರಿ ಬೆಳೆಯಿತೆಂದೂ ಹೇಳುತ್ತಾರೆ. ಆದರೆ ಆಗ ರಾವಣನ ಸೀನಿನ ವೇಗ ಮತ್ತು ಬಲಗಳನ್ನು ಅಳೆಯುವ ಪ್ರಯತ್ನವನ್ನು ಯಾರೂ ಮಾಡಲಿಲ್ಲ! ಅದು ಖಂಡಿತ ಈಗಿನ ಲೆಕ್ಕಾಚಾರವಾದ ನೂರು ಮೈಲಿ ವೇಗಕ್ಕಿಂತ ಹೆಚ್ಚಿನದ್ದಾಗಿರಬೇಕು.

ಆದರೆ ಈಗ ಎಲ್ಲವೂ ದಾಖಲೆಗಳ ಯುಗ. ೨೦೦೪ರ ಗಿನ್ನೆಸ್ ದಾಖಲೆಯಂತೆ ಅತಿ ದೀರ್ಘ ಕಾಲಾವಧಿ ಸೀನುಗಳನ್ನು ಸೀನಿ ದಾಖಲೆ ಮಾಡಿರುವವರು ಯುನೈಟೆಡ್ ಕಿಂಗ್‌ಡಮ್ ಡೋನಾ ಗ್ರಿಫೆನ್ಸ್ ಎಂಬ ಹೆಂಗಸು. ಆಕೆ ಜನವರಿ ೧೩, ೧೯೮೧ ರಂದು ಸೀನುವುದಕ್ಕೆ ಪ್ರಾರಂಭಿಸಿ ಸತತವಾಗಿ ೩೯೫ ದಿನಗಳಲ್ಲಿ ಒಂದು ಮಿಲಿಯನ್ ಸೀನುಗಳನ್ನು ಸೀನಿದಳಂತೆ. ಆದರೆ ಇಲ್ಲಿ ನನಗೂ ತೆನಾಲಿ ರಾಮನಂತೆ ಅನೇಕ ಪ್ರಶ್ನೆಗಳು ಏಳುತ್ತವೆ. ಮೊದಲಿಗೆ ೩೯೫ ದಿನಗಳು ಸತತವಾಗಿ ಎಣಿಕೆ ಮಾಡುವುದು ಸಾಧ್ಯವೆ? ಅವಳು ಅಷ್ಟು ಬಾರಿ ಸೀನುತ್ತಾಳೆಂದು ಮೊದಲೇ ಗೊತ್ತಿದ್ದು ಎಣಿಕೆ ಮಾಡಲು ಪ್ರಾರಂಭಿಸಿದರೇ? ದಾಖಲೆಗಾಗಿ ಸೀನಲು ಪ್ರಾರಂಭಿಸಿದಳೇ? ಒಂದು ವೇಳೆ ಮುಂಚೆಯೇ ಗೊತ್ತಿದ್ದರೆ ಅದು ಕೃತಕವಾಗಿ ಸೀನುಗಳನ್ನು ಉತ್ಪತ್ತಿ ಮಾಡಿದ ಹಾಗಾಗಿ ಅದು ಲೆಕ್ಕಕ್ಕೆ ಬರುವುದಿಲ್ಲ ಅಲ್ಲವೇ? ಅಂತೂ ದಾಖಲೆಯ ಬಗ್ಗೆ ಹೆಚ್ಚಿನ ತನಿಖೆ ಅಗತ್ಯವಿದೆ.

ಸೀನಿನ ಬಗ್ಗೆ ಇಷ್ಟೆಲ್ಲಾ ಹೇಳಿದ ನಂತರ ಮತ್ತೊಂದು ವಿಷಯ ಹೇಳಲೇ ಬೇಕು. ಈ ಸೀನು ಒಮ್ಮೊಮ್ಮೆ ಅರ್ಧಾಂತಕವಾಗಿ ಬರಲೋ ಬೇಡವೋ ಎಂಬ ದ್ವಂದ್ವಕ್ಕೆ ಸಿಲುಕುತ್ತದೆ. ಸೀನಿಗರು ಬಾಯಿ ತೆಗೆದು, ಕಣ್ಣು ಮುಚ್ಚಿ, ತಲೆ ಹಿಂದೆ ಸೆಳೆದಿರುತ್ತಾರೆ... ಅಷ್ಟರಲ್ಲಿ ಅದು ಮುಂದೆ ಹಾರದೆ ಮುಷ್ಕರ ಹೂಡುತ್ತದೆ. ಆಗ ಅ.. ಹ ..ಹ' ಎಂದು ವಿವಿಧ ಶಬ್ದಗಳನ್ನು ಹೊರಹೊಮ್ಮಿಸಿ ಕಕ್ಕಾಬಿಕ್ಕಿಯಾಗುತ್ತಾರೆ. ಪಕ್ಕದಲ್ಲಿ ಯಾರಾದರೂ ಇದ್ದರೆ “ಏನಾಯಿತು ಇವರಿಗೆ' ಎಂದು ಗಾಬರಿಯಾಗುತ್ತಾರೆ. ಬಹಳ ಎತ್ತರದ ಜಾರುಬಂಡೆಯ ಮೇಲೆ ಹತ್ತಿ ನಿಂತು, ಕೆಳಗೆ ಜಾರುವುದಕ್ಕೆ ಕೆಲವರು



ಹೆದರುತ್ತಾರೆ. ಹಾಗೆ ಈ ಸೀನು ಮೂಗು, ಬಾಯಿಗಳಿಂದ ಈಚೆ ಬರಲು ಹಿಂದೆ ಮುಂದೆ ನೋಡುತ್ತದೆ. ಆಗ ಸೀನಿಗರು ಮೂಗಿನ ಹೊರಗೋಡೆಯನ್ನು ವೀಣೆಯ ತಂತಿಯನ್ನು ಮೀಟಿದ ಹಾಗೆ ಮೀಟಿಯೋ, ಮೂಗಿನ ಮೇಲೆ ಬೆರಳ ತುದಿಯಿಂದ ಹೊಡೆದೋ ಈಚೆ ಬರುವಂತೆ 'ಕಮಾನ್, ಕಮಾನ್' ಎಂದು ಹುರಿದುಂಬಿಸುತ್ತಾರೆ. ಒಮ್ಮೊಮ್ಮೆ ಈ

ಕಸರತ್ತಿಗೆ ಜಯ ದೊರಕುತ್ತದೆ. ಸಿಕ್ಕಿಹಾಕಿಕೊಂಡ ಸೀನು ಹೊರಬಂದಾಗ ಸೀನಿಗೆ ವಿಜಯಿಯಾಗುತ್ತಾನೆ/ಳೆ. ಇಷ್ಟಾದರೂ ಒಮ್ಮೊಮ್ಮೆ ಸಿಕ್ಕಿ ಹಾಕಿಕೊಂಡ ಸೀನು ಹಿಂದೆ ಹೋಗಿ ಬಿಡುತ್ತದೆ. ಆಗ ಆ ವ್ಯಕ್ತಿಗೆ ನಿರಾಶೆ. ಬೇಸರ. ಒಂದು ರೀತಿಯ ವಿಚಿತ್ರ ಶಬ್ದ ಮಾತ್ರ ಹೊರಕ್ಕೆ ಬಂದು ಪಟಾಕಿ 'ಟುಸ್' ಎನ್ನುವಂತೆ ಸೀನು ಭೂಗತ ಅಲ್ಲ, ಅಲ್ಲ ದೇಹಗತವಾಗಿ ಬಿಡುತ್ತದೆ. ಇಂತಹ ಅನುಭವ ನಿಮಗೂ ಆಗಿದೆಯಲ್ಲವೆ?

ಕೆಲವರು 'ಆಕ್ಸಿ, ಆಕ್ಸಿ' ಎಂದು ಚುಟುಕಾಗಿ ಸೀನಿ ಅದು ಸೀನೋ, ಕೆಮ್ಮೋ ಎಂದು ಅರ್ಥವಾಗದಂತೆ ಗೊಂದಲಪಡಿಸುತ್ತಾರೆ. ಇದು ಅವರ ಅಭ್ಯಾಸವೋ ಅಥವಾ ಮುಕ್ತವಾಗಿ ಸೀನುವುದಕ್ಕೂ ಹೆದರುವ ಜಿಪುಣಾಗ್ರೇಸರರೋ ಕಾಣೆ. ಇನ್ನು ಮುಂದೆ ಸೀನು ಬಂದಾಗಲೆಲ್ಲಾ ಸೀನುವುದು ನಮ್ಮ ಜನ್ಮ ಸಿದ್ಧ ಹಕ್ಕು ಎನ್ನುವ ಹಾಗೆ ಬಿಡಿಬೀಸಾಗಿ ಸೀನಿ ಆನಂದ ಪಡಿ.

ಈ ಸೀನು ಮನುಷ್ಯರಿಗೆ ಮಾತ್ರ ಸೀಮಿತವೇ ಅಥವಾ ಪ್ರಾಣಿಗಳೂ ಸೀನುತ್ತವೆಯೇ? ಈ ಅನುಮಾನ ನಿಮಗಿದ್ದರೆ, ಇದಕ್ಕೆ ಉತ್ತರ ಪ್ರಾಣಿಗಳೂ ಸೀನುತ್ತವೆ. ಎಂದು. ವಾಸ್ತವವಾಗಿ ಪ್ರಾಣಿಗಳು ಸೀನುವಾಗ ಮೂಗಿನಿಂದಲೇ ಹೆಚ್ಚು ಗಾಳಿಯನ್ನು ಹೊರದೂಡಿ ಮೂಗನ್ನು ಶುದ್ಧೀಕರಿಸಿಕೊಳ್ಳುತ್ತವಂತೆ. ಅವು ಬಾಯಿ ಹೆಚ್ಚಾಗಿ ತೆರೆಯುವುದಿಲ್ಲ. ಒಂದು ಮಾತ್ರ ನಿಜ, ಮನುಷ್ಯರಂತೆ ಅವು ಯಾವ ಸಂಕೋಚವೂ ಇಲ್ಲದೆ ಆರಾಮವಾಗಿ ಸೀನುತ್ತವೆ. ಅವಕ್ಕೆ ಯಾವ ಮೂಢ ನಂಬಿಕೆಯ ಕಟ್ಟುಪಾಡುಗಳೂ ಇಲ್ಲ.

ಮತ್ತೊಂದು ಪ್ರಶ್ನೆ ನಿಮಗೆ, 'ನೀವು ನಿದ್ರೆಯಲ್ಲಿ ಯಾವಾಗಲಾದರೂ ಸೀನಿದ್ದಿದೆಯೆ?' 'ಇದು ಎಂತಹ ಪ್ರಶ್ನೆ. ನಿದ್ದೆಯಲ್ಲಿ ಸೀನಿದ್ದು ನಿದ್ರಿಸಿದವರಿಗೆ ಹೇಗೆ ಗೊತ್ತಾಗುತ್ತದೆ' ಎನ್ನುವಿರಾ? ನಿಮ್ಮ ಉತ್ತರದಲ್ಲಿಯೇ ನನ್ನ ಪ್ರಶ್ನೆಗೆ ಉತ್ತರವಿದೆ. ನಿದ್ರಿಸುತ್ತಿರುವಾಗ ನಮ್ಮ ಮೆದುಳೂ ನಿದ್ರಿಸುತ್ತಿರುತ್ತದೆ. ಅದಕ್ಕೆ ಸೀನುವಂತೆ ಆದೇಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೇನಾದರೂ ಒಂದು ವೇಳೆ ಮೂಗಿನಲ್ಲಿ ಕಿರಿಕಿರಿ ಆದರೆ ಮೊದಲು ನೀವು ನಿದ್ರೆಯಿಂದ ಎಚ್ಚರಗೊಳ್ಳುತ್ತೀರಿ. ನಂತರ ಮೆದುಳು ತನ್ನ ಕಾರ್ಯವನ್ನು ಪ್ರಾರಂಭಿಸುತ್ತದೆ. ಸೀನು ನಿಮ್ಮ ಹಿಡಿತದಲ್ಲಿಲ್ಲದಿದ್ದರೂ ನಿಮ್ಮ ಮೆದುಳಿನ ಹಿಡಿತದಲ್ಲಿರುತ್ತದೆ. ಆದ್ದರಿಂದ ಯಾರೂ ನಿದ್ರೆಯಲ್ಲಿ ಸೀನುವುದಿಲ್ಲ.

ಆದರೆ ಎಚ್ಚರವಾಗಿದ್ದಾಗ ಸೀನನ್ನು ತಡೆಯುವ ಕೆಲವು ಉಪಾಯಗಳಿವೆ. ಈಗಾಗಲೇ ಹೇಳಿರುವಂತೆ ಸೀನು ತಡೆಯುವುದು ಅಪಾಯ. ಆದರೂ ಒಮ್ಮೊಮ್ಮೆ

ಇದರ ಅವಶ್ಯಕತೆ ಇರುತ್ತದೆ. ಪ್ರೇಮಿಯೊಬ್ಬ ತನ್ನ ಪ್ರೇಯಸಿಯ ಜೊತೆ ಸರಸವಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಅವಳ ಪೈಲ್ವಾನ್ ಅಪ್ಪ ಬಂದನೆಂದು ಮಂಚದ ಕೆಳಗೆ ಅಡಗಿ ಕುಳಿತ ಎಂದಿಟ್ಟುಕೊಳ್ಳಿ. ಆಗ ಅಲ್ಲಿದ್ದ ಧೂಳು ಆತನ ಮೂಗನ್ನು ಹೊಕ್ಕು ಅವನನ್ನು ಗೋಳು ಹೊಯ್ದುಕೊಳ್ಳುತ್ತದೆ. ಆಗ ಸೀನುವುದಕ್ಕಾಗುತ್ತದೆಯೇ? ಕಳ್ಳನಂತೆ ಅಡುಗೆ ಮನೆ ಹೊಕ್ಕು ಏನಾದರೂ ತಿನ್ನುತ್ತಿರುವಾಗ, ಕಳ್ಳತನದಲ್ಲಿ ಅಟ್ಟ ಹತ್ತಿ ಬಚ್ಚಿಟ್ಟುಕೊಂಡಿರುವಾಗ, ನಿಮಗೆ ಬೋರ್ ಹೊಡೆಸುವ ಸ್ನೇಹಿತನನ್ನು ನಿಮ್ಮ ಮನೆಯವರು ನೀವು ಮನೆಯಲ್ಲಿ ಇಲ್ಲವೆಂದು ಹೇಳಿ ಬಾಗಿಲಾಚೆ ಕಳುಹಿಸುತ್ತಿರುವಾಗ ಕೆಳಕಂಡ ಉಪಾಯಗಳನ್ನು ಬಳಸಬಹುದು.

ಮೂಗು ಹಿಡಿದು ಉಸಿರು ಹೊರಬರದಂತೆ ತಡೆಯುವುದು, ನಾಲಗೆಯ ತುದಿಯನ್ನು ಬಾಯಿ ಒಳಗೆ ಮೇಲ್ಭಾಗಕ್ಕೆ ೫ ರಿಂದ ೧೦ ಸೆಕೆಂಡುಗಳು ಉಜ್ಜುವುದು. ಗಮನವನ್ನು ಸೀನುವುದರಿಂದ ಬೇರೆ ಕಡೆಗೆ ಹರಿಸುವುದು, ಮನಸ್ಸನ್ನು ಯಾವುದಾದರೂ ವಸ್ತುವಿನ ಅಥವಾ ಘಟನೆಯ ಬಗ್ಗೆ ತಿರುಗಿಸುವುದು. ಹೀಗೆ ಹಲವಾರು ವಿಧಗಳಿವೆ. ಆದರೆ ನಿಮಗೆ ಯಾವುದು ಸರಿ ಹೊಂದುತ್ತದೆಂದು ಮುಂಚಿತವಾಗಿ ನೀವೇ ಪ್ರಯೋಗ ಮಾಡಿ ತಿಳಿದುಕೊಳ್ಳಿ. ಸಮಯಕ್ಕೆ ಉಪಯೋಗಕ್ಕೆ ಬರುತ್ತದೆ.

ಕೊನೆಯದಾಗಿ ಸೀನಿನ ಬಗ್ಗೆ ಒಂದು ಮಾತು ಹೇಳಲೇ ಬೇಕು. ಎಲ್ಲರೂ 'ಆ....ಕ್ಷಿ' ಎಂದೇ ಸೀನಿದರೂ ಒಂದೇ ತರಹವಿರುವುದಿಲ್ಲ. ಹಾಗಾಗಿ ಸೀನುವ ಪರಿಯಿಂದ ವ್ಯಕ್ತಿಯನ್ನು ಸ್ವಲ್ಪಮಟ್ಟಿಗೆ ಗುರುತಿಸಬಹುದು, ಧ್ವನಿಯಿಂದ ವ್ಯಕ್ತಿಯನ್ನು ಗುರುತಿಸುವಂತೆ. ಆದರೆ ಸೀನಿಗೆ ಭಾಷೆ ಇಲ್ಲ. ಎಲ್ಲಾ ಭಾಷೆಯ ಜನರೂ 'ಆ .................ಕ್ಷೀ' ಎಂದೇ ಸೀನುವುದು. ವಿಶ್ವಮಾನವರೆಲ್ಲಾ ಒಂದೇ ಎನ್ನುವ ಹಾಗೆ. ಅಂದ ಮೇಲೆ ಈ ಸೀನು ವಿಶ್ವದ ಒಗ್ಗಟ್ಟಿನ ಸಂಕೇತ ಏಕಾಗಬಾರದು? 'ಆ.......................' ಅಯ್ಯೋ ಯಾರೋ ಒಂಟಿ ಸೀನು ಸೀನಿದರಲ್ಲಾ?!

**(ಸಂಕ್ರಮಣ, ಜೂನ್ ೨೦೧೦, ಬಹುಮಾನಿತ ಲಲಿತ ಪ್ರಬಂಧ)**

# ೧೬. ನಿದ್ರೆ

**ಭಾರತಿ ಬಿ.ಎಸ್**

ನಿದ್ರೆ! ನಿದ್ರೆ ಎಂದರೆ ಎಚ್ಚರವಿಡುವ ನಾಡಿಗಳ ಕಾರ್ಯವು ಚಾಲನೆಯಲ್ಲಿಲ್ಲದೇ ಕಣ್ಣುಗಳನ್ನು ಮುಚ್ಚುವ ಸ್ಥಿತಿ ಅಥವಾ ಚಟುವಟಿಕೆಯಿಲ್ಲದ ಸ್ಥಿತಿ ಎಂದರ್ಥ. ನಿದ್ರೆ ಬರುವವರಿಗಾದರೋ ಯೋಚನೆಯೇ ಇಲ್ಲ ಬಿಡಿ! ನಿದ್ರೆ ಬರದವರಿಗೆ ಇಲ್ಲಸಲ್ಲದ ಯೋಚನೆಯೆಲ್ಲಾ ತಲೆಯ ಸುತ್ತ ಜೇಡರ ಬಲೆಯಂತೆ ಸುತ್ತುತ್ತಿರುತ್ತದೆ. ಅನುಭವಿಸಿದವರಿಗೆ ಗೊತ್ತು ಅದರ ತಾಕಲಾಟ.

ವಿದ್ಯೆಯುಳ್ಳವನ ಮುಖವು ಮುದ್ದು ಬರುವಂತಿಕ್ಕು

ವಿದ್ಯೆಯಿಲ್ಲದವನ ಬರಿ ಮುಖವು

ಹಾಳೂರ ಹದ್ದಿನಂತಕ್ಕು ಸರ್ವಜ್ಞ – ಎಂಬ ಸರ್ವಜ್ಞನ ವಚನದಂತೆ,

ನಿದ್ರೆಯುಳ್ಳವನ ಮುಖವು ಹೂವು ಅರಳಿದಂತೆ

ನಿದ್ರೆಯಿಲ್ಲದನ ಬಾಡಿದ ಮುಖವು

ಸೊರಗಿ ಒಣಗಿ ಹೋದ ಹೂವಿನಂತಿರುತ್ತದೆ ಎಂದು ಹೇಳಬಹುದು.

ಇನ್ನು ನಿದ್ರೆ ಹೆಚ್ಚಾಗಿರುವವರಿಗೆ ಒಂದು ರೀತಿಯ ಪೀಕಲಾಟ. ಅವರಿಗೆ ಕುಳಿತರೆ, ನಿಂತರೆ, ಬಸ್ಸು-ರೈಲಿನಲ್ಲಿ ಪ್ರಯಾಣಿಸುವಾಗ, ಕಛೇರಿಯಲ್ಲಿ ಕೆಲಸ ಮಾಡುವಾಗ ಎಲ್ಲೆಲ್ಲೂ ನಿದ್ರೆ ಎಂಬುದು ಶತ್ರುವಾಗಿ ಕಾಡುತ್ತಿರುತ್ತದೆ. ನನಗೆ ಏಕೋ ಇಷ್ಟೊಂದು ನಿದ್ರೆ ಬರುತ್ತಿದೆ ಎಂದು ಚಡಪಡಿಸುತ್ತಾ ಇದರಿಂದಲೇ ನಾನು ಸೋಮಾರಿಯಾಗಿದ್ದೇನೆ ಎಂದು ಸದಾ ಗೊಣಗಾಡುತ್ತಿರುತ್ತಾರೆ. ಇನ್ನು ವಿದ್ಯಾರ್ಥಿಗಳಲ್ಲೇನಾದರೂ ನಿದ್ರಾದೇವಿ ಆವರಿಸಿದರೆ, ಬಿಡಿ ಅವರ ಗೋಳಾಟ ಹೇಳತೀರದು! ಪರೀಕ್ಷೆ ಹತ್ತಿರ ಬಂದಾಗ ನಿದ್ರೆ ಎಂಬುದು ಅವರಿಗೆ ನಕ್ಷತ್ರಿಕನಂತೆ ಕಾಡುತ್ತಿರುತ್ತದೆ. ಓದೋಣವೆಂದು ಪುಸ್ತಕ ತೆರೆದಾಗ ಓದು, ಓದುತ್ತಲೇ ಪುಸ್ತಕ ತನಗರಿವಿಲ್ಲದಂತೆಯೇ ಕೆಳಗೆ ಧೂಪ್ ಎಂದು ಬಿದ್ದು, ನಿದ್ರೆ ಮಾಡುತ್ತಿರುತ್ತಾರೆ. ಅದೇ ಪರೀಕ್ಷೆಯೆಲ್ಲಾ ಮುಗಿದು ನಿದ್ರೆ ಮಾಡೋಣ ಎಂದು ಹಾಸಿಗೆಯ ಮೇಲೆ ಪವಡಿಸಿದರೆ ನಿದ್ರೆಯ ಸುಳಿವೇ ಇರುವುದಿಲ್ಲ. ಇದೊಂದು ಮಾಯಾಜಾಲವಿದ್ದಂತೆ. ಕೆಲವರಂತೂ ಪರೀಕ್ಷೆಯಲ್ಲೂ ಸಹ ಸ್ವಲ್ಪ ಜೊಂಪು ಹೊಡೆದು ನಿದ್ರೆ ಮಾಡಿ ಬರುವ ಪ್ರಸಂಗವೂ ಉಂಟು, ನಿದ್ರೆ ಹೋಗಲಾಡಿಸಲು ಮಾಡಿದ ಸರ್ಕಸ್ಸು ಹಲವಾರು. ರಾತ್ರಿ ಓದಬೇಕೆಂದು ಕಾಫಿ, ಟೀ ಕುಡಿಯುವುದೇನು? ಮುಖಕ್ಕೆ ತಣ್ಣೀರನ್ನು ಎರಚಿಕೊಳ್ಳುವುದೇನು?

ಏನೇನೋ ತಿಪ್ಪರಲಾಗ ಹಾಕುತ್ತಾರೆ ಈ ವಿದ್ಯಾರ್ಥಿಗಳು. ಆದರೂ ಕೂಡ ನಿದ್ರೆ ಕಣ್ಣಿನ ಸುತ್ತ ಆವರಿಸಿ ಕನಸಿನ ಲೋಕಕ್ಕೆ ಹೋದವರು ಬಹಳಷ್ಟು ಜನ ಇದ್ದಾರೆ.



ಇನ್ನು ನಿದ್ರೆಯೇ ಬರದವರ ಪಾಡು ನಾಯಿಯ ಪಾಡಾಗಿರುತ್ತದೆ. ನಾಯಿಯಾದರೂ ಪುಣ್ಯ ಮಾಡಿರುತ್ತದೆ. ಏಕೆಂದರೆ ಅದು ಯಾವ ಪರಿವೆಯೂ ಇಲ್ಲದೇ ಎಲ್ಲೆಂದರಲ್ಲಿ ಮಲಗಿರುತ್ತದೆ. ನಿದ್ರೆ ಇಲ್ಲದವರಿಗೆ ಒಂದೇ ಎರಡೇ ಸಾವಿರಾರು ಯೋಚನೆಗಳು ಸುತ್ತುತ್ತಿರುತ್ತವೆ. ಅವರ ಮನಸ್ಥಿತಿ ಹೇಗಿರುತ್ತದೆ ಎಂದರೆ ಆ ಸಮಯದಲ್ಲಿ ಚೆನ್ನಾಗಿ ನಿದ್ರೆ ಮಾಡಿ ಗೊರಕೆ ಹೊಡೆಯುವವರನ್ನು ಹೇಗಾದರೂ ಮಾಡಿ ಎಬ್ಬಿಸಿ ಬಿಡಬೇಕೆಂಬ ಕೋಪವು ಉಕ್ಕಿ ಉಕ್ಕಿ ಬರುತ್ತಿರುತ್ತದೆ. ಆದರೆ ನಿದ್ರೆ ಮಾಡುವವರನ್ನು ಎಬ್ಬಿಸಿದರೆ ಮುಂದಿನ ಜನ್ಮದಲ್ಲಿ ತಿಗಣೆಯಾಗಿ ಹುಟ್ಟುತ್ತಾರೆ ಎಂದು ಹೇಳುವುದರಿಂದ ಹೆದರಿ ಸುಮ್ಮನಾಗುತ್ತಾರೆ. ನಿದ್ರೆ ಬರದಿದ್ದಾಗ ಅವರಿಗೆ ಗೊರಕೆಯ ಶಬ್ದ, ಗಡಿಯಾರದ ಮುಳ್ಳುಗಳ ಶಬ್ದ ಕೇಳಿಸುತ್ತಾ ಯಾವಾಗ ಸೂರ್ಯ ಉದಯಿಸಿ ಬೆಳಗಾಗುತ್ತದೋ ಎಂಬ ಎಣಿಕೆ ಶುರುವಾಗಿ ಒಂದೊಂದು ಗಂಟೆಯೂ ಒಂದೊಂದು ದಿನದಂತೆ ಭಾಸವಾಗುತ್ತದೆ. ನಿದ್ರೆಯಿಲ್ಲದೆ ಕಳೆಯುವ ಒಂದೊಂದು ಗಂಟೆಯೂ ಹೇಗಿರುತ್ತದೆ ಎಂದರೆ ಇಲ್ಲಸಲ್ಲದ ಶಬ್ದಗಳು ಕಿವಿಗೆ ರಾಚುತ್ತಿರುತ್ತವೆ. ಸೊಳ್ಳೆಯ ಹಾಡುಗಳು ಗುಂಯ್‌ಗುಡುತ್ತಿರುತ್ತವೆ. ಗಡಿಯಾರದ ಮುಳ್ಳಿನ ಟಿಕ್ ಟಿಕ್ ಶಬ್ದ, ಯಾವುದೋ ಪಕ್ಷಿಯ, ಕೀಟದ ಕಿಚಿಕಿಚಿ ಶಬ್ದ, ನಾಯಿ ಊಳಿಡುವ ಶಬ್ದ, ಕೊನೆಗೆ ಗಾಳಿಯ ಸದ್ದು ಕೂಡ ರೊಯ್ ಎಂದು ಕಿವಿಗೆ ರಾಚುತ್ತಿರುತ್ತದೆ. ಇವೆಲ್ಲಾ ಜಂಜಾಟದ ಮಧ್ಯೆ ನಿದ್ರೆ ಬರಿಸಿಕೊಳ್ಳುವ ಪ್ರಯತ್ನ ಮಾಡುತ್ತಾ ಯಾವಾಗ ನಿದ್ರೆ ಬರುತ್ತದೋ ಎಂಬ ಯೋಚನೆಯಲ್ಲಿಯೇ ಬೆಳಗಾಗಿರುವ ಸಂಭವವೂ ಉಂಟು.

ಬೇರೆ ಎಲ್ಲಾ ತೊಂದರೆಗಳಿಗೂ ದೇವರ ಮೊರೆ ಹೋಗುವ ಮಾನವ ನಿದ್ರಾದೇವಿ ಎಂಬ ಯಾವುದಾದರೂ ದೇವರು ಪ್ರಪಂಚದಲ್ಲಿ ಇದ್ದಾಳೆಯೋ ಎಂದು ಹುಡುಕುವ ಮಾರ್ಗ ನೋಡಬೇಕಾಗಿದೆ. ನಿಮಗ್ಯಾರಿಗಾದರೂ ನಿದ್ರೆ ಬರಿಸಿಕೊಳ್ಳಲು ಯಾವುದಾದರೂ ದೇವರಿಗೆ ಹರಕೆ-ಗಿರಕೆ, ಪೂಜೆ-ಗೀಜೆ ಮಾಡುವ ವಿಧಾನವಿದ್ದರೆ ನಿದ್ರೆ ಬರದ ಪಾಪಾತ್ಮರಿಗೆ ತಿಳಿಸಿದರೆ ಪುಣ್ಯ ಬರುತ್ತದೆ. ಆಗಲಾದರೂ ಅವರು ಆ ನಿದ್ರಾದೇವಿಯನ್ನು ಅರಸುತ್ತಾ, ಹುಡುಕುತ್ತಾ, ಆರಾಧಿಸಿ ನಿದ್ರೆ ಬರಿಸಿಕೊಳ್ಳುತ್ತಾರೆ. ಇಡೀ ದಿನ ನಿದ್ರೆ ಇಲ್ಲದೇ ಬೆಳಿಗ್ಗೆ ಎದ್ದಾಗ ಹೇಗೆ ದಿನನಿತ್ಯದ ಕಾರ್ಯ ನಡೆಸಬೇಕೋ ತಿಳಿಯದಾಗಿರುತ್ತದೆ. ಆದರೂ ಕೂಡ ನಿದ್ರೆ ಎಂಬುದೇನೂ ಅವರ ಹತ್ತಿರ ಸುಳಿಯುವುದಿಲ್ಲ. ಕೆಲಸದ ಮಧ್ಯೆ ನಿದ್ರೆಯೇ ಮರೆತು ಹೋಗುತ್ತದೆ. ಒಂದು ವೇಳೆ ಸಮಯ ಸಿಕ್ಕಿ ರಾತ್ರಿಯೆಲ್ಲ ನಿದ್ರೆ ಮಾಡಿಲ್ಲವಲ್ಲ ಮಧ್ಯಾಹ್ನವಾದರೂ ಸ್ವಲ್ಪ ನಿದ್ರೆ ಮಾಡೋಣ ಎಂದು ಮಲಗಿದರೆ ನಿದ್ರೆಯ ಮಾತೇ ಸುಳಿಯುವುದಿಲ್ಲ. ಇನ್ನು ಹೆಚ್ಚಿಗೆ ಆಯಾಸವಾದಾಗ ಅಂದರೆ ಪ್ರಯಾಣ ಮಾಡಿದಾಗಲೋ ಅಥವಾ ಹೆಚ್ಚು ಒತ್ತಡದ ಕೆಲಸ ಮಾಡಿದಾಗಲಾದರೂ ನಿದ್ರೆ ಬರುವುದೇನೋ ಎಂದರೆ ಆಗ ಮೈ ಕೈ ಕಾಲುಗಳೆಲ್ಲಾ ನೋವಿನಿಂದ ನಿದ್ರೆ ಎಂಬುದೇ ಹತ್ತಿರ ಸುಳಿದಾಡುವುದಿಲ್ಲ.

ಹೇಗಿದೆ ನಿದ್ರೆ ಬರದವರ ಈ ಹೋರಾಟ! ಅವರಿಗನ್ನಿಸುತ್ತಿರುತ್ತದೆ ನಿದ್ರೆ ಮಾಡುವವರು ಎಂಥ ಪುಣ್ಯ ಮಾಡಿರಬೇಕು. ಅವರು ಸುಖ ಪುರುಷರು ಎಂದೆನ್ನಿಸುತ್ತದೆ.



ನಿದ್ರೆ ಬರದವರ ಸ್ಥಿತಿ ಹೀನಸ್ಥಿತಿಯದಾಗಿರುತ್ತದೆ. ನಿದ್ರೆ ಮಾಡುವವರನ್ನು ಒದ್ದು ಎಬ್ಬಿಸಿ ಬಿಡೋಣ ಅಥವಾ ಅವರಿಗೇನಾದರೂ ತೊಂದರೆ ಕೊಡೋಣ ಎನ್ನಿಸುತ್ತದೆ. ನಿದ್ರೆ ಮಾತ್ರೆಯನ್ನು ನುಂಗಿಯಾದರೂ ನಿದ್ರೆ ಮಾಡೋಣ ಎಂದರೆ ಇನ್ನು ಅದೇ ದುರಭ್ಯಾಸವಾಗಿ ಬಿಡುತ್ತದೆ. ಒಂದೈದು ನಿಮಿಷ ನಿದ್ರೆ ಮಾಡಿದರೆ ಅವರಿಗೆ ಸ್ವರ್ಗವೇ ಕೈಗೆ ಸಿಕ್ಕಿಬಿಟ್ಟಂತಾಗುತ್ತದೆ! ನಿದ್ರೆ ಬಾರದವರಿಗೆ ಎಂದಾದರೊಮ್ಮೆ ಬಂಧು ಬಾಂಧವರೆಲ್ಲ ಸೇರಿಕೊಂಡು ಹರಟೆ ಹೊಡೆಯುವ ದಿನ ಬಂದರೆ ಅವರಿಗೆ ಸ್ವರ್ಗವೇ ಸಿಕ್ಕಂತಾಗಿ ಬಿಡುತ್ತದೆ. ಯಾಕೆಂದರೆ ರಾತ್ರಿಯೆಲ್ಲ ಎಲ್ಲರೂ ನಿದ್ರೆಯಿಲ್ಲದೆ ಇರುತ್ತಾರಲ್ಲ ಎಂದು ಸಂತಸವಾಗುತ್ತದೆ. ಹರಟೆ ಹೊಡೆದು ಹೊಡೆದು ಬೇರೆಯವರಿಗೆ ನಿದ್ರೆ ಬಂದಾಗ ನಿದ್ರೆ ಮಾಡಲು ಹೊರಟಾಗ ನಿದ್ರೆ ಬಾರದವರಿಗೆ ಅವರ ಸ್ಥಿತಿಯನ್ನು ಹೇಳಿಕೊಳ್ಳಲಾಗುವುದೇ ಇಲ್ಲ.

ನಿದ್ರೆ ಇಲ್ಲದವರಿಗೆ ಎಂದಾದರೊಮ್ಮೆ ಅಪ್ಪಿತಪ್ಪಿ ಏನಾದರೂ ಒಂದು ಸ್ವಲ್ಪ ನಿದ್ರೆ ಬಂದು ಬಿಟ್ಟರೆ ಅವರಿಗಾಗುವ ಸಂತಸ ಹೇಳತೀರದು. ಸಣ್ಣ ಮಕ್ಕಳಿಗೆ ಸಿಹಿತಿಂಡಿಯೋ, ಆಟದ ಸಾಮಾನೂ ಸಿಕ್ಕಿದಷ್ಟು ಸಂತಸ ಉಂಟಾಗಿರುತ್ತದೆ. ನಿದ್ರೆ ಮಾಡಿದ ದಿನ ಯಾವುದೋ ಒಂದು ದೊಡ್ಡ ಸಾಹಸವೋ, ಆಟದಲ್ಲಿ ಪ್ರಥಮ ಸ್ಥಾನವೋ, ಸ್ಪರ್ಧೆಯಲ್ಲಿ ಬಹುಮಾನವೋ ಅಥವಾ ಶಾಲೆಗೆ ಮೊದಲ ಸ್ಥಾನವೋ ಬಂದಷ್ಟು ಆನಂದ ಉಂಟಾಗಿ ಲವಲವಿಕೆ ಉಂಟಾಗಿರುತ್ತದೆ. ಮನಸ್ಸಿಗೆ, ಮೈಗೆ ಹಗುರ ಎನ್ನಿಸುತ್ತದೆ. ಗಾಢವಾದ ನಿದ್ರೆ ಏನಾದರೂ ಆವರಿಸಿ ಒಂದೆರಡು ಕನಸೇನಾದರೂ ಬಿದ್ದರಂತೂ ಆಕಾಶವೇ ಕೈಗೆ ಸಿಕ್ಕಿದಷ್ಟು ಆನಂದ ಅವರಿಗಾಗಿರುತ್ತದೆ.

ನಿದ್ರೆ ನಿದ್ರೆ! ನಿದ್ರೆ! ಹಾ! ಎಷ್ಟು ಸುಖಾನುಭವ! ಈ ಸುಖ ನಿದ್ರೆಯಿಂದ ಉಂಟಾಗುತ್ತದೆ. ನಿದ್ರೆ ಎಂಬುದು ಮನುಷ್ಯನಿಗೆ ಇಲ್ಲದಿದ್ದರೆ ಲವಲವಿಕೆಯೇ ಇರುವುದಿಲ್ಲ. ನಿದ್ರೆ ಇಲ್ಲದವರ ಮನದಲ್ಲಿ ಏನೇನೋ ಯೋಚನೆ ಬಂದು ರಾತ್ರಿ ಎಲ್ಲಿಯಾದರೂ ಯಾವುದಾದರೂ ಕೆಲಸಕ್ಕೆ ಸೇರಿಕೊಂಡು ಬಿಡಬೇಕು ಎನಿಸುತ್ತದೆ. ಹಾಸಿಗೆಯಿಂದ ಎದ್ದು ಲೈಟ್ ಹಾಕಿದರೆ, ಶಬ್ದ ಮಾಡಿದರೆ ನಿದ್ದೆಯಲ್ಲಿದ್ದವರಿಗೆ ತೊಂದರೆ, ಬೇಡಪ್ಪಾ ಈ ಜಂಜಾಟ! ಏನಾದರೂ ರೋಗ ಬಂದರೆ ಡಾಕ್ಟರ್ ಹತ್ತಿರ ತೋರಿಸಿ ಯಾವುದಾದರೂ ಮಾತ್ರೆಯೋ, ಟಾನಿಕ್ ತೆಗೆದುಕೊಂಡೋ ಗುಣಪಡಿಸಿಕೊಳ್ಳುತ್ತಾರೆ. ಆದರೆ ಈ ನಿದ್ರೆಯಿಲ್ಲದವರ ಸ್ಥಿತಿ ತ್ರಿಶಂಕುವಿನ ಸ್ಥಿತಿಯಂತಾಗುತ್ತದೆ.

ಸಣ್ಣಮಕ್ಕಳು ಸ್ವಲ್ಪ ಹೊತ್ತು ನಿದ್ರೆ ಮಾಡಿ ಎದ್ದರೆ ಕೋಳಿ ನಿದ್ರೆ ಎನ್ನುತ್ತಾರೆ ಹಾಗೂ ಆ ಮಗು ಹತ್ತು ನಿಮಿಷ ಮಲಗಿ ಚೆನ್ನಾಗಿ ಆಟವಾಡಿ ಮತ್ತೆ ಮಲಗುತ್ತದೆ. ಆದರೆ ದೊಡ್ಡವರು ಹತ್ತು ನಿಮಿಷ ನಿದ್ರೆ ಮಾಡಿದರೆ ಸ್ವರ್ಗ

ಸುಖವೇನೋ ಲಭಿಸುತ್ತದೆ. ಆದರೆ ಅದೊಂದು ರೀತಿಯ ಸಂಕಟ. ಹತ್ತು ನಿಮಿಷ ನಿದ್ರೆ ಬಂದ ನಂತರ ಮತ್ತೆ ನಿದ್ರೆಯೇ ಬರುವುದಿಲ್ಲ. ಯಾಕಾದರೂ ಹತ್ತು ನಿಮಿಷ ನಿದ್ರೆ ಬಂದಿತೋ ಎನ್ನಿಸುತ್ತದೆ. ಎಷ್ಟು ಚಡಪಡಿಸಬೇಕೆಂದರೆ ಅವರ ಚಡಪಡಿಕೆ ಹೇಳಲಸಾಧ್ಯವಾದುದು. ಮತ್ತೆ ನಿದ್ರೆ



ಬರಿಸಿಕೊಳ್ಳಬೇಕಾದರೆ ಶತಪ್ರಯತ್ನ ಮಾಡಬೇಕಾಗುತ್ತದೆ. ಇಲ್ಲಸಲ್ಲದ ದೇವರನ್ನು ನೆನೆಸಿಕೊಂಡು ಎಷ್ಟೇ ಪ್ರಯತ್ನಿಸಿದರೂ ನಿದ್ರೆಯೆಂಬುದು ಬರುವುದೇ ಇಲ್ಲ. ಇದೆಂಥಹ ಶಿಕ್ಷೆ, ಯಾವ ಜನ್ಮದ ಶತ್ರುವಿಗೂ ಈ ಕಷ್ಟ ಬೇಡವೆನಿಸುತ್ತದೆ. ಮಕ್ಕಳಿಗಾದರೋ ಚೆನ್ನಾಗಿ ನಿದ್ರೆ ಬರಲಿ ಎಂದು ಎಣ್ಣೆ ಹಾಕಿ, ಬಿಸಿಬಿಸಿ ನೀರಿನಲ್ಲಿ ಸ್ನಾನ ಮಾಡಿಸಿ, ಬಜೆ, ಜಾಯಿಕಾಯಿ, ತೇದು ತಿನ್ನಿಸಿ, ಬಟ್ಟೆ ಸುತ್ತಿ ಬೆಚ್ಚಗೆ ಮಲಗಿಸುತ್ತಾರೆ. ಆದರೆ ದೊಡ್ಡವರಿಗೆ ನಿದ್ರೆ ಬರದಿದ್ದರೆ ಏನು ಮಾಡಬೇಕೋ ಆ ದೇವರಿಗೇ ಗೊತ್ತು. ಇದೊಂದು ಬಿಡಿಸಲಾಗದ ಸಮಸ್ಯೆಯಾಗಿದೆ.

ಸದಾಕಾಲ ನಿದ್ರೆ ಬರುವವರಿಗೆ ಒಂದು ರೀತಿಯ ಮುಜುಗರವಾಗುತ್ತಿರುತ್ತದೆ. ಯಾಕೆಂದರೆ ಅವರಿಗೆ ಎಲ್ಲೆಂದರಲ್ಲಿ ತೂಕಡಿಕೆ ಬಂದು ನಿದ್ರೆ ಮಾಡುತ್ತಲೇ ಇರುತ್ತಾರೆ. ಸ್ವಲ್ಪ ಸಮಯ ಸಿಕ್ಕರೂ ಸಾಕು, ನಿದ್ರೆಯೆಂಬುದು ಅವರ ಕಣ್ಣಿನ ಸುತ್ತ ಸುತ್ತಿ ಕಣ್ಣು ಕತ್ತಲೆ ಬಂದು ನಿದ್ರೆಯನ್ನು ಮಾಡಿಯೇ ಬಿಡುತ್ತಾರೆ. ಇದನ್ನು ಯಾರಾದರೂ ಅಪ್ಪಿತಪ್ಪಿ ನೋಡಿಬಿಟ್ಟರೋ ಏನೋ ಎಂದು ಚಡಪಡಿಸುತ್ತಾರೆ. ನಂತರ ಅವರು ಹೇಳುವುದು 'ಹೇ! ನಾನು ನಿದ್ರೆ ಮಾಡಿಲ್ಲ.. ನನಗೆಲ್ಲಾ ಗೊತ್ತಿದೆ. ಸುಮ್ಮನೆ ಕಣ್ಣನ್ನು ಮುಚ್ಚಿಕೊಂಡಿದ್ದೆ' ಎಂದು ಜಾರಿಕೊಳ್ಳುತ್ತಾರೆ. ಒಂದು ವೇಳೆ ಬೆಳಗ್ಗೆ ಎಚ್ಚರವಾಗುವುದೇನಾದರೂ ಸ್ವಲ್ಪ ತಡವಾಗಿ ಬಿಟ್ಟರೆ ಸಾಕು, ಅಯ್ಯೋ! ನನಗೆ ರಾತ್ರಿಯೆಲ್ಲ ನಿದ್ರೆಯೇ ಬರಲಿಲ್ಲಪ್ಪಾ' ಎನ್ನುತ್ತಾರೆ. ಆದರೆ ನಿಜವಾಗಿಯೂ ಅವರು ಸಂಪೂರ್ಣ ನಿದ್ರೆಯಿಂದ ಗೊರಕೆ ಹೊಡೆದಿರುತ್ತಾರೆ. ಆ ಗೊರಕೆಯಿಂದ ನಿದ್ರೆಯಿಲ್ಲದೆ ಇರುವವರು ಎಷ್ಟೋ ಜನ. ಆದರೂ ಸಹ ಅವರು ನಿದ್ರೆ ಮಾಡೇ ಇಲ್ಲ, ಆದ್ದರಿಂದ ಬೇಗ ಎಚ್ಚರವೇ ಆಗಲಿಲ್ಲ ಎಂದು ಏನೇನೋ ಹೇಳಲು ಪ್ರಾರಂಭಿಸುತ್ತಾರೆ. ನಿಲ್ಲಿಸುವುದೇ ಇಲ್ಲ. ಅವರಿಗೇನೋ ನಾನು ದೊಡ್ಡ ತಪ್ಪು ಮಾಡಿಬಿಟ್ಟಿರುವೆನೇನೋ ಎಂಬ ಭಾವ ಮೂಡಿ, ತಪ್ಪಿತಸ್ಥನ ಹಾಗೆ ತಲೆಬಾಗುತ್ತಾರೆ. ಅವರಿಗೆ ಸೂರ್ಯ ಯಾಕಾದರೂ ಉದಯಿಸಿ ಬೆಳಕಾಯಿತೋ ಎನ್ನಿಸುತ್ತದೆ.

ನಿದ್ರೆ ಬರುವುದು ಕೂಡ ಒಂದು ರೀತಿಯ ಪುಣ್ಯವೇ ಸರಿ. ನಿದ್ರೆ ಬರದವರಿಗೆ ಹಿಂದಿನ ಜನ್ಮದಲ್ಲಿ ಏನೋ ಪಾಪ ಮಾಡಿದ್ದೇನೆಯೇ ಎನ್ನಿಸುತ್ತದೆ. ಮನುಷ್ಯ ನಿದ್ರೆ ಮಾಡಿದರೆ ಸದಾ ಕಾಲ ಆರೋಗ್ಯದಿಂದಿರುತ್ತಾನೆ ಎನ್ನುತ್ತಾರೆ. ಆದರೆ ನಿದ್ರೆಯೇ ಇಲ್ಲದವನ ಸ್ಥಿತಿ ಏನೋ ತಿಳಿಯದಾಗಿದೆ. ನಿದ್ರೆ ಬರುವುದಕ್ಕೆ ಹೆಚ್ಚು ಪುಸ್ತಕಗಳನ್ನು ಓದಬೇಕು. ಟಿವಿಯನ್ನು ನೋಡಿ, ಹೆಚ್ಚು ಶ್ರಮದ ಕೆಲಸವನ್ನು ಮಾಡಿ, ವಾಕಿಂಗ್ ಮಾಡಿ ಎಂದು ಏನೇನೋ ಸಲಹೆಯನ್ನು

ನೀಡುತ್ತಾರೆ. ಇವೆಲ್ಲವನ್ನೂ ಮಾಡಿದರೂ ಕೂಡ ಸರಿಯಾದ ನಿದ್ರೆಯೇ ಬರದಂತಹ ವ್ಯಕ್ತಿಯ ಪಾಡು ಯಾರಿಗೂ ಬೇಡ, ನಿದ್ರೆ ಬರಲು ರಾತ್ರಿ ಹೊತ್ತು ಹಾಲು ಸೇವಿಸಿ, ಗಸಗಸೆ ತಿನ್ನಿರಿ, ಈರುಳ್ಳಿ ಬೆಲ್ಲ ತಿನ್ನಿ ಎಂದು ಹೇಳುತ್ತಾರೆ. ಇದೆಲ್ಲ ಮಾಡಿದರೂ ಒಂದು ದಿನ ಏನೋ ಸ್ವಲ್ಪ ನಿದ್ರೆ ಬಂದರೆ ಮತ್ತೆ ಅವರ ಸ್ಥಿತಿ ಯಥಾಸ್ಥಿತಿಗೆ ಬರುತ್ತದೆ. ಹೇಗೆಂದರೆ ತುಮಕೂರಿನ ಸೊಳ್ಳೆಗಳು ಮೊದಲು



ಸೊಳ್ಳೆಯ ಮ್ಯಾಟ್‌ಗೆ ಹೆದರಿ ಹತ್ತಿರ ಬರುವುದಿಲ್ಲ. ನಂತರ ಅದೇ ರೂಢಿಯಾಗಿ ಅವುಗಳು ರಾಜಾರೋಷವಾಗಿ ಹಾರಾಡುವಂತೆ, ನಿದ್ರೆ ಒಂದೆರಡು ದಿನ ಬಂದು ನಂತರ ನಿದ್ರೆ ಸುಳಿದಾಡುವುದೇ ಇಲ್ಲ. ಅಂತಹ ವ್ಯಕ್ತಿಯ ಸ್ಥಿತಿಯನ್ನು ಹೇಳಲು ಅಥವಾ ಬರೆಯಲು ಪದಗಳೇ ಇಲ್ಲದಂತಾಗಿದೆ. ನಿದ್ರೆ ಇಲ್ಲದವನ ಬಾಳು ಹುಟ್ಟಿಲ್ಲದೆ ಹಡಗಿನಲ್ಲಿ ಪ್ರಯಾಣಿಸಿದವನ ಸ್ಥಿತಿಯಂತಾಗುತ್ತದೆ.

ನಿದ್ರೆ ಬರದಿದ್ದರೆ ಅಷ್ಟೇ ಹೋಯ್ತು. ಸ್ವಲ್ಪ ಹೊತ್ತಾದರೂ ಸುಮ್ಮನಾದರೂ ಕಣ್ಣನ್ನು ಮುಚ್ಚಿಕೊಂಡಿರೋಣ ಎಂದರೆ ಕಣ್ಣಿನ ರೆಪ್ಪೆಗಳು ಮುಚ್ಚಿಕೊಳ್ಳಲು ಒಪ್ಪುವುದೇ ಇಲ್ಲ! ಎರಡೂ ಕಣ್ಣುಗಳ ರೆಪ್ಪೆಗಳು ತೆರೆದೇ ಇರುವಂತಹ ಸ್ಥಿತಿ ಬರುತ್ತದೆ. ಏನಾಗಬೇಡ ಅವರ ಸ್ಥಿತಿ? ನೀವೇ ಯೋಚನೆ ಮಾಡಿ ನೋಡಿ, ಮಳೆ ಬಾರದಿದ್ದಾಗ ರೈತರು ಮಳೆ ಬರಲಿಲ್ಲವೆಂದು ಪರಿಪರಿಯಾಗಿ ಪರಿತಪಿಸಿ ದೇವರಲ್ಲಿ ಬೇಡುವಂತೆ ನಿದ್ರೆ ಬರಲಿ ಎಂದು ದೇವರಲ್ಲಿ ಪ್ರಾರ್ಥಿಸಬೇಕಾಗುತ್ತದೆ.

ನಿದ್ರೆಯಿಂದ ವಂಚಿತರಾದವರಿಗೆ ಜೀವನದಲ್ಲಿ ಏನೋ ಕಳೆದುಕೊಂಡ ಹಾಗಿರುತ್ತದೆ. ಚಿಂತೆ ಇಲ್ಲದವರಿಗೆ ಸಂತೆಯಲ್ಲಿ ಕೂಡ ನಿದ್ರೆ ಬರುತ್ತದೆ ಎನ್ನುವಂತೆ ನಿದ್ರೆ ಮಾಡುವವರನ್ನು ನೋಡಿ ಚಿಂತೆ ಮಾಡಬೇಕಾಗುತ್ತದೆ. ಮನುಷ್ಯ ಎಂದ ಮೇಲೆ ಎಲ್ಲರಿಗೂ ಒಂದಲ್ಲಾ ಒಂದು ರೀತಿಯ ಚಿಂತೆ ಇದ್ದೇ ಇರುತ್ತದೆ. ಚಿಂತೆಯಿಲ್ಲದ ಮನುಷ್ಯ ಇಲ್ಲವೇ ಇಲ್ಲ! ಆದರೆ ಕೆಲವರು ಜಾಸ್ತಿ ಮಾಡಬಹುದು. ಕೆಲವರು ಸ್ವಲ್ಪ ಚಿಂತೆ ಮಾಡಬಹುದು. ಈ ನಿದ್ರೆಯೇ ಬರುವುದಿಲ್ಲ ಎನ್ನುತ್ತಾರಲ್ಲ. ಅವರೇನಾದರೂ ಹೆಚ್ಚು ಚಿಂತೆ ಮಾಡುವವರೋ ಏನೋ, ಪಾಪ! ಗೊತ್ತಿಲ್ಲ. ಚಿಂತೆಗೂ ಚಿತೆಗೂ ಒಂದೇ ಒಂದು ಸೊನ್ನೆ ಮಾತ್ರ ವ್ಯತ್ಯಾಸ ಇರುವಂತೆ. ನಿದ್ರೆ ಬರದವರ ಸ್ಥಿತಿ ನನಗೆ ನಿದ್ರೆ ಬರಲೇ ಇಲ್ಲವಲ್ಲ ಎಂಬ ಚಿಂತೆಯನ್ನೇ ಮಾಡುತ್ತಾ ಚಿತೆಗೆ ಏರಿ ಬಿಡುತ್ತಾರೋ ಏನೋ! ಎಷ್ಟು ಕಠಿಣವಾಗಿದೆ ಈ ದುರ್ಗತಿ, ಎಂತ ವಿಪರ್ಯಾಸ ನೋಡಿ ಈ ನಿದ್ರೆ ಬರದವರ ಚಿಂತೆ.

ನಿದ್ರೆ ಮಾಡುವಾಗ ಮನುಷ್ಯನಿಗೆ ಯಾವುದೇ ರೀತಿಯ ಪರಿವೆ ಇರುವುದಿಲ್ಲ. ಅದೊಂದು ರೀತಿಯಲ್ಲಿ ಮನುಷ್ಯ ಸತ್ತಂತೆಯೇ ಸರಿ! ಉಸಿರಾಟ ಮಾತ್ರ ನಡೆಯುತ್ತಿರುತ್ತದೆ, ಅಷ್ಟೇ! ಯಾಕೆಂದರೆ ನಿದ್ರೆ ಮಾಡುತ್ತಿರುವ

ವ್ಯಕ್ತಿಗೆ ಬೇರೆಬೇರೆ ಯಾವ ಘಟನೆಯಾಗಲೀ, ವಿಚಾರಗಳಾಗಲೀ, ಒಟ್ಟಿನಲ್ಲಿ ಏನೇ ನಡೆದರೂ ಏನೊಂದೂ ತಿಳಿಯದಾಗಿರುತ್ತದೆ. ನಾವು ಹಿಂದೆ ಚಿಕ್ಕವರಿದ್ದಾಗ ನಮ್ಮ ಅಮ್ಮ ಅಪ್ಪನನ್ನು ಕೇಳುತ್ತಿದ್ದ ಪ್ರಶ್ನೆ, ಈಗ ಜ್ಞಾಪಿಸಿಕೊಂಡರೆ ನಗುವೇ ಬಂದು ಬಿಡುತ್ತದೆ. ನಾವು ಮಲಗಿದಾಗ ರೇಡಿಯೋದಲ್ಲಿ ಬರುವ ಹಾಡು, ನಾಟಕ ನಮಗೆ ಕೇಳಿಸುತ್ತದೆಯೋ? ಎಂಬ ಪ್ರಶ್ನೆಗಳು ನಮ್ಮ ಮನದಲ್ಲಿ ಉದ್ಭವಿಸುತ್ತಿತ್ತು. ಅದ್ಯಾವುದೂ ಕೇಳಿಸುವುದಿಲ್ಲ ಎಂದು ಹೇಳಿದಾಗ ಏಕೆ ಕೇಳಿಸುವುದಿಲ್ಲ ಎಂದು ಯೋಚಿಸಿರುವುದೂ ಉಂಟು. ಯಾವ ಘಟನೆಗಳೇ ಆಗಲಿ ವಿಚಾರಗಳೇ ಆಗಲಿ ನಿದ್ರೆಯಿಂದ ಎದ್ದಾಗಲೇ ತಿಳಿಯುತ್ತವೆ.



ನಿದ್ರೆ ಬಾರದವರಿಗೆ ಒಂದು ಅನುಕೂಲ ಏನೆಂದರೆ ಏನೇ ನಡೆದರೂ ತಕ್ಷಣ ತಿಳಿಯುತ್ತದೆ. ಒಂದು ವೇಳೆ ಅಪ್ಪಿತಪ್ಪಿ ನಿದ್ರೆ ಬಂದಿದ್ದಾಗಲೂ ಏನಾದರೂ ಒಂದು ಚೂರು ಶಬ್ದವಾದ ತಕ್ಷಣವೇ ಎಚ್ಚರಿಕೆ ಉಂಟಾಗುವುದರಿಂದ ಮುಂದೆ ನಡೆಯಬಹುದಾದ ಅಪಾಯ ತಪ್ಪಿಸಿಕೊಳ್ಳಬಹುದೇನೋ! ಅದೊಂದು ರೀತಿಯ ಅದೃಷ್ಟವೇ ಸರಿ! ಹೀಗೆ ನಿದ್ರೆಯ ಮಹತ್ವ ತುಂಬಾ ಮಹತ್ವದ್ದೇ ಆಗಿದೆ. ಅದನ್ನು ಹೇಳಲು ಸಾಧ್ಯವೇ ಇಲ್ಲ.

ಮುಂದೆ ಎಂದಾದರೂ ಅಂದರೆ ವಯಸ್ಸಾದ ಮೇಲಾದರೂ ಚೆನ್ನಾಗಿ ನಿದ್ರೆ ಬರಬಹುದೇನೋ ಎಂಬ ನಿರೀಕ್ಷೆಯಿಂದ ಕಾಯುತ್ತಿರುತ್ತಾರೆ. ಇವರ ನಿರೀಕ್ಷೆ ಹೇಗೆಂದರೆ ನೀರು ಬರದ ನಲ್ಲಿಯ ಕೆಳಗೆ ಬಿಂದಿಗೆಯನ್ನು ಇಟ್ಟು ನೀರಿಗಾಗಿ ಕಾಯುವ ಹಾಗೆ ಅಥವಾ ಮಳೆ ಬಾರದ ರೈತ ಅಕಾಶದೆಡೆಗೆ ಸದಾ ನೋಡುತ್ತಿರುವ ಹಾಗಿದೆ. ನಿದ್ರೆ ಬರುವವರಿಗೇನಾದರೂ ಈ ನಿದ್ರೆ ಎಂಬ ಪ್ರಬಂಧವನ್ನು ಓದಿ ಓದಿ ಸಾಕಾಗಿ ನಿದ್ರೆ ಏನಾದರೂ ಬಂದರೆ ದಯವಿಟ್ಟು ನಿಮ್ಮಂತಹ ಪುಣ್ಯವಂತರು ಯಾರಿದ್ದಾರೆ? ಅಲ್ವಾ!

ಹೆಚ್ಚಾಗಿ ನಿದ್ರೆ ಮಾಡುವವರೊಂದಿಗೇನಾದರೂ ಈ ನಿದ್ರೆ ಬಾರದವರು ತಮ್ಮ ನಿದ್ರೆ ಬಾರದ ಕಥೆಯನ್ನು ಸವಿವರವಾಗಿ ಹೇಳಲು ಪ್ರಯತ್ನಿಸಿದರೆ ಈ ನಿದ್ರೆಯೆಂಬ ಪ್ರಬಂಧ ಓದಿ ನಿದ್ರಿಸಿದಂತೆ ಕಥೆ ಕೇಳಿಸಿಕೊಳ್ಳುವ ವ್ಯವಧಾನವೂ ಇಲ್ಲದೆ ಇವರದು ಅದೇ ರಾಗ ಅದೇ ಹಾಡು ಎಂದುಕೊಂಡೋ ಅಥವಾ ದಿನಾ ಸಾಯುವವರಿಗೆ ಅಳುವವರಾರು ಎಂಬಂತೆ ಆರಾಮವಾಗಿ ನಿದ್ರೆಯನ್ನೇ ಮಾಡಿಬಿಡುತ್ತಾರೆ. ಕಥೆ ಹೇಳುವವನ ಸ್ಥಿತಿ ಏನಾಗಿರಬೇಡ. ಹಾ! ಹಾ! ಎಂತಹ ಪುಣ್ಯವಂತರು ಇವರ ಕಥೆ ಕೇಳಿ ನಿದ್ರೆ ಮಾಡುವವರು! 'ಕೋಣನ ಮುಂದೆ ಕಿಂದರಿ ಬಾರಿಸಿದ ಹಾಗೆ' ಅಥವಾ 'ಕತ್ತೆಗೇನು ಗೊತ್ತು ಕಸ್ತೂರಿ ಪರಿಮಳ' ಎನ್ನುವಂತಾಗುತ್ತದೆ. ಅದನ್ನು ಅನುಭವಿಸಿದವರಿಗೇ ಗೊತ್ತು ಅವರ ಸಂಕಟ. ಸಣ್ಣ ಮಕ್ಕಳು ನಿದ್ರೆ ಮಾಡುವಾಗ ಹಿಂದೆ ಕಥೆ ಕೇಳುವ ಅಭ್ಯಾಸವಿತ್ತು. ಈಗ ಕಥೆ ಹೇಳಿಸಿಕೊಂಡು ನಿದ್ರೆ ಮಾಡುವ ಕಾಲ ಇಲ್ಲವಾಗಿದೆ. ಏನೇ ಆದರೂ ದೊಡ್ಡವರಿಗ್ಯಾರೂ ಕಥೆ ಹೇಳಿ ನಿದ್ರೆ ಬರಿಸುತ್ತಾರೆ ಅಲ್ಲವೇ? ಈಗ ಟಿ.ವಿ.ಕಂಪ್ಯೂಟರ್ ಮೊಬೈಲ್‌ಗಳ ಹಾವಳಿ ಹೆಚ್ಚಾಗಿ ಅದರಿಂದ ಪ್ರಭಾವಿತರಾಗಿ ನೋಡು ನೋಡುತ್ತಾ ಮಲಗಿ

ಬಿಡುತ್ತಾರೆ. ಅಂತಹ ಕಾಲ ಬಂದಿದೆ. ನಿದ್ರೆ ಬರುವವರಿಗೆ ಎಲ್ಲೋ ಒಂದು ಕಡೆ ಜಾಗ ಸಿಕ್ಕಿ ಮಲಗಿದ ತಕ್ಷಣವೇ ನಿದ್ರಿಸಿ ಬಿಡುತ್ತಾರೆ. ನಂತರ ನಿದ್ರಾ ಲೋಕದಲ್ಲಿ ಕನಸಿನ ಲೋಕಕ್ಕೆ ತಲುಪಿ ವಿಹರಿಸುತ್ತಿರುತ್ತಾರೆ. ನಿದ್ರೆ ಬಾರದವರಿಗೆ ಕನಸಿನ ಲೋಕದ ಅರಿವೇ ಇರುವುದಿಲ್ಲ ಪಾಪ! ಅವರು ಕನಸಿನಲ್ಲಿ ಕಾಣುವುದೆಲ್ಲವನ್ನೂ ನಿದ್ರೆ ಬಾರದೇ ಚಡಪಡಿಸುತ್ತಾ ಹಾಸಿಗೆಯ ಮೇಲೆ ಒದ್ದಾಡುತ್ತಾ ಲೆಕ್ಕ ಹಾಕಿ ಮುಂದಾಗುವುದನ್ನು ಯೋಚಿಸುತ್ತಿರುತ್ತಾರೆ. ಇದೇ ಅವರ ಕನಸಿನ ಲೋಕವಾಗುತ್ತದೆ. ಬೇಸಿಗೆಯ ಕಾಲದಲ್ಲಿ ಹಾ! ಹಾ! ಎಷ್ಟು ಧಗೆಯಪ್ಪಾ ಇವತ್ತು ರಾತ್ರಿ ವಿಪರೀತ ಸೆಕೆಯಿಂದಾಗಿ ಆ ಬೇಗೆಯಿಂದ ಬೆಂದು ರಾತ್ರಿಯಿಡೀ ನಿದ್ರೆಯೇ ಬರಲಿಲ್ಲ ಎಂದು ಹೇಳುತ್ತಾ ತುಂಬಾ ಆಯಾಸವಾಗಿದೆ! ಕಣ್ಣು ಕೆಂಪಗಾಗಿದೆ, ಮುಖ ಊದಿದೆ ಎಂದು



ಬಳಲಿಕೆಯಿಂದ ದುಃಖಿಸುತ್ತಾರೆ. ಹೀಗೆ ಇವರು ಒಂದೇ ಒಂದು ದಿನ ನಿದ್ರೆ ಬರದಿದ್ದರೆ ಎಷ್ಟೊಂದು ಸೊರಗಿ ಹೇಳುತ್ತಾರೆ. ಆದರೆ ಪ್ರತಿನಿತ್ಯವೂ ನಿದ್ರೆಯೇ ಮಾಡದವರ ಗತಿ ಏನಾಗಬೇಡ ಹೇಳಿ? ಅವರಿಗೆ ಚಿರ ನಿದ್ರೆಯಾದಾಗಲೇ ಜೀವನದಲ್ಲಿ ಸುಖ ಬರುತ್ತದೋ ಏನೋ ಆ ಬಡಪಾಯಿಗೆ.

ವಿವೇಕಾನಂದರು ತಮ್ಮ ಭಾಷಣದಲ್ಲಿ 'ಏಳಿರಿ, ಎದ್ದೇಳಿ ಎಚ್ಚರಗೊಳ್ಳಿರಿ' ಎಂದು ಯುವ ಜನಾಂಗವನ್ನು ಹುರಿದುಂಬಿಸಿ ಮಾತನಾಡಿದರು. ಆದರೆ ಯಾವಾಗಲೂ ಎಚ್ಚರವಾಗೇ ಇರುವವರ ಗತಿ ಏನು? ಅವರು ಕೂಡ ಎಚ್ಚರಗೊಳ್ಳಬೇಕು. ಯಾಕೆಂದರೆ ಅವರಿಗೆ ನಿದ್ರೆಯೇ ಇಲ್ಲದೆ ಲವಲವಿಕೆ ಇಲ್ಲದಾಗಿರುತ್ತದೆ. ಆದ್ದರಿಂದ ಅವರು ಮಾನಸಿಕವಾಗಿ ಎಚ್ಚರಗೊಳ್ಳಬೇಕು. ಕೆಲವರಿಗೆ ರಾತ್ರಿ ಹೊತ್ತು ನಿದ್ರೆಯಲ್ಲಿ ಓಡಾಡುವ ಒಂದು ಕಾಯಿಲೆ ಅಥವಾ ಅಭ್ಯಾಸವಿರುತ್ತದೆ. ಅವರು ಓಡಾಡಿದರೆ ಏನೋ ಅಭ್ಯಾಸ. ಕಾಯಿಲೆ ಎಂದು ಔಷಧಿ ಕೊಡಿಸುತ್ತಾರೆ. ಆದರೆ ನಿದ್ರೆ ಬಾರದವರೇನಾದರೂ ಎದ್ದು ಓಡಾಡಬೇಕೆನಿಸಿ ಓಡಾಡಿದರೆ ಆ ಸಮಯದಲ್ಲಿ ಮಲಗಿರುವವರಿಗೇನಾದರೂ ಎಚ್ಚರವಾಗಿ ಬಿಟ್ಟರೆ ಅವರು ದೆವ್ವ-ಗಿವ್ವ ಎಂದು ಹೆದರಿ ಕಿರುಚಿಕೊಳ್ಳುತ್ತಾರಷ್ಟೇ. ಆದ್ದರಿಂದ ಅವರು ಓಡಾಡದೇ ಸುಮ್ಮನಿರಬೇಕಾಗುತ್ತದೆ.

ಭರತ ಮಹಾರಾಜ ಹಿಂದೆ ಆಹಾರ, ನಿದ್ರೆಯಿಲ್ಲದೆ ಇದ್ದನಂತೆ. ಅದೇ ರೀತಿ ನಮಗೇನಾದರೂ ನಿದ್ರೆಯ ಜೊತೆಗೆ ಹಸಿವೂ ಆಗದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು. ಐತಿಹಾಸಿಕ ಕಾಲದಲ್ಲಿ ರಾಜಮಹಾರಾಜರುಗಳು ಸಾಮ್ರಾಜ್ಯ ವಿಸ್ತರಣೆಗಾಗಿ ಯುದ್ಧ ಮಾಡಲು ಹೋಗುವ ಮುನ್ನ ಗೆಲುವು ಸಿಗಲೆಂದು ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರಲ್ವಾ? ಹಾಗೆಯೇ ನಿದ್ರೆ ಬಾರದವರು ನಿದ್ರೆ ಬರಿಸಿಕೊಳ್ಳಲು ಯಾವುದಾದರೂ ಅಂತಹದೊಂದು ದೊಡ್ಡ ಯಜ್ಞ ಮಾಡಲು ಸಹ ತಯಾರಾಗಿರುತ್ತಾರೆ. ನಿಮಗ್ಯಾರಿಗಾದರೂ ಅಂತಹ ದೊಡ್ಡ ಪರಿಹಾರವಿದ್ದರೆ ದಯವಿಟ್ಟು

ಅವರಿಗೆ ತಿಳಿಸಿದರೆ, ನಿಮಗೆ ತುಂಬಾ ಪುಣ್ಯ ಬಂದು ನಿಮಗೆ ಇನ್ನೂ ಎರಡರಷ್ಟು ನಿದ್ರೆ ಬರಲಿ ಎಂದು ಅವರೂ ಸಹ ಕೇಳಿಕೊಳ್ಳುತ್ತಾರೆ. ಆದ್ದರಿಂದ ಅಂತಹದ್ದು ಏನಾದರೂ ಇದ್ದರೆ ಬಹಳ ಬೇಗ ತಿಳಿಸಿ ಬಿಡಿ ಎಂಬುದು ನನ್ನ ಸಲಹೆಯಾಗಿದೆ.

**(ಲಲಿತ ಪ್ರಬಂಧಗಳು, ಸಂ.ಬಿ.ಎಲ್.ರವೀಂದ್ರನಾಥ, ಕಸಾಪ, ೨೦೧೦)**

## ೧೭. ಹಬ್ಬಗಳ ಬಾಲ್ಯ

**- ನಾಗವೇಣಿ ಎಚ್.**

ಬೆಳಗಿನ ತಿಂಡಿ ತಿನ್ನಿಸುವುದಕ್ಕಾಗಿ, ಮಗನನ್ನು ಸೊಂಟಕ್ಕೇರಿಸಿಕೊಂಡು, ಅಂಗಳದಲ್ಲಿನ ಕಾಗೆ, ಬೆಕ್ಕು, ನಾಯಿ, ಎರೆಹುಳುಗಳನ್ನು ಮಾತನಾಡಿಸುತ್ತ ಆ ಕ್ಷಣದಲ್ಲಿ ಅವುಗಳಿಗೆ ಸಂಬಂಧಿಸಿದಂತಹ ಒಂದಷ್ಟು ಕತೆಗಳನ್ನು ಹೆಣೆದು ಕೈಯಲ್ಲಿದ್ದ ಅಕ್ಕಿ ಮೂಟೆಯ ಎರಡು ತುಂಡುಗಳನ್ನು ತಿನ್ನಿಸುವುದಕ್ಕೆ ಪ್ರಯಾಸ ಪಡುವಾಗಲೆಲ್ಲ ನನಗೆ ಹೊಟ್ಟೆಯಲ್ಲಿದ್ದುದೆಲ್ಲ ಬಾಯಿಗೆ ಬಂದಂತಹ ಅನುಭವ!

'ಮಕ್ಕಳೆಂದರೆ ಹಾಗೇನೇ ಅಲ್ವೇನೇ ಮಗಾ... ತಾಯಿಯನ್ನು ಸತಾಯಿಸಿ ತಿಂದರೇನೇ ಅವುಗಳಿಗೆ ತಿಂದದ್ದು ಮೈಗೆ ಹಿಡಿಯೋದು' ಎಂದು ಅಮ್ಮ ಸಮಾಧಾನ ಹೇಳುವುದಿತ್ತು.

ಸೊಂಟದಲ್ಲಿ ಕೂತು, ನಾವು ತಿನ್ನಿಸುವ ಊಟ-ತಿಂಡಿಗಳಿಗೆ ಇನ್ನಿಲ್ಲದಂತೆ ಸತಾಯಿಸುತ್ತಿದ್ದ ಈ ಮಗರಾಯ ಎಂದು ತನ್ನ ಊಟ ತಿಂಡಿಗಳನ್ನು ತಾನೇ ತಿನ್ನುವಷ್ಟು ಸಮರ್ಥನಾದನೋ ಅಲ್ಲಿಂದ ಶುರುವಾಯಿತು ಆತನ ಮತ್ತೊಂದು ರಗಳೆ! 'ಇಡ್ಲಿ ಬೇಡ... ಮ್ಯಾಗಿ ಬೇಕು...', 'ಸಜ್ಜಿಗೆ ಬೇಡ... ಪರೋಟ ಬೇಕು', 'ಅನ್ನ-ಸಾಂಬಾರು ಬೇಡ... ಪಲಾವ್ ಬೇಕು', 'ಹಲಸಂಡೆ, ಹರಿವೆ ಉರಿ ಬೇಡ... ಗೋಬಿ ಮಂಚೂರಿ ಬೇಕು', 'ದೋಸೆ ಬೇಡ... ಬರ್ಗರ್ ಬೇಕು... ಹೀಗೆ ನಮ್ಮ ಅಡುಗೆ ಮನೆಗೆ ಎಂದೂ ಸಲಿಗೆ ಇರದ ಪೇಟೆ ವರಸೆಯ ಆಹಾರಗಳನ್ನು ಆತ ಸದಾ ಅಪೇಕ್ಷಿಸುತ್ತಿರುವುದು ನನ್ನೊಳಗೆ ಒಂದು ಆತಂಕವನ್ನೇ ಸೃಷ್ಟಿ ಮಾಡಿಬಿಟ್ಟಿತ್ತು.

ಅಮ್ಮ ಆಗೆಲ್ಲ ನಡುವೆ ಬಾಯಿ ಹಾಕಿ, 'ಈಗಿನ ಮಕ್ಕಳು ಹಾಗೇನೇ ಅಲ್ವಾ ಮಗಾ..., ಅವುಗಳಿಗೆ ಆ ಪೇಟೆ ಹೋಟೆಲಿನ ರುಚಿ ಹತ್ತಿ, ಈ ಊಟ ತಿಂಡಿಯ ರುಚಿ ಹೇಗೆ ಒಗ್ಗುತ್ತೇ? ನಮ್ಮ ಕಾಲದಲ್ಲಿಯಂತೂ ದೇವರು ಕಂತುವಷ್ಟರಲ್ಲಿ ನೀರಿಗೆ ಅಕ್ಕಿ ಬೀಳಬೇಕು... ಮರುದಿನ ದೇವರು ಮೂಡುವಷ್ಟರಲ್ಲಿ ಅರೆಯುವ ಕಲ್ಲಿನ ತಲೆ ಹಿಡಿದು ಗಡಗಡನೆ ಅರೆದು ನೀರು ದೋಸೆಯೋ, ಪುಂಡಿಯೋ, ಬಾಳೆಲೆ ಗಟ್ಟಿಯೋ, ಬಾಣಲೆದಡೆಯೋ... ಸಿದ್ಧವಾಗಿ, ಅಡುಗೆಮನೆಯೊಳಗೆ ಪಿಳಿಪಿಳಿ ಕಣ್ಣಿಟ್ಟು ತಿನ್ನುವವರನ್ನು ಎದುರು ನೋಡುತ್ತಿತ್ತು..'

"ಅಲ್ಲಮ್ಮ, ನಮ್ಮ ಕಾಲದಲ್ಲೇನು ಹೋಟೆಲುಗಳಿಗೆ ಬರ ಬಿದ್ದಿತ್ತಾ? ರಾಂಪನ ಹೋಟೆಲು, ಚೆರಿಯಂಬ್ಯಾರಿ ಹೋಟೆಲು, ಮುಟ್ಟುಕಲ್ಲಿನ ಹೋಟೆಲು, ಕಂಬತ್ತರ ಹೋಟೆಲು... ಎಲ್ಲವೂ ಇರ್ಲಿಲ್ವಾ? ಅಲ್ಲಿಯೂ ಗೋಳಿ ಬಜೆ, ಅಂಬಡೆ, ಗೆಣಸಿನ



ಪೋಡಿ, ನೀರುಳ್ಳಿ ಬಜೆ, ಬನ್ಸ್, ಅತ್ರಸ, ಲಾಡುಗಳೆಲ್ಲ... ಪರಿಮಳದಿಂದಲೇ ನಮ್ಮ ಕಿವಿ ಬಾಯಲ್ಲಿ ನೀರು ಬರಿಸ್ತಿರ್ಲಿಲ್ವಾ..? ಆಗ ನಾವೇನಾದರೂ ಹೀಗೆ... ಇವನಂತೆ ರಂಪ ಮಾಡ್ತಿದ್ದಾ? ಇನ್ನಿಗೆ ಬಾಯಿ ರುಚಿಗೆ ಇರ್ಲಿ ಅಂತಾ ಹಾಲುಬಾವೆ, ಅರಿಶಿನದೆಲೆಯ ಗಟ್ಟಿ, ಚಿಲಿಂಬಿ ಅಡೆ, ಬಾಣಲೆದೋಡೆ, ಮುಳ್ಳುಸೌತೆ ಮಣ್ಣಿ... ಅಂತಾ ರುಚಿ ರುಚೀದು ಮಾಡಿಕೊಟ್ರೆ... ಇಂವ ಆಗಲೂ ಹೀಗೆ... ನಾಕೂರು ಒಂದಾಗುವ ಹಾಗೆ ರಂಪ ಮಾಡ್ತಾನಲ್ಲ...' ಎಂದು ಮಗನ ಊಟ ತಿಂಡಿಯ ರಗಳೆ ಬಗ್ಗೆ ಅಮ್ಮನಲ್ಲಿ ದೂರಿಕೊಂಡಾಗ ಅಮ್ಮನೆಂದರು...

"ಹೋಗೆ... ಹೋಗೆ... ನೀನು ಸಣ್ಣಂದಿನಲ್ಲಿ ಇವನಿಗಿಂತ ಬುರ್ನಾಸು. ಅಷ್ಟಮಿಗೆ ಮಾಡುವ ಎಲೆಮೂಡೆ ತಿಂದ ದಿನವೇ "ಚೌತಿ ಯಾವಾಗಮ್ಮಾ?" ಅಂತಾ ಕೇಳುತ್ತಿದ್ದೆ. ನಿನಗೆ ಚೌತಿಯ ಶ್ಯಾವಿಗೆ ಹಾಲು ತಿನ್ನುವ ಆಸೆ, ಚೌತಿ ದಿನ ಶ್ಯಾವಿಗೆ ಹಾಲು ತಿಂದೊಡನೆ, ತಟ್ಟನೆ ನೀನು ಕೇಳುತ್ತಿದ್ದ ಪ್ರಶ್ನೆ, "ಕಾವೇರಿ ಸಂಕ್ರಾಂತಿ ಯಾವಾಗಮ್ಮಾ?" ಅಂತ! ಮುಳ್ಳು ಸೌತೆಯ ಮಣ್ಣಿ ಅಂದ್ರೆ ನಿಂಗೆ ಜೀವ. ಕಾವೇರಿ ಸಂಕ್ರಾಂತಿಗೆ ಮಾಡುದೇ ಅದನ್ನಲ್ವ? ಮುಳ್ಳುಸೌತೆಯ ಮಣ್ಣಿ ತಿಂದೊಡನೆಯೇ ಇನ್ನೊಂದು ಹಬ್ಬದ ಯೋಚನೆ ನಿಂಗೆ. ನಿನಗೆ ಹಬ್ಬದ ಆಚರಣೆ ಬಗ್ಗೆ ಯೋಚನೆಯಲ್ಲ... ಹಬ್ಬಕ್ಕೆ ಮಾಡುವ ತಿಂಡಿಯ ಬಗ್ಗೆ ಮಾತ್ರ ಯೋಚನೆ... ನೀನೂ ಅಷ್ಟೇ.. ಇವತ್ತು ತಿಂದಿದ್ದನ್ನು ನಾಳೆ ತಿನ್ನುದಕ್ಕೆ ಸುತರಾಂ ಒಪ್ಪುತ್ತಿರಲಿಲ್ಲ. ದಿನ ಅಕ್ಕಿ ಮುಂಡಿ, ನೀರು ದೋಸೆ, ಬಾಳೆಲೆ ಗಟ್ಟಿ ಯಾರಿಗೆ ಬೇಕು ಅಂತಾ ಆಗ ಕಣ್ಣೀರು ರಾಗ ತೆಗೀತಿದ್ದಿ... ಈಗ ನಿನ್ನೆ ಇಷ್ಟ ಅಂತಾನೇ ಮಗನ ನೆಪದಲ್ಲಿ ಮಣ್ಣಿ-ಗಿಣ್ಣೆ, ಅರಿಶಿನ ಗಟ್ಟಿ, ಬಾಣೆಲೆ ದೋಸೆ ಅಂತ

ಮಾಡ್ತೀಯಾ. ಅವೆಲ್ಲ ನಿನ್ನ ಮಗನಿಗೆ ಇಷ್ಟದ್ದಲ್ಲ. ಅವನ ಇಷ್ಟದ್ದು ನಿನ್ನ ಆಗಿನ ಹಬ್ಬದ ತಿಂಡಿಗಳಲ್ಲ... ಪೇಟೆಯ ಹೋಟೆಲ್ ತಿಂಡಿಗಳು...!

ಅಮ್ಮ ಹೇಳಿದ್ದು ನಿಜ. ನನಗೆ ಬಾಲ್ಯದಿಂದಲೂ ತುಳುನಾಡಿನ ಸಾಂಪ್ರದಾಯಿಕ ತಿಂಡಿ-ತಿನಿಸುಗಳೆಂದರೆ ಜೀವ. 'ಸಾಗುವಳಿ ಇರುವ ಮನೆಗಳಲ್ಲಿ ದಿನವೂ ಹೀಗೆ... ಹಬ್ಬಗಳ ಸಾಂಪ್ರದಾಯಿಕ ತಿಂಡಿಗಳನ್ನು ಮಾಡಿ ಕೂತರೆ ಗದ್ದೆಯಲ್ಲಿ ಬೆಳೆ ಬೆಳೆಯುವ ಬದಲು ಕಳೆ ಬೆಳೆಯಬೇಕಾದೀತು' ಎಂದು ಅಮ್ಮ ಯಾವತ್ತೂ ನಾನು ಹಬ್ಬಗಳ ತಿಂಡಿಗಳಿಗೆ ಬೇಡಿಕೆಯನ್ನಿಟ್ಟಾಗ ನನಗೆ ಹೀಗೆ ಗದರಿಸುವುದಿತ್ತು.

ಬ್ರಾಹ್ಮಣರು ಚೈತ್ರ ಶುದ್ಧ ಪಾಡ್ಯಮಿಯಂದು ಬರುವ ಯುಗಾದಿ ಹಬ್ಬವನ್ನು ಆಚರಿಸಿ ಕೂತರೆ ಮತ್ತೆ ಸುಮಾರು ಮೂರು ತಿಂಗಳುಗಳ ಕಾಲ ಅವರ ಅಂಗಳದಲ್ಲಿ ಯಾವುದೇ ಹಬ್ಬದ ವಾತಾವರಣವಿಲ್ಲ. ಆದರೆ ತುಳುವರ ಅಂಗಳದಲ್ಲಿ ಹಾಗಲ್ಲ, ಆ ಮೂರು ತಿಂಗಳಲ್ಲಿ ಸಾಕಷ್ಟು ಹಬ್ಬದ ರೂಪದ ತುಳುವ ಆಚರಣೆಗಳು!

ಊರಿಗೆ ಪತ್ತನಜೆ (ಮಾಯಿ ತಿಂಗಳಲ್ಲಿ ಹತ್ತನೇ ದಿನ ಹೋಗುವಂದು) ಬರುವುದರೊಳಗೆ ತುಂಬಿಲ, ಅಗಲಿಗೆ ಬಾಯಿ ಕಳೆದು ಕೂತಿರುವ ಭೂತಗಳಿಗೆಲ್ಲ



ಸಂತೃಪ್ತಿಯ ತುಂಬಿಲ ನೀಡಿ ದೈವಸ್ಥಾನಗಳಿಗೆ ಬೀಗ ಜಡಿದು ಬಿಟ್ಟರೆ ಮತ್ತೆ ಹಬ್ಬಕ್ಕಾಗಿ ಕಣ್ಣೆರೆಯುವುದು, ಕಾರ್ತೆಲ್ ತಿಂಗಳ ಜಡಿಮಳೆ, ಆಟಿ ತಿಂಗಳ ಸಿಡಿಲು ಮಿಂಚಿಗೆ ಕಣ್ಣು ಕಿವಿ ಹಾರಿಹೋಗುವಂತಹ ಹೊತ್ತಲ್ಲಿ ಬರುವ ಆಟಿ ಅಮಾವಾಸ್ಯೆಗೆ ಅಷ್ಟೇ.

'ಆಟಿ ಅಮಾವಾಸ್ಯೆ' ಹಬ್ಬಾನೇ ಅಲ್ಲ ಎನ್ನುತ್ತಾರೆ ಕೆಲವರು. ಆದರೆ ತುಳುವ ಮಂದಿ ಅದನ್ನು ಒಪ್ಪುವುದಿಲ್ಲ. 'ಆಟಿ ಅಮಾವಾಸ್ಯೆ'ಯಂದು ಎದ್ದು ವಾಲೆ ಕೆತ್ತೆಯ ಮದ್ದು(ಸಪ್ತವರ್ಣಿ ಅಥವಾ ಪಾಲಾಶಹ ವೃಕ್ಷದ ತೊಗಟೆ) ಕುಡಿಯದಿದ್ದರೆ, ವರ್ಷವಿಡೀ ರೋಗದಿಂದ ನರಳಬೇಕಾ... ಏನ್ಕಥೆ?' ಎಂದು ಹಿರಿಯರು ಆಕ್ಷೇಪಿಸಿ ಆ ದಿನ ಮುಂಜಾನೆ ನಮ್ಮನ್ನೆಲ್ಲ ಸಿಹಿ ನಿದ್ದೆಯಿಂದ ಎಬ್ಬಿಸಿ, ಹಬ್ಬದ ದಿನದ ಸಂಭ್ರಮ ಸಂಪೂರ್ಣ ಬಂದಾಗುವಂತಹ ಕಹಿಕಹಿ ವಿಷಕಹಿಯಾಗಿರುವ ಪಾಲೆಯ ಕೆತ್ತೆ ಮದ್ದನ್ನು ಕುಡಿಸಿ, ಬಾಯಿಗೆ ಒಂದು ತುಂಡು ಬೆಲ್ಲ ತುರುಕಿಸಿದ ನಂತರ ನಿಜವಾದ ಹಬ್ಬದ ಸಂಭ್ರಮ ಆರಂಭಗೊಳ್ಳುತ್ತದೆ.

ಕಹಿ ಮದ್ದನ್ನು ಕುಡಿದ ನಂತರ, 'ಮೆಂತೆ ಕಾಯಿ ಗಂಜಿ'ಯ ಸಿಹಿಯೂಟ ಮುಗಿದ ಮೇಲೆ ಸಮುದ್ರಸ್ನಾನದ ಸಂಭ್ರಮ! ಅಲ್ಲಿಂದ ಬಂದ ನಂತರ ಮಧ್ಯಾಹ್ನದ ಊಟ. ರಾತ್ರಿ ಅಜ್ಜಿಮನೆಯಲ್ಲಿ, 'ಸತ್ತವರಿಗೆ ಬಡಿಸುವ' ಆಚರಣೆ.

ಅದೂ ಒಂಥರಾ ಹಬ್ಬವೇ! ನನ್ನ ಬಾಲ್ಯದ ಕಣ್ಣುಗಳಿಗೆ, ಕುಟುಂಬದಲ್ಲಿ ತೀರಿಕೊಂಡವರಿಗೆಲ್ಲ ಆ ದಿನ ರಾತ್ರಿ ಸೌತೆ ಸಾರು, ಮೀನ ಗಸಿ, ಕೋಳಿಪಲ್ಯ, ಕೆಸುವಿನ ಪತ್ರೊಡೆ, ನುಗ್ಗೆ ಎಲೆ ಪಲ್ಯವನ್ನೆಲ್ಲ ಮಾಡಿ ಬಡಿಸುವ ಆಚರಣೆಯಿರುವಾಗ ನಮ್ಮ ಕುಟುಂಬದ ಸದಸ್ಯರೆಲ್ಲ ಎಲ್ಲೆಲ್ಲಿಂದಲೂ ಆ ಕಾರ್ಯಕ್ಕೆ ಹಾಜರಾಗುವುದು... ನಂತರ ಎಲ್ಲರೂ ಜತೆಯಲ್ಲಿ ಕೂತು ಉಣ್ಣುವುದು ನನಗೆ ಹಬ್ಬದ ಸಂಭ್ರಮವನ್ನೇ ನೆನಪಿಸುತ್ತಿತ್ತು ಆ ಎಳವೆಯಲ್ಲಿ!

ಆಟಿ ಅಮಾವಾಸ್ಯೆಯಂದು ರಾತ್ರಿ ಮೀನಿನೂಟ ಮಾಡಿ, ಕೋಳಿ ಪಲ್ಯ ತಿಂದು ಸಂತೃಪ್ತಿಯಿಂದ ಮಲಗಿದಾಗಲೂ ನನಗೆ ಮುಂಜಾನೆ ಕುಡಿದ ಪಾಲೆಯ ಕಹಿಯೇ ನೇರ ಬಾಯಿಗೆ ಎದ್ದು ಬಂದಂತಾಗಿ ತಟ್ಟನೆ ಅಮ್ಮನಲ್ಲಿ ಕೇಳುವುದಿತ್ತು. “ಅಮ್ಮ... ಬೆಳಿಗ್ಗೆ ಆ ಕಹಿ ಮದ್ದು ಕುಡಿಯದೆ ಇದ್ದರೆ ಏನಾಗುತ್ತಿತ್ತು?' ಅಂತಾ, ಆಗ ಅಮ್ಮ ಹೇಳುವುದಿತ್ತು. “ಆಟಿಯಲ್ಲಿ ಜೀರಗಟ್ಟಿ ಸುರಿವ ಮಳೆ, ಅದರ ಜೊತೆಗೆ ಬೀಸುವ ಚಳಿಗಾಳಿ ಇವೆಲ್ಲವೂ ಮನುಷ್ಯರಿಗೆ ರೋಗ ರುಜಿನಗಳನ್ನು ತಂದು ಹಾಕುತ್ತದೆ. ಈ ರೋಗಗಳು ನಮ್ಮ ಪಂಡಿತರ ಗಿಡಮೂಲಿಕೆಗೆ ನಾಟುವಂತಹದ್ದಲ್ಲ ಎಂದು ದೇವರು ಆಟಿ ಅಮಾವಾಸ್ಯೆ ದಿನ ಆ ಪಲೆಯ ಮರಕ್ಕೆ ಸಾವಿರದೊಂದು ಬಗೆಯ ಔಷಧಿಗಳನ್ನು ಹಾಕಿ ಬಿಡುತ್ತಾರಂತೆ. ಆ ಮರದ ಕೆತ್ತೆಯನ್ನು ಮನೆಯ ಗಂಡಸರು ದೇವರು ಹುಟ್ಟುವ ಮುಂಚೆಯೇ ಬರಿ ಮೈಯಲ್ಲಿ ಹೋಗಿ, ಕಲ್ಲಿನಿಂದ ಜಜ್ಜಿ ತಂದು, ಅದರ ರಸವನ್ನು ಮನೆಮಂದಿಗೆಲ್ಲ ಕುಡಿಸಿದರೆ ವರ್ಷಪೂರ್ತಿ ಗಾಳಿ ಮಳೆಯಿಂದ ಬರುವ ಯಾವ ರೋಗವೂ ಬರುವುದಿಲ್ಲವಂತೆ. ಮಕ್ಕಳಿಗೆ ಹುಳದ ಕಾಟವೂ ತಪ್ಪುತ್ತಂತೆ.' ಅದಕ್ಕಾಗಿಯೇ ನಮ್ಮ ಅಮ್ಮ ಈ ಹಬ್ಬದ ದಿನ ಅಪ್ಪ ಕೆತ್ತಿ ತರುವ ಪಾಲೆ ಮರದ ಕೆತ್ತೆಗಳನ್ನು ಗುದ್ದಿ ರಸ



ತೆಗೆದು, ಆ ರಸಕ್ಕೆ ಬೆಳ್ಳುಳ್ಳಿ, ಕರಿಮೆಣಸು ಜೀರಿಗೆ, ಓಮ ಹಾಕಿ ಅರೆದು ಬಿಟ್ಟು ಅದಕ್ಕೆ ಕಾಸಿದ ಕಬ್ಬಿಣದ ತುಂಡಿನ ಒಗ್ಗರಣೆ ಹಾಕಿ ನಮಗೆ ಕೈಕಾಲು ಕಟ್ಟಿ ಹಾಕಿ ಕುಡಿಸುತ್ತಿದ್ದರು.

ಈ ಆಟಿ ಅಮಾವಾಸೆಯ ಕಹಿ ಮದ್ದು, ರುಚಿಯೂಟವನ್ನು ತಿಂದು ಕಣ್ಣರಳಿಸುವಷ್ಟರಲ್ಲಿ ವೇಗವಾಗಿ ಬಂದೇ ಬಿಡುತ್ತಿತ್ತು ನಾಗರಪಂಚಮಿ.

ಹಾಗೆ ಅಮ್ಮನ ಕೈ ಹಿಡಿದುಕೊಂಡು ನಾಗಬನದಲ್ಲಿ ನಿಂತಿರುವಾಗ, ಶಂಭಟ್ರು ನಾಗನಕಲ್ಲಿಗೆ ಹಾಲೆರೆಯುತ್ತಿದ್ದಂತೆ ನನ್ನ ಮನಸ್ಸು ಮಧ್ಯಾಹ್ನದ ತಿಂಡಿ ಅರಿಶಿನೆಲೆಯ ಗಟ್ಟಿಯ ಸುತ್ತಲೇ ಸುತ್ತುತ್ತಿತ್ತು. ಅಂದು ಮುಂಜಾನೆ ಅಮ್ಮ ನಾಗರಪಂಚಮಿಗೆಂದೇ ವಿಶೇಷವಾಗಿ ಮಾಡಿದ್ದ ಮುಳ್ಳು ಸೌತೆಯ ಇಡ್ಲಿ ತಂದಿಟ್ಟು, 'ಎಷ್ಟು ತಿನ್ನುತ್ತೀಯಾ ಈಗಲೇ ತಿನ್ನು, ನಾಳೆಗಿದು ಉಳಿಯಲ್ಲ... ಮಧ್ಯಾಹ್ನಕ್ಕೆ ಅರಿಶಿನೆಲೆಯ ಗಟ್ಟಿ ಮಾಡಿ ಕೊಡುತ್ತೇನೆ' ಎಂದು ಹೇಳಿದ್ದರು ಬೇರೆ. ಶಂಭಟ್ರು ಅತ್ತ ತನು ಎರೆಯುತ್ತಿದ್ದಂತೆ, ಇತ್ತ ನಾನು ತಟ್ಟನೆ, 'ಅರಿಶಿನ ಕೊಂಬಿನ ದೋಸೆ ಯಾವಾಗ ಮಾಡುದು?' ಎಂದು ಕೇಳಿದ್ದೆನಷ್ಟೆ! ಅಮ್ಮ ಅಲ್ಲಿಯೇ ಬೆನ್ನಿಗೊಂದು ಧರ್ಮಸ್ಕಾಯಿ ಕೊಟ್ಟು, 'ನಿಂಗೆ ಮೂರು

ಹೊತ್ತೂ ತಿನ್ನುದೇ ಗ್ಯಾನ... ಮುಗಿ ದೇವರಿಗೆ ಕೈ' ಎಂದು ಗದರಿ ಕಣ್ಣುಗುಡ್ಡೆಗಳನ್ನು ತಿರುಗಿಸಿದ್ದರು. ಅಮ್ಮ ಅರಿಶಿನ ದೋಸೆ ಮಾಡಿ ಕೊಟ್ಟು ನಾಗರಪಂಚಮಿಯನ್ನು ಅತ್ತಾಗೆ ಸಾಗ ಹಾಕಿ ಬೆನ್ನು ನೆಟ್ಟಗೆ ಮಾಡಿ ಕೊಳ್ಳುವಷ್ಟರಲ್ಲಿ ಊರಿಗೆ ಅಷ್ಟಮಿಯ ಸಂಭ್ರಮ ಏರಿ ಬಂತು.

ಅಮ್ಮ ಅಷ್ಟಮಿಯನ್ನು ಮಾತ್ರ ಗಡದ್ದಾಗಿ ಆಚರಿಸುತ್ತಿದ್ದರು. ಕೃಷ್ಣದೇವರು ಹುಟ್ಟುವವರೆಗೂ(ಚಂದ್ರೋದಯ) ಮನೆಯೊಳಗೆ ಮಾಡಿರುವ ತಿಂಡಿಯನ್ನು ತಿನ್ನುವಂತಿಲ್ಲ!

ಕೃಷ್ಣ ಹುಟ್ಟಿದ ಮರುದಿನ ಮನೆಯಿಡೀ ಸಂಭ್ರಮ, ಮುಂಜಾನೆಗೆ ಒಳಿಮೂಡೆ(ಎಲೆಕಡುಬು), ಕೊದ್ದೆಲು, ಚಟ್ಟಿ ಇದ್ದರೆ, ಮಧ್ಯಾಹ್ನಕ್ಕೆ ಪಾಯಸದ ಊಟ. ಏಳೆಂಟು ಬಗೆ ಪಲ್ಯಗಳು. ಸಂಜೆ ಮೊಸರು ಕುಡಿಕೆ ನೋಡಿ ಬಂದ ನಂತರ ಹಲಸಿನ ಗುಂಡ ಮತ್ತು ಚಟ್ಟಿ.

ಆಗ ಎಲ್ಲ ಹಬ್ಬಗಳಂತೆ ಅಷ್ಟಮಿ ಹಬ್ಬವೂ ನನಗೆ ಬಹಳ ಇಷ್ಟವಿತ್ತು. ಆದರೆ ಆ ಅಷ್ಟಮಿ ಹಬ್ಬ ಮತ್ತು ಚೌತಿ ಹಬ್ಬ ಬಂದು ಹೋದ ನಂತರ ಅದು ನಮಗೆ ಕೊಡುತ್ತಿದ್ದ ದೊಡ್ಡ ಕಷ್ಟವೆಂದರೆ ಹಬ್ಬಗಳಿಗೆ ಮಾಡಿದ್ದ ಅಕ್ಕಿಮೂಡೆ (ಒಳಿಮೂಡೆ), ಹಲಸಿನೆಲೆ ಗುಂಡ, ಶ್ಯಾವಿಗೆಗಳೆಲ್ಲವೂ ಮುಂದಿನ ಏಳೆಂಟು ದಿನಗಳವರೆಗೂ ಉಳಿದು, ಅಮ್ಮ ದಿನಾ ಹಬೆ ಪಾತ್ರೆಯಲ್ಲಿ ಅದನ್ನು ಹಬೆ ಬರಿಸಿ, ಮುಂಜಾನೆಗೂ ಸಂಜೆಗೂ ಅದನ್ನೇ ತಿನ್ನು... ತಿನ್ನು... ಅಂತಾ ಹಾಕಿ ಕೊಡುತ್ತಿದ್ದುದು, ನನಗೆ ಆ ಹಬ್ಬವನ್ನು ದ್ವೇಷಿಸುವಷ್ಟು ಮಟ್ಟಿಗೆ ಬೇಸರಿಗೆ ಬರಿಸುತ್ತಿತ್ತು.

ಇನ್ನೇನು ಅಷ್ಟಮಿಗೆ ಮಾಡಿದ ಅಕ್ಕಿತಿಂಡಿ ತಿಂದು ಮುಗಿಸಿ, ಆಕಳಿಸುವಷ್ಟರಲ್ಲಿ ಚೌತಿಹಬ್ಬ ಹಾಜರು! ಅಮ್ಮ ನಮಗಾಗಿ ಹಲ್ಲು ಗಟ್ಟಿ ಮಾಡಿಕೊಂಡು ಕೂತಿರಬೇಕಾದ ಹಬ್ಬವುದು!



ಚೌತಿಹಬ್ಬದ ಹಿಂದಿನ ದಿನ ರಾತ್ರಿಗೆ ತಿಂಡಿ ಕೆಸುವಿನೆಲೆಯ ಪತ್ರೊಡೆ ಗಸಿಯಾದರೆ, ಮರುದಿನ ಮುಂಜಾನೆಗೆ ಉದ್ದಿನ ದೋಸೆ, ಇಡ್ಲಿ ಮತ್ತು ಒಳಿಮೂಡೆ, ಮಧ್ಯಾಹ್ನಕ್ಕೆ ಏಳು ಬಗೆ ಪಲ್ಯವಿರುವ ಪಾಯಸದ ಊಟ.

ಶಂಭಟ್ರ ಮನೆಯಲ್ಲಿ ನೋಂಪಿ ಹಬ್ಬ ಆಚರಣೆಯ ದಿನವೇ ನಮ್ಮ ಮನೆಯಲ್ಲಿ 'ಹೊಸ ಅಕ್ಕಿ ಊಟ'ದ ಸಂಭ್ರಮ. 'ಹೊಸ ಅಕ್ಕಿ ಊಟ'ವನ್ನು ಇಂಥದ್ದೇ ದಿನದಲ್ಲಿ ಮಾಡಬೇಕೆಂಬ ನಿಯಮವು ಇಲ್ಲದ ಕಾರಣ ಊರವರು ಅವರವರ ಅನುಕೂಲಕ್ಕೆ ತಕ್ಕಂತೆ ನೋಂಪಿ ಹಬ್ಬದ ಹಿಂದೆ-ಮುಂದೆ, ಆದರೆ ನವರಾತ್ರಿಯ ಒಳಗೆ ಆ ಊಟವನ್ನು

ಮಾಡಿ ಮುಗಿಸುವುದಿದೆ. ಪ್ರತೀ ಮನೆಯವರು ತಮ್ಮ ಮನೆಯ ಹೊಸ ಅಕ್ಕಿ ಊಟಕ್ಕೆ, ತಮ್ಮ ಹತ್ತಿರದವರನ್ನು ಸಂಬಂಧಿಕರನ್ನು ಆಮಂತ್ರಿಸುವ ಕಾರಣ ನಮಗೂ ಸಾಕಷ್ಟು ಮನೆಗಳಿಂದ 'ಹೊಸ ಅಕ್ಕಿ ಊಟ'ಕ್ಕೆ ಆಮಂತ್ರಣವಿದ್ದೇ ಇರುತ್ತಿತ್ತು. ಆ ಹಬ್ಬದಲ್ಲಿ ಒಂದು ಮನೆಯವರ ಜತೆ ಮತ್ತೊಂದು ಮನೆಯವರ ಸ್ಪರ್ಧೆ! ಅದೂ ಪಾಯಸ, ಪಲ್ಯದಲ್ಲಿ ಮಾತ್ರ ನಮ್ಮ ಅಮ್ಮ ಹೊಸ ಊಟಕ್ಕೆ ಒಂದು ಪಾಯಸ, ಏಳು ಬಗೆಯ ಪಲ್ಯ ಮಾಡಿದರೆ, ನಮ್ಮ ಮಾವನ ಮನೆಯಲ್ಲಿ ಹನ್ನೊಂದು ಬಗೆಯ ಪಲ್ಯ. ಎರಡು ಬಗೆ ಪಾಯಸ. ನಮ್ಮ ಗುತ್ತಿನ ಮನೆಯಲ್ಲಿ ಹದಿಮೂರು ಬಗೆ ಪಲ್ಯ, ಎರಡು ಬಗೆ ಪಾಯಸ ಇರುತ್ತಿತ್ತು.

ಹೊಸ ಅಕ್ಕಿ ಊಟಕ್ಕೆ ಕೆಸುವಿನ ಪಲ್ಯ, ಹಲಸಂಡೆ ಉಪ್ಕರಿ, ಹೀರೆ ಮೊಳಕೆ ಹೆಸರಿನ ಗಸಿ, ಕಡಲೆ-ತೊಂಡೆ ಪಲ್ಯ, ತಿಮರೆ ಚಟ್ನಿ, ಹಾಗಲಕಾಯಿ ಗೊಜ್ಜು, ಶುಂಠಿ ಚಟ್ನಿ, ಮುಳ್ಳುಸೌತೆ ಸಳ್ಳಿ, ಹರಿವೆದಂಟಿನ ಕೊದ್ದೆಲು, ಪಡುವಲದ ಕಾಯಿರಸ, ಬೆಂಡೆಯ ಮಳಿಗಸಿ... ಹೀಗೆ ಆ ಊಟದಲ್ಲಿ ಮೇಲೋಗರಗಳದ್ದೇ ಮೇಲುಗೈ.

ಆ ಮುಗಿಲಿಗೇರಿದ ಸಂಭ್ರಮ ಭುವಿಗೆ ಇಳಿಯುವಷ್ಟರಲ್ಲಿ, ಕನ್ಯ ತಿಂಗಳು ಕಳೆದೊಡನೆ ಬರುವ ತುಲಾಸಂಕ್ರಮಣದಂದು, 'ಕಾವೇರಿ ಸಂಕ್ರಾಂತಿ ಹಬ್ಬ'ದ ಗಡಿಬಿಡಿ ಎದ್ದು ಕೂತಿರುತ್ತಿತ್ತು. ಅಮ್ಮ ಎದ್ದು ಮುಳ್ಳು ಸೌತೆಯ ಮಣ್ಣಿ ಮಾಡುವ ಕೆಲಸಕ್ಕೆ ತೊಡಗುತ್ತಿದ್ದರು. ಆ ದಿನ ಅಮ್ಮ ಅಕ್ಕಿಯನ್ನಾಗಲೀ, ಭತ್ತವನ್ನಾಗಲೀ ಯಾರಿಗೂ ಕೊಡುವುದಿಲ್ಲ. ಭತ್ತವನ್ನು ಬೇಯಿಸುವುದಿಲ್ಲ. ಹಾರೆ, ಪಿಕ್ಕಾಸಿಗಳಿಂದ ಭೂಮಿಯನ್ನು ಅಗೆಯುವುದಿಲ್ಲ. ಗದ್ದೆಯಲ್ಲಿ ಬೆಳೆಯುವ ಮುಳ್ಳುಸೌತೆಗಳನ್ನು ರಾತ್ರಿ ಬೆಳ್ತಿಗೆ ಅಕ್ಕಿ ಜತೆ ಬೆಲ್ಲ-ಕಾಯ್ ಸೇರಿಸಿ ಅರೆದು, ಅದನ್ನು ಚೆನ್ನಾಗಿ ಕುದಿಸಿ, ತುಪ್ಪ ಹಚ್ಚಿಟ್ಟ ತಟ್ಟೆಗೆ ಹೊಯ್ದು ಇಟ್ಟುಬಿಟ್ಟರೆ ಮರುದಿನಕ್ಕೆ 'ಮುಳ್ಳುಸೌತೆ ಮಣ್ಣಿ(ಹಲ್ವ)' ಸಿದ್ಧವಾಗಿರುತ್ತದೆ.

ಮುಳ್ಳುಸೌತೆಯ ಮಣ್ಣಿನ ಹಣೆಬರಹ ಒಂದೇ ದಿನದ್ದು. ಒಂದು ದಿನದ ನಂತರ ಆ ತಿಂಡಿ ಬದುಕದ ಕಾರಣ ಅಮ್ಮನ ಕೈಯಿಂದ ನಾವು ಬಚಾವು. ಅಷ್ಟೊಂದು ಬೇಯಿಸಿಟ್ಟ ಆ ತಿಂಡಿಯ ಅಲ್ಪಾಯುಷ್ಯದ ಬಗ್ಗೆ ಅಮ್ಮ ಸಿಟ್ಟಿಗೆದ್ದು, ಅದು ತಣಿಯುವಷ್ಟರಲ್ಲಿ ದೀಪಾವಳಿ ಬಂದು ತುಳಸಿಕಟ್ಟೆಯ ಮೇಲೆ ದೀಪಗಳ ರೂಪದಲ್ಲಿ ಕೂತು ಬಿಡುತ್ತಿತ್ತು.



ದೀಪಾವಳಿಯ ಸಂಭ್ರಮ ಏರುತ್ತಿರುವಾಗಲೇ ನಾನು ಅಮ್ಮನಲ್ಲಿ ಕೇಳುವುದಿತ್ತು... “ಅಮ್ಮ ಸೈಯದ್ದಿ ಬ್ಯಾರಿಯವರ ಪೆರ್ನಾಲ್ ಹಬ್ಬ ಯಾವಾಗಮ್ಮ?' ಅಂತ, ರಮ್ಜಾನ್ ಹಬ್ಬ ಸಾಮಾನ್ಯವಾಗಿ ಬರುವುದು ದೀಪಾವಳಿಯ ಆಸುಪಾಸಿನಲ್ಲೇ. ಪೆರ್ನಾಲ್ ಹಬ್ಬದ ದಿನ ಸೈಯದ್ದಿ ಬ್ಯಾರಿಯವರು ಅಥವಾ ಅವರ ಮಡದಿ ಬೀಪಾತ್ತಮ್ಮ ನಮಗೆಲ್ಲ

ನೆಯ್‌ಚೋರು(ತುಪ್ಪದ ಅನ್ನ), ಕೋಳಿ ಪಲ್ಯ ತಿನ್ನಿಸುವುದಿತ್ತು. ಸೈಯದ್ದಿ ಬ್ಯಾರಿಯವರು ಒಂದು ತಟ್ಟೆ ತುಂಬ ಸಿಹಿ ತಿಂಡಿ, ಒಣ ಖರ್ಜೂರ, ಒಣ ದ್ರಾಕ್ಷಿ ಹಾಕಿ ಕೊಟ್ಟು ಅದರ ಜತೆಗೆ ನಮ್ಮನ್ನು ಮರಳಿ ಮನೆಗೆ ಕಳುಹಿಸಿ ಕೊಡುತ್ತಿದ್ದರು. ಇದೆಲ್ಲ ಎಂಥದ್ದು ಪಾತುಮ್ಮ...?' ಎಂದು ಅಮ್ಮ ಕೇಳಿದರೆ, 'ಹಾಗಾದರೆ ನಿಮ್ಮ ಅಟ್ಟೆಮಿ, ಚೌತಿಗೆ ನಮಗ್ಯಾಕೆ ಪಾಯಸ, ಮೂಡೆ, ಶ್ಯಾವಿಗೆ ಕಳುಹಿಸಿ ಕೊಡುವುದು ನೀವು?' ಎಂದು ಮರುಪ್ರಶ್ನೆ ಹಾಕುತ್ತಿದ್ದರು. ಅಮ್ಮ ಸಾಮಾನ್ಯವಾಗಿ ನಮ್ಮ ದೊಡ್ಡ ಹಬ್ಬ ಬರುವಾಗಲೆಲ್ಲ ಅವರ ಮನೆಗೆ ಮತ್ತು ಮೇರಿ ಬಾಯಿ ಮನೆಗೆ ತಲಾ ಎರಡು ಸೇರು ಬೆಳ್ತಿಗೆ ಅಕ್ಕಿ, ಒಂದು ಸೇರು ಬೆಲ್ಲ, ಎರಡು ತೆಂಗಿನ ಕಾಯಿ ಕೊಟ್ಟು ಕಳುಹಿಸುತ್ತಿದ್ದುದು ವಾಡಿಕೆ. ಆದರೆ ಕೆಲವೊಮ್ಮೆ ಅಮ್ಮ ನೇರ ಪಾಯಸ, ತಿಂಡಿಗಳನ್ನೇ ಅವರಿಗೆ ಕೊಟ್ಟು ಕಳುಹಿಸುತ್ತಿದ್ದರು.

ಸೈಯದ್ ಬ್ಯಾರಿಯವರ ಪೆರ್ನಾಲ್ ಹಬ್ಬದ ಐದು ದಿನಕ್ಕಿಂತ ಮುಂಚೆ ನಮ್ಮ ದೀಪಾವಳಿ ಹಬ್ಬ ಬಂದು ಬಿಟ್ಟಿತು. ನಾಳೆ ನರಕ ಚತುರ್ದಶಿ ಎಂದರೆ ಇವತ್ತು ರಾತ್ರಿ ಹಂಡೆಗೆ ನೀರು ತುಂಬುವ ಸಂಭ್ರಮ.

ಅಮ್ಮ ದೀಪಾವಳಿಗೆ ಮಾಡುವ ತಿಂಡಿಗಳೆಂದರೆ ಹಲಸಿನೆಲೆಯಲ್ಲಿ ಚೆಲಿಂಬಿ ಅಡ್ಡೆ, ಹೊಂಗಾರೆ ಎಲೆಯಲ್ಲಿ ಬೆಲ್ಲ-ಕಾಯಿ ಕಡುಬು, ಗೋಸಂಪಿಗೆ ಎಲೆಯಲ್ಲಿ ಬೆಲ್ಲ-ಕಾಯಿ-ಅವಲಕ್ಕಿಯ ಸಿಹಿ ಕಡುಬು, ಗೋಳಿ ಎಲೆಯ ಸಪ್ಪೆ ಕಡುಬು ಮತ್ತು ಎರಿಯಪ್ಪ.

ದೀಪಾವಳಿಯ ಮೂರನೇ ದಿನ ಬಲಿಪಾಡ್ಯಮಿಯ ಸಂಜೆಯ ಹೊತ್ತು ನಮಗೆ ಹಟ್ಟಿಯ ಎಲ್ಲಾ ಜಾನುವಾರುಗಳನ್ನೂ ಮೀಯಿಸುವ ಸಂಭ್ರಮ. ಮೀಯಿಸಿಯಾದ ಮೇಲೆ ಅವುಗಳನ್ನು ಜೇಡಿಮಣ್ಣಿನಿಂದ ಅಲಂಕರಣ ಮಾಡಿ, ನಂತರ ಅವುಗಳ ಕೊರಳಿಗೆ ಗೊಂಡೆ ಹೂವಿನ ಮಾಲೆ, ಹಣೆಗೊಂದು ನಾಮ ಹಾಕುವುದಿದೆ. ರಾತ್ರಿಯಾಗುತ್ತಲೇ ತಟ್ಟೆಯಲ್ಲಿ ಭತ್ತ ಹಾಕಿ, ಆ ಭತ್ತದ ಮೇಲೆ ಮಣ್ಣಿನ ಹಣತೆಗಳಲ್ಲಿ ದೀಪ ಉರಿಸಿ, ಜಾನುವಾರುಗಳಿಗೆ ಬೆಳಗಿಸಿ, ಆ ನಂತರ ಅವುಗಳಿಗೆ ಗೋಳಿ ಎಲೆಯ ಸಪ್ಪೆ ಕಡುಬು, ಗೋಸಂಪಿಗೆ ಎಲೆಯ ಸಿಹಿ ಕಡುಬನ್ನು ತಿನ್ನಿಸಿದರೆ ನಂತರ ನಾವು ನಡೆಯಬೇಕಾದುದು ಗದ್ದೆಗೆ, ಚಕ್ರವರ್ತಿ ಬಲೀಂದ್ರನನ್ನು 'ಕೂ...' ಹಾಕಿ ಕರೆಯಲು, ಸೋದರ ಮಾವ ಕೈಯಲ್ಲೊಂದು ತೆಂಗಿನ ಮಡಲಿನ 'ತೂಟೆ' ಹಿಡಿದುಕೊಂಡು ನಡೆಯುತ್ತಿದ್ದರೆ ಅವರ ಹಿಂದೆ ಕೆಲವರು ದೊಡ್ಡವರು... ಅವರ ಕೈಗಳಲ್ಲೂ ಉರಿಯುವ ತೂಟೆ. ಅವರ ಹಿಂದೆ ನಾವು ಮಕ್ಕಳು ನಡೆಯತಕ್ಕದ್ದು. ಎಲಾ ಕಟ್ಟಿದ ಮಾವನ ತಲೆಯಲ್ಲಿ ಸಣ್ಣ ಕುಕ್ಕೆ, ಅದರಲ್ಲಿ ತೆಂಗಿನ ಕಾಯಿ ತುಂಡುಗಳು, ಅಡಿಕೆ ಹೋಳುಗಳು, ವೀಳ್ಯದೆಲೆಗಳು,

ಕುದ್ಕನ ಸೊಪ್ಪು, ಚೆನ್ನೊಲಿಗೆ ಹೂ, ಗೊಂಡೆ ಹೂ, ದೀಪದೆಣ್ಣೆ ಇತ್ಯಾದಿಗಳ ಮಧ್ಯೆ ಹತ್ತನ್ನೆರಡು ಬೆತ್ತದ ಕೋಲುನಿನೆಗಳು(ಬೆತ್ತದ ಕೋಲುಗಳಿಗೆ ಬಟ್ಟೆ ಸುತ್ತಿದ್ದು, ಮಾವ ಪ್ರತಿ ಗದ್ದೆಯ ಹುಣಿಯಲ್ಲಿ ಒಂದೊಂದು ಬೆತ್ತದ ಕೋಲುನಿನೆಗಳನ್ನು ಊರಿ, ಆ ಕೋಳು ನಿನೆಗಳಿಗೆ ಎಣ್ಣೆ ಹೊಯ್ದು, ಬೆಳಕು ಹೊತ್ತಿಸುತ್ತಾರೆ ಆ ಉರಿಯುತ್ತಿರುವ ಸೊದರಿನ ಬುಡಕ್ಕೆ ಕುಕ್ಕೆಯಲ್ಲಿ ತಂದಿರುವ ಪ್ರತಿಯೊಂದು ವಸ್ತುವನ್ನೂ ಹಾಕಿ ಎಲ್ಲರೂ ದೂರ ನಿಂತು ಅಲ್ಲೆ ಎಲ್ಲೋ ಇರುವ 'ಬಲಿ'ಯನ್ನು ಎತ್ತರದ ಧ್ವನಿಯಲ್ಲಿ ಕರೆಯುತ್ತಾರೆ.

**'ಆಟಿದ ಅಮಾಸೆ, ಸೋನ ಬರಿ ಸಂಕ್ರಾಂತಿ**

**ಬೊಂತೆಲ್‍ಡ್ ಮೂಜಿ ದಿನತ ಕೊಡಿ ಪರ್ಬೊಗು**

**ಬಲ ಕಲ್ಕಿ ಬಲಿಯೇಂದ್ರಾ'**

(ಆಟಿಯ ಅಮಾವಾಸ್ಯೆ, ಸೋಣ ತಿಂಗಳು ಬರುವ ಸಂಕ್ರಮಣ ತುಲಾಮಾಸದಲ್ಲಿ ಬರುವ ಮೂರು ದಿವಸದ ಹಬ್ಬಕ್ಕೆ ಮತ್ತೆ ಬಾ ನೀನು ಕಲ್ಕಿ ಬಲಿಯೇಂದ್ರ).

ಸಿಹಿ ತಿಂಡಿ ತಿಂದು ತಿಂದು... ಅದು ಕಣ್ಣ ಸೀಮೆಯಲ್ಲಿ ಬಂದಿರುವ ಕಾರಣ ಮಲಗಲು ಚಾಪೆ ಹುಡುಕುವವರೇ ಬಹಳ. ನನ್ನನ್ನಂತೂ ಕಣ್ಣಲ್ಲಿ ಕಣ್ಣಿಟ್ಟು ಕಾದು ಬಲವಂತದಿಂದ ಎರಡು ತುತ್ತು ತಿನ್ನಿಸಿಯೇ ಮಲಗಿಸುತ್ತಿದ್ದುದು ಈಗಲೂ ನೆನಪು. ದೊಡ್ಡವರಿಗೆ ಸಿಹಿ ತಿಂದು ಬಾಯಿ ಕೆಟ್ಟಿರುವುದಕ್ಕೋ ಏನೋ ದೀಪಾವಳಿಯ ಮರುದಿನ ಮೀನಿನೂಟ, ಕೋಳಿಯೂಟ ಖಾಯಂ ಆಗಿ ಇದ್ದೇ ಇರುತ್ತಿತ್ತು.

ಈ ಕೋಳಿ ಊಟದ ರುಚಿಯನ್ನು ದೊಡ್ಡವರ ಬಾಯಲ್ಲಿ ವಾರಗಟ್ಟಲೆ ಕೇಳಿಸಿಕೊಳ್ಳುತ್ತಿರುವಾಗಲೇ ಎಳ್ಳಮಾವಾಸ್ಯೆ ಹಬ್ಬ ಬಂದರೂ, ಕಡಲು ಮೀಯುವುದೊಂದನ್ನು ಬಿಟ್ಟರೆ, ತುಳುವರಲ್ಲಿ ಆ ಹಬ್ಬದ ಬಗ್ಗೆ ಬೇರೆ ಯಾವುದೇ ವಿಶೇಷ ಸಂಭ್ರಮವಿಲ್ಲ. ಆದಿನ ಅಮ್ಮನ ಜೊತೆ ಕಡಲು ಈಜುವುದನ್ನು ನೋಡುವುದು ನನಗಂತೂ ವಿಪರೀತ ಸಂಭ್ರಮ. ಅಮ್ಮ ಕಡಲು ಈಜುವುದು ಆ ಒಂದು ದಿನ ಮಾತ್ರ. ಅಮ್ಮನ ಈಜು ನನ್ನ ಕಣ್ಣಿಗೆ ಸಂಭ್ರಮ ಕೊಡುವ ಕಾರಣ, ನನಗಂತೂ ಆ ಹಬ್ಬ ಎಂದರೆ, ಒಂಥರಾ ಇಷ್ಟ. ಕಡಲು ಮಿಂದು ಬಂದ ನಂತರ ಅಮ್ಮ ಸಿಹಿಗುಳಿ ಅಪ್ಪ ಮಾಡಿಕೊಡುತ್ತಿದ್ದುದು ನನ್ನಲ್ಲಿ ಇನ್ನಷ್ಟು ಸಂಭ್ರಮ ಬರಿಸುತ್ತಿತ್ತು.

ಈಜುತ್ತಿದ್ದ ಅಮ್ಮನ ಸಾಹಸವನ್ನು ಕಲ್ಪಿಸಿಕೊಂಡು ಒಂದಷ್ಟು ದಿನ ದೂಡುತ್ತಿರಬೇಕಾದರೆ ಕೆಡ್ಡಸ ಹಬ್ಬ ಅಂಗಳಕ್ಕೆ ತೂರಿಕೊಂಡಾಯ್ತು.

ಈ ಮೂರು ದಿನಗಳಲ್ಲಿ ಭೂಮಿ ಮುಟ್ಟಾಗುತ್ತಾಳೆ ಎಂಬ ನಂಬಿಕೆ ಇರುವುದರಿಂದ ರೈತಾಪಿ ಜನರು ಈ ದಿನಗಳಲ್ಲಿ ಭೂಮಿಗೆ ತಮ್ಮ ನೊಗ, ನೇಗಿಲು ಕೊಟ್ಟು ಪಿಕ್ಕಾಸಿ ಯಾವುದನ್ನೂ ತಗಲಿಸುವುದಿಲ್ಲ. ಆಗ

ಸಾಗುವಳಿದಾರರ ಮನೆಗಳಿಗೆ ಸಂಪೂರ್ಣ ವಿಶ್ರಾಂತಿ, ಕೆಡ್ಡಸದ ಮೊದಲ ದಿನ ನಮಗೆಲ್ಲ ಕುಡು ಅರಿಯ ಸಂಭ್ರಮ! ಪ್ರತಿ ಮನೆಯಲ್ಲೂ ಅಕ್ಕಿ, ಹುರುಳಿ, ಕಡಲೆ, ಹೆಸರು ಇತ್ಯಾದಿ ದವಸ ಧಾನ್ಯಗಳನ್ನು ಉಪ್ಪು



ನೀರಲ್ಲಿ ನೆನೆ ಹಾಕಿ, ಬಿಸಿಲಿಗೆ ಒಣ ಹಾಕಿ, ಹುರಿದು ಅವುಗಳಿಗೆ ಗೋಟು ತೆಂಗಿನಕಾಯಿ ಚೂರು ಬೆರೆಸಿಟ್ಟು, ಮೊದಲಿಗೆ ಅದನ್ನು ಭೂಮಿಗೆ ಅರ್ಪಿಸಿ ನಂತರ ಮಕ್ಕಳು, ಮನೆಮಂದಿಗೆ ತಿನ್ನಲು ಕೊಡುತ್ತಾರೆ. ಮುಟ್ಟಿನ ದಿನಗಳಲ್ಲಿ ಭೂತಾಯಿಗೆ ಪೌಷ್ಟಿಕ ತಿನಿಸು ನೀಡಬೇಕೆಂಬ ನಂಬಿಕೆ ಈ ಮಣ್ಣಿನ ಮಕ್ಕಳದ್ದು. ಎರಡನೇ ದಿನ ಅಮ್ಮ ರೊಟ್ಟಿ ಪಾಯಸ ಮಾಡುತ್ತಾರೆ. ಅದು ಎಷ್ಟು ರುಚಿ! ಮಣ್ಣಿನ ಓಡಲ್ಲಿ ಅಕ್ಕಿ ರೊಟ್ಟಿ ಹೊಯ್ದು, ರೊಟ್ಟಿಗಳನ್ನು ತುಂಡು ಮಾಡಿ, ಬೆಲ್ಲ ಹಾಕಿರುವ ಕಾಯಿ ಹಾಲಿನೊಳಗೆ ಹಾಕಿ ಕುದಿಸಿದರೆ, 'ರೊಟ್ಟಿ ಪಾಯಸ ಸಿದ್ಧ!'

ಕೆಡ್ಡಸದ ಮಾರನೇ ದಿನ ಪುಂಡದ ಹಕ್ಕಿಯನ್ನು ಬೇಟೆಯಾಡುವ ದಿನ. ವರ್ಷಕ್ಕೊಮ್ಮೆ ಇದರ ಮಾಂಸ ತಿನ್ನದಿದ್ರೆ ಮನುಷ್ಯನ ಎಲುಬು ತೂತು ಬೀಳುತ್ತಂತೆ! ಅದಕ್ಕೆ ಪುಂಡದನನ್ನು ತಿನ್ನಬೇಕು. 'ಪುಂಡನಿಗೆ ಮದ್ದು' ಕೊಟ್ರೆ ಜ್ವರ ವಾಸಿಯಾಗುತ್ತೆ, ಆಮೇಲೆ ಆ ಹಕ್ಕಿ ಯಾರ ಕೈಗೂ ಸಿಗಲ್ಲ ಅಂತ.

ಎಲ್ಲರ ಮನೆಯಲ್ಲೂ ಕೆಡ್ಡಸದ ಮಾರನೇ ದಿನ ಪುಂಡದ ಹಕ್ಕಿಯ ಮಾಂಸದ ಸಾರಿದ್ದರೆ, ನಮ್ಮ ಮನೆಯಲ್ಲಿ ಮಾತ್ರ ಅಮ್ಮ ಅಕ್ಕಿ ಮುಂಡಿಗೆ, ಮೀನಿನ ಸಾರನ್ನೇ ತಯಾರು ಮಾಡಿ ಇಡುತ್ತಿದ್ದರು. ಕೆರೆಯ ಮೀನುಗಳನ್ನು ಹಿಡಿದು ತರುತ್ತಿದ್ದವ ನಮ್ಮ ಒಕ್ಕಲ ಮಗ ಕರಿಯ. ಮೂರು ದಿವಸದ ಕೆಡ್ಡಸದ ಮರು ದಿನ ಕುಂಭ ಸಂಕ್ರಮಣದಂದು ಭೂಮಿದೇವಿ ಮಿಂದು ಶುಚಿಯಾಗುತ್ತಾಳೆ ಎಂಬ ನಂಬಿಕೆ ಇರುವುದರಿಂದ ಆ ದಿನ ಮುತ್ತೈದೆಯರು ಎಣ್ಣೆ, ಸೀಗೆ, ಕುಂಕುಮ, ಹರಿಷಿಣ, ಬಳೆ, ಹೂಗಳನ್ನು ಬಾಳೆಲೆ ತುದಿಯಲ್ಲಿರಿಸಿ ತುಳಸಿ ಕಟ್ಟೆಯ ಮೇಲಿಟ್ಟು, ದೀಪ ಹಚ್ಚಿಟ್ಟು ಕೈಮುಗಿಯುತ್ತಾರೆ. ಕೆಡ್ಡಸದ ನಂತರ ಭೂಮಿ ಪುಷ್ಪವತಿ ಯಾಗಿ ಫಲವತಿಯಾಗುವ ಕಾಲದಲ್ಲಿ ಮಾವು, ಗೇರು, ಹಲಸುಗಳು ಹೂಬಿಡತೊಡಗುತ್ತವೆಯಂತೆ. ಕೆಡ್ಡಸದ ನಂತರ ಮತ್ತೆ ಸರದಿಯಲ್ಲಿ ಬರುವ ಹಬ್ಬವೆಂದರೆ ಯುಗಾದಿ. ಅದೇ... ಎಳೆಗೇರು ಬೀಜದ ಪಾಯಸ... ಪಲ್ಯ ಮೆಲ್ಲುವ ಹಬ್ಬ.

ಈ ನಮ್ಮ ತುಳು ನಾಡಲ್ಲಿ ಹಬ್ಬಗಳ ಸರಪಳಿಯ ಸಿಹಿ ಉಂಡ ಆ ನನ್ನ ಬಾಲ್ಯವನ್ನು ಈಗ ನನ್ನ ಮಗನ ಬಾಲ್ಯದೊಂದಿಗೆ ಹೋಲಿಸಿದರೆ ಇದೆಂಥಾ ಬರಡು ಬಾಲ್ಯ ಎಂದೇ ನನಗನ್ನಿಸುತ್ತದೆ. ಹಬ್ಬದ ಹಿಂದೆ ಹಬ್ಬ ಮರಳಿ.. ಮರಳಿ... ಬರುವಾಗಲೆಲ್ಲ ಅವು ನಮ್ಮ ಬದುಕಲ್ಲಿ ಎಷ್ಟೊಂದು ಉಲ್ಲಾಸವನ್ನು ತುಂಬುತ್ತವೆ. ನಮ್ಮ ಬಾಳನ್ನು ಎಷ್ಟು

ಚುರುಕುಗೊಳಿಸುತ್ತವೆ ಎಂಬುದು ಅದನ್ನು ಅನುಭವಿಸಿದಾಗಲೇ ತಿಳಿಯುವಂತಹದ್ದು. ಇಂದು ನಮ್ಮ ಸಮಾಜಕ್ಕೆ ಆಧುನಿಕತೆ ಎಂಬ ಮಂತ್ರದ ಬಿರಿಸಿನ ಪ್ರವೇಶದಿಂದಾಗಿ ಈ ಸಾಂಸ್ಕೃತಿಕ ಮಹತ್ವವುಳ್ಳ ಹಬ್ಬಗಳು ಮರೆಯಾಗುತ್ತಿವೆ.

ಆಕಾಶದಲ್ಲಿ ಚಂದ್ರನಿರುವ ಕಾರಣಕ್ಕಾಗಿ, ಮಾತ್ರವೇ ಕನಿಷ್ಠ ಅಮಾವಾಸ್ಯೆ ಹುಣ್ಣಿಮೆಯ ಬಗ್ಗೆ ತಿಳಿವಳಿಕೆಯುಳ್ಳ ನಮ್ಮ ಮಕ್ಕಳಿಗೆ, ಸಂಕ್ರಮಣ, ನಕ್ಷತ್ರ, ತಿಥಿ,



ಮಾಸ, ಹಬ್ಬಗಳ ಬಗ್ಗೆ ಯಾವ ಕಲ್ಪನೆಯೂ ಇಲ್ಲ. ಅವರಿಗೆ ಅದು ಈ ವೈಜ್ಞಾನಿಕ ಯುಗದಲ್ಲಿ ಅವಶ್ಯವೋ ಅಲ್ಲವೋ ಏನೋ...!

ತುಳುನಾಡಿನ ಸಾಂಸ್ಕೃತಿಕ ಸಂಭ್ರಮವನ್ನು ಹಾಗೂ ಅಲ್ಲಿನ ಭವ್ಯ ಪರಂಪರೆಯನ್ನು ಸಾರುವ ಹಬ್ಬದ ರೂಪದಲ್ಲಿದ್ದ ಹಲವು ಆಚರಣೆಗಳು ಇಂದು ಹೊಸ ತಲೆಮಾರಿನಿಂದ ದೂರಕ್ಕೆ ಸರಿಯುತ್ತಿದೆ. ಹಳೆ ತಲೆಮಾರಿನವರ ನಂಬಿಕೆ, ಆಚರಣೆ, ವಿಚಾರ ಎಲ್ಲವನ್ನೂ ನಮ್ಮ ಹೊಸ ತಲೆಮಾರು ತನ್ನ ವೈಜ್ಞಾನಿಕ ಮನೋಭಾವದ ಮೂಲಕ ವಿಶ್ಲೇಷಿಸಿ ತೂಗತೊಡಗಿದೆ.

ಎಂದಿಗೆ, 'ಕೈಗಾರಿಕೀಕರಣ'ವೆಂಬ ಭೂತ ದಿಗಿಣ ಹಾಕಿಕೊಂಡು ನಮ್ಮ ತುಳುವ ಮಣ್ಣಿಗೆ ಲಗ್ಗೆಯಿಟ್ಟಿತೋ.. ಅಲ್ಲಿಂದಲೇ ಸಾಗುವಳಿ ಎಂಬುದು ಎತ್ತಲೋ ಹಾರಿ ಹೋಗಿ ರೈತಾಪಿ ಮಂದಿ ಬಲಿ ಚಕ್ರವರ್ತಿಯಂತೆ 'ಪಾತಾಳ' ಸೇರಿ, ತುಳು ನಾಡಿನ ಪ್ರಾದೇಶಿಕ ವೈಶಿಷ್ಟ್ಯತೆ, ಸಾಂಸ್ಕೃತಿಕ ಅನನ್ಯತೆಯೆಂಬುದು ನಿಧಾನಕ್ಕೆ ಮಸುಕಾಗತೊಡಗಿತ್ತು.

ತುಳುವರ ಸಂಸ್ಕೃತಿ, ತುಳುವ ಮಣ್ಣಲ್ಲಿ ಬಲವಾಗಿ ಬೇರು ಬಿಟ್ಟಿದೆ ಎಂದು ಇದುವರೆಗೂ ಬಲವಾಗಿ ನಂಬಿದ್ದ ನನ್ನ ನಂಬಿಕೆಗೆ ನನ್ನ ಮಗನೇ ಮೊದಲ ಏಟನ್ನಿಟ್ಟಿದ್ದಾನೆ.

ತುಳುವ ತಿಂಡಿಗಳಿಗೆ ಎಂದೂ ಒಗ್ಗಿಕೊಳ್ಳದ ನನ್ನ ಮಗನ ಮೊಂಡಾಟಿಕೆಯನ್ನು ಕಂಡ ಅಮ್ಮ, 'ನಾವು ಕಾಲಕ್ಕೆ ತಕ್ಕ ಕೋಲ ಕಟ್ಟಬೇಕು ಮಗಾ...' ಎಂದು ನನ್ನ ನಿಲುವನ್ನೇ ಬದಲಿಸ ಹೊರಟಿದ್ದಾರೆ. ಹೊಸ ತಲೆಮಾರು ಆಯ್ದುಕೊಳ್ಳುವ ದಾರಿಯನ್ನೇ ಹಳೆ ತಲೆಮಾರು ಅನುಸರಿಸಬೇಕೇ? ಅಥವಾ ಬೇಡವೇ? ಎನ್ನುವುದೇ ಇದೀಗ ನನ್ನ ಮುಂದಿರುವ ದ್ವಂದ್ವ

(ಆಯ್ದ ಪ್ರಬಂಧಗಳು, ಕಸಾಪ, ೨೦೧೦)

# ೧೮. ಬದಲಾದ ದೃಷ್ಟಿಕೋನ

ಪ್ರೊ. ಶ್ಯಾಮಲ ರವಿಶಂಕರ್

ಅದೊಂದು ಕುಗ್ರಾಮ. ಅಲ್ಲೊಂದು ಚಿಕ್ಕ ರೈಲು ನಿಲ್ದಾಣ. ನಾನು ಬೇಗನೆ ಅದನ್ನು ತಲುಪಿದ್ದರಿಂದ ನಾನು ಹಿಡಿಯಬೇಕಾದ ರೈಲು ಬರಲು ಇನ್ನೂ ಬಹಳ ಸಮಯವಿತ್ತು. ನಿಲ್ದಾಣ ಸೇರಿದ ಮೇಲೆ ತಿಳಿದದ್ದು ಅಂದಿನ ಆ ರೈಲು ತಡವಾಗಿ ಬರುವುದೆಂದು. ಅದೂ ಎಷ್ಟು ತಡ ಎಂದು ತಿಳಿಯಲಿಲ್ಲ. ಹಾಗಾಗಿ ಏನಾದರೂ ಓದೋಣವೆಂದು ಪುಸ್ತಕ ತೆರೆದೆ. ಇದ್ದಕ್ಕಿದ್ದಂತೆ ಧ್ವನಿವರ್ಧಕ ಯಂತ್ರ ಎಚ್ಚೆತ್ತು ತನ್ನ ಇರುವಿಕೆ ಹಾಗೂ ಚಾಕಚಕ್ಯತೆಗಳನ್ನು ಸ್ಪಷ್ಟಪಡಿಸಲು ಅಣಿಯಾಯ್ತು. ಎಡಪಕ್ಕದಲ್ಲಿ ಟೀವಿ ಪರದೆಯೊಂದಿತ್ತು. ಅದರಿಂದ ನಿರಂತರ ವಾಗ್ಝರಿ. ಬಲಪಕ್ಕದಲ್ಲಿ ಧ್ವನಿವರ್ಧಕ. ಈ ಎರಡರ ಮಧ್ಯೆ ಕುಳಿತು ಓದೋಣ ಎನ್ನುವುದು ನನ್ನ ಮೂಢ ವಿಶ್ವಾಸ! ಈ ವಿಫಲ ಯತ್ನದಿಂದಾಗಿ ನಿರುತ್ಸಾಹದಲ್ಲಿ ಪುಸ್ತಕವನ್ನು ಮುಚ್ಚಿ ಕೈ ಚೀಲದಲ್ಲಿ ತೂರಿಸಿದೆ. ಆ ಕಡೆ ಈ ಕಡೆ, ಈಡೆ ಆ ಕಡೆ ನೋಡಿ ಸುಸ್ತಾದೆ. ಬರುವ ಹೋಗುವ ಹಾಗೂ ಹಾದು ಹೋಗುವ ರೈಲುಗಳ ಸಂಖ್ಯೆ ಇತ್ಯಾದಿಗಳನ್ನು ತಿಳಿಯಪಡಿಸಲು ಶುರುವಾದ ಧ್ವನಿವರ್ಧಕ, ನಂತರ ವಿಘ್ನರಾಜನ ಆದಿ ಪೂಜೆಯಷ್ಟೇ ಮುಖ್ಯವಾಗಿ ಯಾವುದೋ ಒಂದು ಬ್ರಾಂಡಿನ ಗೋಡಂಬಿಯನ್ನೇ ತಿನ್ನಬೇಕೆಂದೂ, ಅದರಿಂದ ಒಳ್ಳೆಯ ಕೊಲೆಸ್ಟರಾಲ್ ಹೆಚ್ಚಿ ಕೆಟ್ಟ ಕೊಲೆಸ್ಟರಾಲ್ ತಗ್ಗುವುದೆಂದೂ, ಇದು ಹೆಚ್ಚು ರುಚಿಕರವಾಗಿಯೂ ಕಡಿಮೆ ಬೆಲೆಯುಳ್ಳದ್ದಾಗಿಯೂ ಇರುವುದೆಂದೂ ಗೋಡಂಬಿಯ ಗುಣಗಾನವನ್ನು ಇಂಗ್ಲಿಷ್‌ನಲ್ಲಿ ವದರಿತು. ಇದಾದ ಮೇಲೆ ಇಂತಹ ಹೆಸರಿನ ರೈಲು, ಇಷ್ಟನೇ ಫ್ಲಾಟ್‌ಫಾರಂ ಮೇಲೆ (ಇದ್ದ ಮೂರು ಫ್ಲಾಟ್‌ಫಾರಂಗಳಲ್ಲಿ) ಇಷ್ಟರಲ್ಲೇ ಬರಲಿದೆ ಎಂದು ಉಲಿಯುತ್ತಿದ್ದಾಗ ಬರಲಿರುವ ಆ ರೈಲು ಬಂದು ಅದು ಹೊರಟೂ ಹೋಗಿರುತ್ತಿತ್ತು!

ಆ ಹೇಳಿಕೆಗಳು ಸರಿಯಾಗಿ ಕೇಳಿಸುವುದೇ ಅಸಾಧ್ಯವಾದಲ್ಲಿ, ಅದನ್ನೇ ಅನುಸರಿಸಬೇಕಾಗಿ ಬಂದರೆ ರೈಲು ತಪ್ಪುವ ಸಾಧ್ಯತೆ ಬಹಳ. ಮೊದಲೇ ಚಿಕ್ಕ ಸ್ಟೇಷನ್. ಅಲ್ಲಿ ರೈಲುಗಳು ನಿಲ್ಲುವುದೂ ಕೇವಲ ಕೆಲವೇ ನಿಮಿಷಗಳು. ಇಂತಹ ಸಮಯದಲ್ಲಿ ಆ ದೂರದರ್ಶನವನ್ನು ನಿಶ್ಯಬ್ದವಾಗಿರಸಲಾರದ ವ್ಯವಸ್ಥೆಯನ್ನು ಕಂಡು ಮರುಕವಾಯಿತು.

ರೈಲು ಹೊರಟಿತು. ಧ್ವನಿವರ್ಧಕದ ಬಾಯಿಮುಚ್ಚಿತು. ಇನ್ನು ನಮ್ಮಂತಹವರಿಗೆ, ಅರ್ಥಾತ್ ಹೊರಟ ರೈಲು ಅವರದಲ್ಲದವರಿಗೆ, ಮಾಡಲು ಬೇರೇನು ಕೆಲಸ? ಸರಿ, ಟಿವಿ ಪರದೆಯನ್ನು ನೋಡುವುದು ತಾನೇ?

ನನಗೂ ಟಿ.ವಿ.ಗೂ ಅಷ್ಟಕ್ಕಷ್ಟೇ! ಟೆಸ್ಟ್ ಮ್ಯಾಚ್‌ಗಳನ್ನೂ, ಒಂದು ದಿನದ ಕ್ರಿಕೆಟ್ಟನ್ನೂ ಅತ್ಯಂತ ಭಕ್ತಿಯಿಂದ ಕುಳಿತು ನೋಡುತ್ತಿದ್ದ ಕಾಲವೊಂದಿತ್ತು. ಮ್ಯಾಚ್ ಫಿಕ್ಸಿಂಗ್ ಅದೂ ಇದೂ ಅಂತ ತರಲೆಗಳು ಹೊರಹೊಮ್ಮಿದ ಮೇಲೆ ಟೀವಿ ಮೇಲಿರಲಿ ಕ್ರಿಕೆಟ್ ಮೇಲೂ ಉತ್ಸಾಹ, ಆಸಕ್ತಿ 'ನೀರ ಮೇಲಿನ ಗುಳ್ಳೆಯಂತೆ ಆಗಿ ಹೋಯಿತು. ಇದರಿಂದ ನನ್ನ ಕೈ ತುಂಬಾ ಸಮಯ ಸಿಕ್ಕಿತು. ಬರಬರುತ್ತ ಕಾಲ ಅನರ್ಥ ಮಾಡಲು ಇರುವ ಸಾಧನವೇ ಟೀವಿ ಎಂಬ ನಂಬಿಕೆ ನನ್ನಲ್ಲಿ ದೃಢವಾಯ್ತು. ಅದಕ್ಕೆ 'ಈಡಿಯಟ್ ಬಾಕ್ಸ್' ಎಂದು ಇಟ್ಟ ಹೆಸರು ಸರಿಯಾದುದೇ ಎನ್ನಿಸಿತು. ಹೀಗೆ ರೂಢಿಸಿಕೊಂಡ ನಂಬಿಕೆ ಬಹಳವಾಗಿ ಮನದಟ್ಟಾಗಿ ಬಿಟ್ಟಿದೆ.

ಏನಾದರೇನು? ಪ್ರಸ್ತುತದಲ್ಲಿ ಅದನ್ನು ನೋಡಿಯೇ ತೀರಬೇಕು. ಹೀಗಾಗಿ ಪರದೆಯನ್ನು ನೋಡುತ್ತಿದ್ದೆ. ಮಾತುಮಾತಿಗೂ ಒಬ್ಬ ಯುವತಿ ಬಂದು ಏನೇನೋ ಪಟಪಟನೆ ಉಸಿರಿ(ಅಲ್ಲಿನ ಭಾಷೆ ನನಗೆ ಅರ್ಥವಾಗುತ್ತಿರಲಿಲ್ಲ) ಮಾಯವಾಗುತ್ತಿದ್ದಳು. ಅವಳು ಬಹಳ ಸುರದ್ರೂಪಿ, ತನ್ನ ಅಂದವನ್ನು ಇಮ್ಮಡಿಗೊಳಿಸಿಕೊಳ್ಳುವ ಅಲಂಕಾರವನ್ನೂ ಅರಿತಿದ್ದು, ಜಾಣ್ಮೆಯನ್ನು ಹಾವಭಾವಗಳೊಂದಿಗೆ ಪ್ರದರ್ಶಿಸುತ್ತಿದ್ದಳು. ಅದೇನೇನೋ ಹೇಳಿ, ...ಅಂಡ್ ದಿ ಪ್ರೈಜ್ ಫಾರ್ ದಿ ಬೆಸ್ಟ್ ಮೇಕ್ ಅಪ್ ಮ್ಯಾನ್ ಗೋಸ್ ಟು...' ಎಂದು ಇಂಗ್ಲಿಷ್‌ನಲ್ಲಿ ಒಂದೊಂದು ಸಾರಿ ಒಂದೊಂದು ಹೆಸರನ್ನು ಉಲಿದು ಮಾಯವಾಗುತ್ತಿದ್ದಳು. ಇದನ್ನು ಪ್ರತಿ ಹನ್ನೆರಡು ನಿಮಿಷಗಳಿಗೊಮ್ಮೆಯಂತೆ ಕೇಳಿಸಿಕೊಳ್ಳುವ ಭಾಗ್ಯ ನನ್ನದಾಗಿತ್ತು. ಒಟ್ಟಿನಲ್ಲಿ ಅವಳು ತನ್ನ ಕೆಲಸನವನ್ನು ಅದ್ಭುತವಾಗಿ ನಡೆಸುತ್ತಿದ್ದಳು. ಇಷ್ಟಕ್ಕೇ ನಿಲ್ಲದೆ, ಜಾಹಿರಾತುಗಳ ಸರಪಳಿ ಶುರುವಾಯಿತು. ನನಗೆ ಅರ್ಥವಾದದ್ದು ಎಂದರೆ, ಬಟ್ಟೆ ಒಗೆಯುವ ಸಾಬೂನು ತನ್ನ ಕೆಲಸವನ್ನು ಎಷ್ಟು ಅಚ್ಚುಕಟ್ಟಾಗಿ ಮಾಡುತ್ತದೆ ಎಂದು ಒಬ್ಬ ಯುವಕ ಒಬ್ಬ ಗೃಹಿಣಿಗೆ ತೋರಿಸುತ್ತಿದ್ದ. ಇದು ನನಗೆ ತುಂಬಾ ಹಿಡಿಸಿತು. ಹುಡುಗ ತುಂಬಾ ಠಾಕುಠೀಕಾಗಿದ್ದ, ಗೃಹಿಣಿ ನೋಡಲು ತುಂಬಾ ಅಂದವಾಗಿದ್ದರೂ, ಅಂದದಿಂದ ಮಿನುಗಬೇಕಾಗಿದ್ದ ಅವಳ ಮುಖ ಎಣ್ಣೆಯಿಂದ ಜಿನುಗುತ್ತಿತ್ತು. ಬಟ್ಟೆ ಉಜ್ಜಿ ಉಜ್ಜಿ ಸುಸ್ತಾಗಿದ್ದಳು. ಬೆವರಿನಿಂದ ತೋಯ್ದು ಮುಖವೆಲ್ಲ ಎಣ್ಣೆಮಯವಾದಂತಿತ್ತು. ತುಂಬಾ ನ್ಯಾಚುರಲ್ ಆಗಿದೆ ಎನಿಸಿ, 'ಶಹಭಾಷ್' ಎಂದಿತು ನನ್ನ ಮನ. ಈ ಸಾಬೂನು ಉಪಯೋಗಿಸಿ ಬಟ್ಟೆ ಒಗೆದದ್ದರಿಂದ ಆ ಹುಡುಗನ ಹಾಗೇ ಇವಳೂ ಠಾಕುಠೀಕಾಗಿ ಇರುತಿದ್ದಳೇನೋ, ಆ ದೃಶ್ಯ ನೋಡಿದ ನೆನಪಿಲ್ಲ. ಆಕೆ ಒಗೆದ ಬಟ್ಟೆಗಳು ಹೇಗಿರುತ್ತವೆಯೋ ಅದನ್ನೂ ಅವರು ತೋರಿಸಲಿಲ್ಲ. ತದನಂತರ ಅದೇ ಪ್ರಾದೇಶಿಕ ಭಾಷೆಯಲ್ಲಿ ವಾರ್ತಾಪ್ರಸಾರ. ಅತಿ ಸುಂದರವಾದ ಜೋಡಿಯೊಂದು ಕಾಣಿಸಿಕೊಂಡು ಮುಖದ ತುಂಬಾ ನಗುವನ್ನು ತುಂಬಿಕೊಂಡು ಕಲಾತ್ಮಕವಾಗಿ ಕೈ ಮುಗಿದ ರೀತಿಯಿಂದ ಯಾರಾದರೂ ಅವರನ್ನು 'ಉತ್ತಮ

ದಂಪತಿಗಳು' ಎಂಬ ಸ್ಪರ್ಧೆಯ ವಿಜೇತರೇನೋ ಅಂದುಕೊಳ್ಳಬೇಕು. ಅವರ ಮಾತು(ವಾರ್ತೆಯನ್ನು ಓದುವಿಕೆ) ತುಂಬಾ ಲವಲವಿಕೆಯಿಂದ ಕೂಡಿದ್ದು ಸ್ವಾರಸ್ಯಕರವಾಗಿತ್ತು. ನನ್ನ ಅನಿಸುವಿಕೆಯ ಪ್ರಕಾರ ವಾರ್ತೆಗಳನ್ನು ಓದುವವರು ಆದಷ್ಟೂ ನಿರ್ವಿಕಾರವಾಗಿ ಪ್ರಸಂಗಿಸಬೇಕು.



ಆದರೆ ಇವರು ಹಾಗಿರಲಿಲ್ಲ. ಥೇಟ್ ಹೈ ವೋಲ್ಟೇಜ್ ನಾಟಕದಂತಿತ್ತು. ಒಂದೊಂದು ಪ್ಯಾರಾಗೂ “ಓಹೋ! ಅಲ್ಲಿ ಹೀಗೆ ಆಗಿರುವುದು ಇದೇ ಮೊದಲ ಬಾರಿ, ಇಷ್ಟು ದೊಡ್ಡದಾಗಿ(ಚಿಕ್ಕದಾಗಿಯೂ) ಎಂದೂ ಆಗಿರಲಿಲ್ಲ. ಹೀಗಾಗಿದ್ದು ಎಲ್ಲರಿಗೂ ಅಚ್ಚರಿ ಮೂಡಿಸುತ್ತಿದೆ' ಎಂಬಂತೆ ಕತ್ತು-ತಲೆ ಅತ್ತಿಂದಿತ್ತ ಇತ್ತಿಂದತ್ತ ತಿರುಗಿಸಿ, ಹುಬ್ಬು ಏರಿಸಿ, ಹಾಗೇ ಅದನ್ನು ನಿಲ್ಲಿಸಿ, ಕೆಳಕ್ಕೆ ತರಲಾರದೆ ತಂದು, ಮುಖದಲ್ಲಿದ್ದ ಎಲ್ಲಾ ನರಗಳಿಗೂ, ಮಾಂಸ ಖಂಡಗಳಿಗೂ ಕೆಲಸ ಕೊಟ್ಟು ಸುಸ್ತಾಗಿ ನಿರ್ವಿಕಾರಳಾದಳು ವಾರ್ತಾ ಪ್ರಸಾರಿಣಿ. ಇವಳ ಜೊತೆಗಾರನು ಇಂಗ್ಲೆಂಡಿನ ಸಾಕರ್ ವಿಷಯ ಹೇಳುತ್ತ ಹೇಳುತ್ತಾ ಸಾಕಷ್ಟು ಗಲಭೆಯನ್ನೇ ಮಾಡಿದನೆಂದರೆ ಅತಿಶಯೋಕ್ತಿಯಲ್ಲ, ಕಡೆಯದಾಗಿ ಯಾವುದೋ ಒಂದು ಆಸ್ಪತ್ರೆಯ ದೃಶ್ಯ. ಅಲ್ಲಿನ ವಿಶೇಷ ವಾರ್ತೆಯೇನೋ ನನಗೆ ಅರ್ಥವಾಗಲಿಲ್ಲ. ಇಬ್ಬರು ವೈದ್ಯರು ಏನೇನೋ ಹೇಳಿದರು. ವಾರ್ತೆಗಳನ್ನು ಪ್ರಸಾರ ಮಾಡುತ್ತಿದ್ದವರಿಗೆ ಬಹಳ ಸಂತೋಷವಾದಂತೆ ಕಾಣಿಸಿತು. ಇಬ್ಬರೂ ಬಹಳ ಉತ್ಸಾಹದಿಂದ ನಕ್ಕು ನಮಸ್ಕರಿಸಿ ಅದೃಶ್ಯರಾದರು. ಹಸನ್ಮುಖೀ ಸುಖೀಭವ ಎಂಬ ಮಾತನ್ನು ನೆನಪಿಸಿಕೊಂಡೆ. ಆಸ್ಪತ್ರೆಯ ವಾತಾವರಣವಾಗಲೀ, ಅದರ ವಿಷಯವೇನೇ ಇರಲೀ... ಸ್ವಲ್ಪ ಆತಂಕವನ್ನೋ ಗಂಭೀರಾಲೋಚನೆಯನ್ನೋ ಉಂಟು ಮಾಡುತ್ತದೆ. ಅದರಲ್ಲೂ ಇವರಿಬ್ಬರೂ ಮನಗಂಡ ಸಂತೋಷ ಸಾಂಕ್ರಾಮಿಕವಾದಂತಹುದು!

ವಾರ್ತಾ ಪ್ರಸಾರಕ್ಕೂ ಪ್ರಾಯೋಜಕರಿರುವಾಗ 'ಮಧ್ಯೆ ಮಧ್ಯೆ ಪಾನೀಯಂ ಸಮರ್ಪಯಾಮಿ' ಅನ್ನೋ ರೀತಿಯಲ್ಲಿ ಉದ್ಯಮಿಗಳು ತಂತಮ್ಮ ತಯಾರಿಕೆಗಳನ್ನು ಗ್ರಾಹಕರ ಮುಂದೆ ತಳ್ಳುವ ಪ್ರಯತ್ನ ಸತತವಾಗಿ ನಡೆದಿತ್ತು. ಮೊದಲು ಗಡಿಯಾರ ತಯಾರಕರು, ಅಮೇಲೆ ಸಿಮೆಂಟು, ಕುರುಕುರೇ, ಕರಿಯುವ ಎಣ್ಣೆ, ಇನ್‌ಸ್ಟೆಂಟ್ ಕಾಫಿ, ಕ್ರಿಮಿನಾಶಕ ಹಾಗೂ ಹಲ್ಲುಜ್ಜುವ ಬ್ರಷ್ ಇತ್ಯಾದಿಗಳು ಒಂದಾದ ಮೇಲೊಂದರಂತೆ ಬರತೊಡಗಿದವು. ತಯಾರಿಕೆ ಏನೇ ಇರಲಿ, ಎಲ್ಲರೂ ತಮ್ಮವನ್ನು ಅತ್ಯುತ್ತಮವೆಂದೂ, ಅವಕ್ಕೆ ಮಿಗಿಲಾದುದು ಇನ್ನಿಲ್ಲವೆಂಬಂತೆಯೂ ಪ್ರದರ್ಶಿಸುತ್ತಿದ್ದುದು ನೋಡಿದರೆ ಇವೆಲ್ಲದರ ಹಿಂದೆ ಇದ್ದ ಜನರ ಕರ್ತವ್ಯನಿಷ್ಠತೆಯನ್ನು ಪ್ರಶಂಸಿಸಬೇಕೆನಿಸಿತು.

ಅದಿರಲಿ, ಯಾಕೆ ಈ ರೀತಿಯಲ್ಲೇ ಸರಪಳಿಯಂತೆ ತೋರಿಸುತ್ತಿದ್ದಾರೆ ಎಂದು ಆಲೋಚಿಸಿದರೆ, ಮೊಟ್ಟ ಮೊದಲಿಗೆ, ಗಡಿಯಾರ, ಸಮಯಪ್ರಜ್ಞೆ ಇರಲೇಬೇಕಾದುದು ಎಷ್ಟು ಸರಿಯಾದ ಯೋಚನೆ! ಅದರಲ್ಲೂ ಇಂತಹ ಹೊತ್ತಿಗೆ ವಾರ್ತೆಗಳು ಎಂದು ಹೋಗಿ ಟೀವಿ ರಿಮೋಟ್‌ನ ಗುಂಡಿ ಅದುಮುವುದಿಲ್ಲವೇ? ಹಾಗೆಯೇ ಎಲ್ಲಾ ಆದ ಮೇಲೂ ಗಡಿಯಾರ ನೋಡಿಕೊಂಡೇ, ಟೀವಿನೂ ನಿದ್ದೆ ಮಾಡಲೋಸುಗ ಮತ್ತೆ ಗುಂಡಿ ಒತ್ತುವುದಿಲ್ಲವೇ? ಎಲ್ಲಾ ಕಾಲದ ಮಹಿಮೆ. ಅದಕ್ಕೇ ಏನೋ 'ಕಾಲಾಯ ತಸ್ಯೈ ನಮಃ' ಎನ್ನುವುದು!

ಇನ್ನು ಸಿಮೆಂಟು. ಇದು ಇಲ್ಲದೆ ಮನೆ ಇಲ್ಲ. ಮನೆ ಇಲ್ಲದೆ ಟೀವಿ ಇಲ್ಲ ತಾನೇ? ಅದಕ್ಕೇ ಇದರ ಜೋಡಣೆ ಸರಿ ಎಂದು ನಾನೇ ನಿರ್ಧರಿಸಿದೆ. ಸರಿ, ಮನೆ



ಆಯ್ತು. ಟೀವಿ ಆಯ್ತು. ಟೀವಿ ಮುಂದೆ ಕೂತಿದ್ರೆ ತಿನ್ನೋಕೆ ಬೇಕಲ್ಲಾ. ಓಹೋ ಅದಕ್ಕೇ ಇರಬೇಕು. ಇಲ್ಲಿ ಕುರ್ಕುರೇ ತೂರಿಸಿದ್ದಾರೆ. ಎಷ್ಟು ಬುದ್ಧಿವಂತರಪ್ಪ ಈ ಜನ! ಸಮಯವಿದ್ದಾಗ ಪಕೋಡ ಬೋಂಡಾಂತ ಬಾಯಿ ಚಪಲಕ್ಕೆ ಕರಿಯುವ ಎಣ್ಣೆ. ವ್ಾ, ಎಷ್ಟು ಚೆನ್ನ! ಇಷ್ಟೆಲ್ಲಾ ಆದ ಮೇಲೆ ಕಾಫೀನ ಫೀಲ್ಡರ್‌ಗೆ ಹಾಕೋ ವ್ಯವಧಾನ ಯಾರಿಗೆ ತಾನೇ ಇರತ್ತೆ? ಅದಕ್ಕೆ ಇನ್‌ಸ್ಟಂಟ್ ಕಾಫಿ, ಇವೆಲ್ಲಾ ಉದರದ ದಾರಿ ಹಿಡೀತಿರೋವಾಗ ಅದೂ ಟೀವಿ ನೋಡ್ತಾ ನೋಡ್ತಾ ಅಷ್ಟಿಷ್ಟು ದಾರಿ ತಪ್ಪಿ ಚೆಲ್ಲಿ ಹೋಗೋ ಅವಕಾಶವಿರೋದ್ರಿಂದ, ಹುಳು ಹುಪ್ಪಟೆಗಳಿಗೆ ಹೇಳಿ ಮಾಡಿಸಿದಂತಹ ವಾತಾವರಣ. ಅದರ ಹತೋಟಿಯ ಯತ್ನಕ್ಕಾಗಿ ಕ್ರಿಮಿನಾಶಕ. ಇದರಿಂದ ಇನ್ನೂ ಒಂದು ಉಪಕಾರ! ಹಾಗೇ ಕಣ್ಣಿಗೆ ಸುಸ್ತಾಗಿಯೋ ಮೆದುಳಿಗೆ ಬೋರಾಗಿಯೋ ನಿದ್ದೆ ಜೊಂಪು ಹತ್ತಿದಾಗ, ಅದೇ ಸಮಾಧಿ ಸ್ಥಿತಿಯಲ್ಲಿರಲು ಬಿಡದ ಸೊಳ್ಳೆಗಳನ್ನು ತಡೆಗಟ್ಟೋದು. ಹಾಗೇ ರಾತ್ರಿ ಕಳೆದು ಬೆಳಗಾಗಿ ಬಿಟ್ಟರೆ ಹಲ್ಲುಜ್ಜುವ ಬ್ರಶ್‌ನವರ ದಂಗುಗೊಳಿಸುವ ವಾಕ್‌ಚಾತುರ್ಯ, ಅದೂ ಥಳಥಳಿಸುವ ದಂತ ದರ್ಶನದೊಡನೆ!

ಈ ಸರಪಳಿಯಲ್ಲಿ ಅರ್ಥಪರ್ಥವಿಲ್ಲ ಅಂದುಕೊಂಡಿದ್ದ ನನಗೆ ಈಗ ಹೊಳೆದದ್ದು, ಇದ್ಯಾವುದೂ ಅಸಮಂಜಸವಲ್ಲ. ಒಂದರಿಂದ ಒಂದರಂತೆ ಬೇಕಾಗುವ ಸಾಮಗ್ರಿಗಳ ಜೋಡಣೆ ಎಷ್ಟು ಒಪ್ಪ ಓರಣವಾಗಿದೆ! 'ಶಹಬ್ಬಾಶ್' ಎಂದೆ.

ಇಷ್ಟರಲ್ಲಿ ಧಾರಾವಾಹಿ ಕಾರ್ಯಕ್ರಮ. ಅದರ ವಿಶೇಷ ಏನಪ್ಪಾ ಅಂದರೆ, ಅದರ ಪಾತ್ರಧಾರಿಗಳೆಲ್ಲರೂ, ಮನೆಯ ಒಳಗೂ ಹೊರಗೂ ಎಲ್ಲೇ ಇರಲಿ, ಎದ್ದಾಗಲೂ ಮಲಗಿದಾಗಲೂ ಎಷ್ಟು ಒಳ್ಳೆಯ ಬಟ್ಟೆ ಹಾಗೂ ಒಡವೆಗಳನ್ನು

ಧರಿಸಿ ಶೃಂಗಾರ ಮಾಡಿಕೊಂಡಿರುತ್ತಾರೆ! ನಾವ್ಯಾಕೆ ಹಾಗಿರೋಲ್ಲ. ನಮ್ಮ ಮನೇಲಿ ನಾವು ಹಾಕ್ಕೊಳ್ಳೋದು ಹವಾಯಿ ಚಪ್ಪಲಿ, ಆದರೆ ಅಲ್ಲಿ? ಹೆಂಗಸರು ಚೂಪಾದ, ನಡೆದರೆ ಟಪಟಪ್ ಎಂದು ಶಬ್ದ ಮಾಡುವ ಬೂಟುಧಾರಿಣಿಯರಾದರೆ, ಗಂಡಸರು ಮೊಘಲ್ ಚಕ್ರವರ್ತಿಗಳು ಧರಿಸುತ್ತಿದ್ದಂತಹ ಶೆದ್ವಾನಿ, ಅದಕ್ಕೊಪ್ಪುವ ಬೂಟುಧಾರಿಗಳು! ನಿಜ ಜೀವನದಲ್ಲಿ ಹೀಗೆ ಇದ್ದರೆ ಚೆನ್ನಾಗಿರುತ್ತಾ ಅಥವಾ ಅದೂ ನಮಗೆ ಪ್ರಾಣ ಹಿಂಸೇನಾ? ಚೆನ್ನಾಗಿಯೇ ಇರಬಹುದು. ನನಗೇನೂ ಗೊತ್ತಿಲ್ಲದಿದ್ದಾಗ ಅದು ಚೆನ್ನ ಅಂದುಕೊಳ್ಳಬೇಕು. unless proven otherwise ಅನ್ನುತ್ತಾರಲ್ಲ ಹಾಗೆ! ಇನ್ನು ಹೆಂಗಸರು ಕುಂಕುಮವಿಟ್ಟ ವೈಖರಿಯೋ! ಒಬ್ಬಾಕೆ ಹಣೆಯ ಉದ್ದಕ್ಕೂ ಪೆನ್ಸಿಲ್‌ನಿಂದ ಒಂದು ಸರಳ ರೇಖೆಯನ್ನು ಎಳೆದಿದ್ದಳು. ಇನ್ನೊಬ್ಬಳು ಬಹಳ ಪುಟ್ಟದಾದ ಹೆಡೆ ಬಿಚ್ಚಿದ ನಾಗರಹಾವನ್ನು ಚಿತ್ರಿಸಿಕೊಂಡಿದ್ದಳು. ಆ ಹಾವಿನ ಹೆಡೆಗೆ ಕುಂದನ್ ಕಲ್ಲುಗಳೆರಡನ್ನೂ ಮೆತ್ತಿದ್ದಳು! ಮತ್ತೊಬ್ಬಳು ಹಣೆಗೆ ಕುಂಕುಮವಿಲ್ಲದಿದ್ದರೂ ಬೈತಲೆಗೆ ಎರಡು ಗ್ರಾಂ ಕುಂಕುಮದ ಪುಡಿಯನ್ನು ಮೆತ್ತಿದ್ದಳು! ಒಟ್ಟಿನಲ್ಲಿ ಒಬ್ಬರು ಇನ್ನೊಬ್ಬರಂತಿರದ ವೈಶಿಷ್ಟ್ಯ ! ನಿಜವಾಗಿಯೂ ಶ್ಲಾಘನೀಯ!

ಮುಂದಿನ ದೃಶ್ಯ ರಿಯಾಲಿಟಿ ಶೋ(ಇರಬೇಕು)! ಭಾಗವಹಿಸುವವರೆಲ್ಲಾ ಖ್ಯಾತರೇ ತಾನೇ? ಎಲ್ಲರೂ ತಂತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದುದನ್ನು



ಕಂಡು, 'ಅಯ್ಯೋ! ಇಂಥ ದೊಡ್ಡ ಮನುಷ್ಯರು ಕಿತ್ತು ಹೋದ ಗುಂಡಿಯನ್ನು ಹೊಲ್ಕೋತಾರಾ? ಬಟ್ಟೆ ಇಸ್ತ್ರಿ ಮಾಡ್ಕೊತಾರಾ? ಚಪಾತಿ ಲಟ್ಟಿಸುತ್ತಾರಾ?' ಎಂದು ಆಶ್ಚರ್ಯವಾಯಿತು. ಇವನ್ನೆಲ್ಲಾ ನಮ್ಮ ಗಮನಕ್ಕೆ ತಂದವರ ಬುದ್ಧಿಯನ್ನು ಮನದಲ್ಲೇ ಅಭಿನಂದಿಸಿದೆ.

ತದನಂತರ ಹಾಡಿನ ಸ್ಪರ್ಧೆಯ ಅಂತಿಮ ದಿನದ ಕಾರ್ಯಕ್ರಮ. ಅದರಲ್ಲಿ ಸೋತು ಹೋದ ಮಕ್ಕಳ ತಾಯಿತಂದೆಗಳು 'ಗೊಳೋ' ಎಂದು ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಅದನ್ನು ನೋಡಿದ ನನಗೆ, 'ವ್ಹಾ! ತಂದೆತಾಯಿ ಎಂದರೆ ಹೀಗಿರಬೇಕು! ತಮ್ಮ ಮಗನ ಪ್ರತಿಭೆಗಾಗಿ ಕಷ್ಟಪಟ್ಟಿರಬೇಕು. ಆ ಪ್ರತಿಭೆಯಲ್ಲಿ ಎಷ್ಟು ವಿಶ್ವಾಸ ಹೆಮ್ಮೆ ಇದ್ದು ನಿರಾಶೆಯಾಗಿರಬೇಕು? ಪಾಪ!' ಎನ್ನಿಸಿತು. ಗೆದ್ದ ಮಕ್ಕಳಿಗೆ ತನ್ನ ಪ್ರಶಂಸನಾ ಭರಿತ ಅಭಿನಂದನೆಗಳನ್ನಿದ್ದದ್ದೇ. ಸೋತ ಮಕ್ಕಳು ಕೂಡ ತಮ್ಮ ಸೋಲನ್ನು ಮನಃಪೂರ್ವಕವಾಗಿ ಒಪ್ಪಿದ್ದೇ ಅಲ್ಲದೆ ಗೆದ್ದವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತಿದ್ದಾರಲ್ಲಾ! ವಯಸ್ಸು ಚಿಕ್ಕದಾದರೂ ಮನಸ್ಸು ದೊಡ್ಡದು! ಶಹಬ್ಬಾಸ್ ಎಂದಿತು ಮನಸ್ಸು. ಈ ಕಾರ್ಯಕ್ರಮವನ್ನು ನಡೆಸಿ ಕೊಡುತ್ತಿದ್ದ ಜೋಡಿ ಹಾಗೂ ತೀರ್ಪುಗಾರ ತ್ರಿಮೂರ್ತಿಗಳಿಗೂ ನನ್ನ ಮೆಚ್ಚುಗೆ ಇತ್ತು,

ಏಕೆಂದರೆ ಅವರು ಎಲ್ಲರನ್ನೂ ಮೆಚ್ಚಿಕೊಳ್ಳುತ್ತಾ, ಯಾರನ್ನೂ ಟೀಕಿಸದೆ ಎಲ್ಲರನ್ನೂ ಉತ್ತೇಜಿಸಿ, ವಿಜೇತರನ್ನು ಆಯ್ದ ಅವರ ಸಾಮರ್ಥ್ಯಕ್ಕೆ ಇನ್ನು ಉಳಿದವರು? ಹಿಮ್ಮೇಳ ನುಡಿಸಿದ ವಾದ್ಯವೃಂದ, ಯಾವುದೇ ಹಾಡಾದ್ರೂ ಅದಕ್ಕೆ ಅನುಗುಣವಾಗುವ ವಾದ್ಯ ಸಂಗೀತ ನುಡಿಸುವ ಪರಿಣತರು. ಅವರಿಗೆ ಬೇಡವೇ ನಮ್ಮ ಚಪ್ಪಾಳೆ!

ಕ್ಷಣ ಮಾತ್ರದಲ್ಲಿ ಅಡುಗೆ ಮನೆಯ ದೃಶ್ಯ. ಅಲ್ಲೇ ಒಲೆಯನ್ನೇ ಹೊತ್ತಿಸದೆ ವಿಧವಿಧವಾದ ತಿನಿಸುಗಳನ್ನು ಒಬ್ಬಾಕೆ ಮಾಡಿ ತೋರಿಸುತ್ತಿದ್ದಳು. ಅಲ್ಲೇ ನಿಂತು ವಟವಟಗುಟ್ಟುತ್ತಿದ್ದ ಹಾಗೂ ಮಾಡಿಟ್ಟ ತಿನಿಸುಗಳನ್ನು ಸ್ಟೈಲಾಗಿ ಮುಕ್ಕುತ್ತಿದ್ದ ನವ ಯೌವನೆಯ ಉದ್ಗಾರ, ವೇಷ-ಭೂಷಣಗಳನ್ನು ನೋಡಿ ಇಂತಹ ಸದವಕಾಶ ಇಷ್ಟು ವರ್ಷ ಬದುಕಿದ್ದೂ ನನ್ನ ಹಣೆಯಲ್ಲಿ ಬರೆದಂತೆ ಕಾಣಲಿಲ್ಲವಲ್ಲಾಂತ ಪೇಚಾಟವಾದರೂ ನಮಗೆ ರುಚಿ ತೋರಿಸದೆ ತಿಂದ ಅನುಭೂತಿಯನ್ನು ತಂದ ಆ ಯುವತಿಗೆ ಬೆನ್ನು ತಟ್ಟಬೇಕೆನ್ನಿಸಿತು.

ಈ ರೀತಿ ಎಲ್ಲೋ ವಿಹರಿಸುತ್ತಿದ್ದ ನಾನು ವಾಸ್ತವಕ್ಕೆ ಬಂದದ್ದು ಇಂದ್ರಿಯ ಗ್ರಹಿಕೆಯಿಂದಲ್ಲದಿದ್ದರೂ ಇಂದ್ರಿಯಾತೀತ ಪ್ರಜ್ಞೆಯಿಂದ ಅಂದರೆ ತಪ್ಪಲ್ಲ. ಗಡಬಡಿಸಿ ಎದ್ದವಳೇ ಅಲ್ಲಿ ನಿಂತಿದ್ದ ರೈಲು ನನ್ನದೇ ಎಂದು ಓಡಿ ಹೋಗಿ ನನ್ನ ಕೋಚನ್ನು ಹಾರಿ ಹಿಡಿದು ಕುಳಿತಾಗ ರೈಲು ಚಲಿಸಲು ಪ್ರಾರಂಭಿಸಿತು. ಧ್ವನಿವರ್ಧಕದಲ್ಲಿ ಗೋಡಂಬಿಯ ಗುಣಗಾನ ವ್ಯಾಖ್ಯಾನ ಇನ್ನೂ ಕೇಳಿ ಬರುತ್ತಿತ್ತು. ಪರಿಸ್ಥಿತಿ ಅರಿವಿಗೆ ಬಂದಾಗ ನನ್ನನ್ನು ನಾನೇ ಪ್ರಶ್ನಿಸಿಕೊಳ್ಳುತ್ತಿದ್ದೆ. ನಾನೆಲ್ಲಿದ್ದೆ, ನಾನೇನು ಮಾಡುತ್ತಿದ್ದೆ, ರೈಲು ಬಂದದ್ದು ಯಾವಾಗ... ಇತ್ಯಾದಿಯಾಗಿ, ನಾನು ಮೊದಲನೆಯ ಫ್ಲಾಟ್ ಫಾರಂನಲ್ಲಿದ್ದ

ಬೆಂಚೊಂದರ ಮೇಲೆ ಕುಳಿತಿದ್ದೆ. ನಾನೇನು ಮಾಡುತ್ತಿದ್ದೇನೆಂದರೆ ಏನು ಹೇಳಲಿ, ಬಹುಶಃ ಕನಸು ಕಾಣುತ್ತಿದ್ದಿರಬಹುದು. ಇನ್ನು ರೈಲು ಬಂದದ್ದು ಯಾವಾಗ ಎಂದರೆ ನನಗೆ ಗೊತ್ತಿರಲಿಲ್ಲ. ಹೋಗಲಿ, ಯಾವಾಗಲಾದರೂ ಬಂದಿರಲಿ, ಸದ್ಯ. ನಾನು ಹತ್ತಿದೆನಲ್ಲಾ ಎಂದು ಸಮಾಧಾನವಾಯಿತು!

ನನ್ನ ಎರಡನೆಯ ಪ್ರಶ್ನೆಗೆ ಸಿಕ್ಕ ಉತ್ತರವನ್ನು ವಿಶ್ಲೇಷಿಸಿದೆ. ಕನಸು ಕಾಣುತ್ತಿದ್ದೇನೆಂದರೆ, ನನಗೆ ನಿದ್ದೆ ಹತ್ತಿತಾ? ಅದೂ ಅಷ್ಟು ಗಲಾಟೆಯಲ್ಲಿ? ವಾಸ್ತವದಲ್ಲಿ ಟೀವಿಯನ್ನು ನೋಡುತ್ತಿದ್ದಾಗ್ಯೂ ಮನಸ್ಸು ಎಲ್ಲೋ ಕನಸಿನಲ್ಲಿ ವಿಹರಿಸುತ್ತಿತ್ತು. ಕಣ್ಣು ಬಿಟ್ಟುಕೊಂಡೇ ನಿದ್ರೆ ಮಾಡುವ ಶಕ್ತಿ ನನಗೆ ಇದೆಯೆಂದು ಅರಿವಾಯಿತು.

ನನ್ನ ವಿಶ್ಲೇಷಣೆ ಟೀಕೆಗಳನ್ನು ಮೆಲುಕು ಹಾಕಿದೆ. ಇಷ್ಟರವರೆಗೂ ಹೋದದ್ದು ಯಾಕೆ? ಬಹುಶಃ ಭಾಷೆ ಬಾರದೆ ಟೀವಿಯಲ್ಲಿ ಬರುತ್ತಿದ್ದುದನ್ನು ನೋಡಿದ್ದರ ಪರಿಣಾಮವಿರಬೇಕು. ಭಾಷೆ ಬಂದಿದ್ದರೆ ಕಥೆ, ವಾರ್ತೆಗಳಲ್ಲಿ ಮುಳುಗಿ ಹೋಗುತ್ತಿದ್ದೇನೇನೋ. ಈಗ ಆ ಅವಕಾಶವಿಲ್ಲದ್ದರಿಂದ ಜ್ಞಾನೋದಯವಾಯಿತು! ಇಷ್ಟಕ್ಕೂ ನಾನು ಮಾಡಿದ್ದೇನು? ಎಲ್ಲರನ್ನೂ ಮೆಚ್ಚಿಕೊಂಡದ್ದು, ಅಷ್ಟೇ ತಾನೇ? ಅರೆ, ನಾನು! ನಾನೇ ತಾನೇ ಟಿವಿಯನ್ನು ಈಡಿಯಟ್ ಬಾಕ್ಸ್ ಎಂದವರನ್ನು ಮೆಚ್ಚಿದ್ದು! ಈಗೇನಾಯಿತು ನನಗೆ? ನನ್ನ ಊಹೆಗಳನ್ನು ಪಕ್ಕಕ್ಕಿಟ್ಟು ಎಷ್ಟು ಜನ ಎಷ್ಟೆಷ್ಟು ಕಷ್ಟ ಪಟ್ಟು ಪ್ರತಿ ಸಣ್ಣ ವಿಷಯದಲ್ಲೂ ಮುತುವರ್ಜಿ ವಹಿಸಿದರೆ ಮಾತ್ರ ಒಂದು ಅಭಿನಂದನೆಯ ಮಾತು ಮೂಡುವುದು! ನಾವು ಮನೆಗಳಲ್ಲಿ ಕ್ಷಣಕ್ಕೊಮ್ಮೆ ಛಾನೆಲ್ಲುಗಳನ್ನು ಬದಲಾಯಿಸಿ ಎಲ್ಲಾ ಕಳಪೆ ಎಂದುಬಿಟ್ಟು ಟೀವಿಯ ಗುಂಡಿ ಒತ್ತಿ ಹೊರ ನಡೀತೀವಿ... ಟೀವಿ ನೋಡುವವರನ್ನು ನನ್ನಂತಹ ಜನ ಸೋಮಾರಿಗಳೆಂದೂ ವೃಥಾ ಕಾಲಹರಣ ಮಾಡುವವರೆಂದೂ ಅಂದುಕೊಳ್ಳುತ್ತೇವೆ.. ಇಷ್ಟಕ್ಕೂ ಅಂಥವರೆಲ್ಲಾ ಟೀವಿಯಿಂದ ಕೆಲಸ ಕಂಡುಕೊಂಡಿರುವವರನ್ನು ಉತ್ತೇಜಿಸುತ್ತಾರೆ. ನಾನು ಮಾಡುತ್ತಿರುವುದು ಶುದ್ಧ ತಪ್ಪು ಎನ್ನಿಸಿ ಪ್ರಾಯಶ್ಚಿತ್ತವೋ ಎಂಬಂತೆ, 'ನಾನೂ ಏತಕ್ಕಾಗಿ ಟೀವಿ ಭಕ್ತಳಾಗಬಾರದು' ಎಂದು ಆಲೋಚಿಸಿದೆ. ಕನಿಷ್ಠಪಕ್ಷ, ವೃದ್ಧಾಪ್ಯದಲ್ಲಿಯಾದರೂ ಈ ವೀಕ್ಷಣೆ ಅಭ್ಯಾಸ ಮಾಡಿಕೊಂಡರೆ ಯಾರ ಗೊಡವೆಗೂ ಹೋಗದೆ, ಯಾವ ಗೋಜಿಗೂ ಸಿಕ್ಕಿಕೊಳ್ಳದೆ ಕಾಲ ಕಳೆಯಬಹುದು ಎನಿಸಿತು. ಇದನ್ನು ಅಭ್ಯಸಿಸಲು ನಾಳೆಯಿಂದಲೇ ಪ್ರಾರಂಭಿಸಬೇಕು ಎಂದು ನಿಶ್ಚಯಿಸುವುದಕ್ಕೂ 'ಚಾಯ್ ಚಾಯ್' ಎಂದು ವಯಸ್ಸಾದವರೊಬ್ಬರು ಟೀ ಹುಡುಗನನ್ನು ಕರೆಯುವುದಕ್ಕೂ ಸರಿಹೊಂದಿತು!

**(ಮಧುಬಿಂದುಗಳು, ಹಾಸ್ಯಬ್ರಹ್ಮ ಟ್ರಸ್ಟ್, ೨೦೧೧)**

## ೧೯. ಹೆಂಡತಿ ತವರು ಮನೆಗೆ ಹೋದಾಗ

**- ಶಾಂತಾದೇವಿ ಹಿರೇಮಠ**

'ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೇ ಕೋಟಿ ರೂಪಾಯಿ, ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನಾನೂ ಒಬ್ಬ ಸಿಪಾಯಿ' ಗಂಡ ಸಿಪಾಯಿಯಾದರೂ ಪರವಾಯಿಲ್ಲ. ಹೆಂಡತಿ ಮನೆಯಲ್ಲಿ ಇರಲೇಬೇಕು. ಆಕೆ ತವರು ಮನೆಗೆ ಹೋಗಬಾರದು. ಗಂಡನಿಗೆ ಹೆಂಡತಿ ಒಂದು ರೀತಿಯಿಂದ 'ಹೆಂಡ' ಇದ್ದ ಹಾಗೆ, ಗಂಡಹೆಂಡತಿ ಅನ್ಯೋನ್ಯವಾಗಿರಲಿ, ಇಲ್ಲ ಜಗಳವಾಗುತ್ತ ಇರಲಿ, ಹೆಂಡತಿ ಮಾತ್ರ ಗಂಡನ ಮನೆಯಲ್ಲಿಯೇ ಇರಬೇಕು. ಇದಕ್ಕೆ ವಯಸ್ಸಿನ ನಿರ್ಬಂಧವೇನೂ ಇಲ್ಲ. ಬಡವ-ಬಲ್ಲಿದ, ಅಶಿಕ್ಷಿತ-ಸುಶಿಕ್ಷಿತ, ಅಧಿಕಾರಿ ಎಂದೇನೂ ಹೊರತಾಗಿರುವುದಿಲ್ಲ. ಎಲ್ಲರೂ ಒಂದೇ.

ಹೆಂಡತಿ ತವರು ಮನೆಗೆ ಹೋದರೆ, ಒಬ್ಬೊಬ್ಬರ ರೀತಿ-ನೀತಿ ತರಹೇವಾರಿಯಾಗಿರುತ್ತದೆ. ಗಂಡ-ಹೆಂಡತಿ ಇಬ್ಬರೇ ಇದ್ದರಂತೂ ಮುಗಿದೇ ಹೋಯ್ತು. ಹೆಂಡತಿ ತವರು ಮನೆಗೆ ಹೋದ ಕೂಡಲೇ ಮರುದಿನ ಟೆಲಿಗ್ರಾಂ. ಅಂದು ಸಂಜೆಯೇ ಹಿಂದಿರುಗಿ ಬಂದರೆ ಸರಿ, ಇಲ್ಲವಾದರೆ ಟೆಲಿಗ್ರಾಂ ಮೇಲೆ ಟೆಲಿಗ್ರಾಂ, ತವರು ಮನೆಯವರಿಂದ ಪೂಜೆ ಬೇರೆ, 'ಜಗತ್ತಿನಲ್ಲಿ ಯಾರಾದರು ಮದುವೆಯಾಗಿರುವರಾ? ಇಲ್ಲ ಈತನೇ ಮದುವೆಯಾಗಿರುವನಾ? ಒಂದೆರಡು ದಿನ ಹೋಟಲ್ಲಿನಲ್ಲಿ ಊಟ ಮಾಡಿದರೆ ಏನಾಗುತ್ತದೆ...?' ಎಂದು ಮಗಳಿಗೆ ಮಂಗಳಾರತಿ ಎತ್ತಿ ಕಳಿಸಿ ಬಿಡುತ್ತಾರೆ. ಕಣ್ಣೀರು ಹಾಕಿಕೊಂಡೇ ಆಕೆ ಬರುತ್ತಾಳೆ. ಕೆಲವರಂತೂ ಹೆಂಡತಿಯನ್ನು ಕಳಿಸುವಾಗಲೇ ಇಂತಹ ದಿನ ಇಂತಹ ಸಮಯದಲ್ಲಿಯೇ ಬರಬೇಕು ಎಂಬ ಕರಾರಿನ ಮೇಲೆಯೇ ಗೆರೆ - ಅದೂ ಲಕ್ಷಣ ರೇಖೆ ಎಳೆದೇ ಕಳಿಸಿ ಕೊಡುತ್ತಾರೆ. ತಿಳಿವಳಿಕೆ ಇದ್ದರೆ, ಇಲ್ಲ ಗಂಡನ ಭಯದಿಂದ ಆದರೂ ಗೆರೆ ದಾಟದೆ ಬಂದೇ ಬಿಡುತ್ತಾಳೆ.

ಗಂಡನ ಮನೆಯೆಂದರೆ ತಂದೆ-ತಾಯಿ, ಅಣ್ಣ-ತಮ್ಮ ಎಲ್ಲರೂ ಇರುತ್ತಾರೆ. ಆದಾಗಿಯೂ ಹೆಂಡತಿಯನ್ನು ಕಳಿಸುವಾಗ ಆತನ ಮುಖ ನೋಡಬೇಕು. ಮುಖದಲ್ಲಿ ರಕ್ತವೇ ಇಂಗಿ ಹೋದಂತಾಗಿ 'ಪೇಲವನಾಗಿ' ಇರುತ್ತಾನೆ. ನೋಡಿದವರಿಗೆ ಏನಾಗಿದೆ ಎಂದು ಗಾಬರಿಯಾಗಬೇಕು. ಈ ಮಾತನ್ನು ತಂದೆ-ತಾಯಿಗಳಿಗೆ ಕೇಳಿದರೆ ಅವರೇ ನಿಜಸ್ಥಿತಿ ಹೇಳುತ್ತಾರೆ. ಊಟಕ್ಕೆ ಏನೂ ಚಿಂತೆಯಿಲ್ಲ. ಇದು ಒಂದು ಹೆಂಡತಿಯ ಮಹಿಮೆ ಎನ್ನಬೇಕು.

ಇನ್ನೊಬ್ಬರು ಹೆಂಡತಿ ತವರು ಮನೆಗೆ ಹೋದ ದಿನವೇ, ಸಂಜೆಗೇ ಮಾವನ ಮನೆಗೆ ಪ್ರಯಾಣ. ಆಗ ತಂದೆ ತಾಯಿಗಳಿಗೆ ತಬ್ಬಿಬ್ಬು, ಗಂಡನಿಗೆ ಹೇಳಿ ಬಂದಿದ್ದಿಯೋ ಇಲ್ಲ, ಹಾಗೆಯೇ ಬಂದಿದ್ದೀಯೋ ಎಂದು. ಅಳಿಯ ನಕ್ಕಾಗ ತಿಳಿಯಿತು. ಮರುದಿನವೇ ಇಬ್ಬರೂ ವಾಪಸು. ಇದೇ ರೀತಿಯೇ ಅವರು ಕೊನೆವರೆಗೆ ನಡೆಸಿಕೊಂಡು ಬಂದಿದ್ದಾರೆ. ತವರು ಮನೆಯವರಿಗೂ ಇದು ಮಾಮೂಲು ಕೇಸು.

ಗಂಡ-ಹೆಂಡತಿ ಅನ್ಯೋನ್ಯವಾಗಿರುತ್ತಾರೆ. ಹೆಂಡತಿ ತವರು ಮನೆಗೆ ಹೋಗ್ತಿನಿ ಎಂದರೆ ಮುಗಿಯಿತು. ಮಹಾಭಾರತ ಯುದ್ಧ ಆರಂಭ, ಏಕೆಂದರೆ ಗಂಡ, ಹೆಂಡತಿಯನ್ನು ಖರೀದಿ ಮಾಡಿರುವ ಹಾಗೆ. ನಿಜಕ್ಕೂ ನೋಡಿದರೆ ಲಕ್ಷಾನುಗಟ್ಟಲೆ ವರದಕ್ಷಿಣೆ ಕೊಟ್ಟು ಹೆಂಡತಿಯೇ ಗಂಡನನ್ನು ಖರೀದಿಸಿರುತ್ತಾಳೆ. ಆದರೆ ಗಂಡು ಎನ್ನುವ ಶಬ್ದವೇ ದೊಡ್ಡದಲ್ಲವೇ! ಜೊತೆಗೆ ಗಂಡ ಕೂಡ. ಇವರಲ್ಲೂ ಕೆಲವರು 'ಒಳ್ಳೆಯ' ಗಂಡಂದಿರೂ ಇರುತ್ತಾರೆ. ಪಾಪ! ವರ್ಷಾನುಗಟ್ಟಲೇ ತಮ್ಮ ಮನೆಯ ಕೆಲಸ ಮಾಡಿ ದಣಿದಿರುತ್ತಾಳೆ. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಬರಲಿ, ಎಂದು ಕಳಿಸುತ್ತಾರೆ. ತಾವೂ ಚೆನ್ನಾಗಿ ಸಂತೋಷವಾಗಿರುತ್ತಾರೆ. ಇವರ ಬಗ್ಗೆ ಚಿಂತೆಯಿಲ್ಲ. ಏಕೆಂದರೆ ಮನೆ ಅಡಿಗೆ, ಊಟ ಎಲ್ಲ ಸಾಕಾಗಿದೆ. ಊರಲ್ಲಿರುವ ಎಲ್ಲ ಹೋಟೆಲ್‌ಗಳ, ಖಾನಾವಳಿಯ ರುಚಿ ನೋಡಬೇಕು ಎನ್ನುವವರೂ ಇರುತ್ತಾರೆ. ಹಾಗೇ (ತಮಾಷೆಯಾಗಿ ಏನು ಹೇಳುತ್ತಾರೆ ಗೊತ್ತೇ?! 'ಮನೆಯಲ್ಲಿ ಹೆಂಡತಿ ಕೂಡಾ ಹೊಟ್ಟೆ ತುಂಬಾ ಚೆನ್ನಾಗಿ ಊಟಕ್ಕೆ ನೀಡುವುದಿಲ್ಲ. ಈ ಹೋಟೆಲ್ ಮಾಣಿ ಹೆಂಡತಿಗಿಂತಲೂ ಚೆನ್ನಾಗಿ ಊಟ ಮಾಡಿಸುತ್ತಾನೆ. ಹೆಂಡತಿ ಯಾಕೆ ಬೇಕು' ಎಂದಾಗ ಎಲ್ಲರೂ ನಕ್ಕದ್ದೇ ನಕ್ಕದ್ದು. ಇನ್ನು ಕೆಲವರು ಯಾವ ಪಂಚಾಯಿತಿ ಚಿಂತೆ ಬೇಡವೆಂದು ಗಂಡ ಹೆಂಡತಿ ಕೂಡಿಯೇ ರಜಾ ಮಜಾ ಅನುಭವಿಸಿ, ಹೋಗಿ ಬಂದು ಬಿಡುತ್ತಾರೆ.

ಇನ್ನೂ ಹೊಸದಾಗಿ ಮದುವೆಯಾದವರಂತೂ ತವರು ಮನೆಯವರು ಹೇಳಿದ ಕೂಡಲೇ ಹೆಂಡತಿ ಜೊತೆಗೆ ತಾವೂ ಹೋಗಿ ಬಿಡುತ್ತಾರೆ. ಇಲ್ಲಿ ಬೇಕಾದಷ್ಟು ಕೆಲಸವಿರಲಿ, ನೌಕರಿಗೆ ರಜೆಯೇ. ಆದರೆ ಬೇರೆಯವರು ಎಲ್ಲಿಗಾದರೂ ಬರೀಯಾ ಎಂದು ಕರೆದರೆ ರಜೆ ಇರುವುದಿಲ್ಲ. ಆದರೆ ಹೆಂಡತಿಯೊಂದಿಗೆ, ಅದೂ ಆಕೆಯ ತವರು ಮನೆಗೆ ಹೋಗಲು ಮಾತ್ರ ಕೇಳಿದಾಗೆಲ್ಲ ರಜೆಗಳಿರುತ್ತವೆ. ಇನ್ನೊಬ್ಬರು ದೊಡ್ಡ ಕೆಲಸದಲ್ಲಿರುತ್ತಾರೆ. ಮನೆಯಲ್ಲಿ ಯಾರೂ ಇರುವುದಿಲ್ಲ. ಹೆಂಡತಿ ಮಕ್ಕಳೂ ಅಷ್ಟೇ, ಸ್ವಾಭಾವಿಕವಾಗಿ ಹೋಗುವಂತೆ ಅದೂ ತವರು ಮನೆ ಸಮೀಪವಿರುತ್ತದೆ, ಹೋಗುತ್ತಾಳೆ. ಆಗ ಆತನ ಮುಖ ಕಮಲ ನೋಡಬೇಕು. ಪಂಜರದ ಪಕ್ಷಿ ಹೊರಗೆ ಬಿಟ್ಟಾಗ ಇರುವಂತೆ ಆನಂದವಾಗಿ

ಹಾರಾಡುತ್ತಾನೇನೋ ಅನ್ನುವ ಹಾಗೆ ಇರುತ್ತಾರೆ. ಅಂದರೆ ಐದಾರು ಜನ ಫ್ರೆಂಡ್ಸ್ ಮನೆಗೆ ರಾತ್ರಿ ಹೊತ್ತು ಹಾಜರ್. ಊಟ, ತಿಂಡಿ ತರಿಸಿಕೊಂಡು ಭಜನೆ



ಆಟ ಆಡಿಕೊಂಡು ಇರುತ್ತಾರೆ. ಮೂರಾಲ್ಕು ದಿನ ಹಾಯಾಗಿ ಕಾಲ ಕಳೆಯುತ್ತಾರೆ. ತಿರುಗಿ ಹೆಂಡತಿ ಮಕ್ಕಳು ಬಂದಾಗ ಅವರ ಮುಖ ಮೊದಲಿನಂತೆ ಬಾಡಿಕೊಂಡಿರುತ್ತದೆ. ಇಂತಹವರು ಹೆಂಡತಿ ತವರು ಮನೆಗೆ ಹೋಗುವುದನ್ನೇ ಕಾಯ್ದುಕೊಂಡಂತೆ ಇರುತ್ತಾರೆ.

ಇನ್ನು ಕೆಲವರು ಹೇಳಿದ ಸಮಯದಲ್ಲಿ ಬಂದರೆ ಜಗಳಾಡುವುದಿಲ್ಲ. ಬರದಿದ್ದಲ್ಲಿ ನಾಲ್ಕು ಏಟು ಕೊಡುವುದು ಹಾಗೂ ನಾಲ್ಕೈದು ದಿನ ಮಾತು ಬಿಡುವುದು... ಇಷ್ಟೇ ಅಲ್ಲವೇ ಹೀಗೆಂದು ಕೆಲವರು ತವರು ಮನೆಯಲ್ಲಿ ಪಟ್ಟಾಗಿ ಕುಳಿತು ವಾಪಸು ಬರುತ್ತಾರೆ. ಒಟ್ಟಾರೆ ಕುಟುಂಬದಲ್ಲಿ ಹೆಂಡತಿ ಇಲ್ಲದಿದ್ದರೆ ಅವರ ಜೀವನ ಏಕಾಂಗಿ. 'ನನಗೆ ಯಾರೂ ಇಲ್ಲ, ಪರದೇಶಿ' ಎಂದು ಭಾವಿಸಿಕೊಂಡಿರುತ್ತಾರೆ. ಏಕೆಂದರೆ ಗಂಡನಿಗೆ ಒಂದೇ ಮನೆ, ಹೆಂಡತಿಗಾದರೆ ಎರಡು ಮನೆಗಳು. ಇದರ ಅನುಭವ ಎಲ್ಲರಿಗೂ ಅನುಭವ ವೇದ್ಯವಾಗಿರುವುದಲ್ಲವೇ?

**(ಮಾತುಕತೆ', ಕುಕ್ಕೆ ಶ್ರೀ ಪ್ರಕಾಶನ, ಬೆಂಗಳೂರು, ೨೦೦೧)**

## ೧೦. ದೇವರ ಹುಡುಕಾಟದಲ್ಲಿ

**- ವಿಜಯಲಕ್ಷ್ಮಿ ಕೆ.ಎಂ.**

ದೇವರು ಎಂಬುದು ಮನುಷ್ಯನ ಕಲ್ಪನೆಯಷ್ಟೆ. ಅದರಿಂದ ಅವನ, ಅಲಂಕಾರ, ಆಕಾರ, ಉಡುಪು, ಊಟ, ಬಳಸುವ ಆಯುಧಗಳು, ಪೂಜೆ, ಪುರಸ್ಕಾರದ ವಿಧಾನಗಳೆಲ್ಲವೂ ಅವರವರ ಅರಿವಿಗೆ ತಕ್ಕಂತೆ ಇರುತ್ತದೆ. ತಂತಮ್ಮ ಧರ್ಮ ಸಂಸ್ಕೃತಿ, ಆಚಾರ, ವಿಚಾರಗಳ ಅರಿವಿನ ಹಿನ್ನೆಲೆಯಲ್ಲಿ, ತಮ್ಮ ತಮ್ಮ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ, ಮನುಷ್ಯ ತನ್ನ ದೇವರನ್ನು ಸೃಷ್ಟಿಸಿಕೊಳ್ಳುತ್ತಾನೆ. ಆದ್ದರಿಂದಲೇ ಅವರವರ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕಂಚು, ಹಿತ್ತಾಳೆ, ಚಿನ್ನ, ಬೆಳ್ಳಿ, ಕಲ್ಲು ಮುಂತಾದ ವಿವಿಧ ಲೋಹಗಳಲ್ಲಿ ಮತ್ತು ಶಿಲೆಗಳಲ್ಲಿ ಅಂದವಾದ ದೇವರ ವಿಗ್ರಹಗಳು ಸೃಷ್ಟಿಯಾಗುತ್ತವೆ. ತಮ್ಮ ಬೇಡಿಕೆಗಳನ್ನು ಮಂಡಿಸಲು, ಆಸೆಗಳನ್ನು ಈಡೇರಿಸಿಕೊಳ್ಳಲು, ಮನಸ್ಸು ಹಗುರಾಗಿಸಿಕೊಳ್ಳಲು, ಅಳುಕುವ ಮನಸ್ಸಿಗೆ ಧೈರ್ಯ ತುಂಬಿಸಿಕೊಳ್ಳಲು, ಯಾರಾದರೊಬ್ಬರು ಬೇಕಲ್ಲ? ಮನುಷ್ಯನ ಆರೋಗ್ಯವನ್ನು ಸದಾ ಸುಸ್ಥಿತಿಯಲ್ಲಿಡಲು ಈ ಕ್ರಿಯೆಗಳು ಅತ್ಯಗತ್ಯ. ಅದಕ್ಕಾಗಿ ಮನುಷ್ಯ ಕಲ್ಪಿಸಿಕೊಂಡ ಅಗೋಚರ ಶಕ್ತಿಯೇ 'ದೇವರು'.

ಯಾರಿಲ್ಲದಿದ್ದರೂ ತಮ್ಮೊಂದಿಗೆ ದೇವರೊಬ್ಬ ಇದ್ದಾನೆ ಎಂಬ ಕಲ್ಪನೆಯೇ ಸಾಕು ಅಂತಃಶಕ್ತಿಯನ್ನು ಮೇಲೆತ್ತಲು ಸಾಧ್ಯ. ಅಸಾಧಾರಣ ಧೀಶಕ್ತಿಯ ಅಸಾಮಾನ್ಯ ಸಾಧಕರಿಗೆ ಮಾತ್ರ ಈ ವಿಗ್ರಹ-ದೇವರನ್ನು ಒಲಿಸಿಕೊಳ್ಳಲು ಬರುವುದಿಲ್ಲ. ಅಂತಹ ಅಸಾಧಾರಣ ಜನರ ಸಂಖ್ಯೆ ಬಹಳ ಕಡಿಮೆ. ಸಾಮಾನ್ಯರಿಗೆ ಹೆಜ್ಜೆ ಹೆಜ್ಜೆಗೂ ಒಬ್ಬ ದೇವರು ಬೇಕೇ ಬೇಕು.

ನಮ್ಮ ದೇಶಕ್ಕೆ ವಿದೇಶೀಯರು ಬರುವ ಎಷ್ಟೋ ಶತಮಾನಗಳ ಮೊದಲೇ ರಾಮ, ಕೃಷ್ಣ, ವಿಷ್ಣು, ಬ್ರಹ್ಮ, ಮೊದಲಾದ ಮಾದರಿ ದೇವರುಗಳ ಸೃಷ್ಟಿಯಾಗಿ ಬಿಟ್ಟಿದ್ದರಿಂದ ಪ್ಯಾಂಟು, ಶರಟು, ಲುಂಗಿ ಪೈಜಾಮ, ಚೂಡಿದಾರಗಳು ದೇವರ ಉಡುಪುಗಳಾಗದೇ, ಅಚ್ಚುಕಟ್ಟಾದ ನೆರಿಗೆಗಳ ಜರಿಯ ಅಂಚಿನ ಪಂಚೆ, ಸೀರೆ, ಜರಿ ರವಕೆ

ಒಡವೆಗಳೇ, ವಸ್ತ್ರ ಉಡುಪು-ಅಲಂಕಾರ ನಮ್ಮ ದೇವರುಗಳಿಗೆ. ಶಂಖ, ಚಕ್ರ, ಬಿಲ್ಲು ಬಾಣ ಇತ್ಯಾದಿಗಳೇ, ದೇವ ದೇವತೆಗಳ ಮಾದರಿ ಆಯುಧಗಳಾಗಿ ಈಗಲೂ ಉಳಿದಿವೆ. ಪಾಪ ಗಣಪತಿ ಒಬ್ಬ ಮಾತ್ರ ಇಂದಿನವರ ಕೈಲಿ ಸಿಕ್ಕಿ ಹಾಕಿಕೊಂಡು, ಪೋಲಿಸ್, ಖೈದಿ, ವೈದ್ಯ, ವಿದ್ಯಾರ್ಥಿ, ನಟ, ಸಾಹಿತಿ, ಕ್ರೀಡಾಪಟು, ಇತ್ಯಾದಿ ವೇಷ- ಭೂಷಣಗಳಲ್ಲಿ ಅವತರಿಸಿ, ದೈವತ್ವವನ್ನೇ ಕಳೆದುಕೊಳ್ಳುವ ಸ್ಥಿತಿಗೆ ತಲುಪಿದ್ದಾನೆ. 'ಜಲ ಜಲ ಜಲಜಾಕ್ಷಿ ಮಿನ ಮಿನ ಮಿನ ಮೀನಾಕ್ಷಿ ಬಾರೇ', 'ಕಲ್ಪನಾ.., ಕಲ್ಪನಾ



ರೂಪರಾಶಿ' ಎಂಬಿತ್ಯಾದಿ ಕುಣಿದು, ಕಿರುಚಿ ಹೇಳುವ ಹಾಡುಗಳನ್ನು ಈ ಬ್ರಹ್ಮಚಾರಿ ಮೌನವಾಗಿ ಕೇಳಿಸಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ ಅವನಿಗೆ.

ಇತ್ತೀಚಿನ ಕೆಲವು ಜ್ಞಾನಿಗಳು ಮತ್ತು ಮನದ ನೆಮ್ಮದಿಗೆ ದಾರಿ ತೋರುವ ಪ್ರವಚನಕಾರರು, ಸನ್ಯಾಸಿಗಳಂತೆ ಕಾವಿ ಧರಿಸದೆ, ಸಾಮಾನ್ಯ ಜನರಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳದೆ, ಅಧ್ಯಾತ್ಮಿಕ ಹಾಗೂ ಆತ್ಮ ಜ್ಞಾನವನ್ನು ಜನರಿಗೆ ಬೋಧಿಸ ತೊಡಗಿದ್ದಾರೆ. ಒಪ್ಪುವ ಸಂಗತಿಯೇ. ಇದೇ ರೀತಿ, ಬದಲಾಗುವ ಕಾಲಕ್ಕನುಗುಣವಾಗಿ, ಇತರ ದೇವರುಗಳಿಗೂ ಮುಂದೊಮ್ಮೆ ಇಂದಿನ ಜನರ ಉಡುಪು ತೊಡಪುಗಳು ಬರಬಹುದೇ? ಗೊತ್ತಿಲ್ಲ.

ಬಾಲ್ಯದಲ್ಲಿ ದೇವರ ಬಗ್ಗೆ ಇದ್ದುದು ಒಂದೇ ಭಾವನೆ. ಅವನು ಸರ್ವವ್ಯಾಪಿ ಎಂದಿದ್ದರೂ, ದೇವರಿಗೂ ಒಂದು ಮನೆ, ಊರು, ವಾಸ ಸ್ಥಾನ ಇದೆ ಎಂಬ ನಂಬಿಕೆ. ದೇವರ ಹೆಸರು ಹೇಳಿದ ತಕ್ಷಣ ಯಾರೇ ಆದರೂ ಆಕಾಶದತ್ತ ಕೈ ತೋರಿ ಮಾತಾಡುತ್ತಿದ್ದುದರಿಂದ ಅವನ ಆ ಮನೆ, ಮೇಲಿನ ಆಕಾಶದಲ್ಲಿರುವ ಸ್ವರ್ಗಲೋಕದಲ್ಲಿದೆ ಎಂಬುದು ನಮ್ಮ ಆಗಿನ ಭಾವನೆ.

ನಾವು ಒಟ್ಟು ಎಂಟು ಮಕ್ಕಳು, ನಮ್ಮ ತಂದೆ ತಾಯಿಗಳಿಗೆ, ಪ್ರತಿದಿನ ಸಂಜೆ ನಸುಗತ್ತಲೆಯಾದೊಡನೆ ನಮ್ಮ ತಾಯಿಯ ಆದೇಶದ ಪ್ರಕಾರ, ಎಲ್ಲರೂ ಸೇರಿ ಒಂದು ಘಂಟೆ ದೇವರ ಭಜನೆ ಮಾಡುತ್ತಿದ್ದೆವು. ಯಾರದೋ ಕಾಲರ್ ಎಳೆಯುವುದು, ಕೈ ಕೆರೆಯುವುದು, ಅಮ್ಮನಿಗೆ ಗೊತ್ತಾಗದಂತೆ ಪಕ್ಕದಲ್ಲಿದವನಿಗೆ ಹೊಡೆಯುವುದು, ಹೇಳುವ ಭಜನೆಯನ್ನು ಜೋರಾಗಿ ದನಿ ಎತ್ತರಿಸಿ ಹೇಳಿ ಸಿಟ್ಟು ಪ್ರದರ್ಶಿಸುವುದು... ಇತ್ಯಾದಿ ಕ್ರಿಯೆಗಳು ಏನೇ ಇರಲಿ, ಭಜನೆ ಮತ್ತು ಶ್ಲೋಕಗಳಂತೂ ನಿಲ್ಲದೆ ನಿರಂತರವಾಗಿ ಬಾಯಿಂದ ಹೊರ ಬರುತ್ತಿದ್ದವು. ವಿಷ್ಣು, ಶ್ರೀಮನ್ನಾರಾಯಣ, ಈಶ್ವರ,

ಶ್ರೀರಾಮ, ಶ್ರೀಕೃಷ್ಣ... ಈ ಎಲ್ಲ ದೇವರುಗಳಿಗಾಗಿಯೂ ಇದ್ದ ಉದ್ದುದ್ದದ ಭಜನೆಗಳೇ ಅಲ್ಲದೇ, ಸಣ್ಣ ಸಣ್ಣ ಶ್ಲೋಕಗಳನ್ನು, ಮರಾಠಿಯ ಅಭಂಗಗಳನ್ನು, ಬಹು ದಿನದಿನಕ್ಕೆ ಬದಲಿಸಿ, ರಾತ್ರಿ ಏಳರಿಂದ ಎಂಟು ಗಂಟೆಯವರೆಗೆ ಹೇಳುತ್ತಿದ್ದೆವು. ಆರತಿ, ಸಾಷ್ಟಾಂಗ ನಮಸ್ಕಾರ, ತೀರ್ಥ (ತುಳಸೀ ನೀರು ಅಥವಾ ಹಾಲು), ಪ್ರಸಾದ (ಶುಂಠಿಸಕ್ಕರೆ ಅಥವಾ ಪುಟಾಣಿಸಕ್ಕರೆ) ವಿತರಣೆಯ ನಂತರವೇ ನಮಗೆಲ್ಲ ಬಿಡುಗಡೆ. ಈ ಬಿಡುಗಡೆಗೆ ಮೊದಲು ಶಾಲೆಯ ಚಟುವಟಿಕೆಗಳು, ಸಂಜೆಯ ಕುಣಿತ, ಆಟಓಟಗಳ ಶ್ರಮವೆಲ್ಲ ಆಕಳಿಕೆಗಳಾಗಿ, ತೂಕಡಿಕೆಗಳಾಗಿ, ಅರೆ ಬರೆ ನಿದ್ದೆಯೂ ಆಗಿ ನಮ್ಮ ಮೇಲೆ ಅದೆಷ್ಟು ದಾಳಿ ಮಾಡುತ್ತಿದ್ದುವೆಂದರೆ, ಎಷ್ಟೋ ಸಲ ನಾವು ಏನು ಹೇಳುತ್ತಿದ್ದೇವೆ ಎಂಬುದನ್ನು ತಿಳಿಯಲು ಇವು ಬಿಡುತ್ತಿರಲಿಲ್ಲ. ಈಗಿನ ಮಕ್ಕಳು ಪಾಪ ಆಡಲೂ ಪುರುಸೊತ್ತಿಲ್ಲದೆ ಓದುವುದನ್ನು ನೋಡುವಾಗ, ನಾವು ಚಿಕ್ಕಂದಿನಲ್ಲಿ ಓದುವುದಕ್ಕಿಂತ ಭಜನೆಯನ್ನೇ ಹೆಚ್ಚು ಹೇಳುತ್ತಿದ್ದೆವೋ ಏನೋ ಎನಿಸುತ್ತದೆ. ದೇವರ ಬಗ್ಗೆ ನಮಗೆ ಹಿರಿಯರು ಹೇಳುತ್ತಿದ್ದ ಕತೆಗಳೂ ಬೇಕಾದಷ್ಟು, ಅಲ್ಲದೆ ವರ್ಷಕ್ಕೊಮ್ಮೆ ಯುಗಾದಿಯ ಪಾಡ್ಯದಿಂದ



ದಶಮಿಯ ದಿನದವರೆಗೆ ನಮ್ಮೂರಾದ ದಾವಣಗೆರೆಯ ಮೂರು ದೇವಸ್ಥಾನಗಳಲ್ಲಿ ಹರಿಕಥೆ ನಡೆಯುತ್ತಿತ್ತು. ಆಗ ದೊರಕುತ್ತಿದ್ದ ಬಹುಅಪರೂಪದ ಮನರಂಜನೆಗಳಲ್ಲಿ ಇದೂ ಒಂದು. ಉಪಕಥೆಗಳೊಡನೆ ವರ್ಣಿಸಿ, ವಿವಿಧ ರಾಗಗಳಲ್ಲಿ, ವಿಧವಿಧ ವೇಗಗಳಲ್ಲಿ ಹಾಡಿ, ದಿನಕ್ಕೊಂದು ದೇವರ ಕಥೆಯನ್ನು ಹರಿದಾಸರು ಹೇಳುತ್ತಿದ್ದರೆ, ಹಾಲಿನ ಚಾಕೋಲೇಟ್ ಮೆಲ್ಲುವಷ್ಟು ಸವಿ ಸವಿಯಾಗಿ ಕಿವಿಯಲ್ಲಿ ಹೀರಿ, ಕಣ್ಣು ಬಾಯಿ ಅರಳಿಸಿ ಕುಳಿತು, ಆ ಕಥೆಗಳನ್ನು ಒಳಗೆ ಇಳಿಸಿ ಕೊಳ್ಳುತ್ತಿದ್ದೆವು. ನಂತರದಲ್ಲಿ ನಾವು ಮಕ್ಕಳು, ಹಿಂದಿನ ದಿನದ ಕಥೆಯನ್ನು ತುಣುಕು ತುಣುಕಾಗಿ ನೆನಪಿಸಿಕೊಂಡು, ಪರಸ್ಪರ ಹಿಗ್ಗಿ ಹಂಚಿಕೊಳ್ಳುತ್ತಿದ್ದುದೇ ಅಲ್ಲದೇ, ದೇವರುಗಳ ಆ ಸ್ವರ್ಗ ಪ್ರದೇಶಕ್ಕೆ ನಮ್ಮ ಮನಸ್ಸನ್ನು ಕಳಿಸಿ ಒಂದು ಸುತ್ತು ಸುತ್ತಾಡಿಯೂ ಬರುತ್ತಿದ್ದೆವು. ಅದರಿಂದಲೇ ದೇವರನ್ನು ನೋಡುವ ಕುತೂಹಲ ಆಗಾಗ ನಮ್ಮೊಳಗೆ ಇಣುಕುತ್ತಿತ್ತು.

ಆ ದೇವರ ದರ್ಶನಕ್ಕೆ ನಮ್ಮಮ್ಮನ ಒಂದು ಹೇಳಿಕೆ ಸುಲಭದ ದಾರಿಯನ್ನು ತೋರಿಸಿತ್ತು ಒಮ್ಮೆ. 'ರಾಮನ ಭಂಟ ಹನುಮಂತ, ಚಿರಂಜೀವಿ, ಈಗಲೂ ಬದುಕಿದ್ದಾನೆ. ಎಲ್ಲೆಲ್ಲಿ ಹರಿಕಥೆ ನಡೆದರೂ, ಅಲ್ಲಿಗೆಲ್ಲ ಈಗಲೂ ಎಲ್ಲರಿಗಿಂತ ಮೊದಲು ಬರುತ್ತಾನಂತೆ. ಎಲ್ಲರಿಗಿಂತ ಕೊನೆಗೆ ಅಲ್ಲಿಂದ ತೆರಳುತ್ತಾನಂತೆ. ಅದರಿಂದ ರಾಮನ ಭಕ್ತರಿಗೆ, ಹನುಮನ ಭಕ್ತರಿಗೆ ಈಗಲೂ ಅವನನ್ನು ನೋಡಲು ಅವಕಾಶವಿದೆ ಎಂಬುದು. ನಾವು ಸದಾ ದೇವರು, ಉಪವಾಸ, ಹರಿಕಥೆ, ಭಜನೆ, ಪ್ರಸಾದಗಳಲ್ಲೇ ದಿನ ಕಳೆಯುತ್ತಿದ್ದವರು ಅವನ ದರ್ಶನ ಭಾಗ್ಯವನ್ನು ಬಿಡುತ್ತೇವೆಯೇ? ಅಮ್ಮ ಹೇಳುವ ಹೊತ್ತಿಗೆ ಆಗಲೇ ಹರಿಕಥೆ ಶುರುವಾಗಿ ಆಗಲೇ ಐದು ದಿನಗಳು ಕಳೆದಿದ್ದವು. ಛೇ! ಮೊದಲೇ ಅಮ್ಮ ಈ ಮಾತು ಹೇಳಿದ್ದರೆ, ಕಳೆದ ಆ ಐದು ದಿನಗಳೂ ವ್ಯರ್ಥವಾಗದಂತೆ ಮಾರುತಿರಾಯನನ್ನು ಕಂಡು ಮಾತಾಡಿಸಿ, ನಿತ್ಯ ದೇವರ ಸಾನಿಧ್ಯ-ಸುಖವನ್ನು ಅನುಭವಿಸಬಹುದಿತ್ತಲ್ಲ? ಅವರ ಸ್ವರ್ಗ ಲೋಕದ ವರ್ಣನೆಗಳನ್ನು ಕೇಳಿ ಆನಂದಿಸಬಹುದಿತ್ತಲ್ಲ?

ಎಂದು ನಾನು ಮತ್ತು ನನ್ನ ತಮ್ಮ ಚೈತನ್ಯ ಬಹಳವೇ ಕರುಬಿದೆವು. ಮರುಘಳಿಗೆ ಆಶಾವಾದ. ಅರೆ! ಐದು ದಿನಗಳೇನು ಕಡಿಮೆಯೇ?

ಸರಿ. ನಮ್ಮ ಅತ್ಯಂತ ಆಪ್ತ ಗೆಳೆಯರಿಬ್ಬರಿಗೆ ಮಾತ್ರ ಈ ಬಗ್ಗೆ ತಿಳಿಸಿ, ಸನ್ನದ್ಧರಾದೆವು. ದೇವರ ದರ್ಶನದ ರಹಸ್ಯವನ್ನು ಎಲ್ಲರಿಗೂ ಬಹಿರಂಗಗೊಳಿಸಿದರೆ, ಮಕ್ಕಳ ದೊಡ್ಡದೊಂದು ಗುಂಪೇ ಜಮಾಯಿಸಿ ಹನುಮನನ್ನು ನೋಡಿ ಬಿಟ್ಟರೆ, ನಮ್ಮ ಹೆಚ್ಚುಗಾರಿಕೆ ಏನು ಉಳಿದೀತು? ಹನುಮನ ನಮ್ಮ ದಂಡು ನೋಡಿ ಹೆದರಿ ಮೇಲೆ ಹಾರಿ ಬಿಡಬಹುದು, ವಿಮಾನಕ್ಕೂ ಸಾಧ್ಯವಾಗದ, ಒಂದೇ ನೆಗೆತದಲ್ಲಿ ಮಹಾಸಮುದ್ರವನ್ನು ಛಂಗನೆ ಹಾರಿ ದಾಟಿದ ಮಹಾಮಹಿಮ ಹನುಮಂತ, ಬೃಹತ್ ಆಕಾರದ ರಾಕ್ಷಸರ ನಡುವೆ ಪುಟ್ಟ ಸುಂದರಿ ಸೀತೆಗೆ ಮುದ್ರಾ ಉಂಗುರುವನ್ನು ನೀಡಿದ ಸಂಶೋಧಕ ಹನುಮಂತ, ತನ್ನ ಬಾಲದಿಂದಲೇ ಕೋಟೆ ಕಟ್ಟಿಕೊಂಡು ಲಂಕೆಯನ್ನು ಸುಟ್ಟು ರಾವಣನ ಗರ್ವಭಂಗ ಮಾಡಿ ಮಹಾಶೂರ ಹನುಮಂತ, ಇಂಥ ದೇವರೇನು ಎಲ್ಲರಿಗೂ



ಸುಲಭದಲ್ಲಿ ಲಭ್ಯವಾಗುವ ಒಂದು ಲಘು ವಸ್ತುವೇ? ನಾನು, ನನ್ನ ತಮ್ಮ ಚೈತನ್ಯ ಮತ್ತು ನಮಗಿಂತ ಎರಡು ವರ್ಷ ದೊಡ್ಡವಳಾದ ಗೆಳತಿ ಹನ್ನೆರಡರ ವಯಸ್ಸಿನ ಸಾವಿತ್ರಿ, ಅವಳ ತಮ್ಮ ಶಂಕ್ರ, ಮನೆಯ ಹತ್ತಿರವೇ ಇದ್ದ ಬೃಹತ್ತಾದ ಆಲದ ಮರದ ಕೆಳಗೆ ಸಭೆ ಸೇರಿದೆವು. ಈ ರಹಸ್ಯ ವಿಷಯವನ್ನು ಅತಿ ಉದ್ವೇಗದಿಂದ ಶಬ್ದಗಳನ್ನು ಸರಾಗವಾಗಿ ಉಚ್ಚರಿಸಲಾಗದೆ ಬಿಕ್ಕುತ್ತ  ಚರ್ಚಿಸಿದೆವು. ನಮ್ಮನೆಯಿಂದ ಕೇವಲ ಒಂದು ಫರ್ಲಾಂಗ್‌ನಷ್ಟು ಹತ್ತಿರವಿರುವ, ರೈತರ ಬೀದಿಯ ಹಿಂದಿನ ಶ್ರೀರಾಮ ದೇವರ ದೇವಸ್ಥಾನಕ್ಕೆ, ಹರಿಕಥೆಯ ಆರಂಭಕ್ಕೆ ಒಂದು ಗಂಟೆ ಮುಂಚೆಯೇ ಹೋಗಿ ಹನುಮಂತನ ಆಗಮನ ಮತ್ತು ನಿರ್ಗಮನವನ್ನು ಗಮನಿಸಲು ನಿರ್ಧರಿಸಿದೆವು. ಹನುಮಂತನನ್ನು ಗುರುತಿಸಲು ಒಂದು ಸೂಚನೆಯೂ ನಮಗೆ ಅಮ್ಮನ ಮಾತಿನಲ್ಲಿ ಸಿಕ್ಕಿ ಬಿಟ್ಟಿತ್ತು. ಅದು, ಅವನು ತೀರ ಹಣ್ಣು ಹಣ್ಣು ಮುದುಕನ ವೇಷದಲ್ಲಿ ಬರುತ್ತಾನೆ' ಎಂಬುದು.

ಅಂದು ಷಷ್ಠಿ, 'ರಾಮಾಂಜನೇಯ ಯುದ್ಧ' ಅಂದಿನ ಹರಿಕಥೆ, ಎಂದ ಮೇಲೆ ನಮ್ಮಷ್ಟೇ ಆ ಹನುಮಂತನಿಗೂ ಈ ಕಥೆಯ ಬಗ್ಗೆ ಆಸಕ್ತಿ ಇದ್ದೇ ಇರುತ್ತದೆ ಎಂಬುದು ಖಾತ್ರಿ, ಹನುಮಂತ ಬಂದೇ ಬರುತ್ತಾನೆ, ದೇವರೊಬ್ಬನ ಭೇಟಿ ನಾವು ಮಾಡಿಯೇ ಮಾಡುತ್ತೇವೆ ಎಂಬ ಆಲೋಚನೆಯಲ್ಲೇ ಮೈ ಜುಂ ಎನ್ನುವಂಥ ರೋಮಾಂಚನ. ಸಂಜೆ ಆರೂವರೆ ಹರಿಕಥೆಯ ಪ್ರಾರಂಭಕ್ಕೆ ನಿಗಿದಿಸಿದ ಸಮಯ. ನಾವು ನಾಲ್ವರೂ ಐದೂವರೆಗೆ ಹೋಗಿ, ಪ್ರವೇಶ ದ್ವಾರದ ಬಳಿ ಹಾಸಿದ್ದ ಜಮಖಾನದ ಮೇಲೆ ಕುಳಿತೆವು. ದೇವಸ್ಥಾನದ ಬಾಗಿಲಿಗೂ ಈ ಕಾಂಪೌಂಡಿನ ಪ್ರವೇಶ ದ್ವಾರಕ್ಕೂ ನಡುವೆ ಮುನ್ನೂರು ಅಡಿಗಳಷ್ಟು ಅಂತರದಲ್ಲಿ ಜನರು ಆರಾಮವಾಗಿ ಕುಳಿತು ಕೇಳಲು ಅನುಕೂಲಕರವಾದ ವಿಶಾಲ ಬಯಲು. ಅಷ್ಟುದ್ದಕ್ಕೂ ಹಾಸಿದ ಏಳೆಂಟು ದೊಡ್ಡ ದೊಡ್ಡ ಜಮಖಾನಗಳು, ಕೊನೆಯ ಜಮಖಾನದ ಮೇಲೆ ನಾವು

ನಾಲ್ಕು ಮಕ್ಕಳು ಆಸೀನರಾಗಿ ಬಾಗಿಲನ್ನೇ ನೋಡುತ್ತ ಕುಳಿತೆವು. ಆದರೆ ಕುಳಿತ ಮೇಲೆ ಇನ್ನೊಂದು ವಿಷಯ ಕಾಡತೊಡಗಿತು. ದೇವಸ್ಥಾನದ ಬಲಬದಿಯಲ್ಲಿ ಇನ್ನೊಂದು ಸಣ್ಣ ಬಾಗಿಲಿದೆ. ಆ ಬದಿಗಿರುವ ಜನರು, ಆ ಕಿರು ಬಾಗಿಲಿನಿಂದಲೂ ಒಳ ಬರುತ್ತಿದ್ದರು. ಹನುಮಂತನ ಪ್ರವೇಶದ ಬಾಗಿಲು ಯಾವುದು? ಹೆಬ್ಬಾಗಿಲೇ? ಅಥವಾ ಆ ಸಣ್ಣ ಬಾಗಿಲೇ? ನಾವು ನಾಲ್ಕು ಜನರಿದ್ದೆವಲ್ಲ? ಇಬ್ಬರು ಆ ಬಾಗಿಲ ಕಡೆಗೆ ಇನ್ನಿಬ್ಬರು ಹೆಬ್ಬಾಗಿಲ ಕಡೆಗೆ ಕಣ್ಣು ನೆಟ್ಟರಾಯ್ತು ಎಂಬುದು ಈ ಸಮಸ್ಯೆಗೆ ಸುಲಭದಲ್ಲಿ ನಮಗೆ ಕಂಡ ಪರಿಹಾರ ಮಾರ್ಗ. ಯಾರೊಬ್ಬರೂ ಮಾತಾಡದೇ ಒಂದೇ ಸಮ ಎರಡೂ ಬಾಗಿಲುಗಳ ಕಡೆಗೆ ಕಣ್ಣು ನೆಟ್ಟು ನೋಡತೊಡಗಿದೆವು.

ಆದರೆ ಹತ್ತು ನಿಮಿಷವೂ ಸುಮ್ಮನೆ ಕೂತು ಕಾಯಲಾಗದ ನಮಗೆ ಕಣ್ಣು ಸೋತವು. ನಮ್ಮರಿವಿಲ್ಲದೆ ಕೋತಿ ಚೇಷ್ಟೆ ಆರಂಭಗೊಂಡಿತು. ಜಮಖಾನದ ತುದಿಯಲ್ಲಿ ಎಟುಕುವ ಮರಳಿನಲ್ಲಿ ಹನುಮನನ್ನು ಬೆರಳಿನಿಂದ ಕೊರೆದು ಕೈ ಮುಗಿದು ಕರೆಯ ತೊಡಗಿದೆವು. 'ಬೇಗ ಬಾ ಹನುಮಪ್ಪ' ಎಂದು. ಕೊರೆದ ಆಕಾರದ ಬಗ್ಗೆ



ಮಾತಾಡಿಕೊಂಡಿದ್ದು ಕೆಲವೇ ನಿಮಿಷ ಎಂಬುದು ನಮ್ಮ ಭಾವನೆ. ಆದರೆ ನಾವು ತಲೆ ಎತ್ತಿದಾಗ ಕಂಡದ್ದೇನು? ಯಾವ ಮಾಯದಲ್ಲೋ ಒಂದು ದೊಡ್ಡ ಗುಂಪೇ ದೇವಸ್ಥಾನದ ಒಳಗೆ ಜಮಾಯಿಸಿ ಬಿಟ್ಟಿದೆ. ತಕ್ಷಣವೇ ಓಡಿ ಒಬ್ಬೊಬ್ಬರ ಮುಂದೂ ನಿಂತು ಯಾರು ಎಲ್ಲರಿಗಿಂತ ಮುದುಕರು ಎಂಬುದನ್ನು ಗಮನಿಸುತ್ತಿರುವಾಗ 'ಏಯ್ ಹುಡುಗ್ರಾ ಹಿಂಗ್ಯಾಕ ಎಲ್ಲ ಮಕ ಮಕ ನೋಡ್ಕಂಡ್ ಅಡ್ಡಾಡ್ತಿದೀರಿಲ್ಲಿ. ಹೋಗ್ರಿ ಅತ್ಲಾಗೆ' ಎಂದು ಬೈಸಿಕೊಂಡರೂ ಅಲ್ಲಿದ್ದ ಯಾರೊಬ್ಬರೂ ಮುದಕರಲ್ಲದ್ದರಿಂದ ಬೇಸರ ಪಡದೆ ಹೊರಗೆ ಬಂದರೆ, ಹರಿದಾಸರು ನಿಲ್ಲುವ ಸ್ಥಳದ ಮುಂದೆ ಮತ್ತಷ್ಟು ಜನ, ಅಲ್ಲೂ ಅವರೆಲ್ಲರ ಮುಂದೆ ಹೋಗಿ ಮುಖಗಳನ್ನು ನೋಡುತ್ತಿರುವಾಗ, 'ಏಯ್ ಹುಡುಗ್ರಾ, ಹರಿದಾಸು ಬರೋ ಹೊತ್ತಾಯಿತು ಹೋಗಿ ಎಲ್ಲ. ಕಾಂಪೌಂಡಿನ ಆಚೆ ಹೋಗಿ ಆಡ್ಕೊಳ್ಳಿ ನಡೀರಿ' ಎಂದು ಬೈಸಿಕೊಂಡು ಹೊರ ಬರುವಷ್ಟರಲ್ಲಿ ಗುಂಪು ಗುಂಪಾಗಿ ಜನ ಒಟ್ಟಿಗೇ ಜಮಾಯಿಸತೊಡಗಿ ನಮ್ಮ ಹುಡುಕಾಟದ ಕೆಲಸ ವಿಫಲಗೊಂಡಿತು. ಆದರೆ ನಿರಾಶರಾಗ ಬೇಕಾಗಿರಲಿಲ್ಲ. ಹರಿಕಥೆ ಕಾರ್ಯಕ್ರಮ ಮುಗಿದ ಮೇಲೆ ಇನ್ನೊಂದು ಅವಕಾಶವಿತ್ತಲ್ಲ?

ಆದರೆ ಹರಿದಾಸರು ಅಂದು ಬಂದುದೇ ಬಹಳ ತಡವಾಗಿ, ಅಲ್ಲದೇ ಯಾರದೋ ಬೇಡಿಕೆಯನ್ವಯ, ಮಧ್ಯದಲ್ಲಿ, ಎರಡು ದೀರ್ಘ ಆಲಾಪಗಳ ಗಾಯನ ಸೇವೆ ಬೇರೆ. ಕಥೆ ಮುಗಿದಾಗ ದಿನಕ್ಕಿಂತ ಒಂದು ಘಂಟೆ ಹೆಚ್ಚಾಗಿತ್ತು. ನಾವು ಆಗಿನ ಕಾಲದ ಮಕ್ಕಳು. ಬೆಳಗ್ಗೆ ಆರು ಗಂಟೆಗೇ ಎದ್ದು, ನಮ್ಮ ಕೆಲಸಗಳನ್ನೆಲ್ಲ ನಾವೇ ಮಾಡಿಕೊಂಡು, ಸಂಜೆ ಫರ್ಲಾಂಗ್‌ಗಳಷ್ಟು ವಿಸ್ತೀರ್ಣದ ಜಾಗಗಳಲ್ಲಿ ಓಡಿ, ಜೂಟಾಟ, ಲಗೋರಿ, ಐಸ್‌ಪೈಸ್‌ಗಳನ್ನೆಲ್ಲ ಆಡಿ; ರಾತ್ರಿ ಬೇಗ ಮಲಗಿ ಬಿಡುವುದರಲ್ಲಿ ಅಗತ್ಯದ ನಿದ್ದೆಯ ಹೊಂದಾಣಿಕೆ ಆಗುತ್ತಿತ್ತು. ಕಥೆ ಚೆನ್ನಾಗಿದ್ದರೂ ನಿದ್ದೆ

ತಡೆಯಲಾಗದೇ ಒಬ್ಬರಾದ ನಂತರ ಒಬ್ಬರಂತೆ ನಿದ್ರಾ ದೇವಿಗೆ ಶರಣಾಗಿ ಬಿಟ್ಟದ್ದು ನಮಗೇ ಅರಿವಿರಲಿಲ್ಲ! ಆ ನಂತರದಲ್ಲಿ ಗುಡಿಗೆ ಬಂದ ಅಮ್ಮ, ಅಕ್ಕಂದಿರ ಕಣ್ಣಿಗೆ ಕಾಣುವಂತೆ, ಎಲ್ಲೆಂದರಲ್ಲಿ ಹಾಗೇ ನಿದ್ದೆ ಹೋಗಿ ಬಿಟ್ಟಿದ್ದೆವು.

ಪ್ರಯತ್ನ ಬಿಡಲಿಲ್ಲ. ಹನುಮಂತನ ಸಾಕ್ಷಾತ್ ದರ್ಶನಕ್ಕೆ ಮರುದಿನ ಪುನಃ ಐದೂವರೆಗೆ ಹಾಜರಾದೆವು. ಯಾವ ಆಟವನ್ನೂ ಆಡದೇ ಕಣ್ಣು ತೆರೆದೇ ಇದ್ದ ನಮ್ಮ ಕಾತರವನ್ನು ನೀಗಿಸಲೆಂಬಂತೆ ಆವೊತ್ತು ಇಬ್ಬರು ಹಣ್ಣು-ಮುದುಕರು ಒಟ್ಟಾಗಿ ಮಾತಾಡುತ್ತ ದೇವಸ್ಥಾನಕ್ಕೆ ಬಂದರು. ಆದರೆ ಇವರಿಬ್ಬರಲ್ಲಿ ಹನುಮಂತ ಯಾರೆಂಬುದನ್ನು ತಿಳಿಯಲು ನೋಟದಲ್ಲಿ ಆಗಲಿಲ್ಲ. ಇವರಿಬ್ಬರಲ್ಲಿ ದೊಡ್ಡವರು ಯಾರು ಎಂಬುದನ್ನು ಖಚಿತಗೊಳಿಸಿಕೊಳ್ಳುವುದೇ ಸಮಸ್ಯೆಯಾಯಿತು. ನಮ್ಮ ಚೈತನ್ಯ ಮುಗ್ಧ, ಭಯ, ದಾಕ್ಷಿಣ್ಯಗಳು ಹುಟ್ಟುವ ವಯಸ್ಸು ಇನ್ನೂ ಅವನದಾಗಿರಲಿಲ್ಲ. 'ಅಜ್ಜ ನಿಮ್ಮಿಬ್ಬರಲ್ಲಿ ಯಾರು ದೊಡ್ಡವರು ನೀವಾ ಅಥವಾ ಅವರಾ?' ಎಂದು ಕೇಳಿಯೇ ಬಿಟ್ಟ. ಅವರು ಉತ್ತರಿಸುವ ಮೊದಲೇ, ನಿಮ್ಮಿಬ್ಬರಲ್ಲಿ ಹನುಮಂತ ದೇವರು ಯಾರು?' ಎಂಬುದು



ಅವನ ಮುಂದಿನ ಪ್ರಶ್ನೆಯಾಗಿತ್ತು. ಆ ವೃದ್ಧರಿಬ್ಬರೂ ತಮ್ಮ ಮನೆಯ ಆಸ್ತಿ ಹಂಚಿಕೆಯಲ್ಲಿ ಆದ ಅನ್ಯಾಯದ ಬಗ್ಗೆ ಅದೆಷ್ಟು ಗಂಭೀರ ಚರ್ಚೆ ನಡೆಸುತ್ತಿದ್ದರೆಂದರೆ, ಚೈತನ್ಯನ ಪ್ರಶ್ನೆ ಅವರ ಮಾತನ್ನು ತುಂಡರಿಸಿ, ಕೋಪವನ್ನು ನೆತ್ತಿಗೇರಿಸುವಂತೆ ಮಾಡಿತ್ತು. ಸಮಸ್ಯೆ ಬಗ್ಗೆ ಹೇಳಿಕೊಳ್ಳುತ್ತಿದ್ದ ಮುದುಕರು ಏರಿದ ಸಿಟ್ಟಿನಲ್ಲಿ ನನ್ನ ತಮ್ಮನನ್ನೂ, ಅವನ ಜೊತೆಗೇ ನಿಂತ ನಮ್ಮನ್ನೂ ಬೈದು ಅಲ್ಲಿಂದ ಓಡಿಸಿ ಬಿಟ್ಟರು.

ಅವರಿಬ್ಬರಲ್ಲಿ ಯಾರೂ ಹನುಮಂತನಲ್ಲ ಎಂಬುದೂ, ಅವರಿಬ್ಬರ ಮನೆಗಳೂ ಅಲ್ಲೇ ದೇವಸ್ಥಾನದ ಹಿಂಭಾಗದಲ್ಲಿ ಇವೆ ಎಂಬುದೂ ನಂತರ ಗೊತ್ತಾಯಿತು. ನಾವು ಹನುಮನ ಬೇಟೆಯನ್ನು ಹರಿಕಥೆಯ ಮುಕ್ತಾಯದ ಘಟ್ಟದಲ್ಲಿ ಮುಂದುವರಿಸಿದೆವು. ಹರಿಕಥೆ ಮುಗಿದ ಮೇಲೆ ಎಲ್ಲರೂ ಒಮ್ಮಲೇ ಖಾಲಿಯಾಗಿ ಇನ್ನೇನು ದೇವಸ್ಥಾನದ ಒಳ ಹೊರಗಿನ ಎಲ್ಲ ಮೂಲೆಗಳನ್ನೂ ಹುಡುಕಿ ಬಂದು ಬಿಡೋಣ ಎಂದು ಒಬ್ಬೊಬ್ಬರು ಒಂದೊಂದು ಕಡೆ ಹೋಗಿ ಹಣ್ಣುಹಣ್ಣು ಮುದುಕನಿಗಾಗಿ ಹುಡುಕುತ್ತಿರುವಾಗ, ಬಾಗಿಲು ಹಾಕಲೆಂದು ಎಲ್ಲರ ನಿರ್ಗಮನಕ್ಕಾಗಿ ಕಾಯುತ್ತಿದ್ದ ಕಾವಲುಗಾರ, 'ಏಯ್ ಅಲ್ಲೆಲ್ಲಿ ಹೋಗ್ತಿದೀರಾ? ಆಂ... ಎಲ್ಲ ಹರಿಕಥೆ ಮುಗಿದ್ದೇಲೆ ನಿಮಗೇನು ಕೆಲಸ ಇಲ್ಲಿ ನಡೀರಿ ಹೊರಗೆ, ಬಾಗ್ಲು ಹಾಕ್ಬೇಕು ನಾನು ನಡೀರಿ..” ಎಂದು ನಮ್ಮನ್ನೆಲ್ಲ ಹೊರಗೆ ಕಳಿಸಿದ. ಬಯಲಾದ ಆವರಣದಲ್ಲಿ ನರ ಪಿಳ್ಳೆಯೂ ಕಾಣಲಿಲ್ಲ.

ನಮ್ಮ ಬೇಟೆ ಮರುದಿನಕ್ಕೆ ಮುಂದೂಡಲ್ಪಟ್ಟಿತು. ರಾತ್ರಿ ಒಂಬತ್ತೂವರೆಗೆ ಕಥೆ ಮುಗಿಸಿದ್ದರಿಂದ, ಎಲ್ಲರೂ ಹೋದ ಮೇಲೂ ಒಂದು ಮೂಲೆಯಲ್ಲಿ ಸುಮ್ಮನೆ ದೊಣ್ಣೆ ಹಿಡಿದು ಏನೋ ಆಲೋಚಿಸುತ್ತ ಕುಳಿತ ಒಬ್ಬ ಮುದುಕ ಕಡೆಗೂ ನಮಗೆ ಸಿಕ್ಕಿಯೇ ಬಿಟ್ಟ. ನಾವು ಆನಂದದಿಂದ ಅವನನ್ನು ಮಾತಾಡಿಸಿದೆವು. ಅವನು ಕೂಡ ತಾನು ಹನುಮನೇ, ರಾಮಭಕ್ತನೇ ಎಂದು ಒಪ್ಪಿಕೊಂಡಿದ್ದರಿಂದ ಅವನ ಕಾಲಿಗೂ ಬಿದ್ದು ಪುನೀತರಾದೆವು. ಏನೇನು ಕೇಳಬೇಕೆನಿಸಿತೋ ಎಲ್ಲ ಕೇಳಿದೆವು. ಅದೆಷ್ಟು ಸಹನೆಯಿಂದ ಸಂತೋಷದಿಂದ ಉತ್ತರ ಕೊಟ್ಟ ಅವನು? ಎಷ್ಟೇ ಆದರೂ ರಾಮಭಕ್ತ ಹನುಮನಲ್ಲವೇ! ನಮ್ಮ ದೇಶದ ಜನರೆಲ್ಲರಿಂದ, ವಿಶೇಷವಾಗಿ ಶನಿವಾರದಂದು, ಪೂಜಿಸಿಕೊಳ್ಳುವ ಮಹಾಮಹಿಮ ದೇವರಲ್ಲವೇ! ನಮ್ಮ ಪ್ರಶ್ನೆಗಳೂ, ಅವನ ಉತ್ತರಗಳೂ ತುಂಬಾ ಉಲ್ಲಾಸದಾಯಕವಾಗಿದ್ದವು. ಆ ಪ್ರಶೋತ್ತರಗಳ ವಿವರಗಳ ಮೋಜೇ ಬೇರೆ ಬಿಡಿ. ನಾವು ಅವನ್ನು ಕೇಳಿಯೇ ಸ್ವರ್ಗದ ಬಾಗಿಲನ್ನು ತಲುಪಿ ಬಂದಿದ್ದೆವು. ಅದನ್ನು ಇನ್ನೊಮ್ಮೆ ವಿವರಿಸಬೇಕು.

ನಾವು ಹನುಮ ದೇವರ ದರ್ಶನವಾದ ಸಂಭ್ರಮದಲ್ಲಿ, ನಾಳೆ ಗೆಳೆಯ- ಗೆಳತಿಯರ ಗುಂಪಿನಲ್ಲಿ ಹೇಗೆ ಹೇಗೆ ಕೊಚ್ಚಿಕೊಳ್ಳಬೇಕೆಂಬ ಆಲೋಚನೆಗಳ ಅಮಲಿನಲ್ಲಿ ತೇಲುತ್ತ, ಆಡಬೇಕಾದ ಮಾತುಗಳನ್ನು ಚೆನ್ನದಲ್ಲಿ ಅದ್ದಿ ಆರಿಸಿಕೊಳ್ಳುತ್ತ ಮನೆಗೆ ಬಂದರೆ, ಅಮ್ಮನ ಮೊದಲ ಪ್ರಶ್ನೆಯೇ ನಮ್ಮನ್ನು ಕುಸಿದು ಬೀಳುವಂತೆ ಮಾಡಿತು. “ಅಲ್ಲ, ಆ ಭಿಕ್ಷುಕನ ಹತ್ತಿರ ಏನೋ ನಿಮ್ಮ ಸರಸ-ಸಲ್ಲಾಪ? ಪಾಪು ಕರೆದ್ರೂ ಕೇಳಿಸಿಕೊಳ್ಳೇ



ಹರಟೆ ಹೊಡೀತಿದ್ರಂತಲ್ಲ ಏನ್ ಸಮಾಚಾರ? ಅವ್ನಿಗೆ ಮೈ ಎಲ್ಲ ಕಾಯ್ದೆ, ಹೋಗಿ ಇಬ್ರೂ ಮೊದಲು ಸ್ನಾನ ಮಾಡಿ ಬನ್ನಿ. ಆಮೇಲೇ ನಿಮ್ಗ  ಊಟ ಹಾಕೋದು...? ಎಂದು ನನಗೂ ನನ್ನ ತಮ್ಮನಿಗೂ ಸಹಸ್ರಾರ್ಚನೆ ಮಾಡಿದ್ದನ್ನು, ಸಾವಿತ್ರಿಗೂ ಮತ್ತು ಶಂಕ್ರನಿಗೂ ತಿಳಿಸಿದ್ದು ಮರುದಿನ ಬೆಳಗ್ಗೆಯೇ, ದಶಮಿಯ ದಿನ ದೇವಸ್ಥಾನದಲ್ಲಿ ಹಾಕುವ ಊಟಕ್ಕೆ ಊರೆಲ್ಲ ಒಂದಾಗಿ ಹೊರಟ ಸಮಯದಲ್ಲೇ. ಅಮ್ಮ ಆ ಭಿಕ್ಷುಕನನ್ನು ಎಷ್ಟೋ ಬಾರಿ ಮಂಡಿಪೇಟೆಯಲ್ಲಿ ನೋಡಿದ್ದರಂತೆ. ಅಲ್ಲಿಗೆ ನಮ್ಮ ದೇವರ ದರ್ಶನದ ಮೊದಲ ಅಧ್ಯಾಯ ಮುಗಿದಿತ್ತು.

ದೇವರ ದರ್ಶನದ ಎರಡನೇ ಅಧ್ಯಾಯ ನಡೆದಿದ್ದು ನನ್ನ ಗೆಳತಿ ಸರಸುನ ಮನೆಯಲ್ಲಿ. ತುಂಬ ಸ್ವಾರಸ್ಯಕರ ಸಂಗತಿ ಅದು. ಆದರೆ ವಿವರಿಸಿ ಹೇಳಲು ಈ ಸೀಮಿತ ಪುಟಗಳಲ್ಲಿ ಅವಕಾಶವಿಲ್ಲ. ಅದರಿಂದ ಎರಡು ಸಾಲುಗಳಲ್ಲಿ ಹೇಳಿ ನಿಮ್ಮ ಊಹೆಗೆ ಬಿಡುತ್ತೇನೆ. ದತ್ತಾತ್ರೇಯ ದೇವರನ್ನು ತಮ್ಮ ಮೈಯೊಳಗೆ ಆವಾಹಿಸಿಕೊಂಡ ಸ್ವಾಮಿಯೊಬ್ಬರನ್ನು, ದೈವಭಕ್ತರಾದ ಸರಸುನ ತಂದೆ, ತಮ್ಮ ಮನೆಗೆ ಕರೆಸಿಕೊಂಡಿದ್ದರು. ಸ್ವಾಮಿಗಳು ಅವರ ಮನೆಯಲ್ಲಿ ಒಂದು ವಾರ ಇರುವುದಾಗಿ ಸ್ವ ಇಚ್ಛೆಯಿಂದ ತಿಳಿಸಿದಾಗ ತುಂಬ ಸಂತೋಷದಿಂದಲೇ ಒಪ್ಪಿದರು. ಸ್ವಾಮಿಗಳ ಪವಾಡ, ಚಮತ್ಕಾರಗಳು ಊರ ತುಂಬೆಲ್ಲ ಸುದ್ದಿಗಳಾಗಿ, ಅತ್ಯಚ್ಚರಿಯ ಸಂಗತಿಗಳಾಗಿ ಮನೆ ಮನೆಗೆ,

ಊರು ಕೇರಿಗೆ, ಸುತ್ತಮುತ್ತಲ ಹಳ್ಳಿಗಳಿಗೆ, ಮಣ್ಣಿನಿಂದೆದ್ದ ಧೂಳಿನಂತೆ ಹರಡಿಕೊಂಡಿತು. ಮಂತ್ರಿ ಮಹೋದಯರಿಂದ ಹಿಡಿದು, ಊರ ಕಸ ಗುಡಿಸುವ ಜಾಡಮಾಲಿಯವರೆಗೆ, ಊರಿನ ಎಲ್ಲ ಪ್ರಜೆಗಳೂ ಆ ಸ್ವಾಮಿಯ ಭೇಟಿಗೆಂದು, ಅವರ ಮೂಲಕ ದೇವರ ದರ್ಶನಕ್ಕೆಂದು ಅವರ ಮನೆಗೆ ಬರುತ್ತಿದ್ದರು.

ಒಮ್ಮೆ ಒಬ್ಬ ಚಿಕ್ಕ ಹುಡುಗನನ್ನು ದೇವರೆಂದೇ ಭಾವಿಸಿ ಧ್ಯಾನಸ್ಥರಾಗಿ ದೇವರನ್ನು ಅವನೊಳಗೆ ನೋಡಲು ತಿಳಿಸಿ ಅವನ ಮುಂದೆ ನನ್ನನ್ನು ಕೂಡಿಸಿದ್ದರು ಸ್ವಾಮಿ. ಆದರೆ ದೇವರ ಬದಲಿಗೆ, ನನಗೆ ಅವನ ಕೆಂಚು ಕೂದಲು, ಕಂಬಳಿ ಹುಳದಂತಹ ಹುಬ್ಬು, ಧರಿಸಿದ್ದ ತೆಳುವಾದ ಶರ್ಟಿನ ಒಳಗಿನ ಬನೀನಲ್ಲಿ ಅಲ್ಲಲ್ಲಿ ಬಿದ್ದ ಸಣ್ಣ ಸಣ್ಣ ತೂತುಗಳು, ನನ್ನ ಧ್ಯಾನದ ನೋಟಕ್ಕೆ ಸಿಗಬೇಕೇ? ನಮ್ಮ ಹಾಗೇ ಕೆಲವರು ದೊಡ್ಡವರಿಗೂ ದೇವರನ್ನು ನೋಡುವ ಬಯಕೆ ಇತ್ತೇನೋ? ಮತ್ತೆ ಮರುದಿನ ಹಲವಾರು ಭಕ್ತರನ್ನು, ಒಂದು ಖಾಲಿ ಗೋಡೆಯ ಮುಂದೆ ಕೂಡಿಸಿ, ಎದುರಿನ ಬಿಳಿಯಾದ ಗೋಡೆಯನ್ನು ಏಕಾಗ್ರತೆಯಿಂದ ನೋಡಿದರೆ ದತ್ತಾತ್ರೇಯ ದೇವರು ಅಲ್ಲಿ ಕಾಣಿಸುತ್ತಾನೆಂದು ತಿಳಿಸಿದ್ದರು. ಅಲ್ಲಿ ನನಗಂತೂ, ನಾನು ಕಲ್ಪಿಸಿಕೊಂಡಂತೆ ಆಕಾರಗಳು ಕಂಡವೇ ವಿನಃ ದತ್ತಾತ್ರೇಯನೇನು, ಯಾವ ದೇವರೂ ಕಾಣಿಸಲಿಲ್ಲ. ಕೆಲವರು ತಮಗೆ ದೇವರು ಚೆನ್ನಾಗಿ ಕಂಡನೆಂದು ಹೇಳಿ, ತಾವು ಕಂಡ ದೇವರನ್ನು ವರ್ಣಿಸಿದರು. ನನಗೆ ದೇವರು ಕಾಣಿಸಲಿಲ್ಲವೆನ್ನಲು ಸಂಕೋಚವೆನಿಸಿ, ನಾನೂ ನನಗೂ ದೇವರು ಕಂಡಂತಾಯಿತು ಎಂದು ಹೇಳಿ, ಇತರ ಭಕ್ತರ ಪ್ರಶಂಸೆ ಗಿಟ್ಟಿಸಿದ್ದೆ. ಆದರೆ



ಎಲ್ಲರಿಗೂ ದೇವರನ್ನು ತೋರಿಸುತ್ತಿದ್ದ ಸ್ವಾಮಿಯ ಮೋಸದ ವ್ಯವಹಾರಗಳು, ಕೆಲವೇ ದಿನಗಳಲ್ಲಿ ಬಯಲಿಗೆ ಬಂದು ಜೈಲು ಸೇರಿದ್ದರಿಂದ, ಭಕ್ತರು ಕಂಡ ದೇವರು ಯಾರೆನ್ನುವುದು ಸ್ಪಷ್ಟವಾಗಿತ್ತು.

ಇಂಥ ಇನ್ನೂ ಕೆಲವು ಸ್ವಾರಸ್ಯಕರ ಅನುಭವಗಳು, ಕಂಡ ಸತ್ಯ ವಿಷಯಗಳು, ಅರಿವಿನ ವಯಸ್ಸಿಗೆ ಕಾಲಿಟ್ಟ ಹೆಜ್ಜೆಗಳು ಕ್ರಮೇಣ, ಪೂಜೆ, ಭಜನೆ, ದೇವರು, ಹರಕೆ... ಈ ಎಲ್ಲದರಲ್ಲಿ ಇಟ್ಟಂತಹ ಗಾಢವಾದ ನಂಬಿಕೆಯನ್ನು ದೂರ ಸರಿಸಿದವು. ಈ ಯಾವುವೂ ಜೀವನದಲ್ಲಿ ನಡೆಯಲಿರುವ ಘಟನೆಗಳನ್ನು ಕಿಂಚಿತ್ತೂ ಬದಲಿಸಲಾರವು ಮತ್ತು ದೇವರು ಕಾಣ ಸಿಗುವ ರೂಪವೇ ಅಲ್ಲ ಎಂಬ ಸತ್ಯವನ್ನು ಮನವರಿಕೆ ಮಾಡಿ ಕೊಟ್ಟವು. 'ಕಲ್ಲಿನಲಿ ಮಣ್ಣಿನಲಿ ಮುಳ್ಳಿನಾ ಮೊನೆಯಲ್ಲಿ, ಎಲ್ಲಿ ನೋಡಿದರಲ್ಲಿ ಶಿವನಿರ್ಪ ಅವ ನಿನ್ನಲ್ಲಿಯೇ ಇರುವ' ಎಂಬ ಸರ್ವಜ್ಞನ ಮಾತಿನ ಅರ್ಥ ನಿಧಾನವಾಗಿ ತಿಳಿಯತೊಡಗಿತು. ಇಂಥ ಜಗತ್ತಿನ ಬಗೆಗಿದ್ದ, ಆಶ್ಚರ್ಯ, ಆಕರ್ಷಣೆ, ನಂಬಿಕೆಗಳೆಲ್ಲ ಮಣ್ಣು ಪಾಲಾದವಲ್ಲದೆ, ಶಂಕರಾಚಾರ್ಯರು ಹೇಳಿದ 'ಅಹಂ ಬ್ರಹ್ಮಾಸ್ಮಿ', 'ತತ್ವಮಸಿ' ಎಂಬ ಮಾತೇ ಸತ್ಯ

ಎನಿಸತೊಡಗಿತು. ಈಗ ದೇವರನ್ನು ಅಂತರಂಗದೊಳಗೆ ಕಾಣಲು ಪ್ರಯತ್ನ ನಡೆಸಿದ್ದೇನೆ. ಸ್ವಅವಲೋಕನ ಮಾರ್ಗ ಹಿಡಿದು ಹುಡುಕಾಡುತ್ತಿದ್ದೇನೆ. ಈಗಲೂ ದೇವರ ಹುಡುಕಾಟ ಹೀಗೆ ಮುಂದುವರಿದೇ ಇದೆ.

**(ಮಾರ್ಚ್ ೨೦೧೨ರ 'ಮಯೂರ' ಮಾಸಪತ್ರಿಕೆ)**

## ೨೧. ಕಾಟು ಮಾವೆಂದರೆ ಸಾಕೆ...

**ಅನಿತಾ ನರೇಶ್ ಮಂಚಿ**

ಹಣ್ಣುಗಳ ರಾಜನೆಂದರೆ ಯಾರೆಂದುಕೊಂಡಿದ್ದೀರಿ ಎಂದು ಯಕ್ಷಗಾನ ಶೈಲಿಯಲ್ಲಿ ಕೇಳಿ ನೋಡಿ. ಎಲ್ಲಾ ಕಡೆಯಿಂದ ಮಾವಿನ ಹಣ್ಣು ಎಂಬ ಒಂದೇ ಉತ್ತರ ಕೇಳಿ ಬಂದೀತು. ಎಲ್ಲರೂ ಆ ಸಮಯದಲ್ಲಿ ಮಾವುವಾದಿಗಳಾಗುವುದು ನಿಶ್ಚಿತ. ಬಡವ ಬಲ್ಲಿದನೆಂಬ ಭೇದವಿಲ್ಲದೆ ಎಲ್ಲರೂ 'ಆಮ್ ಆದ್ಮಿ'ಗಳಾಗುತ್ತಾರೆ.

ಈಗ ಹೇಳಿ ಕೇಳಿ ಮಾವಿನ ಸೀಸನ್ ! ಯಾರೊಂದಿಗಾದರೂ ಸ್ವಲ್ಪ ಹೊತ್ತು ಮಾತಿಗಿಳಿದರೆ ಸಾಕು, ಕೆಲವೇ ಕ್ಷಣದಲ್ಲಿ ಮಾತು ಮಾವಿನ ಕಡೆ ತಿರುಗುತ್ತದೆ. ನಿಮ್ಮಲ್ಲಿ ಮಾವು ಬೆಳೆದಿದೆಯೇ... ? ಎಂಬಲ್ಲಿಂದ ಸುರು ಆದರೆ,

ನಂತರ ಅದರ ಕುಲ ಗೋತ್ರ ಪ್ರವರಗಳ ಕಡೆ ತಿರುಗಿ ಹಣ್ಣಾಗುವಾಗ ನನ್ನನ್ನು ನೆನಪಿಸಿಕೊಳ್ಳಿ ಎಂಬಲ್ಲಿಗೆ ಪರಿಸಮಾಪ್ತಿಯಾಗುತ್ತದೆ. ಇದೆಲ್ಲ ಯಾರೂ ತಾವಾಗಿಯೆ ಬೇಕು ಅಂತ ಕೇಳೋದಲ್ಲ. ಮಾವಿನ ಮಹಿಮೆಯೇ ಇರಬೇಕು... ಅಚಾನಕ್ ಆಗಿ ಈ ಮಾತನ್ನು ಹೊರಡಿಸುತ್ತದೆ.

ಮಾವು ಎಂಬ ಹೆಸರೇ ಬಾಯಲ್ಲಿ ನೀರೂರಿಸುವುದು ಸತ್ಯ. ಅದರಲ್ಲೂ ಮಲ್ಲಿಕಾ, ನೀಲಂ, ರಸ್‌ಪೂರಿ ಎಂಬಿತ್ಯಾದಿ ಕಸಿ ಮಾವಿನಹಣ್ಣಿನ ವಿಚಿತ್ರ ಹೆಸರುಗಳನ್ನು ಕೇಳಿದರೆ ರಸಿಕರ ಬಾಯಲ್ಲಿ ಇನ್ನೂ ಹೆಚ್ಚು ಲಾವಾರಸ ಉತ್ಪತ್ತಿಯಾಗಬಹುದು. ಈ ಕಸಿ ಮಾವಿನ ಹಣ್ಣುಗಳನ್ನು ದುಬಾರಿ ಬೆಲೆ ತೆತ್ತಾದರೂ ಕೊಳ್ಳಬಹುದು. ಆದರೆ ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳಲು ನಾಚುವ, ನಾನೀಗ ಪ್ರಸ್ತಾಪಿಸುತ್ತಿರುವ " ಕಾಟು ಮಾವು' ಎಂಬ ಸಾದಾ ಸೀದಾ ಮಾವಿನ ಪರಿಚಯ ಬಹು ಜನರಿಗೆ ಇರಲಾರದು.

ಹೆಸರೇ ಸೂಚಿಸುವಂತೆ ಇದು ಕಾಡಿನಲ್ಲಿ ಯವುದೇ ರೀತಿಯ ಉಪಚಾರವಿಲ್ಲದೇ ಸ್ವಾಭಾವಿಕವಾಗಿ ಬೆಳೆಯುವ ಒಂದು ವಿಶಿಷ್ಟ ಬಗೆಯ ಮಾವು. ಗಾತ್ರದಲ್ಲಿ ಇದು ಇತರ ಕಸಿ ಮಾವುಗಳಿಂದ ತುಂಬ ಸಣ್ಣದು. ಆದರೂ ಇದರಿಂದ ತಯಾರಿಸಿದ ಉಪ್ಪಿನಕಾಯಿಯಂತೂ ಜಗತ್ಪಸಿದ್ಧ ! ಮಿಡಿಯಾಗಿರುವಾಗಲೇ ಭರಣಿಯೊಳಗೆ ಇಳಿದು ಉಪ್ಪಿನ ಜೊತೆ ಸರಸವಾಡುತ್ತಾ ಉಪ್ಪಿನಕಾಯಿ ಪ್ರಿಯರನ್ನು ಆಹ್ವಾನಿಸುವ ಇವುಗಳ ಲೋಕವೇ ಅದ್ಭುತ.

ನಿಮ್ಮಲ್ಲಿ ಒಂದು ಒಳ್ಳೆಯ ಕಾಟು ಮಾವಿನ ಮರವಿದ್ದರೆ ಸಾಕು. ನೀವು ಅಧಿಕಾರಾವಧಿಯಲ್ಲಿರುವ ರಾಜಕಾರಣಿಗಳಿಗಿಂತ ಹೆಚ್ಚಿನ ಹಿಂಬಾಲಕರನ್ನು ಪಡೆಯುತ್ತೀರಿ. ಅದರಲ್ಲಿ ಇನ್ನೂ ಹೂ ಅರಳುವ ಮೊದಲೇ ಯಾರ್ಯಾರಿಗೆ ಎಷ್ಟೆಷ್ಟು ನೂರು ಮಿಡಿಗಳು ಬೇಕೆಂಬ ಮುಂಗಡ ಬುಕ್ಕಿಂಗ್ ಕೂಡಾ ನಡೆಯುತ್ತದೆ.ಇನ್ನೇನು ಹೂ



ಅರಳಿ ಮಿಡಿ ಕಾಳುಮೆಣಸಿನ ಗಾತ್ರ ಹೊಂದಬೇಕಾದರೆ ಕೆಲವರು ಉಪ್ಪು ತರಿಸಿ ಇಟ್ಟುಕೊಂಡಾಗಿರುತ್ತದೆ. ಅವುಗಳ ಗಾತ್ರದ ಬಗ್ಗೆ ನಿಮ್ಮನ್ನು ದಿನ ದಿನವೂ ವಿಚಾರಿಸಿಕೊಳ್ಳುತ್ತಿರುತ್ತಾರೆ. ಜೊತೆಗೆ ಅದರ ಸೊನೆ, ಪರಿಮಳ, ಹುಳಿ,ಒಗರು ರುಚಿಗಳ ಬಗ್ಗೆ ಕೊಂಚ ಹೊಗಳಿಕೆಯೂ ಆವರಿಸಿಕೊಳ್ಳುತ್ತದೆ. ಅದನ್ನು ಮರ ಹತ್ತಿ ಕೊಯ್ಯುವ ಪ್ರವೀಣರನ್ನು ಹುಡುಕುವುದಂತೂ ಬಹು ಪ್ರಯಾಸದ ಕೆಲಸ.

ಅಂತೂ ಇಂತೂ ಮಿಡಿಯ ಕೊಯ್ದು ಮುಗಿದು ಎಲ್ಲರ ಮನೆಯ ಉಪ್ಪಿನ ಕಾಯಿಯ ಭರಣಿ ತುಂಬಿದ ನಂತರ ಮರದಲ್ಲಿ ಉಳಿಯುವ ಕಾಯಿಗಳಿಗೆ ಹಣ್ಣಾಗುವ ಅವಕಾಶ. ಸ್ವಲ್ಪ ದಿನ ಮರಕ್ಕೆ ಕಲ್ಲು ಬೀರುವ ತುಂಟ ಹುಡುಗರಲ್ಲದೆ ಬೇರಾರು ಅದರ ಸನಿಹ ಸುಳಿಯುವುದಿಲ್ಲ.

ಸಾವಕಾಶವಾಗಿ ಒಂದೊಂದೇ ಹಣ್ಣು ಬೀಳಲು ಸುರು ಆಗಲಿ. ಆಗ ಪುನಃ ನಿಮ್ಮ ಮರದ ಸುತ್ತ ಜನ ಜಾತ್ರೆ ಕಳೆಕಟ್ಟುತ್ತದೆ. ರಸ್ತೆ ಬದಿಯಲ್ಲಿ ನಿಮ್ಮ ಮರ ಇದ್ದರಂತೂ ಮುಗಿದೇ ಹೋಯಿತು. ನಿಮಗೆ ರುಚಿ ನೋಡಲೂ ಒಂದೆರಡು ಹಣ್ಣು ಸಿಗುವುದು ಸಂಶಯ.

ನನ್ನ ಅನುಭವವನ್ನೇ ತೆಗೆದುಕೊಳ್ಳಿ. ನಮ್ಮಲ್ಲೂ ಇಂತಹುದೇ ಒಂದು ಮಾವಿನ ಮರವಿದೆ. ಓಹ್ !! ನೀವೇ ಪುಣ್ಯವಂತರು ಬಿಡಿ ಎಂದು ಕರುಬಬೇಡಿ. ನನ್ನ ಸಂಕಟ ನನಗೇ ಗೊತ್ತು. ಮರದ ಬದಿ ಹೋಗುವವರೆಲ್ಲರು ನೆಲದ ಕಡೆ ನೋಡದೇ,ಮರದ ಮೇಲೆಯೇ ಕಣ್ಣು ಹಾಯಿಸುತ್ತಿರುತ್ತಾರೆ. ಗೊಂಚಲು ಗೊಂಚಲಾಗಿ ತೂಗುವ ಹಣ್ಣುಗಳು ಆಕರ್ಷಿಸುವುದರಲ್ಲಿ ತಪ್ಪೇನಿದೆ ಎಂದು ಪುನಃ ಮೂಗು ಮುರಿಯುವ ಅಗತ್ಯವಿಲ್ಲ. ಮುಂದೆ ಕೇಳಿ.

ಶಾಲೆಯ ಮಕ್ಕಳಿಗಂತೂ ಇದು ಸ್ವರ್ಗವೇ. ಬೆಳಗ್ಗೆ ಶಾಲೆಗೆ ತಡವಾದರೂ ಚಿಂತಿಲ್ಲ ಇಲ್ಲೊಂದು ವಿಸಿಟ್ ಹಾಕಿಯೇ ಹೋಗುವ ಕ್ರಮ. ಇನ್ನು ಸಂಜೆಯೂ ಅಷ್ಟೆ ಇದರಡಿಯಲ್ಲಿ ಒಂದಿಷ್ಟು ಹೊತ್ತು ಕಳೆಯದೆ ಹೋದರೆ ಹಣ್ಣಿಗೆ ಅವಮಾನವಲ್ಲವೇ? ನನಗೆ ಇದರ ಬಗ್ಗೆ ಏನೂ ಅಸಮಧಾನವಿಲ್ಲ. ಆದರೆ ನಮ್ಮ ಈ ಮರ ತೋಟದ ಬದಿಯಲ್ಲೇ ಇರುವ ಕಾರಣ ಬೇಲಿಯೂ ಇದಕ್ಕೆ ತಾಗಿಕೊಂಡೇ ಇದೆ. ಮುಳ್ಳು ತಂತಿಯ ಭದ್ರ ಬೇಲಿ, ಜೊತೆಗೆ ಬಿದಿರಿನ ಮುಳ್ಳುಗಳ ಸಾಥ್ ಸಹ ಇತ್ತು. ಯಾವಾಗ ಹಣ್ಣು ಬೀಳಲು ಪ್ರಾರಂಭವಾಯಿತೋ ಆಗ ಸುರು ಆಯಿತು ಬೇಲಿಯ ಅವನತಿ.ಎಷ್ಟು ಬಾರಿ ಮುಳ್ಳುಗಳನ್ನು ಬಲ ಪಡಿಸಿದರೂ ಮಕ್ಕಳು ಅದನ್ನು ಯಾವ ಮಾಯದಲ್ಲೋ ಸರಿಸಿ ಒಳ ನುಗ್ಗುತ್ತಿದ್ದರು.

ಒಮ್ಮೆ ಸಿಟ್ಟಿನಲ್ಲಿ ಅವರ ಧಾಳಿಯ ಸಮಯ ಕಾದು ಅಲ್ಲಿಗೆ ಹೋದೆ. ಸ್ಕೂಲ್ ಬ್ಯಾಗ್ ರಸ್ತೆ ಬದಿಯಲ್ಲೇ ಬಿಸುಟು ಬೇಲಿ ಜಗ್ಗಿಸಿ ಒಳ ನುಗ್ಗಿ ಸಣ್ಣ ಸ್ವರದಲ್ಲಿ ಮಾತನಾಡುತ್ತಾ ಒಣಗಿದ ಎಲೆಯ ರಾಶಿಯಲ್ಲಿ ಅಡಗಿದ್ದ ಹಣ್ಣುಗಳನ್ನು ಹುಡುಕುತ್ತಿದ್ದರು.



ಅವರ ಕೆಲಸಕ್ಕೆ ಭಂಗ ತರದೆ, ಹೊರಗಿದ್ದ ಬ್ಯಾಗ್ ಗಳನ್ನು ಮೆತ್ತಗೆ ತಂದು ಮನೆಯ ಅಂಗಳದಲ್ಲಿರಿಸಿದೆ. ಸ್ವಲ್ಪ ಹೊತ್ತಿನಲ್ಲಿ ಆತಂಕದ ಸ್ವರಗಳು ಕೇಳಿಸಲಾರಂಬಿಸಿತು. ಯಾಕೋ ಸಂಶಯ ಬಂದವರಂತೆ ಗೇಟು ಸರಿಸಿ ಅಂಗಳಕ್ಕಿಣುಕಿದರು. ಬದಿಯಲ್ಲಿರಿಸಿದ್ದ ಬ್ಯಾಗ್‌ಗಳ ಕಡೆಗೆ ಕಳ್ಳ ನೋಟ ಬೀರಿ ,ತಗ್ಗಿದ ತಲೆ, ಕಣ್ಣುಗಳಿಂದಲೇ ಬ್ಯಾಗ್ ಹೆಗಲಿಗೇರಿಸಿಕೊಂಡರು. ನಾನು ಆ ಕಡೆ ನೋಡಿದರೂ ನೋಡದಂತೆ ನಟಿಸಿ ಮೌನವಾಗಿಯೇ ಇದ್ದೆ. ಮರುದಿನದಿಂದ

ಮನೆಯ ಹತ್ತಿರ ಬಂದು ನಾವು ಹಣ್ಣು ಹೆಕ್ಕಿಕೊಳ್ಳಬಹುದಾ ಎಂದು ಕೇಳಿ, ಬೇಲಿಯ ತಂಟೆಗೆ ಹೋಗದೆ ಗೇಟನ್ನೇ ಉಪಯೋಗಿಸತೊಡಗಿದರು. ನಂತರವೇ ನಾನು ಸ್ವಲ್ಪ ಆರಾಮದ ಉಸಿರು ಬಿಟ್ಟದ್ದು.

ಬಲ್ಲವನೇ ಬಲ್ಲ ಈ ಮಾವ ರುಚಿಯ !!ಇವುಗಳ ರುಚಿಯಂತೇ ಇವುಗಳನ್ನು ತಿನ್ನುವ ಬಗ್ಗೆಯೂ ಕೊಂಚ ಅನುಭವ ಬೇಕು. ಕಸಿ ಹಣ್ಣಿನಂತೆ ಸಿಪ್ಪೆ ತೊಲಗಿಸಿ ತುಂಡರಿಸಿ, ಫೋರ್ಕ್ ಕುತ್ತಿ ಒಂದೊಂದೇ ತುಂಡು ಮೆಲ್ಲಲು ಸಾಧ್ಯವಿಲ್ಲ.ಹಾಗೆ ತಿನ್ನುವ ಪ್ರಯತ್ನವೂ ಇವುಗಳಿಗೆ ಮಾಡುವ ಅವಮಾನವೇ ಸರಿ. ತೊಟ್ಟು ಮಾತ್ರ ತೆಗೆದು, ಹಾಗೆಯೇ ಸಿಪ್ಪೆ ಸಮೇತ ಕಚ್ಚಿ ತಿನ್ನಬೇಕು. ಅದರಿಂದೊಸರುವ ರಸ ನೆಲಕ್ಕೆ ಬೀಳದಂತೆ ಆಗಾಗ ಅಂಗೈಯಿಂದ ಮೊಳಕೈ ವರೆಗೆ ನೆಕ್ಕಿಕೊಳ್ಳುತ್ತಿರಬೇಕು.ಒಂದು ಹಣ್ಣಿಗೆ ನೀವೆಲ್ಲಿ ಸುಮ್ಮಗಾಗುತ್ತೀರಿ ಮತ್ತೊಂದು ಮಗದೊಂದು ಎಂದು ಹೊಟ್ಟೆ ತುಂಬಿದರೂ ನಾಲಗೆ ಬೇಡುತ್ತಲೇ ಇರುತ್ತದೆ. ಅಂತೂ ಇಂತೂ ಜಗಲಿಯ ಅಂಚಲ್ಲಿ ಬಾಗಿ ನಿಂತು ಮೈ ಕೈಗೆಲ್ಲಾ ರಸ ಸುರಿಸಿಕೊಂಡು ತಿನ್ನುವುದನ್ನು ನಿಲ್ಲಿಸಿದಿರಿ ಎಂದುಕೊಳ್ಳಿ, ನಂತರ ಸೀದಾ ಒಳ ಹೋಗುವಂತೆಯೂ ಇಲ್ಲ. ಹಲ್ಲುಗಳಲ್ಲಿ ಸೇರಿಕೊಂಡಿರುವ ಇದರ ನಾರಿನಭಾಗವನ್ನು ಶುಚಿಗೊಳಿಸುವುದು ಇನ್ನೊಂದು ಕೆಲಸ.

ಕೆಲವರು ಇದನ್ನು ತಿನುವುದರಲ್ಲಿ ನಿಷ್ಣಾತರೂ ಇರುತ್ತಾರೆ.ಅವರು ತಿನ್ನುವಂತೆ ಗೊರಟಿನ ಮೇಲೆ ಒಂದು ನಾರೂ ಉಳಿಸದೆ ಬೊಕ್ಕ ತಲೆಯಂತೆ ಮಾಡಿ ತಿನ್ನಲು ನಿಮಗೆ ಕೊಂಚ ತರಬೇತಿಯೂ ಬೇಕಾಗಬಹುದು. ಇನ್ನು ಇವುಗಳಿಂದ ತಯಾರಿಸುವ ವ್ಯಂಜನಗಳಂತೂ ಹೆಸರು ಕೇಳುವಾಗಲೇ ಹಸಿವನ್ನು ಹೆಚ್ಚಿಸುತ್ತದೆ. ಸಾಸಿವೆ, ಗೊಜ್ಜು, ಮಾಂಬಳ, ಜೂಸ್ ಹೀಗೇ ಪಟ್ಟಿ ಮುಂದುವರಿಯುತ್ತದೆ. ಜೊತೆಗೆ ಈ ಹಣ್ಣಿನ ಸೇವನೆ ಜೀರ್ಣಕ್ರಿಯೆಯನ್ನೂ ಉತ್ತಮಗೊಳಿಸುತ್ತದೆ.

ಇನ್ನು ಈ ಕಾಟು ಮಾವು ದೊರಕುವ ಸಮಯದಲ್ಲಿತರಕಾರಿಯ ಹಣ ಉಳಿಸುತ್ತದೆ ಎಂದರೆ ಇದು ಹೇಗಪ್ಪಾ ಎಂದು ಕಣ್ಣು ಬಾಯಿ ಬಿಡಬೇಡಿ. ಇಡೀ ಊಟಕ್ಕೆ ಒಂದು ಹಣ್ಣಿದ್ದರೆ ಸಾಕು ನಿಮಗೆ ಬೇರೆ ವ್ಯಂಜನಗಳ ಅವಶ್ಯಕತೆಯೇ ಇಲ್ಲ. ತಟ್ಟೆಗೆ ಅನ್ನ ಸುರುವಿಕೊಂಡು, ಮಾವಿನಹಣ್ಣು ಗಿವುಚಿ,ಒಂದೆರಡು ಹಸಿಮೆಣಸು ನುರಿದುಕೊಂಡು, ಉಪ್ಪು ಸೇರಿಸಿದರಾಯಿತು. ಪಂಚಭಕ್ಷ್ಯ ಪರಮಾನ್ನಗಳು ಇದರೆದುರು ಗೌಣ.



ಇಷ್ಟೆಲ್ಲ ಹಣ್ಣಿನ ಬಗ್ಗೆ ತಿಳಿದರೆ ಸಾಕೇ? ಈ ಹಣ್ಣಿನ ಜೊತೆಗೇ ಪೋಣಿಸಿರುವ ದೆವ್ವಗಳ ಕತೆಗಳೂ ಇವುಗಳ ರುಚಿಯನ್ನು ದ್ವಿಗುಣಗೊಳಿಸುತ್ತವೆ. ಈಗ ನೀವು ಕೇಳುತ್ತಿರುವುದು ನನ್ನಜ್ಜಿ ಹೇಳಿದ ಕಥೆ.

ಆಗಿನ ಕಾಲದಲ್ಲಿ ಬೆಳಗಾಗುವುದೆಂದರೆ ನಾಲ್ಕು ಗಂಟೆಗೆ, ಎದ್ದ ಕೂಡಲೇ ಅಡಿಕೆ ಮರದ ಹಾಳೆಯ ಪಡಿಗೆ ಹಿಡಿದು ಅಕ್ಕ ತಂಗಿಯರೊಂದಿಗೆ ಮಾವಿನ ಮರದಡಿಗೆ ಹೋಗುವ ಕ್ರಮ. ಸ್ವಲ್ಪ ನಿಧಾನವಾದರೆ ಹಣ್ಣುಗಳು ಬೇರೆಯವರ ಪಾಲಾದೀತೆಂಬ ಭಯ ಬೇರೆ.

ಹೀಗೆ ಒಂದು ದಿನ ಹಣ್ಣು ಹೆಕ್ಕಲು ಹೋದಾಗ, ಮರದ ಬುಡದಲ್ಲಿ ಯಾರೋ ತಲೆಗೆ ಮುಸುಕು ಹಾಕಿಕೊಂಡು ಹಣ್ಣು ಹೆಕ್ಕುತ್ತಿರುವುದು ಕಾಣಿಸಿತಂತೆ. ಯಾಕೋ ಸಂಶಯಗೊಂಡ ಮಕ್ಕಳೆಲ್ಲ ಮನೆಗೆ ಮರಳಿ ಬಂದು ಅಪ್ಪನಿಗೆ ತಿಳಿಸಿದರಂತೆ. ಆಪ್ಪ ಒಂದು ಕೈಯಲ್ಲಿ ಕಬ್ಬಿಣದ ಮೊನಚಾದ ಆಣಿ, ಇನ್ನೊಂದು ಕೈಯಲ್ಲಿ ಒಂದು ಮಾವಿನಹಣ್ಣೂ ಹಿಡಿದು ಮರದೆಡೆಗೆ ಹೋದರಂತೆ. ಆಗಲೂ ಮಕ್ಕಳು ತಿಳಿಸಿದಂತಹ ಆಕಾರ ಅಲ್ಲಿಯೇ ಇತ್ತಂತೆ. ಇವರನ್ನು ಕಂಡೊಡನೆ ಮಾವಿನ ಹಣ್ಣಿಗಾಗಿ ಕೈ ಚಾಚಿತಂತೆ. ಹಣ್ಣನ್ನು ಅದರ ಕೈಯ್ಯಲ್ಲಿಟ್ಟರೆ, ಅದನ್ನು ನೆಲಕ್ಕೆ ಬೀಳಿಸಿ, ಹೆಕ್ಕಿಕೊಡು ಎಂಬುದಾಗಿ ಸನ್ನೆ ಮಾಡಿತಂತೆ. ಅದಕ್ಕೆ ಇವರು ಬೇಕಿದ್ದರೆ ನೀನೇ ಹೆಕ್ಕಿಕೋ ಎಂದು ಹೇಳಿದರಂತೆ. ಆ ಆಕಾರ ಹೆಕ್ಕಲು ಬಗ್ಗಿದಾಗ, ತಾವು ತಂದಿದ್ದ ಆಣಿಯನ್ನು ಅದರ ತಲೆಗೆ ಜೋರಾಗಿ ಚುಚ್ಚಿದರಂತೆ. ಕೂಡಲೇ ಅದು ವಿಕಾರವಾಗಿ ಚೀರುತ್ತಾ ಅಲ್ಲಿಂದ ಮಾಯವಾಯ್ತುಂತೆ. ಎಲ್ಲಿಯಾದರೂ ಅದಕ್ಕೆ ಹಣ್ಣು ಹೆಕ್ಕಿಕೊಡಲು ಇವರೇ ಬಗ್ಗಿದ್ದರೆ, ಅದು ಇವರ ಗೋಣು ಮುರಿದು ರಕ್ತ ಕುಡಿಯುತ್ತಿತ್ತಂತೆ. ಕಬ್ಬಿಣದ ಮೊಳೆಯಲ್ಲಿ ತಲೆಗೆ ಮೊಟಕಿದರೆ ಮನುಷ್ಯರೂ ಕಿರುಚಿ ಓಡಲೇ ಬೇಕು ಎಂದು ಕೊಂಕು ತೆಗೆಯಬೇಡಿ!

ಇಂತಹ ಅಂತೆ ಕಂತೆಗಳ ಬೊಂತೆಗಳು ಕಾಟು ಮಾವಿನಹಣ್ಣಿನೊಂದಿಗೆ ಹೇರಳವಾಗಿ ಸಿಗುತ್ತವೆ. ನಿಮ್ಮಲ್ಲೂ ಹಿರಿಯರಿದ್ದರೆ ಕೇಳಿ ನೊಡಿ, ಕಥೆಯ ಸಿಹಿಯೊಂದಿಗೆ ಹಣ್ಣನ್ನು ಸವಿಯುವ ಅವಕಾಶ ನಿಮ್ಮದಾಗಬಹುದು! ಕೊನೆಗೆ ಗೊರಟನ್ನು ಎಸೆಯುವಾಗ ಹತ್ತಿರ ಇದ್ದವರ ಹೆಸರು ಕರೆದು, ಅವರು ಓ ಎಂದು ಓಗೊಟ್ಟಾಗ ಗೊರಟಿನೊಂದಿಗೆ ಓಡು ಎಂದು ಹೇಳಲು ಮರೆಯದಿರಿ!

**(ಬಣ್ಣದ ಕಡ್ಡಿ, ಜಾಗೃತಿಪ್ರಕಾಶನ, ಬೆಂಗಳೂರು, ೨೦೧೨)**

## ೨೨. ತಲೆಯಲ್ಲಿ ಕೂದಲಿಲ್ಲದಿದ್ದರೂ ಎಲ್ಲಿಗೆ ಮಲ್ಲಿಗೆ ಹೂ!

## ಮುದ್ದು ತೀರ್ಥಹಳ್ಳಿ

ಇಂದು ಬದುಕಲು ತಲೆಯಿರಬೇಕು ಎಂಬುದಕ್ಕಿಂತ ತಲೆಯ ಮೇಲೆ ಕೂದಲಿರಬೇಕು, ಅದರಲ್ಲೂ ಹೊಳಪಿನ ಕಪ್ಪನೆಯ, ಇಂತಿಷ್ಟು ಉದ್ದ-ದಪ್ಪ, ನೇರ- ಗುಂಗುರು ಕೂದಲು ಇರಬೇಕು ಎಂದೆಲ್ಲ ಯೋಚಿಸುತ್ತಾರೆ. ಕೂದಲೇನೋ ಹುಟ್ಟುವಾಗಲೇ ಭಗವಂತ ಕೊಟ್ಟೇ ಇರುತ್ತಾನಾದರೂ ಅವು ತಮ್ಮೆಣಿಕೆಯಂತೆ ಇರುವುದಿಲ್ಲ ಎಂಬುದೇ ಚಿಂತೆ. ಅದರೊಂದಿಗೆ ಬೊಕ್ಕ ತಲೆಯಾಗುವ, ಉದುರುವ, ಒರಟಾಗುವ, ಹೊಟ್ಟು-ಹೇನು ತುಂಬಿಕೊಳ್ಳುವ, ಹಣ್ಣಾಗುವ.. ಕೂದಲೆಷ್ಟೋ ಅಷ್ಟೇ ಸಮಸ್ಯೆಗಳು!

ಸಮಸ್ಯೆಗಳಿದ್ದ ಮೇಲೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸದಿರುತ್ತಾನೆಯೇ ಮಾನವ? ಆದರೆ ಪರಿಹಾರಕ್ಕಾಗಿ ಅವನು ಕಂಡುಕೊಳ್ಳುವ ಉಪಾಯಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತವೆ ಅಥವಾ ಹೊಸ ಸಮಸ್ಯೆ ಹುಟ್ಟು ಹಾಕುತ್ತವೆ ಎನ್ನುವುದೇ ಯೋಚಿಸಬೇಕಾದ ವಿಷಯ.

ಹಿಂದೆ ಹೆಣ್ಣು ಮಕ್ಕಳಿಗೆ ಹಾವಿನಂತೆ ಉದ್ದದ ಜಡೆಯಿರಬೇಕು ಎಂಬ ಅಲಿಖಿತ ನಿಯಮವಿತ್ತು. ಅವರು ಒಂದು ಜಡೆ, ಎರಡು ಜಡೆ, ಬುಟ್ಟಿ ಜಡೆ, ನೀರು ಜಡೆ ಹೀಗೆ ನಾನಾ ಕೇಶವಿನ್ಯಾಸ ಮಾಡಿಕೊಂಡು ಬೀಗುತ್ತಿದ್ದರು. ಉದ್ದದ ಜಡೆಯೆಂದು ತೋರಿಸಲು ಚೌಲಿ ಹಾಕಿ ಬಿಂಕ ತೋರುವ ಹುಡುಗಿಯರೂ ಇದ್ದರು. ಮೊಗ್ಗಿನ ಜಡೆ, ನಾಗರ ಜಡೆಗಳನ್ನು ಹಾಕಿಕೊಂಡು ಕನ್ನಡಿಯ ಮುಂದೆ ನಿಂತು ಮುಂಭಾಗ ಮತ್ತು ಜಡೆ ಎರಡೂ ಕಾಣುವಂತೆ ಭಾವಚಿತ್ರ ತೆಗೆಸಿಕೊಳ್ಳುತ್ತಿದ್ದರಂತೆ. ಹಿಂದೆ ಸಿನೆಮಾ ನಾಯಕಿಯನ್ನಂತೂ ನೀಳವೇಣಿಯಾಗಿಯೇ ತೋರಿಸುತ್ತಿದ್ದರು! ಆಗಿನ ಕೆಲ ಹುಡುಗರೂ ಕೂದಲಿಗೆ ಕತ್ತರಿ ತಾಗಿಸದೆ ಜಡೆ ಹಾಕಿಸಿಕೊಂಡು ಶಾಲೆಗೆ ಬಂದಾಗ ಮಕ್ಕಳು 'ಜುಟ್ಲ' ಎಂದು ಕಿಚಾಯಿಸುತ್ತಿದ್ದರಂತೆ.

ಜಾನಪದ ಕತೆಯೊಂದರಲ್ಲಿ ಒಬ್ಬ ರಾಜನಿಗೆ ಇಬ್ಬರು ರಾಣಿಯರಂತೆ. ಒಬ್ಬಳಿಗೆ ಒಂದು ಕೂದಲು ಇನ್ನೊಬ್ಬಳಿಗೆ ಮೂರು. ರಾಜ ಒಂದು ಕೂದಲಿನ ರಾಣಿಯನ್ನು ಪ್ರೀತಿಸದೇ ಅರಮನೆಯಿಂದ ಹೊರಹಾಕುತ್ತಾನೆ. ಅವಳು ಅಳುತ್ತಾ ಹೋಗುತ್ತಿರುವಾಗ ಪೆಟ್ಟಾದ ಸರ್ಪಕ್ಕೆ ಮದ್ದು ಹಚ್ಚುತ್ತಾಳೆ, ಒಡೆದ ಒಲೆಯನ್ನು ಸರಿ ಮಾಡುತ್ತಾಳೆ, ಮುಳ್ಳು ಮಳೆಯಲ್ಲಿ ಸಿಕ್ಕಿಬಿದ್ದ ದನವನ್ನು ಪಾರು ಮಾಡಿ ಕರುವಿನ ಬಳಿ ಬಿಡುತ್ತಾಳೆ, ಸೊರಗಿದ ಗುಲಾಬಿ ಗಿಡಕ್ಕೆ ನೀರು ಹಾಕುತ್ತಾಳೆ. ಅಲ್ಲೊಂದು ಗುಡಿಸಲಲ್ಲಿ ನರಳುತ್ತಿರುವ ಅಜ್ಜಿಗೆ ಗಂಜಿ ಕಾಯಿಸಿ ಉಣಿಸುತ್ತಾಳೆ. ಅಜ್ಜಿ 'ಮಗೂ ಸುಸ್ತಾಗಿದ್ದೀಯಾ ಸ್ನಾನ ಮಾಡಿ ಹೋಗು' ಎನ್ನುತ್ತಾಳೆ. ಸ್ನಾನ ಮಾಡಿದ ಕೂಡಲೇ ಒಂದು ಕೂದಲ ರಾಣಿಗೆ ತಲೆ ತುಂಬ ಹೊಳಪಿನ ಉದ್ದನೆಯ ಕೂದಲು ಬಂದು ಬಿಡುತ್ತದೆ. ಅಜ್ಜಿ ತಲೆ ಬಾಚಿ ಉದ್ದನೆಯ ಜಡೆ ಹೆಣೆದು ಕಳಿಸುತ್ತಾಳೆ.

ಗುಲಾಬಿ ಗಿಡ ಅರಳಿದ ಸುಂದರ ಹೂವನ್ನು ಮುಡಿಗೆ ಕೊಡುತ್ತದೆ. ದನ ಹಾಲು ಕೊಡುತ್ತದೆ. ಒಲೆ ಅದನ್ನು ಕಾಯಿಸಿ ರಾಣಿಗೆ ಕುಡಿಸುತ್ತದೆ. ಸರ್ಪ ಮುತ್ತು ರತ್ನಗಳ ಒಡವೆಗಳಿಂದ ರಾಣಿಯನ್ನು ಸಿಂಗರಿಸುತ್ತದೆ. ಅರಮನೆಗೆ ಬಂದಾಗ ರಾಜ ಒಂದು ಕೂದಲ ರಾಣಿಯ ಸೌಂದರ್ಯ ರಾಶಿಯನ್ನು ಕಂಡು ಮುದ್ದಿನ ಮೂರು ಕೂದಲ ರಾಣಿಗೆ ಗುದ್ದು ಕೊಟ್ಟು ಓಡಿಸಿ ಬಿಡುತ್ತಾನೆ. ಅವಳು ಮೊದಲ ರಾಣಿಯಲ್ಲಿ ಅವಳ ಕತೆ ಎಲ್ಲವನ್ನೂ ತಿಳಿದುಕೊಂಡು ನಗುತ್ತಾ ಹೋಗುತ್ತಾಳೆ. ದಾರಿಯಲ್ಲಿ ಸಿಕ್ಕ ಎಲ್ಲರಿಗೂ ಒಳ್ಳೆಯದನ್ನು ಮಾಡುವ ಬದಲಿಗೆ ಕೆಡುಕನ್ನು ಮಾಡುತ್ತಾಳೆ. ಅಜ್ಜಿಗೆ ಗಂಜಿ ಕಾಯಿಸುವ ಬದಲಿಗೆ ಅವಳನ್ನು ಬೈಯ್ಯುತ್ತಾ ಸೀದಾ ಸ್ನಾನಕ್ಕೆ ಓಡುತ್ತಾಳೆ. ನೀರು ಹೊಯ್ದ ತಕ್ಷಣ ಕೂದಲು ಬರುವ ಬದಲಿಗೆ ಇದ್ದ ಮೂರೂ ಕೂದಲೂ ಉದುರಿ ಮೈಯೆಲ್ಲ ಸುಟ್ಟು ಹೋಗುತ್ತದೆ. ಅಲ್ಲಿಂದ ಬೊಬ್ಬೆ ಹೊಡೆಯುತ್ತ ಬಂದರೆ ಗುಲಾಬಿ ಗಿಡ ಮುಳ್ಳಿನಿಂದ ಪರಚುತ್ತದೆ. ದನ ಹಾಯುತ್ತದೆ, ಒಲೆ ಸುಡುತ್ತದೆ. ಹಾವು ಅವಳನ್ನು ಕೊಂದೇ ಹಾಕುತ್ತದೆ. ಈಗಲೂ ಸೌಂದರ್ಯ ಇಲ್ಲದವರಿಗೆ ಸಿಗುವ ಬೆಲೆ ಅಷ್ಟರಲ್ಲೇ ಇದೆ ಬಿಡಿ. ಆದರೆ ಒಂದು ವೇಳೆ ಕತೆಯ ಹಾಗೇನಾದರೂ ಆಗುವಂತಿದ್ದರೆ ಎಷ್ಟು ಜನ ಸುಂದರಿಯರಾಗುತ್ತಿದ್ದರೋ ಎಷ್ಟು ಜನ ಸಾಯುತ್ತಿದ್ದರೋ ಗೊತ್ತಿಲ್ಲ.

ಹಿಂದೆಲ್ಲ ಹೇನು ನೋಡುವ ದೃಶ್ಯ ಎಲ್ಲೆಲ್ಲೂ ಕಾಣುತ್ತಿತ್ತು. ಕೆಲವೊಮ್ಮೆ ಹಲವು ಹೆಂಗಸರು ಒಬ್ಬರ ಹಿಂದೆ ಒಬ್ಬರು ರೈಲಿನಂತೆ ಕುಳಿತು ಹೇನು ನೋಡುತ್ತಿದ್ದರಂತೆ. ಹೇನಿನ ಬಾಚಣಿಗೆ, ಸೀರಣಿಗೆ ಎಲ್ಲ ಬಳಸುತ್ತಿದ್ದರಂತೆ. ಈಗ ಅವಕ್ಕೆಲ್ಲ ಮದ್ದು ಬಂದಿದ್ದರೂ ಹೇನಿನ ಕಾಟ ಮಾತ್ರ ತಪ್ಪಿದಂತೆ ಕಾಣುವುದಿಲ್ಲ. ಹಾಗೆಯೇ ತಲೆ ಹೊಜಿಬುಟ್ಟಿಗೂ ಹಲವು ಶಾಂಪೂ, ಕಂಡಿಷನರ್‌ಗಳಿದ್ದರೂ ಅದಕ್ಕೂ ಪರಿಹಾರ ಸಿಕ್ಕಂತಿಲ್ಲ. ಕೂದಲ ಬಣ್ಣವನ್ನಂತೂ ದಿನಕೊಂದರಂತೆ ಬದಲಾಯಿಸುವ ನೀಲಿ, ಹಸಿರು, ಕೆಂಪು ಹೀಗೆ ನಾನಾ ಬಣ್ಣಗಳನ್ನು ನೋಡುವ ಕಾಲವಿದು. ಅದರ ಬಗ್ಗೆ ಬರೆಯಲು ಪುಟಗಳು ಸಾಲದು.

ಒಮ್ಮೆ ಯಾವುದೋ ಕಾರಣಕ್ಕೆ ಪೇಟೆಗೆ ಹೋದ ನನಗೆ ಅಂಗಡಿಯೊಂದರಲ್ಲಿ ಕುಳಿತು, ಹೋಗುವ ಬರುವ ಜನರನ್ನು ನೋಡುತ್ತಾ ಹೊತ್ತು ಕಳೆಯಬೇಕಾದ ಪ್ರಸಂಗ ಬಂದಿತು. ನಾನು ಎಲ್ಲರ ತಲೆಗಳನ್ನೇ ಗಮನಿಸುತ್ತಾ ಕುಳಿತೆ. ಅಲ್ಲಿ ಕಂಡ ತಲೆಗಳ ನಾನಾ ತರಹದ ವಿನ್ಯಾಸಗಳೇ ಮುಂದೆ ನಾನು ಎಲ್ಲರ ತಲೆಗಳ ಕಡೆಗೇ ಗಮನ ಹರಿಸುವಂತೆ ಮಾಡಿಬಿಟ್ಟಿತೆಂದರೆ ನೀವು ಕೇಶ ವಿನ್ಯಾಸಗಳ ವೈವಿಧ್ಯತೆಗಳ ಮಹತ್ವವನ್ನು ಅರಿಯಬಹುದು

ಈಗಂತೂ ಹೆಣ್ಣು ಮಕ್ಕಳು ಕೂದಲನ್ನು ಬಾಯ್ ಕಟ್, ಸ್ಟೆಪ್ ಕಟ್, ಷೇಪ್, ಯು ಷೇಪ್, ಕರ್ಲ್, ಲೇಸರ್ ಕಟ್, ಕುದುರೆ ಜುಟ್ಟು ಅದೂ ಇದೂ ಅಂತ ಕತ್ತರಿಸಿ ಹೇರ್ ಡೈ, ಮೆಹೆಂದಿಯೆಂದೆಲ್ಲ ಹಚ್ಚುತ್ತ, ಬ್ಯೂಟಿ ಪಾರ್ಲರುಗಳಿಗೆ ಹೋಗಿ ಹಲವು ಬಗೆಯ ವಿನ್ಯಾಸ ಮಾಡಿಕೊಂಡು ಸಿಂಗರಿಸಿಕೊಳ್ಳುತ್ತಾರೆ. ಹುಡುಗರೇನೂ

ಕಮ್ಮಿಯಲ್ಲ. ಸ್ಪೈಕ್ ಕಟ್ ಅಂತೆ, ಗಜನಿ ಕಟ್ ಅಂತೆ ಪಂಕ್ ಕಟ್, ಬ್ಯಾಂಗ್ಸ್, ಸೀಜರ್, ಕ್ಲಾಸಿಕ್ ಕಟ್, ಪ್ಲಾಟ್ ಟಾಪ್, ಷೇಗ್ಸ್, ರೆಟ್ರೋ ಕಟ್, ಮೆಸ್ಸಿ ಕಟ್, ರಾಕ್ ಸ್ಟೈಲ್ ಕಟ್, ಕ್ರೀವ್ ಕಟ್ ಹೀಗೆ ಏನೇನೋ ಮಾಡಿಸಿಕೊಂಡು ಬಣ್ಣಗಳಿಂದ ಅಲಂಕರಿಸುತ್ತಾರೆ. ಒಬ್ಬೊಬ್ಬರು ದೇಶ, ರಾಜ್ಯಗಳ ನಕ್ಷೆ ಕೆತ್ತಿಸಿಕೊಂಡಿರುವುದನ್ನೂ ಕಾಣುತ್ತೇವೆ. ಉದ್ದಕ್ಕೆ ಕೂದಲು ಬಿಡುವವರೂ ಇದ್ದಾರೆ. ಅವರು ಹೆಣ್ಣು ಮಕ್ಕಳಂತೆ ಕೂದಲು ಹರಡಿಕೊಂಡರೆ ಹೆಣ್ಣೋ ಗಂಡೋ ತಿಳಿಯುವುದಿಲ್ಲ. ಕೆಲವರು ಸಣ್ಣ ಜುಟ್ಟು ಕಟ್ಟಿಕೊಂಡರೆ, ಇನ್ನು ಕೆಲವರು ಇಲಿ ಬಾಲದಂತೆ ಸಪೂರ ಜಡೆಯನ್ನು ಪುರುಸೊತ್ತಿನಲ್ಲಿ ಹೆಣೆದುಕೊಳ್ಳುತ್ತಾರೆ. ಮತ್ತೆ ಕೆಲವರು ನುಣ್ಣಗೆ ಬುರುಡೆ ಹೊಡೆಸಿಕೊಂಡು ಥಳ ಥಳ ಹೊಳೆಯುತ್ತಿರುತ್ತಾರೆ. ಸಣ್ಣಗೆ ಕೂದಲು ಕತ್ತರಿಸಿ ನಡುವೆ ಪಟ್ಟೆಗಳನ್ನು ಹೊಡೆಸಿಕೊಂಡಿರುವವರನ್ನೂ ನೋಡುತ್ತೇವೆ. ಇದು ಜಪಾನಿನ ಗದ್ದೆಗಳನ್ನು ವಿಮಾನದಿಂದ ನೋಡಿದರೆ ಹೇಗೆ ಕಾಣುವುದೋ ಹಾಗೆ ಕಾಣುವುದಿದೆ. ಮಂಡೆ ಬೋಳಿಸಿ ತಲೆಗೆ ಸ್ಕ್ರೂ ಚುಚ್ಚಿಕೊಳ್ಳುವುದೂ ಹಚ್ಚೆ ಹಾಕಿಸಿಕೊಳ್ಳುವುದೂ ಈಗಿನ ಫ್ಯಾಷನ್, ಹುಡುಗರು ಈಗೆಲ್ಲ ಅದೇನೋ ಜೆಲ್ ಸುರಿದು ಕೊಳ್ಳುತ್ತಾರೆ. ಹಿರಿಯರು ಆಶೀರ್ವದಿಸಲು ತಲೆ ಮುಟ್ಟಿದರೆ ಕೈಯೆಲ್ಲ ಅಂಟಂಟು!

ಒಬ್ಬರ ಮನೆಗೆ ಹೋಗಿದ್ದೆ. ಸಾಮಾನ್ಯವಾಗಿ ಮನೆಯಲ್ಲಿ ಹರೆಯದ ಕಪ್ಪು ಕೂದಲ ದಂಪತಿಗಳ ಭಾವಚಿತ್ರವನ್ನು ತೂಗು ಹಾಕಿರುವ, ಎದುರಲ್ಲಿ ಬಿಳಿ ಕೂದಲ ಅದೇ ದಂಪತಿ ಕುಳಿತು ಮಾತಾಡುವ ನೋಟ ಸಿಗುವುದಿದೆ. ಆದರೆ ಇವರ ಮನೆಯಲ್ಲಿ ಬಿಳಿ ಕೂದಲ ದಂಪತಿಗಳ ಭಾವಚಿತ್ರವನ್ನು ತೂಗು ಹಾಕಲಾಗಿತ್ತು. ಅದರ ಎದುರಿಗೆ ಕಪ್ಪಾನುಕಪ್ಪು ತಲೆಗೂದಲ ಅದೇ ಭಾವಚಿತ್ರದಲ್ಲಿರುವ ದಂಪತಿ ಕುಳಿತು ಮಾತನಾಡುತ್ತಿದ್ದರು!

ಈ ಹೇರ್ ಡೈ ಮಾಡಿಸಿಕೊಂಡರೆ ಒಂದು ಸಮಸ್ಯೆ ಎರಡೇ ದಿನಗಳಲ್ಲಿ ಬಿಳೀ ಪಟ್ಟೆಯೊಂದು ಬೈತಲೆಯಲ್ಲಿ ಮೂಡಿರುತ್ತದೆ. ದಿನೇ ದಿನೇ ಇದು ಅಗಲವಾಗುತ್ತ ಸಾಗುತ್ತದೆ. ನಮ್ಮ ಎದುರು ಮನೆಯ ಕೆಲಸದಾಕೆ ಅಜ್ಜಿ ಕೂಸಕ್ಕ ನಮ್ಮ ಮನೆಯಲ್ಲಿ ನೃತ್ಯಕ್ಕೆಂದು ತಂದಿಟ್ಟಿದ್ದ ಚೌಲಿಯನ್ನು ನೋಡಿ ಅಂತಹದ್ದೇ ತನಗೊಂದು ತಂದು ಕೊಡುವಂತೆ ದುಂಬಾಲು ಬಿದ್ದರು. ಕಾಟ ತಡೆಯಲಾರದೆ ತಂದು ಕೊಟ್ಟೆವು. ಬಳಿ ಕೂದಲ ನಡುವೆ ಕರಿ ಚೌಲಿ ಹಾಕಿ ತುರುಬು ಕಟ್ಟಿದರೆಂದರೆ ಅದು ಬಿಳಿ ಕರಿ ವಿಚಿತ್ರವಾಗಿ ಕಾಣತೊಡಗಿತು.

ಕರ್ನಾಟಕದ ಕುಗ್ರಾಮವೊಂದರಲ್ಲಿ ಮೆಲನಿನ್ ಕಡಿಮೆಯಾದ ಹೆಣ್ಣು ಮಗುವೊಂದು ಹುಟ್ಟಿತು. ಅದರ ಚರ್ಮ, ಕೂದಲು ಎಲ್ಲ ಬೆಳ್ಳಗೆ! ಫಾರಿನ್ ಮಗುವಿನಂತಿದೆಯಲ್ಲ ಅಂತಹದ್ದೇ ಹೆಸರಿಡೋಣ ಎಂದು ಡಿಕಾಸ್ಟ ಎಂದು ಇಟ್ಟರು. ಡಿಕಾಸ್ಟ ಕ್ರೈಸ್ತರ ಮನೆತನದ ಒಂದು ಹೆಸರು. ಮುಂದೆ ಸರಕಾರಿ ದಾಖಲೆ ಮಾಡುವಾಗೆಲ್ಲ ಡಿಕಾಸ್ಟ ಸರ್‌ನೇಮ್, ಸರಿ ಹೆಸರೇನು ಹೇಳೀ ಎಂದು ಕಾಡಿಸತೊಡಗಿದರು. ಮಗುವಿನ ಹೆಸರು ಡಿಕಾಸ ಎಂದಾದರೆ ಅಪ್ಪ

ಅಮ್ಮನ ಹೆಸರು ತಿಮ್ಮ, ನಿಂಗಿ ಹೇಗಾಯಿತೆಂದು ತಲೆ ತಿಂದರು. ಮತಾಂತರ ಹೊಂದಿದ್ದೀರಾ? ಎಷ್ಟು ದುಡ್ಡು ಕೊಟ್ಟರು ಎಂದು



ಗೋಳಾಡಿಸಿದರು. ಮಕ್ಕಳು ದೊಡ್ಡವರೆನ್ನದೆ ಹುಡುಗಿಯ ವಿಚಿತ್ರ ಹೆಸರಿಗೆ ಚುಡಾಯಿಸಿ ಸತಾಯಿಸಿದರು. ಹುಡುಗಿಯ ಕತೆ ಕೇಳುವವರಿಲ್ಲ.

ಬೊಕ್ಕ ತಲೆ ಎನ್ನುವುದು ಹೆಣ್ಣು ಗಂಡು ಯಾರನ್ನೂ ಬಿಟ್ಟಿದ್ದಲ್ಲ. ಅಂಥವರನ್ನು ಬಾಣಲೆ, ಬೋಳ, ಟಕ್ಲು, ಪೂರ್ಣ ಚಂದ್ರ, ಅರ್ಧ ಚಂದ್ರ ಎಂದೆಲ್ಲ ಕರೆಯುವುದಿದೆ. ಇಲ್ಲಿ ಚಂದ್ರ ಎನ್ನುತ್ತಾರಾದರೂ ಆ ತಲೆಗಳು ಸೂರ್ಯನಂತೆ ಹೊಳೆಯುವುದೇ ಜಾಸ್ತಿ! ಬೊಕ್ಕ ತಲೆಯಾಗುವುದರಿಂದ ಲಾಭವೂ ಇದೆ ಬಿಡಿ. ಇವರನ್ನು ಅನಾಯಾಸವಾಗಿ "ಬುದ್ಧಿವಂತರೆಂದು ಜನ ತಿಳಿದು ಬಿಡುತ್ತಾರೆ! ಎಣ್ಣೆಯ ಖರ್ಚೂ ಕಡಿಮೆ, ಹೆಚ್ಚೆಂದರೆ ಒಂದು ಹನಿ ನೆತ್ತಿಯಲ್ಲಿ ಹನಿಸಿ ಬಿಟ್ಟರಾಯಿತು. ಇಡೀ ಬುರುಡೆಗೆ ಇಳಿದು ಬಿಡುತ್ತದೆ. ಇಲ್ಲೊಬ್ಬರು ಬೊಕ್ಕ ತಲೆ ಮಾಮ ಕಿವಿಯ ಬಳಿ ಉದ್ದ ಕೂದಲು ಬಿಟ್ಟು ಎಣ್ಣೆ, ನೀರು ಹಾಕಿ ಇನ್ನೊಂದು ಕಿವಿವರೆಗೂ ಬರುವಂತೆ ನೆತ್ತಿಯ ಮೇಲೆ ಚೆನ್ನಾಗಿ ತಟ್ಟಿ ಕೂರಿಸುತ್ತಾರೇನೋ ನಿಜ. ಸ್ವಲ್ಪ ಹೊತ್ತಲ್ಲೇ ಗಾಳಿಗೆ ನೆತ್ತಿಯಿಂದ ಹಾರಿ ಕಿವಿಯ ಬಳಿ ಗೇಣುದ್ದದ ಗುಂಗುರು ಮುಂಗುರುಳು ಉಯ್ಯಾಲೆಯಾಡುತ್ತಿರುತ್ತದೆ. ನಮ್ಮ ಮೇಷ್ಟ್ರು ಒಬ್ಬರಿದ್ದಾರೆ. ಅವರ ಮಂಡೆಯ ಕೂದಲೆಲ್ಲ ಉದುರಿದರೂ ಕಿವಿಯ ಬಳಿಯಿಂದ ಹೊರಟು ಕುತ್ತಿಗೆಯ ಮೇಲು ಭಾಗದಿಂದ ಹಾಯ್ದು ಇನ್ನೊಂದು ಕಿವಿಯ ತನಕ ಎರಡು ಇಂಚು ಅಗಲದ ಕೂದಲ ಪಟ್ಟೆ ಮಾತ್ರ ಉಳಿದಿದೆ. ಆದರೆ ಶಾಲೆಗೆ ಬರುವಾಗ ಅವರು ಏನನ್ನು ಮರೆತು ಬಂದರೂ ಬಾಚಣಿಗೆಯನ್ನು ಮರೆತು ಬರುವುದಿಲ್ಲ. ಮಾತ್ರವಲ್ಲ, ಐದೈದು ನಿಮಿಷಕ್ಕೊಮ್ಮೆ ಆ ಕೂದಲ ಪಟ್ಟೆಯನ್ನು ಬಾಚಿ ಕೊಳ್ಳುತ್ತಿರುತ್ತಾರೆ. ಇದರಿಂದ ಇದ್ದ ನಾಲ್ಕು ಕೂದಲೂ ಉದುರುವುದಿಲ್ಲವೇ ಎಂಬುದು ನಮ್ಮ ಪ್ರಶ್ನೆ.

ಕೆಲವರು ಬೊಕ್ಕತಲೆಯಾದರೆ ಸಹಿಸದೆ ಜೀವನ ಪೂರ್ತಿ ತಮಗೆ ತಾವೇ ಟೊಪ್ಪಿ ಹಾಕಿಕೊಳ್ಳುತ್ತಾರೆ. ಇದೆಲ್ಲ ರಗಳೆ ಬೇಡ ಎಂದು ತಲೆಗೆ ನಾಟಿ ಮಾಡಿಸಿಕೊಳ್ಳುವ 'ನಾಟಿ ಪರ್ಸನಾಲಿಟಿ'ಯವರೂ ಇದ್ದಾರೆ. ಇನ್ನು ಕೆಲವರು ವಿಗ್ಗಿನ ಮೊರೆ ಹೋಗುತ್ತಾರೆ. ಆದರೆ ವಿಷ್ಣು ತೊಟ್ಟಾಗ ಬೆವರು ಬಂದರೆ, ತುರಿಕೆಯಾದರೆ ಹೇಗೆ ಸಹಿಸಬಹುದು ಎಂದು ನನಗೆ ಚಿಂತೆ. ಆದರೆ ವಿಗ್ಗಿನ ಬಣ್ಣ, ಆಕಾರ ಸರಿಯಾಗಿರದಿದ್ದರೆ ಎಡವಟ್ಟಾಗುತ್ತದೆ. ಸಾಮಾನ್ಯವಾಗಿ ಮೊದಲು ಕೂದಲು ಬೆಳ್ಳಗಾಗಿ ನಿಧಾನವಾಗಿ ಗಡ್ಡ ಆನಂತರ ಹುಬ್ಬು ಬೆಳ್ಳಗಾಗುತ್ತದೆ. ಆದರೆ ಇಂದು ಬಿಳಿ ಗಡ್ಡದ ಕರಿ ತಲೆಯ ವಿಗ್ಗು ಧಾರಿಗಳಾದ ಖ್ಯಾತನಾಮರನ್ನು ನಾವು ಟಿವಿಯಲ್ಲಿ ನೋಡುತ್ತೇವೆ. ಒಮ್ಮೆ ನಾನು ಮಂಗಳೂರಿಗೆ ಹೋಗುವಾಗ ಬಸ್ಸಿನಲ್ಲಿ ಒಬ್ಬ ಅಜ್ಜಿಯನ್ನು ನೋಡಿದೆ. ತಲೆಯನ್ನು ಚೆನ್ನಾಗಿ ಬಾಚಿ ತುರುಬಿಗೆ ಮಲ್ಲಿಗೆ ಮುಡಿದಿದ್ದರು.

ತಮಾಶೆಯೆಂದರೆ ಅವರ ವಿಗ್ಗು ಆಕಾರ ಬಣ್ಣ ಎಲ್ಲ ಸರಿಯಿತ್ತು. ಆದರೆ ತೊಟ್ಟ ರೀತಿ ಹೇಗಿತ್ತೆಂದರೆ ಹಣೆ ಮತ್ತು ತಲೆಯ ನಡುವಿನ ಸರಹದ್ದು ಗೊತ್ತಾಗದೇ ಹುಬ್ಬಿನ ಬಳಿಗೇ 'ಅಡಿಕೆ ಹಾಳೆ ಟೊಪ್ಪಿಯಂತೆ' ಧರಿಸಿಕೊಂಡಿದ್ದರು. ಹಾಗಾಗಿ ಹಿಂದೆ ಕುತ್ತಿಗೆಯಿಂದ ಅರ್ಧತಲೆಯವರೆಗೂ ವಿಗ್ಗು ಆವರಿಸಲಾಗದೇ ಹಿಂದಲೆ ನುಣ್ಣಗೆ ಹೊಳೆಯುತ್ತಿತ್ತು!

ತಲೆಯಲ್ಲಿ ಕೂದಲಿಲ್ಲದಿದ್ದರೂ ವಿಗ್ಗಿಗೆ ಮಲ್ಲಿಗೆ ಹೂ! ೧೩೭

ವಿಗ್ಗು ತಲೆಗಿಂತ ದೊಡ್ಡದಿದ್ದರೆ ಮುಗಿದೇ ಹೋಯಿತು. ಒಮ್ಮೆ ಒಬ್ಬ ಮಹಿಳೆ ವಿಗ್ಗನ್ನು ತೊಟ್ಟುಕೊಂಡು ಅಂದವಾಗಿ ಜಡೆ ಹೆಣೆದು, ಮಲ್ಲಿಗೆ ಮಾಲೆ ಮುಡಿದು ಒಂದು ಮದುವೆ ಮನೆಗೆ ಬಂದರು. ಯಾರೋ ಹಿಂದಿನಿಂದ ಕರೆದರೆಂದು ಸರಕ್ಕನೆ ತಿರುಗಿದರು. ಚಂದವಾದ ಜಡೆ ವಿಗ್ಗಿನ ಸಮೇತ ಗಿರಕ್ಕನೆ ತಿರುಗಿ ಹಣೆಯ ಬಳಿ ನೇತಾಡತೊಡಗಿತು!

ವಿಗ್ಗಿನ ಆಕಾರ, ಬಣ್ಣ ಎಲ್ಲ ಸರಿಯಾಗಿದ್ದರೂ ಸಮಸ್ಯೆಯಾಗುವುದಿದೆ. ಒಂದೂರಲ್ಲಿ ಒಬ್ಬರಿದ್ದರು, ಇಂಥ ವಿಗ್ಗುಧಾರಿಗಳು. ಅವರನ್ನು ಮಕ್ಕಳು ಟೋಫನ್ ಮಾಮಾ ಎಂದೇ ಕರೆಯುತ್ತಿದ್ದರು. ಶಾಲೆಯ ಬಳಿಯೇ ಅವರ ಪೆನ್ನು ಪುಸ್ತಕದಂಗಡಿಯಿದ್ದುದರಿಂದ ಮಕ್ಕಳು ಅಲ್ಲಿಗೆ ಹೋಗಿಯೇ ಹೋಗುತ್ತಿದ್ದರು. ಹೆಣ್ಣು ಮಕ್ಕಳು ಅಲ್ಲಿಗೆ ಹೋದಾಗ ಸಮಯ ನೋಡಿಕೊಂಡು ಅವರು ಹುಡುಗಿಯರ ಮೈ ಕೈ ಮುಟ್ಟುತ್ತಿದ್ದರು. ಹಾಗಾಗಿ ಒಂದು ದಿನ ಜನರೆಲ್ಲ ಸೇರಿಕೊಂಡು ಚೆನ್ನಾಗಿ ಬಡಿದರು. ಆಗ ಅವರ ವಿಷ್ಣು ಹತ್ತೂ ದಿಕ್ಕುಗಳಿಗೂ ಹಾರಿದ್ದು ಎಲ್ಲೋ ಮಾಯವಾಗಿಬಿಟ್ಟಿತಂತೆ. ಆಮೇಲಿಂದ ಅವರು ವಿಗ್ಗು ತೊಡುವ ಸಾಹಸಕ್ಕೆ ಹೋಗದೇ ಬೊಕ್ಕ ತಲೆಯ ಬುದ್ಧವಂತರಾದರು!

ಆದ್ದರಿಂದ ತಲೆ ಹೇಗೇ ಇರಲಿ, ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ, ವಿಷ್ಣು ಗಿಗ್ಗುಗಳ ಹಂಗಿಲ್ಲದೆ, ನಮಗೆ ನಾವೇ ಗುಗ್ಗುಗಳೆಂದುಕೊಂಡು ತಲೆ ತಗ್ಗಿಸದೆ ಎಗ್ಗು ತಗ್ಗಿಲ್ಲದೇ ಜಗ್ಗದೆ ಕುಗ್ಗದೆ ಬಾಳುವುದೇ ಸರಿಯಲ್ಲವೇ?

**(ಕನ್ನಡಪ್ರಭ, 19, ಮೇ 2013)**

# ೧೩. ಹೀಗೊಂದು ದಂತಕತೆ

**ಸಾಯಿಲಕ್ಷ್ಮಿ ಎಸ್.**

ದಂತಪಂಕ್ತಿ ದೈವ ಮಾನವನಿಗಿತ್ತ ಸಹಜ ಪ್ರಸಾದನ, ಮನುಜನ ವದನಕ್ಕೆ ಅಪರಿಚಿತರು, ನಕ್ಕು ಪ್ರಧಾನವಾದ ಅಲಂಕಾರ. ನಮಗೆಲ್ಲ ಯಾರಾದರೂ ಮಾತನಾಡಿಸಿದರೆ ಸಾಕು. ಅವರು ಒಳ್ಳೆಯವರೆಂಬ ಭಾವ ಮೂಡಿ, ಆತ್ಮೀಯರೆನಿಸುತ್ತಾರೆ. ಹೊರ ಹೊರಟಿದ್ದ ಒಬ್ಬರು 'ನಾನು ಪ್ರಯಾಣಕ್ಕೆ ಸಿದ್ಧ' ಎಂದಾಗ, ಗಾಂಧೀಜಿಯವರು, 'ಯುವರ್ ಡ್ರೆಸ್ ಈಸ್ ನಾಟ್ ಕಂಪ್ಲೀಟ್ ಟಿಲ್ ಯು ವೇರ್ ಎ ಸ್ಮೈಲ್' ಎಂದು ಹೇಳಿದ್ದರಂತೆ!

ನಾನು ಹೇಳ ಹೊರಟಿರುವ ಈ ದಂತಾಯಣ ಇಲ್ಲಿಂದ ತುಸು ಕವಲೊಡೆಯುತ್ತದೆ. ನಮಗಿರುವ ಹಲ್ಲುಗಳ ಸಂಖ್ಯೆ ೩೨ ಎಂದು ನಂಬಿರುವೆವಾದರೂ, ಅದರಲ್ಲಿ ಅನೇಕವು ನಾನಾ ಕಾರಣಗಳಿಗೆ, ಬಾಯಿಯೆಂಬ ಬಾವಿಯಲ್ಲಿ, ಕರಗಿ, ಕಳೆದೇ ಹೋಗಿರುತ್ತದೆ. ಹಲ್ಲಿನ ನಿಜ ಅರ್ಥ, ಪ್ರಾಮುಖ್ಯ ನಾವು ನಮ್ಮ ಬಾಳಲ್ಲಿ ತಿಳಿಯುವ ಹೊತ್ತಿಗೆ, ಅದರ ಸ್ವರೂಪ, ಸೂಕ್ಷ್ಮ ರಚನೆ, ನಾವು ಅಲ್ಲಿಯವರೆಗೂ ಅದನ್ನು ಉದಾಸೀನ ಮಾಡಿದ್ದರ ಪರಿಣಾಮ, ಗೋಚರಿಸತೊಡಗಿ, ಇರುವುದನ್ನಾದರೂ ಉಳಿದ ಬಾಳಿಗೆ ಜೋಪಾನ ಮಾಡಿಕೊಂಡರೆ ಅಷ್ಟೇ ಸಾಕು ಎಂಬ ತಿಳುವಳಿಕೆ ಪ್ರಾಪ್ತವಾಗುತ್ತದೆ. ಇರಲಿ ಬಿಡಿ, ನಾವೇನು ಟೂತ್‌ಪೇಸ್ಟ್‌ಗೆ ಜಾಹೀರಾತು ನೀಡುವ ಯಾವ ಆಹ್ವಾನವೂ ಹತ್ತಿರದಲ್ಲಿ ಇಲ್ಲವಲ್ಲ.

ಬರಿಯ ನಗು ಬೀರುವುದು ಅಥವಾ ಸಿಟ್ಟಿಗೆ ಕಟಕಟ ಕಡಿಯುವುದಷ್ಟೇ ಹಲ್ಲಿನ ಕರ್ತವ್ಯವಲ್ಲ. ನಮ್ಮ ಜೀರ್ಣಕ್ರಿಯೆಯಲ್ಲಿ ಇವೆಲ್ಲಾ ಬಾಯಿಯೆಂಬ ಪ್ರವೇಶದ್ವಾರದ, ದ್ವಾರಪಾಲಕರು. ದವಡೆಹಲ್ಲು ಮರೆಯಾದರೆ, ಚಕ್ಕುಲಿ ಕೋಡುಬಳೆ ತಿನ್ನುವುದೆಲ್ಲಿ? ಪುರಳಂಗಾಯಿ ಉಂಡೆಯಂತೂ ಕನಸಿನ ಮಾತೇ. ಸಿಂಹಸ್ವಪ್ನಕ್ಕೆ ರಹದಾರಿ. ಹೀಗೆ ಹಲ್ಲು ಪಚನಕ್ರಿಯೆಯಲ್ಲಿ ಸಹಕಾರಿ. ನಮಗೆ ಬಲು ಉಪಕಾರಿ. ಒಂದು ಪಕ್ಷ ನಮಗೆ ಹಲ್ಲು ಇಲ್ಲವಾಗಿದ್ದಲ್ಲಿ, ನಾವೆಲ್ಲ ಬರಿಯ ರಾಗಿಮುದ್ದೆ ನುಂಗುತ್ತಾ ಜೀವಿಸಬೇಕಿತ್ತು. ಆಗ ಬದುಕು ಇಷ್ಟು ಸ್ವಾರಸ್ಯ ಪೂರ್ಣವಾಗಿರುತ್ತಿತ್ತೇ? ಹೀಗೆ ಲಕ್ಷ

ಕೋಟೆಯ ಮೇಲೆ ಕಣ್ಣು ಹಾಕದೆ ಎಲ್ಲರೂ, ಸರಿಸಮಾನರಾಗಿ, ಮಾನವಂತರಾಗಿ ಬಾಳುತ್ತಿದ್ದೆವೆನೋ? ನಮ್ಮ ಅಗತ್ಯಗಳೇ ಕಡಿಮೆಯಾಗುವುದು ನೆನೆದರೆ ತೃಪ್ತಿ ಉಕ್ಕುತ್ತದೆ.

ಇತ್ತೀಚೆಗೆ, ನಮ್ಮ ಮನೆಯ ಟೆರೇಸ್ ತೋಟದ ಕುಂಡದಲ್ಲಿ ಬೆಳೆದ, ವೀಳೆಯದೆಲೆಯ ಎಳೆ ಚಿಗುರನ್ನು ಆಫೀಸಿಗೆ, ಊಟದ ನಂತರ ಸವಿಯಲು



ಕೊಂಡೊಯ್ದಿದ್ದೆ. ಆಫೀಸ್ ಕೆಲಸದಲ್ಲಿ ನಮಗೆ ಎಷ್ಟು ಶ್ರದ್ಧೆಯೋ, ಈ ಊಟ ತಿಂಡಿಯ ಬುತ್ತಿ ಕಟ್ಟಿಕೊಂಡು ಹೋಗಿ ಸಂಭ್ರಮಿಸುವುದರಲ್ಲೂ ಅಷ್ಟೇ ಶ್ರದ್ದೆ, ಅಲ್ಲ, ಒಂದು ಹೆಜ್ಜೆ ಮುಂದೆ. ಸಹೋದ್ಯೋಗಿ ಮಿತ್ರರಾದ ರಘು, ಅದನ್ನು ಟೇಬಲ್ ಮೇಲೆ ನ್ಯೂಸ್‌ಪೇಪರ್ ಹರಡಿ, ಅದರ ಮೇಲೆಟ್ಟು ಗೆಳೆಯರ ಬಳಗವನ್ನೇ ಆಹ್ವಾನಿಸಿ ಬಿಡುತ್ತಾರೆ.

'ಮೇಡಂ ಮನೆಯ ಎಲೆ, ದಿವಿನಾಗಿದೆ ಬನ್ನಿ...'

ಈ ಕೂಟ ರಸದೂಟದಲ್ಲಿ ಬರಿಯ ತಾಂಬೂಲ ಮೆಲ್ಲಲೂ ಬರುವವರಿದ್ದಾರೆ. ಇಂತಹ ಒಂದು ದಿನ, ಅದ್ಯಾವ ಮಾಯದಲ್ಲೋ, ಒಂದು ಸಾಸಿವೆ ಗಾತ್ರದ ಅಡಿಕೆ ಚೂರು, ನನ್ನ ಎಡ ದವಡೆಯಲ್ಲಿ ತುಂಡಂತೆ ಉಳಿದಿದ್ದ ಹಲ್ಲನ್ನು, ತಾನು ವಾಸವೂರಲು ಆರಿಸಿಕೊಂಡಿರಬೇಕು. ಆದರೆ ಖುಷಿಯಲ್ಲಿ ನನಗದು ತಿಳಿಯದೆ ಹೋಯಿತು. ಎರಡು ದಿನ ಕಳೆಯುವಲ್ಲಿ, ಆ ಹಲ್ಲು, ನೋವಿಂದ ಕೂಡಿ, ನಾನು ನೃತ್ಯ ಮಾಡಲಾರಂಭಿಸಿದೆ. ನಿಂತಲ್ಲಿ ನಿಲ್ಲಲಾರದೆ, ಕೂತಲ್ಲಿ ಕೂರಲಾರದೆ, ಯಮಯಾತನೆ ಅನುಭವಿಸಿ ಬಿಟ್ಟೆ. ಬಾಯಿ ತುಂಬಾ ನೀರು ತುಂಬಿಕೊಂಡ್ರೆ, ನೋವು ತಿಳಿಯುತ್ತಿರಲಿಲ್ಲ. ಆ ನೀರು ಉಗುಳಿದರೆ, ಮತ್ತೆ ಅದೇ ಮಟ್ಟದ ನೋವು, ಸುಮಾರು ಇಪ್ಪತ್ತು ದೊಡ್ಡ ಬಾಟಲ್ ನೀರು, ಮುಕ್ಕಳಿಸಿ, ಮುಗಿಸಿದ್ದೆ. ಅದನ್ನು ಕುಡಿದಲ್ಲಿ ಬೇರೊಂದು ಬಗೆಯ ಸಮಸ್ಯೆ. ಮಾರನೆಯ ದಿನ, ಜೀವ ಕೈಯಲ್ಲಿ ಹಿಡಿದು, ನೋವು ತಡೆಯಲಾರದೆ, ದಂತವೈದ್ಯರ ಬಳಿ ಹೋದೆ. ಅವರು ನನ್ನ ಬಾಯಲ್ಲಿ, ಮೂರು ಲೋಕ ಕಾಣದೆ ತಳಮಳಿಸಿ, ಎಲ್ಲ ಹಲ್ಲಿನ ಎಕ್ಸರೇ ತೆಗೆಸಿ ಬರಲು ಬರೆದು ಕೊಟ್ಟರು. ಅದೇನು ಅವರ ಕೈಗುಣವೊ ಕಾಣೆ. ಮನೆಗೆ ಬರುವಲ್ಲಿ, ಆ ನೋವು ಮಂಗಮಾಯ. ಪ್ರಾಯಶಃ ನಾನು ಹಿಂದಿನ ದಿನ, ಬಾಯಲ್ಲಿ, ನೀರು ತುಂಬಿಕೊಂಡು ಉಗುಳಿದ ರಭಸ ಕ್ರಿಯೆಯಲ್ಲಿ, ಆ ಪುಟ್ಟ ಅಡಿಕೆ ಚೂರು, ದವಡೆ ಹಲ್ಲಿನ ಸಂದಿನಿಂದ ಹೊರ ಬಿದ್ದಿರಬೇಕೆನಿಸುತ್ತೆ. ಹಲ್ಲು ನೋವು ಅನುಭವಿಸುವುದು. ಒಂದು ವಿಚಿತ್ರ ಸಂಕಟ. ಅಪ್ಪ ಒಮ್ಮೆ, ಹಲ್ಲು ನೋವು ತಾಳಲಾರದೆ, ಬಾವಿಯ ಬಳಿ, ರಾತ್ರಿಯೆಲ್ಲ ಕುಳಿತು, 'ಈ ನೋವು ತಿನ್ನೋಕ್ಕಿಂತ, ಬಾವಿ ಒಳಗೆ ಬೀಳೋದೇ ದಿವ್ಯ ಔಷಧ' ಎನ್ನುವಾಗ, ನಾವು ನಿದ್ದೆಗೆಟ್ಟು ಅವರ

ಪ್ರಾಣ ಕಾಪಾಡಿದ್ದೆವು. ಆಂಗ್ಲ ಭಾಷೆಯಲ್ಲಿ ಒಂದು ಸೊಗಸಾದ ಮಾತಿದೆ. 'ಒನ್ ವಿಚ್ ಈಸ್ ಬೋತ್ ಫಿಸಿಕಲ್ ಅಂಡ್ ಮೆಂಟಲ್ ಈಸ್ ಡೆಂಟಲ್'! ನಾನು ತಮಾಷೆಗೆಂಬಂತೆ ಹೇಳುತ್ತಿರುತ್ತೇನೆ, 'ಒಂದು ಸಲ ದಂತ ವೈದ್ಯರು ನನ್ನ ಬಾಯಿಯಲ್ಲಿ ಕೈಯಿಟ್ಟರೆ, ಆರು ತಿಂಗಳಿಗೆ ಆಗೋಷ್ಟು ಕೆಲಸ ಇರುತ್ತೆ. ಬೇರೆ ರೋಗಿಗಳೇ ಬೇಡ'.

ಹಲ್ಲು ನೋವಿಗೆ ಶಾಶ್ವತ ಪರಿಹಾರವೆಂದರೆ, ಎಲ್ಲ ಹಲ್ಲು ಕೀಳಿಸಿ, ಕೃತಕ ಹಲ್ಸೆಟ್ ತೊಟ್ಟುಕೊಳ್ಳುವುದು ಎಂಬುದು ಕೆಲವರ ಅಭಿಪ್ರಾಯ. ಒಂದೆರಡು ತಿಂಗಳ ಹಿಂದೆ, ನಮ್ಮ ಪೂಜಾ ಅಜ್ಜಿ, ಹಲ್ಲು ಕೀಳಿಸಿ ಕೊಳ್ಳೋಕೆ ಶುರು ಮಾಡಿದರು. ವೈದ್ಯ ಸಂಬಂಧಿಕ. ಆತ ವಾರದಲ್ಲಿ ಮೂರು ದಿನ ಕೊಚ್ಚಿನಿನಲ್ಲಿ ಕ್ಲಿನಿಕ್ ನಡೆಸುತಾನ. ಉಳಿದಂತೆ ಬೆಂಗಳೂರಿನಲ್ಲಿ ಇರತಾನಂತೆ.



ಸುಮಾರು ದಿನವಾದ ಮೇಲೆ ಪೂಜಾ ಶಟಲ್ ಆಡ ಸಿಕ್ಕಳು. 'ಪೂಜಾ, ನಿಮ್ಮಜ್ಜಿ ಹಲ್ಲೆಲ್ಲಾ ಕಿತ್ತಿಸಿ ಕೊಂಡಾಯ್ತಾ?', 'ಇಲ್ಲ ಆಂಟಿ, ಡಾಕ್ಟರ್ ಲಂಡನ್‌ಗೆ ಹೋಗಿದ್ದಾರೆ.", "ಅಜ್ಜೀನೂ ಅಲ್ಲೇ ಕರಕೊಂಡು ಹೋಗಿ, ಹಲ್ಲು ಕೀಳಿಸೋ ಕೆಲಸ ಮುಗಿಸಿ ಬರಬಹುದಿತ್ತಲ್ಲ.' ನನ್ನ ಮಾತಿಗೆ, ಪೂಜಾ ಬಾಯಿ ತೆರೆದು, ಚಂದದ ಹಲ್ಲು ತೋರುತ್ತಾ ದೊಡ್ಡ ನಗೆ ನಕ್ಕಳು, ಪೂಜಾಗೆ ನಾನು ನನ್ನ ಅನುಭವ ಹೇಳ ತೊಡಗಿದೆ.

'ಪೂಜಾ, ನಾವು ಅರಕಲಗೂಡಿಗೆ ರೆಕಾರ್ಡಿಂಗ್‌ಗೆ ಹೋಗಿದ್ದಿವಿ. ರಾಮರಾಯರು ಅದರ ಪೂರ್ತಿ ಹೊಣೆ ಹೊತ್ತಿದ್ದರು. ಸಂದರ್ಶನಗಳ ಧ್ವನಿ ಮುದ್ರಣ ಮುಗಿದ ನಂತರ, ನಮಗೆಲ್ಲ ಭೋಜನ ವ್ಯವಸ್ಥೆ ಅವರ ಮನೆಯಲ್ಲಿ ಮಾಡಿದ್ದು, ಅಲ್ಲಿಗೆ ಕರೆದೊಯ್ದರು'. ಪೂಜಾ ಹಾ, ಹೂಂ ಎನ್ನದೆ ಶಟಲ್ ಬೀಸುತ್ತಾ, ನನ್ನ ಪ್ರವರ ಕುತೂಹಲದಿಂದ ಕೇಳುತ್ತಿದ್ದವಳು, ನಾನು ಮಾತು ನಿಲ್ಲಿಸಿದಾಗ, 'ಆಮೇಲೆ ಆಂಟಿ' ಎಂದಳು. ನಾನು ಮುಂದುವರೆಸಿದೆ. 'ಪೂಜಾ, ನಾವು ರಾಮರಾಯರ ಮನೆಗೆ ಊಟಕ್ಕೆ ಹೋದೆವಲ್ಲ, ಬಾಗಿಲಿಗೆ ಗಮಗಮ ಪರಿಮಳ, ಅಂಗಳದಲ್ಲಿ ನಗೋ ರಂಗೋಲಿ, ಮನೆಮಂದಿ, ಅಕ್ಕಪಕ್ಕದವರು, ನಮ್ಮನ್ನು ಪ್ರೀತಿಯಿಂದ ಬರ ಮಾಡಿಕೊಂಡರು. ಪೇಟೆ ಜನ, ಆಕಾಶವಾಣೀವು ಅಂತಾ ನಮಗೆ ಭಾರಿ ಮಯ್ಯಾದೆ, ಕುಶಲ ಆಯಿತು. ಸರಿ ಬಾಳೆ ಎಲೆ ಮೇಲೆ ಸೊಗಸಾದ ಪಾಯಸ, ಚಿತ್ರಾನ್ನ, ಪಲ್ಯ, ಹಪ್ಪಳ, ಹಬೆಯಾಡೋ ಸಣ್ಣಕ್ಕಿ ಅನ್ನ, ಹಸು ತುಪ್ಪ ಒಂದರ ಹಿಂದೊಂದು ಬಂದು ಕೂತವು. ನಮ್ಮ ಮೂಗಿನ ಹೊಳ್ಳೆ ಅರಳಿ, ಬಾಯಲ್ಲಿ ನೀರೂರುತಿತ್ತು. ಇನ್ನೇನು ನನ್ನ ಸಹೋದ್ಯೋಗಿ ಪ್ರಸಾದ, ತುತ್ತು ಬಾಯಿಗಿಡಬೇಕು ರಾಮರಾಯರಿಗೆ ಅದ್ಯಾವ ಪ್ರೇರಣೆ ಆಯಿತೋ ಕಾಣೆ, ರಾಮರಾಯರು ತಮ್ಮ ಬಾಯಿಂದ ಹಲ್ಸೆಟ್ ಕಳಚಿ, ಎಲೆ ಪಕ್ಕಕ್ಕಿಟ್ಟು, ಒಗ್ಗರಣೆ ಸೇರಿಸಿದರು. 'ನಾನು ನಿಮ್ಮಲ್ಲಿಯ ರೆಕಾರ್ಡಿಂಗ್‌ಗೆ ಮಾತ್ರ ಈ ಹಲ್ಸೆಟ್ ಬಳಸೋದು. ಊಟಕ್ಕೆಲ್ಲ ಆಗದೇ ಆಗದು. ನನ್ನ ಹೆಂಡತಿ, ಮೆತ್ತಗೆ ಅನ್ನ ಬೇಯಿಸಿ ಮಾಡಿ ಬಡಿಸತಾಳೆ, ಅದ ನನಗೆ

ಹದವಾಗಿರತ್ತೆ.' ಎಂದವರೇ ಎಲೆಗೆ ಕೈ ಹಾಕಿದರು. ನಾನು ಪ್ರಸಾದ್ ಮುಖ ನೋಡಿದೆ. ಅವರಿಗಂತೂ ಆ ಹಲ್ಸೆಟ್ ಅಲ್ಲಿಟ್ಟಿದ್ದು, ಊಟದ ಅಪೇಕ್ಷೆಯನ್ನೆ ಕಿತ್ತು ಕೊಂಡು ಬಿಡು, ಅವರು ಆಡಲಾರದೆ ಸಿಟ್ಟಿಂದ ಕುದೀತಿದ್ದರು.

ಪೂಜಾ ಏಕಾಗ್ರಚಿತ್ತದಿಂದ ಕೇಳುತ್ತಿದ್ದವಳು ತನ್ನ ಪ್ರತಿಕ್ರಿಯೆ ವ್ಯಕ್ತಪಡಿಸಿದಳು. 'ಆ ರಾಮರಾಯರಿಗೆ ಅಷ್ಟೂ ಗೊತ್ತಾಗೋದು ಬೇಡ್ವಾ ಆಂಟಿ, ಅವರ ಒಂದು ಅವಿವೇಕದಿಂದ, ನಿಮ್ಮ ಒಳ್ಳೇ ಊಟಕ್ಕೆ ಕಲ್ಲು ಹಾಕಿ ಬಿಟ್ರಲ್ಲ.

“ಊಟ ತನ್ನಿಚ್ಛೆ, ನೋಟ ಪರರಿಚ್ಛೆ' ಅನ್ನೋ ಮಾತು ಸತ್ಯವಾದರೂ, ಕಳಚಿಟ್ಟ ಹಲ್ಸೆಟ್ ಎಲ್ಲರ ಇಚ್ಚೇನೂ ನುಂಗಿ ನೀರು ಕುಡಿಯುತ್ತೆ ಅನ್ನೋದು ಮಾತ್ರ ಅಂದು ಶತಸಿದ್ಧವಾಯಿತು.

ಪೂಜಾಳ ಬತ್ತಳಿಕೆಯಲ್ಲೂ, ಹಲ್ಸೆಟ್ ಪ್ರಸಂಗಗಳು ಹಲವಿದ್ದರೂ, ಒಂದು ಘಟನಾ ಬಾಣ ಹೊರ ಬಂತು. 'ಆಂಟಿ, ಆವತ್ತು ನಮ್ಮ ಮನೇಲಿ ನಾಗರ ಪಂಚಮಿ



ಸಂಭ್ರಮ. ಎಲ್ಲ ಬಂಧು ಬಳಗ ನಮ್ಮ ಮನೇಲಿ ಸೇರಿದ್ದರು. ಪೂಜೆ, ಶಾಸ್ತ್ರಗಳೆಲ್ಲ ಮುಗಿದ ಮೇಲೆ, ಎಲ್ಲರಿಗೂ ಹೊರಡುವ ಗಡಿಬಿಡಿ. ನಮ್ಮ ಅಜ್ಜಿ ಮಾಡಿದ್ದ ತಿಂಡಿ ತಿನಿಸುಗಳನ್ನು, ಎಲ್ಲರೂ ಡಬ್ಬಿಗಳಲ್ಲಿ ತುಂಬಿಸಿಕೊಂಡು ಹೋಗುತ್ತಿದ್ದರು. ನಮ್ಮ ತಾತ ಇದಾರಲ್ಲ ಅವರ ಅಕ್ಕನ ಮಗನಿಗೆ ನಮ್ಮಜ್ಜಿ ಮಾಡೋ ಉಪ್ಪಿಟ್ಟು ಇಷ್ಟ ಅಂತಾ ಕಸೀನ್ ಒಬ್ಬರು ಹೇಳಿ ಬಿಟ್ಟು, ಅಜ್ಜಿಗೆ ಹುರುಪು ಬಂದು ಬಿಡ್ತು. ಆಗಲೇ ಎಲ್ಲರೂ ಇದ್ದಬದ್ದ ಡಬ್ಬಿಗಳಲ್ಲಿ ತುಂಬಿಸಿಕೊಂಡು ಬಿಟ್ಟಿದ್ದರಿಂದ, ಈ ಉಪ್ಪಿಟ್ ಪಾರ್ಸೆಲೆ ಯಾವ ಡಬ್ಬಿಯೂ ಸಿಕ್ಕಲಿಲ್ಲ. ಕಡೆಗೆ ಅಜ್ಜಿಗೆ, ಎಲ್ಲೋ ಮೂಲೇಲಿ ಕೂತಿದ್ದ ಒಂದು ಡಬ್ಬಿ ಕಣ್ಣಿಗೆ ಬಿತ್ತು. ಅದರಲ್ಲಿ ಸ್ವಲ್ಪ ನೀರಿತ್ತು. ಅದನ್ನ ಹೊರಕ್ಕೆರಚಿ ಸುಮ್ಮೆ ಡಬ್ಬಿನ ಮೇಲೆ ತೊಳೆದ ಶಾಸ್ತ್ರ ಮಾಡಿದ ಅಜ್ಜಿ, ಉಪ್ಪಿಟ್ಟು ತುಂಬಿಸಿ ಕಳಿಸಿ ಕೊಟ್ಟರು.

ನನ್ನ ಸಂತೋಷ ತಡೆಯಲಾರದೆ ನಡುವೆ ಬಾಯಿ ಹಾಕಿದೆ. ಅಂತೂ ನಿಮ್ಮಜ್ಜಿ ಕಡೆಗೂ ಒಂದು ಖಾಲಿ ಡಬ್ಬಿ ಹುಡುಕಿ ಬಿಟ್ರಲ್ಲ, ಶಹಭಾಶ್!

'ಅಲ್ಲೇ ಆಗಿದ್ದು ಆಂಟಿ ಎಡವಟ್ಟು, ಎಲ್ಲರೂ ಹೋದ ಮೇಲೆ, ಮನೇಲಿ ಉಳಿದಿದ್ದು ನಮ್ಮಜ್ಜಿಯ ತಂಗಿ ಹಾಗೂ ಅವರ ಪತಿ. ಅವರಿಬ್ಬರೂ ಸೇರಿ ಅದೇನೋ ಹುಡುಕಾಡ್ತಿದ್ದರು. ಏನು ಅಂತ ಕೇಳಿದರೆ ಹೇಳದೆ ತಮ್ಮ ಮನೆಗೆ ಹೊರಟು ಹೋದರು'.

'ಎರಡು ಮೂರು ದಿನ ಕಳೆದ ಮೇಲೆ ನಮ್ಮ ಚಿಕ್ಕಜ್ಜಿ, ನಮ್ಮಜ್ಜಿಗೆ ಫೋನ್ ಮಾಡಿ ಆ ಡಬ್ಬಿ ನಿಮ್ಮ ಮನೇಲಿ ಕಳೆದಿದ್ದು ನನಗೆ ಕೈ ಮುರಿದ ಹಾಗಾಗಿದೆ. ಎಲ್ಲ ಕಡೆ ಇನ್ನೊಂದು ಸಲ ನೋಡೇ ಅಕ್ಕ, ಸಿಗತ್ತೇನೋ" ಎಂದರು. ಆಗ ಅಜ್ಜಿ ಡಬ್ಬಿ ಇದ್ದ ರೀತಿ ವಿವರಿಸುತ್ತಾ, 'ಅದೇ ಕಾಮಾಕ್ಷಿ, ಡಬ್ಬಿ ಉದ್ದವಾಗಿತ್ತು. ಮುಚ್ಚಳ ಭದ್ರವಾಗಿತ್ತಲ್ಲ...' ಫೋನಿನ ಆ ತುದಿಯಲ್ಲಿ ಕಿವಿಯೊಡ್ಡಿದ್ದ ಆ ಚಿಕ್ಕಜ್ಜಿಗೆ, ಕಾಣದಂತೆ ಮಾಯವಾದ ತಮ್ಮ ಡಬ್ಬಿ ಸಿಕ್ಕೇ ಬಿಟ್ಟಷ್ಟು ಆನಂದವಾಗಿರಬೇಕು. ಅವರು, ಆ ಕಡೆಯಿಂದ. 'ಹೌದಕ್ಕೆ, ಅದೇ ನಮ್ಮ ಡಬ್ಬಿ' ಎಂದರು. ಆಗ ಅಜ್ಜಿ ಗಾಬರಿಯಿಂದ, ಅದರಲ್ಲಿ ನಾನು ಇವರ ಅಕ್ಕನ ಮಗನಿಗೆ, ಉಪ್ಪಿಟ್ಟು ಹಾಕಿ ಕಳಿಸಿ ಬಿಟ್ಟೆನಲ್ಲ' ಎಂದರು. ಆ ಉಪ್ಪಿಟ್ಟು ತಿಂದು ಬಾಯಿ ಚಪ್ಪರಿಸಿದ ತಾತನ ಅಕ್ಕನ ಮಗನಿಗೆ ಮಾತ್ರ ಅದು ಚಿಕ್ಕತಾತ ಹಲ್ಲೆಟ್ ಇಡಲು ಬಳಸುತ್ತಿದ್ದ ಡಬ್ಬಿ ಅನ್ನೋ ವಿಷಯ ರಹಸ್ಯವಾಗೇ ಉಳೀತು ಆಂಟೀ...!'

ಇದು, ಪೂಜ ವಿವರಿಸಿದ ದಂತಾಭರಣ ರಣಪುರಾಣ. ಒಂದು ವೇಳೆ ಚಿಕ್ಕತಾತ ಹಲ್ಸೆಟ್ ಬಾಯಿಂದ ಕಳಚಿ, ಆ ಆಳವಾದ ಡಬ್ಬಿಯಲ್ಲೇ ಬಿಟ್ಟಿದ್ದರೆ, ನಮ್ಮಜ್ಜಿ ಬರಿಯ ನೀರಿನ ಪ್ರೋಕ್ಷಣೆಯಿಂದ ಸಂತೃಪ್ತರಾಗಿ, ಉಪ್ಪಿಟ್ಟು ತುಂಬಿಸಿ ಕಳುಹಿದ್ದರೆ, ಆ ಉಪ್ಪಿಟ್ಟುಪ್ರಿಯ, ಚಮಚಾ ಬಳಸಿ, ನೇರವಾಗಿ ಡಬ್ಬಿಯಿಂದಲೇ ತಿಂದು, ಆಳ ತಲಪುವ ಹೊತ್ತಿಗೆ, ಹಲ್ಲೆಟ್ ಪ್ರತ್ಯಕ್ಷವಾಗಿದ್ದರೆ.. ಆಗ ಅವನ ಸ್ಥಿತಿ ಊಹೆಗೂ ಮೀರಿದ್ದು, ಜನ್ಮವಿಡೀ ಉಪ್ಪಿಟ್ಟು ಬಯಸಿರಲಾರನೆನಿಸುತ್ತೆ ಅಲ್ಲವೇ?

ನಮಗೆ ಆಪ್ತರಾದ ಬಂಧುವಿನ ಸಾವಿನ ಸಂದರ್ಭ. ತಂಗಮ್ಮ, ನಮ್ಮ ಅಮ್ಮನ ಸಂಬಂಧಿ. ಅವರು ವಾಸವಿದ್ದುದು ಜಯನಗರದಲ್ಲಿ. ಊರಿಂದ ಸುದ್ದಿ ಮುಟ್ಟುತ್ತಿದ್ದಂತೆ, ಎಲ್ಲರೂ ಒಟ್ಟಾಗಿ, ಅಂತಿಮ ದರ್ಶನ ಪಡೆಯಲು ಒಂದು ಬಾಡಿಗೆವಾಹನ ಗೊತ್ತು ಮಾಡಿಕೊಂಡು ಇನ್ನೇನು ಗಾಡಿ ಹೊರಡಬೇಕು ಎನ್ನುವಾಗ, ತಂಗಮ್ಮನವರಿಗೆ ತಾವು ಸ್ವಗೃಹದಲ್ಲಿ ಅಮೂಲ್ಯವಾದ ಹಲ್ಲ್‌ಟ್ ಮರೆತು ಬಂದಿದ್ದು ಸ್ಮರಣೆಗೆ ಬಂತು. ಆ ಕೂಡಲೇ ಸೋದರಳಿಯ ಹಾಗೂ ಸಾರ್ವಜನಿಕ ಸೇವಾ ದುರಂಧರ ರಂಗನನ್ನು ತಮ್ಮ ನಿವಾಸಕ್ಕೆ ಅಟ್ಟಿ, ಆದೇಶ ನೀಡಿದರು...

'ಫ್ರಿಡ್ಜ್‌ನಲ್ಲಿ ಹಳದಿ ಕವರ್‌ನಲ್ಲಿ, ತುಂಬಾ ತರಕಾರಿ ಇದೆ. ಊರಲ್ಲಿ ಎಷ್ಟು ದಿನ ಆಗತ್ತೋ ಏನೋ ಜಾಸ್ತಿ ದಿನ ಬಿಟ್ರೆ, ತರಕಾರಿ ಎಲ್ಲ ಕೆಟ್ಟು ಹೋಗತ್ತೆ. ಇಲ್ಲಾದರೂ ಉಪಯೋಗ ಆಗಲಿ, ತಂದುಬಿಡು...'

ಹೀಗೆ ಹೋಗಿ ಹಾಗೆ ಬಂದ ರಂಗ ಹಲ್ಸೆಟ್, ತರಕಾರಿ ಕವರ್ ಹೊತ್ತು ಪ್ರತ್ಯಕ್ಷನಾದ. ತಂಗಮ್ಮ ಹಲ್ಸೆಟ್ ಬಂಗಾರದ ಒಡವೆಯೆಂಬಷ್ಟು ಅಭಿಮಾನದಿಂದ ಧರಿಸಿ, ಟಾಟಾ ಹೇಳಿ ಹೊರಟರು. ಇತ್ತ ಕವರ್ ತೆರೆದು ನೋಡಿದರೆ, ಅದರಲ್ಲಿ ಒಂದೂವರೆ ಮೂಲಂಗಿ, ಅರ್ಧ ಸೀಮೆಬದನೆ. ಕಿರುಬೆರಳು ಗಾತ್ರದ ಎರಡು ಕ್ಯಾರೆಟ್, ನಾಲ್ಕು ಹಸಿಮೆಣಸಿನ ಕಾಯಿ ಕಾಣಿಸಿತು.

ಹಾಗೆ ನೋಡಿದರೆ ಹಲ್ಸೆಟ್ ಅದೆಷ್ಟು ವಿನೋದ ಪ್ರಸಂಗಗಳಿಗೆ ಕಾರಣಕರ್ತವಾಗಿದೆಯೋ! 'ಹಲ್ಸೆಟ್' ಸಾಪಾಟರಾಮರ ಆರೋಗ್ಯದ ಒಳಗುಟ್ಟು. ಹೀಗಿರುವಾಗ ಹಲ್ಸೆಟ್ ಮರೆತು ಬಿಡುವುದು ಕೇಡುಗಾಲದ ಮುನ್ಸೂಚನೆ. ಈ ಹಲ್ಸೆಟ್ ಹೊಂದಿ ಅನೇಕರು ಭಾಗ್ಯವಂತರಾಗಿ ಬಾಳುತ್ತಿದ್ದಾರೆ ಎಂದ ಮೇಲೆ ಹಲ್ಸೆಟ್ ನ ಅನಿವಾರ್ಯತೆ ಗೋಚರವಾಗಿರಬೇಕಲ್ಲ.

**(ಚೌತಿಯ ಗುಗ್ಗರಿ, ನವಕರ್ನಾಟಕ ಪ್ರಕಾಶನ, ೨೦೦೪)**

# ೨೪. ಹುಳಿ ಸಿಹಿ ಬಾಲ್ಯ

## ಶಾರದಾ ವಿ. ಮೂರ್ತಿ

"ರಜ ಬಂದ್ರೆ ಸಾಕು ಎಷ್ಟು ಹೊತ್ತು ಕಂಪ್ಯೂಟರ್ ಮುಂದೆಯೇ ಕುಳಿತುಕೊಂಡಿದ್ದೀರಿ. ಕಣ್ಣು ಹಾಳಾಗೋಲ್ಲವಾ?" ಅಂತ ಪೋಷಕರು ಈಗಿನ ಮಕ್ಕಳಿಗೆ ಕೇಳಿದರೆ ಸಾಕು; "ಬೋರಾಗತ್ತೆ, ಮತ್ತೇನು ಮಾಡೋದು?" ಎನ್ನುವ ಮಕ್ಕಳ ಪ್ರಶ್ನೆ ಸಿದ್ಧವಾಗಿಯೇ ಇರುತ್ತದೆ.

ಅವರ ವಯಸ್ಸಿನಷ್ಟು ಇರುವಾಗ ನಾವಂತೂ ಈ ಬೋರ್ ಅಥವಾ ಬೇಸರ ಎಂಬ ಪದ ಉಪಯೋಗಿಸುತ್ತಿದ್ದುದಂತೂ ಇಲ್ಲವೇ ಇಲ್ಲ ಎನ್ನಬಹುದು. ಇನ್ನು ನಾವು ಆಡುತ್ತಿದ್ದ ಆಟಗಳೂ ಖರ್ಚೇನನ್ನೂ ಬೇಡದವುಗಳು. ಈಗಿನ ಮಕ್ಕಳಿಗಿರುವಂತೆ ಕೋಣೆ ತುಂಬಾ ಆಟಿಗೆಗಳಿಗೆ ದುಡ್ಡು ಹಾಕುವ ಪರಿಪಾಠವೂ ಆಗ ಇರಲಿಲ್ಲ. ಆರ್ಥಿಕ ದುಸ್ಥಿತಿ ಒಂದು ಕಾರಣವಾದರೆ, ಸುಮ್ಮನೆ ಬಾವಿಗೆ ಸುರಿದಂತೆ ವ್ಯರ್ಥ ಎನ್ನುವ ಮನೋಭಾವ ಇನ್ನೊಂದು ಕಾರಣ. ಕೊಳ್ಳುಬಾಕತನ ನವೀನಯುಗದ ಮಹಿಮೆಯಷ್ಟೆ

ಮೊಮ್ಮಗಳು ಬೋರ್ ಎಂದಾಗ ಮನಸ್ಸು ಬಾಲ್ಯಕ್ಕೊಡಿತ್ತು. ನಡೆದೇ ಹೋಗಬಹುದಾದಷ್ಟು ಹತ್ತಿರದ ಶಾಲೆ ನಮ್ಮದಾಗಿತ್ತು. ದೂರದ ಶಾಲೆ, ಶಾಲೆಯ ಬಸ್ಸು, ವಾಹನ ದಟ್ಟಣೆ, ಮನೆಪಾಠ ಇಂತಹ ಯಾವುದೇ ಕಿರಿಕಿರಿ ನಮಗಿರುತ್ತಿರಲಿಲ್ಲ. ಆಟದಲ್ಲಿ ಮೈಮರೆತಿರುತ್ತಿದ್ದ ನಾವು ಅಮ್ಮ ಒಂದು ಕೂಗು ಹಾಕುತ್ತಲೇ ಚೀಲ ಹೆಗಲಿಗೇರಿಸಿ ಓಡುತ್ತಿದ್ದೆವು. ಶಾಲೆಯಿಂದ ಮನೆಗೆ ಬಂದಾಕ್ಷಣವೇ ಚೀಲವನ್ನು ಮೂಲೆಗೆಸೆದು ಅಮ್ಮ ಕೊಟ್ಟಿದ್ದನ್ನು ಗಬಗಬನೆ ತಿಂದು ಮುಗಿಸಿ ಹೊರಗೆ ಬಂದರೆ ಅಲ್ಲಿ ಆಗಲೇ ವಠಾರದ ಆರೆಂಟು ಹುಡುಗರು ಹಾಜರಿರುತ್ತಿದ್ದರು. ಆರರ ಮೇಲಿನ ಹುಡುಗರು, ಹುಡುಗಿಯರು... ಯಾವುದೇ ಜಾತಿಭೇದವಿಲ್ಲದ ಮಕ್ಕಳಾಟವದು.

ಆಗಂತೂ ಆಡುವ ಜಾಗಕ್ಕೇನೂ ಬರವಿರಲಿಲ್ಲ. ಮನೆಯ ಆಚೆ ಈಚೆ, ಹಿಂದೆ-ಮುಂದೆ ಅಥವಾ ಬೀದಿಗೆ ಹೊಂದಿಕೊಂಡಂತೆ ಬೇಕಾದಷ್ಟು ಖಾಲಿ ಜಾಗ... ಹುಲ್ಲು, ಮುಳ್ಳು, ಗಿಡ-ಗಂಟೆಗಳಿಗೇನೂ ಹೆದರದೆ ಬೇಕಾದಾಗ ನಾವೇ ಚೊಕ್ಕ ಮಾಡಿಕೊಳ್ಳುತ್ತಿದ್ದುದೂ ಉಂಟು. ಒಮ್ಮೊಮ್ಮೆ ಹಸುಗಳನ್ನು ಮೇಯಲು ಬಿಟ್ಟ ಮೇಲೆ ಕೊಟ್ಟಿಗೆಯೂ ನಮ್ಮ ಆಟದ ಸ್ಥಳವಾಗಿರುತ್ತಿತ್ತು.

ನಮ್ಮೆಲ್ಲರ ಆಕರ್ಷಣೆ ವಠಾರದ ಮುಂದಿರುವ ಬಯಲಿನಲ್ಲಿದ್ದ ಭಾರೀ ಗಾತ್ರದ ಹುಣಿಸೆಮರ... ಆಯಾ ಕಾಲಕ್ಕೆ ತಕ್ಕಂತೆ ಹುಣಿಸೆ ಚಿಗುರು, ಹುಣಿಸೆ ಹೂವು, ದೋರೆಗಾಯಿ, ಅದಕ್ಕಿಂತ ಹೆಚ್ಚಾಗಿ ಹುಣಿಸೆ ಹಣ್ಣು ಎಲ್ಲರಿಗೂ ಅತ್ಯಂತ ಪ್ರಿಯವಾಗಿರುತ್ತಿತ್ತು.

"ಹುಣಿಸೆಮರ ಅಂದ್ರೆ ಬ್ರಹ್ಮರಾಕ್ಷಸ, ಭೂತ, ಪಿಶಾಚಿ ಎಲ್ಲಾ ಇರುತ್ತವೆ. ಅಮಾವಾಸ್ಯೆ ಅಂತ ಇಲ್ಲ, ಹುಣ್ಣಿಮೆ ಅಂತ ಇಲ್ಲ... ಯಾವಾಗಲೂ ಆ ಮರದ ಹತ್ತಿರವೇ ಮುತ್ತಿಕೊಂಡಿದ್ದೀರಲ್ಲ. ಮನೇಲಿ ನಿಮಗೆ ಊಟ ಹಾಕೋಲ್ವಾ?"ಎಂಬ ದೊಡ್ಡವರ ಮಾತಿಗೆ ದಿವ್ಯ ಮೌನ ತಳೆದು ಬಿಡುತ್ತಿದ್ದೆವು.

ನಮ್ಮಲ್ಲಿಯೇ ತುಸು ದೊಡ್ಡವರಿಂದ ಧೈರ್ಯದ ಬೋಧೆ ನಡೆಯುತ್ತಿತ್ತು. "ನಾವು ಇಷ್ಟು ಮಕ್ಕಳೂ ಒಟ್ಟಿಗಿದ್ದೀವಲ್ಲಾ... ಯಾವ ಭೂತವೂ ಹತ್ತಿರ ಬರೋಲ್ಲ... ಬ್ರಹ್ಮರಾಕ್ಷಸ ಮಕ್ಕಳಿಗೇನೂ ಮಾಡೋಲ್ಲ... ಏನೇ ಆಗಲಿ, ನಾವು ಮನೆಗೆ ಹೋದ ತಕ್ಷಣ ಕಾಲು ತೊಳಕೊಂಡು ದೇವರಿಗೆ ನಮಸ್ಕಾರ ಮಾಡಿಡೋಣ... ದೇವರನ್ನು ಕಂಡ್ರೆ ದೆವ್ವ ಭೂತಕ್ಕೂ ಹೆದರಿಕೆ ಅಲ್ಲವಾ..?"

ಅಬ್ಬ, ಒಬ್ಬರ ಮಾತಿಗೆ ಮತ್ತೊಬ್ಬರು ಮಾತು ಸೇರಿಸಿ ಒಟ್ಟಾರೆ ಧೈರ್ಯದ ಪ್ರದರ್ಶನವೇ ನಡೆಯುತ್ತಿತ್ತು. ನಮ್ಮಂತೆ ಆ ಹುಣಿಸೆಹಣ್ಣಿನ ಆಶೆಯಿಂದ ಮಕ್ಕಳ ಹಿಂಡೇ ಅಲ್ಲಿ ಸೇರಿರುತ್ತಿತ್ತು.

ಮಾಗಿ ಹಣ್ಣಾದದ್ದು ಗಾಳಿ ಬೀಸಿದಾಗ ಕೆಳಗೆ ರಾಶಿ ರಾಶಿ ಬೀಳುತ್ತಿತ್ತು. ಇದೂ ಸಾಕಾಗಲಿಲ್ಲವೆಂದು ಕಲ್ಲು ಬೀಸುವವರೂ ಇದ್ದರು. ಅಕ್ಕ-ಪಕ್ಕದ ಮನೆಯ ಹಂಚಿಗೂ ಸಂಚಕಾರ ಬಂದಾಗ ಆ ಮನೆಯವರು ಹೊರಗೆ ಬರುವುದರೊಳಗೆ ಇಡೀ ಗುಂಪೇ ಮಂಗ ಮಾಯವಾಗಿ ಬಿಡುತ್ತಿತ್ತು. ಮುಂದಿನ ಎರಡು-ಮೂರು ದಿನಗಳು ಹುಣಿಸೇಹಣ್ಣಿಲ್ಲದೆ ಹಪಹಪಿಸುತ್ತಿದ್ದೆವು.

ಹಾಂ.... ಹಣ್ಣು ಶೇಖರಣೆಯಾದ ಮೇಲೆ ಮುಂದಿನ ಕೆಲಸ; ಒಂದೊಂದನ್ನು ಹಾಗೆಯೇ ಬಾಯಿಗೆ ಹಾಕಿಕೊಂಡು ಚೀಪುತ್ತಾ, ಮತ್ತಷ್ಟನ್ನು ಹುಡುಗರು ಜೇಬಿನಲ್ಲಿ ತುಂಬಿಕೊಂಡರೆ, ಹುಡುಗಿಯರು ಲಂಗದಲ್ಲಿ ತುಂಬಿಕೊಳ್ಳುತ್ತಿದ್ದೆವು. ಇದಕ್ಕೆಂದೇ ಇಟ್ಟುಕೊಂಡಿದ್ದ ಕಲ್ಲುಗಳಿಂದ ಕುಟ್ಟಿ ಬೀಜ ತೆಗೆಯುತ್ತಿದ್ದೆವು. ಇನ್ನು ಮುಂದಿನ ತಯಾರಿಗೆ ಒಬ್ಬೊಬ್ಬರ ಮನೆಯಿಂದ ಒಂದೊಂದು ಪದಾರ್ಥ...

ಇಷ್ಟು ಒಣಮೆಣಸು, ಬೆಲ್ಲ, ಉಪ್ಪು ಎಲ್ಲವೂ ಬರುತ್ತಿದ್ದವು. ಒಮ್ಮೊಮ್ಮೆ ಹಿರಿಯರ ಅನುಮತಿಯ ಮೇರೆಗೆ, ಒಮ್ಮೊಮ್ಮೆ ಅವರ ಕಣ್ಣು ತಪ್ಪಿಸಿ ತರಬೇಕಾದ ಕೌಶಲ. "ಯಾವಾಗಲೂ ಈಪಾಟಿ ಹುಳಿ, ಖಾರ ತಿಂತೀರಲ್ಲ... ಹೊಟ್ಟೆ ಉರಿ ಅಂತ ಒದ್ದಾಡಿದರೆ ವದೆ ಬೀಳುತ್ತೆ.." ಎಂಬ ಎಚ್ಚರಿಕೆ ನಮ್ಮಲ್ಲೇನೂ ಪರಿಣಾಮವನ್ನೇ ಬೀರುತ್ತಿರಲಿಲ್ಲ.

ಒಂದು ಚಪ್ಪಡಿ ಕಲ್ಲನ್ನು ಒರೆಸಿಕೊಂಡು ಅದರ ಮೇಲೆ ಕುಟ್ಟುಂಡೆ ಸಿದ್ಧವಾಗುತ್ತಿತ್ತು. ತೊಳೆದ ಪೊರಕೆ ಕಡ್ಡಿ ಇಟ್ಟುಕೊಂಡು ಜೊಲ್ಲು ಸುರಿಸುತ್ತಾ ಎಲ್ಲರೂ ಸುತ್ತ ನಿಂತಿರುತ್ತಿದ್ದೆವು. ಕಲ್ಲಿನಲ್ಲಿ ಸ್ವಲ್ಪವೂ ಬಿಡದಂತೆ ಬಳಿದು ತೆಗೆದು ದೊಡ್ಡವರಿಬ್ಬರು ಎಲ್ಲರ ಕೈಯಲ್ಲಿದ್ದ ಕಡ್ಡಿಗಳಿಗೆ ಗೋಲಿಯಾಕಾರದ ಉಂಡೆಗಳನ್ನು ದಯಪಾಲಿಸುತ್ತಿದ್ದರು.

ಕುಟ್ಟಿದ ಕಲ್ಲು ಅದೆಷ್ಟರ ಮಟ್ಟಿಗೆ ಹೈಜೆನಿಕ್ ಆಗಿರುತ್ತಿತ್ತೋ, ನಮ್ಮೆಲ್ಲರ ಕೈಗಳು ಅದೆಷ್ಟು ಶುದ್ಧವಾಗಿರುತ್ತಿತ್ತೋ. ಈಗಿನ ಅಮ್ಮಂದಿರು ಬಾರಿಬಾರಿಗೂ ಡೆಟಾಲ್ ಹಾಕಿ



ಕೈ ತೊಳೆಸಿದರೂ ಮಕ್ಕಳಿಗೆ ಕಾಡುವ ಇನ್‌ಫೆಕ್ಷನ್ ನಮಗಂತೂ ಆಗ ಬಾಧಿಸುತ್ತಿರಲಿಲ್ಲ. ಉಸ್ ಉಸ್ ಎಂದುಕೊಂಡೇ ಆ ಉಂಡೆಯನ್ನು ಸವಿಯುತ್ತಾ ಕಡ್ಡಿಯನ್ನೇ ಚೀಪುತ್ತಾ ಕೊನೆಗೊಮ್ಮೆ ಎಸೆಯುತ್ತಿದ್ದೆವು.

ಆ ಚಿಗುರು, ಮಿಡಿಕಾಯಿ, ದೋರೆಗಾಯಿ... ಆಹಾ... ಹುಳಿಯಲ್ಲೂ ಅದೇನು ಸ್ವಾದ.. ಹಾಗೆಯೇ ಹುಣಿಸೇಬೀಜಗಳನ್ನೂ ಜೋಪಾನವಾಗಿಟ್ಟು ಕೊಂಡಿರುತ್ತಿದ್ದೆವು. ಅದನ್ನು ಚೆನ್ನೆಮಣೆಯ ಕಾಳುಗಳಾಗಿ ಉಪಯೋಗಿಸಿಕೊಳ್ಳುತ್ತಿದ್ದೆವು.

ಒಂದಿಷ್ಟು ಖಾಲಿ ಜಾಗದಲ್ಲಿ ಚೊಕ್ಕ ಮಾಡಿ ಚೆನ್ನೆಮಣೆಯ ಗುಂಡಿಗಳನ್ನು ತೋಡಿಕೊಂಡರೆ ಆಯಿತು. ಕಾಸು ಖರ್ಚಿಲ್ಲ. ಇನ್ನು ಕುಂಟೋಬಿಲ್ಲೆಗೆ ಇಷ್ಟಗಲದ ಸಮತಟ್ಟಿನ ಕಲ್ಲಿನ ಚೂರು, ಬಚ್ಚವಿದ್ದರೆ ಸಾಕು.

ಇನ್ನು ಹುಡುಗರು ಗೋಲಿ, ಬುಗುರಿ ಆಡುತ್ತಿದ್ದರೆ ಹುಡುಗಿಯರು ಕಲ್ಲಾಟ ಆಡುತ್ತಿದ್ದೆವು. ಕೈ ಒರಟಾಗುತ್ತದೆಂದು ಕರವೀರದ ಹೂವಿನ ಮರದಲ್ಲಿರುವ ಕಾಯಿಗಳಿಂದ ಬೀಜಗಳನ್ನು ಬಿಡಿಸಿಟ್ಟುಕೊಂಡು ಕಲ್ಲಿನ ಬದಲು ಉಪಯೋಗಿಸುತ್ತಿದ್ದೆವು.

ಇಷ್ಟುದ್ದ ಹಗ್ಗ ಸಿಕ್ಕಿಬಿಟ್ಟರೆ ಹಗ್ಗದಾಟವಾಗುತ್ತಿತ್ತು. ಕಣ್ಣಾಮುಚ್ಚಾಲೆ, ಜೂಟಾಟ, ಕಳ್ಳ-ಪೋಲೀಸ್ ಆಟ... ಹೀಗೆ ಮೈದಾನದ ತುಂಬಾ ಓಡಾಡಿ ಚೆನ್ನಾಗಿ ವ್ಯಾಯಾಮವಾಗುವಂತಹಾ ಆಟಗಳು, ಬಿದ್ದು ಕೈಕಾಲುಗಳಿಗೆ ಗಾಯ ಆಗಿ ತರಚುವುದು, ರಕ್ತ ಸೋರುವುದು ವಿಶೇಷವಾಗಿರಲಿಲ್ಲ. ಮನೆಯವರಿಗೆ ದೂರು ಹೋಗುತ್ತಲೂ ಇರಲಿಲ್ಲ. ಹೋದರೆ

ಬೈಗುಳದೊಂದಿಗೆ ಒಂದೆರಡು ದಿನಗಳ ಮಟ್ಟಿಗಾದರೂ ಆಟಕ್ಕೆ ತಡೆಯಾಗುತ್ತದಲ್ಲಾ ಎಂಬ ಚಿಂತೆ... ನೋವಾದರೂ ಯಾರಿಗೂ ತಿಳಿಯದಂತೆ ಇರಬೇಕೆಂದುಕೊಂಡರೂ ಒಮ್ಮೊಮ್ಮೆ ಸಿಕ್ಕಿ ಬೀಳುತ್ತಿದ್ದೆವು.

ಆಗೆಲ್ಲ ಬೇಲಿಗೆ ಬದಲಾಗಿ ಸುಲಭವಾಗಿ ಬೆಳೆಯುವ ಕಳ್ಳಿ ಗಿಡಗಳನ್ನು ನೆಟ್ಟು ಬಿಡುತ್ತಿದ್ದರು. ಅವು ಬಹು ಬೇಗ ಬೆಳೆದು ಹಬ್ಬಿಕೊಳ್ಳುತ್ತಿದ್ದವು. ಅದರ ಹಾಲು ಕಣ್ಣಿಗೆ ಅಪಾಯ ಎಂದು ಅಪ್ಪ-ಅಮ್ಮ ಹೇಳುತ್ತಿದ್ದರೂ ಲೆಕ್ಕಿಸದೆ ಕಳ್ಳಿಯ ಮೊದೆಯಲ್ಲಿ ಅಡಗಿಕೊಳ್ಳುತ್ತಿದ್ದೆವು. ಒಂದೆರಡು ಬಾರಿ ಕಣ್ಣಿಗೆ ಕಳ್ಳಿಯ ಹಾಲು ಬಿದ್ದು ಅಬ್ಬಾ... ಉರಿಯಿಂದ ಒದ್ದಾಡುವಂತಾಗುತ್ತಿತ್ತು. ಅಮ್ಮ ಕಣ್ಣನ್ನು ತೊಳೆದು ಹಸುವಿನ ಹಾಲು, ಬೆಣ್ಣೆ ಉಂಡೆ ಎಲ್ಲವನ್ನೂ ಇಟ್ಟು ಉಪಚರಿಸಿ... ಅಂತೂ ಉರಿ ಶಮನವಾಗಬೇಕಾದರೆ ಸಾಕೋಸಾಕಾಗುತ್ತಿತ್ತು.

"ದೇವರು ಕೊಟ್ಟಿರೋ ಕಣ್ಣು, ಕೈ, ಕಾಲು ಹುಷಾರಾಗಿ ಇಟ್ಟುಕೊಳ್ಳಿ ಮಕ್ಕಳೆ" ಅಂತ ಹಿರಿಯರು ಹೇಳುತ್ತಿದ್ದುದು ಆ ಉರಿ ಕಡಿಮೆಯಾದ ಮೇಲೆ, ಮುಂದೆ ಒಂದೆರಡು ದಿನಗಳ ಮಟ್ಟಿಗೆ ನೆನಪಿನಲ್ಲಿರುತ್ತಿತ್ತು. ಮತ್ತೆ ಮೊದಲಿನ ಹಾಗೆ ಬಾಲವಿಲ್ಲದ ಮಂಗಗಳೇ ಆಗಿ ಬಿಡುತ್ತಿದ್ದೆವು.

ಮತ್ತೊಂದು ದಿನ ನಮ್ಮ ಗ್ಯಾಂಗ್‌ನ ಹಿರಿಯನೊಬ್ಬ ವಿಷಯವೊಂದನ್ನು ಬಹಳ ಅಂಜಿಕೆ ನಟಿಸುತ್ತಾ ಬಿತ್ತರಿಸಿದ್ದ. "ಇವತ್ತು ಕಲಿ ಪುರುಷ ಬಾನಂತೆ. ಅವನಿಗೆ



ಮಕ್ಕಳನ್ನ ಕಂಡ್ರೆ ತುಂಬಾ ಇಷ್ಟ ಅಂತೆ. ಎಲ್ಲಿದ್ದರೂ ಹಿಡಿದುಕೊಂಡು ಬಿಡ್ತಾನಂತೆ. ಮನೆಯೊಳಗಿದ್ದರೂ ಬಿಡೋಲ್ಲವಂತೆ..."

ಹಾಗಾದರೆ ಅಪ್ಪ-ಅಮ್ಮನಿಗೆ ಈ ವಿಷಯ ಗೊತ್ತಾಗಲಿಲ್ಲವಾ... ಅವರು ಏನೂ ಹೇಳಲಿಲ್ಲವಲ್ಲ ಅಂತ ನಮಗೆಲ್ಲಾ ಅಚ್ಚರಿ! "ಇದು ನನಗೆ ಯಾರೋ ಹೇಳಿದ್ದು... ಯಾರು ಅಂತ ಹೇಳೋ ಹಾಗಿಲ್ಲ. ಈಗ ಸುಮ್ಮನೆ ಹೊತ್ತು ಕಳೆಯೋ ಹಾಗಿಲ್ಲ. ಕಲಿಯ ಕೈಗೆ ಸಿಗದ ಹಾಗೆ ಎಲ್ಲಾದ್ರೂ ಗಿಡಗಳ ಮಧ್ಯೆ ಅಡಗಿಕೊಳ್ಳಬೇಕು ಎಂದು ಅವಸರಿಸಿದಾಗ ನಮಗೆಲ್ಲಾ ಮತ್ತಷ್ಟು ಭಯ.

ಅಮ್ಮ ಬೆಳೆಸಿದ ಹೂ ಹಾಗೂ ತರಕಾರಿ ಗಿಡಗಳ ತೋಟವನ್ನು ಅಡಗಿಕೊಳ್ಳಲು ಆಯ್ಕೆ ಮಾಡಿಯೇ ಬಿಟ್ಟ ಆ ಹುಡುಗ. ಅಮ್ಮ ಎಷ್ಟೋ ದೂರದಿಂದ ನೀರು ಹೊತ್ತು ಬೆಳೆಸಿದ ಗಿಡಗಳು, ಕಾಯಿ ಬಿಟ್ಟಿರುವ ಸೌತೆ ಬಳ್ಳಿ, ಟೊಮೆಟೊ ಗಿಡಗಳು... ನಾವೆಲ್ಲಾ ಅಡಗಿಕೊಂಡರೆ ಬಳ್ಳಿ ಎಲ್ಲಾ ಹಾಳಾಗದಿರುತ್ತದೆಯೇ? ಬೇಗ... ಬೇಗ... ಎಷ್ಟು ಹೊತ್ತಿಗೆ ಕಲಿ ಬಾನೋ ಹೇಳೋಕಾಗೋಲ್ಲ..." ಅವನು ಅವಸರಿಸುತ್ತಿದ್ದಂತೆ ಭಯ ಹೆಚ್ಚಿ ಎಲ್ಲರೂ ಬಳ್ಳಿಯ ಸಂದು ಗೊಂದುಗಳಲ್ಲಿ ತೂರಿಕೊಂಡಿದ್ದಾಗಿತ್ತು.

ಹಾಗೆಯೇ ಸುಮ್ಮನೆ ಎಷ್ಟು ಹೊತ್ತು ಇದ್ದೇವು. ಅಲ್ಲಲ್ಲಿ ಬಿಟ್ಟಿರುವ ಪುಟ್ಟ ಪುಟ್ಟ ಹಸಿರು ಸೌತೆಗಳು... ನಿಧಾನವಾಗಿ ಒಂದೊಂದಾಗೇ ಸ್ವಾಹಾ ಆಗೇ ಬಿಟ್ಟಿತ್ತು. ಫಳಾರ ನಡೆದೇ ಬಿಟ್ಟಿತ್ತು! ಕೊನೆಗೆ ಒಂದು ಪೀಚೂ ಬಿಡದಂತೆ ಎಳೆದೆಳೆದು, ಬಳ್ಳಿಯೂ ಮುರಿದು ಬಿದ್ದಿತ್ತು.

ಅಷ್ಟರಲ್ಲಿ ಕತ್ತಲಾಗಿ ಕಲಿ ಇನ್ನು ಬರುವುದಿಲ್ಲ ಎಂದು ಖಾತ್ರಿಯಾದ ಮೇಲೆ ಈಚೆ ಬಂದಿದ್ದೆವು. ಹಾಗೇ ಗಿಡಗಳ ಅವಸ್ಥೆ ನೋಡಿ ನನ್ನ ಕಂಗಳಲ್ಲಿ ನೀರೂ ತುಂಬಿಕೊಂಡಿತ್ತು. ಅಣ್ಣ ಹೆದರಿಸಿದ್ದ, "ಅಪ್ಪ-ಅಮ್ಮಂಗೆ ಏನೂ ಹೇಳೋಡ, ಆಮೇಲೆ ಕಲಿಗೆ ಕೋಪ ಬರುತ್ತೆ" ಅಂತ. ಆದರೆ ಅವರಿಗೆ ಗೊತ್ತಾಗುವುದಿಲ್ಲವೇ ಎಂಬ ತಳಮಳ ನನಗೆ

ಹೀಗೆ ಕಾಲುಬಾಲವಿಲ್ಲದ ಸುದ್ದಿಗಳು ಹುಟ್ಟಿಕೊಂಡು ಏನೇನೋ ಅವಾಂತರಗಳು ಆಗುತ್ತಿದ್ದವು. ಸೌತೆ ಕಾಯಿಯ ಆಸೆಗಾಗಿಯೇ ಆ ಕಿಲಾಡಿ ಹುಡುಗ ಆ ಸುದ್ದಿ ಹುಟ್ಟಿಸಿದ್ದ ಅನ್ನೋದು ಇವತ್ತಿಗೂ ನನಗೆ ಬಗೆಹರಿಯದ ಸಂದೇಹ!

ಮನೆ ಚಿಕ್ಕದಾಗಿದ್ದರೂ ಆಚೀಚೆ ಆಡಲು ಬೇಕಾದಷ್ಟು ಜಾಗ, ಈ ಪಾಟಿ ವಾಹನ ದಟ್ಟಣೆಯಿಲ್ಲದೆ ನಿರ್ಭಯವಾಗಿ ಓಡಾಡುವ ಅವಕಾಶ, ಶಾಲೆಯಲ್ಲೂ ಪೈಪೋಟಿಯ ಕಾಟವಿರದೆ ಹಾಯಾಗಿ ಕಳೆದ ಬಾಲ್ಯ... ಈಗಿನ ವಸ್ತು ವೈಭೋಗವಿಲ್ಲದಿದ್ದರೂ, ದುಬಾರಿ ಆಟಿಗೆಗಳಿಲ್ಲದಿದ್ದರೂ ಬೋರಾಗದಂತಹ ಆ ಬಾಲ್ಯ ನಮ್ಮದಾಗಿತ್ತು.

**(ವಿಜಯವಾಣಿ, ಭಾನುವಾರದ ಸಂಚಿಕೆ, ೧೧, ೦೧. ೨೦೧೫)**

## ೨೫. ಪಾದುಕಾ ಪುರಾಣ

### ವಿಜಯಾ ಗುರುರಾಜ್

ಹೊಸ ಚಪ್ಪಲಿಗಳಿಂದ ಕಾಲು ಕಡಿಸಿಕೊಂಡು ಅದಕ್ಕೆ ಬಿಸಿ ಎಣ್ಣೆಯ ಉಪಚಾರ ಮಾಡುವುದೇ ಅಲ್ಲದೆ, ಅದನ್ನು ಜೋಪಾನ ಮಾಡುವುದೂ ಕಟ್ಟದ ಸಂಗತಿಯೇ ಸರಿ. ಈ ಚಪ್ಪಲಿಗಳನ್ನು ಧರಿಸಿ ಸುಖ ಪಡುವುದಕ್ಕಿಂತ ಹೆಚ್ಚಾಗಿ ದೇವಸ್ಥಾನದ ಬಾಗಿಲಲ್ಲಿ ಬಿಟ್ಟು ಒಳಹೋಗಿ ದೇವರ ಮುಂದೆ ನಿಂತರೆ ಸ್ತೋತ್ರ ಪಠಣೆಗಿಂತ ಹೆಚ್ಚಾಗಿ ಮನದಲ್ಲಿ ಪಾದುಕಾ ಪಠಣೆಯೇ ಹೆಚ್ಚಾಗಿ ಆವರಿಸಿಕೊಂಡಿರುತ್ತದೆ. ಈ ಚಪ್ಪಲಿ ಎಂಬ ಪಾದುಕೆಗಳಿಂದ ಆಗುವ ಅನಾಹುತಗಳು ಪುರಾಣ ಪುರುಳರನ್ನೂ ಬಿಟ್ಟಿಲ್ಲ ಬಿಡಿ. ಒಮ್ಮೆ ಮಹಾಭಾರತದ ಧರ್ಮರಾಯನು ತನ್ನ ಸರದಿಯಂತೆ ಪತ್ನಿಯೊಡನೆ ಏಕಾಂತದಲ್ಲಿ ಇರುತ್ತಾನೆ. ಆಗ ಏಕೋ ಅತ್ತ ಬಂದ ಅರ್ಜುನ ಅರಮನೆಯಯನ್ನು ಪ್ರವೇಶಿಸುತ್ತಾನೆ. ಅಲ್ಲಿ ದೌಪದಿಯೊಡನೆ ಸರಸ ಸಲ್ಲಾಪದಿಂದಿದ್ದ ಅಣ್ಣನನ್ನು ಕಂಡು ತನ್ನ ತಪ್ಪಿನರಿವಾಗಿ ನಾಚಿಕೆಯಿಂದ ತಲೆ ತಗ್ಗಿಸುತ್ತಾನೆ. ಆಗ ಕೋಪಗೊಂಡ ಧರ್ಮರಾಯನು, “ಅರ್ಜುನಾ ಈಗ ನೀನು ಬರಬಾರದಿತ್ತು. ಆದ್ದರಿಂದ ನೀನು ಈ ಕೂಡಲೇ ರಾಜ್ಯವನ್ನು ಬಿಟ್ಟು ದೇಶಾಟನೆ ಮಾಡಬೇಕು”  ಎಂದು ಶಿಕ್ಷೆ ವಿಧಿಸುತ್ತಾನೆ. ಇದಕ್ಕೆಲ್ಲ ಯಾರು ಕಾರಣ ಎನ್ನುತ್ತೀರಿ!

ಯಃಕಶ್ಚಿತ್ ಚಪ್ಪಲಿಗಳೇ! ಧರ್ಮರಾಯನು ದೌಪದಿಯ ಅರಮನೆಯ ಬಾಗಿಲಲ್ಲಿ ತನ್ನ ಪಾದುಕೆಗಳನ್ನು “ಸಿಂಬಲ್ಲಂತೆ ಇಟ್ಟಿದ್ದರೂ ಒಂದು ಬೀಡಾಡಿ ನಾಯಿಯೊಂದು ಪಾದುಕೆಗಳನ್ನು ಎಳೆದುಕೊಂಡು ಹೋಗಿರುತ್ತದೆ. ಅಣ್ಣನ ಪಾದುಕೆಯ ಸಿಂಬಲ್ಲನ್ನು ಕಾಣದೆ ಪಾಪ ಅರ್ಜುನನು ಶಿಕ್ಷೆ ಅನುಭವಿಸುವಂತಾಯ್ತು. ಅದೇ ಕೋಪದಲ್ಲೇ ನಾಯಿಗಳಿಗೆ, “ನಿಮ್ಮ ಪ್ರೀತಿ-ಪ್ರಣಯಗಳೆಲ್ಲ ನಡು ರಸ್ತೆಯಲ್ಲಿಯೇ ಎಲ್ಲರೆದುರು ನಡೆಯಲಿ”  ಎಂದು ಶಾಪವಿತ್ತ ಧರ್ಮಜ. ಇವೆಲ್ಲ ನಮ್ಮ ಚಪ್ಪಲಿಗಳಿಂದ ಆದ ರಾಮಾಯಣವೇ ಆಯಿತು ಬಿಡಿ. ಅಯ್ಯೋ ರಾಮಾಯಣ ಎಂದರೆ ನೆನಪಾಯಿತು. ಶ್ರೀರಾಮಚಂದ್ರನು ತಂದೆಯ ಅಣತಿಯಂತೆ ಸೀತಾ ಲಕ್ಷ್ಮಣರೊಡನೆ ವನವಾಸಕ್ಕೆ ತೆರಳಿ, ಕಾಡಿಗೆ ಹೋಗಿ ಅಲ್ಲಿ ಪರ್ಣಕುಟೀರವನ್ನು ಕಟ್ಟಿಕೊಂಡು ವಾಸಿಸುತ್ತಿರುತ್ತಾನೆ. ಇತ್ತ ಭರತನು ಅಣ್ಣನಿಗಾಗಿ ಕಣ್ಣೀರಿಡುತ್ತಾ,

“ಅಣ್ಣಾ! ನಿಮ್ಮ ಪಾದುಕೆಯನ್ನಾದರೂ ಕೊಡಿ. ಅದನ್ನು ಸಿಂಹಾಸನದಲ್ಲಿಟ್ಟು ಪೂಜಿಸುತ್ತೇನೆ.” ಎಂದು ಅಣ್ಣನ ಪಾದುಕೆಗಳನ್ನೂ ಕೊಂಡೊಯ್ದ. ಕಾನನದಲ್ಲಿ ಪಾದುಕೆಗಳಿಲ್ಲದೆ ಪಾಪ ಶ್ರೀ ರಾಮಚಂದ್ರನು ಎಳ್ಳು ಕಳ್ಳಪಟ್ಟನೋ ಏನೋ!



ಅದಕ್ಕೆ ಹರಿಕತೆ ದಾಸರು ತಮಾಳೆಗಾಗಿ “ತಾಯಿಯಾದ ಕೈಕೇಯಿಯು ರಾಜ್ಯವನ್ನು ಕಿತ್ತುಕೊಂಡರೆ ಮಗ ಚಪ್ಪಲಿಗಳನ್ನೂ ಬಿಡದೆ ಕೊಂಡೊಯ್ದ” ಎಂದು ಹೇಳಿದರೆ ಅವರ ಹಾಸ್ಯಕ್ಕೆ ಜನ ಹೋ... ಹೋ... ಎಂದು ನಗಲು ಕಾರಣ ಶ್ರೀರಾಮನ ಪಾದುಕೆಯೇ ಅಲ್ಲವೆ!

ಈ ಚಪ್ಪಲಿಗಳ ಕಾಟದಿಂದ ದೇವಾನುದೇವತೆಗಳೇ ಕಷ್ಟ ಪಡುತ್ತಿರುವಾಗ ಹುಲು ಮಾನವರಾದ ನಮ್ಮ ಪಾಡೇನು ಅಂತೀರಾ...?

ಕೇಳಿ ಇಲ್ಲಿ, ಅಲ್ಲಲ್ಲ ಓದಿ, ಸಾವಕಾಶವಾಗಿ... ಇದರಿಂದ ನಾವು ತೆಗೆದುಕೊಳ್ಳಬೇಕೆಂದಿದ್ದ ಮನೆಯೇ ಕೈ ಬಿಟ್ಟು ಹೋಯ್ತು ಎಂದ್ರೆ ನೀವು ನಂಬುತ್ತೀರಾ...! ಒಮ್ಮೆ ಬೆಂಗಳೂರಿನ ಬಡಾವಣೆಯಲ್ಲಿ ಕೊಂಡುಕೊಳ್ಳಲು ಎರಡು ಮನೆಗಳನ್ನು ನೋಡಿದೆವು. ಒಂದು ಮನೆ ಹಳೆಯದಾಗಿದ್ದು ಬಹಳ ರಿಪೇರಿ ಮಾಡಿಸಬೇಕಾಗಿತ್ತು. ಮತ್ತೊಂದು ಮನೆ ಹೊಸದಾಗಿದ್ದು ಕೂಡಲೇ ವಾಸ ಮಾಡುವಂತೆ ಇತ್ತು. ಒಂದು ಭಾನುವಾರ ಮುಂಜಾನೆ ಚೆನ್ನಾಗಿರುವ ಮನೆಗೆ ಅಡ್ವಾನ್ಸ್ ಮಾಡೋಣವೆಂದು ನಾನೂ ನಮ್ಮನೆಯವರೂ ಅದೇ ರಸ್ತೆಯಲ್ಲಿರುವ ದೇವಸ್ಥಾನಕ್ಕೆ ಹೋಗಿ, ದೇವರ ಪೂಜೆ ಮಾಡಿಸಿ ಪ್ರಾರ್ಥಿಸಿ, ತೀರ್ಥ, ಪ್ರಸಾದ ಪಡೆದು ಹೊರ ಬಂದಾಗ ನಮ್ಮವರ ಚಪ್ಪಲಿ ಮಂಗಮಾಯವಾಗಿತ್ತು! ನಿಜವಾಗಿಯೇ ಮಂಗನೊಂದು ಚಪ್ಪಲಿ ಕೊಂಡೊಯ್ದು ಮರ ಏರಿ ಕುಳಿತು ಹಲ್ಲು ಕಿರಿಯುತ್ತಿತ್ತು... ನಮ್ಮವರಿಗೆ ಸಿಕ್ಕಾಪಟ್ಟೆ ಕೋಪ ಬಂದಿತ್ತು. ಆದರೇನು? ಕೋತಿಗೆ ಶಾಪ ಕೊಡಲು ಇವರೇನು ಧರ್ಮರಾಯರೇ... ಈ ಮನೆಯೇ ಬೇಡ ನಡಿ” ಎಂದು ವಾಪಸ್ ಹೊರಟರು. ಹೊಸಮನೆ ಕೊಳ್ಳುತ್ತೇವೆ ಎಂಬ ಸಂತಸದಲ್ಲಿದ್ದ ನಾನು, 'ಈ ಚಪ್ಪಲಿ ಕಾಟದಿಂದ ಮನೆ ಹೋಯ್ತಲ್ಲಾ' ಎಂದು ಸಪ್ಪೆ ಮುಖ ಮಾಡಿಕೊಂಡು ಬೇಸರದಿಂದ ಮನೆಗೆ ಹೊರಟೆ. ಇದರಿಂದ ಹಳೇ ಮನೆಯನ್ನು ಕೊಂಡು ಸಾಕಳು ರಿಪೇರಿ ಎಂದು ಫಜೀತಿಯಾಯಿತು.

ಹಾಗೆಯೇ ನನಗೆ ಸಿಗಬೇಕಿದ್ದ ಕೆಲಸ ಹೋಗಿದ್ದು ಕೂಡ ಈ ಚಪ್ಪಲಿಗಳಿಂದಲೇ! ನಿಜ, ನಂಬಿ ನನ್ನ! ಒಂದು ಹೆಸರಾಂತ ಫ್ಯಾಕ್ಟರಿಯಲ್ಲಿ ಇಂಟರ್ವ್ಯೂಗೆ ಕರೆ ಬಂದಿತ್ತು. ನನ್ನಂತೆ ಅನೇಕ ಅಭ್ಯರ್ಥಿಗಳು ಬಂದಿದ್ದರು. ಫಿಸಿಕಲ್ ಟೆಸ್ಟ್ಗಾಗಿ ನಮ್ಮ ಚಪ್ಪಲಿಗಳನ್ನು ಹೊರಗೇ ಬಿಡುವುದು ಅನಿವಾರ್ಯವಾಗಿತ್ತು. ಎಲ್ಲಾ ಮುಗಿಸಿ ಹೊರ ಬಂದಾಗ ಚಪ್ಪಲಿಗಳ ರಾಶಿಯಲ್ಲಿ ನನ್ನದು ಮಾತ್ರ ಕಾಣೆಯಾಗಿತ್ತು. ಎಲ್ಲರೂ ಅವರವರ ಚಪ್ಪಲಿಗಳನ್ನು ಧರಿಸಿ ಹೊರಟರು. ನನ್ನ ಚಪ್ಪಲಿಯನ್ನು ಯಾರೋ ಹಾಕಿಕೊಂಡು ಅವರ ಹಳೇ ಚಪ್ಪಲಿಯನ್ನು ಬಿಟ್ಟುಹೋಗಿದ್ದರು. ಉಂಗುಳ ಕಿತ್ತು ಹೋಗಿದ್ದ ಆ ಹಳೆ ಮೆಟ್ಟುಗಳನ್ನೇ ಮೆಟ್ಟಿಕೊಂಡು ಎಳೆದಾಡುತ್ತಾ ಇನ್ನೊಂದು ದೂರದಲ್ಲಿದ್ದ ಬಿಲ್ಡಿಂಗ್‌ನಲ್ಲಿ ನಡೆಯುತ್ತಿದ್ದ "ಓರಲ್ ಟೆಸ್ಟ್" ಗಾಗಿ ಹೋದಾಗ ನಾನೇ ಕೊನೆಯವಳಾಗಿದ್ದೆ. ನನ್ನ ಮೂಡು ಕೆಟ್ಟು "ಕರ" ವಾಗಿತ್ತು. ಸಾಕಷ್ಟು ಬವಳಿ ಹೋಗಿದ್ದ ನಾನು ಸರಿಯಾಗಿ ಉತ್ತರಿಸದೆ ಇದ್ದ ಕಾರಣ ನನಗೆ ಕೆಲಸ ಸಿಗದೆ ಹೋಯ್ತು.



ಮತ್ತೊಂದು ಸಲ ಒಂದು ಟ್ರೈನಿಂಗ್ ಸೆಂಟರ್‌ಗೆ ಸೇರಿದ್ದೆ... ಹತ್ತು ದಿನಗಳು ಅಲ್ಲೇ ಉಳಿಯಬೇಕಾಯಿತು. ಎಲ್ಲರೂ ಹೆಂಗಸರೇ, ಮುಂಜಾನೆ ಎಲ್ಲರೂ ವಾಕಿಂಗೋಗಬೇಕಿತ್ತು... ಹೊಸ ವಾಕಿಂಗ್ ಶೂ ಧರಿಸಿ ವಾಕ್ ಮಾಡಿ ಬಂದೆ. ಎರಡನೆಯ ದಿನ ಏಕೋ ಶೂಗಳು ಲೂಸಾಗಿ ಬಿಚ್ಚಿಕೊಳ್ಳುತ್ತಿತ್ತು. "ಏಕಪ್ಪಾ, ನೆನ್ನೆಯೆಲ್ಲಾ ಸರಿಯಾಗಿಲ್ಲ" ಎಂದು ಚಿಂತಿಸುತ್ತಾ ಶೂವನ್ನು ತಿರುಗಿಸಿ ನೋಡಿದೆ. ೯ನೇ ನಂಬರ್ ನನ್ನದು. ಸರಿಯಾಗೇ ನೋಡಿ ಅಂಗಡಿಯಲ್ಲಿ ಕೊಂಡಿದ್ದೆ... ಆದರೆ ಈಗ ಅದು ೮...ನೇ ನಂಬರ್ ತೋರಿಸುತ್ತಿತ್ತು! ಹಾಗೇ ನಿಗಾ ಮಾಡಿ ವಾಕ್ ಮಾಡುತ್ತಿದ್ದ ಹೆಂಗಸರ ಕಾಲುಗಳತ್ತ ನೋಡಿದೆ. ಹಾಂ... ಅದೇ ಹೆಂಗಸು... ಹಿಂದಿ ಮಾತನಾಡುವವಳು ನನ್ನ ತರದ್ದೇ ಕೆಂಪು ಶೂ ಧರಿಸಿದ್ದಳು. ನಾನು ಅವಳ ಹತ್ತಿರ ಹೋಗಿ, "ಬಹೆನ್‌ಜೀ, ಏ ಮೇರಾ ಶೂ ಹೈ...' ಎಂದೆ. ಅವಳು ಸಿಟ್ಟಿನಿಂದ ನನ್ನತ್ತ ದುರುಗುಟ್ಟಿ ನೋಡಿದವಳೇ, "ಏ ಮೇರಾ ಹೈ, ಚೇಂಜ್ ಮತ್ ಕರ್‌ನಾ..." ಎಂದು ಗುಡುಗಿದಳು. ಈಗ ಅರ್ಥವಾಯಿತು. ಅವಳು ಶೂ ಕೊಂಡ ನಂತರ ಸರಿಯಾದ ಅಳತೆ ಇಲ್ಲದೆ ಲೂಸ್ ಎನಿಸಿದೆ. ಬಳಸಿದ ಶೂನ ಅಂಗಡಿಯವನು ಮತ್ತೆ ವಾಪಸ್ ತೆಗೆದುಕೊಳ್ಳುವುದಿಲ್ಲ. ಅದಕ್ಕಾಗಿ ನಾನು ಹೊರಗೆಲ್ಲೋ ಬಿಟ್ಟಾಗ ಅನಾಯಾಸವಾಗಿ ನನ್ನದನ್ನೇ ಎಕ್ಸ್‌ಚೇಂಜ್ ಮಾಡಿದ್ದಲ್ಲದೆ ನನಗೇ ಜೋರು ಬೇರೆ.

ಅದಿರ್ಲಿ ಬಿಡಿ. ಮೊನ್ನೆ ಶಿವರಾತ್ರಿ ಬಂತಲ್ಲ, ತಲೆಯ ಮೇಲೆ ಕೆಂಡ ಸುರಿವಂತ ಬಿಸಿಲು. ಗೆಳತಿಯರೊಡನೆ ಶಿವಾಲಯಕ್ಕೆ ಹೋದೆ. ಶಿವನನ್ನರ್ಚಿಸಿ ಧನ್ಯಳಾಗಿ ಹೊರ ಬಂದೆ. ಬೋರೆಂದು ಅಳಬೇಕೆನಿಸಿತು... ಹಳೆಯದಾಗಿದ್ದರೂ ನನ್ನ ಕೆಂಪು ಪೋಲ್ಕಾ ಡಾಟ್ಸ್ ಇದ್ದ ಕಪ್ಪು ಲೂನಾರ್ ಚಪ್ಪಲಿಯನ್ನು ಯಾರೋ ಶಿವಭಕ್ತರು ಕದ್ದು ಓಡಿದ್ದರೇನೋ. ಆದರೆ ನಾನು, "ಈ ಮಟ ಮಟ ಮಧ್ಯಾಹ್ನ ಬರಿಗಾಲಿನಲ್ಲಿ ನಾ ಹೇಗೆ ನಡೆಯಲಿ" ಎಂದು

ಪ್ರಲಾಪಿಸುತ್ತಿದ್ದರೆ, ಗೆಳತಿ ಉವಾಚ... "ಹೋದ್ರೆ ಹೋಗಲಿ ಬಿಡೆ, ಪೀಡೆ ಹೋಯ್ತು ಅನ್ಕೊ" ಎಂದಳು. ನಾನು ಅವಕ್ಕಾದೆ! 'ನನಗ್ಯಾವ ಪೀಡೆ ಇತ್ತು? ಎಂದು. ಅರ್ಥವಾಗದೆ ಅವಳನ್ನೇ ಮಿಕಿಮಿಕಿ ನೋಡಿದೆ. ಬಿಸಿಲಲ್ಲಿ ಬರಿಗಾಲಲ್ಲಿ ನಡೆದು ಪಾದ ಮರಗಟ್ಟಿ ಹೋಗಿತ್ತು. ಪಾದವನ್ನು ತಣ್ಣೀರಲ್ಲಿ ಮುಳುಗಿಸಿದೆ. ಹೋಗಲಿ ಬಿಡಿ, ಇನ್ನು ಮುಂದೆ ಚಪ್ಪಲಿ ಕಳೆದಾಗ.." ಅದನ್ನು "ಪಾದುಕಾಪುರಾಣ" ಮಾಡದೆ "ಕಳದದ್ದು ನಮ್ಮದಲ್ಲ" ಎಂಬ ಸ್ಥಿತಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು, ಅಲ್ಲವೇ! ನೀವೇನಂತೀರಿ..

**(ವಿಕ್ರಮ', ೨೨, ಮಾರ್ಚ್ ೨೦೧೫, ಯುಗಾದಿ ವಿಶೇಷಾಂಕ)**

## ೨೬. ಊಟಕ್ಕೇನದ... ?

**ಜಾಹ್ನವಿ ಆನಂದ ಹಳ್ಳೂರ**

**ಒಂದು ಎರಡು ಬಾಳೆಲೆ ಹರಡು**

**ಮೂರು ನಾಕು ಅನ್ನ ಹಾಕು**

**ಐದು ಆರು ಬೇಳೆ ಸಾರು**

**ಏಳು ಎಂಟು ಪಲ್ಯಕೆ ದಂಟು...**

ಮುಂದಿನ ಸಾಲು ಹೋಗಲಿ, ಮುಂದಿನ ಅಂಕಿ ಸುದ್ದಾ ಹೇಳಿಲ್ಲ ನಾನು. ಮುಂದಿನ ಸಾಲಿನ್ಯಾಗೇನೂ ಊಟದ ಸಾಮಾನಿದ್ದಂಗ ನೆನಪಿಲ್ಲ ನನಗ, ಅದಕ ಆ ಸಾಲೂ ಸೇರೂದಿಲ್ಲ. ಹಿಂಗಿರಬೇಕಾಗಿತ್ತದು... 'ಒಂಬತ್ತು ಹತ್ತು ಜಿಲೇಬಿ ಸುತ್ತು' ಅಂದರ ನೆನಪುಳೀಬಹುದಿತ್ತು. ನನಗೂ ಊಟಕ್ಕೂ ಬಹಳ ನಂಟು. ಯಾರಿಗೂ ಇಲ್ಲದ್ದ ಈ ಗಂಟು? ಎಲ್ಲಾರೂ ಉಣ್ಣುತಾರ. ಎಲ್ಲಾರಿಗೂ ಇದ್ದದ್ದ ಈ ನಂಟು... ಇದರಾಗೇನು ವಿಶೇಷವುಂಟು..?! ಸಣ್ಣವರಿದ್ದಾಗ ಸಾಲಿಗೆ ಎಲ್ಲಾರು ಹೋಗತಾರ... ನಾನೂ ಹೋಗತಿದ್ದೆ. ಎಲ್ಲಾರೂ ವಿಜ್ಞಾನ, ಸಮಾಜ, ಗಣಿತ ಅಂತ ಏನೇನೋ ನನಗ ತಿಳೀಲಾರದ ವಿಷಯಗಳನ್ನ ಕಲೀತಿರಬೇಕಾದರ ನಾನು ಖಿಡಕೀ ಹೊರಗ ನೋಡಕೋತ ಬಾಳೀಕಾಯಿ ಪಲ್ಯಾದಾಗ ಹಶೀ ಬೊಬ್ಬರಿ ಜಾಸ್ತಿ ಹಾಕಿ ಮಾಡಿ ಅದನ್ನ ಬಿಶಿಬಿಶಿ ಅನ್ನ-ಬ್ಯಾಳೀ ತವಿ ಜೋಡಿ ಊಟ ಮಾಡಬೇಕಂತ ವಿಚಾರ

ಮಾಡಕೋತ ಕೂತಿರತಿದ್ದೆ. ಯಾವಾಗ ಘಂಟೆ ಬಾರಸತದೋ... ಯಾವಾಗ ನಾ ಓಡಿ ಹೋಗಿ ಊಟ ತರುತ್ತಿದ್ದ ಅಣ್ಣನಿಂದ ಡಬ್ಬಿ ತೊಗೊಂಡು ಊಟ ಮಾಡೀನೋ... ಇವತ್ತ ಏನಿರಬಹುದು ಡಬ್ಯಾಗ ?! ಅನ್ನೋ ಸಾತ್ವಿಕ ಕುತೂಹಲ. ನಾ ಸಾಲಿಗೆ ಹೋಗ್ತಿದ್ದದ್ದ ಈ ಮಧ್ಯಾಹ್ನದ ಡಬ್ಬಿ ತಿನ್ನಲಿಕ್ಕೆ! ನಾ ಇದನ್ನ ಸರ್ಕಾರೀ ಅಧಿಕಾರಿಗಳಿಗೆ ತಿಳಿ ಹೇಳಿದ ಮ್ಯಾಲೇ ಸರ್ಕಾರದವರು ಈಕೀ ಹಂಗ ಇರೋವರನ್ನಾರ ಸಾಲಿಗೆ ಬರೋ ಹಂಗ ಮಾಡೋಣು ಅಂತ ವಿಚಾರ ಮಾಡಿ ಸರ್ಕಾರೀ ಸಾಲಿಯೊಳಗ ಬಿಶಿ ಊಟ ಜಾರಿ ಮಾಡ್ಯಾರ... ಖರೇರೀ... ಸುಳ್ಳ ಹೇಳೀನೇನು...?!

ನಾ ಊಟಾ ಅಷ್ಟು ಶಿಸ್ತು ಮಾಡೋದು ನೋಡಿ, ನನ್ನಜ್ಜಿ ನನ್ನ ತನ್ನ ಜೋಡೀನೇ ಊಟಕ್ಕೂಡಿಶಿಗೋತಿದ್ದಳು. 'ದೃಷ್ಟಿಯಾಗತದ ನನ್ನವ್ವಾ' ಅಂತ ನೆಟಕೀ ತಗೀತಿದ್ದಳು. ನನ್ನಕ್ಕ ಅಣ್ಣಂದಿರು ಮಾತ್ರ ಈ ಪ್ರಾಣಿ ಬರೇ ಉಣಲಿಕ್ಕೇ ಲಾಯಕ್ಕಂತ ತೀರ್ಪ ಕೊಟ್ಟಗೊಂಡಿದ್ದರು. ನನ್ನ ಊಟೋತ್ಸಾಹ ಎಷ್ಟಂದರ ನನ್ನ ಮೈಯಾಗ ಆರಾಮಿಲ್ಲದಾಗೂ ಅದು ಕುಗ್ಗತಿರಲಿಲ್ಲ. ಅಮ್ಮನ್ನ ಕಾಡತಿದ್ದೆ, ಏನರ ರುಚಿಯಾಗಿ ಮಾಡಂತ... ಆರಾಮಿಲ್ಲದಾಗೂ ಮೆತ್ತಗಿನ ಅನ್ನ, ನಿಂಬಿಕಾಯಿ ಉಪ್ಪಿನಕಾಯಿಯದು, ಜೀರಗಿ



ಮೆಣಸಿನ ಒಗ್ಗರಣೀದೂ, ಹಾಲಾಗಿನ ತುಪ್ಪದ ಸಿಹಿ ಗಂಜೀದೂ, ಮೆತ್ತನೇ ಕರಿಬೇವು ಹಾಕಿದ ಉಪ್ಪಿಟ್ಟಿನದೂ, ಇದ್ದಲಿ, ತುಪ್ಪದ್ದೂ ಹೀಂಗ... ಭಾಳಲ್ಲ ! ಬರೇ ಪಥ್ಯದ್ದು ಕೇಳುತ್ತಿದ್ದೆ!

"ಅಡಿಗೆಯನು ಮಾಡಬೇಕು ಸುಜ್ಞಾನದ ಅಡಿಗೆಯನ್ನು ಮಾಡಬೇಕಂತ ಕನಕದಾಸರು ಹೇಳ್ಯಾರ. ಅದನ ಚಂದದಿಂದ ಸವಿದುಣ್ಣಬೇಕಂತಾನೂ ಹೇಳ್ಯಾರ.

ಹಸಿವ್ಯಾಗೇದ...? ಅಡಿಗ್ಯಾಗೇದನೂ? ಊಟಾ ಮಾಡೋಣೇನೂ...? ಹಿಂಗ ಹೆಂಗ ಬೇಕಾದರೂ ಕೇಳಬಹುದು. ಆದರೂ ಊಟಕ್ಕೇನದ? ಅಂತ ಕೇಳೋದ್ರಾಗ ಒಂದು ಕುತೂಹಲ, ಉತ್ಸಾಹ, ಉಮೇದು. ಯಾವುದೋ ಒಂದು ಸ್ವಾದದ ಅಪೇಕ್ಷಾ ಇರತದ. ಅಷ್ಟ ಅಲ್ಲ, ಅಡಗೀ ಮಾಡೋವರ ಮ್ಯಾಲೆ ಒಂದು ನಮೂನೀ ವಿಶ್ವಾಸ ಇರತದ. ಇವರೇನೋ ರುಚಿಯಾದದ್ದ ಇವತ್ತೆ ಮಾಡತಾರ ಅನ್ನೋ ಭರೋಸಾ ಆ ಪ್ರಶ್ನೆಯೊಳಗ ಉಕ್ಕತದ. ಈ ಪ್ರಶ್ನೆ ಸಾಧಾರಣ ಪ್ರಶ್ನೆ ಅಲ್ಲ! ಇದನ್ನ ಕೇಳಿಕೋತನ ಕೂಸು ಹುಟ್ಟತಾ.. ಮುಪ್ಪಿನ ಜೀವ... ಜೀಂವಾ ಬಿಟ್ಟ ಮ್ಯಾಲೂ ಈ ಪ್ರಶ್ನೆ ಕೇಳಿ ತಮಗ ಬೇಕಾದ್ದು ಮಾಡಿಶಿಗೊಂಡು ತಿಂದು, ತೇಗಿ, ಡಬ್ಬಿ ಕಟಿಗೊಂಡು ಸ್ವರ್ಗ ಅಥವಾ ನರಕಕ್ಕ ಪ್ರಯಾಣ ಬೆಳಸತಾರ, ಕೂಸು ಹುಟ್ಟಿದ ಕ್ಷಣ ಈ ಪ್ರಶ್ನೆ ಕೇಳತದ. ಅದು ಅತ ಕೇಳೋದ್ರಿಂದ ಬ್ಯಾರೆ ಯಾರಿಗೂ ಅದರ ಮಾತು ತಿಳಿಯೂದಿಲ್ಲ. ತಾಯಿಗೊಬ್ಬಾಕಿಗೇ ಈ ಮಾತು ತಿಳೀತದ. ಆಕಿ ಅದರ ಊಟದ ವ್ಯವಸ್ಥಾ ಮಾಡತಾಳ.

ಹುಟ್ಟೋದು ಸಾಯೋದು ಒಂದೊಂದು ತುದಿ, ನಡುವ ನಡೆವ ಜೀವನದಾಗ ಈ ಪ್ರಶ್ನಿನ ಇಂಧನ. ನಾನಂತೂ ಈ ಪ್ರಶ್ನೆಯಿಂದನ ಜೀವಂತ ಇದ್ದೀನಿ. ಇಲ್ಲಾಂದ್ರ, ಏನದರೀ ಈ ಜೀವನದಾಗ? ಕೆಲಸ, ಮಾತು, ಹ್ಯಾವ, ದುಃಖ, ಸಿಟ್ಟು, ಹೆದರಿಕಿ, ಪರೀಕ್ಷಾ, ಝಗಳ, ಪ್ರೀತಿ ಪ್ರೇಮದ ಸುಳಿ, ಧಾವಂತಗಳು ಈ ಎಲ್ಲಾ ಸೇರಿ ಕೆಟ್ಟ ಹೊಯ್ದಾಡೋ ಸಂಸಾರ ಸಾಗರದಾಗ ಒಂದು ಸುಂದರ ದ್ವೀಪಧಾಂಗ ಈ ಪ್ರಶ್ನೆ... ಈ ಪ್ರಶ್ನೆಗೆ ನಿಮಗೆ ಉತ್ತರಾನೂ ಇತ್ತಂತ ತಿಳ್ಕೊರಿ, ಪ್ರಪಂಚದಾಗ ಅಗದೀ ಸಿರಿವಂತರು ನೀವಾ! ಯಾಕಂದ್ರ ಆ ದ್ವೀಪನ ನಿಮ್ಮದು. ಆ ದ್ವೀಪದಾಗ ಅನುಭವದಿಂದರ ಅಡಗೀ ಮಾಡಿ, ಇಲ್ಲಾಂದ್ರ ಶಿವಯೋಗಿಗಳು ಹೇಳೋ ಹಂಗ ಅನುಭಾವದಡುಗೆಯರ ಮಾಡಿ

ಹೆಂಗ ನುಚ್ಚಿನ ಮಲ್ಲಯ್ಯನಿಂದ ನುಚ್ಚು ಅಮರಾತು, ಹೆಚ್.ನರಸಿಂಹಯ್ಯನವರಿಂದ ಉಪ್ಪಿಟ್ಟು ರಾರಾಜಿಸಿತು, ಹಂಗ ನಮ್ಮ ರತ್ನನಿಂದ ಉಪಂಜಿ ಹೆಸರುವಾಸಿಯಾತು. ಬಡೂರು ಮನೀಗೆ ಬಂದು, ಊಟಕ್ಕೇನದ ಅನ್ನೋ ಪ್ರಶ್ನೆ ಕೇಳೂದಿಲ್ಲ. ಏನೂ ಇರದನೂ ಇರಬಹುದು ಇವತ್ತ ಅನ್ನೋ ಚಿಂತಿ ಅವರಿಗೆ ಇರತದ... ನಮ್ಮ ರತ್ನನ ಪದದ 'ರತ್ನಗ' 'ಕೈ ಹಿಡಿದೋಳ್ ಪುಟ್ನಂಜಿ ನಗನಗತ ಉಪಂಜಿ ಕೊಟ್ರಾಯ್ತು...' ಅದ ಅವನ ಪ್ರಪಂಚ, ಹಂಗಂತ ಬಡೂರು ಮನಿಊಟ ಸರಳ ಅಷ್ಟ ಇರೂದಿಲ್ಲ, ಭಯಂಕರ ರುಚಿ ಇರತದ! ಶಿವಾ! 'ಸಿರಿವಂತರ ಮನಿ ನೋಟ, ಬಡೂರ ಮನಿ



ಊಟ' ಅಂತ ಗಾದಿ ಮಾತ್ರ ಅದ ಅಲ್ಲ. ಮಾಸ್ತಿಯವರು ತಮ್ಮ ಪುಸ್ತಕದಾಗ ತಾವುಂಡ ಅತ್ಯಂತ ರುಚಿಯಾಗಿದ್ದ ಊಟದ ಬಗ್ಗೆ ಹೇಳತಾರ. ಮುನ್ಸೂಚನಾ ಇಲ್ಲದ, ರಾತ್ರಿ ಹೊತ್ತು ಬಂದ ತಮ್ಮನ್ನ ಊಟಕ್ಕ ಕೂಡಂತ ನಿಂದರಿಸಿಕೊಂಡು ಮನೆಯಲ್ಲಿಲ್ಲದ ಗೃಹಿಣಿಯನ್ನ ತಾಬಡ ತೋಬಡ ಕರೆಸಿ, ಆಕೆ ಲಗುಬಗೆಯಿಂದ ಉಣಬಡಿಸಿದ ಅನ್ನ, ಗೊಡ್ಡಸಾರೇ ಆ ಅಮೃತ ಸಮಾನ ಊಟ ಅಂತ ಅವರು ಬರೀತಾರ.

ಮ್ಯಾಲೆ ತಾಬಡ ತೋಬಡ ಅಂತ ಬರೆದೀನಲ್ಲಾ...? ಅಷ್ಟ ಸಾಕು. ಅದೇ ಪ್ರಾಸಕ್ಕ ನನಗ ಕರಿಗಡಬ ನೆನಪಾತು.. ಪುಣೇಕರರ ಗಂಗವ್ವ ಗಂಗಾಮಾಯಿಯೊಳಗ ಗಂಗವ್ವ ತನ್ನ ಮಗ ಕಿಟ್ಟಿಗೆ ಮಾಡಿಡೋ ಬುಟ್ಟಿ ತುಂಬ ಕರಿಗಡಬು ಕಣ್ಣ ಮುಂದ ಕೂತವು. ನಾಳೆ ಸ್ವಲ್ಪ ಬ್ಯಾಳ್ಯಾಗ ಬೆಲ್ಲ ವಗದ ಬಿಡ್ತೀನಿ. ಹೋಳಿರ ಕಡಬರ ಮಾಡೇ ಬಿಡ್ತೀನಿ. ಹೆಂಗೂ ತುಪ್ಪದ... ನಮ್ಮ ವೈನೀ ಲಗ್ನದಾಗ ಹಾಕಿದ ಕಡಬಿನ ಒಡಪು ನೆನಪಾತು.

**ಹತ್ತು ಹೋಳಗಿ ಹೊಡೆದಾರ**

**ಇಪ್ಪತ್ತು ಕಡಬ ಇಳಿಸ್ಯಾರ**

**ತಪ್ಪೇಲಿ ತುಂಬ ಹುಗ್ಗಿ ಉಂಡಾರ**

**ಉಶ್ವಾಸ ಅಂತ ಡೋಂಗೀ ಮಾಡ್ತಾರ... ನನ್ನ ಸರದಾರ**

ಎಂಥಾ ಛಂದ ವರ್ಣನಾ! ನಮ್ಮ ಕಡೀ ಅಷ್ಟ ಅಲ್ಲ. ಈ ಮೈಸೂರು ಮಂದೀನೂ ಭಾರಿ ಚಂದ ತಾವು ಮಾಡಿದ ಅಡಿಗಿ ವರ್ಣಿಸತಾರರೀ. ಅವರು ಬ್ಯಾಳ್ಯಾಗ ನನ್ನ ಹಾಂಗ ಬೆಲ್ಲ ಬೀಶ್ಯಾಡಿ ವಗಿಯೂದಿಲ್ಲ. ನನ್ನಕ್ಕನ ಅತ್ತಿಯವರ ತಾಯಿಯವರು (ಸುಮಾರು ೮೫-೮೭ ವಯಸ್ಸು) ಅವರ ಸೊಸಿಗೆ ಫೋನ ಹಚ್ಚಿದ್ದರು. ಆಕೀ ಏನಡಿಗಿ ಮಾಡ್ಯಾಳ, ಎಷ್ಟು ಮಾಡ್ಯಾಳ, ಹೆಂಗ ಮಾಡ್ಯಾಳ, ಎಷ್ಟೊತ್ತು ಮಾಡ್ಯಾಳ... ಮುಂತಾದ ಎಲ್ಲಾ ಮಾಹಿತಿ ತಗೊಂಡ್ರಪಾ... ಎಲ್ಲಾ ಸುದ್ದಿ ಹೇಳಿ ಹೇಳಿ ಸುಸ್ತು ಹೊಡದು ಆಕೀನೂ ಕೇಳಿರಬೇಕು, 'ನೀ ಯೇನ ಮಾಡಿದೆವಾ ನನ್ನ ಅತ್ಯವ್ವ..?" ಅಂತ. "ಏನೂ ತುಂಬಾ ಮಾಡಿಲ್ವೇ... ಮನೆ ಮುಂದೇ ಹುರುಳಿಕಾಯಿ ಬಂದಿದ್ದು.. ಎಷ್ಟೇ ಚೆನ್ನಾಗಿತ್ತೂ ಅಂತೀಯಾ.. ಎಳೇದೂಂದ್ರೆ ಎಳೇದು ಕಣೆ... ನೆನ್ನೆ ಸಾಯಂಕಾಲಾನೇ ಟೀವೀ ನೋಡ್ತಾ ನೋಡ್ತಾ ನಾರೆಲ್ಲಾ ಬಿಡಿಸಿ, ಹೊಂದಿಸಿಡ್ಕೊಂಡಿದ್ದೆ. ಪದ್ಧನೂ (ಮೊಮ್ಮಗಳು) ಎಷ್ಟ ಸಹಾಯ ಮಾಡ್ತು ಗೊತ್ತೇ? 'ಯಾಕಜ್ಜಿ ಕೈ ನೋಯಿಸ್ಕೋತಿ' ಅಂತ ಗೋಳಾಡ್ತು ಕಣೆ. ಅದೇ ಹುರುಳಿಕಾಯಿ ಇವತ್ತು ಸಣ್ಣಗೆ ಹೆಚ್ಚಂಡು ಪಲ್ಯ ಮಾಡಿದ್ದೀನಿ. ಅದಕ್ಕೆ ತಿಳಿ ಸಾರು ಚೆನ್ನಾಗಿರುತ್ತೇಂತ ಹನಿ ತುಪ್ಪದ ಒಗ್ಗರಣೆ ಬಿಟ್ಟು ಸಾರು ಮಾಡಿದ್ದೀನಿ. ಅಳಿಯಂದ್ರಿಗೆ ಸಿಹಿ ಹಿಡಿಸುತ್ತೇಂತ ಸ್ವಲ್ಪ ತುಪ್ಪದಲ್ಲೇ ಹೆಸರ್ಬೇಳೆ ಹುರ್ಕೊಂಡು ಸಿಹಿಗಂಜಿ ಮಾಡ್ದೆ. ಬೆಳಗ್ಗೆ ಕುಚಲಕ್ಕಿ ಇಡ್ಲಿಗೆ ಮಾಡಿದ್ದು ಕಾಯ್ ಚಟ್ನಿ ಮಿಕ್ಕಿತ್ತು. ಫ್ರಿಡ್ಜಲ್ಲಿ ಸರೋಜ ಮಾವಿನ್ಕಾಯ್ ತುರ್ದು ಒಳ್ಳೆ ಗೊಜ್ಜ್ ಮಾಡಿಟ್ಟಿದ್ದಾಳೆ. ಮಗೂ ಗರಿಗರಿ ಉಪ್ಪೇರಿ ಮಾಡಜ್ಜಿ ಅಂತ ಆಸೆ ಪಡ್ತಾ ಇದೆ..." ಇವರ ಅನ್ನಾಸಾರು



ಪಲ್ಯಾ ಎಷ್ಟ ವಿಶೇಷಣಗಳ ಜೋಡಿ ತಯಾರಾಗತದ ನೋಡಿ, ಹೌದು! ಅಡಗಿ ಮಾಡೋವವರು... ಹೀಂಗ ಅನುಭವಿಶಿಗೊಂಡು ಅಡಗೀ ಮಾಡಬೇಕು. ಅಂದ್ರ ಉಣೋರಿಗೆ ಮೈಗೆ ಹತ್ತತದ.

'ಪೃಥ್ವಿಯೊಳಗ ಇರುವ ಮೂರು ರತ್ನಗಳು ಅನ್ನ, ನೀರು ಮತ್ತು ಒಳ್ಳೆಯ ಮಾತುಗಳು' ಅಂತ ಒಂದು ಸಂಸ್ಕೃತದ ಸುಭಾಷಿತ ಹೇಳತದ. ಎಲ್ಲಿಗೇ ಹೋದರೂ ಹಟ್ಟಿ ಬಿಡೂದಿಲ್ಲರಿ. ಯಾವ ಊರಿಗೆ ಹೋದರೂ ಅಲ್ಲಿ ಏನ ವಿಶೇಷ ಸ್ಥಳಗಳನ್ನ ನೋಡಿದರೂ ನನಗ ಅಲ್ಲಿ ಆಹಾರ ವಿಶೇಷವಾಗಿ ನೆನಪುಳೀತದ, ಧಾರವಾಡದ ಬಸಪ್ಪನ ಖಾನಾವಳೀ ಜ್ವಾಳದ ಭಕ್ತಿ ಮುಂದ ಈ ಕಾಮತ್ ಹೋಟೇಲಿನ ಭಕ್ತಿ ಸಣ್ಣ ಕೂಸನಸತಾವ. ಯಲಗೂರಿನ ಹಣಮಪ್ಪನಪ್ಪ ಪ್ರಸಿದ್ಧ ಅಲ್ಲಿನ ಪ್ರಸಾದದ ಹೂರಣದ ಹೋಳಿಗಿ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕ್ಯಾಂಟೀನಿನ್ಯಾಗ ಒಮ್ಮೆ ಉಂಡಿದ್ದು ಇಡೀ ವಿಜಯನಗರದ ವೈಭವನ ಸಾಕಾರಾತು. ಏನು ಆ ರಾಯಚೂರಿನ ಸಣ್ಣಕ್ಕಿ ಅನ್ನ, ಸಾರು,

ಮಿರ್ಚಿ ಭಜಿ!! ಮೇಲಕೋಟಿ ಚೆಲುವ ನಾರಾಯಣನ ಸನ್ನಿಧಿಯೊಳಗುಂಡ ಆ ಪುಳಿಯೋಗರ, ಕೋಳಿವಾಡದ ಅವಲಕ್ಕಿ ಮೊಸರಗಡಿಗಿ ಪುರಾಣಿ ಚಟ್ನಪುಡಿಯ ರಸದ ಔತಣ... ಊಟದ ರುಚಿ ಅನ್ನೋದು ಬರೇ ಸಾಮಾನಿನ್ಯಾಗ ಇರೂದಿಲ್ಲ... ಆ ಸಮಯ, ಆ ಹಸಿವಿ, ಉಣಿಸುವವರ ಪ್ರೀತಿ ಇವೆಲ್ಲದರ ಸಮ್ಮೇಳ, ಹಿಟ್ಟಿಕ್ಕಿದವರ ಹೊಟ್ಟೆ ತಣ್ಣಗಿರಲಿ. ಮತ್ತ ನನಗೆ ಯಾವುದ ಪುಸ್ತಕ ಓದಲಿ ಅದರಾಗ ಇನ್ನೇನೂ ನೆನಪುಳಿಯದಿದ್ದರೂ ಈ ಊಟದ ವರ್ಣನಾ ಮರೆಯೂದಿಲ್ಲರಿ. ನಾ ಹುಟ್ಟಿರೋದ ಬರೇ ಊಟ ಮಾಡ್ಲಿಕ್ಕೇನೋ ಅಂತ ಅನಸ್ತದ. ಭೈರಪ್ಪನವರ ಕಾದಂಬರಿ... 'ಪರ್ವ'ದಾಗ ಕುಂತಿ, ವಿದುರನ ಮನ್ಯಾಗ ಉಣ್ಣತಾಳಲ್ಲ ಹಾಲಿನಲ್ಲಿ ಬೇಯಿಸಿದ ಮೆತ್ತನೇ ಅನ್ನ... ಮತ್ತ... ಈ ಶುಕ್ರವಾರದ ಗೌರೀ ಹಾಡಿನ್ಯಾಗ ಅಬಬಬಾ ಏನದು ವರ್ಣನಾ...? ಶುಕ್ರವಾರದ ಊಟದ ವರ್ಣನಾಕ್ಕೆ ಬರೋಬ್ಬರೀ ಎಂಟು ಪದ್ಯಗಳು.. ಶನಿವಾರದ ಹಾಡಿನ್ಯಾಗ ಹಿಟ್ಟಿನ ಕಡಬು, ಕಟ್ಟಂಬಲಿ, ಎಳ್ಳೆಣ್ಣೆ, ಹಿಂಡಿಯ ಪಲ್ಯ, ನುಚ್ಚು, ಮಜ್ಜಿಗಿಹುಳಿ, ತಿಳಿಯ ಕಟ್ಟಂಬಲಿ... ತಾಂಬೂಲ ವೈಭವ ಬ್ಯಾಡೇನೂ? ಎಲೆಯಡಿಕೆ, ಯಾಲಕ್ಕಿ, ಪತ್ರೆ, ಕಾಯಿ, ಲವಂಗ...!

ನಮ್ಮಪ್ಪ, ನಾವು ಹುಡು ಸಣ್ಣಾವರಿದ್ದಾಗ 'ದರ್ಜಿಯ ಕಥೆ' ಅನ್ನೋ ಕಥೆ ಹೇಳತಿದ್ದರು. ದಿನಾ ಅದ ಕಥೆ. ಯಾವುದು ಗೊತ್ತನೂ... ಒಬ್ಬಾತ ಟೊಪ್ಪಿಗೆ ಹೊಲಿಯೋವ ಇರತಾನ, ಅಂವಾ ಟೊಪ್ಪಿಗಿ ಮಾರಲಿಕ್ಕೆ ಹೊಂಡತಾನ. ಹಾದ್ಯಾಗ ಉಣಲಿಕ್ಕೆ ಅವನ ಹೆಂಡತಿ ಬುತ್ತಿ ಕಟ್ಟಿ ಕೊಡ್ತಾಳ... ಖರೇ ಕಥೆ ಮುಂದುವರದ್ರೂನೂ... ನಮ್ಮಪ್ಪಾಜಿ ಹೇಳುತ್ತಿದ್ದ ಕಥೆ ಅಲ್ಲಿಗೆ ಅಡ್ಡ ಹಾದೀ... ಅಡಿಗಿ ಹಾದಿ ಹಿಡೀತಿತ್ತು. ದರ್ಜಿಯ ಹೆಂಡತಿ ಬುತ್ತಿಯೊಳಗ ಏನೇನು ಕಟ್ಟಿದ್ದಳಪಾ... ಎಂಬಲ್ಲಿ ನಮ್ಮೆಲ್ಲರ ಜಿಹ್ವಾಚಾಪಲ್ಯಗಳೂ ನಿದ್ದೀಯಿಂದ ಎದ್ದು ಕೂಡತಿದ್ದವು, ನಮಗ ಬೇಕಾದ್ದೆಲ್ಲಾ ಆಕಿ ಬುತ್ತೀಯೊಳಗ ಕಟ್ಟಬೇಕು ಇಲ್ಲಾಂದ್ರ ದರ್ಜಿ ಟೊಪ್ಪಿಗೆ ಮಾರಲಿಕ್ಕೆ ಹೋಗುವ ಹಾಂಗಿಲ್ಲ. ಮಂಗ್ಯಾಗೋಳು



ಅವನ ಟೊಪಿಗೆ ಕದಿಯೋ ಹಂಗಿಲ್ಲ...!

ಇವೆಲ್ಲಾ ಓದೀ, ಕೇಳಿ, ಈ ಜೀವನದಾಗ ಸ್ವಲ್ಪ ಅರ್ಥ ಅದ ಅಂತ ಅನಿಶಿ ಇನ್ನೂ ಜೀವಂತ ಇದ್ದೇನಿ. ಇನ್ನೇನು ಕೆಲಸ? ಅಟ್ಟೋದು, ಉಣ್ಣೋದು...! ಕುಮಾರವ್ಯಾಸನ ಅರ್ಜುನ ಮತ್ಸ್ಯಯಂತ್ರ ಭೇದಸಲಿಕ್ಕೆ ಹೊಂಟಾಗ ಅವನ ಸುತ್ತಲೂ ಕೂತಿದ್ದವರು ಅಂತಾರ. “ಎಲಾ ಇವನ... ಇವ್ಯಾಕ ಹೊಂಟಾನಪಾ. .. ಉಣಲಿಕ್ಕೆ ಬಂದೀವಿ. ಉಂಡು ದಕ್ಷಣೀ ತೊಗೊಂಡು ಹೋಗೋಣು. ಇಲ್ಲದ್ದ ಗದ್ದಲ ಎಬ್ಬಿಸಬ್ಯಾಡ. ಏನೇನರೇ ಹುಚ್ಚುಚ್ಚಾರಾ ಕನಸು ಕಾಣಬ್ಯಾಡ ಅಂತ ಹೊಡ್ಕೊಂಡು... 'ಶೋಧಿಸಿದ ತನಿ ಬೆಲ್ಲವಿಕ್ಕಿದ ಹೂರಿಗೆಯ ಮೆದೆಯಲ್ಲಿ, ಪರಡಿಯ ಶಾವಿಗೆಯ ಪರಿ ಪರಿಯ

ಪಾಯಸದ ಪುಲ್ಲಿಗೆಯ ತತ್ಸವಿಯ ಮಂಡಿಗೆಯಲ್ಲಿ ನವಸ್ಕೃತ ಸೂಪದಂಶಕದಲ್ಲಿ... ತೋರಸೋಣು ನಮ್ಮ ಶೌರ್ಯ..! ಬಿಲ್ಲು ಬಾಣ ನಮಗ್ಯಾಕ?' ಅಂತ ಮಾತಿನ್ಯಾಗ ಅವನ್ನ ತರಬ್ಲಿಕ್ಕೆ ನೋಡಿದರು. ಇಂವಾ ಏನು ನನ್ಹಾಂಗ ಬರೇ ಊಟಕ್ಕ ಹುಟ್ಟಿದಾಂವೇನು...? ಇಂವಾ ಹೋದ. ಹೊಡೆದ, ಪಡೆದ! ಮುಂದ ಮಹಾಭಾರತ ಯುದ್ಧನ ಆತು. ಇಂವಾ ಸುಂಮನ ಉಂಡು ಬಂದಿದ್ದರ ಕೃಷ್ಣಗ ಕೆಲಸ ಉಳೀತಿತ್ತು. ಕುಮಾರವ್ಯಾಸ ಮಹರಾಯ ಒಡ್ಡಿ ಉಟಗೊಂಡು ಗಡಾಗಡಾ ಥಂಡ್ಯಾಗ ಭಾರತಾ ಬರೆಯೋದು ಉಳೀತಿತ್ತು. ದೌಪದಿ ಸ್ವಯಂವರನರೇ ಇರಲಿ, ಮತ್ತೆ ಯಾರದರ ಲಗ್ನಕ್ಕೆ ಹೋಗಲಿ ಹುಡುಗಾ ಹುಡುಗೀನ್ನ ಕಟಗೊಂಡ್ ನಾ ಯೇನ ಮಾಡೋದಿರತದ...? ನನದೇನಿದ್ದರೂ ಊಟದ ಕಡೀನ ಲಕ್ಷ್ಯ, ಲಗ್ನದ ಮುಹೂರ್ತಕ್ಕಿನಾ ಊಟದ ಮುಹೂರ್ತನ ಸುಮುಹೂರ್ತ.

ವಸುಧೇಂದ್ರರ ಒಂದು ಕಥೆಯೊಳಗ ಬಡ ತಂಗಿ ಸ್ಥಿತಿವಂತ ಅಣ್ಣನ ಮಗಳ ಲಗ್ನಕ್ಕೆ ಬರತಾಳ... ಆಕೀಗೇ ಅಲ್ಲಿನ ಥಳಕಿನ್ಯಾಗ ಅಣ್ಣ ತನ್ನಿಂದ ದೂರಾಧಂಗ ಅನಿಸತಿರುವಾಗ ಮಂಡಿಗಿ ಮಾತು ಅವರಿಬ್ಬರ ಮನಸ್ಸಿಗೆ ಸಿಹಿ ಮಾತಿನ ಸೇತುವಾಗತದ. ಮೊನ್ನೆ ಫೇಸ್ ಬುಕ್ಕಿನ್ಯಾಗ ಈ ಮಂಡಗೀಯ ವರ್ಣನಾ ನಡದಿತ್ತು... ತೆಳ್ಳಗ ಬೆಳ್ಳಗ ಸೀಯಾಗಿ ಇರತದ ಅಂದ ಕೂಡ್ಲೆ ಅಷ್ಟೂ ಗಂಡ ಹುಡು ಲೈಕ್ ವತ್ತಿ ಕುಣಿದಾಡ್ಲಿಕ್ಕೆ ಹತ್ತಿದ್ದವು.

ಫೈವ್ ಸ್ಟಾರ್ ಹೋಟೇಲಿನ್ಯಾಗೂ ಊಟದ ಮೆನು ಡಿಲೀಟ್ ಮಾಡಿ ನೋಡಿ... ನಾಲ್ಕ್  ಸ್ಟಾರು ಕೆಳಗ ಬರತಾವ.  ನಮ್ಮ ಅಚೇಮನೆಯ ಸುಬ್ಬಮ್ಮನಿಗೆ ಇಂಥಾ ಫೈವ್ ಸ್ಟಾರ ಹೊಟೇಲಿಗೆ ಇವತ್ತ ಕರ್ಕೊಂಡು ಹೋದರೂ ಇವತ್ತ ಆಕೀದು ಏಕಾದಶಿ ಉಪವಾಸ...! ಸ್ವಲ್ಪ ಸ್ವಲ್ಪ ತಿಂತಾಳಷ್ಟೆ ಉಪ್ಪಿಟ್ಟು, ಅವಲಕ್ಕಿ, ಪಾಯಸ... ಇದು ಉಪವಾಸದ ಫಳಾರದ ಮಾತಾದರ... ದ್ವಾದಶಿ ಊಟದ ಗಡಿಬಿಡಿ... ಏನ್ ಹೇಳ್ಳಿ.. ದ್ವಾದಶಿ ಊಟ ಹಳೇ ಹುಬ್ಬಳ್ಳಿಯ ಸತ್ಯಬೋಧ ಸ್ವಾಮಿಗಳ ಮಠದ್ದು... ಆ ಖೀರು, ಆ ಬಾಸುಂದೇ, ಆ ಕೇಶರ ಭಾತು... ಒಂದು ಏಕಾದಶಿ ಉಪವಾಸ ಸಾಲೂದಿಲ್ಲ. ಒಂದು ವಾರದ ಉಪವಾಸ



ಬೇಕು ಆ ಮೃಷ್ಟಾನ್ನ ಉಣಲಿಕ್ಕೆ.

'ಮಾಯಾ ಬಜಾರಿನ ವಿವಾಹ ಭೋಜನವಿದು ವಿಚಿತ್ರ ಭಕ್ಷ್ಯಗಳಿವು...' ಅನ್ನೋ ಹಾಡು ನೋಡಿರಲಿಲ್ಲ ಅಂದ್ರ ನೋಡ್ರಿ, ತೆಲುಗಿನ ಶ್ರೀರಮಣರ ಮಿಥುನ ನೀಳ್ಗತೆಯ ಅಪ್ಪಾದಾಸು ತನ್ನ ಹೆಂಡತಿ ಬುಚ್ಚಿಗೆ ಹೇಳುವ ಮಾತು,

'ಮದುವೀ ಮನಿ ಅಡಗಿ ಅಂದ್ರ ಪಂಚರತ್ನ ಅಂತ ಇರ್ತವೆ. ತುಂಬಿದ ಬದನೇಕಾಯಿ ಪಲ್ಯ, ಕಂದಗಡ್ಡಿ ಉಪ್ಪೇರಿ, ಮಾವಿನಕಾಯಿ ಬಾಳಕ, ಬಾಳೇಕಾಯಿ ಬೋಂಡಾ...' ಓದಿರಲಿಲ್ಲ ಓದರಿ, ಓದಿ... ಸಾಯರಿ, ಹಂಗ ಸಾಯಬ್ಯಾಡರಿ!

ಬಕಾಸುರನೂ ಭೀಮನ್ನ ಕೇಳಿದ 'ಊಟಕ್ಕೇನದಪಾ ಅಂತ?'. ಹೇಳಿ ಕೇಳೀ ಭೀಮ ಇಂವಾ...! ನಾನ ಇದ್ದೇನಿ ಬಾ ತಿಂದು ತೇಗೂವಂತಿ ಅಂತ ಅಂದಾಂವ ಬಕಾಸುರನ ಊಟ ತಾನ ಹೊಡೆದು ಬಕಾಸುರನನ್ನೂ ಹೊಡೆದು ಮುಗಿಶಿಬಿಟ್ಟ!

ಖರೇ ಸ್ತ್ರೀ ಸಬಲೀಕರಣ ಅಂದ್ರ ನನ್ನ ಪ್ರಕಾರ ಹೆಂಡತಿಯಾದವಳಿಗೂ 'ಊಟಕ್ಕೇನದ?' ಅಂತ ಕೇಳೋ ಸ್ವಾತಂತ್ರ್ಯ, ಅಧಿಕಾರ ಬರಬೇಕು. ಹುಟ್ಟೋರನ್ನೂ ಸಾಯೋರದ್ದೂ ಇರಲಿ ಅತ್ತಾಗ ಮಾತು, ಪತಿದೇವರದ್ದೂ ಮಕ್ಕಳದ್ದೂ ಒತ್ತಟ್ಟಿಗಿರಲಿ, ಅತಿಥಿಗಳೂ ಅಭ್ಯಾಗತರೂ ಹೊರಗ ಕೂಡ್ಲಿ... ನಮ್ಮ ಪ್ರೀತಿಯ ದೇವಿ, ದೇವರುಗಳೂ ಪೂಜಾ ಮಾಡಿಶಿಗೊಳ್ಳಿಕ್ಕೆ ಬರೋವಾಗ... ಕೇಳೇ ಬಾರ. ಆರತಿಯಾತು.. ಮುಂದ... ನೈವೇದ್ಯ? ಇವತ್ತ... ಊಟಕ್ಕೇನದ?

**(ಮಯೂರ, ಜುಲೈ ೨೦೧೫)**

## ೨೭. ಕಳೆಯದ ಬಳೆಯ ನಿನಾದ

**ಲತ ಹೊಸಪ್ಯಾಟಿ**

'ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹೆನು ಒಳಗೆ ಬರಲಪ್ಪಣೆಯೆ ದೊರೆಯೆ...' ಹೊರಗೆ ನಿಲ್ಲಿಸಿ ಮೆಲ್ಲಗೆ ಹಾಡಿಸಿದರು ಮಲ್ಲಿಗೆ ಕವಿ ಅಂದು. ಇಂದು ಒಳಗಿದ್ದವಳ ಎದೆಯಲ್ಲಿ ಘಲ್ ಘಲ್ ಸದ್ದು, ಬಳೆ ಕೈಯನ್ನು ಮಾತ್ರ ಆವರಿಸಿಲ್ಲ. ಎದೆಯನ್ನೂ ಆಕ್ರಮಿಸಿದೆ. ಕವಿ ಬಳೆ ಬಗ್ಗೆ ಎದೆ ತೋಯಿಸಿಕೊಂಡೇ ಬರೆದರಾದರೂ ಕಣ್ಣು ಹನಿಯಾಗುವಂತೆ ಕವಿತೆ ಹಾಡಿದ್ದು ಇನ್ನಾರೋ, ಅವರೇ ಬರೆದು ಅವರೇ ಹಾಡಬೇಕಿಲ್ಲ. ಬಳೆ ವಿಷಯವೂ ಹಾಗೆ, ಯಾರೋ ಹುಟ್ಟಿಸುತ್ತಾರೆ. ಮತ್ತಿನ್ನಾರೋ ತೊಡುತ್ತಾರೆ. ಎಲ್ಲೋ ಹುಟ್ಟಿ ಎಲ್ಲೋ ಹರಿದು ಎಲ್ಲೋ ಸೇರುವ ಶಾಲ್ಮಲಾಳಂತೆ ಕಣ್ಣಿಗೆ ಕಾಣದ ಗುಪ್ತಗಾಮಿನಿ... ಒಮ್ಮೆ ಬಳೆಗೆ ಕಿವಿ ಕೊಟ್ಟು ಆಲಿಸಿ, ಕೇಳಿಸುತ್ತದೆ ಪಿಸುಮಾತು. ಅಲ್ಲಿ ಕೇಳಲು ಕಿವಿ ಬೇಕಿಲ್ಲ. ಎದೆ ಬೇಕು, ಅಷ್ಟೆ!

ಪಿಸು ಮಾತಲಿ ಕಥೆ ಹೇಳುವ ಈ ಬಳೆಗಳ ಹೆಸರೂ ವೈವಿಧ್ಯಮಯ. ನೈಲಾನ್ ಬಳೆಗಳು, ಕೆಂಪು ಚುಕ್ಕಿ ಬಳೆಗಳು, ರೇಷ್ಮೆ ಬೆಳೆಗಳು, ಪಾಕೇಜಾ ಬಳೆಗಳು, ಗೋಟಿ ಬಳೆಗಳು, ಸಾದಾ ಬಳೆಗಳು, ಮುಗ್ಗಿ ಬಳೆಗಳು, ಡಬ್ಬಿ ಬಳೆಗಳು, ಪ್ಲಾಸ್ಟಿಕ್ ಬಳೆಗಳು, ರೋಲ್ ಗೋಲ್ಡ ಬಳೆಗಳು, ಚಾಜದ ಬಳೆಗಳು, ಬಾಣತಿ ಬಳೆಗಳು... ನದಿಗಳ ಹೆಸರಂತೆ ಚಂದ! ಎಲ್ಲಕ್ಕಿಂತ ಹಸಿರು ಗಾಜಿನ ಬಳೆಗಳೇ ಸ್ತ್ರೀ ಕುಲದ ಶುಭ ಸ್ವರಗಳು, ಶ್ರೇಷ್ಠ ನೀ ಫಲ್ ಎಂದರೆ ಸಂಗೀತವೇ ಎಂಬ ಕವಿಯ ಸಾಲು. ಸರಿಗಮವಾಗಿ ತಂ..ತಮ್ಮ ತನು ಮನ ಮೀಟುವುದು. ಹೀಗೆ ಸ್ವರ ಹೊರಡಿಸುವ ಒಂದೊಂದು ಗಾಜಿನ ಬಳೆಗಳದೂ ಒಂದೊಂದು ಕಥೆ, ಬಳೆಗೆ ಬಾಯಿ ಇಲ್ಲ ಅನಿಸಿಲ್ಲ.

ಲೋಕ ಹುಟ್ಟಿದ ಮೇಲೆ ಹೆಣ್ಣಿನ ಸೃಷ್ಟಿ ಮಾಡಿದ ಬ್ರಹ್ಮ, ತಾನು ಮೊದಲು ಹುಟ್ಟಿದೆನೆಂದು ಇತಿಹಾಸ ಬರೆದ. ಎರಡನೆಯವಳಾಗಿ ಹುಟ್ಟಿದವಳಿಗೆ ಮೊದಲು ಯಾರು ಬಳೆ ತೊಡಿಸಿದರೆಂದು ಗೊತ್ತಿಲ್ಲ. ಈಗ ಸತ್ಯ ಸಾಬೀತು ಪಡಿಸುವುದು ಬೇಕಿಲ್ಲ. ಬಳೇನಾ? ಅದು ಹೆಣ್ಣಿಗಲ್ಲವೇ ಎಂಬ ತಾತ್ಸಾರವೇನೋ? ಮೀಸೆ ಹೊತ್ತವರಿಗೆ ಬಳೆ ಶರ್ತ ಇಲ್ಲ. ಮೊದಲ ಅಕ್ಷರ ಬರೆದವನು ಗಂಡಸು ಬ್ರಹ್ಮ ತಾನೆ? ಬಳೆ ಎಂದರೆ ಬೆಳೆ ಎಂದೂ ಹೇಳುವುದುಂಟು. ಹೌದು, ಹೆಣ್ಣೋ ಗಂಡೋ ಹುಟ್ಟಿದ ಮೇಲೆ ಬೆಳೆಯಬೇಕು ತಾನೆ? ಮೊದಲು ಸಣ್ಣ. ಆಮೇಲೆ ದಪ್ಪ. ದಪ್ಪನೋ ಸಣ್ಣ – ನೀಳ ಹೆಣ್ಣು ಬಾಗಿ ಬಾಳೆ ಹಂಗ ಬಾಳ್ವೆ ಮಾಡಬೇಕ! ಅಜ್ಜನ ಸ್ಟೇಟ್ಮೆಂಟ್, 'ನೀಳಾಗು ನೀಲಮ್ಮನ ಮಗಳೇ!' ಎಂದ. ಬರ ಬರ ಬೆಳೆದೆ. ನಾ ಎತ್ತರಎತ್ತರ ಬೆಳೆಯುತ್ತಿದ್ದಾಗ ನೋಡಿದವರು ಬಳ ಬಳ ಕಣ್ಣು ಬಿಟ್ಟರು. ಮೊಮ್ಮಗಳ ಕಾಲು ಬಲು ಉದ್ದ ಎಂದು



ಸಮರ್ಥಿಸಿಕೊಂಡ ಅಜ್ಜ! ಅವಳ ತಲೆಗೊಂದು ಹಾ..ರಿ ಬಡೀರಿ, ಬೆಳೆಯುತ್ತಿದ್ದ ಬಸವಣ್ಣನ ತಲೆಗೆ ಎಲ್ಲೋ ಬಡಿದಿದ್ದಾರಂತೆ. ನೆತ್ತಿ ಬಡಿದಿದ್ದಕ್ಕೆ ಕುತ್ತಿಗೇನೆ ಎತ್ತಿಲ್ಲಂತೆ. ನೀವು ಬಡೀರಿ ಎಂದರೆ ಅದು ಏಳಿಗೆಯ ಸಂಕೇತ. ವಂಕಿ ಹಾಕಿ ಸೊಂಟ ಡೊಂಕು ಮಾಡೋದು ಬೇಡ ಎಂದವನ ಒಳಾರ್ಥ. ಇದು ಅರ್ಥವಾಗಿದ್ದು ನಾ ವಂಕಿ ಹಾಕಿಕೊಂಡಾಗಲೇ.

ಹಿಂದೆ ಬಳೆಗಳನ್ನು ವರ್ತುಲಾಕಾರದ ಕಬ್ಬಿಣದ ಪಟ್ಟಿಯಿಂದ ಮಾಡಿ ಕೈಗಳಿಗೆ ಕಟ್ಟುತ್ತಿದ್ದರು. ಕಟ್ಟಿಸಿಕೊಂಡವರೆಲ್ಲ ಶಾಶ್ವತ ದಾಸಿಯರು. ಯಾವ ದಾಸಿ ಮೊದಲು ಮಾಡಿದಳೋ ಪುಣ್ಯಾತಗಿತ್ತಿ, 'ಕಾರ್ಯೇಶು ದಾಸಿಯಲ್ಲೂ ಸುಖವಿದೆ' ಎಂದು. ತಲೆಯಲ್ಲಿ ಕೊರೆಯುವ ಗುಂಗಿಹುಳು. ಕಂಡೂ ಕಾಣುತ್ತಿಲ್ಲ, ಹಾರಿಯೂ ಹೋಗುತ್ತಿಲ್ಲ. ಚಾಲಾಕಿಗಳು ನಮ್ಮ ಹಿರಿಯ ಪುರುಷರು. ಬಣ್ಣದ ಮಾತಾಡಿ ಬಣ್ಣದ ಬಳೆ ತೊಡಿಸಿದರು. ಕಂಕಣಕ್ಕೆ

ಶೋಭೆ ತರುವ ಏಕೈಕ ಕಡಗವೂ ಬಳೇನೇ. ಇದು ಕೈಗೆ ಮಾತ್ರವೇನು, ಕಾಲಿಗೂ ಧರಿಸಬಹುದೆಂಬುದು ಅರ್ಥಕೋಶದ ಅರ್ಥ. ಕೈಗೋ ಕಾಲಿಗೋ ಬಂಧನವಾಗದಿದ್ದರೆ ಸಾಕು. ಕಳೆದುಕೊಂಡ ಪ್ರೀತಿ ಹುಡುಕಲು ಹೋದವನವನು. ಕೈಗೂ-ಕಾಲಿಗೂ ಬಳೆ ಹಾಕಿಕೊಂಡೇ ಸದ್ದು ಮಾಡಿದ ದೃಶ್ಯ ನೋಡಿದಾಗ ನನ್ನ ಎದೆಯಲ್ಲಿ ಗುದ್ದಿದ ಸದ್ದು... ಅಲ್ಲಿ ಬಲಿಯಾಗಿದ್ದು ಬಳೆ ನಾಯಕಿ, ಸಾಯುತ್ತೇವೆ. ಎಂದರೇ ಅಳುವ ನಾವು ಸತ್ತರೆ ಅಳದಿರುವೆವೆ? ನಾಯಕಿ ಸತ್ತಾಗ ಕಣ್ಣೀರು ತುಂಬಿ ತುಂಬಿ ಬಂದಿತ್ತು.

ಭಾವಕ್ಕೆ ಸಿಲುಕಿ ಹಂಡೆ ಕಣ್ಣೀರು ಸುರುಸುವ ಹೆಂಗರುಳು. ಕೆಲವೊಮ್ಮೆ ಉರುಳು. ಯಾರಿಗೂ ಕಾಣಿಸಗೊಡದೇ ಒಳಗೆ ಒಳಗೆ ಅತ್ತರೂ ಬಿಡದ ಉಮ್ಮಳಿಕೆ. ಗಂಡಸು ಅತ್ತರೆ ಅಳಲಿ, ಅವರಿಗೂ ನೋವು ದುಃಖ ಕಷ್ಟ ಇದೆಯಲ್ಲವೆ? ಆದರೆ ಹೆಣ್ಣು ಹೆಂಗಸೆಂದು ಉಪಾದಿ ಹೆಣ್ಣಿನೆಸರಿನಲಿ, ಅಳುಬುರುಕಿ ಹೆಣ್ಣಂಗ ಅಳುತ್ತೆ. ಅಳೂ ಗಂಡಸು ಇರಬಾರದು, ನಗೂ ಹೆಂಗಸು ಇರಬಾರದು ಎಂಬ ಗಾದೆ ಇದೆ. ನಗಲೂ ದೊರೆ ಅಪ್ಪಣೆ, ಹಿಂಗೆ ನನಗೆ ಬಳೆ ತೊಟ್ಟವರ ಕಥೆ ಅದರ ಅರ್ಥ ಒಮ್ಮೊಮ್ಮೆ ದಕ್ಕುವುದೇ ಇಲ್ಲ. ವರ್ತುಲದ ಈ ಬಳೆಯನ್ನು ಬೇಕಿದ್ದರೆ ನೋಡಿ. ದೇವರ ಜಾತ್ರೆ ರಥಕ್ಕೂ, ರೈತರ ಹೊಲದ ಬಂಡಿಯ ಗಾಲಿಗೆ ಹೊರಗೂ ತೊಡಿಸಿರುತ್ತಾರೆ. ಬಳೆ ತೋಡಿಸಿದರೆ ಮಾತ ಸರಾಗ ನಡಿಗೆ, ಇಲ್ಲದಿದ್ದರೆ ನಡೆಯದ ಎತ್ತೆಂದು ಬೆನ್ನಿಗೆ ಬಾರಕೋಲಿನ ಬಡಿಗೆ. ಎಷ್ಟು ಸಾರೆ ಬಾಳ ಬಳೆಯ ವರ್ತುಳದೊಳಗೆ ಸಿಲುಕಿದ್ದಿದೆ. ಚಕ್ರವ್ಯೂಹ ಭೇದಿಸಿ ಹೊರಬರಲಾರದೇ ಜಂಭಾಬಲ ಅಡಗಿದ್ದಿದೆ.

ಹಬ್ಬ ಹುಣ್ಣಿಮೆ ಹರಿದಿನಗಳಲ್ಲಿ ಬಳೆ ಶಾಸ್ತ್ರ ನಡೆದರೆ ಚೆನ್ನ. ಅದೊಂದು ಹಬ್ಬ, ಹಾಕುವುದರಲ್ಲಿ ಬಳೆಗಾರನಿಗೂ ಸಂಭ್ರಮ. ಬಳೆಗಾರ ಚನ್ನಯ್ಯ ಮೊದಲೆಲ್ಲ ಬಾಗಿಲಿಗೆ ಬಂದರೆ ಮಾವನೋ ಅಜ್ಜನೋ ಯಾರೋ ಬಳೆ ಹಾಕಿಸಿಕೊಳ್ಳಲೆಂದು ೨ ರೂಪಾಯಿ ಕೈಯಲ್ಲಿಡುತ್ತಿದ್ದರು. ಒಮ್ಮೆ, ಬಳೆ ಹಾಕುವುದನ್ನು ಹೆಣ್ಣು ಮಕ್ಕಳಿಗೆ ಯಾಕೆ



ರೂಲ್ಸ್ ಮಾಡಿದರೆಂದು ರಚ್ಚೆ ಹಿಡಿದೇ ಸರ್‌ಗೆ ಕೇಳಿದ್ದೆ. 'ರೂಲ್ಸ್ ಇಲ್ಲ ಗೀಲ್ಸ್ ಇಲ್ಲ, ಬಿಡು. ನೀನು ಈಗಿನ ಕಾಲದ ಹುಡುಗಿ. ಬೇಕಿದ್ದರೆ ಹಾಕ್ಕೋ, ಬೇಡಾ ಎಂದರೆ ಬಿಡು' ಎಂದಿದ್ದರು. ಎಸ್‌ಎಸ್‌ಎಲ್‌ಸಿ ಪಾಸಾಗಿದ್ದಕ್ಕೆ ಬಹುಮಾನ ಬಂದ ವಾಚ್ ಕೈಗೇರಿತ್ತು. ವಾಚ್ ಕಾಣಬೇಕು, ಬಳೆ ಬೀಸಾಕು ಎಂದಳು ಗೆಳತಿ, ಹೊಸದನ್ನು ತೋರಿಸುವ ಧಿಮಾಕು. ಆ ಧಿಮಾಕು ಕಂಡ ಪಕ್ಕದ ಕಟ್ಟೆ ಅಜ್ಜಿ - ಇದೆಂಥದ್ದು ಕೊಟ್ರಾನ ಮಗಳು (ಅಪ್ಪನ ಹೆಸರು) ರಂಡಿ ಮುಂಡಿಯರಂಗ ತಿರಗತೈತಿ, ಬಳೀನೇ ಹಾಕೊಂಡಿಲ್ಲ. ನಾಳೆ ಏನು ಗಂಡನ ಜೊತೆ ಬಾಳಿ ಮಾಡತೈತಿ? ನೀನಾ ಹಾಕ್ಕೊ ಅಂತ ಗಂಡಗ ಹಾಕಿ ಓಡಿ ಹೋಗತ್ತ... ಎಂದು ಬೈದು ಬಳೆ ಹಾಕೋ ಶ್ರೀದೇವಮ್ಮಗ ಕರೆದು ಬಳಿ ತೊಡಿಸಿದ್ದು ಬಂಧನವೋ ಅನುಬಂಧವೋ ತಿಳಿದಿಲ್ಲ. ಆ ಹಸಿ ನೆನಪು ಮಾತ್ರ ಎದೆಗೂಡೊಳಗೆ ಬೆಚ್ಚಗಿದೆ. ಬಳಿ

ಹಾಕುವ ೮೦ರ ಅಜ್ಜಿ ಶ್ರೀದೇವಮ್ಮನ ಕೈಯೊಳಗೆ ಬೆಳ್ಳಿ ಬಳೆಗಳು, ವರ್ಷ ೬೦ ಆದರೂ ಸವಿದಿದ್ದಿಲ್ಲ. ಯಾವಾಗ ಹಾಕ್ಕೊಂಡಿ ಅಜ್ಜಿ? ಚಂದ, ಬೆಳ್ಳಗ ಫಳಫಳ ಹೊಳಿತಾವ. ನನಗೂ ಇಂತದೇ ಹಾಕು ಎಂದರೆ ಬಾಯಿಗೆ ಹೊಡೆದು, ಬಾಲ ಮಕ್ಕಳ ಬಾಯಾಗ ಬೇವಿನ ಮಾತ ಬರಬಾರದು. ಬಾಯಿ ಮುಚ್ಚಕೊಂಡು ಕೂಡು, ಹುಚ್ಚಕೊಡಿ ಮಾತಾಡಕ ಬರದಿಲ್ಲೇನು? ಎಂದು ಬಾಯಿ ಮುಚ್ಚಿಸಿದ್ದರು. ಈಗ ಮಾತಾಡಕ ಹತ್ತಿದರ ಮಾತು ನಿಲ್ಲಿಸಲು ಚೀಟಿ ಕೊಟ್ಟು ಮಾತು ನಿಲ್ಲಿಸುತ್ತಾರೆ... ಬಾಳೇ ಮಾಡಾಕ ಗಟ್ಟಿ ಬಳಿ ಬೇಕಿಲ್ಲ. ಗಟ್ಟಿ ಎದೆ ಬೇಕು. ಅಲ್ಲವೆ?

ಬೆಳ್ಳಿ ಬಳಿ ಹಾಕ್ಕೋತೇನಿ ಅಂದವಳಿಗೆ ಬಾಳೇ ಮಾಡಾಕ ಬರೋದಿಲ್ಲ, ಅಂತಾ ಪ್ರಶಸ್ತಿ ಕೊಟ್ಟವಳು ಅಜ್ಜಿ. ಅಲಿಖಿತ ಸಂವಿಧಾನ ಬರೆದವಳ ಕೈಯೊಳಗೂ ಬೆಳ್ಳಿ ಬಳಿ, ಅಜ್ಜ ಇದ್ದಾಗ ಹಸಿರು ಬಣ್ಣದ ಬಳಿ, ಅಜ್ಜ ಹೋದ ಮೇಲೆ ಯಾಕ ಬಿಳಿ ಬೆಳ್ಳಿ ಬಳಿ? ಅರ್ಥ ಆಗದೇ ಫಳ ಫಳ ಕಣ್ಣು ಬಿಟ್ಟಿದ್ದೆ.

ಅಜ್ಜ, ತನ್ನ ಪೌರುಷದ ಸಂಕೇತವಾಗಿ ಕುಸ್ತಿ ಗೆದ್ದು ಬಂದಿದ್ದನಂತೆ. ಬೆಳ್ಳಿ ಕಡಗ ತೊಡಿಸಿ ಬೆಳ್ಳಿ ಬಟ್ಟಲದಾಗ ಹಾಲು ಕುಡಿಸಿದ್ದರಂತೆ ಆಗ. ಅದು ಅವನ ಪೌರುಷದ ಸಂಕೇತ. ಅದೇ ಅಜ್ಜ ಹೋದ ಮೇಲೆ ಬೆಳ್ಳಿ ಬಳಿ ತೊಡಿಸಿದರು ಅಜ್ಜಿಗೆ, ಬಳಿ ಬೆಳ್ಳಿಯವೇ. ಅವನಿಗೆ ಅಲ್ಲಿ ಪೌರುಷದ ಸಂಕೇತ, ಇವಳಿಗೆ ಅಜ್ಜನ ಭಾಗ್ಯ ಕಳೆದುಕೊಂಡ ದೌರ್ಭಾಗ್ಯದ ಸಂಕೇತ. ಹೆಸರು ಬೆಳ್ಳಿ, ಸುಡುವ ಬಳಿಯಾಗಿ ಸುಟ್ಟಿದ್ದು ಅವಳ ಕೈಯಲ್ಲ. ಕನಸು.

ಸಣ್ಣ ವಯಸ್ಸು, ಚೆಣ್ಣಿಯಾಗಿದ್ದೆ. ಚೆಣಿಪಿಣಿಯಂತೆ ಪಿಣಿಕ್ ಪಿಣಿಕ್ ಜಿಗಿದಾಡುತ್ತಿದ್ದೆ. ಗಂಡು ಮಕ್ಕಳು ಹೆಣ್ಣು ಮಕ್ಕಳು ಬೇಧವಿರಲಿಲ್ಲ. ಮನೆಯ ಮುಂದಿನ ಗೌಡರ ಗಂಡು ಮಕ್ಕಳು ನನ್ನ ಸ್ನೇಹಿತರು. ಆ ಸ್ನೇಹ ಎಂತಹ ನಿರ್ಮಲ ನಿಷ್ಕಲ್ಮಶ. ರಾತ್ರಿ ೮- ೧೦ರವರೆಗೂ ಮಠದೊಳಗೆ ಕುಳಿತು ಚಕ್ಕರ ಆಡೋದು. ಅಲ್ಲಿಯೂ ಅದೇ ಬಳೆ. ಚೌಕು ಹಾಕಿದ ಖಾಲಿ ಚಕ್ಕಾರದ ಮನೆ ಎದುರಿಗೆ ಆಟಕ್ಕೆ ಕುಳಿತ ಸ್ನೇಹಿತನ ಚೌಕದಲ್ಲಿ ಗಟ್ಟಿ ಹುಣಸೆ ಬೀಜ ಪಕ್ಕ. ಅವನ ಎದುರಿಗೇ ಕುಳಿತ ನನ್ನ ಚೌಕದ ಮನೆಯಲ್ಲಿ ಮಾತ್ರ ಒಡೆದ ಗಾಜಿನ ನಾಲ್ಕು ಚೂರು! ಆಟಕ್ಕೂ ನಮ್ಮ ಪಾಲಿಗೆ ಬಂದದ್ದು ಗಾಜಿನ ಚೂರೆ!



ಆಡಿ ಯಾರೋ ಒಬ್ಬರು ಗೆದ್ದರೆ ಆಟ. ಶಿವಪ್ಪ ಕಾಕಾ ಕರೆಯಲು ಬಂದಾಗ ಆಟ ಅರ್ಧಕ್ಕೆ ನಿಲ್ಲತ್ತಿತ್ತು. ಆಟ ಬಿಟ್ಟು ಎದ್ದು ಹೋಗುವಾಗ ಬಳೆ ಕಥೆ ಹೇಳಿ ಹೆಜ್ಜೆ ಮುಂದಿಡಲು ಆಗದಂತೆ ಥರ ಥರ ಕೈ ಕಾಲು ನಡುಗಿಸುತ್ತಿದ್ದ ಶಂಕ್ರು. ಶಂಕ್ರು ಏನೂ ಹೆಣ್ಣಲ್ಲ. ಗಂಡೇ, ಮೊಟಕು ಹೆಸರು ಕರೆಯುವಲ್ಲಿ ಖುಶಿ. ಲಲಿತಾಳನ್ನು ಲಲ್ಲೂ ಎಂದರೆ, ಶಂಕರನನ್ನು ಶಂಕ್ರು, ಸಂಗಮ್ಮನನ್ನು ಸಂಗು ರಾಜೇಶ್ವರಿಯನ್ನು ರಾಜಿ, ದಲಾಲಳನ್ನು ದಲ್ಲೀ, ಸುಮಿತ್ರಾಳನ್ನು ಸುಮ್ಮಿ, ಕಸ್ತೂರಿಯನ್ನು ಕತ್ತೂ.. ಹೀಗೆ ಅರ್ಥವೋ ಅನರ್ಥವೋ ಇಟ್ಟ ಹೆಸರು ಕಸಿ ಮಾಡಿ ಕರೆದರೂ ಪೆಟ್ಟು ಬೀಳದಷ್ಟು ಬಾಯಿ

ತುಂಬಾ ಕರೆಯುತ್ತಿದ್ದೆವು. ಆ ಕರೆಯುವ ಧ್ವನಿಯಲ್ಲಿ ಬಳೆಯ ನಿನಾದದಂತೆ ಸರಿಗಮ ಸಂಗೀತ, ನಾಲಿಗೆಯ ಮೇಲೆ ಸಕ್ಕರೆಯ ಅಕ್ಕರೆ.

ನಮ್ಮ ಮನೆಯ ಹಿತ್ತಲೊಲ್ಲೊಂದು ದೊಡ್ಡ ಶಮಿವೃಕ್ಷ. ವೃಕ್ಷದ ಮಹಿಮೆ ಅಪಾರ. ಅಲ್ಲೊಂದು ಗುಡಿಯಿತ್ತು. ಅಲ್ಲಿ ಪೂಜೆ. ಎಷ್ಟೊಂದು ಅರ್ಥಪೂರ್ಣ. ಯಾವುದೋ ಒಂದು ನೆಪದಲ್ಲಿ ಗಿಡ ಬಾಡದಂತೆ ನೀರೆರೆದು ಪ್ರಕೃತಿ ಆರಾಧನೆ. ಅವರವರ ದೈವ ನಂಬಿಕೆ, ನಡೆದರೆ ತಾನೇ ಪಡೆಯುವುದು. ಕಕ್ಕಿ ಅತ್ತೆ, ಅಜ್ಜಿ ಸೊಸೆ ಎಲ್ಲರೂ ನಡೆದು ಬನ್ನಿ ಗಿಡಕ್ಕೆ ಬರುತ್ತಿದ್ದುದು ಹಗಲಲ್ಲಿ. ರಾತ್ರಿ ಮಾತ್ರ ಇನ್ನೊಬ್ಬರು ನಡೆದಾಡುತ್ತಿದ್ದರೆಂದು ಆ ಶಂಕುವೇ ಹೇಳುತ್ತಿದ್ದ.

ನೋಡು... ನಿಮ್ಮ ಮನೆ ಹಿಂದೆ ಬನ್ನಿ ಗಿಡದ ಕೆಳಗೆ ಒಂದು ದೊಡ್ಡ ಹಾಂಡೆಯೊಳಗೆ ನಿಧಿ ಹುಗದಾರ. ರಾತ್ರಿ ಹಾವೂ ಕಾಯುತ್ತಿರತೈತ ಮತ್ತು ಒಂದು ಹೆಣ್ಣು ದೆವ್ವ ಐತಿ, ಅದು ಬಿಳಿ ಸೀರಿ ಉಟಕೊಂಡು ಕೈ ತುಂಬ ಬಳಿ ಹಾಕ್ಕೊಂಡು ಕಾಲಲ್ಲಿ ಗೆಜ್ಜೆ ತೊಟಕೊಂಡು ಗಲ್‌ಗಲ್ ಅಂತ ಝುಣ್‌ಝುಣ್ ಅಂತ ಸಪ್ಪಳ ಮಾಡತಾ ಅಡ್ಡಾಡತೈತಿ, ಎಲ್ಲಾರ ಹೆಸರೂ ಆ ದೆವ್ವಕ್ಕ ಗೊತ್ತಿತ್ತಂತ, ನಿಂದೂ ಗೊತ್ತಿರತೈತಿ, ನಿಮ್ಮ ಮನಿ ಹಿಂದೆ ಬನ್ನಿ ಗಿಡದ ಕಡೆ ಹೋಯ್ತುಂತೆ. ಹೆದರಿಸಿ, ಹೆದರುಪುಕ್ಕ ಹಕ್ಕಿಯ ರೆಕ್ಕೆ ಹರಿದೇ ಕಳಿಸುತ್ತಿದ್ದ. ಆ ದೆವ್ವಕ್ಕೆ ಅಷ್ಟೇ ಸಾಕಿತ್ತು. ನಾನು ಕಣ್ಣು ಮುಚೋದನ್ನ ಕಾಯ್ತಾ ಕೈತುಂಬ ಬಳಿ ತೊಟಗೊಂಡು ರಾತ್ರಿಯೆಲ್ಲ ಕಣ್ಣಾಗ ಗೊಂಬಿ ಆಡಿಸಿ ನಿದ್ದೆ ಕಸಿದುಕೊಳ್ಳತಿತ್ತು

ಗಂಡಂದಿರು ಹೊಡೆದು ಬಳಿ ಒಡೆದರೆ ಹಾಕ್ಕೊಳ್ಳಾಕ ರೊಕ್ಕ ಕೊಡತ್ತಿದ್ದಿಲ್ಲ ಅತ್ತೆಯಂದಿರು. ಅವ್ವನ ಕಡೆ ಎರಡ ಬಳಿ ಇಲ್ಲೋಡೋ ಬಿಟ್ಟೋಡೋ ಕೊಡು ಅಂತ ಇಸಕೊಂಡು ಹಾಕ್ಕೊಂಡು ಹೋಗತ್ತಿದ್ದರು. ಆ ಬಳಿ ಹಾಕ್ಕೊಳ್ಳೋಕೂ ಪಾರತಂತ್ರ್ಯ ಪಾಪ ಅಂತಿದ್ದು ಅವ್ವ ಬಳಿ ಹಾಕ್ಕೊಳ್ಳು ಸ್ವಾತಂತ್ರ್ಯ ಕಳೆದುಕೊಂಡ ಹೆಣ್ಣು ಮಕ್ಕಳ ಮಧ್ಯ ಬೆಳೆದ ನಾನು ಬಳೆ ತೊಟ್ಟೂ ಬರೆಯುವ ಸ್ವಾತಂತ್ರ್ಯ ಕಳೆದುಕೊಳ್ಳದೇ ಇರುವುದೇ ಒಂದು ಪವಾಡ.

ಈ ಬೆಳ್ಳಿ ಬಳಿ ಹಾಕ್ಕೊಂಡ ಹಿಂದ ಒಂದೊಂದು ಕತೆ ಅದ... ಅವಳು ಬೆಳ್ಳಿಯಂತವಳು, ಶುಭ್ರ ಅವಳ ಮನೆತನ ಬಳೆ ವ್ಯಾಪಾರದ್ದು... ಚಂದದೊಂದು

ಹೆಸರು ಅವಳಿಗೆ, ಶ್ರೀದೇವಿ! ದೇವತೆಯಂತಹ ಲಕ್ಷಣ ಮುಖದ ಮೇಲೆ, ಮಾತಿನಲ್ಲಿ, ನಡೆ ನುಡಿಯಲ್ಲಿತ್ತು, ಭಿಕಾರಿ ಬದುಕು ಮಡುಗಟ್ಟಿತ್ತು ಮನೆಯಲ್ಲಿ. ಉಡು ಉಣ್ಣಲೂ ತಾಪತ್ರಯ. ಕತ್ತಲೆಗೆ ಬೆಳಕ ಬತ್ತಿ ಹಸಿ ಮಾಡಲೂ ಹನಿ ಎಣ್ಣೆ ಇಲ್ಲ. ಅವಳು ನಾಲ್ಕು ತಿಂಗಳ ತಾಯಿಯಾಗುವಾಗಲೇ ಗಂಡ ಯಮ ಲೋಕ ಸೇರಿದ್ದ.

ಉಡಿಯಲ್ಲಿ ಚೋಟುದ್ದ ಮಗ, ಬಗಲಲ್ಲಿ ಬಳಿ ಮಲಾರ ಚೀಲ. ಕತ್ತಲಾಗೊಂದು ಹಾಳು ಬಿದ್ದ ಮನಿ, ಬಿದ್ದ ಕಲ್ಲು ಎತ್ತಿಡಲೂ ಆಗದ ಅಶಕ್ತ ಪರಿಸ್ಥಿತಿ. ಅವಳ ಸಹನೆ ಮೆಚ್ಚಬೇಕಾದ್ದೇ.

ಒಂದು ಉದ್ದನೆಯ ಕಟ್ಟಿಗೆ ಶೆಲ್ಫ್, ಅಲ್ಲಿ ನೂರಾರು ಜೊತೆಯಿಲ್ಲದ ಇಷ್ಟೊಡು ಬಳೆಗಳು. ಒಂದೇ ತಾಯಿ ಹೊಟ್ಟೆಯಲ್ಲಿ ಹುಟ್ಟಿದ ನಾಲ್ಕು ಮಕ್ಕಳು ಒಂದು ಕಡೆ ಇರುವುದಿಲ್ಲವಂತೆ. ಬೆಳೆದಂತೆ ದೇಹಾನೂ ಮನಸ್ಸೂ ದೂರ ದೂರ, ಒಂದಕ್ಕೆ ನಾಲ್ಕು ಒಲೆ. ಹಾಗೇ ಈ ಬಳೆಗಳು ಒಂದೇ ಕಡೆ ಸಿಗುತ್ತಿದ್ದಿಲ್ಲ. ರಾತ್ರಿ ಕಣ್ಣಿಗೆ ದೀಪ ಹಚ್ಚಿ ಹುಡುಕಿ ಒಂದೇ ಬಣ್ಣದ ಬಳೆ ಆರಿಸಿ ಚುಕ್ಕಿ ಬೇರೆಯಾದರೂ ಆಕಾಶದ ಬಣ್ಣ ಒಂದೇ ಅಲ್ಲವೆ? ಹಾಗೇ ಬಳೆ ೩-೪ ಸೇರಿಸಿ ಚಂದಕ್ಕೆ ಜೋಡಿಸಿಡುತ್ತಿದ್ದಳು ಶ್ರೀದೇವಮ್ಮ. ಬಂದವರಿಗೆ ಆ ಬಳೆಗಳನ್ನೇ ಚಂದದ ಮಾತಾಡಿ ತೊಡಿಸುತ್ತಿದ್ದಳು. ಅವರು ಕೊಟ್ಟ ಒಂದು ಎರಡು ರೂಪಾಯಿಗೆ ಅಕ್ಕಿ ತಂದು ಅನ್ನ ಮಾಡಿಟ್ಟು ಮಗನ ಬಾಯಿಗೆ ತುತ್ತಿಟ್ಟು ತಾನು ತಿನ್ನುವುದರೊಳಗೆ ಕಣ್ಣೀರು ತುಟಿಕಚ್ಚುತ್ತಿತ್ತು. ನನ್ನ ಪಾಲಿನ ಬಳೆ ಸಿಂಡ್ರೆಲಾ ಅವಳು.. ಸಿಂಡ್ರಾಲಾಗೆ ಒಮ್ಮೆಯಾದರೂ ರಾಣಿ ಪೋಷಾಕು ಹಾಕಿಕೊಳ್ಳುಟ್ಟ ಭಾಗ್ಯ ಕನಸಲ್ಲೋ, ಖರೇ ಜೀವನದಲ್ಲೂ ಬಂತು. ಆದರೆ ಈ ನಮ್ಮ ಬಳೇ ಸಿಂಡ್ರೆಲಾಗೆ ಆ ಭಾಗ್ಯವೇ ಲಭ್ಯವಾಗಲಿಲ್ಲ. ಬಳೆ ಚೂರಂತೆ ಚೂರು ಚೂರಾಯಿತು ಬದುಕು. ಒಂದು ಕಡೆ ಕೂಡಿಸುವುದರೊಳಗೆ ಇನ್ನೊಂದು ಕಡೆ ಸೀಳಿರುತ್ತಿತ್ತು.

ಸೇವೆ ಮಾಡದೇ ಅಜ್ಜಿಯ ಬಂಗಾರದ ಬಳೆ ಮಾತ್ರ ತೊಟ್ಟಾಗ ಅಪರಾಧಿ ಪ್ರಜ್ಞೆ ಕಾಡಿದೆ. 'ನಷ್ಟವಾಗಿ ಬದುಕುವುದು ಕಷ್ಟ, ಸಾಯುವುದು ಇಷ್ಟ' ಎಂದ ಶಿಷ್ಯನಿಗೆ ತನ್ನ ಬಂಗಾರದ ಬಳೆ ಬಿಚ್ಚಿಸಿ ಕೊಡಿಸಿದ ಬಂಗಾರದಂತ ಮಾವನ ಬಗ್ಗೆ ಆಕೆಗೆ ಹೆಮ್ಮೆಯಿದೆ. ಆಡುವಾಗ ಗೆಳತಿಯ ಬಳೆ ಒಡೆದೆನೆಂದು ಕೆನ್ನೆಗೆ ಬಾರಿಸಿದ ಗುರುಗಳ ಹೊಡೆತದ ಪೆಟ್ಟು ಮಾಸದೆ ಮನಸ್ಸಲ್ಲಿದೆ. ನಾಲ್ಕು ಬಳೆ ಮಾರಿಯೂ ನಾಲ್ಕು ತುತ್ತಿಗೆ ಒದ್ದಾಡಿದ ಶ್ರೀದೇವಮ್ಮನ ಬದುಕು ಮರುಕ ಹುಟ್ಟಿಸಿದೆ.

ಬಳೆಯ ಜಾತ್ರೆ ಎಷ್ಟೊಂದು ಉದ್ದ. ಹಿಗ್ಗಿಸಿದಷ್ಟೂ ಹಿಗ್ಗುವ ಪ್ಲಾಸ್ಟಿಕ್‌ನ ಸುತ್ತುವ ಬಳೆಯಂತೆ. ಮೊದಲೆಲ್ಲ ಗಾಜಿನ ಬಳೆಯ ಚೂರೊಳಗೆ ಕೂದಲು ಪೋಣಿಸಿದ್ದಿದೆ. ಅಂತ ಬಳೆಗಳು ಈಗೆಲ್ಲಿ?

ಗೇಣು ಹೊಟ್ಟೆ ಹೊರೆದುಕೊಳ್ಳಲು ದೊಂಬರ ಹೆಣ್ಣು ಮಗಳು ತನ್ನ ಧಡೂತಿ ದೇಹವನ್ನು ಹಿಡಿಯಷ್ಟು ಮಾಡಿ-ಕೈ ಮಣಿಸಿ ಕಾಲು ಕುಗ್ಗಿಸಿ ಬೆನ್ನು ತೂರಿಸಿ ಮಧ್ಯೆ

ಎಳೆದು ಗರಗರ ಸುತ್ತಿ ಆ ಸೊಂಟದಗಲದ ಬಳೆಯಲ್ಲಿ ಎಂಟು ಸೊಂಟಗಳನ್ನು ತೂರಿಸಿ ಊಟಕ್ಕೊಂದು ಆಟ ತೋರಿಸಿದರೂ ಎಂಟಾಣೆ ಸಿಗದಿದ್ದಾಗ ಹೊಟ್ಟೆ ಹಸಿದು ಬಳೆ ಚೂರು ಪುಡಿ ತಿಂದು ಸತ್ತದ್ದು. ಹಣ ಕೂಡಿಸುವ ಆಟದಲಿ ಹೆಣವಾಗಿದ್ದು ಯಾಕೆಂದು ಈಗಲೂ ತಿಳಿಯುತ್ತಿಲ್ಲ.

ಎಲ್ಲದಕ್ಕೂ ಕೊನೆಯಿದೆ, ಬಳೆಯ ಮಾತಿಗೂ, ಭೂಮಿಗೂ ಬಾನಿಗೂ ಅವನಿಗೂ... ಸಪ್ತಪದಿ ತುಳಿದು ಕೊನೆತನಕ ಬಳೆಯ ಕೈಹಿಡಿದು ನಡೆಸುವೆ ಎಂದವನು ಮಾತು ತಪ್ಪಿದ್ದ. ಆತನದು ದೈತ್ಯ ಹೆಜ್ಜೆ, ಬಯಲ ಕಡೆ. ನನ್ನದು ಭೂಮಿಯೆಡೆ. ಮುಗಿಲು ಸೇರಿದವನ ಹಿಡಿಯಲು ಮುಗಿಲೇರುವ ಏಣಿ ಎಲ್ಲಿಂದ ತರಲಿ, ಎಷ್ಟೋ ಎದೆಯ ಮಾತು ಎದೆಯಲ್ಲೇ ಉಳಿದವು, ಬಾಯಿಲ್ಲದ ಬಳೆಯ ಮಾತುಗಳು ಕೂಡ. ಅವನು ಕೊಟ್ಟ ಮೊದಲ ಬಳುವಳಿಯೇ ಬಳೆಗಳು. ಬಳೆಗಳೆಂದರೆ ಇವಳಿಗೆ ಇಷ್ಟವೆಂದು ಅವನಿಗೂ ಗೊತ್ತಿತ್ತು. ದೇವರಿಗೆ ಇಷ್ಟವಾದದ್ದನ್ನು ಹರಕೆ ಹೊತ್ತವರು ಬಿಡುತ್ತಾರೆ. ಯಾಕೋ ಮುಗಿಲಿಗೂ ಮಿಗೆಯಾಗಿ ಸಿಗದವನ ನೆನಪಿಗೆ ಬಿಡಬೇಕೆನಿಸಿತು ಆ ಕ್ಷಣಕ್ಕೆ ಅವನು ಇನ್ನೂ ನನ್ನ ಕಣ್ಣ ಮುಂದಿದ್ದ. ಮೆತ್ತನೆಯ ಹಾಸಿಗೆಯ ಮೇಲೆ ಮಲಗುತ್ತಿದ್ದವನು ಕಟ್ಟಿಗೆ ಕುಳ್ಳಿನ ಬೆಂಕಿ ಮೇಲೆ ಮಲಗಿದ್ದ. ಅವನು ನೋಡುತ್ತಿದ್ದನೋ ಏನೋ ಗೊತ್ತಿಲ್ಲ. ನಾ ಮಾತ್ರ ನೋಡುತ್ತಿದ್ದೆ. ಕೊನೆ ಕ್ಷಣಕ್ಕೆ ಏನಾದರೂ ಕೊಡಬೇಕೆನಿಸಿತು. ಕೊಡಲು ನನ್ನ ಬಳಿ ಏನೂ ಇರಲಿಲ್ಲ. ಆಗಲೇ ಬಂಗಾರದ ಬಳೆ ಕಳ್ಳರ ಪಾಲಾಗಿದ್ದವು. ಜೊತೆಗೆ ಇವನೂ ಸಿಗದಂತೆ ಕಳೆದು ಹೋಗಿದ್ದ. ಕೈಯಲ್ಲಿ ಎರಡು ಗಾಜಿನ ಬಳೆಗಳಿದ್ದವು. ಅವುಗಳನ್ನೇ ಬಿಟ್ಟು ಕೊಟ್ಟೆ, ಬಳೆ ತಂದವ ಅಳಿದ ಮೇಲೆ ಗಾಜಿನ ಬಳೆ ತೊಡುವ ಆಸೆಯೂ ಅಳಿಯಿತು. ಅಂಗಡಿಗೆ ಬಂದ ಹೊಸ ಬಳೆಗಳು ನನ್ನ ಬಳಿ ಇರಬೇಕೆಂಬ ಆಸೆ ಅದೆಷ್ಟಿತ್ತು. ನವಿಲೂರಿಗೆ ಬಳೆ ಸುದ್ದಿ ಮುಟ್ಟಿಸಿದ ಬಳೆಗಾರ ಮುಗಿಲೂರಿಗೆ ಬಳೆ ಸುದ್ದಿ ಮುಟ್ಟಿಸಲಾರನೆಂಬ ಸತ್ಯ ಗೊತ್ತಿತ್ತು.

ಜಡ ಬಳೆಗೆ ಹೃದಯವಿಲ್ಲ ಅನಿಸಿಲ್ಲ. ಅವನ ಹೃದಯದ ಮಿಡಿತವಾಗಿ ಅಂವ ತಂದ ಬಳೆಗಳ ಮಾಸದ ಸದ್ದು ನನ್ನೆದೆಯೊಳಗಿದೆ. ಆ ಬಳೆಯ ನಿನಾದ ಯಾರಿಗೂ ಕೇಳಿಸದು. ಬೀಳುವ ಕಂಬನಿಯಲ್ಲೂ ಆ ಬಳೆ ತಂದವನದೇ ಪ್ರತಿಬಿಂಬ... ಮರೆಯೆಂದರೆ ಹೇಗೆ ಮರೆಯಲಿ ಬಳೆಯ ನಿನಾದ!

**(ಪ್ರಜಾವಾಣಿ, ಭೂಮಿಕಾ, ೨೭, ಫೆಬ್ರವರಿ ೨೦೧೬)**

## ೧೮. ಹುಳಿ ಹುಳಿ ನೆನಪುಗಳು....

**ವಿಜಯ ಶ್ರೀಧರ್**

"ಅಮ್ಮಾ, ಸಾರಿಗೆ ನಿಂಬೆ ಹುಳಿ ಹಾಕಲೋ, ಹುಳಸೇ ರಸ ಹಾಕಲೋ...?? ಮಗಳು ಕೇಳುತ್ತಿದ್ದಾಳೆ... 'ಸಾರಿಗೆ ಲಿಂಬೆ ಹುಳಿಯೇ ಸರಿ' ಎಂದು ಹೇಳುತ್ತಿದ್ದಂತೆ ಇಂದು ಮನಸ್ಸು 'ಹುಳಿ'ಯ ಹಿಂದೆಯೇ ಓಡುತ್ತಿದೆ. ಈ ಮನೋವ್ಯಾಪಾರವೇ ವಿಚಿತ್ರ ನಾಲ್ಕು ದಶಕಗಳ ಹಿಂದೆ ಮದುವೆಯಾಗಿ, ಅಡಿಗೆ ಮನೆಯ ದೀಕ್ಷೆ ಪಡೆದಾಗಿನಿಂದ 'ಹುಳಿ'ಯನ್ನು ಎಷ್ಟು ಬಾರಿ (ದಿನವೂ!) ಉಪಯೋಗಿಸಿಲ್ಲ? ಆದರೆ ಇಂದೇಕೋ ಮನಸ್ಸು ಎಲ್ಲಾ 'ಹುಳಿ'ನೆನಪುಗಳ ಹಿಂದೆ ಹಾರಿ ಹೋಗುತ್ತಿದೆ.

ಮಲೆನಾಡಿನ ಅಡಿಗೆ ಮನೆಯಲ್ಲಿ ಎಷ್ಟೊಂದು ಹುಳಿ ನೆನಪುಗಳು ಅಡಗಿವೆ ಗೊತ್ತಾ? ಹೂವಳ್ಳಿಯ ಅಜ್ಜನ ಮನೆಯ ಮಳೆಗಾಲದ ಆರ್ಭಟ ಕೇಳಬೇಕೇ? ಅದು ಈಗಿನ ಮಳೆಗಾಲವಲ್ಲ, ಅರ್ಧ ಶತಮಾನದ ಹಿಂದಿನ ಮಳೆಗಾಲ!! ಹಳ್ಳಿಯಲ್ಲಿ ಎಲ್ಲರಿಗೂ ಚಳಿ ಜ್ವರ, ಆಗ ಅಜ್ಜ ಮುರಗಲ ಹುಳಿ ಸಾರು ಮಾಡಿ ಮೊಮ್ಮಕ್ಕಳಿಗೆ, ಮುತ್ತಜ್ಜಿಗೆ, ಆಳು ಕಾಳುಗಳಿಗೆ ನೀಡುತ್ತಿದ್ದಳು. ಆಹಾ! ಆ ಚಳಿಗೆ ಈ ಹುಳಿ ಸಾರು ಎಷ್ಟು ರುಚಿ! ಚಳಿ ಜ್ವರ ಹೆದರಿ ಓಡಿ ಹೋಗುತ್ತಿತ್ತು. ಮುರಗಲ ಹುಳಿ ಅಂದರೆ ಗೊತ್ತು ತಾನೆ? ಅಡವಿಯಲ್ಲಿ, ಬೆಟ್ಟಗಳಲ್ಲಿ ಬೆಳೆಯುವ ಗಿಡ ಮುರುಗಲ. ಪುಟ್ಟ-ಪುಟ್ಟ ಹಸಿರು-ಎಳೆಗೆಂಪು ಎಲೆಗಳಿಂದ ತುಂಬಿದ ಪುಟ್ಟ ಮರ. ಮೊದಲು ಲಿಂಬೆ ಹಣ್ಣಿನ ಆಕಾರದ ಹಸಿರು ಕಾಯಿಗಳನ್ನು ಬಿಡುತ್ತವೆ. ಹಣ್ಣಾದಾಗ ಕಡು-ಕೆಂಪು ಹಣ್ಣು! ಒಡೆದರೆ ಒಳಗೆ ಬಿಳಿ ತಿರುಳಿನ ಸಿಹಿ ಬೀಜ. ಪುಟ್ಟ ಮಕ್ಕಳಿಗೆ ಅದನ್ನು ಚೀಪಿ ಒಗೆಯುವುದೇ ಖುಷಿ. ಆದರೆ ಅಡಿಗೆ ಮನೆಯಲ್ಲಿ ಉಪಯೋಗಕ್ಕೆ ಬರುವುದು ಬೀಜವಲ್ಲ, ಕೆಂಪು ಸಿಪ್ಪೆ, ಸುಗ್ಗಿಯ ಕಾಲದಲ್ಲಿ ಹಣ್ಣುಗಳನ್ನು ಒಡೆದು ಸಿಪ್ಪೆಗೆ ಉಪ್ಪು ಸೇರಿಸಿ ಬಿಸಿಲಲ್ಲಿ ಒಣಗಿಸುತ್ತಾರೆ. ಹದಿನೈದು ದಿನಗಳು ಬಿಸಿಲಿಗೆ ಬಾಡಿದ ಉಪ್ಪಾದ ಹುಳಿ ಸಿಪ್ಪೆಗಳನ್ನು ಜಾಡಿಗಳಲ್ಲಿ ತುಂಬಿಟ್ಟರೆ ವರ್ಷಗಟ್ಟಳೆ ಹಾಳಾಗುವುದಿಲ್ಲ. ಮೆಣಸಿನ ಕಾಳಿನ ಪುಡಿ, ಬೆಲ್ಲ ಸೇರಿಸಿ ಮಾಡಿದ ಈ ಮುರುಗಲ ಹುಳಿ ಸಾರು ಚಳಿ ಓಡಿಸಲು ಬ್ರಹ್ಮಾಸ್ತ್ರ, ಈಗ ಆಧುನಿಕ ಭೋಜನ ಕ್ರಮದಲ್ಲೂ "ಕೋಕಂ ಸೂಪ್" ಹೆಸರಿನಲ್ಲಿ ಈ ಮುರುಗಲ ಸಾರು ಬಳಕೆಯಾಗುತ್ತಿದೆ.

ಅಜೀರ್ಣದಿಂದ ಬಾಯಿರುಚಿ ಕೆಟ್ಟಿದೆಯಾ? ಅಜ್ಜಿಯ ಬಳಿ ಅದಕ್ಕೂ ಹುಳಿ ಔಷಧಿ ಇದೆ. ಅದೇ ವಾಟೆ ಹುಳಿ ಸಾರು, ಹಾಗೆಂದರೇನು ಎನ್ನುತ್ತೀರಾ? ಮಲೆನಾಡಿನ ಕಾಡಿನಲ್ಲಿ ದೊಡ್ಡ ದೊಡ್ಡ ಮರಗಳಲ್ಲಿ ಬಿಡುವ ವಾಟೆ ಕಾಯಿಗಳು, ಮೋಸಂಬಿ ಅಷ್ಟು ದೊಡ್ಡವು. ಬೇಸಿಗೆಯಲ್ಲಿ ಈ ವಾಟೆ ಕಾಯಿ ತಂದು, ತೆಳುವಾಗಿ ಹೆರೆದು ಉಪ್ಪು ಹಾಕಿ

ಒಣಗಿಸುತ್ತಾರೆ. ಒಣಗಿದ ನಂತರ ಒರಳಿನಲ್ಲಿ ಕುಟ್ಟಿ ಪುಡಿ ಮಾಡಿ ಗಾಜಿನ ಬಾಟ್ಲಿಯಲ್ಲಿ ತುಂಬಿಟ್ಟರೆ ಮುಗೀತು. ಹಾಗಲಕಾಯಿ ಹುಡಿ ಪಲ್ಯ ಮಾಡಬೇಕೇ? ಇದೇ ಪುಡಿ ಹಾಕಿದರೆ ರುಚಿ, ಚಟ್ನಿಪುಡಿ ಮಾಡಬೇಕೆ? ಈ ವಾಟೆ ಪುಡಿ ಸ್ವಲ್ಪ ಸೇರಿಸಬೇಕು.

ಈ ವಾಟೆ ಹುಳಿಯ ಜೊತೆಗಿನ ಒಂದು ಕಹಿ ನೆನಪು ಹಂಚಿಕೊಳ್ಳಲೇಬೇಕು. ಶಿರ್ಶಿ ಪೇಟೆಯ ಮನೆಯಿಂದ ನಾವು ಶಾಲೆಗೆ ಹೋಗಿ ಬರುವಾಗಿನ ಪ್ರಸಂಗ, ರಸ್ತೆಯ ಪಕ್ಕದ ಮನೆಯ ಅಂಗಳದಲ್ಲಿ ಒಮ್ಮೆ ಈ ವಾಟೆ ಸಿಪ್ಪೆ ಒಣಗಿಸುತ್ತಿದ್ದರು. ನಾವಿಬ್ಬರು ಗೆಳತಿಯರಿಗೆ ಶಾಲೆಯಿಂದ ಬರುವಾಗ ಬಾಯಲ್ಲಿ ಹುಳಿ ನೀರು! ಆ ವಾಟೆ ಸಿಪ್ಪೆ ಕಾಯಲು ಯಾರೂ ಇರುತ್ತಿರಲಿಲ್ಲ. ಇಬ್ಬರಿಗೂ ಕದ್ದು ತಿನ್ನುವ ಬಯಕೆ. ಆದರೆ ಬಾಲ್ಯದಲ್ಲೇ ಪಾಪ-ಪುಣ್ಯದ ವಿಚಾರ ಅಮ್ಮ ಅರೆದು ಕುಡಿಸಿದ್ದರಿಂದ ಕದಿಯುವುದು ಪಾಪ ಎಂದು ಹೆದರಿಕೆ.

ಒಂದು ದಿನ ಏನಾಯ್ತುಂದರೆ, ನಮ್ಮ ತರಗತಿಯ ಕಿಡಿಗೇಡಿ ಗಣೇಶ ನಮ್ಮ ಮುಂದೆ ಹೋಗುತ್ತಿದ್ದ. ಅವನೂ ಪುಟ್ಟ ಹುಡುಗನೇ! ಅವನಿಗೆ ಆಸೆ ತಡೆಯಲಾಗಲಿಲ್ಲ. ಆ ಅಂಗಳಕ್ಕೆ ನುಗ್ಗಿ ಒಂದು ಮುಷ್ಠಿ ವಾಟೆ ಸಿಪ್ಪೆ ಎತ್ತಿಕೊಂಡು ಓಡಿ ಬಂದ. ಅಲ್ಲಿಯವರೆಗೆ ಆ ಮನೆಯ ಅಜ್ಜಿ ಎಲ್ಲಿ ಅಡಗಿ ಕುಳಿತಿತ್ತೋ? ಗಿಡದ ಮರೆಯಿಂದ ಕೋಲು ತೆಗೆದುಕೊಂಡು ಹುಡುಗನಿಗೆ ಹೊಡೆಯಲು ಓಡಿ ಬಂತು. ನನ್ನ ಗೆಳತಿ ನಾನು ಇಬ್ಬರೂ ಈವರೆಗೆ ನಾವು ಅದನ್ನು ಕದಿಯಲು ಸಾಹಸ ಮಾಡದ್ದಕ್ಕೆ ಸಂತೋಷಪಟ್ಟೆವು. ಆದರೂ ಆ ಎಳೆ ವಯಸ್ಸಿಗೆ, ಹುಡುಗ ಕದ್ದದ್ದು ಪಾಪವಲ್ಲ! ಆ ಮುದುಕಿದೇ ತಪ್ಪು ಅಂತ ಅನಿಸುತ್ತಿದ್ದುದು ಸುಳ್ಳಲ್ಲ!!

ಮಲೆನಾಡಿನಲ್ಲಿ ಎಷ್ಟೊಂದು ಬಗೆಯ 'ಹುಳಿ' ಕಾಯಿಗಳು ಇರುತ್ತಿದ್ದವು. ನೆಲ್ಲಿ ಕಾಯಿಯಂತೂ ಸರಿಯೇ ಸರಿ. ಶಾಲೆಯ ಮಕ್ಕಳಿಗೆ ನೆಲ್ಲಿಕಾಯಿ ಅಂದರೆ ಪ್ರಾಣ. ನೆಲ್ಲಿಕಾಯಿಗಾಗಿ ಸ್ನೇಹ-ಜಗಳ-ಹೊಡೆದಾಟ ಎಲ್ಲಾ ನಡೆಯುತ್ತಿದ್ದವು. ವಿರಾಮದ ವೇಳೆಯಲ್ಲಿ ಬಾಯಲ್ಲಿ ಹಾಕಿಕೊಂಡ ನೆಲ್ಲಿಕಾಯಿಯನ್ನು ಉಗುಳಲು ಮನಸ್ಸಾಗದೇ ತರಗತಿಗೆ ಹಾಜರಾಗಿ ಗುರುಗಳಿಂದ ಬೈಯಿಸಿಕೊಳ್ಳುತ್ತಿದ್ದ ಮಕ್ಕಳೆಷ್ಟೋ? ತರಗತಿ ಮುಗಿದ ನಂತರ ಅದೇ ಗುರುಗಳು ಹಳ್ಳಿಯಿಂದ ಬರುವ ಮಕ್ಕಳ ಬಳಿ, “ನನಗೊಂದಿಷ್ಟು ಬೆಟ್ಟದ ನೆಲ್ಲಿಕಾಯಿ ತಂದು ಕೊಡ್ರಪ್ಪಾ! ಉಪ್ಪಿನಕಾಯಿ ಮಾಡಲು ಬೇಕು” ಎನ್ನಬೇಕೆ? ಬೆಟ್ಟದ ನೆಲ್ಲಿಕಾಯಿಗೂ, ಸಮುದ್ರದ ಉಪ್ಪಿಗೂ ಇರುವ ಸಂಬಂಧದ ಕುರಿತು ಶರಣರೇ ಅಚ್ಚರಿಗೊಂಡಿರುವಾಗ ಜನ ಸಾಮಾನ್ಯರ ಮಾತೇನು? ನೆಲ್ಲಿಕಾಯಿ ತಿಂದು ತಣ್ಣೀರು ಕುಡಿದಾಗ ಅದು ಅಮೃತದಷ್ಟು (ಹಾಗೆಂದರೆ ಎಷ್ಟು ಅಂತ ನನಗೂ ಗೊತ್ತಿಲ್ಲ) ಸಿಹಿ! ಎನಿಸುತ್ತದೆ ಎಂದು ಮೊದಲ ಬಾರಿ

ಗೊತ್ತಾದಾಗ ಅದೆಷ್ಟು ಅಚ್ಚರಿ. ಬೇರೆ ಯಾವ ಹುಳಿ ಹಣ್ಣು, ಕಾಯಿ ತಿಂದು ನೀರು ಕುಡಿದರೂ ಹೀಗಾಗುವುದಿಲ್ಲ. ಪ್ರಕೃತಿ ಎಂಥ ರಹಸ್ಯದ ಹೆಣ್ಣು! ನೆಲ್ಲಿಕಾಯಿ ಗುಳಂಬ, ನೆಲ್ಲಿ ಅಡಿಕೆ, ನೆಲ್ಲಿ ಉಪ್ಪಿನಕಾಯಿ, ನೆಲ್ಲಿ



ಜ್ಯೂಸ್, ನೆಲ್ಲಿ ಎಣ್ಣೆ (ಆಮಲಕ ಅಂದರೆ ಹೆಚ್ಚು ಗೌರವ!). ಅಳಲೇ ಕಾಯಿ ಪಂಡಿತರಿಗಂತೂ ನೆಲ್ಲಿಕಾಯಿ ಇಲ್ಲದೇ ಚೂರ್ಣ ಮಾಡಲು ಎಷ್ಟು ಕಷ್ಟ !

ಹುಳಿ ಕಂಚಿಯ ರುಚಿ ಸಾಗರದ ಗಂಡನ ಮನೆ ಸೇರಿದ ಮೇಲೆ ಗೊತ್ತಾದದ್ದು. ಗಂಡನ ಮನೆಯ ನೂರಾರು ಕಹಿ-ಸಿಹಿ-ಹುಳಿ ಅನುಭವಗಳಲ್ಲಿ ಕಂಚಿಕಾಯಿಗೂ ಸ್ಥಾನವಿದೆ. ಶ್ರಾದ್ಧದ ದಿನ ಮಾಡುವ ಹುಳಿ ಕಂಚಿಕಾಯಿ ಉಪ್ಪಿನಕಾಯಿ ತುಂಬ ಸಿಹಿ!

ಶಾಲೆಗೆ ಹೋಗುವಾಗ ಕನ್ನಡ ಪಂಡಿತರೊಮ್ಮೆ ಹುಳಿ ಇರುವ ಕಾಯಿಗಳ ಪಟ್ಟಿ ಮಾಡಿ ಎಂಬ ಪ್ರಶ್ನೆ ಹಾಕಿದಾಗ ಪ್ರಥಮ ಬಹುಮಾನ ನನಗೇ ಬಂದಿತ್ತು. ಲಿಂಬೆ, ಹುಳಸೇಹಣ್ಣು... ಅಂತ ಒಂದೆರಡು ಬರೆದು ಸಹಪಾಠಿಗಳು ಸೋತಿದ್ದರು. ನಾನು ಲಿಂಬೆ, ಹುಳಸೇ, ಕಂಚಿ, ನೆಲ್ಲಿ, ಕಿರುನೆಲ್ಲಿ, ಅಮಟೆ, ಮಾದಲ, ಬಿಂಬಳ, ಕರಮದಲು, ಮುರುಗಲ, ವಾಟೆ ಮುಂತಾಗಿ ಬರೆದು ಮತ್ತೂ ಸೇರಿಸಿದ್ದೆ. ಕಿತ್ತಳೆ, ಮೋಸಂಬಿ... ಮಾವು ಕಾಯಿ ಇದ್ದಾಗ ಹುಳಿ ಇರುತ್ತದೆ. ಹಣ್ಣಾದ ಮೇಲೆ ಸಿಹಿ ಅಂತ. ಪಂಡಿತರ ಸಂತೋಷಕ್ಕೆ ಮಿತಿ ಇರಲಿಲ್ಲ. ನನ್ನನ್ನು ಹೊಗಳಿದ್ದೇ ಹೊಗಳಿದ್ದು, ಜೊತೆಗೆ ಪಂಡಿತರೇ ಕಲಿಸಿದ್ದು ಈಳೆ ಅಂದರೆ ಕಿತ್ತಳೆ ಅಂತ. ನಾನೂ ಜಂಭದಿಂದ ಬೀಗಿದ್ದೆ. ಆದರೆ ತರಗತಿ ಬಿಟ್ಟಿದ್ದೇ ತರಗತಿಯ ಕೊಂಕಣಿ ಹುಡುಗರು 'ತೆಕ್ಕ ಮಸ್ತ್ ಆಮಸಣಿ' ಅಂತ ರೇಗಿಸಿದ್ದರು. ಅಂದರೆ, “ಅವಳಿಗೆ ಜಾಸ್ತಿ ಹುಳಸೇ ಹಣ್ಣು” ಅಂತ ಅರ್ಥ. ಒಂದು ಕಡೆ ಸಿಟ್ಟು ಬಂದಿತ್ತು. ಜೊತೆಗೆ 'ಹುಳಿ'ಯನ್ನು ಹೀಗೂ ಬಳಸಬಹುದು ಅಂತ ತಿಳಿದಿತ್ತು.

ಕಾಲಚಕ್ರ ಉರುಳಿತ್ತು. ಹೈಸ್ಕೂಲ್, ಕಾಲೇಜು, ಮದುವೆ, ಸಂಸಾರ ಅಂತ ನಾನಾ ಅನುಭವಗಳು. ಮನಸ್ಸು ಹೆಚ್ಚೆಚ್ಚು ಅಂತರ್ಮುಖಿಯಾದಂತೆ ಸಣ್ಣ ಸಣ್ಣ ಅನುಭವಗಳಿಗೂ ಹೆಚ್ಚು ಅರ್ಥ, ಆಯಾಮ ಗೋಚರಿಸತೊಡಗಿತ್ತು. ಒಂದಷ್ಟು ಕಾಲ ಕಿತ್ತಳೆ, ಮೋಸಂಬಿ, ಮಾವಿನಕಾಯಿ ಕಾಯಾದಾಗ ಹುಳಿ ಇದ್ದು, ಮಾಗಿದಾಗ ಸಿಹಿಯಾಗುವ ಚೋದ್ಯ ಮನಸ್ಸನ್ನು ತುಂಬಿತ್ತು. ವರ್ಷಗಳು ಉರುಳಿದಂತೆ ಎಂದಿಗೂ ಹುಳಿ ಬಿಡದ (ಹುಳಸೆ ಮುಪ್ಪಾದರೂ ಹುಳಿ ಮುಪ್ಪೆ?) ಕಂಚಿ, ಲಿಂಬೆ, ಆಮಟೆ, ವಾಟೆ ಮುಂತಾದ ಕಾಯಿಗಳ ಬಗೆಗೂ ಅಚ್ಚರಿ ಮೂಡಿತ್ತು. ಈ ಗಿಡ ಮರಗಳಿಗೆ ಹುಳಿ ನೀರು

ಹಾಕಿದವರು ಯಾರು ಎಂಬ ಕೌತುಕ ಮನಸ್ಸನ್ನು ಆವರಿಸಿತ್ತು. “ಈಳೆ, ಲಿಂಬೆ, ಮಾವು ಮಾದಲಕ್ಕೆ ಹುಳಿ ನೀರೆರದವರಾರಯ್ಯಾ” ಎಂಬ ಅಕ್ಕನ ವಚನ ಕಿವಿಯಲ್ಲಿ ಝೇಂಕರಿಸಿತ್ತು. ಸಿಹಿಯೋ ಕಹಿಯೋ ಹುಳಿಯೋ ಒಗರೋ... ಎಲ್ಲವೂ ಒಂದೊಂದು ಅನುಭವ. ಎಲ್ಲ ಅನುಭವವನ್ನೂ ಆಸ್ವಾದಿಸಿದಾಗಲೇ ಜೀವನಕ್ಕೊಂದು ಅರ್ಥವಲ್ಲವೇ? ಎಂದು ಪ್ರಕೃತಿಯ ನಿಗೂಢ ಶಕ್ತಿಗೆ ಮನಸ್ಸು ತಲೆ ಬಾಗುತ್ತದೆ.

**(೧೭ ಜುಲೈ ೨೦೦೯, ಸಾಪ್ತಾಹಿಕ ಸೌರಭ, ಸಂಯುಕ್ತ ಕರ್ನಾಟಕ)**

## ೨೯. ಭಾವಚಿತ್ರಗಳ ಭಾವನಾ ಲೋಕದಲ್ಲಿ...

### ಸ್ಮಿತಾ ಅಮೃತರಾಜ್

ಹಿಂದಿನ ಕಾಲದ ಮನೆಗಳಿಗೆ ನಾವೆಲ್ಲಾ ಭೇಟಿ ಕೊಟ್ಟೆವೆಂದರೆ, ಹಜಾರಕ್ಕೆ ಹೊಕ್ಕ ತಕ್ಷಣ ಪಡಸಾಲೆಯಲ್ಲಿ ಅರೆಗಳಿಗೆ ಕುಳಿತ ಶಾಸ್ತ್ರ ಮುಗಿಸಿ, ಆಳೆತ್ತರದ ಗೋಡೆಯುದ್ದಕ್ಕೂ ಕಟ್ಟು ಹಾಕಿದ ಭಾವ ಚಿತ್ರಗಳನ್ನು ಗಮನಿಸುತ್ತಾ ನಿಂತು ಬಿಡುತ್ತೇವೆ. ಇಲ್ಲವೇ ಅದುವೇ ನಮ್ಮನ್ನು ಗಮನಿಸುವಂತೆ ಮಾಡುತ್ತದೆ. ಸಾಮಾನ್ಯವಾಗಿ ಗತಿಸಿ ಹೋದ ಹಿರಿಯ ತಲೆಗಳ ದೊಡ್ಡ ದೊಡ್ಡ ಭಾವ ಚಿತ್ರಗಳನ್ನು ಕಟ್ಟು ಹಾಕಿ ಅದಕ್ಕೆ ಗಂಧದ ಹಾರ ಹಾಕಿ ಗೋಡೆಯ ಮೇಲೆ ಮೊಳೆ ನೆಟ್ಟು ಅದರ ಮೇಲೆ ನೇತು ಹಾಕಿಟ್ಟು ಬಿಡುತ್ತಿದ್ದರು. ಆ ಫೋಟೋಗಳನ್ನು ನೋಡು ನೋಡುತ್ತಲೇ ಆ ಭಾವಚಿತ್ರದೊಳಗೆ ಹುದುಗಿಕೊಂಡ ಅಜ್ಜನ ಪೊದೆಮೀಸೆ, ಅಗಲವಾದ ಹಣೆಯೊಳಗೆ ಪಡಿಮೂಡಿದ ನಿರಿಗೆಯೊಳಗೆ ಅವರ ಗತ್ತು, ಗಾಂಭೀರ ಎಲ್ಲವನ್ನೂ ಮನಸು ಲೆಕ್ಕಾಚಾರ ಹಾಕಿಕೊಂಡೇ ಕುಳಿತು ಬಿಡುತ್ತಿತ್ತು. ಅಲ್ಲೇ ಎಡಪಕ್ಕದಲ್ಲಿ ಕಟ್ಟು ಹಾಕಿಸಿದ ಅಜ್ಜಿಯ ಸೌಮ್ಯ ಮುಖ. ಅಜ್ಜ ಅಜ್ಜಿಯ ಬದುಕಿನ ಕತೆಗಳನ್ನು ಯಾರೂ ಹೇಳದೆಯೂ ನಮ್ಮ ಮುಂದೆ ಆ ಚಿತ್ರಗಳು ಅನೇಕ ಚಿತ್ರಣಗಳನ್ನು ಕಟ್ಟಿಕೊಡುತ್ತಾ ಹೋಗುತ್ತಿದ್ದವು. ಇನ್ನು ಆ ಪಟದ ಎದುರಿನ ಗೋಡೆಯಲ್ಲಿ, ಆ ಮನೆಯ ದಂಪತಿಗಳ ಮದುವೆಯ ಸಂದರ್ಭದ ಫೋಟೋ, ಮತ್ತೆ ಆ ಮನೆಗೆ ಬಂದ ಪುಟ್ಟ ಕಂದನ ಹೊಟ್ಟೆ ಮಗುಚಿ ತೆವಳಲು ಶುರು ಮಾಡಿದಾಗಿನ ಪೋಟೋ, ಇನ್ನು ಅಪರೂಪಕ್ಕೆಂಬಂತೆ ಆ ಮನೆಯ ಯಾರೋ ಸಂಬಂಧಿಯೊಬ್ಬರ ತಲೆಗೆ ಟೊಪ್ಪಿ ಇಟ್ಟು, ಕರಿ ಗೌನು ಹಾಕಿ ನಿಂತ ಡಿಗ್ರಿ ಸರ್ಟಿಫಿಕೇಟ್ ತೆಗೆದುಕೊಳ್ಳುವಾಗಿನ ಪೋಟೋ... ಇವಿಷ್ಟೇ ಬೆರಳೆಣಿಕೆಯಷ್ಟು ಇರುತ್ತಿದ್ದ ಕಪ್ಪು ಬಿಳುಪಿನ ಛಾಯಾ ಚಿತ್ರಗಳು ಅನೇಕ ಬೆರಗಿನ ಲೋಕವನ್ನೂ, ಕೊಂಚ ಕುತೂಹಲವನ್ನೂ ನೆಳಲು-ಬೆಳಕಿನಂತೆ ನಮ್ಮ ಮುಂದೆ ತೆರೆದಿಡುತ್ತಾ ಹೋಗುತ್ತಿದ್ದವು. ಹೀಗೆ ಭಾವ ಚಿತ್ರವೆಂಬುದು ಅಂದಿನಿಂದ ಇಂದಿನವರೆಗೂ ಯಾವುದೋ ಒಂದು ಕೌತುಕವನ್ನು, ತಣಿಯದ ಅಚ್ಚರಿಯೊಳಗಿನ ನವಿರು ಭಾವವನ್ನು ಈವರೆಗೂ ಕಾಯ್ದಿಟ್ಟುಕೊಂಡು ಬಂದಿದೆಯೆಂದರೆ ಸುಳ್ಳಲ್ಲ. ತದನಂತರ ಆಲ್ಬಂಗಳು ಮಾರುಕಟ್ಟೆಗೆ ಲಗ್ಗೆಯಿಟ್ಟ

ನಂತರ ಹೆಚ್ಚಿನ ಚಿತ್ರಗಳೆಲ್ಲಾ ಅದರೊಳಗೆ ಅಲಂಕರಿಸಿ ಬಿಡುತ್ತಿದ್ದವು. ಆಗೆಲ್ಲಾ ನೆಂಟರಿಷ್ಟರು ಮನೆಗೆ ಬಂದಾಕ್ಷಣ ಮನೆಯಾಕೆ, ಮನೆಯೊಳಗೆ ಒಳಗಿನ ಕೆಲಸಕ್ಕೆ ಅಡುಗೆಮನೆಗೆ ಸೇರಿಕೊಳ್ಳೋದಿಕ್ಕೆ ಮುಂಚೆ, ಅಥಿತಿಗಳಿಗೆ ಬೇಸರವಾಗದಿರಲೆಂದು ಆಲ್ಬಂನ್ನು ಅವರ ಮುಂದೆ ತೆರೆದಿಟ್ಟು ಹೋಗುತ್ತಿದ್ದಳು. ಬಂದವರಿಗೆ ಇವುಗಳನ್ನೆಲ್ಲಾ ನೋಡಲು ಆಸಕ್ತಿ ಇದೆಯೋ ಇಲ್ಲವೋ ಅದರ ಗೋಜಿಗೆ ಹೋಗದೆ, ಇದು ಔಪಚಾರಿಕತೆಯ ಮತ್ತೊಂದು ಭಾಗವೇನೋ ಎಂಬಂತೆ ಈ ಕೆಲಸವೊಂದು ಯಾಂತ್ರಿಕವಾಗಿ ನಡೆಯುತ್ತಿತ್ತು.



ಇನ್ನು ಇಂತಹ ಬೇಸರ ನೀಗಿಸುವ ಕೆಲಸವನ್ನು, ನೆನಪುಗಳನ್ನು ಮೊಗೆದು ಕೊಡುವ ಸಂಭ್ರಮವನ್ನು, ಕೆಲವೊಮ್ಮೆ ಸಾಕ್ಷ್ಯಗಳಿಗೂ ಪುರಾವೆ ದಕ್ಕಿಸಿ ಕೊಡುವ ಭಾವಚಿತ್ರದ ಜನಕ ಫೋಟೋಗ್ರಾಫರ್ ಎಂಬ ಅಸಾಮಾನ್ಯ ಕಲಾವಿದನಿಗೆ ಸಿಕ್ಕಾಪಟ್ಟೆ ಬೇಡಿಕೆ ಇತ್ತು. ಅವನೊಬ್ಬ ಜನಾದರಣೀಯ ವ್ಯಕ್ತಿಯಾಗಿ ಎಲ್ಲರ ಗೌರವಕ್ಕೆ ಪಾತ್ರನಾಗಿ ಬಿಡುತ್ತಿದ್ದ. ಯಾವಾಗಲಾದರೋ ಒಮ್ಮೆ ಬರುವ ನಾಮಕರಣಕ್ಕೋ, ವೀಳ್ಯ ಶಾಸ್ತ್ರಕ್ಕೋ, ಮದುವೆಗೋ ಅವನ ಹಾಜರಿ ತೀರಾ ಅಗತ್ಯವಿದ್ದುದರಿಂದಲೋ ಏನೋ, ಅವನಿಗೊಂದು ನಮಸ್ಕಾರವಂತೂ ಪುಕ್ಕಟೆ ಸಿಕ್ಕೇ ಸಿಗುತ್ತಿತ್ತು. ನಮ್ಮ ಎಳವೆಯ ಶಾಲಾ ದಿನಗಳಲ್ಲಿ ಏಳನೇ ತರಗತಿಯ ಮಕ್ಕಳಿಗೆ ಮಾತ್ರ ಫೋಟೋ ತೆಗೆಸಿಕೊಳ್ಳುವ ಭಾಗ್ಯ. ನಾವೆಲ್ಲಾ ಪೊಡಿ ಮಕ್ಕಳು, ಏಳನೇ ತರಗತಿಗೆ ಕಾಲಿಡುವವಲ್ಲಿಯವರೆಗೆ ಅವರನ್ನು ಆ ದಿನ ಆಸೆಗಣ್ಣಿನಿಂದ ನೋಡುತ್ತಿದ್ದೆವು. ಅದು ಆಗ ಕಲರ್ ಫೋಟೋಗಳ ಜಮಾನ ಬೇರೆ. ಫೋಟೋ ತೆಗೆಯಲೋಸುಗವೇ ನಾವೆಲ್ಲಾ ರಂಗು ರಂಗಿನ ಕಲರ್ ಬಟ್ಟೆ ಖರೀದಿಸುತ್ತಿದ್ದೆವು. ಅಗತ್ಯಕ್ಕಿಂತ ಹೆಚ್ಚೇ ಮುಖಕ್ಕೆ ಪೌಡರ್ ಬಳಿದುಕೊಂಡು, ಎರಡು ಜಡೆಗೆ ಕೆಂಪು ರಿಬ್ಬನ್ ಬಿಗಿದುಕೊಂಡು, ದೊಡ್ಡ ಡೇಲ್ಯ ಹೂವನ್ನು ಫೋಟೋಕ್ಕೆ ಬೀಳುವಷ್ಟು ಎದುರುಗಡೆ ಸಿಕ್ಕಿಸಿಕೊಂಡು, ಟೀಚರ್ ಬಳಿ ನಿಂತು ಕೊಂಡು ಫೋಟೋ ತೆಗೆಸಿಕೊಳ್ಳೋದಿಕ್ಕೆ ಪೈಪೋಟಿ. ಆದರೆ ಒಂದೇ ಒಂದು ಬಾರಿ ನಮ್ಮನ್ನೆಲ್ಲಾ ನಿಲ್ಲಿಸಿ ಫೋಟೋ ಕ್ಲಿಕ್ಕಿಸುವ ಕಾರಣ ಆಚೆ ಈಚೆ ಯಾರಾದರೂ ಇಬ್ಬರಿಗೆ ಮಾತ್ರ ಟೀಚರ ಬಳಿ ನಿಂತುಕೊಳ್ಳುವ ಪರಮ ಭಾಗ್ಯ. ಅಂತೂ ಇಂತೂ ಮನೆಯವರ ಜೊತೆ ಕಾಡಿ ಬೇಡಿ ಹಣ ಗಿಟ್ಟಿಸಿಕೊಂಡು, ಆ ಭಾವ ಚಿತ್ರ ಕೊಂಡುಕೊಂಡು ಅದನ್ನು ಜತನದಲ್ಲಿರಿಸಿಕೊಳ್ಳುವುದೇ ಒಂದು ಪುಳಕದ ಸಂಗತಿ, ಬೆಳೀತಾ ಹೋದ ಹಾಗೆ ಭಾವ ಚಿತ್ರವೂ ನಮ್ಮ ಬದುಕಿನ ಭಾವದಂತೆ ಅಂಟಿಕೊಂಡೇ ಬರುತ್ತಿರುವುದು ಒಂದು ದೊಡ್ಡವಿಸ್ಮಯ. ಈ ಫೋಟೋದ ಗೀಳು ನಮ್ಮನ್ನೆಲ್ಲಾ ಅದೆಷ್ಟು ಅಮರಿಕೊಂಡು ಬಿಟ್ಟಿತ್ತು ಎಂದರೆ, ನಾವೇ ಗೆಳತಿಯರ ದಂಡು ಕಟ್ಟಿಕೊಂಡು ಸ್ಟುಡಿಯೋಕ್ಕೆ ಹೋಗಿ ಫೋಟೋ ತೆಗೆಸಿಕೊಂಡು ಬರುವಲ್ಲಿಯವರೆಗೆ, ಮುಖ ಹೇಗೇ ಇರಲಿ, ತಮ್ಮ

ತಮ್ಮ ಮುಖವನ್ನು ಪ್ರೀತಿಸದವರು ಯಾರಿದ್ದಾರೆ ಹೇಳಿ? ಫೋಟೋ ತೆಗೆಯುವುದು, ಅದನ್ನು ಎರಡೆರಡು ಬಾರಿ ನಾವೇ ನೋಡಿ ಮೆಚ್ಚುಗೆ ಸೂಚಿಸುವುದು, ನಮ್ಮಷ್ಟು ಪರಮ ಸುಂದರಿಯರು ಮೂಜಗದೊಳಗೆ ಯಾರೂ ಇರಲ್ಲಿಕ್ಕಿಲ್ಲವೆಂಬಂತೆ ನಮಗೆ ನಾವೇ ತಾರೀಫು ಕೊಟ್ಟುಕೊಳ್ಳುವುದು, ಹೀಗೇ ತರಾವರಿ ಮುದಗೊಳಿಸುವ ಸಂಗತಿಗಳು. ಇಂತಿಪ್ಪ ನಮ್ಮ ಲೋಕದಲ್ಲಿ ಫೋಟೋದ ಅಚ್ಚಿಗೆ ಬೀಳುವ ಹುಚ್ಚು ಎಷ್ಟಿತ್ತೆಂದರೆ ಇದಕ್ಕೆ ಯಾರೂ ಹೊರತಾಗಿಲ್ಲವೆಂಬುದು ಬಂದು ಹೋಗುವ ಕತ್ತಲು ಬೆಳಕಿನಷ್ಟೇ ನಿಚ್ಚಳ ಸತ್ಯ. ಯಾವುದೇ ಕಾರ್‍ಯಕ್ರಮ ಆಗಿರಲಿ, ಫೋಟೋಗ್ರಾಫರ್ ಇಲ್ಲದೆ ಕಾರ್‍ಯಕ್ರಮವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಅವನ ಹಾಜರಿ ಅಗತ್ಯವಿತ್ತು. ಫೋಟೋಗ್ರಾಫರ್ ಸಿಗಲಿಲ್ಲವೆಂದು ಕಾರ್‍ಯಕ್ರಮ ಮುಂದೂಡಿದ ಪ್ರಸಂಗಗಳೂ ಅದೆಷ್ಟೋ. ಅಂತೂ ಇಂತೂ ಭಾವ ಚಿತ್ರ ಇದ್ದರಷ್ಟೇ ಆ ಕಾರ್‍ಯಕ್ರಮಕ್ಕೆ ಅಪೂರ್ವ ಕಳೆ ಮತ್ತು ಅಮೂಲ್ಯ ಬೆಲೆಯೆಂಬುದು ಆವತ್ತಿಗೂ ಇವತ್ತಿಗೂ ಯಾವ ಕಾಲಕ್ಕೂ ಬಹುಶಃ ಸಲ್ಲುವ ಮಾತು.

ಒಮ್ಮೆ ಹೀಗಾಗಿತ್ತು. ನನ್ನ ಅಣ್ಣನೊಬ್ಬ ಶಾಲೆಗೆ ಹೋಗಲೋಸುಗ ನೆಂಟರಮನೆಯಲ್ಲಿ ಉಳಿದುಕೊಂಡವನಿಗೆ ಸಿಕ್ಕಾಪಟ್ಟೆ ಮನೆಯ ನೆನಪು ಹತ್ತಿ, ಮನೆಗೆ



ಹೋದರೆ ಅಲ್ಲಿಂದ ವಾಪಸು ಕಳಿಸುತ್ತಾರೆಂಬ ಹೆದರಿಕೆಗೆ, ಯಾರಿಗೂ ಹೇಳದೆ ಭಂಡ ಧೈರ್ಯದಿಂದ ಕಣ್ಣು ತಪ್ಪಿಸಿ ನಾನು ಶಾಲೆಗೆ ಹೋಗುತ್ತಿದ್ದ ಅಜ್ಜಿಯ ಮನೆಗೆ ಬಂದು ಬಿಟ್ಟಿದ್ದಾನೆ. ನಮಗೀಗ ರಜೆಯೆಂದು ಹೇಳಿದ ಅವನ ಸುಳ್ಳು ನೆವವನ್ನು ನಿಜವೆಂದೇ ನಂಬಿ ಅವನಿಗೆ ರಾಜೋಪಚಾರ ಮಾಡುತ್ತಿದ್ದೆವು. ಆಗೆಲ್ಲಾ ಫೋನ್‌ಗಳು ತೀರಾ ವಿರಳವಾಗಿದ್ದ ಕಾಲ. ಕಾಣೆಯಾದ ಅಣ್ಣನನ್ನು ಅವರೆಲ್ಲಾ ಹುಡುಕಿ ಹುಡುಕಿ ದು:ಖದಿಂದ ಪೇಪರ್‌ನಲ್ಲಿ ಅವನ ಭಾವಚಿತ್ರ ಹಾಕಿ, ಈ ಮುಖದ ಹುಡುಗನನ್ನು ಕಂಡವರು ದಯವಿಟ್ಟು ತಿಳಿಸಿ ಅಂತ ವರದಿ ಕೊಟ್ಟಿದ್ದಾರೆ. ಇದ್ಯಾವುದರ ಪರಿವೇ ಇಲ್ಲದ ನನ್ನಣ್ಣ ಆರಾಮವಾಗಿ ಒಂದಷ್ಟು ದಿನ ಇದ್ದವನನ್ನು ನನ್ನ ಮಾವ ಬಸ್ಸು ಹತ್ತಿಸಿ ಕಳುಹಿಸಿ ಬರುವಾಗ, ತಂದಿದ್ದ ಸಾಮಾನು ಕಟ್ಟಿದ ಪತ್ರಿಕೆಯಲ್ಲಿ ಅವನ ಫೋಟೊ ಕಂಡು ಗಾಬರಿ ಬಿದ್ದು, ಆಗಲೇ ಬಸ್ಸು ಹತ್ತಿ ಒಂದು ದಿನ ಇಡೀ ಪ್ರಯಾಣ ಮಾಡಿ ಅವನ ಇರುವಿಕೆಯನ್ನು ಸಾಬೀತುಪಡಿಸಿ ಬಂದಿದ್ದಾರೆ. ಈಗ ಅದೇ ಮಗುವಿನಂತ ಮನಸಿನ ಅಣ್ಣ ಅನಾರೋಗ್ಯದ ಕಾರಣ ಅತೀ ಚಿಕ್ಕ ಪ್ರಾಯದಲ್ಲೇ ತೀರಿಕೊಂಡು ಮತ್ತೆ ಭಾವಚಿತ್ರದ ಕಟ್ಟಿನೊಳಗೆ ಮಾಸದ ನಗು ಬೀರುತ್ತಾ ನಿಂತು ಕೊಂಡ. ಅವನನ್ನು ನೋಡುವಾಗಲೆಲ್ಲಾ ಮನಸು ಹನಿಗಣ್ಣಾಗಿ ದು:ಖ ಉಮ್ಮಳಿಸಿ ಬರುತ್ತದೆ. ಇನ್ನು ಅವನನ್ನು ಹುಡುಕುವುದೆಂತು ಅಂತ ಹೃದಯ ಭಾರವಾಗುತ್ತದೆ.

ಈ ಹಿಂದೆ ಕಂಪ್ಯೂಟರ್, ಇಂಟರ್ನೆಟ್‌ನ ಗಂಧ ಗಾಳಿಯೂ ಸೋಕದ ನಮ್ಮೂರಿನಲ್ಲಿ ಮೊದಲು ಮದುವೆಯ ಮಾತುಕತೆ ನಡೆಯುತ್ತಿದ್ದದ್ದು ದಲ್ಲಾಳಿ ತರುವ ಭಾವಚಿತ್ರದ ಮೂಲಕವೇ. ಭಾವಚಿತ್ರ ನೋಡಿ ಪರವಾಗಿಲ್ಲ ಅನ್ನಿಸಿದರೆ ಮತ್ತೆ ಮುಂದಿನ ಮಾತುಕತೆ. ಕೆಲವೊಮ್ಮೆ ಸುಂದರ ಫೋಟೊ ನೋಡಿ ಮರುಳಾಗಿ ನೇರ ಮುಖಾಮುಖಿಯಾದಾಗ ಮನಸು ಹುಳ್ಳಗೆ ಮಾಡಿಕೊಂಡು ಅಲ್ಲಿಗೆ ಇತಿಶ್ರೀ ಹಾಡಿದ ಪ್ರಸಂಗಗಳೂ ಅದೆಷ್ಟೋ. ಹೀಗೆ ಒಪ್ಪಿಗೆಯಾಗದೇ ಇದ್ದ ಪಕ್ಷದಲ್ಲಿ, ಸಂಬಂಧ ಬೆಸೆಯದ ಮೇಲೆ ಭಾವಚಿತ್ರದ ಮೇಲೆ ಯಾತರ ಅನುಬಂಧ ಅಂತ ಭಾವಚಿತ್ರವನ್ನು ವಾಪಸು ಕಡ್ಡಾಯವಾಗಿ ಕಳುಹಿಸಿ ಕೊಡಬೇಕಿತ್ತು. ಆದರೂ ಅಮೋಘವಾಗಿ ಫೋಟೊ ಹೊಡೆದ ಫೋಟೋಗ್ರಾಫರ್‌ನ ಕೈಚಳಕಕ್ಕೆ ಒಂದು ಬಾರಿಯಾದರೂ ನಮೋ ನಮೋ ಎನ್ನಲೇಬೇಕು.

ಬೆಲೆಬಾಳುವಂತಹ ಆ ಭಾವಚಿತ್ರಗಳು ಈಗ ಅಂತ ದುಬಾರಿಯೇನಲ್ಲ. ಜೊತೆಗೆ ಫೋಟೋ ಕ್ಲಿಕ್ಕಿಸುವ ಕೆಲಸ ಈಗ ಅಂತ ತ್ರಾಸದಾಯಕವೂ ಅಲ್ಲ. ಬೇಕು ಬೇಕಾದ ಹಾಗೆ ಬೇಕೆಂದರಲ್ಲಿ ನಮಗೆ ನಾವೇ ಫೋಟೊಗ್ರಾಫರ್‌ಗಳಾಗಬಹುದು. ಸಮಯ ಸಂದರ್ಭ ಬಂದಾಗ ಯಾರ ಜೊತೆಗೂ ಎಗ್ಗಿಲ್ಲದೇ ನಿಂತು ಫೋಟೋ ಹೊಡೆಸಿಕೊಳ್ಳಬಹುದು. ಕ್ಷಣಕ್ಕೊಂದು, ಗಳಿಗೆಗೊಂದು ತೆಗೆದ ಫೋಟೋಗಳನ್ನು ಕಟ್ಟು ಹಾಕಿಸಿಕೊಂಡು ಕುಳಿತರೆ, ನೆಲ, ಗೋಡೆ, ಅಟ್ಟ ಎಲ್ಲೆಂದರಲ್ಲಿ ನಮ್ಮದೇ ಪ್ರತಿರೂಪಗಳ ಹಾವಳಿಯಾಗಬಹುದು. ಮನೆ ತುಂಬಾ ಆಲ್ಬಂಗಳ ಕಟ್ಟೆ ಮೇಲೇರಿ ನಿಲ್ಲಬಹುದು. ಇಷ್ಟೆಲ್ಲಾ ಸಂಗತಿಗಳಿಗೆ ಯಾರೂ ತಲೆಕೆಡಿಸಿಕೊಳ್ಳದೆ, ನಮ್ಮನ್ನು ನಾವು ಪ್ರತೀ ಬಾರಿ ಹೊಸತೆಂಬಂತೆ ಸಿಂಗರಿಸಿಕೊಂಡು, ವಾಟ್ಸ್ ಅಪ್, ಫೇಸ್ಬುಕ್, ಪ್ರೊಫೈಲ್ ಗೋಡೆಗಳಿಗೆ ಮೊಳೆ ಹೊಡೆಯದೆ ಗಳಿಗೆಗೊಂದರಂತೆ ಫೋಟೋ ತೂಗಿಸುತ್ತಾ, ಮತ್ತೆ ಮತ್ತೆ

ಫೋಟೋ ಕ್ಲಿಕ್ಕಿಸುತ್ತಲೇ ಇರುತ್ತೇವೆಂಬುದು ಮಾತ್ರ ಈ ಕ್ಷಣದ ಸತ್ಯ.

ಈಗೀಗ ಭಾವಚಿತ್ರಗಳು ನಮ್ಮ ಭಾವಕೋಶದಿಂದಾಚೆಗೆ ಜಿಗಿದು ಲೋಕಪರ್ಯಟನೆಗೆ ತೊಡಗಿವೆ. ಹುಟ್ಟು ಹಬ್ಬವೆಂದೋ, ಮದುವೆಯಾಗಿ ಇಂತಿಷ್ಟು ವರ್ಷ ಅಂತಲೋ... ನೆವಗಳಿಟ್ಟುಕೊಂಡು, ನಾವು ಈ ಭೂಮಿ ಮೇಲೆ ಇನ್ನೂ ಬದುಕಿದ್ದೇವೆ ಎಂಬ ಅಸ್ತಿತ್ವವನ್ನು ಸಾಬೀತು ಪಡಿಸಲೋಸುಗವೆಂಬಂತೆ ಅದನ್ನು ಪತ್ರಿಕೆಗಳಲ್ಲಿ ಮುದ್ರಿಸುವ ಕಾತುರ. ಇನ್ನು ಮೊದಲ ಪುಟದಲ್ಲಿ ನಮ್ಮ ಫೋಟೋ ಕಂಡರೆ ಇಂತಿಷ್ಟು, ಎರಡನೇ ಪುಟಕ್ಕೆ ಇಂತಿಷ್ಟು, ಕೊನೇ ಪುಟಕ್ಕೆ ಇಂತಿಷ್ಟು ಅಂತ ನಮ್ಮದೇ ಪಟಕ್ಕೆ ನಾವುಗಳೇ ಬೆಲೆ ತೆತ್ತು ನಮ್ಮನ್ನು ನಾವು ಮಾರಿಕೊಳ್ಳುತ್ತಿದ್ದೇವೆಯೋ ಏನೋ. ಅಂತೂ ಯಾರೂ ನೋಡದೆಯೂ, ಯಾರೂ ಓದದೆಯೂ ಮರು ದಿನ ಯಾರು ಯಾರದೋ ಬಚ್ಚಲೊಲೆಯ ಉರಿಯೊಳಗೆ ಉರಿದು ಹೋಗುವ ಪರಿವೆಯೇ ಇಲ್ಲದೆ, ಆದರೂ ಯಾವ ಶಿಫಾರಸ್ಸುಗಳಿಲ್ಲದೆ, ನಮ್ಮ ಸಾಧನೆಯ ಫೋಟೋಗಳು ಪತ್ರಿಕೆಯಲ್ಲಿ ಅಚ್ಚಾದರೆ ಅದಕ್ಕಿಂತ ದೊಡ್ಡ ಖುಷಿ ಬೇರೆಯಿಲ್ಲವೆಂಬಂತೆ ಸಂಭ್ರಮಿಸಿ ಬಿಡುತ್ತೇವೆ. ನಿನ್ನ ಫೋಟೋ ಪತ್ರಿಕೆಯಲ್ಲಿ ನೋಡಿದೆವು ಅಂದಾಕ್ಷಣ, ನಿರ್ಲಿಪ್ತ ಮುಖ ಮಾಡಿಕೊಂಡರೂ ಒಳಗೊಳಗೆ ಖುಷಿಯ ಅಲೆ. ಇನ್ನು, ಜನಪ್ರತಿನಿಧಿಗಳ, ರಾಜಕಾರಣಿಗಳ, ದೊಡ್ಡ ದೊಡ್ಡ ಭಾವಚಿತ್ರಗಳನ್ನು ಪ್ರತಿದಿನ ನೋಡುತ್ತಾ ನೋಡುತ್ತಾ ಅವರೆಲ್ಲಾ ನೆರೆಮನೆಯವರಂತಾಗುತ್ತಿದ್ದಾರೆ. ಆದರೆ ಅದೇ ನೆರೆಹೊರೆಯವರು ಬಲು ದೂರದವರಾಗುತ್ತಿದ್ದಾರೆ.

ಒಂದೊಮ್ಮೆ ಹುಡುಗ ಹುಡುಗಿಯರು ಪರಸ್ಪರ ಫೋಟೋ ಇಟ್ಟುಕೊಳ್ಳುವುದೇ ದೊಡ್ಡ ಅಪರಾಧ ಎನ್ನುವಂತಿತ್ತು. ಪುಸ್ತಕದ ಎಡೆಯಲ್ಲೋ, ಕಬ್ಬಿಣದ ಸಂದೂಕಿನೊಳಗೋ ಭದ್ರವಾಗಿ ಬಚ್ಚಿಟ್ಟ ಫೋಟೋಗಳು, ಪ್ರಮಾದವಶಾತ್ ಕಪ್ಪಿನಿಂದ ಯಾರದೋ ಕಣ್ಣಿಗೆ ಬಿತ್ತೋ, ದೊಡ್ಡ ಗುಲ್ಲು, ರಾದ್ಧಾಂತವಾಗಿ, ಅದು ಹರಿದು ತಿಪ್ಪೆ ಸೇರಿಯೋ, ಅಡುಗೆ ಮನೆಯ ಉರಿಯೊಳಗೆ ಉರಿದೋ ದಂತ ಕಥೆಯಾಗಿ ಬಿಡುತ್ತಿತ್ತು. ಆದರೂ ಕಣ್ಣೀರು ಸುರಿಸುತ್ತಲೇ ಹೃದಯದ ಕಟ್ಟೆನಿಂದ ನಮ್ಮ ಭಾವಚಿತ್ರಗಳನ್ನು ಹೇಗೆ ಸುಟ್ಟು ಹಾಕುತ್ತೀರಿ ನೋಡುವ ಅಂತ ತುಂಬಿದ ಕಣ್ಣಿನೊಳಗೆ ಸುಟ್ಟು ಹಾಕುವಷ್ಟು ಪ್ರಶ್ನೆ ಹರಿಯಬಿಡುತ್ತಿದ್ದರು. ವಯೋಸಹಜವಾದ ರಂಗು ರಂಗಿನ ಕನಸಿಗೆ ಅಪರಾಧಿ ಪಟ್ಟ ಕಟ್ಟಿದ ಮಾತ್ರಕ್ಕೆ, ಭಾವನೆಗಳನ್ನು ಕಟ್ಟಿಟ್ಟುಕೊಳ್ಳಲಾದೀತೇ? ಇಷ್ಟೆಲ್ಲಾ ಅವಾಂತರಗಳ ನಡುವೆಯೂ ಭಾವಚಿತ್ರವೊಂದು ಬದುಕಿನ ಸೆಲೆಯಂತೆ, ಅಪರಿಮಿತ ಪ್ರೀತಿಯ ಸಂಕೇತವಾಗಿ ಗೋಪ್ಯವಾಗಿ ಕಾಡುವ ಸಂಗತಿಯಾಗಿ ಬಿಡುತ್ತಿತ್ತು. ಮುಂದೊಮ್ಮೆ ಹಿರಿಯರ ಒಪ್ಪಿಗೆ ಮುದ್ರೆ ಅವರುಗಳಿಗೆ ಬಿದ್ದರೆ ಸರಿ, ಇಲ್ಲದಿದ್ದರೆ, ತುಕ್ಕು ಹಿಡಿದ ಕಬ್ಬಿಣದ ಪೆಟ್ಟಿಗೆಯೊಳಗೆ ಭಾವ ಚಿತ್ರವೂ ತುಕ್ಕು ಹಿಡಿದು ಮಸುಕು ಮಬ್ಬಾಗಿ ಉಸಿರುಗಟ್ಟಿ ತಪಿಸುತ್ತಾ ಕಾಲದ ನಾಗಾಲೋಟದಲ್ಲಿ ಮರೆವಿಗೆ ಸಲ್ಲುವಾಗ, ಹೀಗೆ ಎಷ್ಟೊಂದು ಭಾವಚಿತ್ರಗಳ ಅವಸಾನವಾಗಿದೆಯೋ ಅವರವರ ಭಾವಕ್ಕಷ್ಟೇ ಗೊತ್ತು.

ಇನ್ನು ಸಭೆ ಸಮಾರಂಭಗಳಲ್ಲಿ ಇದರ ಕತೆ ಕೇಳಬೇಕು ಅಂದರೆ ಮದುವೆ ಮಂಟಪಕ್ಕೆ ಒಮ್ಮೆ ಒಂದು ಸುತ್ತು ಹಾಕಿ ಬರಬೇಕು. ಫೋಟೋಕ್ಕೆ ನಿಲ್ಲುವ ನೆಂಟರಿಷ್ಟರ

ಹಾವಭಾವಗಳನ್ನೊಮ್ಮೆ ಸೂಕ್ಷ್ಮವಾಗಿ ಗಮನಿಸಬೇಕು. ಬಹುಶಃ ಮದು ಮಕ್ಕಳಿಗೂ ಅಂತಹ ಉತ್ಸಾಹವಿರಲಿಕ್ಕಿಲ್ಲವೇನೋ. ಸ್ಟೈಲಾಗಿ, ಸ್ಟೈಲ್ ಕೊಟ್ಟು ಫೋಟೋಕ್ಕೆ ಫೋಸ್ ಕೊಟ್ಟು ಬಂದ ನಂತರವೂ ಅವರ ತಲೆಯೊಳಗೆ ಅದೇ ಗುಂಗಿ ಹುಳು, ಮದುವೆ ಮನೆಯವರ ತಲೆ ಕಂಡಾಗಲೆಲ್ಲಾ, ಫೋಟೋ ಕ್ಲೀನ್ ಆಯ್ತಾ? ಒಮ್ಮೆ ನೋಡೋಕೆ ಕೊಡಿ ಆಯ್ತಾ... ಅಂತ ಪದೇಪದೇ ಕೇಳುವ ಪರಿಗೆ, ಅವರಿಗೆ ಇವರನ್ನೆಲ್ಲಾ ಯಾವ ಕರ್ಮಕ್ಕೆ ಫೋಟೋಕ್ಕೆ ನಿಲ್ಲಿಸಿದ್ದೇವಪ್ಪಾ ಅಂತ ಕಿರಿಕಿರಿ ಆಗದೇ ಇರಲು ಸಾಧ್ಯವೇ.

ಇನ್ನು ಅಲ್ಲೂ ಕೆಲವೊಮ್ಮೆ ಮಜಾ ಕೇಳಬೇಕು, ನಿಮ್ಮನ್ನು ಎಲ್ಲೋ ನೋಡಿದಂತಿದೆಯಲ್ಲಾ! ಅಂದಾಗ ಹೆಮ್ಮೆಯ ಜೊತೆಗೆ ನವಿರು ನವಿರು ಭಾವ. ಹಾಂ! ಈಗ ನೆನಪಿಗೆ ಬಂತು ನೋಡಿ, ಮೊನ್ನೆ ಫೇಸ್ ಬುಕ್‌ನೊಳಗೆ ಫೋಟೋ ಅಪ್‌ಲೋಡ್ ಮಾಡಿದ್ದೀರಲ್ಲ? ಅದರಲ್ಲಿ ಎಷ್ಟೊಂದು ಚೆಂದಕ್ಕೆ ಕಾಣಿಸ್ತಿದ್ರಿ, ಈಗ ನೋಡಿದ್ರೆ ಅದರಲ್ಲಿ ಇದ್ದಷ್ಟು ಕಲರು, ಫಿಗರ್ ಎರಡೂ ಇಲ್ಲ. ಅಲ್ಲಿದ್ದ ಹಾಗೆ ಪೂರ್ತಿಯಾಗಿ ನೀವಿಲ್ಲವೇ ಇಲ್ಲ ಅಂತ ಏಕ್‌ದಂ ಕಣ್ಣಿಗೆ ಖಾರದ ಪುಡಿ ತಣ್ಣಗೆ ಎರಚಿದ ಹಾಗೆ ಹೇಳಿದ್ರೆ, ಕಣ್ಣಲ್ಲಿ ನೀರೂರದೇ ಇರುತ್ತದೆಯಾ? ಇವರಿಗೇನೋ ನಂಜು ಅಂತ ಒಳಗೊಳಗೇ ಹಲ್ಲು ಮಸೆದವರು ಅದೆಷ್ಟು ಮಂದಿಯೋ,

ಕಾಲೇಜು ಓದಲು ದೂರದ ಊರಿನಲ್ಲಿ ಹಾಸ್ಟೆಲ್‌ಗೆ ಸೇರಿದ ನನ್ನ ಮಗಳು, ಹಾಸ್ಟೆಲ್‌ಗೆ ಹೋಗುವಾಗ ಪುಸ್ತಕಕ್ಕಿಂತ ಹೆಚ್ಚಾಗಿ ಮನೆಯೊಳಗಿದ್ದ ಎಲ್ಲಾ ಆಲ್ಬಂಗಳನ್ನೂ ಕೊಂಡೊಯ್ದಿದ್ದಾಳೆ. ಯಾಕೆ ಇಷ್ಟೆಲ್ಲಾ? ಓದೋದಿಕ್ಕೆ ಇಲ್ಲವಾ? ಫೋಟೋ ನೋಡಿಕೊಂಡೇ ಕಾಲ ಕಳೆಯೋದಾ ಅಂತ ಗದರಿದರೆ, ನೆನಪಾಗುವಾಗ ನಿಮ್ಮನ್ನೆಲ್ಲಾ ನೋಡಲು ಬೇಕಲ್ಲಾ... ಅಂತ ರಾಗ ಕೊಯ್ಯುತ್ತಾಳೆ. ಒಂದೊಮ್ಮೆ ನಾನೂ ಇದೇ ಕೆಲಸ ಮಾಡಿರುವೆನಲ್ಲವೇ? ಭಾವಚಿತ್ರದ ಬಂಧ ನನ್ನಿಂದ, ಅವಳಿಂದ... ಹೀಗೆ ಪರಂಪರೆಯನ್ನು ಉಳಿಸುವ ಕೊಂಡಿಯಾಗಿ, ಹೇಳಿಕೊಂಡಷ್ಟೂ ಮುಗಿಯದ ಭಾವಚಿತ್ರದ ಭಾವಯಾನ ಸಾಗುತ್ತಲೇ ಹೋಗುತ್ತದೆ. ಭಾವಗಳು ಬದಲಾಗುತ್ತಲೇ ಇದ್ದರೂ, ಭಾವಚಿತ್ರದೊಳಗಿನ ರೂಪುಗಳು ಬದಲಾದರೂ, ಕ್ಲಿಕ್ಕಿಸಿದ ನಮ್ಮದೇ ಪಟವನ್ನು ಯಾಕೋ ಎರಡೆರಡು ಭಾರಿ ದಿಟ್ಟಿಸುವ ವಾಂಛೆಯಿಂದ ಯಾರೂ ಹೊರತಾಗಿಲ್ಲವೇನೋ.

ಈಗಂತೂ ಹೇಳಿ ಕೇಳಿ ಡಿಜಿಟಲ್ ಯುಗ, ಸ್ಮಾರ್ಟ್ ಫೋನ್‌ಗಳು ನಮ್ಮ ಅಂಗೈಯೊಳಗೆ ಬಂದು ನಿಂತ ಮೇಲೆ ಫೋಟೋಗ್ರಾಫರ್‌ಗಳು ನಮ್ಮ ಭಿತ್ತಿ ಚಿತ್ತದಿಂದ, ಭಾವ ಲೋಕದಿಂದ... ಹೆಚ್ಚೇಕೆ? ಹೆಚ್ಚು ಕಡಿಮೆ ನಮ್ಮ ಊರಿನಿಂದಲೇ ಕಣ್ಮರೆಯಾಗುತ್ತಿದ್ದಾರೆ. ಎಲ್ಲರೂ ಈಗ ಸ್ವಯಂಘೋಷಿತ ಫೋಟೋಗ್ರಾಫರ್‌ಗಳೇ ಆಗಿ, ನಿಮಿಷಕ್ಕೊಂದು ಫೋಟೋಗಳನ್ನು ನಮಗೆ ನಾವೇ ಕ್ಲಿಕ್ಕಿಸುತ್ತಾ, ಅದನ್ನು ಫೇಸ್ಬುಕ್, ವಾಟ್ಸಪ್‌ಗಳಿಗೆ ಹರಿಯಬಿಡುತ್ತಾ, ಭಾವಚಿತ್ರದೊಳಗೆ ಭಾವುಕತೆಯೇ ಇಲ್ಲದೆ ಕಟ್ಟಿನಾಚೆಗೆ ನಿಂತು ಹೇಳ

ಹೆಸರಿಲ್ಲದವರಾಗುತ್ತಿದ್ದೇವೆಯಾ ಅಂತ ಅನ್ನಿಸತೊಡಗಿದಾಗ, ಸಂಭ್ರಮದಾಚೆಗಿನ ನಿರ್ಭಾವುಕ ಮನಸಿನ ಬಗ್ಗೆ ಪಿಚ್ಚೆನ್ನಿಸುತ್ತದೆ. **(ಪ್ರಜಾವಾಣಿ, ಸಂಕ್ರಾಂತಿ ವಿಶೇಷಾಂಕ, ೨೦೧೭)**

## ೩೦. ಎರಡಂಕಿಯ ಅಂಕ

### ರೋಹಿಣಿ ಎಸ್. ರಾವ್

ಸೇನೆಯಲ್ಲಿ ಭರ್ತಿಯಾಲು ಸಂದರ್ಶನಕ್ಕೆ ಹೋದ ಅಭ್ಯರ್ಥಿಗೆ "ನೀನು ಇಲ್ಲಿ ಏಕೆ ಸೇರ ಬಯಸುವಿ?' ಎಂದು ಕೇಳಿದಾಗ ಇದರಲ್ಲಿ ಎರಡು ಆಯ್ಕೆಗಳಿವೆ' ಎಂದನಂತೆ! ಮುಂದುವರೆದು, 'ನಾನು ಯುದ್ಧದಲ್ಲಿ ಭಾಗವಹಿಸುವ ಸಂದರ್ಭ ಬಂದರೆ ಚಿಂತೆಯಿಲ್ಲ. ಅಕಸ್ಮಾತ್ ಬಂದರೆ ಅಲ್ಲಿಯೂ ಎರಡು ಸಾಧ್ಯತೆಗಳಿವೆ. ನಾನು ಬದುಕಿ ಉಳಿದರೆ ಸರಿ, ಮರಣ ಹೊಂದಿದರೆ ಮತ್ತೆ ಎರಡು ಕ್ರಮಗಳಿವೆ. ನನ್ನ ದೇಹವನ್ನು ಸುಟ್ಟರೆ ಸಮಸ್ಯೆ ಇಲ್ಲ, ನನ್ನ ದೇಹವನ್ನು ಹುಗಿದರೆ ಸಮಾಧಿಯ ಮೇಲೆ ಸುವಾಸನೆಯ ಹೂವುಗಳು ಅರಳಬಹುದು. ಆ ಹೂವುಗಳಿಂದ ಸ್ನಾನಕ್ಕೆ ಉಪಯೋಗಿಸುವ ಸಾಬೂನು ತಯಾರಿಸಿ ಅದನ್ನು ಪುರುಷರು ಬಳಸಿದರೆ ಪರವಾ ಇಲ್ಲ, ಆದರೆ ಯುವತಿಯೋರ್ವಳು ಬಳಸಿದರೆ ನನಗೆ ನಾಚಿಕೆ ಆಗುತ್ತದೆ' ಎಂದು ಹೇಳಿದನಂತೆ! (ಇದೊಂದು ಸಿದ್ಧ ಹಾಸ್ಯದ ತುಣುಕು), ಹೀಗೆ ನಾವು ಜೀವನದಲ್ಲಿ ಏನಾದರೂ ನಿರ್ಧಾರಗಳನ್ನು ಕೈಗೊಳ್ಳಬೇಕಾದರೆ ಎರಡು ಆಯ್ಕೆಗಳನ್ನು ಇಟ್ಟುಕೊಳ್ಳುತ್ತೇವೆ.

ಸ್ವಲ್ಪ ಯೋಚಿಸಿ ನೋಡಿ. ಈ ಸೃಷ್ಟಿಯಲ್ಲಿ ನಡೆಯುವ ಪ್ರತಿಯೊಂದು ವಿದ್ಯಮಾನವೂ ಎರಡು ತತ್ವಗಳನ್ನು ಅವಲಂಬಿಸಿದೆ. ಈ ಪ್ರಪಂಚದಲ್ಲಿ ಯಾವುದೇ ಒಂದು ಜೀವದ ಉದ್ಭವಕ್ಕೆ (ಬೇರೆ ಬೇರೆ ಗುಣಧರ್ಮ ಹೊಂದಿದ) ಎರಡು ಜೀವಕೋಶಗಳು ಸಂಯೋಗ ಹೊಂದಿದಾಗ ಮಾತ್ರ ಹೊಸ ಜೀವಿಯ ಜನನ. ಹೀಗೆಯೇ ಪ್ರಕೃತಿಯ ನಾಶವೂ ಕೂಡ ಎರಡು ಪರಮಾಣುಗಳು ಒಂದಕ್ಕೊಂದು ಜೋರಾಗಿ ಅಪ್ಪಳಿಸಿದಾಗ ಮಹಾ ಸ್ಫೋಟವಾಗಿ ಸರ್ವನಾಶ ಆಗುತ್ತದೆ. ಈ ಜಗತ್ತಿನ ಸೃಷ್ಟಿಕರ್ತನಾಗಿ ಪರಮಾತ್ಮನು ಸೃಷ್ಟಿಸಿದ ಅಗಣಿತ ಅದ್ಭುತಗಳಲ್ಲಿ ಜೀವಿಗಳ ಸೃಷ್ಟಿಯೂ ಒಂದು. ಅದರಲ್ಲಿ ಅತ್ಯದ್ಭುತ ಎಂದರೆ ಮಾನವ ಜೀವಿಯ ಸೃಷ್ಟಿ, ಮನುಷ್ಯನ ಶರೀರವು ಶಿರದಿಂದ ಪಾದದವರೆಗೆ ಅಪರಿಮಿತ ವಿಸ್ಮಯಗಳಿಂದ ಕೂಡಿದ್ದು, ಈ ಶರೀರದ ಬಗ್ಗೆ ವಿಜ್ಞಾನಿಗಳು ಸಾಕಷ್ಟು ಮಾಹಿತಿಗಳನ್ನು ಕಲೆ ಹಾಕಿದ್ದರೂ ಇನ್ನೂ ದೇಹವನ್ನು ಬಗೆಯುತ್ತ ಸಂಶೋಧನೆಗಳನ್ನು ಮುಂದುವರೆಸಿಯೇ ಇದ್ದಾರೆ. ಸಕಲ ಜೀವಿಗಳಲ್ಲಿ ಇರುವಂತೆ ಮಾನವರಲ್ಲಿಯೂ ಎರಡು ಜಾತಿ. ಒಂದು ಪುರುಷ, ಇನ್ನೊಂದು ಸ್ತ್ರೀ. ಬಸಿರು ಹೊತ್ತ ಮಹಿಳೆಯರು (ಭಾರತದಲ್ಲಿ ಮಾತ್ರ) ಸರಕಾರದ ಕುಟುಂಬ ಯೋಜನೆಯ ಪ್ರಕಾರ ಎರಡು ಮಕ್ಕಳಿಗೆ ಮಾತ್ರ ಸಕಲ ಸೌಲಭ್ಯಗಳೂ ಲಭಿಸುವುದರಿಂದ ಮೊದಲನೆಯದು ಗಂಡು ಮಗುವೇ ಆಗಲಿ ಎಂದು ಬಯಸುತ್ತಾರೆ. ಎರಡನೆಯದು ಹೆಣ್ಣಾದರೆ ಪರವಾ ಇಲ್ಲ, ಅಕಸ್ಮಾತ್ ಗಂಡು ಆದರೆ ಇನ್ನೂ ಒಳ್ಳೆಯದೇ ಎಂದು ಆಶಿಸುತ್ತಾರೆ. ಪೂರ್ವಜರ ಕಾಲದಿಂದ ಅನೇಕಾನೇಕ ಕಾರಣಗಳಿಂದ ಪ್ರತಿ ಮಹಿಳೆಯೂ

ಪುತ್ರ ಸಂತಾನಕ್ಕೆ ಹಾತೊರೆಯುವವಳೇ ಆಗಿದ್ದಾಳೆ. ಈ ಕಾರಣಕ್ಕಾಗಿ ಜನಿಸುವ ಮಗು ಹೆಣ್ಣು ಕೂಸು ಎಂದು ತಿಳಿದಾಗ ಹುಟ್ಟುವ ಮೊದಲೇ ಅಥವಾ ಜನ್ಮ ತಳೆದ ಮೇಲೆ ಆ ಮಗುವಿನ ಮೇಲೆ ನಡೆಯುವ ಅತ್ಯಾಚಾರಗಳು ಅಷ್ಟಿಷ್ಟಲ್ಲ. ಇದರಿಂದ ಹೆಣ್ಣಿನ ಸಂತಾನ ಕ್ಷಯಿಸುತ್ತಾ ಸಾಗಿದ್ದರೂ ಪುತ್ರ ಸಂತಾನದ ವ್ಯಾಮೋಹ ಸ್ತ್ರೀ ಪುರುಷರ ರಕ್ತದಲ್ಲಿ ಪಾರಂಪರಿಕವಾಗಿ ಹರಿದು ಬಂದಿದ್ದು, ಅದರಿಂದ ಹೊರಬರುವುದೇನೂ ಸುಲಭಸಾಧ್ಯದ ಮಾತಲ್ಲ.

ಮನುಷ್ಯನ ಶರೀರದಲ್ಲಿರುವ ಅಂಗಾಂಗಗಳತ್ತ ಕೊಂಚ ಗಮನ ಹರಿಸಿ, ಪ್ರತಿಯೊಂದು ಅಂಗವೂ ಎರಡು ಅಂಕಿಯಲ್ಲಿ ಇರುವುದು. ಹೊರಗೆ ಕಾಣುವ ಅವಯವಗಳು ಕಣ್ಣು, ಕಿವಿ, ಕೈ, ಕಾಲುಗಳು ಎರಡೆರಡು ಇದ್ದರೆ, ಶರೀರದ ಒಳಗೆ ಇರುವ ಪುಪ್ಪುಸಗಳು, ಮೂತ್ರಕೋಶ, ಮಿದುಳು ಮತ್ತು ಕರುಳು(ಒಂದು ದೊಡ್ಡದು, ಇನ್ನೊಂದು ಸಣ್ಣದು) ಕೂಡ ಎರಡೆರಡು ಇವೆ. ನಾಸಿಕ ಒಂದೇ ಆದರೂ ಅದರಲ್ಲಿರುವುದು ಎರಡು ಹೊಳ್ಳೆಗಳು. ಇನ್ನು ಬಾಯಿ ಮತ್ತು ಹೃದಯಗಳು ಒಂದೊಂದೇ ಇರುವ ಅಂಗಗಳು. ಅವು ಒಂದೊಂದೇ ಇರುವುದಕ್ಕೆ ಅನೇಕ ಕಾರಣಗಳಿವೆ. ಬಾಯಿಯ ಉಪಯೋಗ ತಿನ್ನಲು, ಮಾತನಾಡಲು. ತಿನ್ನುವುದು ಮಾತನಾಡುವುದು ಅತೀ ಆದರೆ ಅಪಾಯ ಕಟ್ಟಿಟ್ಟ ಬುತ್ತಿ. ಈಗಂತೂ ದೇಹದ ಆರೋಗ್ಯ ಕಾಪಾಡಿಕೊಳ್ಳಲು ದೇಹದ ತೂಕ ಹೆಚ್ಚಾಗಿ ಅನೇಕ ರೋಗಗಳಿಗೆ ಈಡಾಗುವ ಕಾರಣಕ್ಕೆ ಶರೀರದ ಭಾರ ಕುಗ್ಗಿಸಲು ಅತ್ಯುತ್ತಮ ಉಪಾಯ ಎಂದರೆ ಕೊಬ್ಬಿನ ಪದಾರ್ಥಗಳನ್ನು ವರ್ಜಿಸಿ, ಆದಷ್ಟೂ ಕಡಿಮೆ ಆಹಾರ ತಿನ್ನಬೇಕೆಂದು ಸಾಕಷ್ಟು ಸಲಹೆ, ಸೂಚನೆಗಳನ್ನು ಎಲ್ಲೆಲ್ಲಿಯೂ ಕೇಳುತ್ತಿರುತ್ತೇವೆ. ಇನ್ನು ಮಾತನಾಡುವುದು ಪ್ರತಿಯೊಂದು ಕ್ಷೇತ್ರದಲ್ಲಿ ಅನಾವಶ್ಯಕವಾಗಿ ಹೆಚ್ಚು ಮಾತನಾಡಿ(ಹೆಚ್ಚಾಗಿ) ರಾಜಕಾರಣಿಗಳು ಆರೋಪಕ್ಕೆ, ನಗೆಪಾಟಲಿಗೆ ಗುರಿಯಾಗುವ ಸಂದರ್ಭಗಳನ್ನು ಕಾಣುತ್ತೇವೆ. ಎಷ್ಟೋ ಸಲ ತುಟಿ ಮೀರಿ ಮಾತನಾಡಿ ಕೊನೆಗೆ ಕ್ಷಮಾಪಣೆ ಕೇಳುವ ಪ್ರಸಂಗಗಳೂ ಉಂಟು. 'ಮಾತು ಬೆಳ್ಳಿ, ಮೌನ ಬಂಗಾರ'. ಮಾತನಾಡುವ ಚಟ ಇರುವವರು ಊಟ ಮಾಡುವಾಗಲೂ ಮಾತನಾಡುವುದನ್ನು ಅವ್ಯಾಹತವಾಗಿ ನಡೆಸುವುದರಿಂದ ಅನ್ನದ ಅಗುಳು ಗಂಟಲಿಗೆ ಸಿಕ್ಕಿ ತೊಂದರೆ ಆಗಬಾರದೆಂದು ಆ ದೇವರು ಶ್ವಾಸನಾಳ, ಅನ್ನನಾಳ ಎಂದು ಎರಡು ವಾಹಿನಿಗಳ ನಿರ್ಮಾಣ ಮಾಡಿದ್ದಾನೆ.

ಇನ್ನು ಹೃದಯದ ವಿಚಾರ. ಹೃದಯವು ಮನುಷ್ಯನ ಅತೀ ಸೂಕ್ಷ್ಮ ಮತ್ತು ಮಹತ್ವಪೂರ್ಣ ಅಂಗವಾಗಿದೆ. ಮಾನವ ಮಾನಸಿಕ ವೇದನೆಗೆ ಒಳಗಾದಾಗ ಪೆಟ್ಟಾಗುವುದು ಹೃದಯಕ್ಕೆ, ಹೃದಯ ಸ್ತಂಭನವಾದರೆ ಮನುಷ್ಯ ಬದುಕುವುದೇ ದುಸ್ತರ. ಅದಕ್ಕೆ ಬಾಯಿ ಮತ್ತು ಹೃದಯಗಳು ಎರಡೆರಡು ಇದ್ದರೆ ಮನುಷ್ಯ ಅವುಗಳನ್ನು ಯಾವ ರೀತಿ

ದುರುಪಯೋಗ ಪಡಿಸಿಕೊಳ್ಳುತ್ತಿದ್ದನೋ ಊಹಿಸುವುದೂ ಕಷ್ಟ ಅದಕ್ಕೇ ದೇವರು ಒಂದೇ ಬಾಯಿ, ಒಂದೇ ಹೃದಯ ದಯಪಾಲಿಸಿರುವಂತೆ ಕಾಣುತ್ತದೆ. ಇರಲಿ!

ಮಾನವನಿಗೆ ಇರುವ ಒಂದೇ ತೆರನಾದ ಎರಡು ಅಂಗಗಳು(ಒಂದು ಎಡಕ್ಕೆ, ಒಂದು ಬಲಕ್ಕೆ) ಶರೀರದ ಸಮತೋಲನ ಕಾಯ್ದುಕೊಳ್ಳುವುದರ ಜೊತೆಜೊತೆಗೇ



ಶರೀರಕ್ಕೆ ಬಲವನ್ನೂ ಕೊಡುತ್ತವೆ. ಅಕಸ್ಮಾತ್ ಎರಡರಲ್ಲಿ ಒಂದು ಅಂಗ ವಿಫಲವಾದಾಗ ಮನುಷ್ಯ ಒಂದೇ ಅಂಗದಿಂದ ಹೇಗೋ ಕೆಲಸಗಳನ್ನೂ ಸಾಗಿಸಿಕೊಂಡು ಹೋಗಲು ಸಫಲನಾದರೂ ಎರಡೂ ಅಂಗಗಳು ಕೂಡಿ ಮಾಡುವ ಕೆಲಸದ ಸೊಗಸು, ಸಾಮರ್ಥ್ಯವೇ ಬೇರೆ. 'ಜೋಡಿ' ಎನ್ನುವ ಪದವನ್ನು ಎರಡು ಎಂಬ ಶಬ್ದಕ್ಕೆ ಪರ್ಯಾಯವಾಗಿ ಉಪಯೋಗಿಸುವುದುಂಟು. ಈ 'ಜೋಡಿ' ಎನ್ನುವ ಪದ ಆಕರ್ಷಕವೂ, ಶಕ್ತಿಪೂರ್ಣವೂ ಆಗಿದೆ. ದಂಪತಿಗಳಲ್ಲಿ ಯಾರಾದರೂ ಒಬ್ಬರೇ ಬಂದರೆ, 'ಜೋಡಿ ಮಾಡಿಕೊಟ್ಟ ಮೇಲೆ ಜೋಡಿಯಾಗಿ ಬರಬಾರದೇ?' ಎಂಬ ಆಕ್ಷೇಪಗಳು ಕೇಳಿ ಬರುವುದುಂಟು. ಹಳೆಯ ಚಲನಚಿತ್ರ ಗೀತೆಗಳನ್ನು ನೆನಪಿಟ್ಟವರು ನರಸಿಂಹರಾಜು ಅಭಿನಯದ 'ನಾನೂ ನೀನೂ ಜೋಡಿ, ಈ ಜೀವನ ಎತ್ತಿನ ಗಾಡಿ...' ಎಂಬ ಹಾಡನ್ನು ಮರೆಯಲುಂಟೇ? ಹೊಸದಾಗಿ ಸಂಸಾರ ಆರಂಭಿಸಿದ ನೂತನ ಜೋಡಿಗಂತೂ ಈ ಹಾಡು ಹೇಳಿ ಮಾಡಿಸಿದಂತಿದೆ.

ಯಾವುದೇ ಕೆಲಸ ಮಾಡಲೂ 'ಒಬ್ಬರಿಗಿಂತ ಇಬ್ಬರು ಲೇಸು' ಎಂಬ ನಾಣ್ಣುಡಿ ಇದೆ. ಇಬ್ಬರು ಜೋಡಿಯಾಗಿ ಮಾಡುವ ಕೆಲಸ ಚಕಚಕನೆ ಮುಗಿಯುವುದಲ್ಲದೆ ಚೊಕ್ಕವಾಗಿಯೂ ನೆರವೇರುತ್ತದೆ. ಸಂಸಾರದಲ್ಲಿ ಪತಿ ಅಥವಾ ಪತ್ನಿ ಇಲ್ಲವಾದಾಗ ಸಂಸಾರವನ್ನು ಎಳೆಯುತ್ತಿದ್ದ ಗಾಡಿಯ ಎರಡು ಚಕ್ರಗಳಲ್ಲಿ ಒಂದು ಇಲ್ಲದಂತಾಗಿ ಆ ಗಾಡಿ ಮುಂದೆ ಸಾಗುವುದು ತುಂಬಾ ದುಸ್ತರ. ಈ ಜೋಡಿ ಎಂಬ ಶಬ್ದಕ್ಕೆ 'ಜೊತೆಜೊತೆಯಲಿ' ಎಂಬ ಪದವೂ ಜೊತೆಗೂಡುತ್ತದೆ. ಎರಡು ಎಂಬುದನ್ನು ಸೂಚಿಸುವ ಜೋಡಿ, ಜೊತೆಜೊತೆಯಲಿ ಎಂಬ ಪದಗಳೂ ತುಂಬಾ ತಾಕತ್ತಿನವೂ ಆಗಿದ್ದು ಇವು ನಮ್ಮ ಜೀವನದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ ಎಂದು ಹೇಳಬಹುದು. ಅದಕ್ಕೆ ಭಗವಂತನು ಸೃಷ್ಟಿಯಲ್ಲಿ ಒಂದು ಪಾತ್ರವನ್ನು ಸೃಷ್ಟಿಸಿ, ಅದರ ಜೊತೆಗೇ ಇನ್ನೊಂದನ್ನೂ ಸೃಷ್ಟಿಸಿ ಈ ಎರಡಂಕಿಗೆ ಉನ್ನತ ಸ್ಥಾನ ಕಲ್ಪಿಸಿದ್ದಾನೆ.

ಪ್ರಕೃತಿಯಲ್ಲಿರುವ ಗಿಡಮರಗಳನ್ನೂ ಅವಲೋಕಿಸಿ. ಪ್ರತಿಯೊಂದು ಗಿಡವೂ ಎರಡು ಕವಲುಗಳಾಗಿ ಬೆಳೆಯುತ್ತಾ, ಪ್ರತಿ ಕವಲೂ ಎರಡು ಟಿಸಿಲುಗಳಾಗಿ ಒಡೆಯುತ್ತಾ, ಪ್ರತಿ ಟಿಸಿಲಿಗೂ ಎರಡು ಎಲೆಗಳು (ಎಡಕ್ಕೊಂದು, ಬಲಕ್ಕೊಂದು ಮೂಡುತ್ತಾ.. ಅಂತೂ ಗಿಡವು ವಿಶಾಲವಾದ ಮರವಾಗುವ ಹೊತ್ತಿಗೆ ಎರಡರ ಅಂಕಿಯಲ್ಲಿ ವೃದ್ಧಿಸುತ್ತಾ ಅಸಂಖ್ಯಾತ ಟಿಸಿಲುಗಳೂ, ಎಲೆಗಳೂ, ಹೂವು, ಹಣ್ಣುಗಳನ್ನು ಪಡೆದು ಇಳೆಯಲ್ಲಿ ಗಮ್ಯಸ್ಥಾನ ಪಡೆಯುತ್ತವೆ. ಧಾನ್ಯಗಳಲ್ಲಿ ಕೂಡಾ ದ್ವಿದಳ ಧಾನ್ಯಗಳಲ್ಲಿ ತೊಗರಿ, ಹೆಸರು, ಕಡಲೆ, ಅವರೆ, ಶೇಂಗಾ ಇತ್ಯಾದಿಗಳಲ್ಲಿ ಹೆಚ್ಚಿನ

ಪೌಷ್ಟಿಕತೆ ಇದ್ದು, ಈ ಎರಡು ಬೇಳೆಗಳಾಗುವ ಕಾಳುಗಳ ಸೇವನೆಯಿಂದ ಆರೋಗ್ಯವು ವರ್ಧಿಸುತ್ತದೆ ಎಂದು ಹೇಳಲಾಗುತ್ತದೆ. ಶರೀರದ ವಿಷಯದಲ್ಲಿ ಇನ್ನೂ ಒಂದು ವಿಸ್ಮಯದ ವಿಚಾರವೆಂದರೆ ನಮ್ಮ ಮನಸ್ಸು. ನಮ್ಮ ಕಣ್ಣಿಗೆ ಕಾಣದಿದ್ದರೂ, ಮನಸ್ಸಿನಲ್ಲಿ ಎರಡು ವಿಧಗಳಿವೆ. ಅವು, ಒಂದು ಒಳ್ಳೆಯ ಮನಸ್ಸು, ಇನ್ನೊಂದು ಕೆಟ್ಟ ಮನಸ್ಸು. 'ಕೊಲೆಸ್ಟ್ರಾಲ್' ಎನ್ನುವ ಪದಾರ್ಥ ಮನುಷ್ಯನ ರಕ್ತನಾಳಗಳಲ್ಲಿ ಹೆಚ್ಚು ಶೇಖರಣೆ ಆದರೆ ಮನುಷ್ಯನ ಜೀವಕ್ಕೆ ಅಪಾಯ ಎನ್ನಲಾಗುತ್ತದೆ. ಆದರೆ ಈ ಕೊಲೆಸ್ಟ್ರಾಲ್‌ನಲ್ಲಿಯೂ ಒಳ್ಳೆಯ ಕೊಲೆಸ್ಟ್ರಾಲ್,



ಕೆಟ್ಟ ಕೊಲೆಸ್ಟ್ರಾಲ್ ಎಂದು ಎರಡು ವಿಧಗಳು ಇವೆಯಂತೆ! ನಮ್ಮ ಶರೀರದ ಪ್ರತಿಯೊಂದು ಕಾರ್ಯವೂ ಸ್ವಾಯತ್ತ ನರವ್ಯೂಹದಿಂದ (ಅಟಾನಮಿಕ್ ನರ್ವಸ್ ಸಿಸ್ಟಂ) ನಿಶ್ಶಬ್ದವಾಗಿ, ನಿರ್ವಿಘ್ನವಾಗಿ ನಮಗೇ ಗೊತ್ತಿಲ್ಲದೆ ಸಾಗುತ್ತಿರುತ್ತದೆ. ಇದರಲ್ಲಿಯೂ ಎರಡು ತರದ ನರಗಳು (ಒಂದು ಐಚ್ಛಿಕ, ಇನ್ನೊಂದು ಅನೈಚ್ಛಿಕ) ಕೆಲಸಗಳನ್ನು ಹಂಚಿಕೊಂಡು ಮಾಡುತ್ತವೆ. ಸೂರ್ಯ, ಚಂದ್ರ, ಆಕಾಶ-ಭೂಮಿ, ಉತ್ತರ ಧೃವ-ದಕ್ಷಿಣ ಧೃವ.. ಹೀಗೇ ಎಣಿಸಿದಷ್ಟೂ ಈ ಪ್ರಪಂಚದಲ್ಲಿ ಈ ಎರಡರ ಗಣಿತ ಮುಂದುವರೆಯುತ್ತಲೇ ಇದೆ. ಇದು ವಿಚಾರ ಮಾಡಿದಷ್ಟೂ ನಿಗೂಢವೇ ಆಗಿದೆ.

ಮತದಾನದಲ್ಲಿ ಗೆದ್ದ ಉಮೇದುವಾರರು ಅಥವಾ ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದ ಕ್ರೀಡಾ ನಿಪುಣರು ಬಲಗೈನ ಎರಡು ಬೆರಗಳುಗಳನ್ನು (ತೋರು ಬೆರಳು, ಮಧ್ಯದ ಬೆರಳು) ಎತ್ತಿ ತೋರಿಸುತ್ತ ತಮ್ಮ ವಿಜಯವನ್ನು ಹೆಮ್ಮೆಯಿಂದ ಪ್ರದರ್ಶಿಸುತ್ತ ಬೀಗುತ್ತಾರೆ. ಶುಭ ಸಮಾರಂಭಗಳಲ್ಲಿ, ಮನೆಯಲ್ಲಿ, ಮಂದಿರಗಳಲ್ಲಿ, ನೂತನ ವಧು-ವರರಿಗೆ ಆರತಿ ಎತ್ತುವ ಸಂದರ್ಭಗಳಲ್ಲಿ ಜೋಡಿ ನೀಲಾಂಜನಗಳಲ್ಲಿ ದೀಪ ಹಚ್ಚಿ ಆರತಿ ಬೆಳಗುವ ಸಂಪ್ರದಾಯ ಉಂಟು. ಈ ಜೋಡಿಯ ಮೋಡಿ ಭಗವದ್ಭಕ್ತರನ್ನೂ ಬಿಟ್ಟಿಲ್ಲ. ಒಂದೇ ಕಾಯಿ ಅರ್ಪಿಸಿದರೆ ಎಲ್ಲಿ ಆ ದೇವರು ತಮ್ಮ ಪ್ರಾರ್ಥನೆ(ಕೋರಿಕೆ)ಯನ್ನು ನೆರವೇರಿಸಲಾರನೋ ಎಂದುಕೊಂಡು ಜೋಡಿ ತೆಂಗಿನಕಾಯಿ ಒಡೆಸುವವರೂ ಉಂಟು.

ಚಲನಚಿತ್ರಗಳಲ್ಲಿ ಬರೀ ಹೀರೋ ಅಥವಾ ಒಬ್ಬಳೇ ಹೀರೋಯಿನ್ ಇದ್ದರೆ ಆ ಚಿತ್ರ ಹೆಚ್ಚು ಓಡದು. ವಿಜ್ಞಾನಿಗಳು ಸಂಶೋಧನೆ ಮಾಡಿ ನಿರೂಪಿಸಿದ ನಿಯಮಗಳ ಪ್ರಕಾರ ಈ ಲೋಕದಲ್ಲಿ ಯಾವುದೇ ಒಂದು ಕೆಲಸವೂ ಸುಲಭವಾಗಿ ನೆರವೇರಬೇಕಾದರೆ ಎರಡು ಸಮಬಲ ಶಕ್ತಿಗಳು ಒಂದೇ ಕಾಲಕ್ಕೆ ಸಮಬಲದಿಂದಲೂ, ವಿರುದ್ಧ ದಿಕ್ಕಿನಿಂದಲೂ ಕಾರ್ಯ ನಿರ್ವಹಿಸಬೇಕು.

ಇನ್ನೊಂದು ಮಹತ್ವದ ಮಾತು. ಗುಟ್ಟಾಗಿ ಓದಿಕೊಳ್ಳಿ. ಎಲ್ಲಿಯೋ ಸಭೆ, ಸಮಾರಂಭಗಳಲ್ಲಿ ನೀವೂ ಭಾಗಿಯಾಗಿದ್ದರೆ, ಅಲ್ಲಿ ಒಂಟಿ ಸೀನು ಸೀನಿ ಎಲ್ಲರ ಕೋಪಕ್ಕೆ, ಅವಕೃಪೆಗೆ ಗುರಿ ಆದೀರಿ, ಜೋಕೆ! ಇನ್ನೊಂದು ಸೀನು

ಬರದಿದ್ದರೂ, ಬಲವಂತವಾಗಿ ಬರಿಸಿಕೊಂಡು ಜೋಡಿ ಸೀನು ಸೀನಿ ಎಲ್ಲರ ಶಹಬ್ಬಾಶ್‌ಗಿರಿಯ ಪಡೆದುಕೊಂಡು ಧನ್ಯರಾಗಿರಿ. ಇನ್ನೂ ಒಂದು ಮರೆತ ಮಾತನ್ನು ಜೋಡಿಸಿ ಬಿಡುವೆ. ಜೋಡಿ ಎಂಬ ಪದಕ್ಕೆ ಹಿಂದಿಯಲ್ಲಿ 'ಸಾಥ್' ಎನ್ನುವ ಪದ ರೂಢಿಯಲ್ಲಿದೆ. 'ನಯಾದೌ' ಹಿಂದಿ ಚಿತ್ರದಲ್ಲಿಯ ಹಾಡು 'ಸಾಥೀ ಹಾಥ್ ಬಡಾನಾ ಏಕ್ ಅಕೆಲಾ ಥಕ್ ಜಾಯೇಗಾ ಮಿಲಕರ್ ಸಾಥ್ ನಿಭಾನಾ' ಇದನ್ನು ಕೇಳದವರಾರು? ಇದರ ಸಂದೇಶ ಇಷ್ಟೇ! ಈ ದುನಿಯಾ(ಜಗದಲ್ಲಿ ಏನೇ ಕಷ್ಟ ಬಂದರೂ ಒಬ್ಬರೇ ಎದುರಿಸುವುದರ ಬದಲು ಒಬ್ಬರಿಗೆ ಇನ್ನೊಬ್ಬರು ಸಾಥ್ ಕೊಟ್ಟರೆ ಎಷ್ಟೇ ಕಠಿಣ ಕೆಲಸವನ್ನಾದರೂ ಲೀಲಾಜಾಲವಾಗಿ ಮುಗಿಸಿ ಬಿಡಬಹುದು ಅಂತ!

**(ಕಸ್ತೂರಿ, ಡಿಸೆಂಬರ್ ೨೦೧೬)**

## ೩೧. ನನ್ನ ಬಾಲ್ಯ ಕದ್ದ ಕಾಗೆಗಳು

**ಗೀತಾ ಕುಂದಾಪುರ**

ಅಪ್ಪಯ್ಯನ ಶ್ರಾದ್ಧ ಮುಗಿಯುತ್ತಿದ್ದಂತೆ ಪುರೋಹಿತರು ಬಾಳೆ ಎಲೆಯಲ್ಲಿ ಪಿಂಡದ ಅನ್ನ, ಎಳ್ಳು, ನೀರು ಮತ್ತು ವಡೆಯ ಚೂರನ್ನು ಹಾಕಿಕೊಟ್ಟರು. ತಾರಸಿಯ ಖಾಲಿ ಜಾಗದಲ್ಲಿ ಎಲೆಯನ್ನಿಟ್ಟು 'ಕಾ ಕಾ' ಎಂದು ಗಂಟಲು ಹರಿದು ಹೋಗುವಂತೆ ಕೂಗಿದೆ. ತಮ್ಮನೂ ನನ್ನೊಂದಿಗೆ ಬದಿಯಲ್ಲಿ ಎಲೆಯನ್ನು ಇಟ್ಟವನು ಕೋರಸ್ ಶುರು ಮಾಡಿದ. 'ಕಾ' ಎಂದು ಹಾರಿ ಬಂದು ಒಂದೇ ಒಂದು ಕಾಗೆಯೂ ಹಾಜರಿ ಹಾಕಲಿಲ್ಲ. ದೂರದೂರಕ್ಕೂ ಕಾಗೆಯ ಸುಳಿವಿಲ್ಲ. ತೀರಿಕೊಂಡವರು ಕಾಗೆಗಳಾಗಿ ಶ್ರಾದ್ಧದ ದಿನ ಬಂದು ಪಿಂಡದನ್ನ ತಿನ್ನುವರೆಂಬ ನಂಬಿಕೆ. ಅದರೊಂದಿಗೆ ಯಾರ ಎಲೆಯ ಅನ್ನವನ್ನು ಕಾಗೆ ಬಂದು ಮೊದಲು ತಿನ್ನುತ್ತದೋ ಅವರೇ ತೀರಿಕೊಂಡವರಿಗೆ ಪ್ರೀತಿ ಪಾತ್ರರಾದವರು ಎಂಬ ನಂಬಿಕೆ ಬೇರೆ. ತಲೆಯೆತ್ತಿ ನೋಡಿದರೆ ಹೊಂಚು ಹಾಕುತ್ತಿರುವ ಪಾರಿವಾಳಗಳು ಕಾಗೆಗಳಂತೆ ಕಂಡರೂ ಸ್ವಲ್ಪ ಬೂದುಬಣ್ಣದ ಇವುಗಳನ್ನು ದೂರದಿಂದಲೇ ಗುರುತಿಸಬಹುದು. ಈಗ ಪಾರಿವಾಳಗಳದ್ದೇ ಸಾಮ್ರಾಜ್ಯ ಎಲ್ಲೆಲ್ಲೂ. ಮನದಲ್ಲಿ ಹಲವಾರು ಪ್ರಶ್ನೆಗಳು ಎದ್ದವು. ಎಲ್ಲಿ ಹೋದವು ಈ ಕಾಗೆಗಳು? ಪಾರಿವಾಳಗಳು ದಂಡೆತ್ತಿ ಬಂದು ಕಾಗೆಗಳನ್ನು ಸೋಲಿಸಿ ಸಾಮ್ರಾಜ್ಯ ವಿಸ್ತರಿಸಿಕೊಂಡವೇ? ನೆಲೆ ಕಳೆದುಕೊಂಡ ಕಾಗೆಗಳು ಎಲ್ಲಿ ಹೋದವು? ಕಾಗೆಗಳು ಬಂದು ಪಿಂಡದನ್ನ ಸ್ವೀಕರಿಸದಿದ್ದಾಗ ಶ್ರಾದ್ಧ ಅಪೂರ್ಣವಾದಂತೆಯೇ? ತೀರಿಕೊಂಡವರು ಈಗ ಕಾಗೆಗಳಾಗಿ ಬರುತ್ತಿಲ್ಲವೇ? ಇಲ್ಲ ಈಗ ತೀರಿಕೊಂಡ ಹಿರಿಯರು ಪಾರಿವಾಳಗಳಾಗಿ ಬರುತ್ತಾರೆಂದು ನಂಬುವುದೇ? ಇಂತಹ ಹಲವು ಪ್ರಶ್ನೆಗಳಿಗೆ ಉತ್ತರ ಸಿಗದೆ ತಲೆ ಕೆರೆದುಕೊಂಡರೆ ತಲೆಕೂದಲು ಉದುರಿತೇ ವಿನಃ ಉತ್ತರ ಮಾತ್ರ ಸಿಗಲಿಲ್ಲ.

ಕಾಗೆಗಳು ನನ್ನ ಬಾಲ್ಯದ ನೆನಪಿಗೆ ಅಂಟಿಕೊಂಡು ಗಂಟು ಹಾಕಿ ಕೂತಿವೆ. ಬೇರ್ಪಡಿಸಲು ಸಾಧ್ಯವಾಗುತ್ತಿಲ್ಲ. ಹಿಂದೆ ಮನೆಯಿಂದ ಹೊರಗೆ ಕಾಲಿಟ್ಟರೆ ಸಾಕು, ಇಲ್ಲ ಕಿಟಕಿಯಿಂದ ಇಣುಕಿದರೂ ಕಾಗೆಗಳ ದರ್ಶನವಾಗುತ್ತಿತ್ತು. ಮರ ಗಿಡಗಳ ಮೇಲೆ ಕೂತು 'ಕಾ ಕಾ' ಎಂದು ಒಡಕು ಸ್ವರದಲ್ಲಿ ಕಿರುಚಾಡುತ್ತಲೋ, ಇಲ್ಲವೇ ಅಲ್ಲಿ ಇಲ್ಲಿ ನಿಂತ ನೀರಲ್ಲಿ ಮುಳುಗಿ ಏಳುತ್ತ ಅಡಿಯಲ್ಲಿರುವ ಚಿಕ್ಕಪುಟ್ಟ ಹುಳು ಹುಪ್ಪಟೆಗಳನ್ನು ಕೊಕ್ಕಿನಿಂದ ಹಿಡಿಯುತ್ತಲೋ, ಇಲ್ಲ ಜೋಲಾಡುತ್ತಿರುವ ವಿದ್ಯುತ್ ತಂತಿಗಳಲ್ಲಿ ನೇತಾಡಲು ಹೋಗಿ ಪ್ರಾಣತ್ಯಾಗ ಮಾಡಿದ ಕಾಗೆಗಳನ್ನೋ ಕಾಣಬಹುದಿತ್ತು.

ಈಗ ಕಾಣೆಯಾಗಿರುವ ಕಾಗೆಗಳು ಒಂದು ಕಾಲದಲ್ಲಿ ಜನರ ಜೀವನದ ಒಂದು ಭಾಗವಾಗಿತ್ತು. ಇಷ್ಟವಿರಲಿ, ಇಲ್ಲದಿರಲಿ ಅದನ್ನು ದೂರವಿಡುವಂತಿರಲಿಲ್ಲ.

## ನನ್ನ ಬಾಲ್ಯ ಕದ್ದ ಕಾಗೆಗಳು ೧೭೫

ಕಾಗೆಗಳು 'ಕಾ ಕಾ...' ಎಂದು ಮನೆಯ ಮಾಡಿನ ಮೇಲೆ ಕೂತು ದೊಡ್ಡದಾಗಿ ಕೂಗಾಡಿದರೆ 'ಅಯ್ಯಯ್ಯೋ..' ಮನೆಯಲ್ಲಿ ಯಾರದೋ ಸಾವು ಹತ್ತಿರ ಬಂತೆಂದು ಹೆದರಿಕೊಂಡು, ಕಂಡ ಕಂಡ ದೇವರಿಗೆಲ್ಲ ಹರಕೆ ಹೊತ್ತುಕೊಳ್ಳುತ್ತಿದ್ದ ಜನರಿಗೇನೂ ಕಡಿಮೆ ಇರಲಿಲ್ಲ. ಕಾಗೆಗಳು ಮನೆಯ ಮಾಡಿನ ಮೇಲೆ ಕೂತು ತಿಪ್ಪರಲಾಗ ಹಾಕಿದರೆ 'ಕಾಗೆ ಕೂಳು ಬಾಗುತ್ತಿದೆ, ಯಾರೋ ನೆಂಟರು ಬರುತ್ತಿದ್ದಾರೆ' ಎನ್ನುತ್ತಾ ಅನ್ನ ಮಾಡಲು ಒಂದು ಮುಷ್ಟಿ ಅಕ್ಕಿ ಜಾಸ್ತಿ ಹಾಕುವವರೂ ಇದ್ದರು. ಪಾಠ ಪುಸ್ತಕ ತೆರೆದರೂ ಕಾಗೆಗಳೇ, ಒಂದನೇ ಕ್ಲಾಸಿನ ೮ನೇ ಪಾಠದಲ್ಲಿ ಒಡಕು ಮಡಿಕೆಯ ಚೂರು ನೀರಿಗೆ ಕಲ್ಲು ಹಾಕಿ ನೀರು ಮೇಲೆ ಬಂದಾಗ ಕೊಕ್ಕಿನಿಂದ ನೀರು ಕುಡಿಯುವ ಕಾಗೆ, ಎರಡನೆಯ ಕ್ಲಾಸಿನ ೫ನೇ ಪಾಠದಲ್ಲಿ ಬಾಯಲ್ಲಿ ತಿಂಡಿ ಇಟ್ಟುಕೊಂಡು ಮರದ ಮೇಲೆ ಕೂತ ಕಾಗೆ 'ಕಾ' ಎಂದಾಗ ಬಾಯಿಂದ ಬಿದ್ದ ತಿಂಡಿಯ ಚೂರನ್ನು ನಾಯಿ ಕಚ್ಚಿಕೊಂಡು ಹೋದ ಕಥೆ. ಹೀಗೆ ಒಂದೇ ಎರಡೇ... ಪೇಪರ್ ತೆಗೆದರೆ ಆರ್.ಕೆ.ಲಕ್ಷ್ಮಣರ ವ್ಯಂಗ್ಯ ಚಿತ್ರದಲ್ಲಿ ಇಣುಕುವ ಕಾಗೆ. ಕಡೆಗೆ ತೀರಿಕೊಂಡ ಮಾತಾ-ಪಿತೃಗಳೂ ಕಾಗೆ ರೂಪದಲ್ಲಿ ಬರುತ್ತಾರೆ ಎಂದು ನಂಬುವ ಜನರು.

ಕಾಗೆಗಳು ಕೆಲವೊಮ್ಮೆ ಸ್ಮಾರ್ಟ್ ಅನಿಸುತ್ತಿತ್ತು, ಸತ್ತ ಪ್ರಾಣಿಗಳ ಸುತ್ತ ಹಾರಾಡುತ್ತ ತನ್ನದೇ ಬಾಳೆಯಲ್ಲಿ ತನ್ನ ಬಂಧುಗಳಿಗೆ ಸುದ್ದಿ ಹೇಳುವುದನ್ನು ನೋಡಿದಾಗ ಆಕಾಶವಾಣಿಯ ಆವಿಷ್ಕಾರ ಇವರನ್ನು ನೋಡಿಯೇ ಆಗಿರಬೇಕು ಅನ್ನಿಸುತ್ತದೆ. ನಾನು ನೋಡಿದ ಒಂದು ಕಾಗೆ, ಪಾಠದಲ್ಲಿ ಓದಿದ ಹಾಗೆ ಬಾಯಾರಿಕೆ ಆದಾಗ ಮಡಿಕೆಗೆ ಕಲ್ಲು ಹಾಕಿ ನೀರು ಮೇಲೆ ಬಂದಾಗ ಕುಡಿಯುವುದನ್ನು ಬಿಟ್ಟು, ನಳ್ಳಿಯಿಂದ ಬರುವ ಹನಿ ಹನಿ ನೀರನ್ನು ಕೊಕ್ಕಿನಿಂದ ಕುಡಿಯುತ್ತಿತ್ತು, ಹೇಗಿದೆ ಉಪಾಯ? ಮಳೆಗಾಲದಲ್ಲಿ ಜೋರಾಗಿ ಬೀಸುವ ಮಳೆ ಗಾಳಿಗೆ ನಾವು ಕೊಡೆ ಹಿಡಿದರೂ

ಒದ್ದೆ ಮುದ್ದೆಯಾಗಿ ನಡುಗುತ್ತಿದ್ದರೆ ಕಾಗೆಗಳು ಮಾತ್ರ ಮಳೆಯಲ್ಲಿ ನೆಂದರೂ ಪಟಪಟನೆ ತಲೆ ತಿರುಗಿಸಿ ಫ್ರೆಶ್ ಆಗುತ್ತಿದ್ದವು.

ಮಧ್ಯಮ ಅಥವಾ ದೊಡ್ಡ ಗಾತ್ರದ ಹಕ್ಕಿಗಳೆಂದು ಗುರುತಿಸಬಹುದಾದ ಕಪ್ಪು ಬಣ್ಣದ ಕಾಗೆಗಳು ಅನಿಳದ ಲಕ್ಷಣವೆಂದು ಎಲ್ಲರೂ ತಿರಸ್ಕರಿಸಿ, ಅದರ ಸ್ವರ ಕೇಳಿದಾಗಲೆಲ್ಲಾ ದೂರ ಓಡಿಸುತ್ತಿದ್ದರು. ಹಾಗೆ ಓಡುವ ಕಾಗೆಗಳು ಚಿಕ್ಕ ಮಕ್ಕಳ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದವು. ಚಿಕ್ಕ ಮಕ್ಕಳು ಕೈಯಲ್ಲಿ ತಿಂಡಿ ಹಿಡಿದುಕೊಂಡು ಹೊರಗೆ ಬಂದರೆ ಅತ್ಯಂತ ಮೇಲೆ ಹಾರಿಕೊಂಡಿರುವ ಕಾಗೆಗಳಿಗೂ ಕ್ಷಣ ಮಾತ್ರದಲ್ಲಿ ತಿಳಿದು ಮೆಲ್ಲನೆ ಕೆಳಗೆ ಬಂದು ಮಕ್ಕಳ ತಲೆಯ ಮೇಲೆ ಸುತ್ತಿ ಪಕ್ಕನೆ ಮಕ್ಕಳ ಕೈಯಲ್ಲಿರುವ ತಿಂಡಿಯನ್ನು ಎಗರಿಸಿ ಒಂದೇ ನೆಗೆತಕ್ಕೆ ಆಕಾಶದತ್ತ ಹಾರುತ್ತಿದ್ದವು. ಮಕ್ಕಳೋ ಕಾಗೆಯನ್ನು ಅತೀ ಹತ್ತಿರದಿಂದ ಕಂಡ ಹೆದರಿಕೆಯಿಂದ ಮತ್ತು ಕೈಯಲ್ಲಿದ್ದ ತಿಂಡಿ ಹೋದ ದುಃಖದಲ್ಲಿ ಗಟ್ಟಿಯಾಗಿ ಕಿರುಚಿಕೊಳ್ಳುತ್ತಿದ್ದರೆ, ಆ ಕಾಗೆಗಳು ಮಾತ್ರ ದೂರದಲ್ಲಿ ಮರದ ಮೇಲೆ ಕೂತು ಮಕ್ಕಳ ಕೈಯಿಂದ ಕಸಿದ ತಿಂಡಿಯನ್ನು ಕಾಲಲ್ಲಿ ಹಿಡಿದು 'ಕಾ ಕಾ' ಎನ್ನುತ್ತ ಮುಸಿ ಮುಸಿ ನಗುತ್ತಿದ್ದವು.



ಕಾಗೆ ಬುದ್ಧಿವಂತ ಪಕ್ಷಿಯೋ, ಹೆಡ್ಡ ಪಕ್ಷಿಯೋ ಗೊತ್ತಿಲ್ಲ, ಆದರೆ ಪರೋಪಕಾರಿಯಂತೂ ಹೌದು, ಸೋಂಬೇರಿ ಕೋಗಿಲೆಗಳು ಕಾಗೆಯ ಗೂಡಿನಲ್ಲಿ ಮೊಟ್ಟೆ ಇಡುತ್ತಿದ್ದವು. ಕಾಗೆಗಳು ತಮ್ಮದೇ ಮೊಟ್ಟೆಗಳೆಂದು ಶಾಖ ಕೊಡುತ್ತಿದ್ದವು. ಇಲ್ಲವೇ ಗೊತ್ತಾದರೂ ಹೋದರೆ ಹೋಗಲಿ ಎನ್ನುವ ಪರೋಪಕಾರಿ ಬುದ್ಧಿಯೋ ಗೊತ್ತಿಲ್ಲ. ಅಂತೂ ಮರಿಗಳು ಹೊರ ಬರುತ್ತಿದ್ದವು. ಕೃತಘ್ನ ಕೋಗಿಲೆ ಮರಿಗಳು ಮಾತ್ರ ಸ್ವಲ್ಪ ದೊಡ್ಡವಾಗುತ್ತಲೇ ಸುಂದರ ರಾಗ ತೆಗೆದು ಕಾಗೆಯಮ್ಮನಿಗೆ 'ಟಾ ಟಾ' ಹೇಳಿ ಹಾರಿ ಹೋಗುತ್ತವೆ. ಇದು ಕಾಗೆಗಳಿಗೆ ಗೊತ್ತಾದರೂ ಮತ್ತೊಂದು ಸಲ ಕೋಗಿಲೆ ಮೊಟ್ಟೆ ಇಡಲು ಬಂದಾಗ ದೂರ ಓಡಿಸುತ್ತಿರಲಿಲ್ಲ.

ಇನ್ನು ಮನುಷ್ಯನಿಗೆ ಸಿಕ್ಕಿದ್ದನ್ನೆಲ್ಲ ಒಬ್ಬನೇ ತಿನ್ನುವ ಬುದ್ಧಿಯಾದರೆ ಕಾಗೆಗಳು ಹಂಚಿ ತಿನ್ನುವ ಬುದ್ಧಿ ಉಳ್ಳವು. ತಿನ್ನುವ ಪದಾರ್ಥಕ್ಕೆ ಬಾಯಿ ಇಡುವ ಮೊದಲು 'ಕಾ ಕಾ' ಎಂದು ಕೂಗಿ ತನ್ನ ಬಂಧುಗಳಿಗೆ ವಿಳಯ ತಿಳಿಸಿಯೇ ತಿನ್ನುತ್ತಿದ್ದವು.

ಬಾಲ್ಯದಲ್ಲಿ ನಾನಂತೂ ಕಡು ಕಾಗೆ ದ್ವೇಷಿ, ತಿಂಗಳಿಗೆ ಮೂರು ದಿನ ಮನೆಯ ಒಳಗೆ ಬಾರದೆ ಹೊರ ಕೋಣೆಯಲ್ಲೇ ಇರುತ್ತಿದ್ದಳು ಅಮ್ಮ. ಅಪ್ಪನನ್ನು ಕೇಳಿದರೆ, 'ಕಾಗೆ ಬಂದು ಅಮ್ಮನನ್ನು 'ಮುಟ್ಟಿ' ಹೋಯಿತು, ಅಮ್ಮ ಮಡಿ ಮಾಡಲು ಹೊರ ಕೋಣೆಯಲ್ಲಿದ್ದಾಳೆ' ಎನ್ನುತ್ತಿದ್ದರು ಅಪ್ಪಯ್ಯ, ಕಾಗೆಗಳು ಬಂದು ಅಮ್ಮನನ್ನೇ ಏಕೆ ಮುಟ್ಟುತ್ತವೆ, ಕಾಗೆ ಮುಟ್ಟಿದರೆ ಮಡಿ ಏಕೆ ಮಾಡಿಕೊಳ್ಳಬೇಕು? ಗೊತ್ತಿಲ್ಲ! ನನಗಂತೂ ಆ ಮೂರು ದಿನ ಅಮ್ಮನನ್ನು

ಮುಟ್ಟುವಂತಿಲ್ಲ, ಅಮ್ಮನ ಸೆರಗಿನ ಮುಸುಕಿನಲ್ಲಿ ಅಡಗುವಂತಿಲ್ಲ. ಅಮ್ಮನಿಂದ ನನ್ನನ್ನು ದೂರ ಮಾಡಿದ ಕಾಗೆಯನ್ನು ನಾನು ಪ್ರೀತಿಸುವುದುಂಟೇ? ನಾನು ಹೈಸ್ಕೂಲಿನಲ್ಲಿದ್ದಾಗ ಕಾಗೆ ಮುಟ್ಟುವ ಮುಟ್ಟಿನ ಗುಟ್ಟು ಗೊತ್ತಾಯಿತು.

ಬಾಲ್ಯದಲ್ಲಿ ನಡೆದ ಘಟನೆಯೊಂದು ಇನ್ನೂ ಹಸಿರಾಗಿದೆ. ನಮ್ಮ ಪಕ್ಕದ ಮನೆಯ ಚಿತ್ರಕ್ಕನನ್ನು ನಾನು ತುಂಬಾ ಹಚ್ಚಿಕೊಂಡಿದ್ದೆ, ಸದಾ ನಗುನಗುತ್ತಿದ್ದ ಚಿತ್ರಕ್ಕ ಬುಟ್ಟಿ ಹೆಣೆಯುವುದಿರಲಿ, ಹೂ ಕಟ್ಟುವುದಿರಲಿ ಎಲ್ಲದರಲ್ಲಿಯೂ ಚುರುಕು. ಕಲಿತದ್ದೂ ಇನ್ನೂ ಬಾಕಿ ಉಳಿಯುವ ಕಲೆಗಳಿದ್ದವು ಚಿತ್ರಕ್ಕನ ಹತ್ತಿರ. ನಾನು ಅವರ ಹತ್ತಿರ ಹಾಡು ಕಲಿಯುತ್ತಿದ್ದೆ. ಒಪ್ಪವಾಗಿ ಡ್ರೆಸ್ ಮಾಡಿಕೊಂಡು ಕಾಲೇಜಿಗೆ ಹೋಗುತ್ತಿದ್ದ ಚಿತ್ರಕ್ಕನಿಗೆ ಒಮ್ಮಿಂದೊಮ್ಮೆಗೇ ಗೃಹಬಂಧನ ಶುರುವಾಯಿತು. ಮುಖದಲ್ಲಿ ನಗು ಮಾಸಿ ಸದಾ ಅಳತೊಡಗಿದರು. ದೊಡ್ಡವರ ಮಾತಿನಿಂದ ತಿಳಿದು ಬಂದದ್ದು ಚಿತ್ರಕ್ಕ ಯಾವುದೋ ಹುಡುಗನನ್ನು ಪ್ರೀತಿಸುತ್ತಿದ್ದಾರೆ. ಅವರನ್ನೇ ಮದುವೆಯಾಗಲು ಹಠ ಹಿಡಿಯುತ್ತಿದ್ದಾರೆಂದು ಗೊತ್ತಾಯಿತು. ಎಲ್ಲರೂ ಒಂದು ದಿನ ಮದುವೆಯಾಗುವುದಾದರೆ ಚಿತ್ರಕ್ಕನೇಕೆ ಮದುವೆಯಾಗಬಾರದು, ಅದೂ ಅವರಿಟ್ಟ ಪಟ್ಟ ಹುಡುಗನೊಂದಿಗೆ ಅನಿಸಿತು ನನಗೆ, ಅದನ್ನೇ ಅಮ್ಮನಿಗೆ ಹೇಳಿದರೆ, 'ಕಾಗೆ ಮುಟ್ಟಿದ ಹುಡುಗನನ್ನು ಚಿತ್ರ ಪ್ರೀತಿಸುತ್ತಿದ್ದಾಳೆ' ಎಂದರು.



ಕಾಗೆ ಬುದ್ಧಿವಂತ ಪಕ್ಷಿಯೋ, ಹೆಡ್ಡ ಪಕ್ಷಿಯೋ ಗೊತ್ತಿಲ್ಲ, ಆದರೆ ಪರೋಪಕಾರಿಯಂತೂ ಹೌದು, ಸೋಂಬೇರಿ ಕೋಗಿಲೆಗಳು ಕಾಗೆಯ ಗೂಡಿನಲ್ಲಿ ಮೊಟ್ಟೆ ಇಡುತ್ತಿದ್ದವು. ಕಾಗೆಗಳು ತಮ್ಮದೇ ಮೊಟ್ಟೆಗಳೆಂದು ಶಾಖ ಕೊಡುತ್ತಿದ್ದವು. ಇಲ್ಲವೇ ಗೊತ್ತಾದರೂ ಹೋದರೆ ಹೋಗಲಿ ಎನ್ನುವ ಪರೋಪಕಾರಿ ಬುದ್ಧಿಯೋ ಗೊತ್ತಿಲ್ಲ. ಅಂತೂ ಮರಿಗಳು ಹೊರ ಬರುತ್ತಿದ್ದವು. ಕೃತಘ್ನ ಕೋಗಿಲೆ ಮರಿಗಳು ಮಾತ್ರ ಸ್ವಲ್ಪ ದೊಡ್ಡವಾಗುತ್ತಲೇ ಸುಂದರ ರಾಗ ತೆಗೆದು ಕಾಗೆಯಮ್ಮನಿಗೆ 'ಟಾ ಟಾ' ಹೇಳಿ ಹಾರಿ ಹೋಗುತ್ತವೆ. ಇದು ಕಾಗೆಗಳಿಗೆ ಗೊತ್ತಾದರೂ ಮತ್ತೊಂದು ಸಲ ಕೋಗಿಲೆ ಮೊಟ್ಟೆ ಇಡಲು ಬಂದಾಗ ದೂರ ಓಡಿಸುತ್ತಿರಲಿಲ್ಲ.

ಇನ್ನು ಮನುಷ್ಯನಿಗೆ ಸಿಕ್ಕಿದ್ದನ್ನೆಲ್ಲ ಒಬ್ಬನೇ ತಿನ್ನುವ ಬುದ್ಧಿಯಾದರೆ ಕಾಗೆಗಳು ಹಂಚಿ ತಿನ್ನುವ ಬುದ್ಧಿ ಉಳ್ಳವು. ತಿನ್ನುವ ಪದಾರ್ಥಕ್ಕೆ ಬಾಯಿ ಇಡುವ ಮೊದಲು 'ಕಾ ಕಾ' ಎಂದು ಕೂಗಿ ತನ್ನ ಬಂಧುಗಳಿಗೆ ವಿಷಯ ತಿಳಿಸಿಯೇ ತಿನ್ನುತ್ತಿದ್ದವು.

ಬಾಲ್ಯದಲ್ಲಿ ನಾನಂತೂ ಕಡು ಕಾಗೆ ದ್ವೇಷಿ, ತಿಂಗಳಿಗೆ ಮೂರು ದಿನ ಮನೆಯ ಒಳಗೆ ಬಾರದೆ ಹೊರ ಕೋಣೆಯಲ್ಲೇ ಇರುತ್ತಿದ್ದಳು ಅಮ್ಮ. ಅಪ್ಪನನ್ನು ಕೇಳಿದರೆ, 'ಕಾಗೆ ಬಂದು ಅಮ್ಮನನ್ನು 'ಮುಟ್ಟಿ' ಹೋಯಿತು, ಅಮ್ಮ ಮಡಿ ಮಾಡಲು ಹೊರ ಕೋಣೆಯಲ್ಲಿದ್ದಾಳೆ' ಎನ್ನುತ್ತಿದ್ದರು ಅಪ್ಪಯ್ಯ, ಕಾಗೆಗಳು ಬಂದು ಅಮ್ಮನನ್ನೇ ಏಕೆ ಮುಟ್ಟುತ್ತವೆ,

ಕಾಗೆ ಮುಟ್ಟಿದರೆ ಮಡಿ ಏಕೆ ಮಾಡಿಕೊಳ್ಳಬೇಕು? ಗೊತ್ತಿಲ್ಲ! ನನಗಂತೂ ಆ ಮೂರು ದಿನ ಅಮ್ಮನನ್ನು ಮುಟ್ಟುವಂತಿಲ್ಲ, ಅಮ್ಮನ ಸೆರಗಿನ ಮುಸುಕಿನಲ್ಲಿ ಅಡಗುವಂತಿಲ್ಲ. ಅಮ್ಮನಿಂದ ನನ್ನನ್ನು ದೂರ ಮಾಡಿದ ಕಾಗೆಯನ್ನು ನಾನು ಪ್ರೀತಿಸುವುದುಂಟೇ? ನಾನು ಹೈಸ್ಕೂಲಿನಲ್ಲಿದ್ದಾಗ ಕಾಗೆ ಮುಟ್ಟುವ ಮುಟ್ಟಿನ ಗುಟ್ಟು ಗೊತ್ತಾಯಿತು.

ಬಾಲ್ಯದಲ್ಲಿ ನಡೆದ ಘಟನೆಯೊಂದು ಇನ್ನೂ ಹಸಿರಾಗಿದೆ. ನಮ್ಮ ಪಕ್ಕದ ಮನೆಯ ಚಿತ್ರಕ್ಕನನ್ನು ನಾನು ತುಂಬಾ ಹಚ್ಚಿಕೊಂಡಿದ್ದೆ, ಸದಾ ನಗುನಗುತ್ತಿದ್ದ ಚಿತ್ರಕ್ಕ ಜುಟ್ಟಿ ಹೆಣೆಯುವುದಿರಲಿ, ಹೂ ಕಟ್ಟುವುದಿರಲಿ ಎಲ್ಲದರಲ್ಲಿಯೂ ಚುರುಕು. ಕಲಿತದ್ದೂ ಇನ್ನೂ ಬಾಕಿ ಉಳಿಯುವ ಕಲೆಗಳಿದ್ದವು ಚಿತ್ರಕ್ಕನ ಹತ್ತಿರ. ನಾನು ಅವರ ಹತ್ತಿರ ಹಾಡು ಕಲಿಯುತ್ತಿದ್ದೆ. ಒಪ್ಪವಾಗಿ ಡ್ರೆಸ್ ಮಾಡಿಕೊಂಡು ಕಾಲೇಜಿಗೆ ಹೋಗುತ್ತಿದ್ದ ಚಿತ್ರಕ್ಕನಿಗೆ ಒಮ್ಮಿಂದೊಮ್ಮೆಗೇ ಗೃಹಬಂಧನ ಶುರುವಾಯಿತು. ಮುಖದಲ್ಲಿ ನಗು ಮಾಸಿ ಸದಾ ಅಳತೊಡಗಿದರು. ದೊಡ್ಡವರ ಮಾತಿನಿಂದ ತಿಳಿದು ಬಂದದ್ದು ಚಿತ್ರಕ್ಕ ಯಾವುದೋ ಹುಡುಗನನ್ನು ಪ್ರೀತಿಸುತ್ತಿದ್ದಾರೆ. ಅವರನ್ನೇ ಮದುವೆಯಾಗಲು ಹಠ ಹಿಡಿಯುತ್ತಿದ್ದಾರೆಂದು ಗೊತ್ತಾಯಿತು. ಎಲ್ಲರೂ ಒಂದು ದಿನ ಮದುವೆಯಾಗುವುದಾದರೆ ಚಿತ್ರಕ್ಕನೇಕೆ ಮದುವೆಯಾಗಬಾರದು, ಅದೂ ಅವರಿಟ್ಟ ಪಟ್ಟ ಹುಡುಗನೊಂದಿಗೆ ಅನಿಸಿತು ನನಗೆ, ಅದನ್ನೇ ಅಮ್ಮನಿಗೆ ಹೇಳಿದರೆ, 'ಕಾಗೆ ಮುಟ್ಟಿದ ಹುಡುಗನನ್ನು ಚಿತ್ರ ಪ್ರೀತಿಸುತ್ತಿದ್ದಾಳೆ" ಎಂದರು.



ಚಿತ್ರಕ್ಕನನ್ನು ನೋಡದೆ ಒಂದೆರಡು ತಿಂಗಳಾಯಿತು. ಮತ್ತೆ ಕೆಲವು ದಿನಗಳಲ್ಲಿ ಪಕ್ಕದ ಮನೆಯಿಂದ ದೊಡ್ಡದಾಗಿ ಅಳು, ಗಲಾಟೆ ಕೇಳಿ ಬಂತು. ದೊಡ್ಡವರು ಅಲ್ಲಿಗೆ ಹೋಗಬೇಡವೆಂದರೂ ಎಲ್ಲರ ಕಣ್ಣಪ್ಪಿಸಿ ಪಕ್ಕದ ಮನೆಗೆ ಹೋದೆ. ನೋಡಿದರೆ ಅಲ್ಲಿ ನನ್ನ ಪ್ರೀತಿಯ ಚಿತ್ರಕ್ಕನನ್ನು ಅಂಗಳದಲ್ಲಿ ಮಲಗಿಸಿದ್ದರು. ಅವರಮ್ಮ ಸರೋಜತ್ತೆ ನನ್ನನ್ನು ತಬ್ಬಿಕೊಂಡು, 'ನಿನ್ನ ಚಿತ್ರಕ್ಕ ಇನ್ನಿಲ್ಲ ಕಂದ...' ಎಂದರು. ನನಗೂ ಅಳು ಬಂತು. ನನ್ನ ಚಿತ್ರಕ್ಕ ತಿರುಗಿ ಬರುವುದಿಲ್ಲವೆಂದು ಗೊತ್ತಾಯಿತು. ಮದುವೆಗೆ ಅಡ್ಡ ಬಂದಿದ್ದು ಹುಡುಗನ ಜಾತಿಯೇ ಹೊರತು ಕಪ್ಪು ಕಾಗೆಯಲ್ಲ ಎಂದು ಅರಿವಾಗಿದ್ದು ಹೈಸ್ಕೂಲ್ ಸೇರಿಕೊಂಡ ಮೇಲೆ, ಪ್ರೀತಿಪ್ರೇಮದ ಬಿಸುಪು ಅರಿವಾದದ್ದು ಕಾಲೇಜಿನ ಮೆಟ್ಟಿಲು ಹತ್ತಿದಾಗ.

ಕಾಗೆಗಳು ಸಿಕ್ಕಿದ್ದನ್ನು ಕಬಳಿಸುವುದು ಮಾತ್ರ ಅಲ್ಲ, ನನ್ನ ಬೇಸಿಗೆ ರಜಾವನ್ನೂ ಕಬಳಿಸುತ್ತಿದ್ದವು. ಏಪ್ರಿಲ್, ಮೇ ಬಂತೆಂದರೆ ಶಾಲೆಗೆ ರಜೆ. ನೆತ್ತಿ ಸುಡುವ ಬಿಸಿಲು, ಬಿಟ್ಟಿಯಾಗಿ ಸಿಗುವ ಸೂರ್ಯನ ಶಾಖವನ್ನೇಕೆ ಬಿಡಬೇಕೆಂದು ಮನೆಯವರು ಹಪ್ಪಳ, ಸಂಡಿಗೆ ಮಾಡುವ ಕೆಲಸದಲ್ಲಿ ತೊಡಗಿ ಮನೆ ಕಾರ್ಖಾನೆಯಾಗುತ್ತಿತ್ತು. ಇಡೀ ವರ್ಷಕ್ಕಾಗುವಷ್ಟು ಡಬ್ಬಿಗಟ್ಟಲೆ ಹಪ್ಪಳ, ಸಂಡಿಗೆ ಮಾಡಿ ಮನೆಯ ಅಟ್ಟ ಏರುತ್ತಿದ್ದವು. ಮೊದಲಿನಿಂದಲೂ ಆಟಪಾಠ

ಗಂಡು ಮಕ್ಕಳಿಗೆ, ಮನೆಗೆಲಸ ಹೆಣ್ಣು ಮಕ್ಕಳಿಗೆ ಎನ್ನುವ ನಿಯಮವನ್ನು ನಮ್ಮ ಸಮಾಜ ಮಾಡಿಕೊಂಡಿತ್ತು. ಶಾಲೆಗೆ ರಜೆ ಸಿಕ್ಕಿದಾಗ ಹುಡುಗರು ಹುಡುಗಾಟಿಕೆಯಲ್ಲಿದ್ದರೆ ಹೆಣ್ಣುಮಕ್ಕಳು ಹಪ್ಪಳ, ಸಂಡಿಗೆಯ ಕೆಲಸದಲ್ಲಿ ಮನೆಯ ಹಿರಿಯರಿಗೆ ಸಹಾಯ ಮಾಡಬೇಕು. ಗೆಣಸಿನ ಹಪ್ಪಳವಾದರೆ ಗೆಣಸಿನ ಸಿಪ್ಪೆ ತೆಗೆಯಬೇಕು, ಹಲಸಿನ ಹಪ್ಪಳವಾದರೆ ತೊಳೆ ಬಿಡಿಸಬೇಕು, ಉದ್ದಿನ ಹಪ್ಪಳವಾದರೆ ಲಟ್ಟಿಸಬೇಕು, ಸಂಡಿಗೆಯಾದರೆ ಅಮ್ಮನೊಂದಿಗೆ ಸಂಡಿಗೆ ಇಡಬೇಕು... ಇಕ್ಕೇ ಮುಗಿಯುವುದಿಲ್ಲ, ಒಣಗಿಸಿದ ಹಪ್ಪಳ, ಸಂಡಿಗೆಗೆ ಕಾಗೆ ಬರದಂತೆ ಕಾಯುವ ಕೆಲಸವೂ ಹೆಣ್ಣು ಮಕ್ಕಳದ್ದೇ ಆಗಿತ್ತು. ಕಾಗೆ ಓಡಿಸಲು ನಮ್ಮಲ್ಲೂ ರಣತಂತ್ರವಿದೆ. ಬಿಸಿಲಲ್ಲಿ ಒಣಗಿಸಿದ ಹಪ್ಪಳ, ಸಂಡಿಗೆಗೆ ನಾಲ್ಕು ಮೂಲೆಯಲ್ಲಿ ಇಟ್ಟಿಗೆ ಇಟ್ಟು ಚೌಕಾಕಾರದಲ್ಲಿ ಹಗ್ಗ ಸುತ್ತಿ, ಮಧ್ಯೆ ಅಡ್ಡಕ್ಕೆ ಹಗ್ಗ ಕಟ್ಟಿದರೆ ಸ್ವಲ್ಪ ಹೊತ್ತು ಕಾಗೆಗಳು ದೂರ ಉಳಿಯುತ್ತವೆ. ಸರಿ, ಕಾಗೆಗಳು ದೂರವಾದವೆಂದು ಆಡಲೋ, ಮರ ಹತ್ತಲೋ ಹೋದರೆ ಕಾಗೆಗಳಿಗೆ ಇದರ ಸುಳಿವು ಸಿಕ್ಕಿ ವಾಯು ವೇಗದಲ್ಲಿ ಬರ್‍ರನೆ ಹಾರಿ ಬಂದು ಹಪ್ಪಳ ಎಗರಿಸಿಕೊಂಡು ಹೋಗುತ್ತಿದ್ದವು. ಈ ಸುದ್ದಿ ಮನೆಯ ಒಳಗಿರುವವರಿಗೂ ಮುಟ್ಟುತ್ತಿತ್ತು. “ಈ ಮಕ್ಕಳಿಗೆ ಜವಾಬ್ದಾರಿಯೇ ಇಲ್ಲಪ್ಪ, ಕುಣಿಯೂದೊಂದೇ ಗೊತ್ತು” . ಇಷ್ಟು ಹೊತ್ತು ಕಷ್ಟಪಟ್ಟು ಮಾಡಿದ ಕೆಲಸ ಕಾಗೆಯ ಪಾಲಾಗತೊಡಗಿದಾಗ ಬೈಯುತ್ತಿದ್ದಳು ಅಮ್ಮ ಕೇಳಲಾಗದ ನಾವು ಪುನಃ ಕೋಲು ಹಿಡಿದುಕೊಂಡು ದ್ವೇಷದಿಂದ 'ಕಾ ಕಾ' ಎಂದು ಕಿರಿಚಿಕೊಂಡು ಮತ್ತೆ ಕಾಗೆ ಕಾಯುವ ಕೆಲಸಕ್ಕೆ ಹಾಜರಾಗುತ್ತಿದ್ದೆವು, ಹಪ್ಪಳ, ಸಂಡಿಗೆಗಿಂತ ದಿನವಿಡೀ ಕಾಗೆ ಕಾಯುವ ಕೆಲಸ ಮಾತ್ರ ಅತ್ಯಂತ ಬೇಜಾರು ತರುತ್ತಿತ್ತು. 'ಸೋಂಬೇರಿ, ಕತ್ತೆ ಕಾಯುವ ಕೆಲಸಕ್ಕೆ ಲಾಯಕ್ಕು' ಎಂಬ ಆಡು ಮಾತು ಎಲ್ಲೋ ಕೇಳಿದ ನೆನಪು.



ನಾನಂತೂ ಸೋಂಬೇರಿಯಲ್ಲದಿದ್ದರೂ ಕಾಗೆ ಕಾಯುವ ಕೆಲಸದಲ್ಲಿ ನಿಪುಣಳಾಗುತ್ತ ಬಂದೆ, ಕಾಗೆಯ ಬಗ್ಗೆ ಪ್ರಬಂಧ ಬರೆಯಲೂ ಮುಂದಾದೆ.

ಕ್ಯಾಲೆಂಡರಿನಲ್ಲಿರುವ ಇಸವಿ ಮಾತ್ರ ಬದಲಾಗುವುದಿಲ್ಲ, ಜೀವನದಲ್ಲೂ ಹತ್ತಾರು ಬದಲಾವಣೆಗಳು, ಆ ಬದಲಾವಣೆಗಳಿಂದಾಗಿ ಹತ್ತಿರವಾದದ್ದು ದೂರವಾಗಬಹುದು, ದೂರವಾದದ್ದು ಹತ್ತಿರವಾಗಬಹುದು. ಬಾಲ್ಯದಲ್ಲಿ ಕಾಗೆಯ ಮೇಲಿದ್ದ ನನ್ನ ಸಿಟ್ಟು, ದ್ವೇಷ, ದುಃಖ, ಅಸಹಾಯಕತೆ...ಗಳು ಯಾವಾಗ ಕುತೂಹಲಕ್ಕೆ ತಿರುಗಿತೆಂದು ಗೊತ್ತಿಲ್ಲ. ದೊಡ್ಡವಳಾದಂತೆ ಕಪ್ಪು ಬಣ್ಣವನ್ನು ಪ್ರೀತಿಸತೊಡಗಿದೆ, ಕಾಗೆಯ 'ಕಾ ಕಾ' ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ.

ಕಾಗೆಯ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಹಲವು ಪುಸ್ತಕಗಳನ್ನು ತಿರುಗಿಸಿದೆ. ಇಂಟರ್‌ನೆಟ್ಟನ್ನು ಜಾಲಾಡಿದೆ. ಆಗಲೇ ಬೆಳಕಿಗೆ ಬಂದದ್ದು ಹಲವು ಆಶ್ಚರ್ಯದ ಸಂಗತಿಗಳು. ಅದನ್ನು ಅರಿಯುತ್ತಿದ್ದಂತೆ ನಾನು ಕಾಗೆಯನ್ನು

ಪ್ರೀತಿಸತೊಡಗಿದೆ. ಪ್ರಪಂಚದ ಹೆಚ್ಚಿನ ದೇಶಗಳಲ್ಲಿ ಕಾಣ ಸಿಗುವ ಹಾಗೂ ಅತ್ಯಂತ ಬುದ್ಧಿವಂತ ಪಕ್ಷಿ ಎಂಬ ಹೆಗ್ಗಳಿಕೆ, ಒಂದು ಕಾಲದಲ್ಲಿ ಅನಿಷ್ಟ ಎಂದು ಕರೆಸಿಕೊಂಡ ಹಾಗೂ ನಾನು ಅತ್ಯಂತ ದ್ವೇಷಿಸುತ್ತಿದ್ದ 'ಕಾಗೆಗಳಿಗೆ ತೊಂದರೆಗಳನ್ನು ನಿವಾರಿಸುವ ಗುಣ ಹೊಂದಿರುವ, ಉತ್ತಮ ಸಂಪರ್ಕ ನೈಪುಣ್ಯತೆಯಿರುವ ಪಕ್ಷಿ ಎಂಬ ಕೀರ್ತಿಯೂ ಕಾಗೆಗಿದೆ. ಇನ್ನು ನೆನಪಿನ ಶಕ್ತಿಯ ಬಗ್ಗೆ ಹೇಳುವುದಾದರೆ, ಒಮ್ಮೆ ನೋಡಿದ ಮನುಷ್ಯನ ಮುಖವನ್ನು ಅದು ಮತ್ತೆ ಮರೆಯುವುದಿಲ್ಲವಂತೆ. ಮೊದಮೊದಲು ಕಾಳು ಬೇಳೆಗಳನ್ನು ತಿನ್ನುವ ಕಾಗೆಗಳನ್ನು ಮನುಷ್ಯ ಮತ್ತು ಬೆಳೆಗಳ ಶತ್ರುಗಳೆಂದು ಭಾವಿಸಿದ್ದರೂ, ಈಗೀಗ ಬೆಳೆಗಳನ್ನು ನಾಶ ಮಾಡುವ ಕೀಟಗಳನ್ನು ತಿನ್ನುವುದರಿಂದ ಅದನ್ನು ರೈತನ ಮಿತ್ರ' ಎಂದೂ ಗುರುತಿಸಲಾಗಿದೆ. ಪರಿಸರದಲ್ಲಿ ಸತ್ತು ಬಿದ್ದಿರುವ ಪ್ರಾಣಿ, ಪಕ್ಷಿ, ಕಸಗಳನ್ನು ತಿಂದು ಪರಿಸರವನ್ನು ಸ್ವಚ್ಚವಾಗಿಡುವಲ್ಲಿ ಸಹಾಯ ಮಾಡುತ್ತದೆ. ಆಡು ಮುಟ್ಟದ ಗಿಡವಿಲ್ಲ, ಕಾಗೆ ತಿನ್ನದ ವಸ್ತುಗಳಿಲ್ಲ ಎಂದು ಗಾದೆಯನ್ನು ಮುಂದುವರಿಸಬಹುದೇನೋ. ಇಲ್ಲೆಲ್ಲಾ ಒಳ್ಳೆಯ ಗುಣವಿರುವ ಕಾಗೆಗಳನ್ನು ಜನರು ವೃಥಾ ದ್ವೇಷಿಸುತ್ತಿದ್ದಾರಲ್ಲಾ?

ಆದರೆ ನನಗೀಗ ಒಂದೇ ವ್ಯಥೆ, ಪರಿಸರ ಮಿತ್ರ ಎಂದು ಗುರುತಿಸಲಾದ ಕಾಗೆಗಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಮನುಷ್ಯ ತಿನ್ನುವ ಆಹಾರದಲ್ಲಿ ವಿಳದ ಅಂಶ ಜಾಸ್ತಿಯಾಗುತ್ತಿದಂತೆ ಮನುಷ್ಯನಿಗೆ ಎಲ್ಲಾ ತರಹದ ಕಾಯಿಲೆ ಕಸಾಲೆಗಳು ಬಂದವು. ಮನುಳ್ಯ ತಿಂದು ಬಿಸಾಡಿದ ಆಹಾರ, ಪೀಜಾ, ಬರ್ಗರ್... ತಿಂದ ಕಾಗೆಗಳ ಸಂತತಿಯೂ ನಾಶವಾಗುತ್ತಿದೆ.

ಎಲ್ಲಿ ಹೋದವು ನನ್ನ ಬಾಲ್ಯ ಕದ್ದ ಕಾಗೆಗಳು?!

**(ಪ್ರಜಾವಾಣಿ, ಸಂಕ್ರಾಂತಿ ವಿಶೇಷಾಂಕ, ಜನವರಿ ೨೦೦೭, ಬಹುಮಾನಿತ ಪ್ರಬಂಧ)**

## ೩೨. ದಂಡಿಗೆ ಹೆದರಲ್ಲ, ದಾಳಿಗೆ ಹೆದರಲ್ಲ...

### ವಸುಮತಿ ಉಡುಪ

'ದಂಡಿಗೆ ಹೆದರಲ್ಲ, ದಾಳಿಗೆ ಹೆದರಲ್ಲ, ತಟಕಪ್ಪ ಅಂದ್ರೆ ಮಾತ್ರಾ ಹೆದರಿ ಸಾಯೋ ಹಾಗಾಗುತ್ತೆ' ಸೋರುವ ಮನೆಯಲ್ಲಿದ್ದ ಮುದುಕಿಯೊಬ್ಬಳು ಹೀಗೆ ತನ್ನಷ್ಟಕ್ಕೆ ಗೊಣಗುಟ್ಟಿಕೊಂಡಿದ್ದನ್ನು ಮನೆಯ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಅವಳ ಹಸುವನ್ನು ಕದಿಯಲು ಬಂದ ಕಳ್ಳ, ಹಸುವನ್ನು ಎಳೆದೊಯ್ಯಲು ಹೊಂಚು ಹಾಕುತ್ತಿದ್ದ ಹೆಬ್ಬುಲಿ ಇಬ್ಬರೂ ಕೇಳಿಸಿಕೊಂಡಿದ್ದು, ತಟಕಪ್ಪನ ಹೆಸರಿಗೆ ಹೆದರಿದ್ದು, ಮುಂದೆ ಏನೇನಾಯ್ತು ಎನ್ನುವುದನ್ನು ರುಚಿಕಟ್ಟಾಗಿ ವಿವರಿಸುವ ಒಂದು ಜನಪದ ಕತೆ ಇದ್ದಕ್ಕಿದ್ದಂತೆ ನೆನಪಾಗಿದ್ದಕ್ಕೆ ಸಕಾರಣ ಉಂಟು. 'ಶನಿ' ಎನ್ನುವ ಅದೆಲ್ಲೋ ಇರುವ ಕಣ್ಣಿಗೆ ಕಾಣದ ಗ್ರಹಕ್ಕೆ ಒಂದು ಮಾನವ ರೂಪ ಕಲ್ಪಿಸಿ, ಮೇಷಾದಿ ದ್ವಾದಶ ರಾಶಿಗಳಲ್ಲಿ ಅವನು ಯಾವ ರಾಶಿಗೆ ಪ್ರವೇಶಿಸುತ್ತಾನೋ ಆ ರಾಶಿಗೆ ಮಾತ್ರವಲ್ಲ, ಅದರ ಹಿಂದುಮುಂದಿನ ರಾಶಿಗಳೂ ಸಾಡೇಸಾತಿಯ ದುಷ್ಪರಿಣಾಮಕ್ಕೆ

ಒಳಗಾಗುವುದರ ಕುರಿತು ಜ್ಯೋತಿಷ್ಯ ಜ್ಞಾನವಿಲ್ಲದ ಜನಸಾಮಾನ್ಯರಿಗೂ ವಿಶೇಷ ತಿಳಿವಳಿಕೆ ಬಂದುಬಿಟ್ಟಿದೆ. ತಮ್ಮ ರಾಶಿ ಯಾವುದು? ಎನ್ನುವ ಪ್ರಾಥಮಿಕ ಜ್ಞಾನ ಇದ್ದರೆ ಸಾಕು, ಯಾವ್ಯಾವ ರಾಶಿಗೆ ಶನಿ ಏನೇನು ಕೋಟಲೆ ಕೊಡುತ್ತಾನೆನ್ನುವುದರ ಕುರಿತು ಟೀವಿ ಚಾನಲ್‌ಗಳಲ್ಲಿ ದಿನವಿಡೀ ಕಾರ್ಯಕ್ರಮಗಳು, ಪರಿಹಾರಗಳು, ನಂತರದ ಭವಿಷ್ಯ ಮುಂತಾದುವುಗಳು ಚರ್ಚೆಯಾಗುತ್ತವೆ. ಭವಿಷ್ಯ ನಂಬದವನ ಕಿವಿಯೂ ನೆಟ್ಟಗಾಗಿ ಒಳ್ಳೆಯ ಭವಿಷ್ಯ ಕಿವಿಗಳ ಮೇಲೆ ಬಿದ್ದರೆ ಒಂಥರದ ಸಮಾಧಾನ. ಕೆಟ್ಟದ್ದಾಗಿದ್ದರೆ ಹೊಟ್ಟೆಯೊಳಗೆ ಪಕುಪಕು. ಪುಣ್ಯಾತ್ಮ ಶನಿ ಮಹಾರಾಯ (ಅಥವಾ ಪಾಪಾತ್ಮ ಎಂದರೆ ಹೆಚ್ಚು ಸಮಂಜಸವಾಗುತ್ತದೆಯಾ), ತಾನಿರುವ ಮತ್ತು ಅದರ ಹಿಂದುಮುಂದಿನ ರಾಶಿಗಳನ್ನು ಕಾಡಿಸಿದರೆ ಅದೊಂದು ವಿಧ. ಪರಪೀಡಕನಾದವನು ನಡುಮನೆಯಲ್ಲಿದ್ದರೆ ಆಚೀಚಿನ ಮನೆಯವರಿಗೆ ತಲೆಬೇನೆ ತಪ್ಪಿದ್ದಲ್ಲ ಅನ್ನುವಂತೆ ಏನೋ ಒಂದು ಕಿತಾಪತಿ ಮಾಡಿ ವಿಕೃತ ಸಂತೋಷ ಅನುಭವಿಸುತ್ತಾನೆ ಅನ್ನಬಹುದು. ಈ ಶನಿ ಹಾಗೂ ಅಲ್ಲ. ಜಾತಕದಲ್ಲಿ ಅವನು ಶುಭಸ್ಥಾನದಲ್ಲಿದ್ದರೆ ಹೆಚ್ಚು ಕಾಟ ಕೊಡುವುದಿಲ್ಲ ಎನ್ನುವ ಹೇಳಿಕೆ ಮಾತಿದ್ದರೂ ಅವನು ಯಾವ ರಾಶಿಯಿಂದ ಯಾವ ರಾಶಿಗೆ ಕಾಲಿಟ್ಟ ಅನ್ನುವುದು ಪ್ರಮುಖ ಕಾರಣವಾಗಿ ಶನಿ ಹೊಕ್ಕ ರಾಶಿಯವರು ಆತಂಕಕ್ಕೆ ಒಳಗಾಗುತ್ತಾರೆ. ಹೀಗೆ ಆತಂಕ ಪಡಿಸುವುದೂ ಕೂಡಾ ಶನಿ ಹಿಡಿದದ್ದರ ಪರಿಣಾಮ ಸ್ವರೂಪದ ಒಂದು ಸೂಚನೆಯಾಗಿರಬಹುದು ಎಂಬುದನ್ನು ಜಾತಕ, ಜ್ಯೋತಿಷ್ಯ ನಂಬದವರು ಸಾರಾಸಗಟಾಗಿ ಅಲ್ಲಗಳೆಯಬಹುದು. ಆ ಹಕ್ಕು ಅವರಿಗಿದೆ. ಅವರವರ ನಂಬಿಕೆ ಅವರವರದ್ದು. ಅದನ್ನು ಪ್ರಶ್ನಿಸುವುದು ಅಥವಾ ಹೀಗಳೆಯುವುದು ನನ್ನ ಲೇಖನದ ಉದ್ದೇಶ ಅಲ್ಲ. ಶನಿಗೆ, ಅವನ ವಾಹನಕ್ಕೆ - ನಂಬುವ ಜನ – ಯಾವ ಪರಿ



ಹೆದರುತ್ತಾರೆನ್ನುವುದನ್ನು ಹಂಚಿಕೊಳ್ಳುವುದಷ್ಟಕ್ಕೇ ಈ ಲೇಖನ ಸೀಮಿತ. ಮೊದಲು ಹೇಳಿದ ವಿಷಯಕ್ಕೆ ಬರುತ್ತೇನೆ. ಶನಿ ಕಾಲಿಟ್ಟ ರಾಶಿಯಿಂದ ನಾಲ್ಕನೆಯ ಮನೆಗೆ ಅರ್ಧಾಷ್ಟಮ ಶನಿ. ಐದನೆಯದಕ್ಕೆ ಪಂಚಮ ಶನಿ. 'ಪಂಚಮ ಶನಿ ಹೆಂಚಿನಲ್ಲಿ ನೀರು ಕುಡಿಸ್ತಾನೆ' ಎನ್ನುವ ನಂಬಿಕೆ ಶ್ರದ್ಧಾಳುಗಳಲ್ಲಿ ನಡುಕ ಹುಟ್ಟಿಸುವಂತೆ ಪ್ರಚಲಿತದಲ್ಲಿದೆ. ಇನ್ನು ಶನಿ ಇದ್ದಲ್ಲಿಂದ ಎಂಟನೆಯ ರಾಶಿಯವರಿಗೆ ಅಷ್ಟಮ ಶನಿ. ಮೊದಲೇ ಹೇಳಿದಂತೆ ಅವನಿರುವ ಹಿಂದುಮುಂದಿನ ರಾಶಿಯವರಿಗೆ ಸಾಡೇಸಾತಿ, ಶನೇಶ್ವರ ಅಂದರೆ - ಮಂದವಾಗಿ ಚಲಿಸುವವನು ಎನ್ನುವ ಅರ್ಥ. ಒಂದೊಂದು ರಾಶಿಯಲ್ಲಿ ಎರಡೂವರೆ ವರ್ಷ ಹಾಯಾಗಿ ಠಿಕಾಣಿ ಹೂಡುವುದು ಅವನ ಜಾಯಮಾನ. ಹಿಂದೊಂದು ಕಾಲದಲ್ಲಿ ಈ ಶನಿ ಮಹರಾಯ ಯಾವ ರಾಶಿಗೆ ವಕ್ಕರಿಸಿದ್ದಾನೆ ಎನ್ನುವ ಕುರಿತು ತಂತಮ್ಮ ಜಾತಕವನ್ನು ಆಸಕ್ತರು ಶಾಸ್ತ್ರ ಹೇಳುವ ಪಂಡಿತರಿಗೆ ತೋರಿಸಿ ಮನವರಿಕೆ ಮಾಡಿಕೊಳ್ಳಬೇಕಾದ ಪ್ರಮೇಯ ಇತ್ತು. ಆದರೆ ಈಗ ಆ ಪರಿಸ್ಥಿತಿ

ಉಲ್ಟಾ ಹೊಡೆದಿದೆ.  ನಿಮಗೆ ಬೇಕೋ, ಬೇಡವೋ, ಶನಿ ಯಾವ ದಿನ ಯಾವ ಹೊತ್ತಿಗೆ ಯಾವ ರಾಶಿಗೆ ಪ್ರವೇಶಿಸುತ್ತಾನೆ, ಅದರ ಪರಿಣಾಮ ನಿಮ್ಮವರೆಗೆ ಬರುತ್ತದೆಯಾ ಎನ್ನುವ ಕುರಿತಾದ ಮಾಹಿತಿ ಟೀವಿ ಹಾಕಿದರೆ ಸಾಕು, ನಿಮ್ಮ ಕಿವಿದೆರೆಗಳ ಮೇಲೆ ಬಿದ್ದೇ ಬೀಳುತ್ತದೆ. ಅವನು ನಿಮ್ಮ ಮನೆಗೆ ಅರ್ಥಾತ್ ರಾಶಿಗೆ ಬಿಜಯಂಗೈದಿದ್ದಾನೆಂದಾದರೆ ಎದೆಬಡಿತದ ಲಯ ತಪ್ಪುತ್ತದೆ, ಕ್ಷಣದ ಮಟ್ಟಿಗಾದರೂ. ಆಯ್ತು, ನೀವೇನೋ ಬಚಾವಾಗಿದ್ದೀರಿ. ನಿಮ್ಮ ಮನೆಮಂದಿಯಲ್ಲಿ ಯಾರ ಮೇಲಾದರೂ ಅವನ ದೃಷ್ಟಿ ಬಿದ್ದಿದೆಯೇ ಎಂದು ತಿಳಿದುಕೊಳ್ಳುವ ತವಕ. ಅಂತಾದ್ದೇನಿಲ್ಲದಿದ್ದರೆ ಸಮಾಧಾನದ ಸಣ್ಣ ನಿಟ್ಟುಸಿರು. ಒಂದೊಮ್ಮೆ ನಿಮ್ಮ ಕುಟುಂಬ ವಲಯದಲ್ಲಿ ಯಾರ ಮೇಲಾದರೂ ಶನಿಯ ದೃಷ್ಟಿ ಬಿದ್ದಿದೆಯಾ? ಗಾಬರಿ ಬೇಡ. ಎಲ್ಲಕ್ಕೂ ಪರಿಹಾರವಿದೆ. ಶನಿಗೆ ಶಾಂತಿ ಮಾಡಿ ಅವನನ್ನು ತೃಪ್ತಿಪಡಿಸಿ ಬಿಟ್ಟರೆ ಅವನು ನಿಮ್ಮ ತಂಟೆಗೆ ಬರುವುದಿಲ್ಲ, ಬಂದರೂ ಹೆಚ್ಚು ಪೀಡಿಸುವುದಿಲ್ಲ. ಈ ವಿಷಯ ಶನಿಯನ್ನು ನಂಬುವ ಎಲ್ಲಾ ನಿಷ್ಠಾವಂತರಿಗೂ ಗೊತ್ತಿದೆ ಅನ್ನುತ್ತಿರುವಾಗ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಒಂದು ಪದ್ಯ ನೆನಪಾಗುತ್ತಿದೆ,

"ನಂಬದಿರ್ದನು ತಂದೆ, ನಂಬಿದನು ಪ್ರಹ್ಲಾದ

ನಂಬಿಯೂ ನಂಬದಿರುವಿಬ್ಬಂದಿ ನೀನು

ಕಂಬದಲೋ, ಬಿಂಬದಲೋ, ಮೋಕ್ಷವವನಿಂಗಾಯ್ತು,

ಸಿಂಬಳದ ನೊಣ ನೀನು, ಮಂಕುತಿಮ್ಮ..'

ನಂಬುವವರ ಕುರಿತು ದೂಸರಾ ಮಾತಿಲ್ಲ. ಇಬ್ಬಂದಿಗಳೂ ಕೂಡಾ ಸುರಕ್ಷತೆಯ ದೃಷ್ಟಿಯಿಂದ ತಮ್ಮ ನಿಲುವಿನಲ್ಲಿ ಸ್ವಲ್ಪ ರಾಜಿ ಮಾಡಿಕೊಳ್ಳುತ್ತಾರೆ, ಅದೂ ಶನಿಯಂತವರ ವಿಷಯದಲ್ಲಿ ಜಾಗ್ರತೆ ವಹಿಸಿದರೆ ತಮಗೇ ಕ್ಷೇಮ ಎಂದು ಅವರ ಅಂತರಂಗ ಅವರಿಗೆ ಬೋಧನೆ ಮಾಡಿ ಬಿಡುತ್ತದೆ. ಪೇಟೆ, ಪಟ್ಟಣಗಳ ಹೆಚ್ಚಿನ ದೇವಸ್ಥಾನಗಳಲ್ಲಿ, ಅವು ಚಿಕ್ಕದಿರಲಿ ದೊಡ್ಡದಿರಲಿ, ಸಾಮೂಹಿಕ ಸತ್ಯನಾರಾಯಣ ಪೂಜೆ, ಸಂಕಷ್ಟಹರ ಚತುರ್ಥಿಗಳಂತೆ ಗ್ರಹಗಳು ತಾವಿರುವ ರಾಶಿಯಿಂದ ಮುಂದಿನ ಮನೆಗೆ ಅಡಿ ಇಟ್ಟಾಗ ಯಾವ್ಯಾವ ರಾಶಿಯವರಿಗೆ ತೊಂದರೆ, ತಾಪತ್ರಯ ಅಮರಿಕೊಳ್ಳುತ್ತದೋ ಆಯಾ ರಾಶಿಯವರಿಗೆ ಸಾಮೂಹಿಕ ಸಂಕಲ್ಪ ಮಾಡಿಸಿ ಶಾಂತಿ ಮಾಡಿಸುವ ಕ್ರಮ ಇತ್ತೀಚಿನ

ವರ್ಷಗಳಲ್ಲಿ ಮಾಮೂಲಾಗಿದೆ. ಜೇಬಿಗೆ ಹೆಚ್ಚಿನ ಹೊರೆ ಬೀಳದ ನೂರಿನ್ನೂರು ರೂಪಾಯಿಗಳ ವ್ಯವಹಾರ. ದುಡ್ಡು ಕೊಟ್ಟು, ಚೀಟಿ ಬರೆಸಿ, ಶಾಂತಿ ಮಾಡಿಸಿ ನೆಮ್ಮದಿ ಕಂಡುಕೊಳ್ಳುತ್ತಾರೆ ನಂಬುವ ಮಂದಿ, ಬೇರೆ ಗ್ರಹಗಳು ಎಲ್ಲಿಗೆ ಬಂದರೂ, ಎಲ್ಲಿಗೆ ಹೋದರೂ, ಹೆಚ್ಚು ತಲೆ ಕೆಡಿಸಿಕೊಳ್ಳದವರಿಗೆ 'ಶನಿ' ಅಂದಕೂಡಲೆ ಅದೇನೋ ಭಯ, ಭೀತಿ, 'ದುಷ್ಟರನ್ನು ಕಂಡರೆ ದೂರ ಇರು' ಎನ್ನುವ ಗಾದೆ ಮಾತು ಇಲ್ಲಿ ಸಮರ್ಪಕವಾಗಲಿಕ್ಕಿಲ್ಲ. ದುಷ್ಟರೇ ಸನಿಹ ಬಂದರೆ ಮಾಡಬೇಕೇನು? ಓಲೈಸಿ ಸಂತೃಪ್ತಿಪಡಿಸುವುದು ಉಳಿದುಕೊಂಡಿರುವ ಮಾರ್ಗ. ಇಷ್ಟಕ್ಕೂ ಶನಿ ಎನ್ನುವ ಗ್ರಹ ಎಂತವರನ್ನೂ ನಡುಗಿಸಬಲ್ಲಷ್ಟು ದುಷ್ಟನೇ? ನೀಚನೇ? ಈ ಕುರಿತು ಮಾತಾಡುವಷ್ಟು ಜೋತಿಷ್ಯ ಪರಿಣತಿ ನನಗಿಲ್ಲ. ಆದರೆ ದಂಡಿಗೆ, ದಾಳಿಗೆ ಹೆದರದವರು ತಟಕಪ್ಪನಿಗೆ ಹೆದರಿದಂತೆ ಎಲ್ಲೋ ಇರುವ ಶನಿಗೆ ಜನರು ಅಂಜುವ ಕುರಿತು ನನಗೆ ಮನದಟ್ಟಾಗಿದ್ದು ದೇವಸ್ಥಾನವೊಂದರಲ್ಲಿ ಶನಿಶಾಂತಿ ಮಾಡಿಸಲು ಕಿಕ್ಕಿರಿದು ಸೇರಿದ ಜನಸ್ತೋಮವನ್ನು ಕಂಡಾಗ! ಅಪ್ಪನಾದ ರವಿಯನ್ನು ಕಂಡರೆ ಶನಿಗೆ ಪರಮ ವೈರ ಎನ್ನುವ ಮಾತನ್ನು ನಂಬುವುದಾದರೆ ಅಪ್ಪನನ್ನು ಕಂಡರಾಗದವನು ದುಷ್ಟ ಎಂದು ಸಾರಾಸಗಟಾಗಿ ತೀರ್ಮಾನ ಮಾಡಲಾಗಿದೆಯೇ? ಯಾರು ಬಲ್ಲ? ನವಗ್ರಹ ದೇವಸ್ಥಾನಗಳು ಇರುವೆಡೆಗಳಲ್ಲೆಲ್ಲಾ ರವಿಯನ್ನು ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಿದರೆ ಶನಿಯನ್ನು ಪಶ್ಚಿಮಾಭಿಮುಖವಾಗಿ ಪ್ರತಿಷ್ಠಾಪಿಸುತ್ತಾರೆ ಎನ್ನುವುದು ಟೀವಿ ಚಾನಲ್‌ಗಳಲ್ಲಿ ಕೇಳಿ ಅರಗಿಸಿಕೊಂಡ ಮಾಹಿತಿ, ಒಬ್ಬನ ಮುಖ ಅತ್ತ, ಇನ್ನೊಬ್ಬನ ಮುಖ ಇತ್ತ.

ಕೂತಲ್ಲಿ ಕೂರದೆ ಸದಾ ಸಂಚಾರ ಮಾಡುವವರ ಕುರಿತು ಮಲೆನಾಡಿನ ಕಡೆ “ಅವನ ಕಾಲಿನಲ್ಲಿ ಚಕ್ರ ಇದೆ' ಎನ್ನುವ ಹೇಳಿಕೆ ಇರುವಂತೆ ನಿಂಗೇನು ಕಾಲುಶನೀನಾ?' ಎನ್ನುವ ವ್ಯಂಗೋಕ್ತಿ ಕೂಡಾ ವಾಡಿಕೆಯಲ್ಲಿದೆ. ಹೊರಗೆ ಆಟವಾಡಿ ದಣಿದು ಮುಸ್ಸಂಜೆ ಹೊತ್ತಿಗೆ ಮನೆ ಸೇರಿಕೊಳ್ಳುವ ಮಕ್ಕಳು ಹಿಮ್ಮಡಿ ನೆನೆಯುವಂತೆ ಪೂರ್ತಿ ಕಾಲು ತೊಳೆದುಕೊಂಡು ಒಳಗೆ ಬರದೆ ಕಣ್ಕಟ್ಟಿನ ಕೆಲಸ ಮುಗಿಸಿಕೊಂಡು ಒಳಗೆ ಬಂದರೆ ಅಮ್ಮನಾದವಳು ತರಾಟೆಗೆ ತೆಗೆದುಕೊಳ್ಳುವ ಕಾಲ ಇತ್ತು. ಹಿಮ್ಮಡಿ ನೆನೆಯುವಂತೆ ಕಾಲು ತೊಳೆದುಕೊಳ್ಳದಿದ್ದರೆ ಶನಿ ಹಿಮ್ಮಡಿಯ ಮೂಲಕ ದೇಹ ಸೇರಿಕೊಳ್ಳುತ್ತಾನಂತೆ. ಇಂತಾ ಸಂದರ್ಭಕ್ಕೋಸ್ಕರ ಅವನು ಕಾದು ಕೂತಿರುತ್ತಾನಂತೆ. ಮಕ್ಕಳಿಗೆ ಸದ್ಬುದ್ಧಿ ಕಲಿಸಲು ಇಂತಾ ಅನೇಕ ಹೇಳಿಕೆಗಳು ಚಾಲ್ತಿಯಲ್ಲಿದ್ದಿರಬಹುದು, ಬಿಡಿ ಈ ವಿಷಯ. ಒಂದು ಮಾತು ತಮ್ಮೆಲ್ಲರಿಗೂ ಗೊತ್ತಿದ್ದಿರಬಹುದು. ಅಧಿಕಾರಸ್ಥಾನದಲ್ಲಿರುವವರಿಗಿಂತಾ ಅವರ ಸುತ್ತಮುತ್ತಲಿರುವ ಚೇಲಾಗಳು, ಕೈಕೆಳಗಿನವರು, ಹೆಚ್ಚಿನ ಜಬರ್ದಸ್ತು ತೋರಿಸುತ್ತಾರೆ ಎನ್ನುವುದು ಅನುಭವದ ಮಾತು. ಜನ ಅಂತಹವರಿಗೆ ಹೆಚ್ಚು ಅಂಜಿಕೊಂಡು ನಡೆಯುತ್ತಾರೆ. ಶನಿಮಹಾರಾಯನ ವಿಷಯದಲ್ಲೂ ಈ ಮಾತು ಸತ್ಯವಾ? ನಮ್ಮಲ್ಲಿರುವ ಗುಣಗಳನ್ನೇ ನಾವು ದೇವಾನುದೇವತೆಗಳಲ್ಲೂ ಆರೋಪಿಸುವಂತಹವರು ತಾನೇ? ಶನಿಯ ವಾಹನವೆಂದು ಬಿಂಬಿಸಲ್ಪಟ್ಟಿರುವ ಕಾಗೆಯ ಕುರಿತು ಜನಕ್ಕೆ ಶನಿಯ ಕುರಿತಾಗಿ ಇರುವುದಕ್ಕಿಂತಾ ಹೆಚ್ಚಿನ ಅಂಜಿಕೆ. ಪಾಪದ ಕಾಗೆ ಒಂದಗುಳ ಕಂಡರೆ ಬಳಗವನ್ನೆಲ್ಲಾ ಕೂಗಿ ಕರೆದು ಹಂಚಿ ಉಣ್ಣುವ ಉದಾರ ಸ್ವಭಾವದ್ದಾಗಿದ್ದರೂ ಕಾಗೆ ಅಂದರೆ ಅಪಶಕುನ

ಎನ್ನುವ ಭಾವನೆ ಸಾಮಾನ್ಯ ಜನರಲ್ಲಿ ರಕ್ತಗತವಾಗಿ ಬಿಟ್ಟಿದೆ. ಹಾದಿ ತಪ್ಪಿ, ಬೀದಿ ತಪ್ಪಿ, ಕಾಗೆ ಮನೆಯೊಳಗೇನಾದರೂ ಬಂದುಗಿಂದರೆ ಹೃದಯಬಡಿತ ಸ್ತಬ್ಧವಾಗಿ ಬಿಡುವಂತಾ ಅಪಶಕುನದ ಭಾವದಿಂದ ಜನ ಕಂಗಾಲಾಗಿ ಬಿಡುತ್ತಾರೆ. ಶಾಂತಿ ಮಾಡಿಸಿ ಸಮಾಧಾನ ಕಂಡುಕೊಳ್ಳುತ್ತಾರೆ. ಅಪ್ಪಿ ತಪ್ಪಿ ಕಾಗೆ ಕೂಟ ಕಂಡರೆ ಯಾರೋ ಸತ್ತರೆನ್ನುವ ಸುಳ್ಳು ವದಂತಿ ಹಬ್ಬಿಸಿ ಪರಿಹಾರ ಕಂಡುಕೊಳ್ಳುವುದು ಕೆಲವು ಪ್ರದೇಶಗಳಲ್ಲಿ ರೂಢಿಯಲ್ಲಿದೆಯಂತೆ. ಸಣ್ಣದೊಂದು ಮಳೆ ಬಿದ್ದು ನೆಲ ತಂಪಾದರೆ ಸಾಕು, ನಾನು ದಿನವೂ ತಪ್ಪದೆ ವಾಕಿಂಗ್ ಮಾಡುವ ಪಾರ್ಕಿನ ಕಿರುದಾರಿಯಲ್ಲಿ ಹದಿದ ಕಲ್ಲುಗಳೆಡೆಯಿಂದ ತುಪತುಪನೆ ಮೇಲೇರುವ ರೆಕ್ಕೆ ಬಂದ ಇರುವೆಗಳೆಂದರೆ ಕಾಗೆ ಬಳಗಕ್ಕೆ ಹಬ್ಬದೂಟ ಸಿಕ್ಕಿದ ಹಾಗೆ, ನಡೆದಾಡುವ ಜನರನ್ನು ಲೆಕ್ಕಿಸದೆ ಅವು ಪುಷ್ಕಳ ಭೋಜನಕ್ಕಾಗಿ ರೊಂಯ್ಯನೆ ನೆಲಮಟ್ಟಕ್ಕೆ ಹಾರಿ ಬರುವುದು, ಎಲ್ಲಿ ಅವು ತಮ್ಮನ್ನು ತಗುಲಿಸಿಕೊಂಡು ಹಾರಿಬಿಡುತ್ತವೆಯೋ ಎಂದು ಜನ ಹೆದರಿ ಹೆದರಿ ನಡೆಯುವುದು ಮಾಮೂಲಿನ ಸಂಗತಿ. ಕಾಗೆಗಳ ಸ್ಪರ್ಶ ಅಂದರೆ ಜನಕ್ಕೆ ವಿಪರೀತದ ಭಯ. ಎಲ್ಲಿಗೋ ಹಾರುವ ಭರದಲ್ಲಿ ಕಾಗೆಯೇನಾದರೂ ಮೈಗೆ ತಗುಲಿ ಬಿಟ್ಟಿತೆಂದರೆ ಸಾಕ್ಷಾತ್ ಯಮನೇ ಸ್ಪರ್ಶಿಸಿದ ಅನುಭವ. ಅದಕ್ಕೆ ಮತ್ತೇನೇನೋ ಪರಿಹಾರದ ಮೊರೆ. ಸದ್ಯ, ವಿಪತ್ತುಗಳಿಗೆಲ್ಲಾ ಒಂದು ಪರಿಹಾರವಿದೆ ಅನ್ನುವುದು ಇಂತದನ್ನು ನಂಬುವ ಜನರ ಪುಣ್ಯ. ಆತಂಕಗೊಂಡ ಮನಸ್ಸಿಗೆ ಒಂದಲ್ಪ ಸಮಾಧಾನ, ಶಾಂತಿ, ಶನಿಯ ವಾಹನವಾದ ಈ ಕಾಕಾಸುರ ರಾಮನ ಬಾಣಕ್ಕೆ ಗುರಿಯಾಗಿ ಒಕ್ಕಣ್ಣಿನವನಾಗಿರುವುದರ ಕುರಿತು ರಾಮಾಯಣದಲ್ಲಿ ಒಂದು ಸ್ವಾರಸ್ಯದ ಕತೆ ಇದೆ. ನಿಜಕ್ಕೂ ಕಾಗೆಗೆ ಒಂದು ಕಣ್ಣು ಮಾತ್ರಾ ಕಾಣಿಸುವುದಾ ಎಂದು ಕೇಳಿದರೆ ಈ ವಿಷಯದಲ್ಲಿ ನನಗೆ ತಿಳಿವಳಿಕೆ ಇಲ್ಲ. ಏನೇ ಇರಲಿ, ಕೋಗಿಲೆಯ ಮೊಟ್ಟೆಯನ್ನು ಕಾವು ಕೊಟ್ಟು ಸಾಕುವ ವಿಶಾಲ ಹೃದಯದ ಕಾಕ ಸಂತತಿ ತನ್ನವರ ಬಗೆಗೆ ತೋರುವ ಅಭಿಮಾನ, ಕಳಕಳಿ ಮನುಷ್ಯ ಜಾತಿಗೆ ಆದರ್ಶ ಪ್ರಾಯ.

ಆಗೀಗ 'ಢಮಾರ್' ಎಂದು ಆನೆಪಟಾಕಿ ಹಚ್ಚಿದಂತಾ ಸದ್ದಾಗಿ, ಮರುಕ್ಷಣ ಕಿವಿ ಹೊಟ್ಟೆ ಹಾರಿ ಹೋಗುವಂತೆ ಕಾಕಸಂಕುಲ ಒಟ್ಟಿಗೆ ಹಾರಾಡುತ್ತಾ ಕಿರುಚಾಡತೊಡಗಿದುವು ಅಂದರೆ ಎಲೆಕ್ಟ್ರಿಕ್ ತಂತಿಯ ಮೇಲೆ ಕೂತ ಯಾವುದೋ ಕಾಗೆ ಆಘಾತಕ್ಕೆ ಒಳಗಾಗಿ ನೆಗೆದು ಬಿದ್ದಿದೆ ಅನ್ನುವುದು ಪೇಟೆಮಂದಿಗೆ ತಕ್ಷಣಕ್ಕೆ ಅರಿವಾಗುವ ಸತ್ಯ. ಕರೆಂಟು ಹೋಯ್ತೇನೋ ಎನ್ನುವ ಆತಂಕ. ಹೀಗೆನ್ನುವಾಗ ಪ್ರೈಮರಿಯಲ್ಲಿ ಓದಿದ ಒಂದು ಪದ್ಯದ ಸಣ್ಣ ತುಣುಕು ನೆನಪಾಗುತ್ತಿದೆ. ಬರೆದವರಾರೋ ನೆನಪಾಗುತ್ತಿಲ್ಲ.

'ವಿದ್ಯುದಾಘಾತಕ್ಕೆ ಸಿಕ್ಕಿ ಸತ್ತಿದೆ ಕಾಗೆ,

ತಪ್ಪು ಮಾಡದ ವ್ಯಕ್ತಿ ಶಿಕ್ಷೆ ಪಡೆಯುವ ಹಾಗೆ..'

ಬೇರೆ ಸಂದರ್ಭಗಳಲ್ಲಿ ಅಥವಾ ಹೆಚ್ಚಿನ ಸಂದರ್ಭಗಳಲ್ಲಿ ಅಪಶಕುನದ ಪಕ್ಷಿಯಾಗಿರುವ ಕಾಗೆ ತಿಥಿಯೂಟದ ಎಡೆ ಇಡುವ ಕಾಲದಲ್ಲಿ ಆ ಕಡೆ ತಲೆ ಹಾಕದೆ ಸತಾಯಿಸುವುದು ಒಂದು ಚೋದ್ಯ. ಅಲ್ಲೆಲ್ಲೋ ಮರದ ಮೇಲೆ ತಪಸ್ಸಿಗೆ ಕೂತ ಮುನಿಯಂತೆ ಕೂತಿರುವ ಕಾಕರಾಯ ಅಥವಾ ಕಾಕಪಡೆ ತಮ್ಮ ಪೂರ್ವಜರು ಆವಾಹನೆಗೊಂಡಿರುವ ಮಾಧ್ಯಮ ಎಂದು ನಂಬಿ, ಎಡೆ ಇದ್ದೊಡನೆ ಅವು ಹಾರಿ



ಬರದಿದ್ದರೆ 'ಯಾಕೋ ಪೂರ್ವಜರು ತಮ್ಮ ಮೇಲೆ ಮುನಿದಿದ್ದಾರೆ' ಎಂದು ಭ್ರಮಿಸಿ, ಬೆಣ್ಣೆ ಹಚ್ಚುವ ಹಾಗೆ ಕಾ.., ಕಾ..' ಎಂದು ವಿಹ್ವಲ ದನಿಯಿಂದ ಅವುಗಳನ್ನು ಆಹ್ವಾನಿಸುವ ವೈಖರಿಯೇ ವೈಖರಿ, ಆವತ್ತಿನ ಭಕ್ಷ್ಯ, ಭೋಜ್ಯಗಳನ್ನು ತುಂಬಿಸಿದ ಬಾಳೆಲೆಯನ್ನು ಮನೆಯ ಮಾಡಿನ ಮೇಲೋ, ಚಪ್ಪರದ ಮೇಲೋ ಇಡುತ್ತಿದ್ದಂತೆ ಕಾಗೆಗಳು ಧಾವಿಸಿ ಬಂದರೆ ಹಿರಿಯರು ಸಂಪ್ರೀತರಾಗಿದ್ದಾರೆ ಎನ್ನುವ ಕೃತಾರ್ಥ ಭಾವನೆ ಅನುಭವಿಸಿ, ಪೂರ್ವಜರನ್ನು ಕಾಗೆಗಳ ರೂಪದಲ್ಲಿಯೇ ಕಲ್ಪಿಸಿಕೊಂಡಿರುವುದರ ಹಿಂದೆ ಯಾವುದೋ ಸಕಾರಣ ಇರಬಹುದು.

ಹಪ್ಪಳ, ಸಂಡಿಗೆ ಮಾಡಿ ಒಣಗಿಸುವ ಕಾಲದಲ್ಲಿ ಕಾಗೆಗಳಿಗೆ ಹಿಡಿ ಶಾಪ ಹಾಕುತ್ತಾ ಅವು ಸನಿಹ ಸುಳಿಯದಂತೆ ಕಾವಲು ಕಾಯುವ ಜನ ತಮ್ಮ ನಂಬಿಕೆಯ ಸಂದರ್ಭಗಳಲ್ಲಿ ಅವುಗಳ ಆಗಮನಕ್ಕೆ ಹಂಬಲಿಸುವುದು ವೈಪರೀತ್ಯ, ಮಹಾಲಯ ಅಮಾವಾಸ್ಯೆಯ ದಿನ ಪೂರ್ವಜರ ಹೆಸರಲ್ಲಿ ಎಡೆ ಇಡುವುದು ಅನೇಕರ ಸಂಪ್ರದಾಯ. ಆ ದಿನ ಒಂದೇ ಒಂದು ಕಾಗೆಯ ತಲೆ ಕೂಡಾ ಕಾಣಲಿಲ್ಲ ಎಂದು ಆಸ್ತಿಕರೊಬ್ಬರು ಪರಿತಪಿಸುತ್ತಿದ್ದುದು ವಾಕಿಂಗಿನ ಸಂದರ್ಭದಲ್ಲಿ ಕಿವಿಯ ಮೇಲೆ ಬಿತ್ತು, ಮತ್ತು ಅವರ ಜೊತೆಗಾರರು ಇದಕ್ಕೆ ಕೊಟ್ಟ ಕಾರಣ ಕೇಳಿ ಮುಖದಲ್ಲೊಂದು ಮುಗುಳಗೆ ಮೂಡಿದ್ದೂ ಹೌದು. ಕಾರಣ ಕೊಟ್ಟವರ ಪ್ರಕಾರ ಆ ದಿನ ಶ್ರೀರಂಗಪಟ್ಟಣದ ಕಾವೇರಿ ತೀರದಲ್ಲಿ ಪಿಂಡಪ್ರದಾನ ಮಾಡುವವರ ಸಂದಣಿ ನೆರೆಯುವುದರಿಂದ ಮೈಸೂರಿನ ಕಾಗೆಗಳೆಲ್ಲಾ ಆ ಕಡೆ ಗುಳೆ ಹೋಗಿರಬಹುದೆಂದು ಅವರ ಅನುಮಾನ. ಯಾರಿಗೆ ಗೊತ್ತು, ಇರಬಹುದೇನೋ?

ನಮ್ಮ ಮಲೆನಾಡಿನ ಕಡೆ ಅಡಿಕೆ ಕುಯ್ಲು ಮುಗಿದ ಮೇಲೆ ಹಪ್ಪಳ ಸಂಡಿಗೆಗಳ ಕಾರ್ಖಾನೆ ಶುರುವಾಗುವುದು ಮಾಮೂಲು, ಮನೆ ಎದುರು ಅಡಿಕೆ ಒಣಗಿಸಲು ಹಾಕಿರುವ ದೊಡ್ಡ ಚಪ್ಪರದ ಮೇಲೆ ಬಾಳೆಹೆಡಲುಗಳ ಮೇಲೆ

ಸಂಡಿಗೆ ಇಡುವ, ಹಪ್ಪಳ ಒಣಗಿಸುವ ಭರಾಟೆ. ಕಾಗೆಗಳು ಇವನ್ನು ಎಗರಿಸಿಕೊಂಡು ಹೋಗದಂತೆ ಕಾಪಿಟ್ಟುಕೊಳ್ಳಲು ಚಾಲ್ತಿಯಲ್ಲಿರುವ ಒಂದು ಉಪಾಯವನ್ನು ಈ ಹಿಂದೆ ಎಲ್ಲೋ ಪ್ರಸ್ತಾಪಿಸಿದ್ದೇನೆನ್ನುವ ನೆನಪು. ಇರಲಿ, ಇನ್ನೊಮ್ಮೆ ಹೇಳುವುದು ತಪ್ಪಾಗಲಿಕ್ಕಿಲ್ಲ. ಉದ್ದನೆಯ ಗಳುವೊಂದರ ತುದಿಯಲ್ಲಿ ಕಪ್ಪು ಬಣ್ಣದ ಬಟ್ಟೆಯೊಂದನ್ನು ಬಾವುಟದಂತೆ ನೇತಾಡಿಸಿ, ಆ ಗಳುವಿನ ಕೆಳ ತುದಿ ತಂಪಿನ ಅಂಗಳದಲ್ಲಿರುತ್ತದೆ. ಆಗೀಗ ಆ ಗಳವನ್ನು ಕೆಳಗಿಂದ ಅಲುಗಾಡಿಸಿಬಿಟ್ಟರೆ ಮೇಲ್ತುದಿಯಲ್ಲಿರುವ ಬಟ್ಟೆ ಅಲುಗಿ, ಕಾಗೆಗಳು ಅತ್ತ ಸುಳಿಯುವುದಿಲ್ಲವೆಂಬುದು ಅನುಭವದಿಂದ ಕಂಡುಕೊಂಡ ಉಪಾಯ. ಕಪ್ಪು ಬಣ್ಣದ ಬಟ್ಟೆಯಾದ್ದರಿಂದ ತಮ್ಮ ಸಂತತಿಯ ಯಾರನ್ನೋ ಬಡಿದು ನೇತಾಡಿಸಿದ್ದಾರೆ ಎಂದು ಕಾಗೆಗಳು ಭ್ರಮಿಸುತ್ತವೆಯಂತೆ. ಕಾಗೆ ಇಷ್ಟು ದಡ್ಡ ಪಕ್ಷಿಯಾ? 'ಕಾಗೆಯೊಂದು ಹಾರಿ ಬಂದು ಮರದ ಮೇಲೆ ಕುಳಿತುಕೊಂಡು, ಬಾಯಲಿದ್ದ ಮಾಂಸವನ್ನು ತಿನ್ನತೊಡಗಿತು.. ಎನ್ನುವ ಪದ್ಯ ನೆನಪಿಸಿಕೊಂಡರೆ ಹೌದು ಎನ್ನಿಸುತ್ತದೆ. ನರಿಯ ಹೊಗಳಿಕೆ ಮಾತಿಗೆ ಕಿವಿ ಜೋಲು ಬಿಟ್ಟು ಬಾಯಲ್ಲಿದ್ದ ಮಾಂಸದ ತುಣುಕನ್ನು ನರಿಯ ಪಾಲು ಮಾಡಿತು.

ಅದೇ ಕಾಗೆ ಹೂಜಿಯ ತಳದಲ್ಲಿದ್ದ ನೀರು ಕುಡಿಯಲು ಮಾಡಿದ ಉಪಾಯ ನೆನಪಿಸಿಕೊಂಡರೆ ಕಾಗೆ ಖಂಡಿತಾ ಜಾಣ ಪಕ್ಷಿ!

ಇನ್ನೊಂದು ಸಂಗತಿ ನೆನಪಾಗುತ್ತಿದೆ. ಮನೆಯಲ್ಲಿ ಮಾಡಿದ ತಿಂಡಿಯನ್ನೋ, ಅನ್ನವನ್ನೋ ಪ್ರತಿದಿನ ಎನ್ನುವಂತೆ ಅದಕ್ಕೆಂದೇ ಮೀಸಲಿಟ್ಟ ತಟ್ಟೆಯಲ್ಲಿ ಹಾಕಿ ಟೆರೇಸಿನ ಮೇಲಿಡುವ ಮಂದಿ ಪೇಟೆ ಪಟ್ಟಣಗಳಲ್ಲಿ ಸಾಕಷ್ಟಿದ್ದಾರೆ. ಹೀಗೆ ಕಾಕರಾಜನ ಹಸಿವು ತಣಿಸಿ ಶನಿಯನ್ನು ತೃಪ್ತಿಪಡಿಸುತ್ತಿದ್ದೇವೆಂದು ಅವರ ನಂಬಿಕೆ.

ಶನಿಯ ವಾಹನ ನರಮನುಷ್ಯರ ವಾಹನಗಳ ಮೇಲೆ ಬಂದು ಕೂರುವುದು, ಹಿಕ್ಕೆ ಹಾಕುವುದೂ ಕೂಡಾ ಅಪಶಕುನದ ವ್ಯಾಪ್ತಿಗೆ ಬಂದು ಆ ಕುರಿತಾಗಿ ಮಾಧ್ಯಮಗಳಲ್ಲಿ ಜ್ಯೋತಿಷ್ಯ ತಜ್ಞರನ್ನು ಕೂರಿಸಿಕೊಂಡು ಚರ್ಚೆ ನಡೆಸುವುದಕ್ಕೆ ನಮ್ಮಂತಾ ವೀಕ್ಷಕರು ಸಾಕ್ಷಿಯಾಗಿದ್ದೇವೆ.

ಶನಿಮಹಾತ್ಮನ ದೊಡ್ಡದೊಂದು ಪಟ ಹಿಡಿದುಕೊಂಡು ಭಿಕ್ಷೆಗೆ ಬರುವವರ ವಿಚಾರ ಬಿಡಿ, ತಳ್ಳುಗಾಡಿಯ ಮೇಲೆ ಈ ಮಹಾಶಯನ ಪಟ ಇಟ್ಟು, ಅಲಂಕರಿಸಿ, ಗೌಜುಗದ್ದಲ ಸಮೇತ ಬೀದಿಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ಮನೆಮನೆಗಳಿಂದ ಕಾಣಿಕೆ ಸಂಗ್ರಹಿಸುವ ಮಂದಿ ಇದ್ದಾರೆ. ಶನಿಯ ಹೆಸರಿನ ಬಲದಿಂದಲೇ ಇಂತವರ ಕಾಣಿಕೆ ಡಬ್ಬಿ ತುಂಬಿ ತುಳುಕಾಡುವುದರ ಕುರಿತು ಸಂದೇಹ ಇಲ್ಲ.

ಇನ್ನೊಂದು ವಿಚಾರ ಪ್ರಸ್ತಾಪಿಸಿ ಈ ಬರೆಹಕ್ಕೆ ಮಂಗಳ ಹಾಡುತ್ತೇನೆ. ಕಳ್ಳಕಾಕರರು ವಿಜೃಂಭಿಸುತ್ತಿರುವ ಈ ಕಾಲಘಟ್ಟದಲ್ಲಿ ಮಹಾರಾಷ್ಟ್ರದಲ್ಲಿರುವ ಬಾಗಿಲಿಲ್ಲದ ಊರಿನ ಕತೆ ಎಲ್ಲರಿಗೂ ಗೊತ್ತೇ ಇರುತ್ತದೆ. ಶನಿ ಸಿಂಗಣಾಪುರದಲ್ಲಿ ಯಾವ ಮನೆಗಳಲ್ಲೂ ಮುಂಬಾಗಿಲು ಹಾಕುವ ಪದ್ಧತಿ ಇಲ್ಲ. ಶನಿಯ ಕಣ್ಣಂಕೆ ಇರುವ ಆ ಊರಿನಲ್ಲಿ ಕಳುವಾಗುವ ಪ್ರಸಂಗ ಇಲ್ಲವೇ ಇಲ್ಲ ಎನ್ನುವುದು ಒಂದು ಹೇಳಿಕೆ, ನಂಬಿಕೆ. ಶನಿಗೆ ಕಳ್ಳರೂ ಹೆದರುತ್ತಾರೆ ಮತ್ತು ಅವನನ್ನು ಕೆಣಕಲು ಅಂಜುತ್ತಾರೆ. ಶನಿ ಸಿಂಗಣಾಪುರದ ಶನಿದೇವರು ಅಂದರೆ ದೊಡ್ಡ ಗಾತ್ರದ ಒಂದು ಶಿಲಾರೂಪ. ಈ ಶಿಲೆಗೆ ಭಕ್ತಾದಿಗಳು ಎಳ್ಳೆಣ್ಣೆ ಎರೆದು ಪೂಜಿಸುವ ವಾಡಿಕೆ. ಮಹಿಳೆಯರಿಗೆ ಹೀಗೆ ಪೂಜಾ ವಿಧಿ ನಡೆಸುವ ಅಧಿಕಾರ ಇರಲಿಲ್ಲ. ಇತ್ತೀಚೆಗೆ ಮಹಿಳೆಯರ ಪರವಾಗಿ ಹೋರಾಟ ನಡೆಸಿದ ಯುವತಿಯೊಬ್ಬಳ ದಿಟ್ಟತನದಿಂದ ಈ ಸಂಪ್ರದಾಯ ಅಂತ್ಯಗೊಂಡಿತು. ಶನಿದೇವರನ್ನು ಕೈಯಾರೆ ಪೂಜಿಸಲು ಮಹಿಳೆಯರಿಗೂ ಅಧಿಕಾರ ದಕ್ಕಿತು.

ಎಂತಾ ಸರ್ವಾಧಿಕಾರಿಯೇ ಇರಲಿ, ಅವನ ಹೆಸರಲ್ಲಿ ಆಡಳಿತ ನಡೆಸುವವರ ದರ್ಬಾರು ಇರಲಿ, ಮೀರುವ ಮನೋಭಾವದವರು ಇದ್ದೇ ಇರುತ್ತಾರೆ ಮತ್ತು ಪರಿಣಾಮದ ಕುರಿತು ಅವರಿಗೆ ಅಂಜಿಕೆ ಇರುವುದಲ್ಲ ಅನ್ನುವುದು ರಾಜಕೀಯವಾಗಿಯೂ ಸಲ್ಲತಕ್ಕ ಮಾತು, ಅಲ್ಲವೇ?

**('ದಂಡಿಗೆ ಹೆದರಲ್ಲ', ೨೦೧೭, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನಿತ ಕೃತಿ)**

# ೩೩. ಸರ್ಪ ವಿಷಹರ ಮದ್ದು

**ಉಷಾ ನರಸಿಂಹನ್**

ಹಳ್ಳಿಯೊಂದರ ಕೃಷಿ ಕುಟುಂಬದ ಕೃಷಿಕನೊಂದಿಗೆ ನನ್ನ ವಿವಾಹವಾಗಿ ನಾಕ್ಕೈದು ವರ್ಷಗಳೇ ಕಳೆದಿರಬೇಕು. ಒಂದು ಯುಗಾದಿ ಹಬ್ಬ. ರೈತಾಪಿ ವರ್ಗ ಯುಗಾದಿಯನ್ನು ಸಂಭ್ರಮದಿಂದ ಆಚರಿಸುತ್ತಾರೆ. ದನ ತೊಳೆಯುವುದು, ಕೊಟ್ಟಿಗೆ ಸಾರಿಸುವುದು, ಸುಣ್ಣ ಬಳಿಯುವುದು, ಎತ್ತುಗಳನ್ನು ಮೀಯಿಸಿ ಬಣ್ಣ ಬಣ್ಣದ ರಿಬ್ಬನ್ನು ಕೋಡಿಗೆ ಕಟ್ಟಿ, ಕೊರಳಿಗೆ ಕಿರುಘಂಟೆ, ಶಂಖ ಕಟ್ಟಿ, ಇಡೀ ಎತ್ತಿನ ಮೈಯನ್ನು ಅರಿಶಿಣದಿಂದ ತೊಡೆದು ರಂಗೇರಿಸಿ ಬಿಡುತ್ತಾರೆ. ಇಡೀ ಊರಿನ ಯಾವುದೇ ಮನೆಯ ಅಂಗಳವೂ ಸಗಣಿಯಿಂದ ಸಾರಿಸಿಕೊಂಡು ದೊಡ್ಡದೊಡ್ಡ ಹಸೆ ಬರೆಸಿಕೊಳ್ಳುತ್ತದೆ. ತಲೆ ಬಾಗಿಲುಗಳು ಮಾವಿನ ತಳಿರು, ಬೇವಿನ ಜೊಂಪೆಗಳಿಂದ ಅಲಂಕೃತವಾಗಿ, ಹೊಸ್ತಿಲುಗಳು ಅರಿಶಿಣ, ಕುಂಕುಮದಿಂದ ಹೂವುಗಳಿಂದ ಪೂಜೆಕೊಂಡು ಸಂಭ್ರಮಿಸುತ್ತವೆ.

ಎಲ್ಲರ ಮನೆಯಲ್ಲಿ ಹೂರಣದ ಹೋಳಿಗೆಯ ಘಮ-ಘಮ, ಊರಾಚೆ ಹೊಲಗೇರಿಯಲ್ಲೂ ಸಂಭ್ರಮ ಕಡಿಮೆಯೇನಿಲ್ಲ. ಯುಗಾದಿ, ದೀಪಾವಳಿ, ಸಂಕ್ರಾಂತಿ, ಮಾನವಮಿಗೆ ಕರಾರುವಾಕ್ಕಾಗಿ ಸ್ನಾನದ ಪರಿಪಾಠ ಇಟ್ಟುಕೊಂಡಿರುವ ಕೆಲವರು ಇನ್ನೂ ಅಲ್ಲಿದ್ದಾರೆ. ಎಲ್ಲರೂ ಮಿಂದು, ಅವರು ಕೂಲಿಯಾಳಾಗಿ ದುಡಿಯುವ ಮನೆಗಳವರು ತೆಗೆಸಿ ಕೊಟ್ಟ ಪಟಾಪಟಿ ಚೆಡ್ಡಿ, ಚೌಕಳಿ ಅಂಗಿ, ಬಿಳಿ ಬನೀನು, ಮೇಲೊಂದು ಚೌಕವನ್ನು ಹೊದೆದುಕೊಂಡು ಊರ ತುಂಬಾ ತಿರುಗುತ್ತಾರೆ. ಅವರ ಹೆಣ್ಣು ಮಕ್ಕಳೂ ಅಂದು ಬಣ್ಣದ ಹೊಸ ಸೀರೆಯುಟ್ಟು ಒಂದು ವಾರ ಮುಂಚಿನಿಂದ ಉಳ್ಳವರ ಮನೆಗಳಲ್ಲಿ ಸಂಗ್ರಹಿಸಿದ ಕಾಯಿ ಕೊಬ್ಬರಿ, ಆಲೆಮನೆಗಳ ಬೆಲ್ಲ, ಅಂಗಡಿಗಳಲ್ಲಿ ಕೈಗಡ ತಂದ ಬೇಳೆ,  ಎಣ್ಣೆಗಳಿಂದ ಒಬ್ಬಟ್ಟು, ತರಕಾರಿ ಹಾಕಿದ ಬಾತನ್ನು ಮಾಡಿ ಸಂಭ್ರಮಿಸುತ್ತಾರೆ. ಹಗಲಿನ ಹಬ್ಬದ ಗೌಜು ಹೀಗಾದರೆ ಮಧ್ಯಾಹ್ನ ಸಿಂಗರಿಸಿದ ಎತ್ತುಗಳನ್ನು ನೊಗಕ್ಕೆ ಹೂಡಿ ಉಳುಮೆ ಮಾಡಿಸಲು, ಹೊನ್ನಾರು ಕಟ್ಟುತ್ತಾರೆ. ವರ್ಷದ ಮೊದಲ ದಿನದ ಕೃಷಿಯ ಆರಂಭ. ವರ್ಷಂಬತ್ತು ಕಾಲವೂ ಅದು ಆರಂಭವೇ. ಇವೆಲ್ಲ ಮುಗಿದು ಸಂಜೆಗೆ ಊರ ರಾಮ ದೇವರ ಗುಡಿಯ ಎದುರು ಕೊಂಡ ನಿರ್ಮಿಸಿ ಉಳುಮೆಯ ಎತ್ತು ಕಡಸುಗಳನ್ನು ಕಿಚ್ಚು ಹಾಯಿಸಿದರೆ ಯುಗಾದಿ ಮುಂದೋಡಿದಂತೆ. ಮಾರನೆಯ ದಿನ ವರ್ಷ ತೊಡಕಿಗೆ ಕುರಿ ಕೋಳಿ ಕಡಿಯುವುದೇ ಅವರ ರಿವಾಜು. ಅಲ್ಲಿರುವ ಒಬ್ಬಿಬ್ಬರು ಬ್ರಾಹ್ಮಣರ ಮನೆಗಳಲ್ಲಿ ಆ ದಿನ ಸತ್ಯನಾರಾಯಣ ಪೂಜೆಯೋ, ರಾಮ ಕಥೆಯೋ ಇರುತ್ತದೆ.

ಇಂಥಾ ಯುಗಾದಿಯ ಸಂಭ್ರಮಗಳೆಲ್ಲ ಮುಗಿಯುವುದು ಮಾರನೆಯ ದಿನ ಸಂಜೆಗೆ. ಆ ದಿನ ಯಾರೂ ಕೆಲಸಕ್ಕೆ ಬರುವುದಿಲ್ಲ.

ಈಗ್ಗೆ ಇಪ್ಪತ್ತು ವರ್ಷಗಳ ಹಿಂದೆ ಒಂದು ಯುಗಾದಿಯ ನೆನಪು. ನಮ್ಮ ಮನೆಯ ಆಳು ನಾಗೇಂದ್ರ ವರ್ಷ ತೊಡಕಿನ ಆ ದಿನ ತನ್ನ ಭಾವನೆಂಟನ ಮನೆಯ ಬಾಡೂಟಕ್ಕೆ ಹೇಮಾವತಿ ಹೊಳೆಯ ಆಚೆಗಿರುವ ಮೂಡ್ಲಹಿಲ್ಲ್‌ಗೆ ಹೋಗಿದ್ದ. ಬೇಸಿಗೆಯಾದ್ದರಿಂದ ಹೊಳೆಯಲ್ಲಿ ನೀರಿನ ಹರಿವು ಕಡಿಮೆಯಿತ್ತು. ಎಲ್ಲೋ ಒಂದೆರೆಡು ಕಡೆ ಸೊಂಟದ ಮಟ್ಟಕ್ಕೆ ನೀರಿರುತ್ತಿತ್ತು, ಬಹುತೇಕ ಎಲ್ಲರೂ ಬಳಸು ದಾರಿಯಲ್ಲಿ ಹೋಗದೆ ಹೊಳೆಯಲ್ಲಿ ಹಾದು ಹೋಗುತ್ತಿದ್ದರು. ನಾಗೇಂದ್ರ ನೆಂಟರಮನೆ ಊಟ ಮುಗಿಸಿಕೊಂಡು ಸಂಜೆಗೆ ಹೊಳೆ ದಾಟಿದ ಮೇಲೆ ಮನೆಯ ದಾರಿ ಹಿಡಿದ. ನೀರಿನಿಂದ ಕಾಲು ಹೊರ ತೆಗೆದ ಮೇಲೆ ಕಣಕಾಲಿನಲ್ಲಿ ಚುರುಚುರು ಉರಿಯಾಯಿತಂತೆ. ಅನುಮಾನವಾಗಿ ಬಾಗಿ ಮಬ್ಬು ಬೆಳಕಲ್ಲಿ ನೋಡಿದಾಗ ಯಾವುದೋ ಜಂತು ಹಲ್ಲೂರಿ ರಕ್ತ ಒಸರುತ್ತಿತ್ತು. ಅವನ ಜೊತೆಗೆ ಬಂದಿದ್ದ ನಂಜುಂಡನೆಂಬುವನನ್ನು ಕರೆದು ಕಾಲು ತೋರಿಸಿ, "ಓಡಿ ಹೋಗಿ ರಮೇಶಪ್ನೋರ ಕರಕೊಂಬಾ, ಯಾವುದೋ ಬಳ್ಳಿ ಮುಟ್ಟಿದೆ. ಬೈಕು ತರಾಕೆ ಹೇಳು' ಎಂದು ಅಳುತ್ತಾ ಅಂಜುಬುರುಕು ಧ್ವನಿಯಲ್ಲಿ ಹೇಳಿದ. ನಂಜುಂಡ ಸುಟಿಯಾದ ಆಳು. ಒಂದೇ ಓಟದಲ್ಲಿ ನಮ್ಮ ಮನೆಗೋಡಿ ಬಂದ, ಊರಿಗೆಲ್ಲ ಒಂದೇ ಇದ್ದ ನಮ್ಮ ಯೆಜ್ಡಿ ಬೈಕೆಂಬ ಐರಾವತವನ್ನು ಗುಡಿಗುಡಿಸುತ್ತಾ ಇವರು ಅವನಿದ್ದಲ್ಲಿಗೆ ಹೋದರು. ಹತ್ತೇ ನಿಮಿಷದಲ್ಲಿ ಊರೆಲ್ಲಾ ಗುಲ್ಲಾಗಿ ತಂಡೋಪತಂಡವಾಗಿ ಜನರು ಊರ ಮುಂದಿನ ಗುಡಿಯ ಪೌಳಿಯಲ್ಲಿ ಸೇರಿ ಬಿಟ್ಟರು. ಅವನ ಕಣಕಾಲಿನ ಮೇಲಕ್ಕೆ ಒಂದು ದಾರವನ್ನು ಬಿಗಿಯಾಗಿ ಕಟ್ಟಿ ಅವನನ್ನು ಬೈಕಿನಲ್ಲಿ ಅಡ್ಡಗಾಲಲ್ಲಿ ಕೂರಿಸಿಕೊಂಡು ಗುಡಿಯ ಪೌಳಿಗೆ ಕರೆತಂದಾಗಿತ್ತು. 'ಲಬೋ ಲಬೋ' ಎಂದು ಬಡಿದುಕೊಳ್ಳುತ್ತಾ ಅವನ ತಾಯಿ ತಂಗಿಯರು ದೊಡ್ಡ ದನಿಯಲ್ಲಿ ರೋದಿಸುತ್ತಿದ್ದರು. ನಾನು ಮನೆಯಿಂದ ಹೋಗುವಾಗಲೇ ಹರಿತವಾದ ಬೇಡೊಂದನ್ನು ತೆಗೆದುಕೊಂಡು ಹೋಗಿದ್ದೆ. ಅವನಿಗೆ ಹಾವು ಕಚ್ಚಿದ ಜಾಗದಲ್ಲಿ ಇಂಗ್ಲಿಷ್ ಟಿ ಆಕಾರದಲ್ಲಿ ಕತ್ತರಿಸಿ ಬಾಯಲ್ಲಿ ಹುಣ್ಣು ಗಾಯವಿಲ್ಲದ ಯಾರಾದರಿದ್ದರೆ ಅಲ್ಲಿಂದ ರಕ್ತ ಹೀರಿ ಉಗಿದು ಬಿಡಿ ಎಂದೆ. ಯಾರೊಬ್ಬರೂ ಮುಂದಾಗಲಿಲ್ಲ. 'ನಂಗೆ ಹುಳುಕಲ್ಲಾಗ್ಯದ ಎಂದು ಒಬ್ಬನೆಂದರೆ, 'ಬಾಯಿ ಹುಣ್ಣಾಗೈತೆ' ಎಂದ ಇನ್ನೊಬ್ಬ. 'ನಂಗೆ ಜ್ವರ ಬಂದೈತೆ' ಎಂದ ಮಗದೊಬ್ಬ, ಅಷ್ಟರಲ್ಲಿ ನಾಲ್ಕು ಕೋಳಿಗಳನ್ನು ಹಿಡಿದುಕೊಂಡು ಪಟೇಲರು ಓಡುತ್ತಾ ಬಂದರು. ತ್ವರೆಯಿಂದ, 'ಕೋಳಿ ತಿಕ ಕೊಡ್ರಿ ವಿಸಾನೆಲ್ಲ ಹೀರೋತ್ತೈತೆ" ಎಂದರು. ಅವನ ಗಾಯಕ್ಕೆ ಕೋಳಿ ಕುಂಡೆ ಹಿಡಿಸ ಹೋದರೆ ಅದು ಹಿಡಿಯುವುದೇ ಕಷ್ಟವಾಯ್ತು. ಕಡೆಗೂ ಕೋಳಿಯ ಗುದದ್ವಾರವು ಆಕುಂಚಿಸಿ ಗಾಯವನ್ನು ಹಿಡಿದುಕೊಂಡಿತು. ಆಶ್ಚರ್ಯವೆಂಬಂತೆ ಕೋಳಿಗಳು ಒಂದಾದ ಮೇಲೆ ಒಂದರಂತೆ ಸತ್ತು ಒರಗಿದವು. ಇವೆಲ್ಲಾ ಮುಗಿಯುವ ವೇಳೆಗೆ ಅವನಿಗೆ ಮಂಪರು ಮಯಕ.

ಯಾರೋ ಒಬ್ಬರು, 'ಏ ಅವ್ನುನ್ನ ಮನಗಾಕ ಬಿಡಬ್ಯಾಡಿ, ವಿಸ ಏರಿ ಬಿಡ್ತೈತೆ' ಎಂದರು. ಗುಡಿಯ ಪೂಜಾರಿ ತಾಳ ತಂದು ಚಿಟಿಕೆ ಬಾರಿಸುತ್ತಾ ಭಜನೆಗೆ ಶುರು ಹಚ್ಚಿಕೊಂಡನು. ಒಂದೆರಡು ಸಾಲು ಭಜನೆ ಆಗಿತ್ತೋ ಇಲ್ಲವೋ... ನಾಗೇಂದ್ರನ ಅವ್ವ ಧಿಗ್ಗನೆ ಎದ್ದು, 'ಏ ಪೂಜಾರಪ್ಪ ಭಜನೆ ಯಾಕ್ತಾ ಮಾಡ್ತಿದ್ದೀಯಾ? ನನ್ನಗ ಏನು ಸತ್ತು



ಮನಿಕಂಡಿದಾನ? ನಿಲ್ಲಿಸ್ತಾ ಕಂಡಿದೀನಿ. ಬಂದು ಬುಟ್ಟ ಭಜನೆ ಕುಟ್ಟಾಕೆ' ಎಂದು ಚಂಡಿಯಂತೆ ಭೋರ್ಗರೆದಳು. 'ಏನೋ ಅವ್ನುನ್ನ ಎಚ್ಚರಿಸೋಕೆ ಮಾಡುದ್ರೆ ಅದೇಯಾ...' ಎಂದು ಅವನು ಸುಮ್ಮಗಾದನು. ಊರ ಪಡ್ಡೆ ಹುಡುಗರು ಗುಂಪು ಕೂಡಿ, 'ಏ ನಾವು ಶನಿಮಹಾತ್ಮ ನಾಟ್ಕ ಆಡ್ತೀವಿ. ನೋಡ್ಲ ನಾಗೇಂದ್ರ, ನಿದ್ದೆ ಮಾಡಬ್ಯಾಡ' ಎಂದು ಅಪಕೃತಿಯಲ್ಲಿ “ಜಯ ಜಯ ಜಗದೀಸಾ” ಎಂದು ನಾಂದಿಗೀತೆಯನ್ನು ಹಾಡತೊಡಗಿದರು. ಅಷ್ಟರಲ್ಲಿ ರಮೇಶಪ್ಪನವರು, ಯಾರಾದ್ರೂ ಹಿಡಕೊಂಡು ಹಿಂದೆ ಕೂತ್ಕೊಳ್ರೋ. ಹೊಳೆನರಸೀಪುರದ ಆಸ್ಪತ್ರೆಗೆ ಹೋಗಾಣ” ಎಂದರು. ಹಿರಿಯ ಕೋಟಿಪಟೇಲರು ಹತ್ತಿರ ಬಂದು ನಾಗೇಂದ್ರನ ಮುಖ ನೋಡಿ, ನಾಡಿ ಹಿಡಿದು, ಬ್ಯಾಡಿ ರಮೇಶಪ್ನೋರೆ. ಅವು ಬದುಕಕ್ಕುಲ್ಲ. ಅಲ್ಲೀವರ್ಗು ಹೋಗಾಕಾಗದಿಲ್ಲಾ. ಇನ್ನೊಂದು ಮಾಡೋದು. ಅವನ ಹೊಟ್ಗೆ ಸೇರಂಡಿರೋ ವಿಸ ವಾಂತಿ ಮಾಡಿಸ್ಬೇಕು. ಆಗ ಸರಿಯಾಯ್ತುದೆ' ಎಂದರು. ಯಾರೋ ಒಬ್ಬರು 'ಹಸಿ ಕೋಳಿ ಮೊಟ್ಟೆ ಕುಡಿಸಿದ್ರೆ ವಾಂತಿ ಆಯ್ತುದೆ' ಎಂದದ್ದೇ ನಿಂಗಾಜಿ ಮನೆಯಿಂದ ನಾಲಕ್ಕು ಮೊಟ್ಟೆಗಳು ಪ್ರತ್ಯಕ್ಷವಾದವು. ಒಡೆದು ಗುಳುಂಗುಳುಂ ಎಂದು ನುಂಗಿದನೇ ವಿನಃ ವಾಂತಿಯ ಲವಲೇಷವೂ ಇಲ್ಲ. ಈಗ ಪಟೇಲರು ನಿಜವಾಗಿ ಚಿಂತಿತರಾದರು. ಹರಿಜನ ಕೇರಿಯ ಕುಮಾರಣ್ಣ ಪಟೇಲರಿಗೆ ದೂರದಿಂದಲೇ 'ಒಂದೆಲ್ಲ ಮಾಡೋದು. ಯಾರ್ದಾದ್ರೂ ಹೇಲು ತಂದು ನೀರಲ್ಲಿ ಕರಗಿಸಿ ಕುಡಿಸಿ ಬಿಟ್ರೆ ವಾಂತಿ ಆಯ್ತುದೆ' ಎಂದ. ಹರಿಜನ ಕೇರಿಯ ತಿಪ್ಪ, 'ನಾನು ಈಗ ತಾನೆ ನೀರ್ ಕಡೀಕೆ ಹೋಗ್ತಂದಿದ್ದೆ. ನಾ ತರ್ತೀನಿ' ಎಂದು ಎದ್ದೇ ಬಿಟ್ಟ. ಗೌಡರಿಗೆ ಇರಿಸುಮುರುಸು ಆಯಿತು. ನಾಗೆಂದ್ರನ ಅವ್ವ, 'ಅಯ್ಯೋ ಗಾಚಾರವೇ, ಹೊಲೇರ ಹೇಲು ತಿನ್ನಿಸ್ತಾರಲ್ಲಪ್ಪ. ಅದಕ್ಕಿಂತ ನನ್ನ ಮಗ ಸಾಯೋದೇ ವಾಸಿ' ಎಂದು ಹುಯಿಲೆಬ್ಬಿಸತೊಡಗಿದಳು. ಅಷ್ಟರಲ್ಲಿ ಗೌಡರ ಹಟ್ಟಿಯ ಅಪ್ಪಾಜ್ಜಪ್ಪ, 'ಐ ಬುಡುಲ್ಲಾ. ನಾನು ಈಗ ನೀರ್‌ಕಡೇ ಹೋಗಬೇಕಿತ್ತು. ನಾನೇ ತತ್ತೀನಿ' ಎಂದು ಅಲ್ಲೇ ಇದ್ದ ಮುತ್ತುಗದ ದೊಡ್ಡೆಲೆಗಳನ್ನು ತೆಗೆದುಕೊಂಡು ಹೋಗಿ ಐದೇ ನಿಮಿಷಗಳಲ್ಲಿ ಒಂದು ಎಲೆಯಲ್ಲಿ ಅಮೇಧ್ಯವನ್ನು, ಮತ್ತೊಂದೆಲೆಯಿಂದ ಮುಚ್ಚಿ ತಂದೇ ಬಿಟ್ಟ. ತೆಂಗಿನ ಕರಟಕ್ಕೆ ನೀರು ಸುರುವಿ ಮುತ್ತುಗದೆಲೆಯ ಅಮೇಧ್ಯವನ್ನು ಅದಕ್ಕೆ ಕಲೆಸಿ ಅವನ ಬಾಯಿಗೆ ಸುರಿಯಲು ಬಾಯ ಹತ್ತಿರಕ್ಕೆ ಕರಟ ಒಯ್ದರೋ... ಇಲ್ಲವೋ... ನಾಗೇಂದ್ರನ ಮೂಗಿಗೆ ವಾಸನೆ ಬಡಿದು ಮುಖ ಕಿವುಚಿಕೊಳ್ಳುತ್ತಾ ಬಧಾರ್ ಭಡಾ ಎಂದು ಕರುಳು ಕಿತ್ತು ಬರುವಂತೆ ಕಾರಿಕೊಂಡ. ಪಟೇಲರು 'ಇನ್ನು ಯೇಚ್ನೆ ಇಲ್ಲ. ಈಗ ಇನ್ನುನ್ನ ನರಸೀಪುರದ ಆಸ್ಪತ್ರೆಗೆ ಕರಕೊಂಡು ಹೋಗಬೈದು' ಎಂದು ಅಪ್ಪಣೆ ಕೊಡಿಸಿದರು. ಅವನ ಮೊಕ ತೊಳೆಸಿ, ಕಂಬಳಿ ಸುತ್ತಿ ಆಸ್ಪತ್ರೆಗೆ

ಕರೆದೊಯ್ದದ್ದೂ ಆಯ್ತು, ಯಾವ ಔಷಧದಿಂದಲೋ ಗೊತ್ತಿಲ್ಲ, ನಾಗೇಂದ್ರ ಬದುಕುಳಿದುಕೊಂಡ. ಅಪ್ಪಾಜಪ್ಪ ಮಾತ್ರ ಈಗಲೂ ಗೇಲಿಯಾಗಿಯೂ ಕೋಪದಲ್ಲಿಯೂ, 'ನನ್ನ ಹೇಲ್ ತಿಂದ್ ಬದುಕುಳಿದೆಯಲ್ಲೋ ಮಗನೆ' ಎಂದು ನಾಗೇಂದ್ರನನ್ನು ಲೇವಡಿಯಾಗಿ ಛೇಡಿಸುವುದು ಇನ್ನೂ ನಿಂತಿಲ್ಲ!

**(ಪ್ರಜಾವಾಣಿ, ೨೬.೦೩.೨೦೦೮)**

## ೩೪. ಅಮ್ಮನ 'ಚಿಲ್ಲರೆ' ನೆನಪುಗಳು...

**ಡಾ. ಕೆ.ಎಸ್.ಚೈತ್ರಾ**

ನವೆಂಬರ್ ಎಂಟರ ರಾತ್ರಿ ಮಕ್ಕಳೆಲ್ಲಾ ಓದುತ್ತಾ ಕುಳಿತಿದ್ದರು. ಊರಿಂದ ಬಂದ ಅಪ್ಪ-ಅಮ್ಮ ಟಿ.ವಿ.ಯಲ್ಲಿ ಸುದ್ದಿ ಕೇಳುತ್ತಿದ್ದರು. ಆಗ ಇದ್ದಕ್ಕಿದ್ದಂತೆ ಐನೂರು, ಸಾವಿರ ನೋಟುಗಳ ರದ್ಧತಿಯ ಸುದ್ದಿ ಪ್ರಸಾರವಾಯಿತು. ಏಕಾಏಕಿ ನಿರ್ಣಯದಿಂದ ಏನೆಲ್ಲಾ ಪರಿಣಾಮಗಳಾಗಬಹುದು ಎಂದು ಮನೆಯಲ್ಲೇ ಪರ-ವಿರೋಧ ವಾದಗಳು ಶುರುವಾದುವು. ಓದು ನಿಲ್ಲಿಸಿ ರೂಮಿಗೆ ಓಡಿದ ಮಕ್ಕಳು ಕೈಯಲ್ಲಿ ತಮ್ಮ ಪಿಗ್ಗಿ ಬ್ಯಾಂಕ್ ತಂದು ಮೇಜಿನ ಮೇಲಿಟ್ಟರು. 'ಅಜ್ಜ-ಅಜ್ಜಿ, ಚಿಕ್ಕಮ್ಮ-ಚಿಕ್ಕಪ್ಪ ಹೀಗೆ ಎಲ್ಲಾ ಕೊಟ್ಟ ದುಡ್ಡನ್ನು ನಾವು ಕೂಡಿಟ್ಟಿದ್ದು ಇದರಲ್ಲಿ ಕೆಲವು ಐನೂರು, ಸಾವಿರದ ನೋಟುಗಳೂ ಇವೆ. ನಾಳೇನೇ ನಮ್ಮ ದುಡ್ಡು ಚೇಂಜ್ ಮಾಡಿ ಕೊಡಿ' ಎಂದು ತಮ್ಮ ಅಪ್ಪನಿಗೆ ಆರ್ಡರ್ ಮಾಡಿದರು. 'ಬಂದ ಸಂಬಂಧಿಕರಿಗೆ ಹೆದರಿಸಿ ಬೆದರಿಸಿ ಬ್ಲಾಕ್ ಮೇಲ್ ಮಾಡಿ ಕಿತ್ತುಕೊಂಡ ನಿಮ್ಮದು ಬ್ಲಾಕ್ ಮನಿ' ಎಂದು ಯಜಮಾನರು ಹೇಳಿದ್ದೇ ತಡ ಜಗಳವೇ ಆರಂಭ, ಅಂತೂ ಈ ಎಲ್ಲಾ ಗಲಾಟೆ ನಡುವೆಯೇ ಪಿಗ್ಗಿ ಬ್ಯಾಂಕ್ ಕಂಡದ್ದೇ ಅಮ್ಮ ತನ್ನ ಬಾಲ್ಯದ ದಿನಗಳ ನೆನಪನ್ನು ಬಿಚ್ಚಿಟ್ಟಳು.

'ಈಗೆಲ್ಲಾ ನಿಮಗೆ ಆಣೆ ಎಂದರೆ ತಿಳಿಯುವುದೇ ಇಲ್ಲ. ನಾವು ಮಕ್ಕಳಾಗಿದ್ದಾಗ ಆಣೆಯ ಕಾಲ. ಒಂದು ರೂಪಾಯಿಗೆ ಹದಿನಾರು ಆಣೆಗಳು, ನಾಲ್ಕಾಣೆ ಅಂದರೆ ಇಪ್ಪತ್ತೈದು ಪೈಸೆಗೂ ಬೆಲೆ ಇತ್ತು. ಆ ಕಾಲಕ್ಕೆ ನಮಗೆ ಅದೇ ದೊಡ್ಡ ದುಡ್ಡು. ಹಳ್ಳಿ ಕಡೆಯ ಸಭೆ ಸಮಾರಂಭಗಳಲ್ಲಿ ಊಟಕ್ಕೆ ಹೋಗುವುದೆಂದರೆ ಬಹಳ ಖುಷಿಯಾಗಿತ್ತು. ನೆರೆಹೊರೆಯ ಗೆಳೆಯ-ಗೆಳತಿಯರು ಸಿಗುತ್ತಾರೆ ಎಂಬುದರ ಜತೆ ಊಟಕ್ಕೆ ಕುಳಿತ ನಮಗೆ ದಕ್ಷಿಣೆಯಾಗಿ ದುಡ್ಡ ಸಿಗುತ್ತಿತ್ತು. ಕರೆದಿದ್ದಕ್ಕೆ ಗೌರವ ಕೊಟ್ಟು ಹೋಗಿ ಪ್ರೀತಿಯಿಂದ ಊಟ ಮಾಡಿದವರಿಗೆ ಕೊಡುವ ಗೌರವ ಅದಾಗಿತ್ತು. ಮಕ್ಕಳಿಗೆ ನಾಲ್ಕಾಣೆ, ಹೆಂಗಸರಿಗೆ ಎಂಟಾಣೆ ಮತ್ತು ಗಂಡಸರಿಗೆ ಒಂದು ರೂಪಾಯಿ. ಲೋಹದ ಈ ನಾಣ್ಯಗಳನ್ನು ಊಟಕ್ಕೆ ಕುಳಿತಾಗ ಎಡಗೈಯಲ್ಲಿ ತೆಗೆದುಕೊಳ್ಳುವಂತಿರಲಿಲ್ಲ. ಹಾಗಾಗಿ ನೀರಿಟ್ಟ ಲೋಟದಲ್ಲಿ ನಾಣ್ಯ ಹಾಕುತ್ತಿದ್ದರು. ಠಣ್ ಎಂದು ನಾಣ್ಯ ನೀರಿಗೆ ಬೀಳುವ ಸದ್ದು ನಮಗೆ ಕರ್ಣಾನಂದಕರವಾಗಿರುತ್ತಿತ್ತು. ಊಟ ಮುಗಿದೊಡನೆ ಆ

ನಾಣ್ಯವನ್ನು ಭದ್ರವಾಗಿ ಮುಷ್ಠಿಯಲ್ಲಿ ಹಿಡಿದು, ಆಗಾಗ್ಗೆ ಸವರಿ, ಅಲ್ಲೇ ಇದೆ ಎಂದು ಖಚಿತ ಪಡಿಸಿಕೊಂಡು ಮನೆಗೆ ಬರುವಾಗ ಜಗತ್ತನ್ನೇ ಗೆದ್ದ ಸಂಭ್ರಮ.

ಈ ರೀತಿ ಸಭೆ ಸಮಾರಂಭಗಳಲ್ಲದೇ ಸಿರ್ಸಿಯಲ್ಲಿದ್ದ ನಮಗೆ ಎರಡು ವರ್ಷಕ್ಕೊಮ್ಮೆ ಮಾರಿಕಾಂಬಾ ಜಾತ್ರೆಯ ಸಡಗರ, ದೂರದೂರದಿಂದ ನೆಂಟರಿಸ್ಟರು



ಬಂದು ನಾಲ್ಕಾರು ದಿನ ಠಿಕಾಣಿ ಹೂಡುತ್ತಿದ್ದರು. ಮನೆಯೇನೂ ದೊಡ್ಡದಲ್ಲ, ಬಂದವರಿಗೆಲ್ಲಾ ಔತಣ ನೀಡುವಳು ಶ್ರೀಮಂತರೂ ನಾವಲ್ಲ. ಹೇಗೋ ಎರಡು ಹೊತ್ತು ಊಟ, ಎರಡು ಜೊತೆ ಬಟ್ಟೆ ಇದ್ದವರು ಅಲ್ವೇ! ಆದರೆ ಅತಿಥಿಗಳಿಗೆ ಮನೆಯೆಂದೂ ತೆರೆದಿರುತ್ತಿತ್ತು. ನನ್ನ ಆಯಿ ಅಂದರೆ, ನಿಮ್ಮ ಮುತ್ತಜ್ಜಿ ಹೇಗೆ ಅಳು ಜನರಿಗೆ ಅನ್ನಪೂರ್ಣೆಯಾಗಿ ಉಪಚಾರ ಮಾಡುತ್ತಿದ್ದಳು ಎಂಬುದು ಇಂದಿಗೂ ಯಕ್ಷ ಪ್ರಶ್ನೆಯೇ ಸರಿ. ಮಕ್ಕಳಾದ ನಮಗೆ ಇದೆಲ್ಲಾ ಬೇಕೂ ಆಗಿರಲಿಲ್ಲ, ಗೊತ್ತಾಗುತ್ತಲೂ ಇರಲಿಲ್ಲ. ಜನ ಬಂದದ್ದೂ ನಮಗೆ ಉಮೇದು. ಇನ್ನೂ ಉಳಿದುಕೊಳ್ಳಿ ಎಂದು ಒತ್ತಾಯಿಸುತ್ತಿದ್ದೆವು. ಜಾತ್ರೆಗೆ ಬರುವವರೂ ನಮ್ಮಂತೆಯೇ, ಸ್ಥಿತಿವಂತರಲ್ಲ. ಆದರೂ ಬರಿಗೈಯಲ್ಲಿ ಬರುತ್ತಿರಲಿಲ್ಲ. ಮನೆಯಲ್ಲಿ ಬೆಳೆದ ತರಕಾರಿ, ಏಲಕ್ಕಿ, ಕಾಳು ಮೆಣಸು, ಹಪ್ಪಳದ ಕಟ್ಟು, ಜೇನುತುಪ್ಪ ಹೀಗೆ ತಮ್ಮ ಕೈಲಾದದ್ದನ್ನು ತರುತ್ತಿದ್ದರು. ಜಾತ್ರೆಗೆ ಹೋಗುವಾಗ ಎಲ್ಲಾ ಮಕ್ಕಳಿಗೆ ಯಥಾಶಕ್ತಿ ದುಡ್ಡು, ಎಂಟಾಣೆ-ಒಂದು ರೂಪಾಯಿ ಕೊಡುತ್ತಿದ್ದರು. ಹಾಗೆ ಕೊಟ್ಟ ದುಡ್ಡನ್ನು ಜೋಪಾನವಾಗಿ ಟನ್ ಡಬ್ಬದಲ್ಲಿ ಕೂಡಿಟ್ಟು ಮುಂದಿನ ಜಾತ್ರೆಯಲ್ಲಿ ಪಿನ್ನು, ಹೊಳೆಯುವ ಟೇಪು, ಚುಕ್ಕಿ ಬಳೆ, ಮಂಡಕ್ಕಿ, ಗಿರಿಗಿಟ್ಟೆ, ಬಣ್ಣದ ಶರಬತ್ ಹೀಗೆ ಏನೆಲ್ಲಾ ಕೊಳ್ಳಬಹುದು ಎಂಬ ಲೆಕ್ಕಾಚಾರ ನಡೆಯುತ್ತಿತ್ತು. ಆಗಿನ ಪುಟ್ಟ-ಮುಗ್ಧ ಮನಸ್ಸಿಗೆ ಕೊಳ್ಳುವ ಕನಸು ಕೊಡುತ್ತಿದ್ದ ಸಂತೋಷ ಈಗ ಕೋಟಿ ಕೊಟ್ಟರೂ ಬಾರದು.

ಸ್ವಲ್ಪ ದೊಡ್ಡವರಾದಂತೆ ನಮಗೆ ಸಿಗುತ್ತಿದ್ದ ದಕ್ಷಿಣೆಯೂ ಏರಿತು. ನಾಲ್ಕಾಣೆಯಿಂದ ಎಂಟಾಣೆಗೆ ಬಡ್ತಿ! ಅದರೊಂದಿಗೆ ಹಾಗೆ ಉಳಿಸಿದ ದುಡ್ಡು ಅಮೂಲ್ಯ ಎಂಬುದೂ ಅರಿವಿಗೆ ಬಂದಿತ್ತು. ಹಾಗಾಗಿ ಎರಡೆರಡೇ ವರ್ಷ ಅಂತರವಿದ್ದ ನಾವು ನಾಲ್ಕು ಮಕ್ಕಳು ಬೇರೆಬೇರೆಯಾಗಿ ಆಗಾಗ್ಗೆ ಖರ್ಚು ಮಾಡದೇ ದುಡ್ಡು ಕೂಡಿಟ್ಟು, ಕಡೆಗೊಮ್ಮೆ ದೊಡ್ಡದನ್ನು ಒಟ್ಟಾಗಿ ಕೊಳ್ಳುವ ನಿರ್ಧಾರ ಮಾಡಿದ್ದೆವು. ಅದಕ್ಕೆ ಸರಿಯಾಗಿ ಬೇಸಿಗೆಯ ಒಂದು ಮಧ್ಯಾಹ್ನ ತಳ್ಳು ಗಾಡಿಯಲ್ಲಿ ನಾನಾ ರೀತಿ ಮಡಕೆಗಳ ಜತೆ ತೆಂಗಿನಕಾಯಿ ಆಕಾರದ ವಿಚಿತ್ರ ಮಣ್ಣಿನ ಮಡಕೆ ಮಾರಾಟಕ್ಕೆ ಬಂದಿತ್ತು. ಅದರ ತುದಿಯಲ್ಲಿ ಚಿಕ್ಕ ತೂತು. ಕುತೂಹಲದಿಂದ ವಿಚಾರಿಸಿದಾಗ ಅದು ದುಡ್ಡು ಕೂಡಿಡಲು ಎಂದೂ ತುದಿಯಲ್ಲಿರುವ

ತೂತು ನಾಣ್ಯ ಹಾಕಲು ಎಂದೂ ಉತ್ತರ ಸಿಕ್ಕಿತ್ತು. ದುಡ್ಡು ಹಾಕುವುದೇನೋ ಸರಿ, ತೆಗೆಯುವುದು ಹೇಗೆ ಎಂಬ ನಮ್ಮ ಪ್ರಶ್ನೆಗೆ ಮಡಕೆ ತೆಗೆಯಲು ಸಾಧ್ಯವಿಲ್ಲ, ತುಂಬಿದ ಮೇಲೆ ಒಡೆದು ತೆರೆಯುವುದು ಎಂದು ಮಾರುವಾತ ವಿವರಿಸಿದ್ದ. ಆವರೆಗೆ ಅಂತಹ ವಸ್ತು ನೋಡದ ನಮಗೆ ಅದರಲ್ಲಿ ದುಡ್ಡು ಕೂಡಿಡುವುದು ಏನೋ ಸಾಧನೆ ಅನ್ನಿಸಿತ್ತು. ಅಂತೂ ಎಲ್ಲರೂ ದುಡ್ಡು ಹಾಕಿ ಸಾಕಷ್ಟು ದೊಡ್ಡದಾದ ಆ ಮಡಕೆ ಕೊಂಡಿದ್ದೆವು. ದೇವರ ಮನೆ ಪಕ್ಕದಲ್ಲಿದ್ದ ಕಪಾಟಿನ ಮೇಲ್ಭಾಗದಲ್ಲಿ ಅದನ್ನು ಇಡಲಾಯಿತು. ಯಾರಾದರೂ ಕಣ್ಣು ಹಾಕಿ ಬಿಟ್ಟರೆ ಎಂಬ ಹೆದರಿಕೆಯಿಂದ, ಆಯಿ ಹಾಕಿದ ಚೆಂದದ ಕಸೂತಿ ಉಳ್ಳ ಬಟ್ಟೆ ಮುಚ್ಚಿಟ್ಟೆವು. ನಮ್ಮ ತಯಾರಿ ನೋಡಿ, 'ಕಪಾಟಿನಲ್ಲಿ ಕಲಶ



ಕೂರಿಸಿದ್ದೀರಿ, ಕೈ ಮುಗಿವುದೊಂದೇ ಬಾಕಿ' ಎಂದು ಅಪ್ಪ ತಮಾಳೆ ಮಾಡುತ್ತಿದ್ದ. ಆ ದಿನದಿಂದಲೇ ಶುರು ನಮ್ಮ ಹಣ ಸಂಗ್ರಹಿಸುವ ಕೆಲಸ. ದಿನಾ ಬೆಳಿಗ್ಗೆ ದೇವರಿಗೆ ಕೈ ಮುಗಿಯುವಾಗ ಬಾಯಿ ಏನೇನೋ ಮಂತ್ರ ಮಣಮಣಿಸಿದರೂ ಮನಸ್ಸು ಪೂರ್ತಿ ಲಕ್ಷ್ಮಿಯ ಫೋಟೋದತ್ತಲೇ! ಆಭರಣಗಳಿಂದ ಸಿಂಗಾರವಾದ ಆ ಲಕ್ಷ್ಮಿ ಕೈಯಿಂದ ನಾಣ್ಯಗಳ ಮಳೆಯೇ ಸುರಿಯುತ್ತಿದ್ದದ್ದು ನಮಗೆ ಆಕರ್ಷಕವಾಗಿತ್ತು. ರಾತ್ರಿ ಮಲಗುವ ಮುನ್ನ ಕತೆ ಕೇಳುವಾಗ ಬಾಲ ಶಂಕರ, ಬಡ ವೃದ್ಧೆಯಲ್ಲಿ ಭಿಕ್ಷೆ ಬೇಡಿ ಆಕೆಯ ಸ್ಥಿತಿಗೆ ಮರುಗಿ ಲಕ್ಷ್ಮಿಯನ್ನು ಸ್ತುತಿಸಿ ಕನಕಮಾಲಾಧಾರಾ ಸ್ತೋತ್ರ ರಚಿಸಿದ್ದನ್ನೂ, ಆನಂತರ ಗುಡಿಸಿಲ ಮಾಡಿನಿಂದ ಚಿನ್ನದ ನೆಲ್ಲಿಕಾಯಿಗಳ ಮಳೆ ಸುರಿದಿದ್ದನ್ನೂ ಕೇಳುವಾಗ ನಮ್ಮ ಕಣ್ಣಲ್ಲೂ ಕನಕದ ಕನಸು. ಕತೆ ಮುಗಿದ ಮೇಲೆ ನಿಧಾನವಾಗಿ ಎದ್ದು, ಕಪಾಟಿನಲ್ಲಿದ್ದ ಮಡಕೆ ಸವರಿ, ಕೆಲವೊಮ್ಮೆ ಕುಲುಕಿ ಝಣ ಝಣ ಸದ್ದು ಕೇಳಿ ಮಲಗುತ್ತಿದ್ದೆವು. ಯಾವಾಗಲಾದರೂ ಬೇಸರವಾದಾಗ ಮಡಕೆಯಲ್ಲಿ ಎಷ್ಟಿರಬಹುದು ಎಂದು ಊಹಿಸುತ್ತಿದ್ದರೆ ಬೇಸರ ತನ್ನಿಂತಾನೇ ಕಡಿಮೆಯಾಗುತ್ತಿತ್ತು.

ಅಂತೂ ಬಹಳ ಶ್ರದ್ಧೆ ಭಕ್ತಿಯಿಂದ ಎಲ್ಲರೂ ತಮಗೆ ಸಿಕ್ಕ ನಾಣ್ಯಗಳನ್ನು ಸುಮಾರು ಆರು ತಿಂಗಳು ಹಾಕಿದ್ದೇನೋ ಹೌದು. ಆದರೆ ಆಶ್ಚರ್ಯವೆಂದರೆ ಮಡಕೆ ಪೂರ್ತಿಯಾಗಿ ತುಂಬೇ ಇರಲಿಲ್ಲ. ಎಷ್ಟೇ ಹಾಕಿದರೂ ತುಂಬದ ಇದು, ಮಾಯಾ ಮಡಕೆಯೇನೋ ಎಂದು ಮಕ್ಕಳಾದ ನಾವು ಮಾತಾಡಿಕೊಂಡರೆ ಅಲ್ಲೇ ಇರುತ್ತಿದ್ದ ಆಯಿ, ಎಳ್ಳು ತುಂಬಿದರೂ ಸಾಕಾಗದ ಚೀಲ, ನಮ್ಮ ಹೊಟ್ಟೆಯಂತೆ ಇದು ಇರಬಹುದು' ಎನ್ನುತ್ತಿದ್ದಳು. ಜತೆಗೆ ದುಡ್ಡು ಸಿಕ್ಕೊಡನೆ ನಾವು ಓಡಿ ಕಾತರದಿಂದ ಅದನ್ನು ತಂದು ಹಾಕುತ್ತಿದ್ದ ರೀತಿಗೆ, ಎಲ್ಲಾ ಕೂಡಿಡಬೇಡಿ, ಸ್ವಲ್ಪವಾದರೂ ಉಪಯೋಗಿಸಿ, ಆನಂದಿಸಿ ಮಕ್ಕಳೇ' ಎನ್ನುತ್ತಿದ್ದಳು. ನಮಗೆ ಆ ಮಾತು ಸರಿ ಅನ್ನಿಸಿದರೂ ಏನೋ ದೊಡ್ಡದನ್ನು ಖರೀದಿಸುವ ಆಸೆ, ಹಾಗಾಗಿ ಬಾಯಿಗೆ ರುಚಿಯಾದ ಪೆಪ್ಪರ್ ಮಿಂಟ್, ಬೊಂಬಾಯಿ ಮಿಠಾಯಿ, ಕಣ್ಣಿಗೆ ಚೆಂದ ಕಂಡ

ರಿಬ್ಬನ್ನು ಬಳೆ ಹೀಗೆ ಸಣ್ಣ ಪುಟ್ಟದ್ದನ್ನು ಕೊಳ್ಳುವ ಬಯಕೆಯನ್ನು ಬಹಳ ಕಳದಿಂದ ಬಿಗಿದು ಕಟ್ಟಿ ಎಲ್ಲವನ್ನೂ ಮಡಕೆಗೆ ಹಾಕುತ್ತಿದ್ದೆವು.

ಆದರೂ ಒಮ್ಮೆ ಶಾಲೆಯಿಂದ ಬರುವಾಗ ಇನ್ನೂ ತುಂಬದ ಮಡಕೆ ಬಗ್ಗೆಯೇ ಚರ್ಚೆ ನಡೆದು ಯಾಕೋ ಮನದಲ್ಲಿ ಸಣ್ಣ ಅನುಮಾನ ಸುಳಿದಾಡಿತ್ತು. ಎಲ್ಲರಿಗಿಂತ ದೊಡ್ಡವನಾದ ಅಣ್ಣ, ಜಾಣನೂ ತುಂಟನೂ ಆಗಿದ್ದ. ಅವನದ್ದೇ ಏನಾದರೂ ಕೈವಾಡವಿರಬಹುದೇ ಎಂಬ ಶಂಕೆ ಮೂಡಿತ್ತು. ಅದಕ್ಕಾಗಿ ಆತನಿಗೆ ಗೊತ್ತಾಗದಂತೆ ಏಳು ಹೆಡೆಯ ಸರ್ಪದಂತೆ ನಮ್ಮ ಮಡಕೆ ಕಾಯಲಾರಂಭಿಸಿದ್ದೆವು. ಒಂದು ಸಂಜೆ, ದೀಪ ಹಚ್ಚುವ ಸಮಯ. ಆಯಿ, ಅಡಿಗೆ ಮನೆಯಲ್ಲಿ ಒರಳುಕಲ್ಲಿನಲ್ಲಿ ಏನೋ ರುಬ್ಬುತ್ತಿದ್ದಳು. ಅಪ್ಪ ಪೇಟೆಯಿಂದ ಬಂದಿರಲಿಲ್ಲ. ಆಟಕ್ಕೆ ಹೋಗಿದ್ದ ನಾವು ಸದ್ದಿಲ್ಲದೆ ಮನೆಯೊಳಗೆ ಹೊಕ್ಕರೆ ಕಂಡಿದ್ದೇನು? ಅಣ್ಣ ನಮ್ಮ ಮಡಕೆಯನ್ನು ತಲೆ ಕೆಳಗೆ ಮಾಡಿ ಅದರ ತೂತಿಗೆ ಪಿನ್ನು ಚುಚ್ಚಿ ನಾಣ್ಯ ಬೀಳಿಸುತ್ತಿದ್ದ. ನಾವು ಕೂಗಿದ ರೀತಿಗೆ ಅಣ್ಣ ಬೆಚ್ಚಿ



ಬಿದ್ದಿದ್ದ, ಅಡಿಗೆ ಮನೆಯಿಂದ ಆಯಿಯೂ ಓಡಿ ಬಂದಿದ್ದಳು. ಅಣ್ಣನ ಕೈಲಿದ್ದದ್ದು ಎರಡೋ ಮೂರೋ ನಾಣ್ಯಗಳಾದರೂ ನಮಗದು ಸಹಿಸಲು ಅಸಾಧ್ಯವಾಗಿತ್ತು. ಅಳು ಕಳ್ಳ ಪಟ್ಟು ಕೂಡಿಟ್ಟ ಹಣವನ್ನು ಈ ರೀತಿ ಲಪಟಾಯಿಸಿದರೆ? ಕಣ್ಮುಂದೆಯೇ, ಕಟ್ಟಿದ ಭವ್ಯ ಸೌಧ ಕುಸಿಯುತ್ತಿರುವ ಭಾವ, ಕಣ್ಣೀರು ಸುರಿಸುತ್ತಾ ನಡುಗುವ ದನಿಯಿಂದ ಆಯಿಯ ಹತ್ತಿರ ದೂರು ಹೇಳಿದ್ದೆವು. ಆಕೆ ಅಣ್ಣನಿಗೆ ಗದರಿದ ಹಾಗೆ ಮಾಡಿ 'ಹೋಗಲಿ ಬಿಡಿ ಮಕ್ಕಳೇ' ಎಂದು ನಮಗೆ ಸಮಾಧಾನ ಹೇಳುತ್ತಿದ್ದಳು. ಅದೇ ಹೊತ್ತಿಗೆ ಅಣ್ಣ ಬಾಂಬ್ ಸಿಡಿಸಿ ಬಿಟ್ಟ! ಇದರಲ್ಲಿ ನನ್ನದೇನೂ ತಪ್ಪಿಲ್ಲ. ಆಯಿಯೇ ನನಗೆ ಹೀಗೆ ತೆಗೆಯುವಂತೆ ಹೇಳಿದ್ದು, ದುಡ್ಡು ತೆಗೆದು ದೀಪ ಹಚ್ಚುವ ಚಿಮಣಿ ಎಣ್ಣೆ ತರಲು ಹೇಳಿದ್ದಾಳೆ" . ನಮಗೆ ನಿಂತ ನೆಲವೇ ಕುಸಿದ ಅನುಭವ. ತಾನು ಸಿಕ್ಕಿಬಿದ್ದು, ಈಗ ಸುಳ್ಳು ಹೇಳುತ್ತಾನೆ ಎಂದು ಜಗಳ ಮಾಡಿದರೂ ಆಯಿ ಮರುಮಾತಾಡದೇ ಸುಮ್ಮನಿದ್ದಳು. ಶಿಲೆಯಂತೆ ನಿಂತ ಆಕೆಯ ಭಂಗಿ ಅದು ಸತ್ಯ ಎಂಬುದನ್ನು ಸಾರಿ ಹೇಳುತ್ತಿತ್ತು. ನಾವು ಮೂವರೂ ಜೋರಾಗಿ ಅಳುತ್ತಲೇ 'ಹೀಗೆ ಇಬ್ಬರೂ ಸೇರಿ ಮೋಸ ಮಾಡಬಾರದಿತ್ತು' ಎಂದು ಕೂಗಾಡಿದೆವು. ಆಯಿ ಒಂದೆರಡು ನಿಮಿಳ ಏನೂ ಮಾತಾಡಲಿಲ್ಲ. ಮುಖ ಮಾತ್ರ ಕೆಂಪಾಗಿತ್ತು, ಸಣ್ಣದಾಗಿತ್ತು.

ಕಡೆಗೆ ನಿಧಾನವಾಗಿಯೇ, "ಹೌದು, ಅಣ್ಣ ಹೇಳಿದಂತೆ ನಾನು ಮಾಡಿದ್ದು ನಿಜವೇ. ನೀವು ಹೇಳುವುದು ಸರಿ. ನಾನು ಹೀಗೆ ಮಾಡಬಾರದಿತ್ತು. ಆದರೆ ಏನು ಮಾಡಲಿ? ನೀವು ನಾಲ್ಕು ಮಕ್ಕಳು. ಪುಸ್ತಕ, ಶಾಲೆಗೆ ಸ್ಕಾಲರ್‌ಶಿಪ್ ಬರುತ್ತದೆ, ಆ ಖರ್ಚಿಲ್ಲ ನಿಜ. ಆದರೆ ಹೊಟ್ಟೆಗೆ ಬಟ್ಟೆಗೆ ಬೇಕಲ್ಲವೇ? ನಿಮ್ಮ ಅಪ್ಪನ ಆದಾಯದಲ್ಲಿ ಹೇಗೋ ಎಲ್ಲವನ್ನೂ ತೂಗಿಸಲು ಹರಸಾಹಸ ಮಾಡಿದರೂ ತಿಂಗಳ ಕೊನೆಯಲ್ಲಿ ಕೈ ಖಾಲಿಯೇ. ಆಗ ದಿನನಿತ್ಯದ ಖರ್ಚು ಪೂರೈಸಲು

ಕೆಲವು ಬಾರಿ ಅಣ್ಣನಿಂದ ಇದರಿಂದ ದುಡ್ಡು ತೆಗೆಸಿದ್ದು ನಿಜ. ನನಗಂತೂ ಇದು ಆಪದ್ಧನವೇ! ನಾಳೆಗಾಗಿ ಕೂಡಿಡುವುದು ಸರಿ, ಆದರೆ ಇವತ್ತನ್ನು ಕಳೆಯುವುದು ಹೇಗೆ ಮಕ್ಕಳೇ? ನಿಮ್ಮ ದುಡ್ಡಲ್ಲಿ ಚಾಪುಡಿ, ಬೇಳೆ, ಸಕ್ಕರೆ ಇನ್ನೂ ಏನೇನೋ ತಂದಿದ್ದೇನೆ. ನೀವು ಪ್ರತೀ ಬಾರಿ ಆತುರಾತುರವಾಗಿ ದುಡ್ಡು ಹಾಕಿ ಎಣಿಸುತ್ತಿದ್ದದ್ದು ಕಂಡಾಗ ಮನಸ್ಸು ಎನ್ನುತ್ತಿತ್ತು. ಆದರೆ ಕೈ ಖಾಲಿಯಾದಾಗ ಅಸಹಾಯಕತೆ. ಯಾರಲ್ಲೋ ಸಾಲ ಸೋಲ ಮಾಡುವ ಬದಲು ಮಕ್ಕಳ ದುಡ್ಡು ಅವರಿಗೇ ಉಪಯೋಗಿಸುವುದರಲ್ಲಿ ತಪ್ಪಿಲ್ಲ ಎನಿಸಿ ಧೈರ್ಯ ತಂದುಕೊಂಡೆ. ನಿಮ್ಮ ಮನಸ್ಸಿಗೆ ತುಂಬಾ ನೋವಾಗಿದೆ. ಆದರೇನು ಮಾಡಲಿ, ಮರ್ಯಾದೆಯಿಂದ ಬದುಕಲು ಪ್ರಯತ್ನಿಸುವ ನಮ್ಮ ಸ್ಥಿತಿ ಇಂಥದ್ದು. ಇಳಕ್ಕೆಲ್ಲಾ ಕಾರಣವಾದ ಈ ಮಡಕೆಯನ್ನು ಒಡೆದು ದುಡ್ಡು ಹಂಚಿಕೊಳ್ಳಿ. ಅದು ಅಲ್ಲಿರುವುದೇ ಬೇಡ, ನಾಳೆ ನಾಳೆಗಿರಲಿ, ಇವತ್ತು ಒಂದಷ್ಟು ಹೊತ್ತಾದರೂ ನಿಮ್ಮ ಆಸೆ ನೆರವೇರಲಿ ಎಂದುಬಿಟ್ಟಳು. ಆಯಿಯ ಸೀರೆಯ ಬಣ್ಣ ಮಾಸಿತ್ತು, ಕೈಗೆ ದೋಸೆ ಹಿಟ್ಟು ಅಂಟಿತ್ತು. ಬೆವರಿಗೆ ಹಣೆಯ ಕುಂಕುಮ ಕರಗಿ ಹರಿಯುತ್ತಿತ್ತು, ಹಾಗೇ ಕಣ್ಣಲ್ಲಿ ನೀರೂ!



ಆಯಿಯ ಮಾತುಗಳು ಪೂರ್ತಿ ಅರ್ಥವಾಗುವ ವಯಸ್ಸು ನಮ್ಮದಲ್ಲ. ಆದರೂ ದುಡ್ಡು ಹೋದ ಸಂಕಟದ ಜತೆ ಆಯಿಯ ಕಂದಿದ ಮುಖ ದುಃಖ ಮೂಡಿಸಿತ್ತು. ಆಯಿಯ ಒತ್ತಾಯದಂತೆ ಫಟಾರ್ ಎಂದು ಮಡಕೆ ಒಡೆದು ಇದ್ದಷ್ಟು ದುಡ್ಡು ಹಂಚಿಕೊಂಡು ಆಕೆಗೂ ಪಾಲು ಕೊಟ್ಟೆವು. ಮಡಕೆ ಮುರಿದು ಚೂರಾಗಿತ್ತು ಥೇಟ್ ಆಯಿಯ ಮತ್ತು ನಮ್ಮ ಮನಸ್ಸಿನಂತೆ. ಅದಾದ ನಂತರ ನಾವು ದುಡ್ಡು ಕೂಡಿಡುವುದನ್ನೇ ಬಿಟ್ಟೆವು. ಇದು ನಮ್ಮ ಪಿಗ್ಗಿ ಬ್ಯಾಂಕ್ ಕತೆ..." ಎಂದು ಅಮ್ಮ ತನ್ನ 'ಚಿಲ್ಲರೆ' ನೆನಪುಗಳನ್ನು ಹಂಚಿಕೊಂಡಳು.

ಮಕ್ಕಳಿಂದ ಹುಂ, ಉಹುಂ ಯಾವುದೂ ಇಲ್ಲ. ಬರೀ ಸೊರ್ ಸೊರ್ ಸದ್ದು. ನೋಟಿನ ಭರಾಟೆಯಲ್ಲೂ ಚಿಲ್ಲರೆ ನೆನಪು ಎಲ್ಲರನ್ನೂ ಕಂಗೆಡಿಸಿದ್ದು ಸತ್ಯ. ಒಂದೂ ಮಾತಿಲ್ಲದೇ ಮಕ್ಕಳು ತಮ್ಮ ಪಿಗ್ಗಿ ಬ್ಯಾಂಕ್ ನನ್ನ ಕೈಗಿತ್ತು ಅಮ್ಮನ ತೊಡೆಯ ಮೇಲೆ ಮಲಗಿದರು. ನನಗೆ ಆ ಬಾಕ್ಸ್‌ನಲ್ಲಿದ್ದ ಚಿಲ್ಲರೆಯ ಝಣ ಝಣದೊಂದಿಗೆ ಆಯಿಯ ಮುಖ ಕಣ್ಮುಂದೆ ಕಾಡುತ್ತಿತ್ತು...!

**(ಉದಯವಾಣಿ, ೦೭.೦೫.೨೦೧೭)**

## ೩೫. ಅಯ್ಯೋsss... ಜಿರಳೆ!

### ಗಾಯತ್ರಿ ಮೂರ್ತಿ

ಸಾಮಾನ್ಯವಾಗಿ ಹೆಂಗಸರು ಜಿರಲೆಗಳೆಂದರೆ ಹೆದರ್ತಾರೆ. ಅದರಲ್ಲೂ ಹಾರೋ ಜಿರಲೆ ನೋಡಿದ್ರಂತೂ ಕಿರಿಚಿಕೊಂಡು ಓಡಿ ಹೋಗುವವರೇ ಹೆಚ್ಚು. ಕೆಲವರಂತೂ ಅದನ್ನು ಕಂಡ ಕೂಡಲೇ ಭಯಭೀತರಾಗುತ್ತಾರೆ. ಇಂತಹ ಭೀತಿಗೆ 'ಕಟ್ಸಾರಿಡಾ ಫೋಬಿಯ' ಅಂತಾರಂತೆ. ಅಲ್ಲ, ಎಂತಹ ಸಂದರ್ಭದಲ್ಲೂ ವಿಚಲಿತರಾಗದ ಅನೇಕ ಹೆಂಗಸರು ಜಿರಳೆಗಳನ್ನು ಕಂಡ ತಕ್ಷಣ ಭಯಭೀತರಾಗಿ ಅದೇಕೆ ಹಾಗೆ ಬೆದರಿ ತಲ್ಲಣಿಸುತ್ತಾರೆ! ಬಹುಶಃ ಹುಲಿ, ಕರಡಿ ಬಂದರೂ ಅವರು ಅಷ್ಟೊಂದು ಹೆದರುತ್ತಾರೋ ಇಲ್ಲವೋ? ಒಮ್ಮೆ ಬಸ್ಸಿನಲ್ಲಿ ಮೈಸೂರಿಗೆ ಹೋಗುತ್ತಿದ್ದಾಗ, ಹಿಂದಿನ ಸೀಟಿನಲ್ಲಿ ಕುಳಿತ ಹೆಂಗಳೆಯರ ಜೋರು ಚರ್ಚೆ ಕಿವಿಗೆ ಬಿತ್ತು. ಅದರ ಸಾರಾಂಶ-ಇಬ್ಬರಿಗೂ ಜಿರಳೆಗಳೆಂದರೆ ವಿಪರೀತ ಭಯ. ಅದೂ ರಾತ್ರಿಯ ವೇಳೆ ಬಾತ್ ರೂಮಿಗೆ ಹೋದಾಗ ಮೀಸೆ ತಿರುವುತ್ತಾ ಜಿರಳೆಗಳು ಅತ್ತಿತ್ತ ಓಡಾಡುವುದೇನಾದರೂ ಕಣ್ಣಿಗೆ ಬಿದ್ದರೆ ಜೋರಾಗಿ ಕಿರುಚಿಕೊಂಡು ಓಡಿ ಬರುತ್ತಾರಂತೆ. ಒಮ್ಮೆಯಂತೂ ಅವಳು ಹೀಗೆ ಕಿರುಚಿಕೊಂಡು ಓಡಿ ಬಂದಿದ್ದು ಕಂಡು, ಅಕ್ಕಪಕ್ಕದ ಮನೆಯವರು ಇವರ ಮನೆ ಬಾಗಿಲು ಬಡಿದು ಒಳಗೆ ನುಗ್ಗಿ ಸಮಾಚಾರವೇನೆಂದು ಕೇಳಿದರಂತೆ! ಹೆಂಡತಿಗೆ ಅವಳ ಗಂಡ ಚಿತ್ರಹಿಂಸೆ ಮಾಡುತ್ತಿದ್ದಾನೆಂದು ಅನುಮಾನ ಬಂದು, ಪೊಲೀಸಿಗೆ ದೂರು ಕೊಡುವ ಮುನ್ನ, ಗಂಡನನ್ನು ರೆಡ್ ಹ್ಯಾಂಡೆಡ್' ಆಗಿ ಹಿಡಿದು, ನಂತರ ಪೊಲೀಸಿಗೆ ಕೊಡುವುದೆಂದು ಅವರು ತೀರ್ಮಾನಿಸಿ ಬಂದಿದ್ದರಂತೆ. ಅಂದಿನಿಂದ ಅವಳ ಗಂಡ ಮೊದಲು ಬಾತ್ ರೂಮಿಗೆ ಹೋಗಿ ಜಿರಳೆ ಇಲ್ಲವೆಂದು ಖಚಿತ ಪಡಿಸಿಕೊಂಡು, ಇದ್ದರೆ ಅದನ್ನು ಸಾಯಿಸಿ, ನಂತರ ಹೆಂಡತಿಗೆ ಬಾತ್ ರೂಮಿಗೆ ಹೋಗಲು ಹೇಳುತ್ತಾನಂತೆ. ಹೀಗೆ ಹೇಳಿ ಆ ಹೆಂಗಸು ಜೋರಾಗಿ ನಗುತ್ತಿದ್ದಳು.

ಆದರೆ ಅಪವಾದ ಎನ್ನುವಂತೆ ನಾನು ಜಿರಲೆಗೆ ಹೆದರುವುದಿಲ್ಲ. ಬದಲಿಗೆ ಅದನ್ನು ಕಂಡಾಗ ಮನೆಯಿಂದಾಚೆ ಎಸೆಯುವವರೆಗೆ ಸಮಾಧಾನವಿಲ್ಲ. ಅದು ನನ್ನ ಪೌರುಷವನ್ನು ಕೆಣಕುತ್ತದೆ. ನಿನ್ನಿಂದ ಏನು ಮಾಡಲು ಸಾಧ್ಯ ಎಂದು ಸವಾಲೆಸೆಯುತ್ತೇನೋ ಎನ್ನುವಂತೆ ಕೈಗೆ ಸಿಗದೆ ಅತ್ತಿತ್ತ ಹಾರುತ್ತದೆ. ಇಲ್ಲವೇ ತಪ್ಪಿಸಿಕೊಂಡು ಎಲ್ಲೋ ತಲೆಮರೆಸಿಕೊಳ್ಳುತ್ತದೆ. ನನ್ನ ಕೈಯಿಂದ ತಪ್ಪಿಸಿಕೊಂಡು ಸಂದುಗೊಂದಿನಲ್ಲಿ ಸೇರಿಕೊಂಡರೂ ಅದನ್ನು ಹುಡುಕಿ ಬೇಟೆಯಾಡುವವರೆಗೆ ನನಗೆ ಸಮಾಧಾನವಿರುವುದಿಲ್ಲ. ಅದಕ್ಕೆ ಪೊರಕೆಯಿಂದ ನಾಲ್ಕೈಟು ಬಿಗಿದು, ಹಿಡಿದು ಆಚೆಗೆಸೆದರೆ, ಯುದ್ಧದಲ್ಲಿ ಜಯಶಾಲಿಯಾದ ಅನುಭವ. ಸಧ್ಯ. ಇದನ್ನು ಪ್ರಾಣಿ ದಯಾ ಸಂಘದವರು ಓದುವುದಿಲ್ಲ ಅಂದ್ಕೋತೀನಿ. ಹಾಗೇನಾದರೂ ಒಂದು ವೇಳೆ ಅವರು ಈ ಲೇಖನವನ್ನು ಓದಿ, ನಾನು ಪ್ರಾಣಿ ಹಿಂಸೆ ಮಾಡ್ತೀನಿ ಅಂತ ನಮ್ಮ ಮನೆ

ಮುಂದೆ ಬಂದು ಧರಣಿ ಹೂಡಿದರೆ ಏನು ಮಾಡೋದು? ಹಾಂ, ಅದಕ್ಕೂ ಒಂದು ಉಪಾಯವಿದೆ. ಅವರನ್ನು ಮರ್ಯಾದೆಯಿಂದ ಒಳಗೆ ಕರೆದು, ನಮ್ಮ ಮನೆಯಲ್ಲಿರುವ ಎಲ್ಲಾ ಜಿರಲೆಗಳನ್ನೂ ಸುರಕ್ಷಿತವಾಗಿ ಹಿಡಿದುಕೊಂಡು ಹೋಗಿ, ನಮ್ಮ ಮನೆಯನ್ನು ಜಿರಲೆ ಮುಕ್ತ ಪ್ರದೇಶವನ್ನಾಗಿ ಮಾಡಿ ಎಂದು ಹೇಳುತ್ತೇನೆ. ಹಾಗೆ ಮಾಡಲು ನಾನು ಅವರಿಗೆ ಸೂಕ್ತ ಸಂಭಾವನೆ ಕೂಡ ಕೊಡಲು ಸಿದ್ಧ. ಅಂದ ಹಾಗೆ, ಜಿರಲೆಗಳ ಬಗ್ಗೆ ನನ್ನ ಅನುಭವದ ಕೆಲವು ಪ್ರಸಂಗಗಳನ್ನು ಹಂಚಿಕೊಳ್ಳಲೇ ಬೇಕು.

ನಮ್ಮ ಮನೆಯಲ್ಲಿ ನನ್ನ ಮಗಳಿಗಂತೂ ಜಿರಲೆಗಳೆಂದರೆ ವಿಪರೀತ ಭಯ, ಅಸಹ್ಯ. ಅಂದು ರಾತ್ರಿ ಮಗಳಿಗೆ ಜ್ವರ ಬರೋ ಹಾಗೆ ಸ್ವಲ್ಪ ಮುಜುಗರ ಇತ್ತು. ಮರುದಿನ ಪರೀಕ್ಷೆ ಬೇರೆ, ಇಂಜಿನಿಯರಿಂಗ್ ಆರನೆಯ ಸೆಮಿಸ್ಟರ್‌ದು. ಅವಳಿಗೆ ಕುಡಿಯಲು ಕಾಫಿ ಮಾಡಿ ಕೊಟ್ಟು, 'ನಿನಗೇನಾದರೂ ಬೇಕಾದ್ರೆ ಒಂದು ಸಾರಿ ಕೂಗು, ಎದ್ದು ಬರ್ತೀನಿ' ಎಂದು ಹೇಳಿ ಹೋಗಿ ಮಲಗಿದೆ.

ಸ್ವಲ್ಪ ಹೊತ್ತಾಗಿರಬಹುದು, ನನಗೆ ತೂಗು ಹತ್ತಿತ್ತು. ಇದ್ದಕ್ಕಿದ್ದ ಹಾಗೆ ಮಗಳು ಕಿಟಾರನೆ ಕಿರುಚಿದ ಶಬ್ದ ಕೇಳಿತು. ಥಟ್ಟನೆ ಎಚ್ಚರವಾಗಿ ಗಾಬರಿಯಾಯಿತು. ಏನಾಯ್ತು ಇವಳಿಗೆ? ಸ್ವಲ್ಪ ಹೊತ್ನಲ್ಲಿ ಚೆನ್ನಾಗೇ ಇದ್ದಲ್ಲಾ? ಕಳ್ಳ,

ಗಿಳ್ಳ ಏನಾದ್ರೂ ಅವಳ ರೂಮಿಗೆ ನುಗ್ಗಿದಾನಾ? ಅಥವಾ ಹಾವು, ಚೇಳು ಏನಾದ್ರೂ ಬಂದ್ದಿಟ್ಟಿದ್ಯಾ? ಒಂದು ಕ್ಷಣದಲ್ಲಿ ಹತ್ತಾರು ಕೆಟ್ಟ ಯೋಚನೆಗಳ ಸಾಲು ಮನದ ಮುಂದೆ ಸುಳಿದು, ದಿಗ್ಗನೆದ್ದು, ಅವಳ ಕೋಣೆಗೆ ಹೋಗಿ ನೋಡುತ್ತೇನೆ!

"ಅಮ್ಮ, ಮೈಯೆಲ್ಲಾ ಜುಮ್ ಅನ್ನತ್ತೆ, ಅಯ್ಯೋ, ಇನ್ನೇನು ಗತಿ! ಹಾರೋ ಜಿರಲೆ, ನನ್ನ ಮೈಮೇಲೆ ಬಂದು ಬಿಡತ್ತೇss ಅಷ್ಟೇ' ಎಂದು ಕೂಗಿ ಕೊಂಡಳು. ಅದೇ ಆಯ್ತು! ಅಯ್ಯೋssss ಎಂದು ಕೂಗಾಡುತ್ತಾ, ಕೈಕಾಲು ಜಾಡಿಸ್ತಾ, ಒಂಥರಾ ಥಕಥೈ ಅಂತ ಡ್ಯಾನ್ಸ್ (ಈಗ ಕೈಕಾಲುಗಳನ್ನು ವಿಚಿತ್ರವಾಗಿ ಆಡಿಸೋದೂ, ಲಾಗ ಹಾಕೋದು, ಸರ್ಕಸ್ ಮಾಡೋದು ಎಲ್ಲಾ ಡ್ಯಾನ್ಸ್ ಲೆಕ್ಕಕ್ಕೇ ಬರತ್ತಲ್ವಾ?) ಮಾಡೋ ಅಷ್ಟರಲ್ಲಿ ಅದು ಹೆದಕ್ಕೊಂತೇನೋ, ಭರನೆ ಹಾರಿ ಕರ್ಟನ್ ಮೇಲೆ ಏದುಸಿರು ಬಿಡ್ತಾ (ಹೌದಾ? ನಿಜವಾಗ್ಲ!), 'ಇದ್ಯಾರಪ್ಪಾ ಹೀಗೆ ಅರಡ್ತಾ ಇದಾರೆ ನನ್ನ ನೋಡಿ' ಅಂತ ಆಶ್ಚರ್ಯಪಡ್ತಾ ಕೂತ್ಕಂಡು, ಇನ್ನೆಲ್ಲಿ ಜಾಗ ಹುಡುಕಲಿ' ಅಂತ ನೋಡ್ತಿತ್ತೇನೋ? ಅಷ್ಟರಲ್ಲಿ ನನ್ನ ಮಗಳು ನನ್ನೊಬ್ಬಳನ್ನೇ ಆ ಜಿರಲೆಯನ್ನು ಎದುರಿಸಲು ಬಿಟ್ಟು ಕೋಣೆಯಿಂದ ಆಚೆ ಓಡಿ ಹೋಗಿದ್ದಳು.

"ಅಮ್ಮ, ಬೇಗ ಅದನ್ನು ಸಾಯಿಸು, ನಾನು ಓದ್ಕೋ ಬೇಕು' ಆ ಜಿರಲೆಯ ಭಯದಲ್ಲೂ ಕೂಗಿ ಹೇಳಲು ಮರೆಯಲಿಲ್ಲ. ಸರಿ, ನಾನು ಅಡುಗೆ ಮನೆಗೆ ಹೋಗಿ ಹೊರಕೆಯೆಂಬ ನನ್ನ ಆಯುಧವನ್ನು ತಂದು ಜಿರಳೆ ಬೇಟೆಗೆ ಸನ್ನದ್ಧಳಾದೆ.

ಕಿಟಕಿಯ ಕರ್ಟನ್ ಮೇಲೆ ಕುಳಿತಿದ್ದ ಜಿರಲೆ ಎಲ್ಲಿ ಹೋಯಿತು? ಎಂದು ಆಶ್ಚರ್ಯ ಪಡುವಷ್ಟರಲ್ಲಿ ಮತ್ತೆ ಅದು ಸರಂತ ನನ್ನ ತಲೆಯ ಮೇಲೆ ಹಾರಿ ಹೋಯಿತು. ಈಗ ಅದು ಅವಳ ಹಾಸಿಗೆಯ ಮೇಲೆ ಸೊಂಪಾಗಿ ಕುಳಿತು ಮೀಸೆ ಆಡಿಸುತ್ತ, ಅತ್ತಿತ್ತ



ನೋಡಿತು. ಸೊಗಸಾದ ಹಾಸಿಗೆ, ಸಾಧ್ಯವಾದರೆ ಅಲ್ಲೇ ರಾತ್ರಿ ಕಳೆಯುವ ಚಿಂತೆ ಇತ್ತೇನೋ ಅದಕ್ಕೆ? ಆದರೆ ಅದು ನಮಗೆ ಬೇಡದ ಅತಿಥಿ, ಅದನ್ನು ನೆಮ್ಮದಿಯಾಗಿ ಅಲ್ಲಿರಲು ಬಿಟ್ಟೇನೇ? ಆದರೂ ಹಾಸಿಗೆಯ ಮೇಲೆ ಅದಕ್ಕೆ ಪೊರಕೆ ಸೇವೆ ಮಾಡಲು ಮನಸ್ಸು ಬರಲಿಲ್ಲ.

“ಅಮ್ಮಾ, ನಾನು ಓದ್ಕೊಬೇಕು. ಬೇಗ ಅದನ್ನು ಸಾಯಿಸಮ್ಮ, ಅಂತ ಇವಳು ಬೇರೆ ಆಚೆಯಿಂದಲೇ ಕೂಗ್ಕೊಂಡ್ಲು. 'ಅಯ್ಯೋ! ಇರೇ ಸ್ವಲ್ಪ, ಅದು ಸಿಕ್ಕರೆ ತಾನೇ ಹೊಡೆಯೋದು. ನೀನು ಸ್ವಲ್ಪ ಸುಮ್ನಿರ್ತೀಯಾ...' ಎಂದು ತಾಕೀತು ಮಾಡಿದೆ.

ಜಿರಲೆಯಂತೂ ಮೆತ್ತನೆಯ ಹಾಸಿಗೆಯ ಸುಖ ಸೋಪಾನದ ಮೇಲೆ ಸೊಂಪು ಮಾಡುತ್ತ ಮೀಸೆ ತಿರುವುತ್ತಿತ್ತು.

ಮತ್ತೆ ಅದಕ್ಕೇನು ತೋಚಿತೋ ಅಥವಾ, ನನ್ನನ್ನು ಬೇಟೆಯಾಡಲು ಬಂದೆಯಾ? ಅದು ಹೇಗೆ ಹಿಡೀತೀಯೋ ನೋಡ್ತೀನಿ?' ಎಂದು ಸವಾಲೆಸೆಯುವಂತೆ ಭರ್ರನೆ ಮೇಲಕ್ಕೆ ಹಾರಿತು. ನಾನು ಬೆಚ್ಚಿಬಿದ್ದು ಸಣ್ಣಗೆ ಕಿರುಚಿದೆ. 'ಏನಾಯ್ತುಮ್ಮಾ?' ಎಂದು ಅಲ್ಲಿಂದಲೇ ಕೂಗಿದಳು. ನಾನು, “ಏನೂ ಆಗ್ಲಿಲ್ಲ, ಅದು ಹಾರ್ತಿದೆ' ಎಂದೊಡನೆ ಅವಳು ಸರ್ರನೆ ಎದುರು ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ಬಿಟ್ಟಳು.

ಇತ್ತ, ನಾನೊಬ್ಬಳೇ, ಅದನ್ನು ಎದುರಿಸಬೇಕಾದ ಶೋಚನೀಯ ಪರಿಸ್ಥಿತಿ!

ಅಂತೂ ಇಂತೂ ಅದು ನೆಲದ ಮೇಲೆ ಕುಳಿತು, ಮುಂದಿನ ಹೆಜ್ಜೆಯ ಬಗ್ಗೆ ಯೋಚಿಸತೊಡಗಿತು. ತಕ್ಷಣವೇ ಕಾರ್ಯ ಪ್ರವೃತ್ತಳಾದೆ. ಅದೆಲ್ಲಿಂದ ಪೌರುಷ ಬಂತೋ! ಅದರ ಮೇಲೆ ಬಲವಾಗಿ ನನ್ನ ಸೊರಕೆ ಆಯುಧದಿಂದ ಪ್ರಹಾರ ನೀಡಿದೆ. ಅದು ಸತ್ತಂತೆ ಒಂದು ಕ್ಷಣ ಮಲಗಿತು. ಮತ್ತೆ ಮೀಸೆ ತಿರುವ ತೊಡಗಿದೊಡನೆ ಬಿತ್ತು ಮತ್ತೊಂದು, ಮಗದೊಂದು ಏಟು, ಅದು ಮತ್ತೆ ತಲೆ ಎತ್ತದಂತೆ!

ಮಗಳು ಅಲ್ಲಿಂದಲೇ ಕೂಗಿದಳು, 'ಅಮ್ಮ, ಅದು ಸಾಯ್ತಾ?'

ನಾನು ಯುದ್ಧದಲ್ಲಿ ಜಯಶಾಲಿಯಾದ ವೀರ ರಮಣಿಯಂತೆ ಸತ್ತ (ಅಲ್ಲ, ಸತ್ತಂತಿದ್ದ!) ಜಿರಲೆಯನ್ನು ಎತ್ತಿಕೊಂಡು ಹೊರಬಂದೆ. ಸದ್ಯ ಬದುಕಿದೆ, ಎಂದು ಉದ್ಧರಿಸುತ್ತಾ ಮಗಳು ತನ್ನ ಕೋಣೆಗೆ ಹೋದಳು.

ನಾನು ಜಿರಲೆಯನ್ನು ಕಸದ ಬುಟ್ಟಿಗೆಸೆದು ನೆಮ್ಮದಿಯ ನಿಟ್ಟುಸಿರು ಬಿಟ್ಟೆ ಅನ್ನಿ! ಮರು ದಿನ ಕಸದ ಬುಟ್ಟಿಯಲ್ಲಿ ನೋಡ್ತೀನಿ, ಗಿಳಿಯು ಪಂಜರದೊಳಿಲ್ಲ! ಅಂದರೆ ನಾನು ಸಾಯಿಸಿದೀನಿ ಅಂತ ಭಾವಿಸಿದ್ದ ಜಿರಲೆ ಚೇತರಿಸಿಕೊಂಡು ಹಾರಿ ಹೋಗಿತ್ತು! ಅಷ್ಟಿಲ್ಲದೆ ಜಿರಲೆ ಸಂತತಿ ೧೦೦-೨೦೦ ದಶಲಕ್ಷ ವರ್ಷಗಳಿಂದ ಭೂಮಿಯ ಮೇಲಿರಕ್ಕಾಗಿತ್ತಾ? ನೀವೇ ಹೇಳಿ.

***

ಸತ್ತಂತಿದ್ದ ಜಿರಲೆ ಹಾರಿ ಹೋಗಿದ್ದು ಕಂಡು ನನಗೆ ಅಕ್ಕ ಹೇಳಿದ್ದು ನೆನಪಾಯಿತು. 'ಜಿರಲೆಗಳಿಗೆ ನೀನು ನಾಲ್ಕೈಟು ಹಾಕಿದ್ರೆ ಸತ್ತಂಗೆ ಬಿದ್ದಿರತ್ವೆ ನಿಜ. ಸ್ವಲ್ಪ ಹೊತ್ತಾದ

ಮೇಲೆ ಚೇತರಿಸ್ಕೊಂಡು ಓಡಿ ಹೋಗತ್ತೆ, ಕೆಲವು ಸಲ ಎರಡು ದಿನ ಸತ್ತ ಹಾಗೆ ಬಿದ್ದಿದ್ದವು ಕೂಡ ಚೇತರಿಸಿಕೊಂಡಿರೋದನ್ನು ನೋಡಿದೀನಿ' ಎಂದಿದ್ದಳು. ನಾನಾಗ, 'ಜಿರಲೆಗಳ ಮೇಲೆ ರಿಸರ್ಚ್ ಮಾಡ್ತಿದೀಯಾ?' ಎಂದು ತಮಾಷೆ ಮಾಡಿದ್ದೆ.

ನಾನು ಒಮ್ಮೆ ಹೀಗೆ ಜಿರಲೆ ಬೇಟೆಯಾಡಿ ಅದನ್ನು ಎಸೆಯುವುದರಲ್ಲಿದ್ದೆ. ನನ್ನ ಮೈದುನನಿಗೆ ನಾನು ಜಿರಲೆಗೆ ಹೊಡೆದು ಸಾಯಿಸಿದ್ದು ಇಷ್ಟವಾಗಲಿಲ್ಲವೇನೋ? ಅವನು, ಅದನ್ನು ಹೊಡೆದು ಸಾಯಿಸಿದ್ರಲ್ಲಾ? ಅದಕ್ಕೆ ಜೀವ ಕೊಡೋ ಶಕ್ತಿ ನಿಮಗಿದೆಯಾ? ಹಾಗಿದ್ರೆ ಮಾತ್ರ ಸಾಯ್ಸಿ,' ಎಂದ.

"ಅರೆ, ನಾನು ಹಾಗೇ ಬಿಟ್ಟರೆ, ಅವುಗಳ ಸಂತಾನಾಭಿವೃದ್ಧಿಯಿಂದಾಗಿ ಅವುಗಳು ಅಡುಗೆ ಕಟ್ಟೆ ಮೇಲೆ ಹಾಯಾಗಿ ಓಡಾಡಿಕೊಂಡು, ನಾನು ಮಾಡಿರೋ ಅಡುಗೆ, ಹಾಲು, ನೀರು, ಕಾಫಿ ಡಿಕಾಕನ್ ಎಲ್ಲಾದರಲ್ಲೂ ಕಂಡು ಬರುತ್ತೆ, ಅದಕ್ಕೆ ಸಿದ್ಧ ಇದ್ರೆ ಮಾತ್ರ ಅವುಗಳನ್ನು ಇನ್ನು ಮೇಲೆ ಸಾಯಲ್ಲ' ಎಂದೆ. ಅಂದಿನಿಂದ ಆ ಬಗ್ಗೆ ಒಂದು ಮಾತೂ ಇಲ್ಲ.

ಒಮ್ಮೆ ನನ್ನ ತವರು ಮನೆಯಲ್ಲಿ ಮೇಲೆ ಹೇಳಿದಂತಹುದೇ ಪ್ರಸಂಗ ನಡೆದಿತ್ತು. ಅರ್ಧ ರಾತ್ರಿಯಲ್ಲಿ ಎದ್ದು ಬಾತ್‌ರೂಮಿಗೆ ಹೋಗಿದ್ದ ನನ್ನ ತಂಗಿ ಹೊರ ಬರುತ್ತಿದ್ದಂತೆ ಅದೆಲ್ಲಿತ್ತೋ, ಜಿರಲೆಯೊಂದು ಹಾರಿ ಅವಳ ಡ್ರೆಸ್ ಮೇಲೆ ಆಸೀನವಾಗಿದ್ದೇ ತಡ, ಅವಳು ಕಿಟಾರನೆ ಕಿರುಚಿದ್ದಕ್ಕೆ ಮನೆಯವರಿಗೆಲ್ಲ ಎಚ್ಚರವಾಯಿತು. ನಾನು ಎದ್ದು ಗಾಬರಿಯಿಂದ ಹೊರ ಬಂದೆ. ಭಯಭೀತಳಾದ ನನ್ನ ತಂಗಿಯ ಥೈಯತಕ್ಕ ನೃತ್ಯ ಕಂಡು ನಗತೊಡಗಿದೆ.

ಅಷ್ಟು ಹೊತ್ತಿಗೆ ನನ್ನ ತಂಗಿಯ ಡ್ರೆಸ್ ಮೇಲಿಂದ ಹಾರಿದ ಜಿರಲೆ, ಅಲ್ಲೇ ಅವಳ ಮುಂದೇನೇ ನೆಲದ ಮೇಲೆ ನೆಮ್ಮದಿಯಾಗಿ ಕೂತು ಬಿಡ್ತು, ಏನು ಮಾಡ್ತೀಯೋ ಮಾಡ್ಕೊ, ಎನ್ನೋ ಹಾಗೆ

ನಮ್ಮ ತಂದೆಯಂತೂ, 'ಏನೇ, ಹೀಗೆ ಗರ್ಭ ನಿರ್ಭೇದ ಆಗೋ ಹಾಗೆ ಕೂಗಕ್ಕೆ ಏನಾಯ್ತು? ಯಾರಾದರೂ ಹಾರ್ಟ್ ವೀಕ್ ಆಗಿರೋವ್ರಿದ್ರೆ, ಇಷ್ಟು ಹೊತ್ತಿಗೆ ಹಾರ್ಟ್ ಅಟ್ಯಾಕ್ ಆಗಿರೋದು ಅಷ್ಟೆ' ಎಂದು ಬೈಯ್ಯುತ್ತಿದ್ದರು. ನನ್ನ ತಂಗಿ, 'ಯಾರ್ಗೂ ಏನೂ ಆಗಿಲ್ಲವಲ್ಲ, ನಮ್ಮನೇಲಿ ಎಲ್ಲರ ಹಾರ್ಟೂ ಚೆನ್ನಾಗಿದೇಂತ ಪ್ರೂವಾಯ್ತು' ಎಂದು ಹಲ್ಲು ಕಿರಿದಳು.

ಅತ್ತ ಗಾಬರಿಯಿಂದ, 'ನಾನು ಹೇಗೆ ಬರ್ಲಿ, ಅಪ್ಪ, ಅದನ್ನು ಹೊಡಿ' ಅಂತ ಕೂಗ್ತಿರೋ ತಂಗಿ, ಇತ್ತ ನಾವು, ಮಧ್ಯದಲ್ಲಿ ಜಿರಲೆ! ಅದನ್ನು ಹೊಡಿಯಕ್ಕೆ ಅಂತ ಹೊರಕೆ ತರೋದ್ರಲ್ಲಿ, ಅದಕ್ಕೆ ಸುಳಿವು ಸಿಕ್ಕಿತೋ ಏನೋ, ಸರಸರಾಂತ ನುಸುಳಿಕೊಂಡು ಸಾಮಾನುಗಳ ಸಂದೀಲಿ ಸೇರೊಂತು. ನನ್ನ ತಂಗಿ ಬದುಕಿದೆಯಾ ಬಡಜೀವಾಂತ ಓಡಿ ಹೋಗಿ ಹಾಸಿಗೆಯ ಮೇಲೆ ಮುಸುಕು ಹಾಕಿ ಮಲಗಿ ಬಿಟ್ಟಳು. ಅಷ್ಟು ಹೊತ್ತಿನಲ್ಲಿ ಅದನ್ನು ಬೇಟೆಯಾಡೋ ಹುರುಪು ಯಾರಿಗೂ ಬಾರದೆ, ನಾವೆಲ್ಲ ಹೋಗಿ ಮಲಗಿದೆವು.

* * *



ಇರಲಿ, ಒಟ್ಟಿನಲ್ಲಿ ಸಾಧಾರಣ ಜಿರಳೆಗೆ ಯಾಕೆ ಹೆದರ ಬೇಕೋ ನನಗಂತೂ ಅರ್ಥವಾಗುವುದಿಲ್ಲ. ಆದರೆ ಕಂದು ಬಣ್ಣದ ಈ ಜೀವಿ ಸಾಮಾನ್ಯವಾದುದಂತೂ ಅಲ್ಲ. ಘಟಾನುಘಟಿ ಡೈನೋಸಾರ್‌ಗಳೇ ಕಾಲಕ್ರಮದಲ್ಲಿ ಅಳಿದು ಹೋದರೂ ಸುಮಾರು ಮೂನ್ನೂರೈವತ್ತು ಮಿಲಿಯನ್ ವರ್ಷಗಳಿಂದ ಅವುಗಳ ವಂಶ ಉಳಿದುಕೊಂಡು ಬಂದಿದೆ ಎಂದರೆ, ಎಂತಹ ಕಠಿಣ ಪರಿಸರಕ್ಕೂ ಹೊಂದಿಕೊಳ್ಳುವಂತಹ ಜಿರಳೆಗಳ ಗಟ್ಟಿತನಕ್ಕೆ 'ಹ್ಯಾಟ್ಸ್ ಆಫ್' ಎನ್ನದೆ ವಿಧಿಯಿಲ್ಲ. ಜೊತೆಗೆ ಅವುಗಳ ಸರ್ವನಾಶ ಮಾಡಲು ಕಂಕಣ ತೊಟ್ಟು ನಿಂತಿರುವ ಕಂಪೆನಿಗಳಿವೆ. ಅವರು ಕಾಲಕಾಲಕ್ಕೆ ವಿವಿಧ ರೀತಿಯ ಔಷಧಿಗಳನ್ನು ತಯಾರು ಮಾಡಿ ಜಿರಲೆ ಸಂತತಿ ನಿರ್ನಾಮ ಮಾಡುತ್ತೇವೆಂದು ಸಾರುತ್ತಾರೆ. ಅದನ್ನು ನಂಬಿ ಜಿರಳೆ ಔಷಧಿ ತಂದು ಹಾಕಿದರೂ, ಅನೇಕ ಜಿರಳೆಗಳು ಸಾಯುತ್ತವೇನೋ ನಿಜ, ಆದರೆ, ಔಷಧಿಯನ್ನು ಅಲ್ಪ ಪ್ರಮಾಣದಲ್ಲಿ ಸೇವಿಸಿ, ನಾಲ್ಕು ದಿನ ಸತ್ತಂತೆ ಬಿದ್ದಿದ್ದು, ಪುಟಿದೇಳುವ ಜಿರಳೆಗಳು ಆ ಔಷಧಿಗೆ

ನಿರೋಧ ಶಕ್ತಿ ಬೆಳೆಸಿಕೊಳ್ಳುತ್ತವೆ. ಇದು ಅವುಗಳ ಸಂತತಿಯೊಂದಿಗೆ ಮುಂದುವರೆಯುತ್ತದೆ. ಅಲ್ಲಿಗೆ ಆ ಔಷಧಿಗಳ ಪರಿಣಾಮ ಅತ್ಯಲ್ಪ ಅಥವಾ ನಗಣ್ಯವಾಗುತ್ತದೆ.

* * *

ಜಿರಳೆಗಳೆಂದರೆ ಅಸಹ್ಯಕರ, ಅಸಹನೀಯ, ಜುಗುಪ್ಸೆ ಬರಿಸುವ ಪ್ರಾಣಿ ಎಂದೆಲ್ಲಾ ನಾವು ಬಣ್ಣಿಸಬಹುದೇನೋ? ಆದರೆ, ಅಸ್ಟ್ರೇಲಿಯಾದಲ್ಲಿ ಜಿರಳೆಗಳನ್ನು ಡಬ್ಬಿಗಳಲ್ಲಿಟ್ಟು ಸಾಕಿ, ಅವುಗಳ ರೇಸ್ ಏರ್ಪಡಿಸುತ್ತಾರಂತೆ ಈ ಬಗ್ಗೆ ಓದಿ ನನಗೆ ಹೀಗೂ ಉಂಟೇ? ಎನ್ನಿಸಿತು.

ಅದಕ್ಕೂ ಮಿಗಿಲಾಗಿ ಈ ಭೀಭತ್ಸಕರ ಸುದ್ದಿ ಓದಿ, ಇದೆಂತಹ ಸ್ಪರ್ಧೆಗಳು, ಪ್ರಾಣಾಂತಿಕವಾದವು ಎನ್ನಿಸಿತು. ಹಾಂ, ಜಿರಳೆಗಳೊಂದಿಗೆ ಪ್ರಾಣಾಂತಿಕ ಸ್ಪರ್ಧೆ?! ಇದೇನು ಹೀಗೆ ವಿಚಿತ್ರವಾಗಿ, ಒಗಟು ಮಾತು ಹೇಳ್ತಿದೀನಿ ಅನ್ನಿಸ್ತಿದೆಯಾ? ಇಗೋ ನಾನು ಓದಿದ ಮಾಹಿತಿ ಹೀಗಿದೆ-ಫ್ಲಾರಿಡಾದಲ್ಲಿ ೨೦೧೨ರಲ್ಲಿ ನಡೆದ ಸಂಗತಿ. ಒಬ್ಬ ಸಾಕು ಪ್ರಾಣಿ ಮಾರುವ ಅಂಗಡಿಯವ ಮೋಜಿಗಾಗಿ ಜಿರಳೆ ತಿನ್ನುವ ಸ್ಪರ್ಧೆ ಏರ್ಪಡಿಸಿದ್ದನಂತೆ, ಅದೂ ಬದುಕಿರುವ ಜಿರಳೆಗಳು! ಗೆದ್ದವನಿಗೆ ದುಬಾರಿ ಬೆಲೆಯ ಹೆಬ್ಬಾವು ಬಹುಮಾನ! ಆ ಹೆಬ್ಬಾವನ್ನು ಗೆಳೆಯನಿಗೆ ಮಾರಿ ಅಪಾರ ಹಣ ಸಂಪಾದಿಸುವ ಆಸೆ ಒಬ್ಬ ವ್ಯಕ್ತಿಗೆ ಅಂತೂ ಅವನು ಯಶಸ್ವಿಯಾಗಿ ಜಿರಳೆಗಳನ್ನು ಸ್ವಾಹಾ ಮಾಡಿ, ಗೆದ್ದು, ಅಪಾರ ಹಣದ ಒಡೆಯನೇನೋ ಆದ. ಆದರೆ, ಸ್ವಲ್ಪ ಹೊತ್ತಿನಲ್ಲೇ, ವಾಂತಿಯಾಗಿ ಬೆಳಗಿನ ವೇಳೆಗೆ ಮರಣ ಹೊಂದಿದ. ಅವನು ಗೆದ್ದ ಹಣ ಬಹುಶಃ ಅವನನ್ನು ಅಣಕಿಸುತ್ತಿತ್ತೋ ಏನೋ? ಎಂತಹ ಹುಚ್ಚು ಸ್ಪರ್ಧೆ? ಅದನ್ನು ಏರ್ಪಡಿಸಿದ ಭೂಪರನ್ನು ಸ್ಯಾಡಿಸ್ಟ್ ಎನ್ನಬೇಕೇ? ಇಲ್ಲವೇ ಹಣದ ಆಸೆಗೆ ಏನು ಬೇಕಾದರೂ ಮಾಡಬಲ್ಲೆ ಎನ್ನುವ ಜನರ ಹುಚ್ಚು ನೋಡಿ ನಗಬೇಕೇ? ಒಟ್ಟಿನಲ್ಲಿ ಜನ ಮರುಳೋ ಜಾತ್ರೆ ಮರುಳೋ ಎಂಬ ಸಮಾಚಾರದಂತೆಯೇ ಜನರ ವ್ಯವಹಾರ ಕೂಡ!

**(ಅಪರಂಜಿ', ಜುಲೈ ೨೦೧೭)**

## ೩೭. ಊರ ದನಗಳ ಕುರಿತ ನೂರೆಂಟು ನೆನಪುಗಳು

### ಸಹನಾ ಕಾಂತಬೈಲು

ನಮ್ಮ ಊರಿನಲ್ಲಿ ನಾಟಿ ಹಸುವಿಗೆ ಊರದನ ಎಂದು ಕರೆಯುತ್ತೇವೆ. ತೊಂಬತ್ತರ ದಶಕದ ಮಾತು. ಆಗ ನನ್ನ ಮನೆಯಲ್ಲಿ ಮತ್ತು ನಮ್ಮ ಊರಿನಲ್ಲಿ ಊರದನಗಳು ಮಾತ್ರ ಇದ್ದವು. ಎಲ್ಲವೂ ಮಲೆನಾಡು ಗಿಡ್ಡ ಜಾತಿಯವು. ಆಗಿನ್ನೂ ಅಧಿಕ ಹಾಲು ಕೊಡುವ ಜರ್ಸಿ, ಎಚ್.ಎಫ್. ತಳಿಗಳ ಪ್ರವೇಶ ಆಗಿರಲಿಲ್ಲ. ಅವುಗಳಿಗೆ ಈಗಿನ ಹಸುಗಳಿಗೆ ಕೊಡುವಂತೆ ಬಕೆಟ್ ಬಕೆಟ್ ಹಿಂಡಿ ತಿನ್ನಿಸುವ ಕ್ರಮವೂ ಇರಲಿಲ್ಲ. ಅಕ್ಕಚ್ಚು ಕೊಟ್ಟರೆ ಮುಗಿಯಿತು. ಅದೇ ದೊಡ್ಡ ಪೌಷ್ಟಿಕಾಂಶವುಳ್ಳ ಆಹಾರ. ಅಕ್ಕಚ್ಚು ಎಂದರೆ ಮತ್ತೇನಲ್ಲ ಅಕ್ಕಿ-ಬೆಣ್ಣೆ ತೊಳೆದ ನೀರು, ಅನ್ನ ಬಸಿದ ಗಂಜಿ, ನಿನ್ನೆಯ

ಸಾರು-ಸಾಂಬಾರು-ಅನ್ನ, ಹೆಚ್ಚಾಗಿ ಉಳಿದ ಮಜ್ಜಿಗೆ... ಇವುಗಳನ್ನೆಲ್ಲ ಎಸೆಯದೆ ಒಂದು ದೊಡ್ಡ ಬಾಲಿಗೆ ಹಾಕಿಟ್ಟು ಹಸುವಿಗೆ ಕುಡಿಯಲು ಕೊಡುವ ಸಮಯದಲ್ಲಿ ಅದಕ್ಕೆ ಸ್ವಲ್ಪ ತೌಡು, ನೀರು, ಉಪ್ಪು ಸೇರಿಸುವುದು. ತೆಳ್ಳಗೆಯೂ ಅಲ್ಲದ ಗಟ್ಟಿಯೂ ಅಲ್ಲದ ಈ ಪಾಕವನ್ನು ಹಸುಗಳು ಇಷ್ಟಪಟ್ಟು ಚಪ್ಪರಿಸಿ ಕುಡಿಯುತ್ತಿದ್ದವು. ಬಾಲ್ಡಿ ಸದ್ದು ಮಾಡಿದರೆ ಸಾಕು ಓಡೋಡಿ ಬರುತ್ತಿದ್ದವು. ಅದನ್ನು ಕುಡಿಯುತ್ತ ಹೋದ ಹಾಗೆ ಅವುಗಳ ಹೊಟ್ಟೆಯ ಗಾತ್ರವೂ ಉಬ್ಬುತ್ತಾ ಹೋಗುತ್ತಿತ್ತು. ಆಮೇಲೆ ಒಂದು ಸೂಡಿ ಬೈಹುಲ್ಲನ್ನೋ, ಸ್ವಲ್ಪ ಹಸಿರು ಹುಲ್ಲನ್ನೋ ಹಾಕಿದರೆ ಸಾಕಿತ್ತು. ಅವು ಸಂತೃಪ್ತಿಯಿಂದ ಮೆಲುಕಾಡುತ್ತಾ ಮಲಗಿಕೊಳ್ಳುತ್ತಿದ್ದವು.

ಆಗ ಊರದನಗಳನ್ನು ಯಾರೂ ಕಟ್ಟಿ ಹಾಕಿ ಸಾಕುತ್ತಿರಲಿಲ್ಲ. ನಾವು ಬೆಳಿಗ್ಗೆ ಸೂರ್ಯೋದಯಕ್ಕೆ ಮೊದಲೇ ಹಾಲು ಕರೆದು ಹೊರಗೆ ಮೇಯಲು ಅಟ್ಟುತ್ತಿದ್ದೆವು ಅಲ್ಲಲ್ಲ... ಹಟ್ಟಿ ಬಾಗಿಲು ತೆರೆದರೆ ಸಾಕು ಇದನ್ನೇ ಕಾಯುತ್ತಿರುವಂತೆ ಸಾಲಾಗಿ ಶಿಸ್ತಿನ ಸಿಪಾಯಿಗಳ ಹಾಗೆ ಅವೇ ಕಾಡಿನ ದಾರಿ ಹಿಡಿದು ನಡೆಯುತ್ತಿದ್ದವು. ಮತ್ತೆ ಅವು ಬರುತ್ತಿದ್ದದ್ದು ಗೋಧೂಳಿ ಸಮಯಕ್ಕೆ, ಕೆಲವೊಮ್ಮೆ ಚಂದ್ರ ಕಾಣಿಸಿಕೊಂಡ ನಂತರ. ಎಷ್ಟೇ ಹೊತ್ತಿಗೆ ಬರಲಿ ಅವುಗಳ ಹಾಲು ಹಿಂಡುವ ಕೆಲಸವನ್ನು ಅತ್ತೆ ಗೊಣಗದೆ ಶ್ರದ್ಧೆಯಿಂದ ಮಾಡುತ್ತಿದ್ದರು. ಒಮ್ಮೊಮ್ಮೆ ನಡುರಾತ್ರಿ ಹಸುಗಳು ಬಂದು ಹಟ್ಟಿ ಬಾಗಿಲಲ್ಲಿ ನಿಂತು, 'ಅಂಬಾ' ಎನ್ನುತ್ತಿದ್ದವು. ಹಸುಗಳ ಹಾದಿ ಕಾದು ಕಾದು ಆಗಷ್ಟೇ ದಿಂಬಿಗೆ ತಲೆ ಕೊಟ್ಟ ಅತ್ತೆ, 'ಬಂದೇ' ಎಂದು ಹಸುಗಳಿಗಿಂತ ದೊಡ್ಡ ಧ್ವನಿಯಲ್ಲಿ ಕೂಗಿಕೊಳ್ಳುತ್ತ ಒಂದು ಕೈಯಲ್ಲಿ ನೀರು ತುಂಬಿದ ಚೆಂಬು, ಇನ್ನೊಂದು ಕೈಯಲ್ಲಿ ಚಿಮಣಿ ದೀಪ ಹಿಡಿದು ಹಾಲು ಕರೆಯಲು ಹೊರಡುತ್ತಿದ್ದರು. ನಿದ್ದೆಯ ಮಂಪರಿನಲ್ಲೇ ಮಾವ



'ಜಾಗ್ರತೆ, ಚಿಮಣಿ ದೀಪ ಒಣಗಿದ ಹುಲ್ಲಿಗೆ ತಾಗಿ ಮಾಡಿಗೆ ಬೆಂಕಿ ಹಿಡಿಯುವ ಸಾಧ್ಯತೆ ಇದೆ' ಎಂದು ಪ್ರತಿಬಾರಿ ಹೊಸದೆಂಬಂತೆ ಹೇಳುತ್ತಿದ್ದರು. ಆಗ ಇದ್ದದ್ದು ಒಂದೆರಡು ಹಸುಗಳಲ್ಲ. ೧೫-೨೦ ಇತ್ತು. ಎಲ್ಲದಕ್ಕೂ ಒಂದೊಂದು ಚಂದದ ಹೆಸರು, ಗಂಗೆ, ಗೌರಿ, ಕಾವೇರಿ, ಯಮುನೆ, ಕಪಿಲೆ, ಬೆಳ್ಳಿ, ಕೆಂಪಿ, ಕಾಳಿ, ಪಾರ್ವತಿ, ಜಾನಕಿ, ಭಾಗ್ಯ, ಸೀತೆ... ಹೀಗೆ, ನಾವು 'ಕಾಳಿ' ಎಂದು ಕರೆದರೆ ಆ ಹೆಸರಿನ ದನ ಏನು ಎಂಬಂತೆ ಕಿವಿ ನೆಟ್ಟಗೆ ಮಾಡಿ ನಮ್ಮನ್ನು ನೋಡುವುದೇ ಒಂದು ಸೊಗಸು. ಅವುಗಳನ್ನು ಸ್ವಲ್ಪವೇ ಗಾಳಿ, ಬೆಳಕು ಬರುವ ದೊಡ್ಡ ಗೂಡಿನಂಥ ಕೋಣೆಯೊಳಗೆ ಕೂಡಿ

ಹಾಕುತ್ತಿದ್ದೆವು. ಹಾಲು ಕರೆಯುವ ಹಸುವನ್ನು ಆ ಸಮಯದಲ್ಲಿ ಮಾತ್ರ ಕಟ್ಟುತ್ತಿದ್ದೆವು. ಕರುಗಳಿಗೆ ಬೇರೊಂದು ಕೋಣೆ. ನಾನು ಅತ್ತೆಗೆ ನನ್ನ ತವರು ಮನೆಯಲ್ಲಿರುವಂತೆ ತೆರೆದ ಹಟ್ಟಿ ಮಾಡಲು ಮದುವೆಯಾದ ಹೊಸದರಲ್ಲಿ ಹೇಳಿದ್ದೆ. ಅದಕ್ಕೆ ಅವರು, 'ನಿನ್ನ ಅಮ್ಮನ ಊರಾದರೆ ಪಟ್ಟಣ. ನಮ್ಮ ಊರು ದಟ್ಟ ಕಾಡು ಅಲ್ಲವಾ? ಮೊನ್ನೆ ಮೇಯಲು ಹೋದ ಬಾಣಂತಿ ಗಿರಿಜೆಯನ್ನು ಹುಲಿ ತಿಂದದ್ದು ನೆನಪಿಲ್ಲವಾ? ಅದರ ಕರು ಈಗಲೂ ತಾಯನ್ನು ನೆನೆಸಿಕೊಂಡು ಹೇಗೆ ಬೊಬ್ಬಿರಿಯುತ್ತದೆ ನೋಡು. ಇಲ್ಲಿ ಕೆಲವೊಮ್ಮೆ ರಾತ್ರಿ ಹಟ್ಟಿಗೇ ಬಂದು ಹುಲಿ ಹಸುವನ್ನು ಹಿಡಿದುಕೊಂಡು ಹೋಗುವುದೂ ಉಂಟು. ಹಾಗಾಗಿ ಮಾವ ಈ ತರದ ಹಟ್ಟಿ ಕಟ್ಟಿಸಿದ್ದಾರೆ' ಎಂದಿದ್ದರು. ಆಮೇಲೆ ಅತ್ತೆ ಜತೆ ನಾನು ತೆರೆದ ಹಟ್ಟಿ ಮಾಡುವಂತೆ ಹೇಳಲಿಲ್ಲ. ಆದರೂ ಎಲ್ಲಾದರೂ ಆಧುನಿಕ ಹಟ್ಟಿ ಕಂಡರೆ ನಮ್ಮ ಹಸುಗಳನ್ನೂ ಅಂಥ ಹಟ್ಟಿಯಲ್ಲಿಯೇ ಇಡಬೇಕು ಎಂಬ ಕನಸು ಕಾಣುತ್ತಿದ್ದೆ.

ಒಂದು ಸಾರಿ ಅತ್ತೆ, ಮಾವ, ಗಂಡ ಜೊತೆಯಲ್ಲಿ ಏನೋ ಕಾರ್ಯದ ನಿಮಿತ್ತ ಬಂಧುಗಳ ಮನೆಗೆ ಹೋಗಿದ್ದರು. ಹಟ್ಟಿ ತುಂಬ ಕೆಸರಾಗಿತ್ತು. ಕೂಲಿಯವರ ಹತ್ತಿರ ಮನೆ ಎದುರು ದಟ್ಟವಾಗಿ ಬೆಳೆದಿದ್ದ ಬಸರಿ ಮರದ ಸೊಪ್ಪು ಕಡಿದು ತಂದು ಹಟ್ಟಿಗೆ ಹಾಕಲು ಹೇಳಿದೆ. ಕೆಲಸ ಮುಗಿಸಿ ಅವರು ಮನೆಗೆ ಹೋದರು. ಹೇಗೆಲ್ಲ ಸೊಪ್ಪು ಹಾಕಿದ್ದಾರೆ ಎಂದು ನೋಡಲು ನಾನು ಹಟ್ಟಿಗೆ ಹೋದೆ. ಮೂರ್ನಾಕು ಹಸುಗಳು ಅಡ್ಡ ಬಿದ್ದು ಹೊರಳಾಡುತ್ತಿದ್ದವು. ಬಾಯಲ್ಲಿ ನೊರೆ ಬರುತ್ತಿತ್ತು. ಇಲ್ಲಿವರೆಗೂ ಚೆನ್ನಾಗಿದ್ದ ಹಸುಗಳಿಗೆ ಇದ್ದಕ್ಕಿದ್ದ ಹಾಗೆ ಏನಾಯ್ತು? ಹುಚ್ಚುಗಿಚ್ಚು ಹಿಡಿಯಿತಾ? ಎಂದು ಗಾಬರಿ ಬಿದ್ದೆ. ಮನೆಯಲ್ಲಿ ನಾನೊಬ್ಬಳೆ, ಯಾರಲ್ಲಿ ಹೇಳುವುದು? ಏನು ಮಾಡುವುದು? ಒಂದೂ ತಿಳಿಯಲಿಲ್ಲ. ಆಗ ಈಗಿನಂತೆ ಫೋನ್, ಮೊಬೈಲ್ ಸೌಕರ್ಯ ಇರಲಿಲ್ಲ. ಗಂಡ ಬರುವುದನ್ನು ಕಾಯದ ಹೊರತು ಬೇರೆ ದಾರಿ ಇರಲಿಲ್ಲ. ಬಂದ ಮೇಲೆ ಅತ್ತೆ ನನಗೆ ಬಸರಿ ಮರದ ಸೊಪ್ಪು ಹಾಕಿಸಿದ್ದಕ್ಕೆ ಜೋರು ಮಾಡಿದರು. ಅದನ್ನು ಹಸುಗಳು ತಿಂದರೆ ಅದರ ಮೇಣ ಹೊಟ್ಟೆಯಲ್ಲಿ ಗಟ್ಟಿಯಾಗಿ ಮೆಲುಕು ಹಾಕಲು ಆಗದೆ ಸಾಯುತ್ತವೆ. ಕೂಡಲೇ ಡಾಕ್ಟರನ್ನು ಕರೆದು ತಾ' ಎಂದು ಗಂಡನನ್ನು ಗೋಡಾಕ್ಟರ್ ಇರುವಲ್ಲಿಗೆ ಅಟ್ಟಿದರು. ಡಾಕ್ಟರೇನೋ ಬಂದರು. ಆದರೆ ಆ ಹಸುಗಳನ್ನು ಉಳಿಸಲು ಸಾಧ್ಯವಾಗಲಿಲ್ಲ. ಈ ನೋವು ಇವತ್ತಿಗೂ ನನ್ನನ್ನು ಬಾಧಿಸುತ್ತದೆ.



ಹೀಗಿರಲು ಒಂದು ಮಳೆಗಾಲದಲ್ಲಿ ಲಚ್ಚುಮಿ ಎಂಬ ಹೆಸರಿನ ಗಬ್ಬದ ಹಸು ಬೆಳಗ್ಗೆ ಮೇಯಲು ಹೋದದ್ದು ರಾತ್ರಿಯಾದರೂ ಬರಲೇ ಇಲ್ಲ. ಒಂದು ದಿನವಾಯಿತು; ಎರಡು ದಿನವಾಯಿತು; ವಾರವಾಯಿತು ಪತ್ತೆಯೇ ಇಲ್ಲ. ಅದರ ಜೊತೆ ಹೋದ ದನಗಳೆಲ್ಲವೂ ಹಿಂತಿರುಗಿದ್ದವು. ಅತ್ತೆ ಕೆಲಸದ ಕರಿಯನನ್ನು ಹುಡುಕಲು ಕಳಿಸಿದರು. ಅವನು

ಬೆಳಗ್ಗೆಯಿಂದ ಸಂಜೆವರೆಗೆ ಹುಡುಕಿದರೂ ಹಸು ಸಿಕ್ಕಲಿಲ್ಲ. ನಾನು ಹುಡುಕಲು ಹೊರಟೆ. ಜೋರು ಮಳೆಯನ್ನೂ ಲೆಕ್ಕಿಸದೆ ಲಚ್ಚುಮೀ' ಎಂದು ಕರೆಯುತ್ತಾ ಕಾಡಲ್ಲಿ ಅಲೆಯತೊಡಗಿದೆ. ದೂರದಿಂದ 'ಅಂಬಾ' ಎಂಬ ಧ್ವನಿ ಕೇಳಿಸಿತು. ಶಬ್ದ ಬಂದ ದಿಕ್ಕಿನತ್ತ ನಡೆದೆ. ಲಚ್ಚುಮಿ ಒಂದು ದೊಡ್ಡ ಮರದ ಅಡಿಯಲ್ಲಿ ಚಳಿಗೆ ನಡುಗುತ್ತ ಮುದುರಿ ನಿಂತಿತ್ತು. ಅದು ಒಂದೇ ಅಲ್ಲ ಜೊತೆಯಲ್ಲಿ ಚಿಗರೆ ಮರಿಯಂತಿರುವ ಮುದ್ದಾದ ಕರು. ಮೊಲೆ ತಿನ್ನುತ್ತಿತ್ತು. ಓಡುತ್ತಿತ್ತು. ಮತ್ತೆ ಬಂದು ಮೊಲೆ ತಿನ್ನುತ್ತಿತ್ತು. ಅದುವರೆಗೂ ಹಸುವಿನಂತೆ ಇದ್ದ ಹಸು ಈಗ ನನಗೆ 'ಹೂಂ, ಹೂಂ' ಎಂದು ಹೂಂಕರಿಸುತ್ತ ಹಾಯಲು ಬಂದಿತು. ನಾನೆಲ್ಲಾದರೂ ಕರುವಿಗೆ ತೊಂದರೆ ಕೊಟ್ಟರೆ ಎಂಬ ಯೋಚನೆ ಅದಕ್ಕೆ. ಅಲ್ಲೇ ಇದ್ದ ಒಂದು ಕೋಲು ಹಿಡಿದು ಹಸುವನ್ನು ಮನೆಗೆ ಹೊರಡಿಸಿದೆ. ಜಪ್ಪಯ್ಯ ಎನ್ನಲಿಲ್ಲ. ಮಾಡುತ್ತೇನೆ ಇದಕ್ಕೆ ಉಪಾಯ ಎಂದು ಕರುವನ್ನು ಅವುಚಿ ಹಿಡಿದುಕೊಂಡು ಮನೆ ಕಡೆ ಓಟಕ್ಕಿತ್ತೆ. ಈಗ ಹಸುವೂ ಓಡುತ್ತಾ ನನ್ನನ್ನು ಹಿಂಬಾಲಿಸತೊಡಗಿತು. ಮತ್ತೊಂದು ಸಾರಿ ಇನ್ನೊಂದು ಹಸು ಮನೆಗೆ ಎರಡು ದಿನವಾದರೂ ಬಂದಿಲ್ಲ ಎಂದು ಕಾಡಲ್ಲಿ ಹುಡುಕಲು ಹೊರಟ ನನಗೆ ಕಂಡದ್ದು ಹುಲಿ ಅರ್ಧಂಬರ್ಧ ತಿಂದು ಬಿಟ್ಟ ಹಸುವಿನ ಕಳೇಬರ.

ನನ್ನ ಮದುವೆಯಾಗಿ ಸುಮಾರು ಐದಾರು ವರ್ಷ ಆಗುವಲ್ಲಿಯವರೆಗೂ ಅತ್ತೆಯೇ ಹಟ್ಟಿಯ ಸರ್ವಾಧಿಕಾರಿಯಾಗಿದ್ದರು. ನನಗೆ ಹಾಲು ಹಿಂಡುವುದು ಬಿಡಿ ಕೆಚ್ಚಲಿನ ಹತ್ತಿರ ಕೈ ಕೊಂಡು ಹೋಗಲೂ ಭಯವಾಗುತ್ತಿತ್ತು. ಒಮ್ಮೆ ಅತ್ತೆ, ಮಗಳ ಮನೆಗೆ ಬಾಣಂತನಕ್ಕೆಂದು ಎರಡು ತಿಂಗಳ ಮಟ್ಟಿಗೆ ಹೋಗಲೇಬೇಕಾಯಿತು. ಈಗ ಹಾಲು ಕರೆಯುವ ಜವಾಬ್ದಾರಿ ನನಗೆ. ನಾನು ಹೆದರಿ ಹೆದರಿ ಚೆಂಬು ಹಿಡಿದು ಕೆಚ್ಚಲಿಗೆ ನೀರು ಹಾಕಿ ತೊಳೆದು ಕರುವನ್ನೊಮ್ಮೆ ಅಗಿಯಲು ಬಿಟ್ಟು ಪುನ: ತೊಳೆದು ಇನ್ನೇನು ಹಾಲು ಹಿಂಡಲು ಶುರುಮಾಡಬೇಕು ಹಸು ಮುಖವನ್ನು ನನ್ನತ್ತ ತಿರುಗಿಸಿತು. ಹಾಂ, ಮುಗಿಯಿತು ನನ್ನ ಕತೆ ಈಗ ಹಸು ಕೊಂಬಿನಿಂದ ನನ್ನನ್ನು ತಿವಿಯದೆ ಬಿಡುವುದಿಲ್ಲ ಅಂದುಕೊಂಡೆ. ಹೆದರಿಕೆಯಿಂದ ಎದೆ ಹೊಡೆದುಕೊಳ್ಳತೊಡಗಿತು. ಆದರೆ ಅದು ಹಾಗೇನೂ ಮಾಡದೆ ನನ್ನನ್ನು ಒಮ್ಮೆ ಮೂಸಿ ನೋಡಿ ತಲೆ ನೆಕ್ಕಿ ಮತ್ತೆ ಅಲುಗಾಡದೆ ನಿಂತಿತು. ನಾನು ಹಾಲು ಕರೆದಾದ ಮೇಲೆಯೇ ಅದು ಸ್ಥಾನಪಲ್ಲಟ ಮಾಡಿದ್ದು. ಆಮೇಲೆ ನನಗೆ ಹಸುಗಳ ಹೆದರಿಕೆ ಸಂಪೂರ್ಣವಾಗಿ ಹೋಯಿತು. ಅವುಗಳು ನನಗೆ ಮನೆ ಮಕ್ಕಳಂತಾದವು. ಅತ್ತೆ ಮಗಳ ಮನೆಯಿಂದೇನೋ ಬಂದರು. ಆದರೆ ಅಂದಿನಿಂದ ನಾನೇ ಹಟ್ಟಿಯ ಯಜಮಾನಿಯಾದೆ!

ಈ ಮಲೆನಾಡು ಗಿಡ್ಡ ತಳಿಗಳು ಲೀಟರ್‌ಗಟ್ಟಲೆ ಹಾಲು ಕೊಡುವುದಿಲ್ಲ. ಒಂದು ಲೀಟರ್ ಕೊಟ್ಟರೆ ಅದೇ ಹೆಚ್ಚು. ಕೆಲವದರ ಮೊಲೆಗಳಂತೂ ಉಣ್ಣೆಯಂತೆ

ಕೆಚ್ಚಲಿಗೆ ಅಂಟಿ ಕೊಂಡಿರುತ್ತವೆ. ಕೈಗೆ ಹಿಡಿಯಲು ಸಿಗುವುದಿಲ್ಲ. ಅಂಥ ಹಸುಗಳ ಹಾಲನ್ನು ನಾವು ಕರೆಯುವ ಗೋಜಿಗೆ ಹೋಗುತ್ತಿರಲಿಲ್ಲ. ಕರುಗಳಿಗೇ ತಿನ್ನಲು ಬಿಡುತ್ತಿದ್ದೆವು. ಆ ಕರುಗಳು ಹಸುಗಳು ಮಲಗುವ ಅಷ್ಟು ಹೊತ್ತು ಬಿಟ್ಟು ಉಳಿದ ಸಮಯ ಮೊಲೆ ತಿನ್ನುತ್ತಲೇ ಇರುತ್ತಿದ್ದವು.

ಆ ಕಾಲದಲ್ಲಿ ಬಾಳಿ ಬದುಕಿದ ಬಂಗಾರಿ ಎಂಬ ಹೆಸರಿನ ಊರದನವನ್ನು ನಾನು ಮರೆಯಲು ಸಾಧ್ಯವೇ ಇಲ್ಲ. ಹೆಸರಿಗೆ ತಕ್ಕಂತೆ ಬಂಗಾರದ ಬಣ್ಣದಿಂದ ಹೊಳೆವ ಅದಕ್ಕೆ ವಿಪರೀತ ಬುದ್ಧಿ, ಬಾಳೆಹಣ್ಣು ಎಂದರೆ ಪ್ರಾಣ. ಬಾಳೆಹಣ್ಣು ಎಂಬ ಹೆಸರು ಅದರ ಕಿವಿಗೆ ಬಿದ್ದರೆ ಸಾಕು 'ಅಂಬಾ' ಎಂದು ಕೂಗುತ್ತಿತ್ತು. ಹಾಗೆಂದು ನಾವು ಬಾಳೆಹಣ್ಣು ಕೊಡಲು ಹೋದರೆ ತಿನ್ನುತ್ತಿರಲಿಲ್ಲ. ಅಲ್ಲಿರುವ ಎಲ್ಲ ಹಸುಗಳಿಗೆ ಮೊದಲು ಒಂದೊಂದು ಕೊಡಬೇಕಿತ್ತು. ಕೊನೆಗೆ ಅದಕ್ಕೆ. ಆಗ ಅದು ಇಡೀ ಗೊನೆ ತಿನ್ನಲೂ ತಯಾರು! ಅದಕ್ಕೆಂದೇ ಬಾಳೆಗೊನೆ ಕಡಿದು ಇಡುತ್ತಿದ್ದೆವು. ಹಲಸಿನ ಹಣ್ಣೆಂದರೆ ಎಲ್ಲ ಹಸುಗಳಿಗೂ ಇಷ್ಟ ಹಟ್ಟಿಯಿಂದ ಎಷ್ಟೇ ದೂರ ಹಲಸಿನ ಹಣ್ಣು ತುಂಡು ಮಾಡಿದರೂ ಅವುಗಳಿಗೆ ಗೊತ್ತಾಗಿ ಬಿಡುತ್ತಿತ್ತು. ತಮಗೂ ಕೊಡಬೇಕು ಎಂಬಂತೆ ಹಟ್ಟಿಯ ಮಾಡು ಹಾರಿ ಹೋಗುವಂತೆ ಕಿರುಚಾಡುತ್ತಿದ್ದವು. ಸೊಳೆಯನ್ನು ನಾವು ತಿಂದು ಎಲ್ಲದಕ್ಕೂ ಉಳಿದ ರಚ್ಚೆ, ಗೂಂಜು, ಬೀಜ ಕೊಟ್ಟ ಮೇಲೆಯೇ ಅವುಗಳ ಅರಚಾಟ ನಿಲ್ಲುತ್ತಿದ್ದದ್ದು.

ನಮ್ಮ ಮನೆ ಎದುರು ದೊಡ್ಡದೊಂದು ದೇವದಾರು ಮರ ಇತ್ತು. ಅದರ ಕೋಡು ಹಣ್ಣಾದಾಗ ಬಹಳ ಸಿಹಿ. ಉದುರಿದ ಆ ಕೋಡನ್ನು ತಿನ್ನಲು ಊರಿನ ದನಗಳ ದಂಡೇ ಬರುತ್ತಿತ್ತು. ಅಲ್ಲೇ ಹಸು-ಹೋರಿಗಳ ಸಮಾಗಮ ಆಗುತ್ತಿತ್ತು. ನೂರು ಹಸುಗಳಿದ್ದರೂ ಅವುಗಳಲ್ಲಿ ಬೆದೆಗೆ ಬಂದ ಹಸು ಯಾವುದು ಎಂಬುದನ್ನು ಹೋರಿಗಳು ಕಂಡು ಹಿಡಿಯುತ್ತಿದ್ದವು! ಉಳಿದ ಹಸುಗಳ ತಂಟೆಗೇ ಅವು ಹೋಗುತ್ತಿರಲಿಲ್ಲ. ಒಟ್ಟಿನಲ್ಲಿ ಈಗಿನಂತೆ ಕೃತಕ ಗರ್ಭಧಾರಣೆ ಮಾಡಿಸುವ ಪದ್ಧತಿ ಆಗ ಇರಲಿಲ್ಲ.

ಹೋರಿಕರು ಹುಟ್ಟಿದ್ದನ್ನು ಸ್ವಲ್ಪ ದೊಡ್ಡದಾದ ಕೂಡಲೇ ಗದ್ದೆ ಬೇಸಾಯ ಮಾಡುವವರಿಗೆ ಕೊಡುತ್ತಿದ್ದೆವು. ಒಮ್ಮೆ ಹೀಗಾಯಿತು. ಸರ್ವಾಂಗ ಸುಂದರ ಗಂಡು ಕರುವೊಂದು ಹಟ್ಟಿಯಲ್ಲಿ ಹುಟ್ಟಿತು. ಅಂಥ ಚಂದದ ಕರುವನ್ನು ಎಂದಿನಂತೆ ಬೇರೆಯವರಿಗೆ ಕೊಡಲು ಮನಸ್ಸಾಗಲಿಲ್ಲ. ಕರು ಬೆಳೆದು ದೊಡ್ಡ ಹೋರಿಯಾಯಿತು. ಸಾಕಲು ಕಷ್ಟ ಎನಿಸತೊಡಗಿತು. ನನ್ನ ಸ್ನೇಹಿತರೊಬ್ಬರು ಹೇಳಿದರು 'ಮಂಡ್ಯ ಜಿಲ್ಲೆಯ ಚಿಕ್ಕರಸಿನಕೆರೆಯಲ್ಲಿ ಶ್ರೀ ಕಾಲಭೈರವೇಶ್ವರ ಎಂಬ ಪುಣ್ಯಕ್ಷೇತ್ರವಿದೆ. ಅಲ್ಲಿ ಹೋರಿಗಳನ್ನು ಸಾಕುತ್ತಾರೆ. ದೈವೀ ಅಂಶವಿದ್ದ ಹೋರಿಗೆ ಸ್ವಾಮೀಜಿ ಪಟ್ಟ ಸಿಗುತ್ತದೆ' ಇದನ್ನು ಕೇಳಿ ನನಗೆ ಸಕ್ಕರೆ ಹಾಲು ಕುಡಿದಂತಾಯಿತು. ನನ್ನ ಈ ಹೋರಿಗೆ ಸ್ವಾಮೀಜಿ ಪಟ್ಟ ಸಿಕ್ಕೇ ಸಿಗುತ್ತದೆ ಅಂದುಕೊಂಡೆ. ಏಕೆಂದರೆ ಅದಕ್ಕೆ ಹೋರಿಗಳ ತುಂಟಾಟ ಯಾವುದೂ ಇರಲಿಲ್ಲ. ಸದಾ ಶ್ರೀಮದ್ಗಾಂಭೀರ್ಯದಿಂದ ಇರುತ್ತಿತ್ತು. ಹಸುಗಳ ಹತ್ತಿರ

ಹೋಗುವುದಿರಲಿ ಅವುಗಳನ್ನು ಕಂಡರೆ ಸಾಕು ಮಾರು ದೂರ ಓಡುತ್ತಿತ್ತು. ಹಿಂಡಿ, ಹುಲ್ಲು ತಿನ್ನುವ ಹಪಹಪಿಯೂ ಇರಲಿಲ್ಲ. ಚೂರು ಹಸಿ ಹುಲ್ಲು, ಒಂದು ಚೆಂಬು ನೀರು ಇಷ್ಟೇ ಅದರ ಆಹಾರವಾಗಿತ್ತು. ನಾನು 'ಜಗದ್ಗುರು' ಎಂದೇ ಅದನ್ನು ಕರೆಯುತ್ತಿದ್ದೆ. ಎಷ್ಟು ಕಷ್ಟವಾದರೂ ಸರಿ ಅದನ್ನು ಕಾಲಭೈರವೇಶ್ವರನಿಗೇ ಸಮರ್ಪಿಸಬೇಕು ಎಂದು ನಿರ್ಧರಿಸಿದೆ. ಒಂದು ಮುಂಜಾವ ನನ್ನ ತಮ್ಮನೊಡಗೂಡಿ ಒಂದು ಗಾಡಿ ಮಾಡಿಕೊಂಡು ಅಲ್ಲಿಗೆ ಹೋದೆ. ತಲುಪುವಾಗ ಮುಸ್ಸಂಜೆಯಾಗಿತ್ತು. ಅಲ್ಲಿ ಒಂದು ಕಡೆ ಕ್ಷೇತ್ರಕ್ಕೆ ಕೊಟ್ಟ ಹಲವು ಹೋರಿಗಳಿದ್ದವು. ಉಕ್ಕಿ ಬರುವ ದು:ಖವನ್ನು ಅದುಮಿ ಹಿಡಿದು ನನ್ನ ಹೋರಿಯನ್ನು ಕಾರ್ಯಕರ್ತರಿಗೆ ಒಪ್ಪಿಸಿದೆ. ಅದು ಸ್ವಾಮೀಜಿ ಪಟ್ಟ ಅಲಂಕರಿಸುವ ಕನಸು ಕಾಣುತ್ತ ಸಾಕಲು ಕಾಣಿಕೆ ಡಬ್ಬಿಗೆ ಕಿಂಚಿತ್ ಹಣವನ್ನೂ ಪಾವತಿಸಿದೆ. ನನ್ನ ಕನಸು ಅವರಿಗೆ ಗೊತ್ತಾಗಿರಬೇಕು. ಅವರು ನನ್ನನ್ನು ಪ್ರತ್ಯೇಕವಾಗಿ ಕರೆದು ಹೀಗೆ ಹೇಳಿದರು. 'ನೀವು ಇನ್ನೊಂದು ಸಾರಿ ಬರುವಾಗ ಇದನ್ನು ನೋಡಬೇಕೆಂದರೆ ನಿಮಗೆ ಸಿಗಲಾರದು. ನಾವು ಅದನ್ನು ಹೊಲ ಉಳುವವರಿಗೆ ಕೊಟ್ಟು ಬಿಡುತ್ತೇವೆ. ಇಲ್ಲಿ ನಾಳೆ ಇರುವುದೆಂಬ ಗ್ಯಾರಂಟಿಯೂ ಇಲ್ಲ. ನನಗೆ ತುಂಬ ನಿರಾಸೆಯಾಯಿತು. ಹಾಗಿದ್ದರೆ ಇಷ್ಟು ದೂರ ಬರಬೇಕಿತ್ತೇ, ಊರಲ್ಲೇ ಯಾರಿಗಾದರೂ ಗದ್ದೆ ಬೇಸಾಯ ಮಾಡುವವರಿಗೆ ಕೊಡಬಹುದಿತ್ತಲ್ಲ ಎಂದು ಮನ ಹೇಳಿತು. ಆದರೆ ನಾನು ಏನೂ ಮಾಡುವ ಹಾಗೆ ಇರಲಿಲ್ಲ. ಎಲ್ಲಾ ಆ ಕಾಲಭೈರವೇಶ್ವರನ ಮಹಿಮೆ ಅಂದುಕೊಂಡು ಸುಮ್ಮನಾದೆ.

ವರ್ಷಗಳುರುಳಿದವು. ಊರದನಗಳ ಸಂಖ್ಯೆ ಹಟ್ಟಿಯಲ್ಲಿ ಕಮ್ಮಿಯಾಗುತ್ತಾ ಬಂತು. ಇದಕ್ಕೆ ಕಾರಣ ಅವಕ್ಕೆ ಗಬ್ಬ ಧರಿಸಲು ಬೇಕಾದ ಹೋರಿಗಳು ಊರಿನಲ್ಲಿ ಇಲ್ಲದೆ ಆದದ್ದು, ಸಂಬಳದಲ್ಲಿ ಏರಿಕೆ, ಕೂಲಿಯಾಳುಗಳ ಅಲಭ್ಯತೆಯ ಪರಿಣಾಮ ಎಲ್ಲರೂ ಗದ್ದೆ ಬೇಸಾಯ ನಿಲ್ಲಿಸಿದ್ದರಿಂದ ಯಾರಿಗೂ ಹೋರಿಯ ಅಗತ್ಯ ಇರಲಿಲ್ಲ. ಅಷ್ಟು ಮಾತ್ರವಲ್ಲ; ಅವುಗಳು ಮೇಯುವ ಕಾಡನ್ನೂ ಜನಗಳು ಆಕ್ರಮಿಸಿ ಕೃಷಿಭೂಮಿಯನ್ನಾಗಿ ಪರಿವರ್ತಿಸಿ ಬೇಲಿ ಹಾಕಿದ್ದರು. ಈಗ ಹಸುಗಳನ್ನು ಕಟ್ಟಿ ಹಾಕಿಯೇ ಸಾಕಬೇಕಾದ ಅನಿವಾರ್ಯತೆ. ಊರದನಗಳನ್ನು ಕಟ್ಟಿ ಹಾಕಿ ಸಾಕಿದರೆ ಹಾಲು ಕಡಿಮೆ. ಅದು ಗಿಂಡಿ ತುಂಬ ಹಾಲು ಕೊಡಬೇಕಾದರೆ ಮೇಯಬೇಕು. ಮೇಯಲು ಮೊದಲಿನಂತೆ ಜಾಗ ಇಲ್ಲ. ಅದರ ಬದಲು ಜರ್ಸಿ ಅಥವಾ ಎಚ್. ಎಫ್. ಹಸುವನ್ನು ಸಾಕಿದರೆ ಕೊಡಗಟ್ಟಲೆ ಹಾಲು ಕರೆಯಬಹುದು ಎಂದು ನಾನು ಲೆಕ್ಕಾಚಾರ ಹಾಕಿ ಪಕ್ಕದ ಊರಿನಿಂದ ಎರಡು ಮಿಶ್ರತಳಿ ಹಸುವನ್ನು ತಂದು ಕಟ್ಟಿದೆ.

ಈಗ ಹಟ್ಟಿಯಲ್ಲಿ ಊರದನ ಇಲ್ಲ. ಅವುಗಳ ಕೊರಳ ಗೆಜ್ಜೆಯ ಕಿಣಿಕಿಣಿ ನಾದ ಇಲ್ಲ. ಬರೀ ನೆನಪುಗಳಷ್ಟೇ ನನ್ನ ಬಳಿ ಉಳಿದಿರುವುದು.

**(ಪ್ರಜಾವಾಣಿ, ಸಂಕ್ರಾಂತಿ ಲಲಿತ ಪ್ರಬಂಧ ಸ್ಪರ್ಧೆ, ೨೦೧೮, ಮೊದಲನೆಯ ಬಹುಮಾನ)**

## ೩೭. ಇರುವುದೋ ಇಲ್ಲದಿರುವುದೋ

**ಪ್ರಜ್ಞಾ ಮತ್ತಿಹಳ್ಳಿ.**

ಇದೆಂಥ ಪ್ರಶ್ನೆ ಮಾರಾಯ್ತಿ! ಯಾರು ಇರುವುದು? ಎಲ್ಲಿ ಇರುವುದು? ಯಾವಾಗ ಇರುವುದು? ಮತ್ತು ಯಾಕೆ ಇರುವುದು? ಇದೆಲ್ಲ ಒಂದೂ ಗೊತ್ತಿರದೇ ಇರುವುದೋ, ಇಲ್ಲದಿರುವುದೋ ಹೇಳಲಿಕ್ಕೆ ಸಾಧ್ಯ ಉಂಟೆ? ಅಂತ ಕೇಳ್ತೀರಾ? ಇದರ ಮೂಲ ಎಲ್ಲುಂಟು ಗೊತ್ತುಂಟಾ?

ಮೊನ್ನೆ ರಾತ್ರಿ ಅಪ್ಪ ಫೋನು ಮಾಡಿದ್ದರು. ತಮ್ಮ ಅಳಿಯ ಇದ್ದಾನಾ? ಅಂತ ಕೇಳಿದರು. ತಕ್ಷಣ ಉತ್ತರಿಸುವುದು ಕಷ್ಟವಾಯಿತು. ಏಕೆಂದರೆ ನನ್ನ ಗಂಡ ಪಕ್ಕದಲ್ಲಿಯೇ ಕೂತಿದ್ದ. ಕೂತಿದ್ದ ಅಂದರೆ ಕೂತೇ ಇದ್ದ. ಹಾಗಂತ ಮೂರು ತಾಸಿನಿಂದ ನಾನು ಕೇಳಿದ ಒಂದು ಪ್ರಶ್ನೆಗೂ ಹೌದು ಇಲ್ಲ ಅಂತ ಉತ್ತರವಿಲ್ಲ. ನಾನು ಹೇಳಿದ ಸುದ್ದಿಗಳಿಗೆ ಹಾಂ, ಹೂಂ ಅಂತ ಒಂದು ಉತ್ತರವೂ ಇಲ್ಲ. ಎದುರಿಗೆ ತಂದಿಟ್ಟ ತಾಟು ಹಾಗೆಯೇ ತಣ್ಣಗೆ ಕೂತಿದೆ. ಹಚ್ಚಿಟ್ಟ ಟಿ.ವಿ. ಕೂಡ ಗಮನ ಸೆಳೆಯಲಾರದೇ ಗೊಣ ಗೊಣ ಅಂತೇನೋ ಕುಂಯ್ ಗುಡುತ್ತಿದೆ. ಮಕ್ಕಳು ಹತ್ತಿರ ಬಂದು ಅಪ್ಪಾ ಫೀಸಿಗೆ ದುಡ್ಡು ಕೊಡು, ಗಾಡಿಯ ಚಾವಿ ಕೊಡು ಅಂತೆಲ್ಲ ಕೇಳಿ ಉತ್ತರ ಬಾರದ್ದಕ್ಕೆ ತಾವೇ ಕಿಸೆಯಿಂದ ಬೇಕು ಬೇಕಾದ್ದನ್ನು, ಬೇಕು ಬೇಕಾದಷ್ಟು ತೆಗೆದುಕೊಂಡು ಖುಷಿಯಿಂದ ಹೋಗಿಯಾಯಿತು. ಅರ್ಧಾಂಗಿಯಾದ ನಾನು ಹತ್ತಿರ ಕೂತು ಕರೆದರೂ ಇಲ್ಲ, ಕಿರುಚಿದರೂ ಇಲ್ಲ, ತಿವಿದರೂ ಇಲ್ಲ. ಉಹೂಂ ಕಣ್ಣು ತನ್ನ ಏಕಾಗ್ರತೆಯನ್ನು ಒಂದಿಷ್ಟೂ ಕಳೆದುಕೊಂಡಿಲ್ಲ. ಎಡದ ಕಾಲಿನ ಮೇಲೆ ಬಲದ ಕಾಲು ಹಾಕಿಕೊಂಡು ಪಾದ ಕುಣಿಸುತ್ತ ಮೆತ್ತೆಗೊರಗಿದ ದಿವ್ಯ ಭಂಗಿ, ತುಟಿಯ ಮೇಲೊಂದು ಕಿರುನಗೆಯ ಲಾಸ್ಯ, ಮುಖದ ತುಂಬಾ ಪ್ರಸನ್ನ ಭಾವ, ಎಡ ಅಂಗೈಯನ್ನು ಬಲ ಅಂಗೈ ಸ್ಪರ್ಶಿಸುತ್ತಲೇ ಇರುವ ನಿರಂತರ ಚಟುವಟಿಕೆ, ಈ ಭೂಮಂಡಲದ ಉಳಿದಷ್ಟೂ ಕ್ರಿಯೆಗಳನ್ನೂ ಹುಲು ಸಮಾನವೆಂದು ಭಾವಿಸಿ, ಆ ಕುರಿತಾದ ಸಮಸ್ತ ಆಸಕ್ತಿ-ಅಕ್ಕರೆಗಳನ್ನು ಲವಲೇಶವೂ ಉಳಿಯದಂತೆ ಬರಿದಾಗಿಸಿಕೊಂಡು ಕಠೋರ ತಪಸ್ವಿಯಂತೆ ತಲ್ಲೀನರಾಗಿರುವ ನಮ್ಮ ಪತಿರಾಯರು ಇದ್ದಾರೆ ಎನ್ನಬೇಕೆ? ಇಲ್ಲ ಎನ್ನಬೇಕೊ? ಎಂಬುದೇ ನನ್ನ ಜಿಜ್ಞಾಸೆ.

ಹೌದು ಎಂದರೆ ಅವರ ಇರುವಿಕೆ ಸುತ್ತಲಿನ ಲೋಕ ವ್ಯಾಪಾರಗಳೊಂದಿಗೆ ಸೇರಿಕೊಂಡಿರಬೇಕಾಗುತ್ತದಲ್ಲವೆ? ತಾಟಿನಲ್ಲಿರುವ ಆಹಾರವನ್ನು ಬಾಯಿಗೆ ಹಾಕಿಕೊಂಡು ಉಣ್ಣುವುದಕ್ಕಾಗಿ ಇಟ್ಟಿದ್ದಾರೆಂದು ಅರಿವಾಗಬೇಕು. ರಾತ್ರಿಯಾಗಿದೆ, ಮನೆಯ ಬಾಗಿಲು ಚಿಲಕ-ಬೀಗಗಳನ್ನು ಭದ್ರಪಡಿಸಬೇಕೆಂದು ನೆನಪಾಗಬೇಕು, ಹಗಲಿಡೀ ಹೊರಗಿದ್ದು ಒಳ ಬಂದಿರುವ ತಾನು ಹೆಂಡತಿ-ಮಕ್ಕಳ ಕಷ್ಟ-ಸುಖಗಳನ್ನೊಂದಿಷ್ಟು ಕೇಳುವ ಯಜಮಾನ ಸ್ಥಾನದಲ್ಲಿದ್ದೇನೆಂದು ಲಕ್ಷಕ್ಕೆ ಬರಬೇಕು. ಹಾಗೆ ಅರಿವು-ತಿಳಿವು-ನೆನಪ

ಲಕ್ಷಗಳೆಲ್ಲ ಮಾಯವಾದ ವಿಸ್ಮರಣೆಯ ಸ್ಥಿತಿಯನ್ನು ತಲುಪಿದ ಆನಂದ ಮಾರ್ಗಿಗಳನ್ನು ಇದ್ದಾರೆ ಎನ್ನಬೇಕೋ? ಇಲ್ಲ ಎನ್ನಬೇಕೋ? ನನಗೆ ತಿಳಿಯುತ್ತಿಲ್ಲ.

ನಮ್ಮ ಹಿರಿಯರು ಇರುವಿಕೆಯನ್ನು ಹೇಗೆ ಮೂರು ಆಯಾಮಗಳಲ್ಲಿ ವರ್ಗೀಕರಿಸಿದ್ದಾರೆ ನೋಡಿ- ಕಾಯಾ, ವಾಚಾ, ಮನಸಾ- ಅಂದರೆ ಬರಿ ಕಾಯವೊಂದು ಇದ್ದರೆ ಅದು ಇರುವಿಕೆಯಾಗುವುದಿಲ್ಲ. ನಮ್ಮ ಮನಸ್ಸಿನ ಆಲೋಚನೆಗಳೂ, ಆಡುವ ಮಾತುಗಳೂ ಕೂಡ ಇಲ್ಲಿಯದ್ದು ಅಂತ ಆದರೆ ನಾವು ಆ ಅಲ್ಲಿ ಇದ್ದ ಹಾಗೆ. ಇದಕ್ಕೆ ನಮ್ಮ ವಿದ್ಯಾರ್ಥಿ ಸಮೂಹ ಒಂದು ಅತ್ಯುತ್ತಮ ಉದಾಹರಣೆ. ಅವರ ದೇಹವೊಂದು ತರಗತಿಯ ಕೋಣೆಯಲ್ಲಿರುತ್ತದೆ. ಆದರೆ ಸಕಲೇಂದ್ರಿಯಗಳೂ ವಾಟ್ಸಪ್ ಅಥವಾ ಫೇಸುಬುಕ್ಕಿನ ಸಂದೇಶಗಳಲ್ಲಿ ವಾಚಾಳಿಯಾಗಿರುತ್ತವೆ. ಇನ್ನು ಮನಸ್ಸನ್ನಂತೂ ಕೇಳುವುದೇ ಬೇಡ, ಈಗಿನ ವಿದ್ಯಾರ್ಥಿಗಳ ಮನೋಲೋಕವನ್ನು ಹೊಕ್ಕಿ ಹಣುಕುವ ಎದೆಗಾರಿಕೆ ಯಾವ ಪಾಮರ ಮೇಷ್ಟ್ರಿಗೆ ಇರಲು ಸಾಧ್ಯ ಹೇಳಿ? ಅಲ್ಲಿ ಸಹಪಾಠಿಗಳಿದ್ದಾರೋ, ಸಿನಿತಾರೆಯರಿದ್ದಾರೋ ಅಥವಾ ಖುದ್ದು ಪಾಠ ಮಾಡುವ ಮೇಡಂ/ಸರ್‌ಗಳು ಇದ್ದಾರೋ ದೇವರಿಗೂ ಗೊತ್ತಿಲ್ಲ. ಹಾಗಾಗಿ ಅಂತಹ ದುಸ್ಸಾಹಸಕ್ಕೆ ತಲೆ ಹಾಕದೆ ಅಧ್ಯಾಪಕರು ದೇಹದ ಅಟೆಂಡನ್ಸ್ ತೆಗೆದುಕೊಂಡು ತೃಪ್ತರಾಗುತ್ತಾರೆ.

ವಿಚಾರ ಸಂಕಿರಣಗಳಲ್ಲಿ ಪ್ರೌಢ ಭಾಷಣಗಳ ಭೀಷಣ ಮಳೆ ಸುರಿಯುವಾಗ ನೂರಾರು ಜನ ಭಾಗಹಿಸಿರುತ್ತಾರೆ. ಆದರೆ ಅವರು ಇರುತ್ತಾರಾ ಅಂತ ಕೇಳಬಾರದು. ಅವರು ಟಿ.ಎ., ಡಿ.ಎ., ಊಟದ ಮೆನು ಬಗ್ಗೆ ಮಾತಾಡುತ್ತಲೋ ಅಥವಾ ತಮ್ಮ ತಮ್ಮ ಸಂದೇಶವಾಹನೆಯ ಗುರುತರ ಹೊಣೆಗಾರಿಕೆಯೊಂದಿಗೋ ಲೀನವಾಗಿರುತ್ತಾರೆ. ಆದ್ದರಿಂದಲೇ ಅವರು ಆ ವಿಚಾರ ಸಂಕಿರಣದಲ್ಲಿ ಇದ್ದಾರಾ ಅಂತ ಕೇಳಿದರೆ ಏನೆಂದು ಉತ್ತರಿಸಬೇಕೋ ತಿಳಿಯುವುದಿಲ್ಲ.

ಮೊನ್ನೆ ಕಾಕಾನ ಮಗಳ ಮದುವೆಯಾಯಿತು. ಅಪರೂಪದ ನೆಂಟರೆಲ್ಲ ಬರುತ್ತಾರೆ. ತುಂಬಾ ವರ್ಷದ ನಂತರ ಬಾಲ್ಯಸ್ನೇಹಿತರನ್ನು ಭೆಟ್ಟಿಯಾಗುವ ಸದವಕಾಶವೆಂದು ಸಂಭ್ರಮಿಸಿಕೊಂಡು ದೂರದ ಊರಿಗೆ ಹೋದೆ. ಒಬ್ಬರೇ, ಇಬ್ಬರೇ ಹತ್ತೆಂಟು ಜನ ಹಳೆಯ ಮಿತ್ರರು ಬಂದಿದ್ದರು. ಹಾಯ್, ವಾವ್ ಎಂದೆಲ್ಲ ಓಡೋಡಿ ಬಂದು ತಬ್ಬಿಕೊಂಡರು, ಗಟ್ಟಿಯಾಗಿ ಕೈ ಕುಲುಕಿದರು, ಕಮಾನ್ ಎಂದು ಎಳೆದೆಳೆದು ಸೆಲ್ಫಿ ತಬ್ಬಿಗೊಂಡರು. ಕೆಲವೇ ಕ್ಷಣ. ಅದನ್ನು ಅಪ್ ಲೋಡ್ ಮಾಡುವ ಬಹುಮುಖ್ಯ ಕ್ರಿಯೆಯೊಂದಿಗೆ ಮತ್ತೆ ತಮ್ಮ ತಮ್ಮ ಕೈ ಮುದ್ದುಗಳಲ್ಲಿ ಕಳೆದು ಹೋದರು. ಇಡೀ ಸಭಾಂಗಣ ಜನರಿಂದ ತುಂಬಿ ತುಳುಕುತ್ತಿತ್ತು. ಆದರೆ ಮಾತಿಲ್ಲ, ಕತೆಯಿಲ್ಲ, ಬರೀ ರೋಮಾಂಚನ,

ಅಂಗೈಯೊಳಗಿನ ಅರಗಿಣಿಯೊಂದಿಗೆ ನಿತಾಂತ ಸಂವಹನದ ರೋಮಾಂಚನ. ಅಸೀಮ ಸೀಮೆಯಾಚೆಯ ಅನೂಹ್ಯ ಲೋಕವೊಂದಕ್ಕೆ ಜೀವತಂತು ಜೋಡಣೆಯಾಗಿರುವಂತೆ ತನ್ನ ಸುತ್ತಲಿನ ಪರಿಸರವನ್ನು ಕಡೆಗಣಿಸಿ ಅಗಣಿತ ತಾರಾ ಗಣಗಳ ನಡುವಿನ ಅಪೂರ್ವ ಬೆರಗನ್ನೇ ನೆಚ್ಚಿಕೊಂಡ ಮೆಚ್ಚಿಕೊಂಡ ಅಲೌಕಿಕ ರೋಮಾಂಚನವದು.

ಇರುವುದೋ ಇಲ್ಲದಿರುವುದೋ ೧೦೫

ಭವಸಾಗರದೊಳು ಈಜುವ ಮಾನವ ಪ್ರಾಣಿ ಮುಳುಗದಂತೆ ತೇಲುವ ಕಲೆಯನ್ನು ಕಲಿತುಕೊಳ್ಳಬೇಕೆಂದು ಅನಾದಿ ಕಾಲದಿಂದಲೂ ಅನುಭಾವಿಗಳೂ, ಸಂತರೂ, ದಾಸರೂ ಅದಿನ್ನೆಷ್ಟು ತಿಳಿ ಹೇಳಿದ್ದರೇನೋ ಪಾಪ! ಅವರ ಶತಶತಮಾನಗಳ ಪ್ರಯತ್ನಕ್ಕೆ ಈಗ ಫಲ ಸಿಕ್ಕಿದೆ ಎನ್ನಬಹುದೋ ಏನೋ. ಏಕೆಂದರೆ ಆಧುನಿಕ ಗ್ಯಾಜೆಟ್‌ಗಳು ಇದ್ದೂ ಇಲ್ಲದಂತೆ ಇರುವ ಕಲೆಯನ್ನು ಮನುಷ್ಯನಿಗೆ ಕಲಿಸಿವೆ. ಋಷಿ-ಮುನಿಗಳು ತಾವು ಕೂತಲ್ಲಿಯೇ ಸಮಾಧಿ ಸ್ಥಿತಿಯನ್ನು ತಲುಪಿ ಮೂರುಲೋಕಗಳನ್ನೂ ಸಂಚರಿಸಿ ಬರುತ್ತಿದ್ದರು. ಕೆಲವರು ಸತ್‌ಚಿತ್ ಬೆಳಕಲ್ಲಿ ಚಿತ್ತವನ್ನು ಲೀನಗೊಳಿಸಿ ಬ್ರಹ್ಮಾನಂದವನ್ನು ಅನುಭವಿಸುತ್ತಿದ್ದರು. ಅಂತಹ ಧ್ಯಾನ ಸದೃಶ ಕ್ರಿಯೆಯಲ್ಲಿನ ತಲ್ಲೀನತೆಯನ್ನೇ ನನ್ನ ಗಂಡನಂತಹ ಲಕ್ಷಾಂತರ ಜನರಲ್ಲಿ ಕಾಣಬಹುದು. ಹಾಗಂತ ಇವರು ಇಹಲೋಕಕ್ಕೆ ಇಳಿಯುವುದೇ ಇಲ್ಲವೇ ಅಂತ ಕೇಳಬೇಡಿ, ಅವರ ಕೈಮುದ್ದು [ಹ್ಯಾಂಡ್ ಸೆಟ್ ಅನ್ನಲಿಕ್ಕೆ ನಾನು ಇಟ್ಟ ಹೆಸರು ಕೈಮುದ್ದು] ಗತಪ್ರಾಣವಾಗುವ ಲಕ್ಷಣ ಕಂಡುಬಂದಾಗ, ಅಂದರೆ ಅದರ ಚಾರ್ಜ್ ಕಡಿಮೆಯಾದ ಸೂಚನೆ ಸಿಕ್ಕೊಡನೆ ಗೋಡೆಗಳ ಕಡೆ ಕಣ್ಣಾಡಿಸುತ್ತಾರೆ. ಅದನ್ನು ಚಾರ್ಜಿಗೆ ಹಾಕಿಕೊಂಡು ಮತ್ತೆ ಆ ಗೋಡೆಗೆ ಒರಗಿಕೊಂಡು ಅಥವಾ ಮೂಲೆಯಾಗಿದ್ದರೆ ಮುದುಡಿಕೊಂಡು ತಲ್ಲೀನ ಸ್ಥಿತಿಗೆ ಇಳಿಯುತ್ತಾರೆ. ಹೌದು ಅದು ಕೈಮುದ್ದು. ಈ ನಮೂನಿ ಮುದ್ದನ್ನು ಅವರು ಅವರ ಪ್ರೇಯಸಿಯನ್ನೂ ಮಾಡಿರುವುದಿಲ್ಲ, ಹೆಂಡತಿಯನ್ನಂತೂ ಕೇಳಲೇಬೇಡಿ. ತಮ್ಮ ಇಷ್ಟಲಿಂಗವನ್ನು ಅಂಗೈಯಲ್ಲಿ ಹಿಡಿದುಕೊಂಡ ಶರಣರಿಗೂ ಇಲ್ಲದ ಭಕ್ತಿಭಾವದಿಂದ, ಅರ್ತಿಯಿಂದ ಈ ಕೈಮುದ್ದನ್ನು ಹಿಡಿದುಕೊಂಡು ಅಡ್ಡಾಡುತ್ತಾರೆ.

ಸಾರಸಾರ ವಿಚಾರ ಮಾಡಿದರೆ ಸಂಸಾರವೆಂಬುದು ಘನಘೋರ ಎಂದು ಹೇಳಿದ ದಾಸರ ಮಾತನ್ನು ಬಲವಾಗಿ ನಂಬಿಕೊಂಡ ಇಂದಿನ ಲೌಕಿಕರು ಆಫೀಸಲ್ಲಿದ್ದೂ ಕೆಲಸದಲ್ಲಿ ತೊಡಗದೇ, ಮನೆಯಲ್ಲಿದ್ದೂ ಸಾಂಸಾರಿಕ ಕ್ರಿಯೆಗಿಳಿಯದೇ, ಸಮಾರಂಭಗಳಿಗೆ ಬಂದೂ ಸಾಮುದಾಯಿಕ ಚಟುವಟಿಕೆಯಲ್ಲಿ ತೊಡಗದೇ ನೀರಿನ ಹನಿ ತಾಕದ ಕೊಳದ ಪದ್ಮಪತ್ರದಂತೆ ನಿರ್ಲಿಪ್ತರಾಗಿರುವುದನ್ನು ನೋಡಿದರೆ ಉಫ ಉಫ ಎನ್ನದಿರಲಾದೀತೆ? ಇವರು ತಮ್ಮ ಸುತ್ತಮುತ್ತಲಿನ ಆಗುಹೋಗುಗಳ ಕಡೆಗೆ ಎಷ್ಟು ದಿವ್ಯ ನಿರ್ಲಕ್ಷ ತಾಳಿರುತ್ತಾರೆಂದರೆ ಒಂದು ಸಲ ನನ್ನ ಸಂಸಾರ ಔಟಿಂಗ್ ಅಂತ ಊಟಕ್ಕೆ ಹೋಗಿದ್ದೆವು. ಪ್ರಸಿದ್ಧ ಹೋಟೆಲಿನ ತಾರಸಿ ತೋಟ. ಸುತ್ತಲೂ ಬಗೆಬಗೆ ಹೂಗಳು, ಮೇಲೆ ನೀಲಾಕಾಶದಲ್ಲಿ ಹುಣ್ಣಿಮೆ ಚಂದಿರ. ಏಯ್ ಇಲ್ಲಿ ನೋಡಿ ಅಂತ ಎಳೆದೆಳೆದು ತೋರಿಸಿದೆ. ವಾವ್ ಅಂದವರೇ ಫೋಟೋ ತೆಗೆದರು, ಅಷ್ಟೇ. ಪಟಪಟ ಕೈಮುದ್ದುಗಳಲ್ಲಿ ಕಳೆದು ಹೋದರು. ವೇಟರ್ ತಂದಿಟ್ಟ ಮೆನುವನ್ನು ಓದಿ, ಊಟದ ಆರ್ಡರ್ ಕೊಡಲಿಕ್ಕೆ ಯಾರ ಕಣ್ಣೂ ಖಾಲಿ ಇರಲಿಲ್ಲ. ಆಮೇಲೆ ಊಟ ಬಂದಾಗಲೂ ಅಷ್ಟೆ. ಒಬ್ಬರೂ ತಾಟು

ನೋಡಿಕೊಂಡು ಉಣ್ಣಲಿಲ್ಲ. ಕಡೆಗೆ ಬಿಲ್ಲು ನೋಡಿ ಎಷ್ಟಂತ ತಿಳಕೊಂಡು ದುಡ್ಡು ಎಣಿಸಿ ಕೊಡಲಿಕ್ಕೆ ಕಷ್ಟವಾಗುತ್ತದೆ ಅಂತ ಕಾರ್ಡು ಕೊಟ್ಟು ಕೈಮುಗಿದು ಬಿಟ್ಟರು. ಏನು ತಿಂದೆವೆಂದು ತಿಳಿಯದ, ಎಷ್ಟು ಕೊಟ್ಟೆವೆಂದು ತಿಳಿಯದ,



ಎಲ್ಲಿ ಕೂತಿದ್ದೇವೆ, ಯಾರ್ಯಾರು ಕೂತಿದ್ದೇವೆ ಎಂದೂ ಗಣನೆಗೆ ಬಾರದ ಅಪೂರ್ವ ಸ್ಥಿತಪ್ರಜ್ಞ ಸ್ಥಿತಿಯೊಂದಕ್ಕೆ ಮನುಕುಲ ತಲುಪುತ್ತದೆ ಅಂತ ಬುದ್ಧನೂ ಎಣಿಸಿರಲಿಕ್ಕಿಲ್ಲ.

ಮೊನ್ನೆ ನಮ್ಮ ಓಣಿಯಲೊಬ್ಬ ಆನಂದ ಮಾರ್ಗಿಗಳು ತಾರಸಿಯ ಮೇಲೆ ಕುಳಿತು ಕೈಮುದ್ದುವಿನಲ್ಲಿ ಲೀನವಾಗಿದ್ದರು. ಹಾಗೆಯೇ ಪ್ರಪಂಚ ಮರೆತ ಅವರಿಗೆ ಅರ್ಧರಾತ್ರಿ ಕಳೆದದ್ದೂ ಅರಿವಾಗಿಲ್ಲ. ಹಿಂದುಗಡೆಯ ಮಾವಿನ ತೋಪಿನಲ್ಲಿ ಮರಹತ್ತಿ ಕಳ್ಳನೊಬ್ಬ ತಾರಸಿಗೆ ಧುಮುಕಿದ್ದಾನೆ. ಇವರನ್ನು ನೋಡಿ ಅವನ ಎದೆ ಧಸಕ್ ಎಂದಿದೆ. ಆದರೆ ಕೊಂಚ ಹೊತ್ತಾದರೂ ಅಲ್ಲಾಡದ ಇವರ ಸಮಾಧಿ ಸ್ಥಿತಿಯಿಂದ ಧೈರ್ಯ ಪಡೆದುಕೊಂಡು ಸಾವಕಾಶವಾಗಿ ತೆರೆದ ಬಾಗಿಲಿನಿಂದ ಒಳಗೆ ಹೋಗಿದ್ದಾನೆ. ಸೋಫಾದ ಮೇಲೊಂದು, ಮಂಚದ ಮೇಲೊಂದು ಆನಂದ ಮಾರ್ಗಿಗಳು ಕಂಡಿದ್ದಾರೆ. ಆದರೆ ಎಲ್ಲರನ್ನೂ ಸಮಾಧಿ ಸ್ಥಿತಿಯೇ ಮಂಚದ ಮೇಲಿನ ತಪಸ್ವಿಯ ಹತ್ತಿರ ಕಪಾಟಿನ ಕೀಲಿ ಎಲ್ಲಿದೆ ಅಂತ ಕೇಳಿದ್ದಾನೆ. ದಿಂಬಿನ ಕೆಳಗಿದೆ ಎಂದು ಹೇಳಿ ಅದು ಹೊರಳಿಕೊಂಡಿದೆ. ಕಪಾಟಿನ ಬಾಗಿಲು ತೆರೆದು ಒಂದಿಷ್ಟು ಒಡವೆ, ವಸ್ತು ಬಾಚಿಕೊಂಡು ಮುಂಬಾಗಿಲು ತೆಗೆದು ಹೊರಗೆ ಹೋಗಿದ್ದಾನೆ. ಮತ್ತೇನು ಅನ್ನಿಸಿತೋ ಒಳಗೆ ಬಂದು ಸೋಫಾದ ಮೇಲೆ ಕೂತ ತಪಸ್ವಿಯ ಹತ್ತಿರ ಗಾಡಿ ಕೀಲಿ ಎಲ್ಲಿದೆ ಅಂತ ಕೇಳಿದ್ದಾನೆ. ಆ ದಿವ್ಯ ಚೇತನವು ಟಿ.ವಿ. ಶೆಲ್ಫಿನ ಮೇಲಿದೆ ಅಂತ ಪಿಸುಗುಟ್ಟಿದೆ. ಕಳ್ಳನಿಗೆ ಥ್ರಿಲ್ಲೋ ಥ್ರಿಲ್ಲು. ಭೂಲೋಕದ ಜನರೆಲ್ಲ ಹೀಗೆ ತಮ್ಮ ಸಂಪತ್ತಿನ ಕುರಿತು ದಿವ್ಯ ನಿರ್ಲಕ್ಷ ತಾಳಿ, ಸಾಮಾಜಿಕ ನ್ಯಾಯ ನಿಷ್ಠುರತೆಯಿಂದ ಹಂಚಿ ತಿನ್ನುವ ದಿನ ಬಂದಿತಲ್ಲ ಅಂತ ಆನಂದ ಭಾಷ್ಪ ಸುರಿಸಿದ್ದಾನೆ. ಕಳ್ಳನಿಗೆ ಅನ್ನಿಸಿದ್ದು ನಿನಗೆ ಹೇಗೆ ಗೊತ್ತಾಯ್ತು ಅಂತ ಕೇಳಬೇಡಿ. ಟ್ವಿಟ್ ಮಾಡುವುದರ ಮೂಲಕ ಎಲ್ಲರೂ ಎಲ್ಲರ ಮನಸ್ಸನ್ನೂ ತಿಳಿದುಕೊಳ್ಳುವ ಕಾಲವಲ್ಲವೇ ಇದು.

ಈ ದಿವ್ಯಾನಂದರನ್ನು ಅವರ ಆನಂದದ ಸ್ಥಿತಿಯಿಂದ ಹೊರತರಲಿಕ್ಕೆ ಇರುವ ಏಕೈಕ ಮಾರ್ಗವೆಂದರೆ ವ್ಯಾಪ್ತಿ ಪ್ರದೇಶದ ಹೊರಗೆ ಕರೆದೊಯ್ಯುವುದು. ನಮ್ಮ ಜಿಲ್ಲೆಯ ಹಳ್ಳಿಗಳಿಗೆ ಹೋದರೆ ಮುಗಿದೇ ಹೋಯಿತು. ಎಂತೆಂತಹ ಜಬರ್ದಸ್ ಸಿಮ್ ಜಾಲವಾಗಿದ್ದರೂ ಇಲ್ಲಿಗೆ ತಲುಪುವುದಿಲ್ಲ. ಹಾಗಾಗಿ ಇಲ್ಲಿ ಯಾರು ಬಂದರೂ ನಾಟ್ ರೀಚೆಬಲ್. ಇಂತಹ ತಲುಪಲಾರದ ಸ್ಥಿತಿಗೆ ಬಂದುಬಿಟ್ಟರೆ ಎಲ್ಲ ತಪಸ್ವಿಗಳೂ ಚಡಪಡಿಸಲಾರಂಭಿಸುತ್ತಾರೆ. ಪದೇ ಪದೇ ತಮ್ಮ ಕೈಮುದ್ದಿನ ಕಡೆಗೆ ನೋಡಿ ಸತ್ತ ಕಲ್ಲು ತುಂಡಿನಂತೆ ಬಿದ್ದುಕೊಂಡ ಅದರಲ್ಲಿಣುಕಿ ಛೇ ಛೇ ಅಂತ ಪೇಚಾಡುತ್ತಾರೆ.

ಚೆನ್ನಮಲ್ಲಿಕಾರ್ಜನಾ ಎಂದು ಹಾತೊರೆಯುವ ಅಕ್ಕನಂತೆ ಆರ್ದ ಹೃದಯದಿಂದ ಎತ್ತೆತ್ತರದ ದಿಬ್ಬ ಹತ್ತಿ ನೆಟ್‌ವರ್ಕ್ ಕುರಿತು ಧೇನಿಸುತ್ತಾರೆ. ತಳಿರೇ, ತಾವರೆಯೇ, ಮದಾಳಿ ಕುಲಮೇ ಎಂದು ವಿಲಾಪಿಸಿದ ರಾಮನಂತೆ ಚಿಂತಾಕ್ರಾಂತರಾಗಿ ಮುಖ ಬಾಡಿಸಿಕೊಂಡು ಜೋತುವದನರಾಗುತ್ತಾರೆ. ಸಿಗರೇಟು ಸಿಗದ ಕಡೆಗೆ ಧೂಮಪಾನಿ ಒದ್ದಾಡುವಂತೆ, ಎಣ್ಣೆ ಬ್ಯಾನಾದ ಊರಲ್ಲಿ ಕುಡುಕ ನರಳುವಂತೆ ಹತಾಶರಾಗುತ್ತಾರೆ. ಮತ್ತೆ ವಾಪಸ್ಸು ಬರುವಾಗ ಜಿಲ್ಲೆಯ ಗಡಿ ದಾಟಿ ಬಯಲು ಪ್ರದೇಶ ಬಂದ ಕೂಡಲೇ



ವಾಹನದೊಳಗೇ ಬಿದ್ದುಕೊಂಡು ಅಥವಾ ಸಾರಥಿಯಾದರೆ ನಿಲ್ಲಿಸಿ ಹೊರಗೆ ಹಾರಿಕೊಂಡು ಕೈಮುದ್ದಿನಲ್ಲಿ ಮುಳುಗಿಕೊಳ್ಳುತ್ತಾರೆ.

ಮೊನ್ನೆ ಒಬ್ಬ ಮಾಜಿ ಸಹೋದ್ಯೋಗಿಯ ಸಹಿ ಬೇಕೆಂದು ಅವರ ಮನೆಗೆ ಹೋಗಿದ್ದೆ. ಪೆಂಡಾಲು ಹಾಕಿದ್ದರು. ಬಹಳಷ್ಟು ಕಾರು ನಿಂತಿತ್ತು. ಛೇ ಫೋನು ಮಾಡಿಕೊಳ್ಳದೇ ಬಂದೆನಲ್ಲ ಅಂತ ಪೇಚಾಟವೆನಿಸಿತು. ಆದರೆ ಸಹಿ ಅರ್ಜೆಂಟಾಗಿತ್ತು. ಒಬ್ಬರನ್ನು ಏನು ನಡೆಯುತ್ತಿದೆ, ಯಾವ ಫಂಕ್ಷನ್ ಅಂತ ಕೇಳಿದೆ. ಅವರು ಕೈಮುದ್ದು ಬಿಟ್ಟು ತಲೆಯೆತ್ತಿ ನೋಡಿ. 'ಏನು ಫಂಕನ್?' ಅಂತ ತಿರುಗಿ ನನ್ನನ್ನೇ ಕೇಳಿ 'ಡೋಂಟ್ ನೋ' ಅಂದರು. ಮತ್ತಿಬ್ಬರನ್ನು ಕೇಳಿದರೂ ಇದೇ ಉತ್ತರ. ಅಷ್ಟರಲ್ಲಿ ಸಹೋದ್ಯೋಗಿಯ ತಮ್ಮ ಕಂಡರು. ನಿಮ್ಮ ಅಣ್ಣ ಎಲ್ಲಿದ್ದಾರೆ?' ಅಂತ ಕೇಳಿದೆ. ಥಟ್ಟನೆ ತಮ್ಮ ಕೈಮುದ್ದನ್ನು ನೋಡಿ, 'ಆನ್‌ಲೈನ್‌ನಲ್ಲಿ ಇದ್ದಾನೆ' ಅಂದರು. ತಲೆ ಚಚ್ಚಿಕೊಳ್ಳಬೇಕೆನಿಸಿತು. ಅವರ ಮನೆಯ ಹಾಲ್ ಸೋಫಾದಲ್ಲಿ ಕೂತು ಅವರಿಗೆ ಫೋನು ಮಾಡಿದೆ. ಆಗ ಹೊರ ಬಂದು ಸಹಿ ಹಾಕಿದರು.

ಈಗಲಾದರೂ ಹೇಳಿ ಈ ಇವರೆಲ್ಲಾ ಇದ್ದಾರಾ? ಇದ್ದರೆ ಎಲ್ಲಿ ಇದ್ದಾರೆ? ಹೇಗಿದ್ದಾರೆ? ಇವರನ್ನು ನೀವು ಇದ್ದಾರೆ ಎನ್ನುವುದಾದರೆ ನಾನು ನನ್ನ ಬಗ್ಗೆ ಇಲ್ಲ ಅಂತ ಹೇಳಬೇಕಾಗುತ್ತದೆ. ಹೌದು ಎಲ್ಲರೂ ನನ್ನ ಮುಖ ಕಂಡ ಕೂಡಲೇ ಏಯ್ ನೀನು ಫೇಸುಬುಕ್ಕಿನಲ್ಲಿ ಇಲ್ಲಾ ಯಾಕೆ? ಅಂತ ಕೇಳುತ್ತಾರೆ. ಇವರೆಲ್ಲ ಇರುವ ಜಗತ್ತಿನಲ್ಲಿ ನಾನಿಲ್ಲ ಸ್ವಾಮಿ. ಹಾಗಾಗಿ ಇವರ ಪಾಲಿಗೆ ನಾನು ಇಲ್ಲ. ನನ್ನೊಂದಿಗೇ ಇರುವ ಈ ಇವರೊಂದಿಗೆ ಇಲ್ಲದ ನಾನು ಇವರೆಲ್ಲ ಇದ್ದಾರಾ ಅಂತ ಕೇಳಿದರೆ ಏನು ಹೇಳಬೇಕು ಎಂಬ ಅಸಲಿ ಪ್ರಶ್ನೆಗೆ ಮತ್ತೆ ಬರುತ್ತೇನೆ. ಥೇಟ್ ವಿಕ್ರಮನ ಬೇತಾಳದ ಕತೆಯಾಯ್ತು ಅಂತ ಹೇಳುತ್ತೀರಾ. ನಾನೂ ಸಹ ಆ ಬೇತಾಳನನ್ನು ಹುಡುಕುತ್ತಿದ್ದೇನೆ ಮಾರಾಯ್ರೆ, ವಿಕ್ರಮಾದಿತ್ಯ ತನ್ನ ಕೈಮುದ್ದಿನಲ್ಲಿ ಮುಖ ಹುದುಗಿಸಿಕೊಂಡ ಮೇಲೆ ಆ ಬೇತಾಳ ಸಹ ನನ್ನ ಹಾಗೇ ಒಂಟಿಯಾಗಿದೆಯಂತೆ. ಪಾಪ ಅದರ ಕತೆ ಕೇಳಲಿಕ್ಕೆ ಯಾರೆಂದರೆ ಯಾರಿಗೂ ಕೈ ಬಿಡುವಿಲ್ಲವಂತೆ. ನಿಮಗೆ ಸಿಕ್ಕರೆ ಇಲ್ಲಿಗೆ ಕಳಿಸಿ ಕೊಡಿ. ಆದರೆ ನನಗೊಂದು ಸಂಶಯವುಂಟು. ಈ ಬೇತಾಳನ ಕೈಗೂ ಕೈಮುದ್ದು ಸಿಕ್ಕಿದರೂ ಸಿಕ್ಕಬಹುದು. ಹೇಗೆ ಗೊತ್ತುಂಟಾ?

ಕೆಲವರು ರಸ್ತೆಯ ಮೇಲೆ ತಮ್ಮ ಕೈಮುದ್ದಿನಲ್ಲಿ ಮುಖ ಹುದುಗಿಸಿ ಡ್ರೈವ್ ಮಾಡುವಾಗ ಪ್ರಾಣ ಬಿಡುತ್ತಾರಲ್ಲ, ಅವರು ಪ್ರೇತಗಳಾದ ಮೇಲೂ ಸಹ ಕೈಮುದ್ದಿನಲ್ಲೇ ಮುಳುಗಿರುತ್ತಾರೆ ತಾನೆ? ಪ್ರಾಣವನ್ನಾದರೂ ಬಿಟ್ಟೇನು, ಆದರೆ ನನ್ನ ಕೈಮುದ್ದನ್ನು ಬಿಡಲಾರೆ ಅಂತ ಹಿಡಿದುಕೊಂಡವರಲ್ಲವೇ ಸ್ವಾಮಿ ಅವರು? ಇಂತಹವರ ಹೊಸ ಸಂಪರ್ಕದಿಂದ ಬಹುಶ: ಪ್ರೇತಪ್ರಪಂಚದಲ್ಲೂ ಪ್ರಚಂಡ ಪ್ರೇಮ-ಪ್ರಸಿದ್ಧಿಗಳನ್ನು ಪಡೆದುಕೊಂಡಿರಬಹುದಾದ ಈ ಮಾಯಗಾತಿಯ ಮಹಿಮೆಗೆ ಬೇತಾಳರಾಯನೂ ಬಲಿಯಾಗಿರಬಹುದಲ್ಲವೆ?

**(ಉದಯವಾಣಿ, ಭಾನುವಾರ ಸಾಪ್ತಾಹಿಕ, ಸಂಪದ ೧೫.೦೪.೨೦೧೮)**

## ೩೮. ಪಾರ್ಟುಗಳ ಪರದಾಟ

### ಮಧುರಾ ಕರ್ಣಮ್

'ಪಾರ್ಟುಗಳು' ಎಂದಾಕ್ಷಣ ಯಾವುದೋ ಗ್ಯಾರೇಜಿನಲ್ಲಿ ಬಿದ್ದಿರುವ ಬಿಡಿ ಭಾಗಗಳ ಬಗ್ಗೆ ಹೇಳ್ತಿದಾಳೆ ಅಂದ್ಕೋತೀರಿ. ಉಹೂಂ, ಅದಲ್ಲಪ್ಪ ನಾನು ಹೇಳುತ್ತಿರುವದು ಗಾಡಿಯಲ್ಲ, ನಮ್ಮ ಬಾಡಿಯಲ್ಲಿರುವ ಪಾರ್ಟುಗಳ ಬಗ್ಗೆ, ದೇವರು ನಮ್ಮ ಈ ಪೂರ್ತಿ ದೇಹವನ್ನು ಒಂದೇ ಪೀಸಿನಲ್ಲಿ ಕರುಣಿಸಿದ್ದಾನೆ. ಬ್ರಹ್ಮ ಸೃಷ್ಟಿಸುವಾಗಲೇ ಪ್ರತಿಯೊಬ್ಬರನ್ನೂ ಏಕಶಿಲಾ ವಿಗ್ರಹವಾಗೇ ಕೆತ್ತುತ್ತಾನೆ. ಜೀವ ನೀಡುತ್ತಾನೆ. ಎಲ್ಲಿ ತಾಗಿದರೂ ನೋವಾಗುತ್ತದೆ. ಯಾವುದನ್ನೂ ಬಿಚ್ಚಿಡುವಂತಿಲ್ಲ. ಇಟ್ಟು ಮರೆಯುವಂತಿಲ್ಲ. ಮರೆತು ಕಳೆಯುವಂತಿಲ್ಲ. ಇದು ಜೀವಿಗಳಿಗೆ ಅವನು ಮಾಡಿರುವ ದೊಡ್ಡ ಉಪಕಾರ. ಅಕಸ್ಮಾತ್... ಬೂಟು, ಸಾಕ್ಸು, ಟೈ, ಪ್ಯಾಂಟು, ಸೀರೆಯ ತರಹ ರಾತ್ರಿ ತಲೆ, ಎದೆ, ಹೊಟ್ಟೆ, ಬೆನ್ನು, ಕೈ, ಕಾಲು ಎಲ್ಲ ಡಿಸ್‌ಮ್ಯಾಂಟಲ್ ಮಾಡಿಟ್ಟು ಬೆಳಿಗ್ಗೆ ಎಲ್ಲ ಪೀಸುಗಳನ್ನು ಸರಿಯಾಗಿ ಜೋಡಿಸಿಕೊಂಡು 'ನಾವು' ರೂಪ ತಾಳುವಂತಿದ್ದರೆ... ಮೆಶಿನ್ನಿನಂತೆ ಬಿಚ್ಚಿಟ್ಟದ್ದೆಲ್ಲ ಸರಿಯಾಗಿ ಜೋಡಿಸಿಕೊಂಡು ದಿನದಿನವೂ ಮೈದಳೆಯುವಂತಿದ್ದರೆ... ಕತೆ ಬೇರೆಯೇ ಆಗಿರುತ್ತಿತ್ತು. ಬಹುಶ: ಕವಿಗಳು ನಿತ್ಯ ಹೊಸ ಜನ್ಮ..' ಎಂದು ಬರೆಯುತ್ತಿದ್ದರು. ಎಲ್ಲ ಪಾರ್ಟುಗಳ ತಂಟೆಗೆ ಹೋಗಲ್ಲಪ್ಪ ನಾನು. ಹೃದಯ, ಮೆದುಳು, ಕರುಳು... ಹಾಕಿಕೊಳ್ಳುವಾಗ ಹೆಚ್ಚು ಕಮ್ಮಿಯಾಗಿ ಅವಸರದಲ್ಲಿ ಕೆಳಗಿನದು ಮೇಲೆ, ಮೇಲಿನದು ಕೆಳಗಾಗಿ ಬಿಟ್ಟರೆ... ಪ್ರಾಣಕ್ಕೇ ಸಂಚಕಾರ. ಇವೆಲ್ಲ ಬೇಡ ಬಿಡಿ, ಬರೀ ಕೈ, ಕಾಲುಗಳನ್ನು ಸೂಗಳೊಂದಿಗೆ ಬಿಚ್ಚಿಡುವಂತಿದ್ದರೆ.. ಒಂದು ಬಾರಿ ಊಹಿಸಿ

ಹೌದು! ಕೈ, ಕಾಲುಗಳನ್ನು ನಟ್ಟು, ಬೋಲ್ಟು, " ಸ್ಕ್ರೂ ಮತ್ತಿತರ ಸಲಕರಣೆಗಳ ಸಹಾಯದಿಂದ ಬಿಚ್ಚಿಟ್ಟು ಮತ್ತೆ ಜೋಡಿಸುವಂತಿದ್ದರೆ... ಈ ಭೂಮಿಯ ಮೇಲೆ ಹೊಸ ಅಧ್ಯಾಯವಿರುತ್ತಿತ್ತು. ಅನುಕೂಲಗಳ ಜೊತೆಗೆ ವಿಭಿನ್ನವಾದ ತೊಂದರೆಗಳೂ ಬರಬಹುದಿತ್ತು. ಮಕ್ಕಳಿಂದ ಆರಂಭವಾದರೆ, “ಅಮ್ಮಾ, ನಿನ್ನೆ ಆಡ್ತಾ ಆಡ್ತಾ ಫ್ರೆಂಡ್ ಮನೇಲಿ ಕೈ

ಬಿಚ್ಚಿಟ್ಟು ಮರೆತಿಟ್ಟಿದೀನಿ. ತರಲು ಟೈಮಿಲ್ಲ. ಶಾಲೆಗೆ ಲೇಟಾಗ್ತಾ ಇದೆ. ಇವತ್ತೊಂದಿನ ನಿನ್ನ ಕೈ ಕೊಡಮ್ಮಾ" ಎಂದು ತನ್ನ ಅಳತೆಗೆ ಮೀರಿದ, ದಪ್ಪನಾದ ಕೈ ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದವೋ ಏನೋ. ಶಾಲೆಯಲ್ಲಿ ಡಿಸಿಪ್ಲಿನ್ ಕಮಿಟಿಯವರು 'ಹೀಗೆಲ್ಲಾ ಬರುವಂತಿಲ್ಲ' ಎಂದು ತಗಾದೆ ತೆಗೆಯಬಹುದು. ಮನೆಯಲ್ಲಿ ಇಬ್ಬರೋ, ಮೂವರೋ ಮಕ್ಕಳಿದ್ದರೆ ಗೃಹಿಣಿ, "ಓಯ್ ಮಕ್ಕಳಾ, ಎರಡೂ ಕೈ ಹೊತ್ಕಂಡು ಹೋದ್ರೆ ಏನ್ಮಾಡ್ಲಿ? ಒಂದಂತೂ ಬೇಕೇ ಬೇಕು" ಎಂದು ಗದರಬಹುದಿತ್ತು. ಗಂಡ ಹೆಂಡತಿಗೆ, "ಈವತ್ತು ಆಫೀಸಿನಲ್ಲಿ ಅಡಿಗೆ ಸ್ಪರ್ಧೆ ಇದೆ ಕಣೆ. ನಿನ್ನ ಕೈ ಕೊಟ್ಟಿರ್ತೀಯಾ?"ಎಂದು ಕೇಳಿ ತೆಗೆದುಕೊಂಡು ಹೋಗುತ್ತಿದ್ದ. ಉದ್ಯೋಗಸ್ಥ



ಮಹಿಳೆಯರು ಕೂಡ "ಡಿಯರ್, ಇಂದು ಡಾಟಾ ಬೇಸ್ ಮೇಲೆ ಕೆಲಸ ಮಾಡ್ಬೇಕಿದೆ. ನಾಳೆ ಪ್ರೊಜೆಕ್ಟ್ ಡೆಲಿವರಿ ಕೊಡ್ಬೇಕು. ನಿಮ್ಮ ಕೈ ಕೊಟ್ಟಿರ್ತೀರಾ? ನೀವು... ಸಾಧ್ಯವಾದ್ರೆ ರಜ ಹಾಕಿ" ಎಂದು ತಮ್ಮದನ್ನು ಕಳಚಿ ಸ್ಕ್ರೂ ತಿರುವಿ ಗಂಡನದನ್ನು ಹಾಕಿಕೊಂಡು ಹೋಗುತ್ತಿದ್ದರು. ಶಾಲೆ, ಆಫೀಸುಗಳಲ್ಲಿ ತೋಳು, ಕೈಗಳ ನಡುವಿನ ವ್ಯತ್ಯಾಸ ಕಂಡು, "ಏನಪ್ಪಾ, ಈವತ್ತು ಯಾರದ್ದು ತಗುಲಿಸಿಕೊಂಡು ಬಂದಿದ್ದೀಯಾ?"ಎನ್ನುವುದು ಮಾಮೂಲಾಗಿರುತ್ತಿತ್ತು.

ಯಾವುದೇ ವಿಷಯದಲ್ಲೂ ನುರಿತ ಕೈಗಳಿಗೆ ಎಲ್ಲಿಲ್ಲದ ಡಿಮ್ಯಾಂಡಿರುತ್ತಿತ್ತು. ಬಾಡಿಗೆ ಸೈಕಲ್ಲುಗಳ ಶಾಪಿದ್ದಂತೆ, 'ಬಾಡಿಗೆ ಕೈ, ಕಾಲುಗಳ ಶಾಪ' ಇದ್ದಿರಬಹುದಿತ್ತು. ಅವುಗಳಲ್ಲೇ ಕಂಪ್ಯೂಟರ್‌ನಲ್ಲಿ ಎಕ್ಸ್‌ಪರ್ಟ್ ಕೈಗಳು, ಅಡಿಗೆ, ಚಿತ್ರಕಲೆ, ಕಸೂತಿ, ಬ್ಯಾಂಕಿಂಗ್... ಹೀಗೆ ಬೇರೆಬೇರೆ ಸೆಕ್ಷನ್‌ಗಳಿರುತ್ತಿದ್ದವು. ಗ್ರಾಹಕರು ಸೀದಾ ಬಂದವರೇ ತಮಗೆ ಹೊಂದುವ ಆಕಾರ, ಗಾತ್ರ, ಬಣ್ಣ, ಅನುಭವವಿರುವ ಕೈಗಳನ್ನು ಆರಿಸಿ ಬಾಡಿಗೆಗೆ ತೆಗೆದುಕೊಳ್ಳಬಹುದಿತ್ತು. ನೆಟ್‌ನಲ್ಲೂ ಇವುಗಳ ವಿವರ ಲಭ್ಯವಿದ್ದು ಆನ್‌ಲೈನ್ ಬುಕಿಂಗ್ ಕೂಡ ಮಾಡಬಹುದಾಗಿತ್ತು. ಪ್ಯಾಕೆಟ್‌ಗಳ ಮೇಲೆ ತಯಾರಿಕೆಯ ದಿನಾಂಕ ಬರೆದಂತೆ ಇಲ್ಲಿ ಅನುಭವದ ವಿವರ ದೊರಕುತ್ತಿತ್ತು. "ನಾಳೆ ಚಿತ್ರಕಲಾ ಸ್ಪರ್ಧೆ ಇದೆ. ಕಾಂಪಿಟೇಟಿವ್ ಹ್ಯಾಂಡ್ಸ್ ಬೇಕಿತ್ತು" ಎಂದು ಗ್ರಾಹಕರು ಬರುತ್ತಿದ್ದರು. ಇದರಂತೆ ಕಸೂತಿ, ರಂಗೋಲಿ, ಟೆನಿಸ್, ಬ್ಯಾಡ್‌ಮಿಂಟನ್... ಹೀಗೆ ಎಲ್ಲದರಲ್ಲಿಯೂ ನುರಿತ ಕೈಗಳು ದೊರಕುತ್ತಿದ್ದುವೇನೋ. ಸೌಂದರ್ಯತಜ್ಞ ಕೈಗಳಂತೂ ದುರ್ಲಭವಾಗುತ್ತಿದ್ದವು. ಬ್ಯೂಟಿ ಪಾರ್ಲರ್‌ಗಳಿಗಿಂತ ಜನ ಎಕ್ಸ್‌ಪರ್ಟ್ ಹ್ಯಾಂಡ್ಸ್‌ಗಳನ್ನೇ ಉಪಯೋಗಿಸುತ್ತಿದ್ದರು. ಕೋಚಿಂಗ್ ಕ್ಲಾಸ್‌ನವರು ಕೋಚಿಂಗ್ ಕೊಟ್ಟು ಮುಗಿಸಿ ಕೊನೆಗೆ ಕಷ್ಟವೆನ್ನುವ ವಿದ್ಯಾರ್ಥಿಗಳಿಗೆ ಅದಕ್ಕೆ ತಕ್ಕನಾದ ಕೈಗಳನ್ನು ಅವಶ್ಯಕತೆಯಿದ್ದಲ್ಲಿ ಕೊಡಬಹುದಿತ್ತು. ಬರೀ ನಗರ ಮಾತ್ರವಲ್ಲ, ಹಳ್ಳಿಗಳಲ್ಲೂ "ನಾಳೆ ಹೊಲಾನಾ ನಾಟಿ ಮಾಡೇಕು. ನಾಲ್ಕು ಕೈ ನೋಡಿಸ್ಕೋಬೇಕು" ಎಂಬ ಮಾತು ಕೇಳಿ ಬರುತ್ತಿತ್ತು. ಅತ್ಯುತ್ತಮ ಕ್ರೀಡಾಪಟು, ಕಲಾವಿದ,

ಕೆಲಸಗಾರರಿಗೆ "ಒಮ್ಮೆಯೂ ಬಾಡಿಗೆ ಕೈ ಅಥವಾ ರೀಪ್ಲೇಸ್‌ಮೆಂಟ್‌ಗಳ ಸಹಾಯ ತೆಗೆದುಕೊಳ್ಳದವರು" ಎನ್ನುವ ಅಭಿದಾನ ಪ್ರಾಪ್ತವಾಗುತ್ತಿತ್ತು. "ಒಂದು ಮನೇಲಿ ಹಾಲು ಚಿರೋಟಿ ಕೇಳಿದಾರೆ ಕಣೋ, ನಿಮ್ಮಿಬ್ಬರ ಕೈ ಕೊಡು. ನಾಳೆ ವಾಪಸ್ ಕೊಟ್ಟಿದ್ದೀನಿ" ಎನ್ನುವ ಅಡಿಗೆಯವರೂ ಇರುತ್ತಿದ್ದರು. ಕಳ್ಳರು ಕೂಡ, "ಅಣೋ, ದೊಡ್ಡ ಮನೆಗೆ ಸ್ಕೆಚ್ ಹಾಕಿವ್ನಿ, ಯಾವುದಕ್ಕೂ ನಿನ್ನ ಕೈ, ಕಾಲು ಕೊಟ್ಟರು. ಬೀಗ ಮುರಿಯಕ್ಕೆ, ಓಡಕ್ಕೆ ಶಾನೆ ಅನುಕೂಲ ಆಯ್ತದೆ" ಎಂದು ಕೇಳಿ ಇಸಿದುಕೊಂಡು ಹೋಗಬಹುದಿತ್ತು. "ನಾಳೆ ಒಂದು ಮುಖ್ಯ ಹಾರ್ಟ್ ಸರ್ಜರಿ ಇದೆ ಕಣಯ್ಯ, ನೀನು ನನಗಿಂತ ಎಕ್ಸ್‌ಪರ್ಟ್. ನಿನ್ನ ಕೈ ಕೊಟ್ಟಿರಯ್ಯ, ಮುಗಿದಾಕ್ಷಣ ತಂದು ಕೊಡ್ತೀನಿ" ಎಂಬ ಮಾತುಗಳು ಕೇಳಿ ಬರುತ್ತಿದ್ದವು. ಉಗ್ರರೂ ಆತ್ಮಾಹುತಿ ದಾಳಿಗಳನ್ನು ಮಾಡಬೇಕಾಗಿರಲಿಲ್ಲ. "ಉಗ್ರರ ಕೈಗಳು ನುಸುಳಿವೆಯಂತೆ" ಎಂಬುದು ಪತ್ರಿಕೆಗಳಲ್ಲಿ ವರದಿಯಾಗುತ್ತಿತ್ತು. ಮಾಲ್, ಹಾಸ್ಪಿಟಲ್, ತಾರಾ ಹೋಟೆಲ್‌ಗಳಲ್ಲಿ ಕೈ, ಕಾಲುಗಳ



ಬದಲಾವಣೆಗೆಂದೇ ಪ್ರತ್ಯೇಕ ಕೋಣೆಗಳಿರುತ್ತಿದ್ದವು. ಬಟ್ಟೆ ಬದಲಾಯಿಸಿದಂತೆ ಕೈ, ಕಾಲುಗಳನ್ನೂ ಆರಾಮವಾಗಿ ಬದಲಾಯಿಸಬಹುದಿತ್ತು.

ವೃದ್ಧರದು ಇನ್ನೊಂದು ರೀತಿಯ ಅಳಲು. "ಕೈಯಿಂದ ಕೆಲಸಾನೇ ಆಗಲ್ಲ, ನಡುಗುತ್ತೆ, ಕಾಲು ನೋವು, ನಡೆಯಕ್ಕಾಗಲ್ಲ. ಬಾಡಿಗೆ ತಂದ್ಕೊಡು. ಇಲ್ಲಾಂದ್ರೆ ಹೊಸಾದೇ ಮಾಡ್ಸು" ಎಂದು ಮಕ್ಕಳಿಗೆ ದೂರು ಹೇಳಿ ಬೇರೆಯದನ್ನು ಜೋಡಿಸಿಕೊಂಡು ತಮ್ಮ ಕೆಲಸ ಸಾಗಿಸಿಕೊಳ್ಳುತ್ತಿದ್ದರು. ವೈದ್ಯರಿಗೆ ಅರ್ಧ ರೋಗಿಗಳು ಕಡಿಮೆಯಾಗುತ್ತಿದ್ದರು. ಅವರ ಮಕ್ಕಳಿಗೆ ಅರ್ಧ ಟೆನ್ಸನ್ ಕಡಿಮೆಯಾಗುತ್ತಿತ್ತು. ಕೈ, ಕಾಲುಗಳಿಗೆ ಏನೇ ತೊಂದರೆಯಾಗಿದ್ದರೂ ಅಡ್ಮಿಟ್ ಆಗುವ ಅವಶ್ಯಕತೆ ಇರುತ್ತಿರಲಿಲ್ಲ. ಡಾಕ್ಟ್ರ ಬಳಿ ತೋರಿಸಿ ಬಿಟ್ಟಿಟ್ಟು ಬಂದರಾಯಿತು. ಅವುಗಳನ್ನು ಗುಣಪಡಿಸಿ, ಸರಿಪಡಿಸಿ ಫೋನ್ ಮಾಡಿದ ಮೇಲೆ ಸೇರಿಸಿಕೊಂಡು ಬಂದರಾಗುತ್ತಿತ್ತು. ಹೆಸರು, ನಂಬರು ಬರೆದುಕೊಂಡ ಕೈ, ಕಾಲುಗಳು ಆಸ್ಪತ್ರೆಯಲ್ಲಿ ಸಾಲಾಗಿ ಜೋಡಿಸಿಟ್ಟಿರಲ್ಪಡುತ್ತಿದ್ದವು. "ನಿಮ್ಮ ಕೈ ತಾನೇ, ಇನ್ನೂ ಗಾಯ ಮಾಯಬೇಕು. ಇನ್ನೆರಡು ದಿನ ಬೇಕಾಗಬಹುದು" ಎಂಬ ಮಾತು ಸಲೀಸಾಗಿ ಕೇಳಿ ಬರುತ್ತಿತ್ತು. ಟೈಲರ್‌ನ ಅಂಗಡಿಗೆ ಅಲೆದಾಡಿದಂತೆ ಆಸ್ಪತ್ರೆಗೆ ಅಲೆದಾಡುವ ಸಂದರ್ಭವಿರುತ್ತಿತ್ತೇನೋ.

ಬ್ಯೂಟಿ ಪಾರ್ಲರ್‌ಗಳಲ್ಲಿಯೂ ಇದೇ ಕಥೆ. ಮ್ಯಾನಿಕ್ಯೂರ್, ಪೆಡಿಕ್ಯೂರ್‌ಗೆಂದು ಕೊಟ್ಟು ಹೋದರೆ ಗಂಟೆ ಬಿಟ್ಟು ಬಂದು ನೇಲ್ ಪಾಲಿಶ್ ಹಾಕಿದ ಮೃದುವಾದ ಫಳಫಳಿಸುವ ಕೈಯನ್ನೋ, ಕಾಲನ್ನೋ ಹಾಕಿಕೊಳ್ಳಬಹುದಿತ್ತು. ಬಳೆಗಾಗಿ ಅಳತೆಯ ಬಳೆ ಕೊಟ್ಟು ಕಳಿಸುವ ಬದಲು ಕೈಯನ್ನೇ ಕೊಟ್ಟು ಕಳಿಸಿದರೆ ಕೆಲಸ ತಪ್ಪಿಸಿಕೊಳ್ಳಲೂ

ಸಹಾಯವಾಗುತ್ತಿತ್ತು. ಮದುವೆ ಮುಂತಾದ ಸಮಾರಂಭಗಳಲ್ಲಿ ಮೆಹಂದಿಗೋಸ್ಕರ ರಾತ್ರಿಯೆಲ್ಲ ಕಾಯುತ್ತ ಗಂಟೆಗಟ್ಟಲೆ ಕುಳಿತುಕೊಳ್ಳುವುದು ಬೇಕಿರಲಿಲ್ಲ. ಬಿಚ್ಚಿಕೊಟ್ಟು ಆರಾಮಕ್ಕೆ ಮಲಗಿ ಬಿಡಬಹುದಾಗಿತ್ತು. ಬೆಳಿಗ್ಗೆ ಒಣಗಿದ ಮೆಹೆಂದಿ ಚಿತ್ತಾರದ ಕೈ, ಕಾಲುಗಳನ್ನು (ಅವರದೇ) ಜೋಡಿಸಿಕೊಳ್ಳಲು ಸರಿ ಹೋಗುತ್ತಿತ್ತು.

ಕಳ್ಳರಿಗೂ ಒಂದು ರೀತಿಯ ಅನುಕೂಲವಾಗುತ್ತಿತ್ತು. ಒಡವೆ ಬಿಚ್ಚಿಕೊಡದಿದ್ದರೆ ಕೈ ಕತ್ತರಿಸಿಕೊಂಡು ಹೋಗಿ ಪ್ರಾಣಾಪಾಯ ಉಂಟು ಮಾಡುವ ಪ್ರಮೇಯವೇ ಇರುತ್ತಿರಲಿಲ್ಲ. ಬಿಚ್ಚಿ ಕೊಂಡೊಯ್ದರೆ ಸಾಕು. ಎರಡು ದಿನಗಳ ನಂತರ, “ಇಂಥ ಬಡಾವಣೆಯಲ್ಲಿ ಇಂಥ ಆಕಾರ, ಗಾತ್ರದ ಕೈ ಸಿಕ್ಕಿದೆ. ಬಡಾವಣೆಯ ಪೋಲಿಸ್ ಸ್ಟೇಷನ್ನಿಗೆ ಬಂದು ನೋಡಿ” ಎಂಬ ಒಕ್ಕಣೆಯುಳ್ಳ ಸುದ್ದಿಗಳು ಪತ್ರಿಕೆಗಳಲ್ಲಿ, ಮೊಬೈಲಿನ ಮೆಸೇಜುಗಳಲ್ಲಿ ಧಾರಾಳವಾಗಿ ಲಭ್ಯವಾಗುತ್ತಿದ್ದವು. ಕಳ್ಳಕಾಕರರಿಗೂ ಕೋರ್ಟು, ಜೈಲು ಶಿಕ್ಷೆಗಿಂತ ಕೈಕಾಲುಗಳ ನಟ್, ಬೋಲ್ಟ್, ಸ್ಕ್ರೂಗಳನ್ನು ಬೇರಾವ ಕೈಯೂ ಕೂರದಂತೆ ಕೆಡಿಸಿ ಬಿಟ್ಟರಾಯಿತು, ಅವರ ಕಳ್ಳತನವೇ ಬಂದ್! ಖ್ಯಾತ ಕಲಾವಿದರು, ಸಾಹಿತಿಗಳು, ಕುಶಲಕರ್ಮಿಗಳ ಕೈಗಳಿಗೆ ಅಪಾರ ಬೇಡಿಕೆ ಇರುತ್ತಿತ್ತು. ಕಳ್ಳತನವಾಗದಂತೆ ಅವರು ತಮ್ಮ ಕೈಗಳನ್ನು ಜಾಗ್ರತೆಯಾಗಿ ಕಾಯ್ದುಕೊಳ್ಳುತ್ತಿದ್ದರು. ತಮ್ಮ ಕೈ, ಕಾಲುಗಳಿಗೆ ವಿಮೆ ಇಳಿಸುತ್ತಿದ್ದರು. ವಿಮೆ ಇಳಿಸಲು ಇನ್ನೂ ನಾಲ್ಕು ಅವಯವ ಹೆಚ್ಚಿಗೆ ದೊರಕಿ ವಿಮಾ



ಏಜಂಟರಿಗೂ, ಕಂಪನಿಗಳಿಗೂ ಲಾಭವಾಗುತ್ತಿತ್ತು. ರಾಜಕಾರಣಿಗಳಿಗೆ, ಸಾಧು ಸಂತರಿಗೆ ಹೆಚ್ಚಿನ ಅನುಕೂಲವಾಗುತ್ತಿತ್ತು. “ಆಶೀರ್ವಾದ ಪೂರ್ವಕವಾಗಿ ಶ್ರೀಯುತರು ತಮ್ಮ ಹಸ್ತವನ್ನು ಕಳಿಸಿದ್ದಾರೆ” ಇಲ್ಲವೇ “ಮಾನ್ಯ ಮಂತ್ರಿಗಳ ವಿಶೇಷ ಕೈಯ ಬೆಂಬಲ ನಮಗಿದೆ” ಎಂದು ಒಂದೇ ಸಮಯದಲ್ಲಿ ಅನೇಕ ಸಭೆ, ಸಮಾರಂಭಗಳಲ್ಲಿ ಭಾಗಿಯಾಗುತ್ತ ಚುನಾವಣೆ ಸಮಯದಲ್ಲಿ ಒತ್ತಡವನ್ನು ನೀಗಿಕೊಳ್ಳುತ್ತಿದ್ದರು.

ಬರೀ ಇಷ್ಟೇ ಅಲ್ಲ, ರೀಪ್ಲೇಸ್ಮೆಂಟ್‌ಗಳೂ ಆರಂಭವಾಗುತ್ತಿದ್ದವು. ಕೃತಕ ಕೈ, ಕಾಲುಗಳ ತಯಾರಿಕೆ ಹೆಚ್ಚಾಗುತ್ತಿತ್ತು. ತಮ್ಮದೇ ಗಾತ್ರ, ಬಣ್ಣ, ಅಳತೆಯ ಕೈ, ಕಾಲುಗಳನ್ನು ಆರ್ಡರ್ ಕೊಟ್ಟು ಮಾಡಿಸಬಹುದಾದರೆ... ಅಲ್ಲೂ ಚೈನಾ ಮೇಡ್, ಅಮೆರಿಕಾ ಮೇಡ್, ಮೇಡ್ ಇನ್ ಇಂಡಿಯಾಗಳ ಸ್ಪರ್ಧೆ ಜೋರಾಗಿರುತ್ತಿತ್ತು. ಅದರಲ್ಲೂ ಸಾಧಾರಣ, ಉತ್ತಮ, ಅತ್ಯುತ್ತಮ ಗುಣಮಟ್ಟದವು ದೊರಕಿ ಆಯ್ಕೆಗೆ ಲಭ್ಯವಾಗುತ್ತಿದ್ದವು. ಶ್ರೀಮಂತರು ಒಂದೆರಡು ಸ್ಪೇರ್‌ಗಳನ್ನು ಮನೆಯಲ್ಲಿ ಇಟ್ಟುಕೊಳ್ಳುತ್ತಿದ್ದರು, ಕೂಲಿಂಗ್ ಗ್ಲಾಸ್‌ಗಳಂತೆ. ದೊಡ್ಡ ದೊಡ್ಡ ಹಾಸ್ಪಿಟಲ್‌ನವರೆಲ್ಲ ತಾವೇ ನುರಿತ ವೈದ್ಯರಿಂದ ತಯಾರಿಸಿ ಅಳವಡಿಸುತ್ತಿದ್ದರು. ಅದಕ್ಕಾಗಿ ಬೇರೊಂದು ವಿಭಾಗವೇ ಸೃಷ್ಟಿಯಾಗಿ ಬಹು ಬೇಡಿಕೆಯಲ್ಲಿರುತ್ತಿತ್ತು.

ಪರೀಕ್ಷೆಗಳಲ್ಲೂ, “ನಿಮ್ಮ ಮೂಲ ಕೈಗಳಿಂದಲೇ ಉತ್ತರ ಬರೆಯಬೇಕು” ಎಂಬ ನಿಬಂಧನೆ ಇರುತ್ತಿತ್ತು. ಹಾಲ್ ಟಿಕೆಟ್ಟನ್ನು ಪರಿಶೀಲಿಸಿದ ನಂತರ ನಿಮ್ಮ ಕೈಗಳನ್ನೂ ಪರಿಶೀಲಿಸಲಾಗುತ್ತಿತ್ತು. ಬೇರೆ ಕೈಗಳಿಂದ ಬರೆದರೆ ಅದನ್ನು ಅಮಾನ್ಯ ಮಾಡಿ “ಬೇರೆ ಕೈಗಳನ್ನು ಉಪಯೋಗಿಸಿದ್ದಕ್ಕೆ ಡಿಬಾರ್” ಎಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿತ್ತು. ಎಲ್ಲಾ ಸ್ಪರ್ಧೆಗಳಲ್ಲೂ “ನಿಮ್ಮ ಒರಿಜಿನಲ್ ಕೈ, ಕಾಲುಗಳನ್ನೇ ಉಪಯೋಗಿಸಬೇಕು” ಎನ್ನುವ ಕರಾರು ಕಾಣುತ್ತಿತ್ತು. ಯಾವುದೋ ಕಲಾಕೃತಿ, ಕಾವ್ಯ ಪ್ರಶಸ್ತಿ ಪಡೆದರೆ, “ಅಲ್ಲಿ ನನ್ನ ಕೈ ಕಳಿಸಿದ್ದೆ ಕಣಯ್ಯ” ಎಂದು ಸುಖಾಸುಮ್ಮನೆ ಹೇಳಿಕೊಳ್ಳುವವರಿಗೂ ಕಡಿಮೆ ಇರುತ್ತಿರಲಿಲ್ಲ. ಅದಕ್ಕೇ ನುರಿತ ವೈದ್ಯರ ದೃಢೀಕರಣ ಪತ್ರವನ್ನು ಲಗತ್ತಿಸಿ' ಎಂಬ ಒಕ್ಕಣೆಯೂ ಕಾಣುತ್ತಿತ್ತು.

ವೃದ್ಧರು ಮುಂಜಿ, ಮದುವೆಯ ರಿಸೆಪ್ಷನ್‌ಗಳಲ್ಲಿ “ಅಬ್ಬಾ! ಸ್ಟೇಜ್ ಹತ್ತಿ ಹೋಗಕ್ಕೆ ಆಗಲ್ಲ ಕಣ್ರೀ. ಯಾರು ಹೋಗ್ತಿದೀರಾ? ನನ್ನ ಕೈ ತೆಗೆದುಕೊಂಡು ಹೋಗಿ ಆಶೀರ್ವಾದ ಮಾಡಿ ಬನ್ನಿ” ಎಂದು ಕೊಟ್ಟು ಕಳಿಸಬಹುದಿತ್ತು. ಸುಂದರವಾಗಿ ಅಲಂಕರಿಸಿಕೊಂಡ ಅವರ ಮೊಮ್ಮಗಳು, “ಅಜ್ಜಿ ಕೈ ಬಂತು. ಎಲ್ಲ ದಾರಿ ಬಿಡಿ, ಅವರ ಕೈನಲ್ಲಿ ಹೊಸ ಡಿಸೈನಿನ ಬಳೆ ನೋಡಿ” ಎಂದು ನುಲಿಯುತ್ತ ಹೋಗಿ ಅಕ್ಷತೆ ಹಾಕಿಸಿ ಬರುತ್ತಿದ್ದಳು. ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿ ಭಕ್ತರು ಅರ್ಚಕರಿಗೆ, “ಸ್ವಾಮೀ, ದಯವಿಟ್ಟು ನಾಳೆ ಪೂಜೆಗೆ ನನ್ನ ಕೈ ಉಪಯೋಗಿಸಿ. ನಾನು ಸ್ವಾಮಿಯನ್ನು ಪೂಜಿಸಿದಂತಾಗುತ್ತದೆ” ಎಂದು ದುಂಬಾಲು ಬೀಳುತ್ತಿದ್ದರು. ಖ್ಯಾತ ದೇವಾಲಯಗಳಲ್ಲಿ “ನಿಮ್ಮದೇ ಸೇವೆ” ಎಂಬ ಹೆಸರಿನ ಪೂಜೆಗಾಗಿ ನಿಮ್ಮ ಕೈ ಉಪಯೋಗಿಸಿ ಸ್ವಾಮಿಯನ್ನು ಮುಟ್ಟಿಸುವ ದುಬಾರಿ ಸೇವೆ ಆರಂಭವಾಗಬಹುದಿತ್ತು. ಹಾಗೆಯೇ ಲಂಚ ತೆಗೆದುಕೊಂಡವರೂ



ಕೈಗಳನ್ನೇ ಬದಲಿಸಿ “ಛೇ!ಛೇ! ಇವು ನನ್ನ ಕೈಗಳಲ್ಲ. ನಾನು ಲಂಚ ಸ್ವೀಕರಿಸಿಲ್ಲ” ಎಂದು ಹೇಳುವ ಅಪಾಯವೂ ಇತ್ತು.

ಕಾಲಿಗೂ ಇದೇ ಕಥೆಯೇ! ಬಿಚ್ಚಿ ಕೊಟ್ಟರೆ ರಿಪೇರಿ ಮಾಡಿಸಿಕೊಂಡು ಬರಬಹುದಿತ್ತೇನೋ. ಸಾಕ್ಸು, ಶೂಗಳಂತೆ ಕಾಲುಗಳೂ ಬದಲಾಗಬಹುದಿತ್ತು. “ಅಣ್ಣಾ, ನೀನು ಫುಟ್‌ಬಾಲ್ ಚೆನ್ನಾಗಿ ಆಡ್ತೀಯಲ್ಲ. ಈವತ್ತು ನನಗೆ ಫುಟ್‌ಬಾಲ್ ಮ್ಯಾಚ್ ಇದೆ. ನಿನ್ನ ಕಾಲು ಹಾಕಿಕೊಂಡು ಹೋಗಿರ್ತೀನಿ. ಬಂದ ತಕ್ಷಣ ಕೊಡ್ತೀನಿ. ಬೇಕಾದ್ರೆ ಬರೋವಾಗ ಐಸ್‌ಕ್ರೀಮ್ ಕೂಡಾ ತೊಗೊಂಡು ಬರ್ತೀನಿ” ಎಂದು ಪೂಸಿ ಹೊಡೆದು ಹಾರುವ ತಮ್ಮಂದಿರೋ, ಸ್ನೇಹಿತರೋ ಇರುತ್ತಿದ್ದರು. ಅಪ್ಪ ಕೂಡ, “ಆಫೀಸಿನಲ್ಲಿ ಪರಿಸರಕ್ಕಾಗಿ ಓಟ” ಹಮ್ಮಿಕೊಂಡಿದ್ದಾರೆ. ಎಮ್.ಡಿ. ಕೂಡಾ ಬರ್ತಾರೆ, ನಾನೂ ಸಾಧ್ಯವಾದಷ್ಟು ಓಡಲೇಬೇಕು. ಆದರೆ ಇತ್ತೀಚೆಗೆ ನಡೆದೇ ಅಭ್ಯಾಸವಿಲ್ಲ. ಮನೆ..ಕಾರು...ಬಿಟ್ಟರೆ ಆಫೀಸು. ಇನ್ನು ಓಡುವದೆಲ್ಲಿಂದ ಬಂತು? ಅದಕ್ಕೆ ನಿನ್ನ ಕಾಲು ಕೊಟ್ಟಿರೋ, ಬರುವಾಗ ಅದಕ್ಕೇಂತ ಒಂದು ಜೊತೆ

ರೀಬಾಕ್ ಶೂಸ್ ತೊಗೊಂಡು ಬರ್ತೀನಿ”  ಎನ್ನುತ್ತಿದ್ದರು. ಮಗರಾಯ ಖುಷ್. ತಂಗಿಯರು ಅಕ್ಕಂದಿರಿಗೆ, “ನಾಳೆ ಕಾಲೇಜಿನಲ್ಲಿ ಕ್ಯಾಟ್‌ವಾಕ್ ಇದೆ. ಕ್ಯಾಂಪ್ ಮೇಲೆ ಹೆಜ್ಜೆ ಹಾಕಬೇಕು. ನಿನ್ನ ಕಾಲು ನೀಳವಾಗಿ ಚೆನ್ನಾಗಿವೆ. ಕೊಟ್ಟಿರು ಫೀಸ್. ನೀನು ಯಾವತ್ತು ತನುಜ್ ಜೊತೆ ಹೋದ್ರೂ ಮನೇಲಿ ಹೇಳೋಲ್ಲ”  ಎಂದು ದುಂಬಾಲು ಬೀಳುತ್ತಿದ್ದರು.

ನಟನಟಿಯರು, ಸೆಲೆಬ್ರಿಟಿಗಳು ತಮ್ಮ ಕಾಲುಗಳಿಗೆ ವಿಮೆ ಇಳಿಸಿ ಅವುಗಳ ಸೌಂದರ್ಯ್ಯ ಕಾಪಾಡುವಲ್ಲೇ ಹೆಚ್ಚಿನ ಆಸ್ಥೆ ವಹಿಸುತ್ತಿದ್ದರು. ಜಗತ್ತಿನ ಖ್ಯಾತ ಮಾಡೆಲ್ ನವೋಮಿ ಕ್ಯಾಂಪ್‌ಬೆಲ್‌ಳ ಕಾಲುಗಳಂತೆ ಅವು ದಾಖಲೆಯ ಮೊತ್ತಕ್ಕೆ ವಿಮೆಯಾಗಿರುತ್ತಿದ್ದವು. ನಂತರ ಸೆಲೆಬ್ರಿಟಿಗಳನ್ನು ಕಿಡ್‌ನ್ಯಾಪ್ ಮಾಡಿ ಒದ್ದಾಡದೇ ಅವರ ಕೈಯೋ, ಕಾಲೋ ತೆಗೆದುಕೊಂಡು ಹೋದರೆ ಸಾಕಿತ್ತು. ಜೀವದ ಭಯ ಇರುತ್ತಿರಲಿಲ್ಲ. ಪೊಲೀಸರೂ ಟೆನ್ಸನ್ ಕಡಿಮೆ ಮಾಡಿಕೊಂಡು ಹುಡುಕುತ್ತಿದ್ದರು. ಇವೆಲ್ಲವುಗಳ ಮಧ್ಯೆ ಬಡವರಿಗೆ ಒಂದು ಆಶಾಕಿರಣವಿರುತ್ತಿತ್ತು. ಕೈ, ಕಾಲುಗಳನ್ನು ಬಾಡಿಗೆಗೆ ಕೊಟ್ಟು ಅವರು ಹೊಟ್ಟೆ ಹೊರೆಯಬಹುದಿತ್ತು. “ಓನರಮ್ಮ ಅದ್ಯಾವುದೋ ದೇವಸ್ಥಾನಕ್ಕೆ ನಡ್ಕೊಂಡು ಬರ್ತೀನೀಂತ ಹರಕೆ ಕಟ್ಕೋಂಡವಂತೆ. 'ಕಪ್ಪಗಿದ್ರೂ ನಿನ್ನ ಕೈ, ಕಾಲು ಗಟ್ಟಿಗಿದ್ದಾವಲ್ಲ.. ..ಒಂದಿನ ಕೊಡು' ಅಂತ ಈಸ್ಕೊಂಡು ಹೋಗವ್ವ, ಅವಳ ಕೈ, ಕಾಲೆ ಏನೂ ಮಾಡಿ ಅಭ್ಯಾಸ ಇಲ್ಲಾ ಅನಸ್ಸೈತೆ, ಬೆಳಗ್ಗಿಂದ ಏನೂ ಕೆಲ್ಸಾ ಮಾಡಕ್ಕಾಯ್ತಿಲ್ಲ. ಕುಂತೇ ಇನ್ನಿ”  ಎಂದು ಮನೆ ಕೆಲಸದವಳು ಇನ್ನೊಬ್ಬಳ ಮುಂದೆ ಅಲವತ್ತುಕೊಳ್ಳುವ ದೃಶ್ಯ ಕಾಣಬರುತ್ತಿತ್ತು. ಟ್ರಾಫಿಕ್ ಪೋಲೀಸರು, ದೂರ ಪ್ರಯಾಣ ಮಾಡುವ ಡ್ರೈವರ್‌ಗಳು ಹಾಗೂ ಅವಶ್ಯಕತೆ ಇರುವವರು ಎಕ್ಸಟ್ರಾ ಕೈ ಇಟ್ಟುಕೊಂಡೇ ಮನೆಯಿಂದ ಹೊರಡುತ್ತಿದ್ದರು. ಕಾನೂನಿನ ಪರಿಧಿಯಲ್ಲೂ ತಮ್ಮದಲ್ಲದ ಕೈ, ಕಾಲುಗಳಿಂದ, ಮಾಡಿದ ಅಪರಾಧಗಳಿಗೆ ಬೇರೆ ಶಿಕ್ಷೆಗಳು ಇರುತ್ತಿದ್ದವು.

ಈ ಜೋಡಿಸಿಕೊಳ್ಳುವ ಪಾರ್ಟುಗಳಲ್ಲಿ ವಿಂಗಡಣೆ ಇದ್ದು ಆಕಾರ, ಗಾತ್ರ, ಸ್ತ್ರೀ, ಪುರುಷ, ಸಮಾನ ವಯಸ್ಸು, ಸಮಾನ ಗಾತ್ರಗಳಿಗೆ ಮಾತ್ರ ಹೊಂದಿಕೆಯಾಗುವಂತಿದ್ದರೆ



ಇವೆಲ್ಲ ಸೌಲಭ್ಯಗಳ ಸ್ವರೂಪ ಬೇರೆಯೇ ಆಗಿರುತ್ತಿತ್ತು. ಆಗ ಅಮ್ಮ “ಏ, ನನ್ನ ಕೈ ಬರಲ್ವೊ, ಪಕ್ಕದ ಮನೆ ದೀಪುಗೆ ಜ್ವರ ಬಂದು ಮಲಗಿದ್ದಾನೆ. ಸ್ಕೂಲಿಗೆ ಹೋಗಲ್ವಂತೆ. ಅವನ ಕೈ ಕೇಳು ಹೋಗು”  ಎಂದು ಕಳಿಸಬಹುದಿತ್ತು. ದೊಡ್ಡ ದೊಡ್ಡ ಯೋಗಿಗಳು, ಸಂತರು, “ನಿಮ್ಮ ಕೈ, ಕಾಲುಗಳು ಅನೈತಿಕ ಕೆಲಸ ಮಾಡದೇ ಸತ್ಕಾರ್ಯ ಮಾಡುವಂತೆ ನೋಡಿಕೊಳ್ಳಿ”  ಎಂದು ಉಪದೇಶಿಸುತ್ತಿದ್ದರು. ಸರ್ಕಾರದವರೂ ಕೂಡ “ನಿಮ್ಮ ಕೈ, ಕಾಲುಗಳು ಸದಾ ನಿಮ್ಮವೇ ಆಗಿರಲಿ”  ಎಂಬ ಜಾಹೀರಾತು ನೀಡುತ್ತಿದ್ದರು. ಬೇರೆ ಶೇಡ್‌ನ ಬಟ್ಟೆಗಳಂತೆ ಬೇರೆ ಬಣ್ಣದ ಕೈ, ಕಾಲುಗಳನ್ನು ಬಳಸುವುದು ಫ್ಯಾಶನ್ ಆಗಬಹುದಿತ್ತು. 'ನನ್ನ ನಿನ್ನ ಕೈಗಳ ನಡುವೆ...' ಎಂಬ ಕವನಗಳು, ಅನೇಕಾನೇಕ ಕಥೆಗಳು

ಬರಬಹುದಿತ್ತು. ಟಿ.ವಿ. ಸೀರಿಯಲ್‌ಗಳಂತೂ ಕೇಳಲೇಬೇಡಿ. ಕೈ, ಕಾಲುಗಳು ಬೇರೆಯಾದ ಬಗ್ಗೆ, ಅದಲು ಬದಲಾಗಿ ಮತ್ತೆ ಕೂಡಿದ ಬಗ್ಗೆ ಮೆಗಾ ಧಾರಾವಾಹಿಗಳನ್ನೇ ಮಾಡಿಬಿಡುತ್ತಿದ್ದರು.

ಇಷ್ಟೆಲ್ಲಾ ಆದ ಮೇಲೆ ತನಗೆ ಕೈ, ಕಾಲುಗಳನ್ನು ಜೋಡಿಸುವಂತೆ ಸೃಷ್ಟಿಸಿದ ಭಗವಂತನನ್ನು ಮನುಷ್ಯ ಬಿಡುತ್ತಿರಲಿಲ್ಲ. ದೇವರ ಕೈ, ಕಾಲುಗಳನ್ನೂ ಜೋಡಿಸುವಂತೆ ಇಡುತ್ತಿದ್ದ. ಆಗ ಇಷ್ಟಾರ್ಥಗಳು ಈಡೇರಿದರೆ ಕೈ, ಕಾಲುಗಳನ್ನು ಮಾಡಿಸಿ ಕೊಡುವ ಹರಕೆಯನ್ನು ಭಕ್ತರು ಬೇಡಿಕೊಳ್ಳುತ್ತಿದ್ದರು. ಚಿನ್ನ, ಬೆಳ್ಳಿ, ಹಿತ್ತಾಳೆ, ಪಂಚಲೋಹ ಮುಂತಾದವುಗಳಲ್ಲಿ ಮಾಡಿದ ಕೈ, ಕಾಲುಗಳು ದೇವಸ್ಥಾನಗಳಲ್ಲಿ ಸಾಲಾಗಿರುತ್ತಿದ್ದವು. ಹಬ್ಬ, ಹರಿದಿನಗಳಲ್ಲಿ ಚಿನ್ನದ, ಮಿಕ್ಕಂತೆ ಬೆಳ್ಳಿ, ಹಿತ್ತಾಳೆಯವು ಬಳಕೆಯಾಗುತ್ತಿದ್ದವು.

ಇದೇನು ಪುರಾಣ ನಿಲ್ತಾನೇ ಇಲ್ಲ, ನದಿ ಹರಿದಂತೆ ಹರೀತಾನೇ ಇದೆ. ತನ್ನದಲ್ಲ, ಬೇರೆ ಯಾರೋ ಕೈ ಇಟ್ಕೊಂಡು ಬರೀತಾನೇ ಇದಾಳೆ, ಬರೀ ಕೈ, ಕಾಲು ಅಲ್ಲಾಡಿಸಿದ್ರೆ ಸಾಕಾ... ಮೆದುಳಿಗೆ ಸಂವೇದನೆಯನ್ನು ನರಗಳು ತಿಳಿಸಿ, ಅಲ್ಲಿಂದ ಇಂಪಲ್ಸ್‌ಗಳ ಮೂಲಕ ಸಂದೇಶಗಳು ರವಾನೆಯಾಗಿ... ಇದೆಲ್ಲಾ ವಿಜ್ಞಾನ ನನಗೂ ಗೊತ್ತು ಸ್ವಾಮಿ. ಆದರೆ ಇದೊಂದು ಲಘು ಧಾಟಿಯ ಊಹೆಯಷ್ಟೇ. ಹೀಗೆಲ್ಲ ಆಗಬಾರದೆಂದೇ ದೇವರು ನಮಗೆ 'ಸಂಪೂರ್ಣ' ಒಂದೇ ಆಗಿರುವ ದೇಹವನ್ನು ಒನ್‌ಪೀಸಿನಲ್ಲಿ ದಯಪಾಲಿಸಿದ್ದಾನೆ. ಆದರೂ ನಿತ್ಯ ಪೆನ್ನು, ಡಬ್ಬಿ ಮರೆತು ಬರುವ ಮಕ್ಕಳಿಗೆ ತಾಯಂದಿರು "ಪುಣ್ಯಾ, ದೇವರು ಎಲ್ಲಾ ಕೂಡ್ಸಿ ಕಳಿಸ್ಯಾನ. ಇಲ್ಲಾಂದ್ರ ತಲಿ ಒಬ್ಬರ ಮನ್ಯಾಗ, ಕಾಲೊಬ್ಬರ ಮನ್ಯಾಗ ಬಿಟ್ಟ ಬರತಿದ್ರಿ" ಎಂದು ಆಕ್ಷೇಪಿಸುವುದು ಸರ್ವೇಸಾಮಾನ್ಯವಾಗಿರುತ್ತಿತ್ತು. ನಾನು ಮೊದಲೇ ಹೇಳಿದಂತೆ ದೇಹದ ಬೇರಾವ ಭಾಗಗಳನ್ನೂ ಬಿಡಿ ಮಾಡುವ ತಂಟೆಗೆ ಹೋಗಿಲ್ಲ. ಬೆರಳುಗಳನ್ನೂ ಒಟ್ಟಾಗಿ ಇರಲು ಬಿಟ್ಟಿದ್ದೇನೆ. ಇಲ್ಲವಾದಲ್ಲಿ ದಿನವೂ ಕಸದಲ್ಲಿ ಒಂದೋ, ಎರಡೋ ದೊರಕುತ್ತಿದ್ದವು. ಅವುಗಳ ಸಂಖ್ಯೆ ಜಾಸ್ತಿಯಲ್ಲವೆ?

ಅಯ್ಯೋ! ಸಾಕಿನ್ನು.. ತಲೆ ಸುತ್ತುತ್ತಿದೆ ಅಂದ್ರಾ? ಹೆದರಬೇಡೀಪ್ಪಾ, ಹಾಗೇನೂ ಆಗಲ್ಲ! ಎಲ್ಲಾ ಒಟ್ಟಾಗೇ ಇವೆ. ಆದ್ರೂ ಜಾಗ್ರತೆಗೇಂತ ನಿಮ್ಮ ಕೈ, ಕಾಲುಗಳನ್ನು ಒಮ್ಮೆ ಎಳೆದು ನೋಡಿಕೊಂಡು ಬಿಡಿ. ಎಲ್ಲಾ ಸೇರೊಂಡೇ ಇವೆ ತಾನೇ..?

**( ಮಯೂರ, ಮೇ ೨೦೦೮)**

## ೩೯. ಯಾಕ್-ಗೆ ಶೇವ್ ಯಾಕೆ?

**ವಾಣಿ ಸುರೇಶ್**

'ಯಾಕ್' ಅಂದರೇನೂಂತ ಗೊತ್ತು. ಶೇವಿಂಗ್ ಅಂದರೇನೂಂತಾನೂ ಗೊತ್ತು. ಅಂತೂ ಸರಿಯೇ ಸರಿ. ಆದರೆ ಯಾರು ತಾನೇ ಯಾಕ್‌ಗೆ ಶೇವ್ ಮಾಡ್ತಾರೆ?! ಅಳಕ್ಕೂ ಅದು ಒಂದು ಕಡೆ ಹಾಗೇ ನಿಂತ್ಕೊಂಡು ಚೌರ ಮಾಡಿಸಿಕೊಳ್ಳತ್ತೇ? ಅಂಥಾ ಸಾಹಸಕ್ಕೆ ಕೈ ಹಾಕುವ ಆಸಾಮಿಗಳು ಎಂಥಾ ಧೈರ್ಯಸ್ಥರಾಗಿರಬೇಕಲ್ವೇ? ಅಥವಾ

ಮೀರಿ ಹಾಗೊಮ್ಮೆ ಅಳ್ಳು ದೊಡ್ಡ ಪ್ರಾಣಿಗೆ ಚೌರ ಮಾಡಕ್ಕೆ ಹೋದರೂ ಅವರಿಗೆ ಅದೆಳು ಶೇವಿಂಗ್ ಜೆಲ್ಲು, ಬಿಸಿ ನೀರು ಬೇಕಾಗಬಹುದು? ಅದೂ ಅಲ್ಲದೇ ಯಾಕ್‌ಗಳಿರೋ ಮೈನಸ್ ಡಿಗ್ರಿಯ ಆ ಶೀತಪ್ರದೇಶಗಳಲ್ಲಿ ಆಪಾಟಿ ಬಿಸಿ ನೀರಿರಲಿ, ಸದ್ಯ ತಣ್ಣೀರನ್ನೂ ಒದಗಿಸಿ ಪೂರೈಸುಕ್ಕಾಗುತ್ಯೇ? ಇಲ್ಲಾ ಏನಾದ್ರೂ ಬ್ಯಾಟರಿ ಆಪರೇಟೆಡ್ ಎಲೆಕ್ಟ್ರಿಕ್ ಶೇವರಿಂದ ಮಾಡ್ತಾರೋ? ಹಾಗೆ ಮಾಡಿದರೆ ಯಾವ ಕಾಲಕ್ಕೆ ತಾನೇ ಕೆರೆದು ಮುಗಿಸಕ್ಕೆ ಸಾಧ್ಯ...? ಅಂತೆಲ್ಲಾ ಪುಂಖಾನುಪುಂಖವಾಗಿ ಪ್ರಶ್ನೆಗಳು ನಿಮ್ಮ ಮನಸ್ಸಿನಲ್ಲಿ, ಬಡಪಾಯಿ ಗೆಸ್ಟ್ ಎದುರಿಗೆ ಕೂತಿರೋ ಅರ್ನಾಬ್ ಗೋಸ್ವಾಮಿಯ ಮನಸ್ಸಲ್ಲಿ ಏಳುವುದಕ್ಕಿಂತಲೂ ಹೆಚ್ಚಾಗಿ, ಏಳಲ್ವೇ? ಆದರೆ ಈ ನಿಮ್ಮೆಲ್ಲಾ ಎಣಿಕೆಗಳೂ ತಪ್ಪೇ ಕ!

ಯಾಕೆ ಗೊತ್ತಾ? “ಶೇವಿಂಗ್ ದ ಯಾಕ್” ಅನ್ನೋದೊಂದು ಅಮೇರಿಕನ್ ಇಂಗ್ಲಿಷಿನ ಈಡಿಯಮ್. ಅಂದರೆ, ಐ ಮೀನ್ ನಮ್ಮ ಶುದ್ಧ ಕನ್ನಡದಲ್ಲಿ - ಒಂದು ಪದಪುಂಜ, ಅಳ್ಟೇ! ಆದರೆ ನನಗೆ ತಿಳಿದ್ದಾಗೆ ನಮ್ಮ ಭಾಳೆಗಳಲ್ಲಿ ಈ ಈಡಿಯಮ್ಮಿರಲಿ, ಯಾವ ಭಾಳಾ ಶಾಸ್ತ್ರಜ್ಞರೂ, ಕಾವ್ಯರೂಪಕಾಲಂಕಾರ ಪರಿಣತರೂ ಈ ಯಾಕ್‌ನ ಸಮೃದ್ಧ ಕೂದಲಿನ ಮೇಲೆ ಅದ್ಯಾಕೋ ಅಳ್ಟಾಗಿ ಕಣ್ಣು ಹಾಕಿದ ಹಾಗನ್ನಿಸುಲ್ಲ, ನಮ್ಮ ಭಾರತವರ್ಷದ ದೇವಸ್ಥಾನಗಳಲ್ಲಿ, ಪೌರಾಣಿಕ ಸಿನೆಮಾ, ನಾಟಕಗಳ ರಾಜಮಹಾರಾಜರ ಆಸ್ಥಾನಗಳಲ್ಲಿ ಗಾಳಿ ಬೀಸಲು ಉಪಯೋಗಿಸುವ ಚಾಮರ ಹಾಗೂ ಹಿಂದೆಲ್ಲಾ ಮೋಟು ಜಡೆಯುಳ್ಳ ಹೆಣ್ಣುಮಕ್ಕಳ ಅತ್ಯಂತ ಮೆಚ್ಚಿನ ಪ್ರಸಾದನವಾಗಿರ್ತಿದ್ದ ಚೌರಿ ತಯಾರಕರ ವಿನಾ!

ಹೋಗಲಿ ಬಿಡಿ, ಈಗ ನಮ್ಮೂರಲ್ಲಿ ಬೆಚ್ಚಗೆ ಮನೆಯಲ್ಲೇ ಕೂತ್ಕೊಂಡು, ಹೇಗೆ ಯಾಕ್‌ಗೆ ಶೇವ್ ಮಾಡಬಹುದು ಅಂತ ತೋರಿಸ್ತೀನಿ ಬನ್ನಿ, ನಮಗೆ ಸರ್ವೇಸಾಧಾರಣವಾಗಿ ಸಿಗೋ ಸಿಂಪಲ್ಲಾದ ಉದಾಹರಣೆಯನ್ನೇ ತೊಗೊಂಡರಾಯ್ತು...

ಮಸಲಾ, ಯಾಕ್‌ಗೆ ನೀವು ಯಾವಾಗ ಬೇಕಿದ್ದರೂ ಚೌರ ಮಾಡಬಹುದಾದರೂ,



ಅದಕ್ಕೆ ಪ್ರಶಸ್ತವಾದ ಮುಹೂರ್ತ ಮಾತ್ರಾ ಯಾವುದಾದರೂ ಪಬ್ಲಿಕ್ ರಜಾದಿನಗಳು ಅಥವಾ ಭಾನುವಾರಗಳು ಅಂತ ನನ್ನ ಅಭಿಪ್ರಾಯ.

ಈಗ ನೋಡಿ, ಅವತ್ತು ದಿನಗಟ್ಟಲೆ ಚಚ್ಚಿದ ಮಳೆ ನಿಂತು ಹಿತವಾದ ಬಿಸಿಲು ಶುರುವಾದ ಮಾರನೇ ದಿನ ಅಂತಿಟ್ಕೊಳ್ಳಿ.

ಬೆಳಗ್ಗೆಯಿಂದ ನಿಮ್ಮ ಮನೆಯಾಕೆ ಅಪರೂಪಕ್ಕೆ ಒಂದು ಚೂರೂ ಸಿಡುಕದೇ, ನೀವು ಕೇಳಿದಷ್ಟು ಸಲ ಸ್ಟ್ರಾಂಗ್ ಫಿಲ್ಟರಿನ ಕಾಫಿ ಮಾಡಿಕೊಟ್ಟಿದ್ದಲ್ಲದೇ, ಆಮೇಲೆ ಹದವಾದ ಖಾರವಾಗಿದ್ದ ಗಟ್ಟಿ ಪುದೀನಾ ಚಟ್ನಿ, ಜೊತೆಯಲ್ಲಿ ಕೆಂಪು ಚಟ್ನಿ ಹಾಕಿದ ಬಿಸಿಬಿಸಿಯಾದ ಗರಿಗರೀ ಬೆಣ್ಣೆ ಮಸಾಲೆ ದೋಸೇನೂ ಮಾಡಿ ಕೊಟ್ಟು, ಮೇಲೆ ಮತ್ತಿನ್ನೊಂದು ಡೋಸ್ ಸ್ಟ್ರಾಂಗ್ ಕಾಫೀನೂ ಕೊಟ್ಟಿಟ್ಟು, ಸಂಜೆಯ ತನಕ ಬರಲ್ಲಾಂತ ಹೇಳಿ ಅವರ ಫ್ರೆಂಡ್ ಜೊತೆ ಮಂತ್ರಿ ಮಾಲ್ ಸುತ್ತಕ್ಕೆ ಹೋದರೂಂತ ಇಟ್ಕೊಳ್ಳಿ. ಮಗ ಕಾಲೇಜ್ ಟೂರಿಂದ ಇನ್ನೂ ಬಂದಿಲ್ಲ. ಮಗಳಂತೂ ಸಂಜೆ ಇರೋ ಅವಳ ಬೆಸ್ಟ್ ಫ್ರೆಂಡ್ ಮದುವೆಯ ಮೆಹೆಂದಿ ಪಾರ್ಟಿ ನೆಪ ಹಾಕೊಂಡು ಬೆಳಗಾಗೆದ್ದು ಊರಿಗೆ ಮುಂಚೆ ಹೋಗಿದ್ದಾಳೆ.

ಭಾರವಾದ ಹೊಟ್ಟೆ, ಮನೆಯಲ್ಲಿ ಪ್ರಶಾಂತ ವಾತಾವರಣ. ಟಿ.ವಿ. ಹಾಕುಕ್ಕೆ ಕರೆಂಟಿಲ್ಲ. ರಜಾ ದಿನವಾದ್ದರಿಂದ ಅವತ್ತು ಪೇಪರೂ ಇಲ್ಲ, ಒಟ್ನಲ್ಲಿ ಫುಡ್ ಕೋಮಾದಲ್ಲಿ ಮೂಗಿನವರೆಗೂ ಮುಳುಗಿರೋ ನಿಮ್ಮ ಮನಸ್ಸೂ ಸಹಾ ಆನಂದಮಯ ಕೋಶದಲ್ಲಿ ವಿಹರಿಸೋದಕ್ಕೆ ಹವಣಿಸ್ತಿದೆ... ಸೋ, ಅಲ್ಲೇ ಸೋಫಾ ಮೇಲೆ ಒರಗಿ, ಹೇಳೋರು ಕೇಳೋರು ಇಲ್ಲದೇ ಇರೋದ್ರಿಂದ ನಿಮಗೆ ಬೇಕಾದ ಹಾಗೆ ದಿಂಬುಗಳನ್ನ ಮಡಚಿಟ್ಕೊಂಡು ಹಾಗೇ ಸುಳುಪ್ತಿಗೆ ಜಾರಿ (ಅಂದರೆ ನಮ್ಮ ಕಸ್ತೂರಿ ಕನ್ನಡದಲ್ಲಿ ತೂಕಡಿಸಿ) ಒಂದು ಸಣ್ಣ ನಿದ್ದೆ ತೆಗೀತೀರಿ.. ಹೊರಗಡೆ ರಸ್ತೇಲಿ ಕ್ರಿಕೆಟ್ ಆಡ್ತಿದ್ದ ಪಕ್ಕದ ಫ್ಲ್ಯಾಟಿನ ಮಕ್ಕಳ್ಯಾರೋ ಗಟ್ಟಿಯಾಗಿ ಹೋ ಅಂತ ಕಿರಿಚಿದ ಶಬ್ದಕ್ಕೆ ಎಚ್ಚರ ಆಗತ್ತೆ. ಮನೆಯ ನಿಶ್ಯಬ್ದ, ಹದವಾದ ನಿದ್ದೆಯ ನಂತರ ಹಿತ ಅನ್ನಿಸತ್ತೆ, ಅಣ್ಣಾವರ ಕಾಲದ "ನಾನೇ ರಾಜಕುಮಾರ ಕನ್ನಡ ತಾಯಿಯ ಪ್ರೇಮದ ಕುವರ..." ಅನ್ನೋ ಹಾಡು ಬೇರೆ ಜ್ಞಾಪಕ ಬಂದು ಗುನುಗಕ್ಕೆ ಶುರು ಮಾಡ್ತೀರಿ..

ಆಗ ಇದ್ದಕ್ಕಿದ್ದ ಹಾಗೆ ಪ್ರಪಂಚದಲ್ಲಿರೋ ಪುರುಸೊತ್ತೆಲ್ಲಾ ನಿಮ್ಮನ್ನ ಆವರಿಸಿಕೊಂಡ ಹಾಗಾಗಿ ಎಲ್ಲಿಲ್ಲದ ಚೈತನ್ಯ ಉಕ್ಕಿ ಹರಿಯಕ್ಕೆ ಪ್ರಾರಂಭವಾಗತ್ತೆ. ಎಷ್ಟೋ ದಿನಗಳಿಂದ ಮಾಡೇಕೂಂತಿದ್ದ ಕೆಲಸಗಳ ಲಿಸ್ಟಿಗೊಂದು ಗತಿ ಕಾಣಿಸಿ ಬಿಡ್ತೀನಿ ಇವತ್ತು ಅಂತಂದುಕೊಡ್ತೀರಿ! ಹೌದು, ಮಾಲಿ ಹನುಮಂತಪ್ಪ ಹದಿನೈದು ದಿನ ರಜ ಹಾಕಿ ಊರಿಗೆ ಹೋಗಿರೋದ್ರಿಂದ ಲಾನ್ ಮೇಲೆ ವಿಕಾರವಾಗಿ ಎಲ್ಲೆಲ್ಲೂ ಸೊಂಪಾಗಿ ಬೆಳೆದಿರೋ ಕಳೆಗಳನ್ನ ಕಿತ್ತು ಹಾಕೋ ಕೆಲಸದಿಂದಲೇ ಯಾಕೆ ಶುರು ಮಾಡಬಾರದೂನ್ನಿಸತ್ತೆ. ನೆಲ ಬೇರೆ ಹೀಗೆ ಒಂದೇ ಸಮ ಸುರಿದ ಈ ಮಳೆಯಿಂದ



ಮೆದುವಾಗಿದೆ, ಕಳವೂ ಆಗುಲ್ಲ, ವ್ಯಾಯಾಮವೂ ಆಗುತ್ತೆ, ಸುಮೀಗೂ ಖುಷಿಯಾಗುತ್ತೆ, ಅಂತನ್ಕೋತೀರಾ. ಆದರೆ ಶುರು ಮಾಡಕ್ಕೆ ಮುಂಚೆ ಒಂದ್ಲೋಟ ಬಿಸಿ ಬಿಸಿಯಾಗಿ ಟೀ ಮಾಡ್ಕೊಂಡ್ರೆ ಚೆನ್ನ ಅಂತನ್ನಿಸಿ ಅಡಿಗೆ ಮನೆಗೆ ಹೋಗ್ತೀರಾ. ಒಲೆ ಮೇಲೆ ನೀರಿಟ್ಟು ಟೀ ಪುಡಿಯ ಡಬ್ಬ ತೆಗೆದಾಗ ಅದು ತಳ ಮುಟ್ಟಿರೋದು ಕಾಣಿಸುತ್ತೆ, ಬೇರೆ ಟೀ ಪ್ಯಾಕೆಟ್ ಎಲ್ಲಿಟ್ಟಿರಬಹುದೂನ್ನ ಸುತ್ತಮುತ್ತ ಕಣ್ಣಾಡಿಸ್ತೀರಾ. ಆಗ, ಹೋದ ವಾರ ತಾನೇ ತಂದಿಟ್ಟಿದ್ದ ಹೊಸ

ಹಲ್ದಿರಾಮ್ ಆಲೂ ಭುಜಿಯಾದ ಹಿಂದಿಟ್ಟಿದ್ದ ಟೀ ಪ್ಯಾಕೆಟ್ ಕಾಣುತ್ತೆ. ಟೀ ಜೊತೆಗಿನ ಆಲೂ ಭುಜಿಯಾದ ಮಜವೇ ಬೇರೆ ಅಂತನ್ನಿಸಿ ಅದನ್ನ ಓಪನ್ ಮಾಡುಕ್ಕೆ ನೋಡ್ತೀರಾ. ಅಯ್ಯೋ ಹಾಳಾದ್ದು ಪ್ಯಾಕೆಟ್ಟು, ಬರೀ ಕೈಯ್ಯಲ್ಲಿ ಎಷ್ಟು ಎಳೆದರೂ ಹರಿಯಲ್ಲ ಅನ್ನುತ್ತೆ, ಸರಿ ಅದನ್ನ ಓಪನ್ ಮಾಡಕ್ಕೆ ಅಡಿಗೆ ಮನೆ ಕತ್ತರಿ ಹುಡುಕುಕ್ಕೆ ಶುರು ಮಾಡ್ತೀರಾ. ಅದು ಸಿಗೋ ಹೊತ್ತಿಗೆ ಒಲೆ ಮೇಲಿನ ನೀರು ಕುದ್ದು ಆವಿಯಾಗಿರತ್ತೆ ಥತ್ತೇರಿ ಅಂತ ಬೈಕೊಂಡು ಪಾತ್ರೆಗೆ ಮತ್ತೊಂದಿಷ್ಟು ನೀರು, ಹಾಲು ಸುರೀತೀರಿ. ಕೊನೆಗೊಮ್ಮೆ ಟೀ ಪ್ಯಾಕೆಟ್ಟನ್ನೂ ಓಪನ್ ಮಾಡಿ, ಅಂತೂ ಇಂತೂ ಟೀ ಮಾಡಿ, ಮಗ್ಗಿಗೆ ಬಗ್ಗಿಸಿಕೊಂಡು ಭುಜಿಯಾ ಕುರುಕ್ತಾ ಹೊರಟಾಗ, ಅಲ್ಲೇ ಡೈನಿಂಗ್ ಟೇಬಲ್ ಹತ್ತಿರ ಇದ್ದ ದೊಡ್ಡ ಕಂಚಿನ ಗಣೇಶನ ವಿಗ್ರಹದ ಕೆಳಗೆ ನಿಮ್ ಹೆಂಡತಿ ಹಿಂದಿನ ದಿನ ಸಂಜೆ ಬಂತೂಂತ ಹೇಳಿದ್ದ, ಮುಖ್ಯವಾದ ಕಾಗದ ಪತ್ರಗಳಿದ್ದ ಕೊರಿಯರನ್ನ ಇಟ್ಟಿದ್ದು ಕಾಣತ್ತೆ. ಅದನ್ನು ಇಲ್ಲೇ ಬಿಟ್ಟರೆ ಇನ್ನು ನಾಳೆ ಆಫೀಸಿಗೆ ಹೊರಟಾಗ ಮರೆತರೆ ಸುಮ್ಮನೆ ಫಜೀತಿಯಾಗಬಹುದು ಅಂತ ನಿಮಗನ್ನಿಸಿ, ಒಂದು ನಿಮಿಳ ಅದನ್ನ ಬೆಡ್ ರೂಮಲ್ಲಿರೋ ನಿಮ್ಮ ಬ್ರೀಫ್ ಕೇಸ್ಗೆ ಹಾಕಿ ಬಿಡೋಣಾಂತ ತೊಗೋತೀರಾ. ರೂಮಿಗೆ ಹೋಗಿ ಅದನ್ನ ಭದ್ರವಾಗಿ ಬೀಫ್ ಕೇಸಲ್ಲಿಟ್ಟ ಮೇಲೆ, ಕಳೆ ಕೀಳಬೇಕೂಂತ ಹೊರಟಿದ್ದು ಜ್ಞಾಪಕಕ್ಕೆ ಬಂದು ಆಚೆ ಬರ್ತೀರಾ. ಅಲ್ಲೇ ನಿಲ್ಲಿಸಿದ್ದ ಹದಿನೈದು ದಿನದಿಂದ ತೊಳೆಯದ ಕಾರೂ ಕೊಳೆಕೊಳೆಯಾಗಿ ಕಾಣತ್ತೆ. ಅಲ್ಲೇ ಪಕ್ಕದಲ್ಲಿದ್ದ ತೋಟದ ನಲ್ಲಿ ತಿರುಗಿಸಿ ಹಾಗೇ ಕಾರನ್ನೂ ವಾಷ್ ಮಾಡಿಟ್ಟರಾಯ್ತುಂತ ಅನ್ನೋತೀರಾ. ಮೊದಲು ಕಾರೋ ಲಾನೋ? ಅಂತ ಡಿಸೈಡ್ಮಾಡ್ತಿರುವಾಗ, ಹಾಗೇ ಕಾಂಪೌಂಡ್ ಮೇಲೆ ಕೆಟ್ಟಕೆಟ್ಟದಾಗಿ ಬೆಳೆದಿರೋ ಬೋಗನೆಲ್ಲಾನ್ನೂ ಯಾಕೆ ಒಂದಿಷ್ಟು ಕತ್ತರಿಸಿ ಬಿಸಾಕಬಾರದು? ಮೊನ್ನೆ ತಾನೇ ಕಾರ್ಪೊರೇಟ್ ಯೋಗ ವರ್ಕಶಾಪಲ್ಲಿ ಅವರು ಹೇಳಿರಲಿಲ್ಲವೇ, "ಮನೆಯ ಕೈತೋಟದ ಬೇಲಿ, ಗಿಡ ಮುಂತಾದವುಗಳನ್ನು ಕತ್ತರಿಸೋದೂ ಒಂದು ರೀತಿಯ ಚೈತನ್ಯದಾಯಕ ಎಕ್ಸರ್ಸೈಸು. ಮರುದಿನ ಆಫೀಸಲ್ಲಿ ಕೆಲಸ ಮಾಡುವಾಗ ಅದು ನಿಮಗೆ ಬೇಡದ್ದನ್ನೆಲ್ಲ ಡಿಲೀಟ್ ಮಾಡುಕ್ಕೆ ಹೊಸ ಉತ್ಸಾಹ ಬರಿಸುತ್ತೆ" ಅಂತಂದಿದ್ದು ಜ್ಞಾಪಕಕ್ಕೆ ಬರತ್ತೆ. ಸರಿ ಮತ್ತೆ ಮನೆ ಒಳಗೆ ಹೋಗ್ತಿರಾ - ಗಿಡ ಕತ್ತರಿಸೋ ಕತ್ತರೀ ತರುಕ್ಕೆ, ಅದು ನಿಮಗೆ ಸಿಗುವಳರಲ್ಲಿ, ನೀವು ಎಲ್ಲೋ ದಿನದಿಂದ ಹುಡುಕ್ತಿದ್ದ ಪುಟಾಣಿ ಟಾರ್ಚು, ನಿಮ್ಮ ಮಗ ಕಳೆದು ಹಾಕಿದ್ದ ಅಂತ ಭಾವಿಸಿದ್ದ ಸ್ಕೂಟರಿನ ಡೂಪ್ಲಿಕೇಟ್ ಕೀ ಇದ್ದಿದ್ದ ಹಳೇ ಕೀ ಬಂಚು, ತುಂಬಾ ದಿನಗಳಿಂದ ಯಾಕೋ ಕಾಣೆಯಾಗಿದ್ದು ಯಾರೋ ಪಾಪಿಗಳು ಮುದುರಿ ಮೂಟೆಕಟ್ಟಿ



ಬಿಸಾಕಿದ್ದ ನಿಮ್ಮಿಳ್ಳದ ಆದರೆ ನಿಮ್ಮ ಹೆಂಡತಿಗೆ ಕಂಡರಾಗದಿದ್ದ ಆ ಗಿಣಿ ಹಸಿರು ಬಣ್ಣದ ನಿಮ್ಮ ಟೀ ಶರ್ಟು, ಅಲ್ಲದೇ ಒಂದು ಹಳೇ ಕರೀ ಸ್ಕೂಡ್ರೈವರ್ ಸಹಾ ಸಿಗತ್ತೆ! ಅದಳ್ಟನ್ನೂ ಅದರದರ ಜಾಗಕ್ಕೆ ಸೇರಿಸೋದು ನಿಮ್ಮ ಆದ್ಯ ಕರ್ತವ್ಯವಾಗುತ್ತೆ. ಅಳ್ಟೊತ್ತಿಗೆ ಕರೆಂಟು ಬಂದಿದ್ರಿಂದ ಫಳ್ ಅಂತ ಮಿಂಚು ಹೊಡೆದ ಹಾಗೆ ದೀಪ ಹತ್ತಿಕೊಳ್ಳುತ್ತೆ.

ಹಾಗೇ “ಓ ದೇವರೇ! ನಾಳೇನೇ ಸೋಮವಾರ, ಕೆಇಬಿ ಬಿಲ್ ಕಟ್ಟೋಕ್ಕೆ ಕೊನೆ ದಿನ!” ಅಂತಲೂ ಹೊಳೆಯುತ್ತೆ. ತಕ್ಷಣ ಚೆಕ್ ಬರೆದಿಡದಿದ್ದರೆ ಅಷ್ಟೇ, ಸುಮ್ಮನೆ ತರಲೆ ಅಂತ ಜ್ಞಾನೋದಯವಾಗಿ ಬ್ರೀಫ್ಕೇಸಲ್ಲಿರೋ ಚೆಕ್ ಬುಕ್ ತೊಗೊಳ್ಳಕ್ಕೆ ಮತ್ತೆ ರೂಮಿನ ಕಡೆ ಹೆಜ್ಜೆ ಹಾಕ್ತೀರಾ. ಆಗ ಥಟ್ ಅಂತ ಜ್ಞಾಪಕಕ್ಕೆ ಬರತ್ತೆ, ನಿನ್ನೆ ಶನಿವಾರ ಸಂಜೆ ದಿನಸಿ ಅಂಗಡಿಯೋನಿಗೆ ಚೆಕ್ ಬರ್ಕೊಟ್ಟ ತಕ್ಷಣ ಚೆಕ್ ಬುಕ್ಕನ್ನ ಕಾರಿನ ಗ್ಲೋವ್ ಕಂಪಾರ್ಟ್‌ಮೆಂಟಲ್ಲೇ ಇಟ್ಟು ಮರೆತಿರೋದು. ಸರಿ, ಮತ್ತೆ ಬೀಗದ ಕೈ ಗೊಂಚಲುಗಳನ್ನು ನೇತು ಹಾಕಿರೋ ಕಡೆ ಹೋಗ್ತಿರಾ. ಕಾರಿನ ಕೀ ತೊಗೊಂಡು ಹೊರಗೆ ಹೋಗಿ ಇನ್ನೇನು ಅದರ ಬಾಗಿಲು ಅನ್‌ಲಾಕ್ ಮಾಡೋಕೂನ್ನೋವಾಗ ಸೊಂಪಾಗಿ ಅಳೆತ್ತರ ಬೆಳೆದು ನಿಂತಿದ್ದ ಕಳೆಗಳೇ ಹೆಚ್ಚಾಗಿದ್ದ ಲಾನ್ ಕಣ್ಣಿಗೆ ಬೀಳತ್ತೆ, ಹಾಗೇ, ಎಲ್ಲಾದಕ್ಕಿಂತ ಮೊದಲು ಕಳೆ ಕೀಳಬೇಕೂಂತ ಹೊರಟಿದ್ದೂ ಜ್ಞಾಪಕಕ್ಕೆ ಬರತ್ತೆ. ಹೌದಲ್ಲಾ ಟೀ ಕುಡಿದ ತಕ್ಷಣ ಮಾಡಬೇಕಾಗಿದ್ದ ಕೆಲಸವಲ್ಲವೇ ಇದು ಅಂತ ಹೊಳೆಯುತ್ತೆ. ತಕ್ಷಣ “ಅರೆ ಟೀ ಎಲ್ಲಿ? ಕುಡೀಲೇ ಇಲ್ಲವಲ್ಲ” ಅಂತ ನೆನಪಾಗಿ ಮತ್ತೆ ಅಡಿಗೆ ಮನೆಗೆ ಹೋಗ್ತಿರಾ. ಆದರೆ ಅಲ್ಲೆಲ್ಲಿದೆ ಅದು? ಕೊರಿಯರನ್ನು ಬೀಳ್ಕೊಡಕ್ಕೆ ಹೋದಾಗ ಕೈಯ್ಯಲ್ಲಿದ್ದ ಮಗನ್ನ ನಿಮ್ಮ ಮಂಚದ ಪಕ್ಕದ ಪುಟ್ಟ ಟೇಬಲ್ ಮೇಲಿಡಲಿಲ್ಲವೇ? ಅಯ್ಯೋ ದೇವಾ! ಮತ್ತೆ ರೂಮಿಗೆ ಹೋಗಿ ನೋಡಿದರೆ ಕಣ್ಣಿಗೆ ಬೀಳುತ್ತೆ, ಅಲ್ಲಿ ಆರಿ ಅಕ್ಷತೆಯಾಗಿ, ಕೆನೆ ಕಟ್ಕೊಂಡು ಕೂತಿದ್ದ ಅರ್ಧ ಕಪ್ಪಷ್ಟಿದ್ದ ಟೀ! ಛೇ ಅಂತ ಅದನ್ನು ಕುಡಿಯಕ್ಕೆ ಮನಸ್ಸಾಗದೇ ತಂದು ಸಿಂಕಿಗೆ ಸುರಿದು ಬರ್ತೀರಾ. ಇನ್ನೊಂದ್ಸಲ ಟೀ ಮಾಡ್ಕೊಳ್ಳೋವಳು ತಾಳೇನೂ ಇರಲ್ಲ. ಇದ್ದಕ್ಕಿದ್ದ ಹಾಗೇ, ಯಾಕೋ ಎಷ್ಟೊ ಕೆಲಸ ಮಾಡಿ ತೀರಾ ಸುಸ್ತಾದ ಹಾಗಾಗಿ ಹುಶ್ ಸಾಕಾಯ್ತಪ್ಪಾ ಅನ್ನಿಸುತ್ತೆ. ಮತ್ತೆ ಸೋಫಾ ಹತ್ತಿರ ಹೋಗಿ ಅಡ್ಡಾದಿಡ್ಡಿಯಾಗಿ ಬಿದ್ದಿದ್ದ ದಿಂಬುಗಳನ್ನ ಇನ್ನೊಮ್ಮೆ ಇಷ್ಟ ಬಂದ ಹಾಗೆ ಮಡಿಚಿಡ್ಕೊಂಡು, ಇನ್ನೂ ಟೈಮಾಗಿಲ್ಲವಲ್ಲ, ಒಂದು ಘಳಿಗೆ ರೆಸ್ಟ್ ತೊಗೊಂಡು ಆಮೇಲೆ ಎಲ್ಲಾ ಕೆಲಸಾನೂ ಒಂದು ಕಡೆಯಿಂದ ಶುರು ಮಾಡಿದ್ರಾಯ್ತಂತ ಹಾಗೇ ಸೋಫಾ ಮೇಲೆ ಕಾಲು ಚಾಚ್ತೀರಾ....

ನೋಡಿದ್ರಾ, ಅಂತೂ ಶೇವಿಂಗ್ ಜೆಲ್ಲು, ನೀರು-ನಿಡಿ ಏನೂ ಇಲ್ಲದೇನೇ ನೀವೂ “ಯಾಕ್‌ಗೆ ಶೇವ್” ಮಾಡೇಬಿಟ್ರಲ್ಲಾ ಈಗ! ಹೇಗೆ ನಾವೆಲ್ಲೂ ಒಂದಲ್ಲ ಒಂದು ರೀತೀಲಿ ಯಾಕ್ ಚೌರದ ಎಕ್ಸ್‌ಪರ್ಟ್‌ಗಳೇ ಅಂತ ಗೊತ್ತಾಯ್ತಲ್ಲ?!

**(ಅಪರಂಜಿ, ಜನವರಿ, ೨೦೧೮)**

## ೪೦. ಹೃದಯ ಬಾಯಿಗೆ ಬರುವುದು

**ಶೈಲಜಾ ಹಾಸನ**

ನಾವು ಮಾತನಾಡುವಾಗ 'ಎದೆಗೆ ಬೆಂಕಿ ಬಿತ್ತು, ಆಕಾಶ ತಲೆ ಮೇಲೆ ಕಳಚಿ ಬಿತ್ತು', 'ಮೈಮೇಲೆ ಮುಳ್ಳು ಎದ್ದಂತಾಯ್ತು'... ಅಂತ ಮಾತಾಡ್ತಾ ಇರ್ತೀವಿ. ಹಾಗೇ, 'ಹೃದಯ ಬಾಯಿಗೆ ಬರುತ್ತೆ' ಅಂತಾನೂ ಹೇಳ್ತಾರೆ. ಚಿಕ್ಕವಳಿದ್ದಾಗ ಅದು ಹೇಗೆ ಅಂತ ಯೋಚನೆ ಮಾಡ್ತಾ ಇದ್ದೆ. ನಮ್ಮ ಮನೆಯಲ್ಲಿ ಒಬ್ಬರು ಅಜ್ಜಿ ಇದ್ರು. ಅವರು ಸಣ್ಣ ಪುಟ್ಟ ವಿಚಾರಕ್ಕೆಲ್ಲ ಹೌಹಾರಿ, 'ಅಯ್ಯೋ! ಹೃದಯವೇ ಬಾಯಿಗೆ ಬಂದು ಬಿಡು' ಅಂತ ಹೇಳಿದ್ದರು. ಆಗೆಲ್ಲ ನಾನು ಅಜ್ಜಿಯ ಮುಖವನ್ನೇ ನೋಡ್ತಾ ಇದ್ದೆ. ಹೃದಯ ಅನ್ನೋದು ಯಾವ ಗಳಿಗೆಯಲ್ಲಿ ಅಜ್ಜಿಯ ಬಾಯಿಂದ ಹೊರಗೆ ಬಂದು ಬಿಡುತ್ತೆ ಅಂತ ಕಾತರದಿಂದ ಕಾಯ್ತಾ ಇದ್ದೆ. ಆದ್ರೆ ಒಂದು ಸಲಾನೂ ನಮ್ಮಜ್ಜಿ ಬಾಯಿಂದ ಹೃದಯ ಅನ್ನೋದು ಹೊರಗೆ ಬರಲೇ ಇಲ್ಲ. ನಮ್ಮ ಶಾಲೆಯಲ್ಲಿ ವಿಜ್ಞಾನದ ಟೀಚರ್ ಪಾಠ ಮಾಡುವಾಗ ಹೃದಯ ಎಲ್ಲಿದೆ ಅಂತ ಚಿತ್ರ ಸಮೇತ ಬರೆದು ತೋರಿಸಿದ್ದರು. ಹಾಗೆ ಎದೆಗೂಡಿನ ಮಧ್ಯೆ ಅಷ್ಟೊಂದು ಸುರಕ್ಷಿತ ಭಾಗದಲ್ಲಿ ಇರುವ ಅಂತಹ ಹೃದಯ ಹೇಗೆ ಹೊರಗೆ ಬರುತ್ತದೆ. ಹೊಟ್ಟೆ ತೊಳಸಿ, ಹೊಟ್ಟೆಯಲ್ಲಿ ಇದ್ದದ್ದು ವಾಂತಿ ಮೂಲಕ ಹೊರಗೆ ಬರುವಂತೆ ಬಂದು ಬಿಡುತ್ತಾ ಅಥವಾ ಸಿನಿಮಾಗಳಲ್ಲಿ ನಾಯಕ ಅಥವಾ ನಾಯಕಿಗೆ ಕ್ಯಾನ್ಸರ್ ಬಂದು ರಕ್ತ ಕಾರಿಕೊಳ್ಳುತ್ತಾರಲ್ಲ ಹಾಗೆ ಹೃದಯ ಆಚೆ ಬಂದು ಬಿಡುತ್ತಾ ಅಂತ ಕಾತರದಿಂದ ಕಾದದ್ದೇ ಬಂತು. ಅಜ್ಜಿಯ ಹೃದಯ ಮಾತ್ರ ಬಾಯಿಗೆ ಬರಲೇ ಇಲ್ಲ...! ಕಣ್ಣು ಬಾಯಿ ಬಿಟ್ಟುಕೊಂಡು ಕಾಯ್ತಾನೇ ಇದ್ದೆ, ನಾನು ದೊಡ್ಡವಳಾಗುವ ತನಕ, ಬುದ್ಧಿ ಬರುವತನಕ ಅಜ್ಜಿ ಹೇಳುವ ಹಾಗೆ ಹೃದಯ ಬಾಯಿಗೆ ಬರಲೇ ಇಲ್ಲ ಅಂತ ಚಡಪಡಿಸುತ್ತಲೇ ಇದ್ದೆ. ಬಾಯಿವರೆಗೆ ಬಂದಿದ್ದು ಪುಸಕ್ಕಂತ ಒಳಗೆ ಹೋಗಿ ಬಿಡುತ್ತೇನೋ ಅಂತಾನೇ ನಾನು ಭಾವಿಸಿದ್ದೆ. ಆಮೇಲೆ ನನಗೆ ಗೊತ್ತಾಯ್ತು ಹೃದಯ ಹೊರಗೆ ಬರಲ್ಲ, ಹೃದಯ ಬಾಯಿಗೆ ಬರುವುದೆಂದರೆ ಏನು ಅಂತ.

ನನಗೂ ಹೃದಯ ಬಾಯಿಗೆ ಬರುವುದರ ಅನುಭವ ನಿಧಾನವಾಗಿ ಆಗತೊಡಗಿತು. ಮೊದಲು ಅನುಭವ ಆಗಿದ್ದು ನಾನು ಅತ್ತೆಯ ಊರಿಗೆ ಹೋದಾಗ, ಅಲ್ಲೇ ಆಟ ಆಡ್ತಾ ಹೊಲದ ಕಡೆಗೆ ಹೋಗಿ ಬಿಟ್ಟಿದ್ದೆ. ಅತ್ತೆ ಮನೆಯ ಕೆಲಸದ ಹೆಂಗಸು ಕೂಡ ನಂಜೊತೆ ಇದ್ದಳು. ನಾನು ಕುಣೀತಾ ಮುಂದೆ ಮುಂದೆ ಹೋಗ್ತಾ ಇದೀನಿ. ಹೊಲದಲ್ಲಿ

ಬೆಳೆ ಇರಲಿಲ್ಲ. ಹೊಲದ ಬದು ಒಣಗಿ ಗೋಧಿ ಬಣ್ಣಕ್ಕೆ ಕಾಣುತ್ತಿತ್ತು. ನಾನು ಮುಂದೆ ಮುಂದೆ ಹೆಜ್ಜೆ ಇಡ್ತಾ ಇರುವಾಗಲೇ ಹೊಲದ ಬದು ಒಣಗಿ ಗೋಧಿ ಬಣ್ಣಕ್ಕೆ ಕಾಣುತ್ತಿತ್ತು. ನಾನು ಮುಂದೆ ಮುಂದೆ ಹೆಜ್ಜೆ ಇಡ್ತಾ ಇರುವಾಗಲೇ ನನ್ನ ಮುಂದೆ ಸರನೆ ಹಾವೊಂದು ಹೆಡೆಯೆತ್ತಿ ನಿಂತು ಬಿಡುವುದೇ! ಕಾಲುಗಳು ಅಲ್ಲೇ ಹೂತು ಹೋದವು. ಹೆಡೆ ಎತ್ತಿ ನಿಂತ ಹಾವನ್ನೇ ಕಣ್ಣು ಮಿಟುಕಿಸದೆ ದಿಟ್ಟಿಸುತ್ತ ನಿಂತುಬಿಟ್ಟೆ. ಅದು ಚಲಿಸದೆ ನನ್ನ ಮುಂದೆ ನಿಂತು ಬಿಟ್ಟಿದೆ. ದೊಡ್ಡ ಹಾವು. ನನ್ನ ಕಾಲಿನವರೆಗೆ ಹೆಡೆ ಎತ್ತಿದೆ. ನಾಲಿಗೆ ಆಡಿಸುತ್ತಿದೆ. ನಾನು ಹೆದರಿ ಚಲನೆ ಇಲ್ಲದೆ ನಿಂತು ಬಿಟ್ಟೆ. ಅರೆಕ್ಷಣ ಹಾವು ನಿಂತು, ಹಾಗೇ ನನ್ನ ನೋಡಿ ಸರನೇ ನನ್ನ ಪಕ್ಕದಲ್ಲಿ ಸರಸರನೆ ಹಕ್ಕಿಯಂತೆ ನೆಲದ ಮೇಲೆ ಹಾರುತ್ತ ಹೊರಟು ಹೋಯಿತು. ಆಗ ನನಗೆ ಹೃದಯವೇ ಬಾಯಿಗೆ ಬಂದಂತಾಗಿತ್ತು. ಅಬ್ಬಾ! ಹೆದರಿಕೆಯಿಂದ ಪ್ರಾಣ ಹೋದ ಹಾಗೆ ಆಗಿತ್ತು. ಹಿಂದೆ ಇದ್ದ ಕೆಲಸದ ಹೆಂಗಸು 'ಅಯ್ಯೋ! ಇನ್ನೊಂದು ಹೆಜ್ಜೆ ಹಾಕಿದ್ರೆ ನಿಮ್ಮನ್ನು ಕಚ್ಚೇ ಬಿಡುತ್ತಿತ್ತಲ್ಲ. ದೇವರ ದಯೆ ಪಾರಾಗಿ ಬಿಟ್ರಿ' ಅಂತ ಹೇಳ್ತಾನೇ ಇದ್ದಳು. ಆದರೆ ನನ್ನ ಬಾಯಿಂದ ಶಬ್ದ ಹೊರಗೆ ಬರಲೇ ಇಲ್ಲ. ಆಗ್ಲೆ ನನಗೆ ಗೊತ್ತಾಗಿದ್ದು, ಹೃದಯ ಬಾಯಿಗೆ ಬರುವುದು ಹೇಗೆ ಅಂತ! ಇಂತಹ ಅನುಭವಗಳು ಆಗಿಂದಾಗ್ಗೆ ನನಗೆ ಆಗ್ತಾನೇ ಇವೆ. ಹಾಗೇ ಮರೆತು ಹೋಗ್ತಾನೇ ಇವೆ. ಆದರೆ ನಾವು ಉತ್ತರ ಭಾರತದ ಪ್ರವಾಸಕ್ಕೆ ಹೋದಾಗ ಆದ ಈ ಹೃದಯ ಬಾಯಿಗೆ ಬಂದಿದ್ದು ಮಾತ್ರ ಮರೆಯುವ ಹಾಗೇ ಇಲ್ಲ. ಪ್ರವಾಸಕ್ಕೆ ಹೋಗೋದು ನಮ್ಮ ಹವ್ಯಾಸ. ಹಾಗಾಗಿ ಪ್ರತಿವರ್ಷವೂ ಪ್ರವಾಸ ಹೋಗುತ್ತೇವೆ. ಕುಲು, ಮನಾಲಿ, ಸಿಮ್ಲಾ, ಜೈಪುರ, ದೆಹಲಿ ಹೀಗೆ ಉತ್ತರ ಭಾರತದ ಪ್ರವಾಸಕ್ಕೆ ಹೋದ ಅನುಭವ ಅದ್ಭುತವಾಗಿತ್ತು. ಹಾಗೆ ಪ್ರವಾಸ ಮಾಡುವಾಗ ಹಿಮಾಲಯದ ಮನಾಲಿಯ ಹತ್ತಿರ ಇರುವ ಕುಫ್ರಿ ಎತ್ತರದ ಪ್ರದೇಶದಲ್ಲಿ ಇತ್ತು. ರಸ್ತೆ ಇರದ ಕಾರಣ ಬಸ್ಸು ಹೋಗುವಂತೆ ಇಲ್ಲ. ಅಲ್ಲಿಗೆ ಹೋಗಲು ಕುದುರೆಯನ್ನೇ ಹತ್ತಿ ಹೋಗಬೇಕು. ವಾಹನಗಳು ಅಲ್ಲಿ ಹೋಗುವುದಿಲ್ಲ. ಮೇಲೆ ಹೋಗಲು ಕುದುರೆ ಸೌಕರ್ಯ ಇತ್ತು. ಹಾಗಾಗಿ ನಾವೆಲ್ಲರೂ ಒಂದೊಂದು ಕುದುರೆ ಹತ್ತಿದೆವು. ಕುದುರೆ ಸವಾರಿ ಬಹುದಿನದ ನನ್ನ ಕನಸು. ಸಿನಿಮಾಗಳಲ್ಲಿ ನಾಯಕ ನಾಯಕಿ ಕುದುರೆ ಏರಿ ಸವರಿ ಮಾಡುವುದನ್ನು ನೋಡಿದಾಗಲೆಲ್ಲ ಕುದುರೆ ಸವಾರಿ ಮಾಡಬೇಕೆಂಬ ಆಸೆ ಉಂಟಾಗುತ್ತಿತ್ತು. ಆದರೆ ಅವಕಾಶಗಳು ಸಿಕ್ಕಿರಲಿಲ್ಲ. ಈಗ ಸಿಕ್ಕ ಅವಕಾಶದಿಂದ ಖುಷಿಯಾಗಿತ್ತು. ಸರಿ, ನಾನು ನನ್ನ ಪತಿ ಇಬ್ಬರೂ ಒಂದೊಂದು ಕುದುರೆ ಏರಿದೆವು. ಅಲ್ಲಿದ್ದ ಎಲ್ಲರೂ ಕುದುರೆ ಏರಿ ಮೇಲೆ ಹೋಗುತ್ತಿದ್ದಾರೆ. ನಾನು ಹತ್ತಿದ ಕುದುರೆಯು ಮೇಲೇರಲು ತೊಡಗಿತ್ತು. ಎಲ್ಲರೂ ಕುದುರೆಯ ಮೇಲೆ ವೇಗವಾಗಿ ಮುಂದೆ ಮುಂದೆ ಹೋಗುತ್ತಿದ್ದರು. ಸಣ್ಣ ಮಕ್ಕಳು ಕೂಡ ಒಂದೊಂದು ಕುದುರೆ ಏರಿ ಅಮಿತೋತ್ಸಾಹದಿಂದ ಮುಂದೆ ಹೋಗುತ್ತಿದ್ದರು. ನನ್ನ ಕುದುರೆ ಯಾಕೋ ನಿಧಾನವಾಗಿ ಪ್ರಪಾತದ

ಅಂಚಿನಲ್ಲಿಯೇ ನಡೆಯುತ್ತಾ ಸಾಗುತ್ತಿತ್ತು. ಕುದುರೆಯ ಜೊತೆ ಇದ್ದ ಅದರ ಒಡೆಯ ನನ್ನ ಕುದುರೆಯನ್ನು ಬಿಟ್ಟು ಮುಂದೆ ಮುಂದೆ ಹೋಗಿಯೇ ಬಿಟ್ಟ. ನಾನೊಬ್ಬಳೇ ಅಲ್ಲ. ಆ ಕುದುರೆಯು ಪ್ರಪಾತದ ತುದಿಯನ್ನು ಬಿಟ್ಟು ಇತ್ತ ಬರಲಾರೆ ಎಂಬಂತೆ ಅಂಚಿನಲ್ಲಿಯೇ ನಡೆಯುತ್ತಾ ಇದೆ. ಆ ಕಡೆ ನಡೆ ಎಂದು ಅಚ್ಚಕನ್ನಡದಲ್ಲಿ ನಾನು ಹೇಳುತ್ತಿದ್ದರೆ ಆ ಕುದುರೆಗೆ ನನ್ನ ಭಾಷೆ ಅರ್ಥವಾಗುತ್ತಿಲ್ಲ ಎಂಬಂತೆ ಅದು ತನ್ನ ಪಾಡಿಗೆ ತನ್ನ ದಾರಿಯಲ್ಲಿಯೇ ನಡೆಯುತ್ತಿತ್ತು. ಒಂದು ಹೆಜ್ಜೆ ತಪ್ಪಿ ಪಕ್ಕಕ್ಕೆ ಹಾಕಿದರೆ ಕುದುರೆ ಸಮೇತ ನಾನು ಕೂಡ ಪ್ರಪಾತದ ಪಾಲು, ಪ್ರಪಾತದತ್ತ ತಿರುಗಲು ಭಯ. ಗಟ್ಟಿಯಾಗಿ ಕುದುರೆಯನ್ನು ಹಿಡಿದುಕೊಂಡು ಕಣ್ಣುಚ್ಚಿ ಕುಳಿತಿದ್ದೆ. ಕಣ್ಣು ಬಿಟ್ಟರೆ, ಕುದುರೆ ಅದರ ಪಾಡಿಗೆ ಅದು ಸಾಗುತ್ತಲೇ ಇದೆ. ಆಗ ನೋಡಿ ನನ್ನ ಹೃದಯ ಬಾಯಿಗೆ ಬಂದು ಬಿಟ್ಟಿತ್ತು. ಮೇಲೆ ಹೋಗಿದ್ದ ಕುದುರೆಗಳು ದಡದಡನೆ ವೇಗವಾಗಿ ಇಳಿದು ಬರುತ್ತಿವೆ. ಮುಗಿಯಿತು ನನ್ನ ಕಥೆ, ಮುಗಿಯಿತು. ಓಡಿ ಬರುತ್ತಿರುವ ಕುದುರೆಗೆ ದಾರಿ ಬಿಡಲು ನನ್ನ ಕುದುರೆ ಪಕ್ಕಕ್ಕೆ ಹೆಜ್ಜೆ ಇಡುತ್ತೆ. ಆಗ ನಾನು ಕುದುರೆ ಸಮೇತ ಪ್ರಪಾತಕ್ಕೆ ಉರುಳಿ ನೇರವಾಗಿ ಪರಲೋಕಕ್ಕೆ ಟಿಕೆಟ್....! ಅಯ್ಯೋ, ಇಲ್ಲಿ ಬಿದ್ದರೆ ಬಂಧು- ಬಾಂಧವರು ಸ್ನೇಹಿತರು ಅಂತಿಮ ದರ್ಶನ ಪಡೆಯಲೂ ಕೂಡ ಆಗದ ಹಾಗೆ ಈ ಜೀವದೊಂದಿಗೆ ಈ ದೇಹ ಕೂಡಾ ಪ್ರಪಾತಕ್ಕೆ ಉರುಳಿ ಪ್ರಾಣ ಬಿಡುವುದು ಅಷ್ಟೇ! ಇಲ್ಲೇ ಸಾಯಬೇಕು ಅಂತ ನನ್ನ ಹಣೆಯಲ್ಲಿ ಬರೆದಿರುವಾಗ ಏನು ಮಾಡಲಾಗುತ್ತದೆ. ವೇದಾಂತಿ ಆದೆ. ಹಾಗೇ ಅಂದುಕೊಂಡು ಮನಸ್ಸಿನಲ್ಲಿ ದೇವರನ್ನು ನೆನೆಸಿಕೊಂಡೆ. ಆಶ್ಚರ್ಯ ನನ್ನ ಕುದುರೆ ಓಡಿ ಬರುವ ಕುದುರೆಗಳಿಗೆ ಹೆದರದೆ ಪ್ರಪಾತದ ಅಂಚಿನಲ್ಲಿ ಅದೇ ಹೆಜ್ಜೆ ಇಡುತ್ತಾ ಮೇಲೆ ಬಂದೇ ಬಿಟ್ಟಿತು. ಮೊದಲೇ ಹೋಗಿ ನನ್ನ ಕಾಯುತ್ತಿದ್ದ ನನ್ನ ಪತಿಯನ್ನು ಕಂಡು ನನಗೆ ಆ ಕ್ಷಣ ದುಃಖವೇ ಬಂದು ಬಿಟ್ಟಿತು. ಆದರೆ ನನ್ನ ಹೃದಯ ಬಾಯಿಗೆ ಬಂದದ್ದನ್ನು ಮಾತ್ರ ಅವರಿಗೆ ಹೇಳಲಿಲ್ಲ!

**(ಪ್ರಜಾವಾಣಿ, ೨೦.೦೬.೨೦೦೯)**

# ೪೧. ಕಣ್ಣು

**ಡಾ. ಸುಧಾ ರಮೇಶ್**

ಕಣ್ಣನ್ನು ಪರೀಕ್ಷೆ ಮಾಡಿಸಲು ಕಣ್ಣಿನ ಡಾಕ್ಟರ್ ಬಳಿಗೆ ಹೋಗಿದ್ದೆ. ವರ್ಷಕ್ಕೊಮ್ಮೆ ಹೋಗುವ ಪರಿಪಾಠ. ಕಣ್ಣಿನ ಒಳಗಿನ ಭಾಗ ಪರೀಕ್ಷೆ ಮಾಡಲು ಡ್ರಾಪ್ಸ್ ಹಾಕಿದರು. ಕಣ್ಣುಮುಚ್ಚಿ ಕುಳಿತೆ. ಅರ್ಧ ಗಂಟೆ ಹೀಗೆಯೇ ಇರಬೇಕಲ್ಲ! ಹೊರಗಿನ ವ್ಯಾಪಾರಗಳಿಗೆ ಕಣ್ಣು ಬಂದಾಗಿತ್ತು. ಒಳಗಡೆ ಇನ್ನೊಂದು ಚಕ್ಷು ತೆರೆಯಿತು. ಮನಸ್ಸು ಕಣ್ಣಿನ ಸುತ್ತಮುತ್ತಲಿನ ವಿಷಯಗಳನ್ನು ಯೋಚಿಸತೊಡಗಿತು. ಕಣ್ಣಾಸ್ಪತ್ರೆಗೆ ಬಂದಕೂಡಲೇ ದೊಡ್ಡ ಫಲಕ ನನ್ನನ್ನು ಸ್ವಾಗತಿಸಿತ್ತು. ಬಹಳ ಅರ್ಥಪೂರ್ಣವಾದ ವಾಕ್ಯ ಅದರಲ್ಲಿತ್ತು. ಇಥಿಜಿ ಚಿಡಿಜ ಱಜಿ ಪಿಟಿಜಾತಿ ಣಠ ಱಜಿ ತಿಂಡಿಟಜ' ಅಂದರೆ ಕಣ್ಣುಗಳು ಪ್ರಪಂಚಕ್ಕೇ ಕಿಟಕಿಗಳು. ಮನುಷ್ಯನ ಮುಖದಲ್ಲಿ ಮನೆಮಾಡಿರುವ ಈ ಎರಡು ಕಣ್ಣುಗಳು ಕಿಟಕಿಗಳೇ ಸರಿ! ಬಣ್ಣದ ಪ್ರಪಂಚವನ್ನು ಇವು ಇಲ್ಲದೆ ಅನುಭವಿಸುವುದಾದರೂ ಹೇಗೆ? ಪಂಚೇಂದ್ರಿಯಗಳಲ್ಲಿ ಕಣ್ಣಿನ ಸ್ಥಾನ ಬಹುಮುಖ್ಯವಾದದ್ದು.

ದೇವಿಯರ ಮತ್ತು ಹೆಣ್ಣು ಮಕ್ಕಳ ಹೆಸರುಗಳು "ಅಕ್ಷಿ' ಎಂದು ಅನೇಕ ವೇಳೆ ಕೊನೆಗೊಳ್ಳುತ್ತವೆ. ಅಕ್ಷಿ ಎಂದರೆ ಕಣ್ಣು, ಸುಂದರ ಕಣ್ಣುಗಳಿದ್ದರೆ ಸುಂದರಿಯೆಂದೇ ನನ್ನ ಭಾವನೆ. ಕಣ್ಣುಗಳಲ್ಲಿ ಕಾಣಿಸುವ ಭಾವನೆಗಳು ಇನ್ಯಾವ ಅಂಗದಲ್ಲಿಯೂ ತೋರ್ಪಡುವುದಿಲ್ಲ. ಆದ್ದರಿಂದಲೇ ಕಣ್ಣು ಬಹಳ ಮುಖ್ಯ. ಸುಂದರ ಕಣ್ಣುಗಳು ಇರುವ ಸುಂದರಿಯರ ಹೆಸರುಗಳ ಮೇಲೆ ಕಣ್ಣಾಡಿಸೋಣವೇ? ಮೀನಾಕ್ಷಿ, ಕಾಮಾಕ್ಷಿ, ಸರಸಿಜಾಕ್ಷಿ, ಕಮಲಾಕ್ಷಿ, ಪಂಕಜಾಕ್ಷಿ, ವನಜಾಕ್ಷಿ ಹೀಗೆ ಪಟ್ಟಿ ಬೆಳೆಯುತ್ತದೆ. ಇದೇನಪ್ಪ ಹೀಗೆ ಹೆಸರುಗಳನ್ನು ಉದುರಿಸುತ್ತಿದ್ದಾರೆ ಎಂದು ಕಣ್ಣುಕಣ್ಣು ಬಿಡಬೇಡಿ! ಇದೇ ರೀತಿ ಕೆಲವು ಗಂಡು ದೇವತೆಗಳಿಗೆ ಅಥವಾ ದೇವರಿಗೂ ಸುಂದರ ಕಣ್ಣುಗಳಿವೆ. ತುಲಸೀದಾಸರು ತಮ್ಮ ಭಜನೆಯಲ್ಲಿ ನವಕಂಜಲೋಚನ' ಎಂದು ಶ್ರೀರಾಮನನ್ನು ಬಣ್ಣಿಸಿದ್ದಾರೆ. ಅಂದರೆ ಆಗತಾನೇ ಅರಳಿರುವ ಕಮಲದಂತಹ ಕಣ್ಣುಗಳನ್ನು ಹೊಂದಿರುವವನು ಎಂದರ್ಥ. ಇದೇ ರೀತಿ ರಾಮನ ಮುಖವನ್ನು ಕಂಜಮುಖ' ಎಂದು ಬಣ್ಣಿಸಿದ್ದಾರೆ. ತಮಿಳಿನಲ್ಲಿ ತಾಮರೈಕಣ್ಣನ್ ಎನ್ನುವ ಹೆಸರಿದೆ. ಎಂದರೆ, ಕಮಲದಂತಹ ಕಣ್ಣುಗಳುಳ್ಳವನು ಕೃಷ್ಣ ಎಂದರ್ಥ. ಶಿವನಿಗೆ ಹಣೆಯ ಮೇಲೊಂದು ಕಣ್ಣಿದೆ. ಆದ್ದರಿಂದ ಅವನು ಮುಕ್ಕಣ್ಣ. ಕೋಪ ಬಂದರೆ ಕೆಂಡಗಣ್ಣ. ಬಹಳ ಹಿಂದೆ ಕೆಲವು ಪ್ರಾಣಿಗಳಿಗೆ ಇನ್ನೊಂದು ಕಣ್ಣು ಇತ್ತೇನೋ?

ಈಗಲೂ ಹಲ್ಲಿಯಂತಹ ಜಾತಿಗೆ ಸೇರಿದ ಟುವಟಾರ ಎನ್ನುವ ಪ್ರಾಣಿಯಲ್ಲಿ ಇದರ ಕುರುಹು ಇದೆ. ಪುರಾಣದ ಒಂದು ಪ್ರಸಂಗ ಇಲ್ಲಿ ನೆನಪಿಗೆ ಬರುತ್ತದೆ. ಭೃಗು ಮಹರ್ಷಿಗೆ ಕಾಲಿನಲ್ಲಿ ಒಂದು ಕಣ್ಣು ಇತ್ತು ಎನ್ನುವುದು. ಅದು

ಋಷಿಯ ಉದ್ಧಟತನಕ್ಕೆ ಕಾರಣವಾಗಿತ್ತು. ವಿಷ್ಣು ಭೃಗುವಿನ ಕಾಲನ್ನು ಒತ್ತುವಾಗ ಮೆಲ್ಲನೆ ಅದನ್ನು ಕಿತ್ತು ಹಾಕಿದ. ಇದರಿಂದ ಭೃಗುವಿನ ಕೋಪ ತಾಪ ಎಲ್ಲಾ ಮಾಯ! ಕಣ್ಣು ಎನ್ನುವ ಪದ ನಮ್ಮ ದಿನನಿತ್ಯದ ಮಾತುಗಳಲ್ಲಿ ಹಾಸುಹೊಕ್ಕಾಗಿದೆ. ಒಮ್ಮೆ ಹಾಗೆಯೇ ಇವುಗಳ



ಮೇಲೆ ಕಣ್ಣಾಡಿಸೋಣ. ಯಾವುದಾದರೂ ದೃಶ್ಯವನ್ನು ನೆನಪಿನಲ್ಲಿ ಇರುವಂತೆ ಇಟ್ಟುಕೊಳ್ಳಬೇಕಾದರೆ ಕಣ್ಣುಂಬಿಕೊಳ್ಳಬೇಕು! ಇಲ್ಲಿ ಕಣ್ಣಿನ ಜೊತೆಗೆ ಮಿದುಳಿಗೂ ಕೆಲಸ ಕೊಡಬೇಕು! ಇನ್ನು ತುಂಬಾ ಇಷ್ಟವಾದರೆ ಅಂತಹುದನ್ನು ಕಣ್ಣು ಕೀಳದೆ ನೋಡಬೇಕು. ಅದರಲ್ಲಿಯೇ ಕಣ್ಣನ್ನು ನೆಡಬೇಕು. ಗಾಬರಿಯಾಗಬೇಡಿ! ಕಣ್ಣನ್ನು ಕೀಳುವುದೂ ಅಥವಾ ನೆಡುವುದೂ ಸಾಧ್ಯವಿಲ್ಲದ ಮಾತು! ಕೆಲವು ಮಾತುಗಳು, ಘಟನೆಗಳು ಮತ್ತು ವಿಷಯಗಳು ನಮ್ಮ ಕಣ್ಣನ್ನು ತೆರೆಸುತ್ತವೆ. ಇದು ಒಳಗಿನ ಕಣ್ಣು ತೆರೆಯುತ್ತದೆ ಅಥವಾ ಮನಸ್ಸಿಗೆ (ಮೆದುಳಿಗೆ) ತಿಳಿಯುತ್ತದೆ ಎನ್ನುವ ಭಾವ. ಕಣ್ಣು ಹೊಡೆಯುವುದು ಮತ್ತು ಮಿಟುಕಿಸುವುದು ತುಂಟಾಟವನ್ನು ಸೂಚಿಸುತ್ತವೆ. ಕಣ್ಣನ್ನು ಮಿಟುಕಿಸದೇ ಇದ್ದರೆ ಧೂಳು, ಕಸ ಎಲ್ಲವೂ ಒಳಗೆ ಪ್ರವೇಶಿಸುತ್ತವೆ. ಆದ್ದರಿಂದ ನಮಗೆ ಅರಿವಿಲ್ಲದೆಯೇ ನಾವು ಕಣ್ಣು ಮಿಟುಕಿಸುತ್ತಿರುತ್ತೇವೆ. ಕಣ್ಣು ಕೂಡ ಇದರಿಂದ ತೇವವಾಗುತ್ತದೆ. ಕಣ್ಣು ಮಿಟುಕಿಸದೇ ಹಾಗೆಯೇ ನೋಡಿದರೆ 'ಬಿಟ್ಟಕಣ್ಣಿ' ಎಂದೂ ಹೇಳುವುದುಂಟು. ಕೆಲವರಿಗೆ 'ಕೆಟ್ಟ ಕಣ್ಣು' ಎಂದು ಬೈಯುತ್ತಾರೆ. 'ಕಣ್ಣು ಹಾಕುವುದು' ಎಂದೂ ಅನ್ನುತ್ತಾರೆ. ಕಣ್ಣು ಹೇಗೆ ಕೆಟ್ಟದಾಗುತ್ತದೆ? ಯೋಚನೆ ಕೆಟ್ಟ ರೀತಿಯದಾಗಿರಬಹುದಷ್ಟೆ!

ವಿದ್ಯಾರ್ಥಿಗಳು ಪುಸ್ತಕದ ಮುಂದೆ ಕುಳಿತಾಗ ಕಣ್ಣನ್ನು ಅದರಲ್ಲಿ ಕೀಲಿಸಿರಬೇಕು. ಅಂದರೆ ಕೀಲಿ ಹಾಕಿದಂತೆ ಇರಬೇಕು. ಆದರೆ ಈಗಿನ ಕಾಲದಲ್ಲಿ ವಿದ್ಯಾರ್ಥಿಗಳು ಕಣ್ಣನ್ನು ಮೊಬೈಲ್ ಫೋನಿಗೆ ಕೀಲಿಸಿಕೊಂಡಿರುತ್ತಾರೆ. ಹಿಂದೆ ಪರೀಕ್ಷೆ ಹತ್ತಿರ ಬಂದಾಗ ಕಣ್ಣಿಗೆ ಎಣ್ಣೆ ಬಿಟ್ಕೊಂಡು ಓದುತ್ತಿದ್ದರು. ಅವರಿಗೆ ಇನ್ನಾವುದರ ಪರಿವೆಯೇ ಇರುತ್ತಿರಲಿಲ್ಲ. ರಾಜಕಾರಣಿಗಳು ಚುನಾವಣೆ ಹತ್ತಿರ ಬಂದಾಗ ಅದರ ಮೇಲೆ ಒಂದು ಕಣ್ಣು ಇಟ್ಕೊಂಡೇ ಬಜೆಟ್ ತಯಾರಿಸುತ್ತಾರೆ. ವೋಟು ಬೇಕಾದರೆ ಒಂದು ಕಣ್ಣನ್ನೂ ಎತ್ತಿ ಇಡುವವರೇ ರಾಜಕಾರಣಿಗಳು ಬಿಡಿ! ವೋಟಿಗಾಗಿ ರಾತ್ರಿಯಿಡೀ ಕಣ್ಣು ಮುಚ್ಚದೆ, ಅಂದರೆ ನಿದ್ರೆ ಮಾಡದೆ ಬೇಕಾದರೂ ಇರುತ್ತಾರೆ. ಮಾಯಾವಿದ್ಯೆ ಅಥವಾ ಇಂದ್ರಜಾಲಕ್ಕೆ ಕಟ್ಟು ವಿದ್ಯೆ ಎನ್ನುತ್ತಾರೆ. ನಿಮ್ಮ ಕಣ್ಣೆದುರಿಗೇ ನಡೆದದ್ದು ನಿಮಗೇ ಗೊತ್ತಾಗುವುದಿಲ್ಲ. ಕಣ್ಣನ್ನು ಕಟ್ಟಿದ ಹಾಗೆ ಆಗುತ್ತದೆ.

ಕೆಲವು ಸಲ ಕಣ್ಣಿನಲ್ಲೇ ಸಂಜ್ಞೆ ಅಂದರೆ 'ಕಣ್ಸನ್ನೆ' ನೀಡಬಹುದು. ಇದು ಹುಡುಗ, ಹುಡುಗಿಯರಲ್ಲಿ ಜಾಸ್ತಿ, ಹೆಂಡತಿಯೂ ಒಮ್ಮೊಮ್ಮೆ ಗಂಡನಿಗೆ ಕಣ್ಣನ್ನೆ ಪ್ರಯೋಗ ಮಾಡುತ್ತಾಳೆ ಬಿಡಿ. ಕೋಪ ಬಂದಾಗ ಕಣ್ಂಪಾಗುತ್ತದೆ. ಬಹುಶಃ ರಕ್ತದ ಒತ್ತಡ ಜಾಸ್ತಿಯಾಗಿ ಕಣ್ಣಿನಲ್ಲಿರುವ ಸೂಕ್ಷ್ಮ ರಕ್ತನಾಳಗಳು ಉಬ್ಬಿ ಆ ರೀತಿ ಅನ್ನಿಸಬಹುದು. ನಿದ್ದೆ ಇಲ್ಲದಿದ್ದರೂ ಧೂಳು ಬಿದ್ದರೂ, ಸೋಂಕು ಆದರೂ ಕಣ್ಣು ಕೆಂಪಾಗುತ್ತದೆ. 'ಮದ್ರಾಸ್ ಕಣ್ಣು' ಜ್ಞಾಪಿಸಿಕೊಳ್ಳಿ.

ಪ್ರಾಣಿ ಪ್ರಪಂಚದಲ್ಲಿ ಕಣ್ಣಿನ ಬಗ್ಗೆ ಉಲ್ಲೇಖಗಳಿವೆ. ನವಿಲಿಗೆ ಅದರ ಗರಿಗಳ ತುದಿಯಲ್ಲೆಲ್ಲಾ ಬಣ್ಣ ಬಣ್ಣದ ಕಣ್ಣುಗಳು. ಸಾವಿರ ಕಣ್ಣಿನ ಪಕ್ಷಿ ಎನ್ನುತ್ತಾರೆ. ನೋಡಲು ನಮಗೆ ಎರಡು ಕಣ್ಣು ಸಾಲದು. ಹಾಗೆಯೇ 'ಹರಿಣಿ' ಎಂದರೆ ಜಿಂಕೆಯ ಕಣ್ಣುಗಳಂತೆ ಸುಂದರ ಕಣ್ಣಿರುವವಳು ಎಂದರ್ಥ. ಆದರೆ, 'ನಾಯಿ ಕಣ್ಣು' ಒಂದು ರೀತಿಯ ಬೈಗಳು. ಇದರ ಸಂಬಂಧಿಗಳಾದ ನರಿ, ತೋಳಗಳೂ ಚಿಕ್ಕ ಕಣ್ಣುಗಳುಳ್ಳ ಪ್ರಾಣಿಗಳು.



'ಬೆಕ್ಕಿನ ಕಣ್ಣು' ಅಂದರೆ ಹಸಿರು ತಿಳಿಬಣ್ಣದ ಕಣ್ಣುಗಳು. ಇಂತಹವರನ್ನು ನಂಬಬಾರದು ಎನ್ನುವ ಅಪಪ್ರಚಾರ ಬೇರೆ! ತ್ರಿವೇಣಿಯವರ ಕಾದಂಬರಿ 'ಬೆಕ್ಕಿನ ಕಣ್ಣು' ನೆನಪಾಗುತ್ತದೆ ಅಲ್ಲವೇ? ಮಾಂಸಾಹಾರಿ ಪ್ರಾಣಿಗಳ ಕಣ್ಣು ವಿಶೇಷವಾಗಿರುತ್ತದೆ. ಕತ್ತಲಲ್ಲಿಯೂ ಅವುಗಳಿಗೆ ಚೆನ್ನಾಗಿ ಕಾಣುತ್ತದೆ. ಕಾಡಿನಲ್ಲಿ ರಾತ್ರಿಯ ವೇಳೆ ಅವುಗಳ ಕಣ್ಣು ದೀಪಗಳಂತೆ ಕಾಣುತ್ತದೆ. ತುಂಬಾ ಸೂಕ್ಷ್ಮ ದೃಷ್ಟಿಗೆ 'ಹದ್ದಿನ ಕಣ್ಣು' ಎನ್ನುತ್ತಾರೆ. ಹದ್ದು ಆಕಾಶದಿಂದಲೇ ತನ್ನ ಬೇಟೆಯನ್ನು ಗುರುತಿಸಿ ಎರಗುತ್ತದೆ. ಕಣ್ಣು ಕಾಣಿಸದೆ ಇರುವವರು, ತಾವು ಸಾಕಿದ 'ನಾಯಿಯ ಕಣ್ಣಿನಿಂದಲೇ ಬದುಕುವುದನ್ನು ನೋಡಿದ್ದೇವೆ. ವಿಶೇಷ ತರಬೇತಿ ನೀಡಿರುವ ಅವುಗಳ ತ್ಯಾಗಕ್ಕೆ ಸಾಟಿಯೇ ಇಲ್ಲ. ಕಣ್ಣಿಲ್ಲದ ಪ್ರಾಣಿಗಳೂ ಇವೆ. ಅವು ಗುಹೆಗಳಲ್ಲಿ ವಾಸಿಸುತ್ತವೆ, ಕಣ್ಣಿನ ಉಪಯೋಗವಿಲ್ಲದೆ ವಿಕಾಸದ ಹಾದಿಯಲ್ಲಿ ಕಣ್ಣನ್ನು ಕಳೆದುಕೊಂಡಿವೆ.

ಅನೇಕ ಗಾದೆಗಳೂ ಕಣ್ಣಿನ ಬಗ್ಗೆ ಇವೆ. 'ಕಣ್ಣು ಕುರುಡಾದರೆ ಬಾಯಿ ಕುರುಡೇ?' ಅಂದರೆ ಮಾತನಾಡಬೇಕು ಎಂದಿರಬೇಕು. 'ಮೆಳ್ಳೆಗಣ್ಣು ಇದ್ದರೆ ಒಂದು ಕಣ್ಣು ಕಾಶಿ, ಇನ್ನೊಂದು ರಾಮೇಶ್ವರ' ಎನ್ನುತ್ತಾರೆ. ಜ್ಯೋತಿರ್ಲಿಂಗಗಳು ಇರುವ ಈ ಪವಿತ್ರ ಕ್ಷೇತ್ರಗಳನ್ನೇಕೆ ಇಲ್ಲಿ ತಂದಿದ್ದಾರೋ? ಗೊತ್ತಿಲ್ಲ. ಇನ್ನೊಂದು ಉದಾಹರಣೆ 'ಕುರುಡಿಗಿಂತ ಮೆಳ್ಳೆಗಣ್ಣು ವಾಸಿ'. ಇದು ಹೆಣ್ಣಿಗೆ ಅನ್ವಯಿಸುವಂತಹ ಒಂದು ಗಾದೆ. 'ಹೆಣ್ಣೆ ಚಂದ ಕಣ್ಲೆ ಕುರುಡು' ಗಂಡಿಗೆ ಇದು ಅನ್ವಯಿಸುವುದಿಲ್ಲವೇ? ಹಾಗೆಯೇ ಹೆಣ್ಣು ಹೆಣ್ಣೆಂಬರು, ಕಣ್ಣು ಕಾಣದ ಗಾವಿಲರು' ಎನ್ನುವ ಸಂಚಿ ಹೊನ್ನಮ್ಮನ 'ಹದಿಬದೆಯ ಧರ್ಮ' ಮನಸ್ಸಿಗೆ ಬರುತ್ತದೆ.

ಕಣ್ಣಿನ ಬಗ್ಗೆ ಇರುವ ವ್ಯಾಖ್ಯಾನಗಳು ಒಂದೇ ಎರಡೇ. ಒಂದು ಪುಸ್ತಕವನ್ನೇ ಬರೆಯಬಹುದು! ಪೂರ್ವನಿರ್ಧಾರಿತವಾಗಿ ವಿಷಯಗಳನ್ನು ನೋಡಿದರೆ 'ಕಾಮಾಲೆ ಕಣ್ಣು ಎನ್ನುತ್ತಾರೆ. ಕಾಮಾಲೆ ಉಲ್ಬಣಿಸಿದಾಗ ಎಲ್ಲವೂ ಹಳದಿಯಾಗಿ ಕಾಣುತ್ತದಂತೆ. ಕೆಲವರು ಎಷ್ಟು ಸೂಕ್ಷ್ಮವಾಗಿ ವಿಷಯಗಳನ್ನು ಗಮನಿಸುತ್ತಾರೆಂದರೆ ಅವರಿಗೆ ಬೆನ್ನಲ್ಲಿ ಕಣ್ಣು ಇದೆ ಅನ್ನುತ್ತಾರೆ. ಚೇಳಿಗೂ ಬೆನ್ನಲ್ಲಿ ಕಣ್ಣುಗಳಿವೆ! ನೃಗು ಮಹರ್ಷಿಗೆ ಕಾಲಿನಲ್ಲಿತ್ತು ಎಂದು ಕೇಳಿದ್ದೇವೆ. ಶಿವನಿಗೆ ಮುಕ್ಕಣ್ಣ ಎನ್ನುವ ಹಾಗೆ, ಒಂದೇ ಕಣ್ಣಿರುವವ ಒಕ್ಕಣ್ಣ, ಅಚ್ಚುಮೆಚ್ಚಿನ ವ್ಯಕ್ತಿಗೆ 'ಕಣ್ಮಣಿ' ಎನ್ನುತ್ತಾರೆ.

ಆಂಗ್ಲಭಾಷೆಯಲ್ಲಿ 'blue eyed ಎನ್ನುವ ಒಂದು ಪದವಿದೆ. ಕಣ್ಣಿನ ಒಳಗೆ ಇರುವ ಮಣಿ ಇಲ್ಲದೆ ದೃಷ್ಟಿಯೇ ಇಲ್ಲ, ಆದ್ದರಿಂದ ಈ ಶಬ್ದಪ್ರಯೋಗ.

ಅಂತ್ಯಕಾಲವನ್ನು ಕಣ್ಣೆ ಸೂಚಿಸುತ್ತದೆ ಎಂದರೆ ಎಷ್ಟು ಆಶ್ಚರ್ಯ! ಕಣ್ಣು ತೇಲಿಸಿದರು, ಕಣ್ಣು ಮೇಲೆ ಹೋಯಿತು ಎನ್ನುತ್ತಾರೆ. ಸಾವನ್ನು ಕಣ್ಣು ಮುಚ್ಚಿದರು ಎನ್ನುತ್ತೇವೆ. ಶಾಲೆಯ ದಿನಗಳಲ್ಲಿ ನಾವು ಆಡುತ್ತಿದ್ದ ಆಟ 'ಕಣ್ಣಾ ಮುಚ್ಚೆ ಕಾಡೇಗೂಡೇ, ಉದ್ದಿನಮೂಟೆ ಉರುಳೇ ಹೋಯ್ತು' ನೆನಪಾಗುತ್ತದೆ ಅಲ್ಲವೇ? ಎಷ್ಟು ಅರ್ಥಗರ್ಭಿತ.

ಅರ್ಧಗಂಟೆ ಮುಗಿಯಿತು. ಕಣ್ಣು ಪರೀಕ್ಷೆಗೆಂದು ನನ್ನನ್ನು ಕರೆದರು. ಕಣ್ಣುಬಿಟ್ಟಾಗ ಔಷಧಿಯ ಪ್ರಭಾವದಿಂದ ಕಣ್ಣು ಮಂಜಾಗಿತ್ತು. ಕಣ್ಣಿನ ಪುರಾಣಕ್ಕೆ ಬ್ರೇಕ್ ಬಿತ್ತು. ಎಷ್ಟೋ ವಿಷಯ ನನ್ನ ಕಣ್ಣಪ್ಪಿ ಹೋಗಿರಬಹುದು, ಗೊತ್ತಿಲ್ಲ!

**(ಸಾಹಿತ್ಯ ಸಂಭ್ರಮ, ಮೈಸೂರು, ೨೦೦೯)**

## ೪೨. ಭಾಷಾ(ಅವಾಂ)ಂತರಗಳು!

### ಡಾ. ಕೆ.ಎಸ್.ಪವಿತ್ರ

ತಿರುಗಾಟ ಜಗತ್ತಿನಾದ್ಯಂತ ಹೆಚ್ಚುತ್ತಿದೆ. ತಿರುಗಾಡುವ ಅನುಭವ ಹೆಚ್ಚಿದಂತೆ ಸಹಜವಾಗಿ ನಮಗಾಗುವ ವೈವಿಧ್ಯಮಯ ಅನುಭವಗಳೂ ವಿಸ್ತತವಾಗುತ್ತವೆ. ಬಹುಶಃ 'ದೇಶ ಸುತ್ತು ಕೋಶ ಓದು' ಎಂಬ ಗಾದೆ ನಮಗೆ ಅರ್ಥ ಮಾಡಿಸುವ ಸತ್ಯ ಇದೇ ಎನಿಸುತ್ತದೆ. ತಿರುಗಾಟ ನಮಗೆ ನೀಡುವ ಹಲವು ಅನುಭವಗಳಲ್ಲಿ ಭಾಷೆಗೆ ಸಂಬಂಧಿಸಿರುವುದು ಬಹುಪಾಲು. ಭಾಷೆಗೂ ಮನಸ್ಸಿಗೂ ಸಂಬಂಧವಿದೆಯೇ? ಮಾನವರ ಮನಸ್ಸುಗಳನ್ನು ಬೆಸೆಯುವುದು ಯಾವುದು?

ಮನೋವೈದ್ಯಕೀಯ ತರಬೇತಿಯ ಅಂಗವಾಗಿ ತಮಿಳುನಾಡಿನ ಮಧುರೈನಲ್ಲಿದ್ದೆ. ತಮಿಳರ ಭಾಷಾಭಿಮಾನ ಎಷ್ಟೆಂದರೆ ತಮಿಳು ಭಾಷೆ ಮಾತನಾಡುವುದಷ್ಟೇ ಅಲ್ಲ, ಬರೆಯಲೂ ಕಲಿಯದೆ ನಾನು ವೈದ್ಯಕೀಯ ತರಬೇತಿಯ ಭಾಗವನ್ನು ಮುಗಿಸಲೇ ಸಾಧ್ಯವಿರಲಿಲ್ಲ! ರೋಗಿಗಳಿಗೆ ಔಷಧಿಯನ್ನು ಬರೆಯಬೇಕಾದರೆ ಇಂಗ್ಲಿಷ್‌ನಲ್ಲಿ ಮಾತ್ರೆಗಳನ್ನು ನಾವು ಬರೆಯುವಂತಿರಲಿಲ್ಲ! ಬದಲು 'ಪ್ಯಾರಾಸಿಟಮಲ್' ಎಂದು ಕನ್ನಡದಲ್ಲಿ ಬರೆದಂತೆ ತಮಿಳಿನಲ್ಲಿ ಬರೆಯಬೇಕಾಗಿತ್ತು. ತಮಿಳು ಭಾಷೆ ಬರುವ 'ಪರಿಣತರು ಕೆಲಸ ಬೇಗ ಬರಲೆಂದೋ ಅಥವಾ ನಮ್ಮಂಥ ಅನಕ್ಷರಸ್ಥರಿಗೆ ಸಹಾಯವಾಗಲೆಂದೋ ಪ್ರತಿ ವಿಭಾಗದಲ್ಲಿ ಸಾಮಾನ್ಯವಾಗಿ ಬರೆಯುವ ಔಷಧಿಗಳ ಒಂದು 'ಸೀಲ್'

ಮಾಡಿಟ್ಟಿರುತ್ತಿದ್ದರು. ಅದನ್ನು ನೋಡಿ ನೋಡಿಯೇ ನಮಗೆ ತಮಿಳು ಅಕ್ಷರಗಳು ಪರಿಚಯವಾಗಿ ಬಿಡುತ್ತಿದ್ದವು. ಅಂತೂ ಇದ್ದ ಎರಡು ತಿಂಗಳುಗಳಲ್ಲಿ ಹೇಗೋ ತಮಿಳು ಮಾತನಾಡಲು ಬರೆಯಲು ಕಲಿತಿದ್ದೆ.

ತಮಿಳಿನಲ್ಲಿ 'ನಾಕ್ಕು ನೀಟ್ಟು' ಎಂದರೆ 'ನಾಲಿಗೆ ಚಾಚು' ಎಂದರ್ಥ. ರೋಗಿಗೆ ರಕ್ತಹೀನತೆ ಇದೆಯೇ ಎಂದು ಪರೀಕ್ಷಿಸಲು ನಾಲಿಗೆ ಚಾಚುವಂತೆ ಕೇಳುತ್ತಿದ್ದೆವು. ಹೊಸ ಭಾಷೆಯನ್ನು, ನಾನು ಈಗಾಗಲೇ ಕಲಿತಿರುವ ಭಾಷೆಯೊಂದಿಗೆ ಹೋಲಿಸಿಯೇ ಕಲಿಯುವ ನನಗೆ ಇಂಥ ಸಂದರ್ಭಗಳಲ್ಲಿ ಪೇಚಾಟ. ನನ್ನ ಬಾಯಿ ಅಭ್ಯಾಸ ಬಲದಿಂದ 'ನಾಕ್ಕು ನೀಟ್ಟು' ಎನ್ನುತ್ತಿತ್ತು. ಆದರೆ 'ನಾಕ್ಕು ಮಾತ್ರ ಬುದ್ಧಿಗೆ ನೆನಪಿಸುತ್ತಿದ್ದದ್ದು ಹಿಂದಿಯ ನಾಕ್ (ಮೂಗು)ನ್ನೇ. ರೋಗಿಗಳನ್ನು ನೋಡಿನೋಡಿ ಸುಸ್ತಾಗಿರುವಾಗಲಂತೂ, 'ನಾಕ್ಕು ನೀಟ್ಟು' ಎಂದರೆ ನಾಲಗೆ ಚಾಚುತ್ತಾರಲ್ಲ, ಎನಿಸಿ ನನ್ನ ಕಣ್ಣು ಅವರ ಮೂಗನ್ನು ನೋಡುತ್ತಿತ್ತು!



ಇನ್ನೊಮ್ಮೆ ನನ್ನ ತಮಿಳು ಪರಿಣತಿಯನ್ನು ಪ್ರಯೋಗಿಸಲು ಹೋಗಿ 'ವಂದುಟ್ಟಾಂಗ್ಯಾ' (ಬಂದಿದ್ದಾರಾ?) ಬದಲು 'ಎರಂದಿಟ್ಟಾಂಗ್ಯಾ' (ಸತ್ತು ಹೋಗಿದ್ದಾರಾ?) ಎಂದು ಕೇಳಿಬಿಟ್ಟಿದ್ದೆ!

ನಮ್ಮ 'ಕನ್ನಡ'ವನ್ನು ಎಲ್ಲೆಡೆಯೂ 'ನಡೆಸಬಹುದು' ಮತ್ತು ವಿಶ್ವಭಾಷೆಯಾದ ಕೈಸನ್ನೆ-ಬಾಯಿ ಸನ್ನೆಗಳಿಂದಲೇ ನಾವು ಬದುಕಲು ಸಾಧ್ಯವಾಗಬಹುದು ಎಂಬ ಅನುಭವವಾದದ್ದು ಬೀಜಿಂಗ್ ಹೋದಾಗ, ಬಹು ಹೆಮ್ಮೆಯಿಂದ ನಾವು ಕಲಿಯುವ, ಮಾತನಾಡುವ 'ಇಂಗ್ಲೀಷ್'ನ ನಿರುಪಯುಕ್ತತೆ ಮೊದಲು ಅರಿವಾದದ್ದೂ ಇಲ್ಲಿಯೇ. 'ಪರ್ಲ್ ಮಾರ್ಕೆಟ್' ಎಂಬ ಮುತ್ತಿನ ಮಾರುಕಟ್ಟೆಯನ್ನು ಕುರಿತು ನಾವು ಹೋಟೆಲಿನ ಸಿಬ್ಬಂದಿ ವರ್ಗದವರನ್ನೆಲ್ಲಾ ಕೇಳಿದರೂ ನಮ್ಮ ಪರ್ಲ್' ಅವರಿಗೆ ಅರ್ಥವೇ ಆಗಲಿಲ್ಲ! ಇಂಗ್ಲಿಷ್‌ನಲ್ಲಿ ಬರೆದು ತೋರಿಸಿದರೂ ಗೊತ್ತಾಗದೆ, ಅನಂತರ ಇಂಗ್ಲಿಷ್ ಬರುತ್ತಿದ್ದ ಚೀನೀ ಸ್ನೇಹಿತೆಗೆ ಕರೆ ಮಾಡಬೇಕಾಯಿತು! ಬೀಜಿಂಗ್‌ನಲ್ಲಿ ನಾವು ಮಾಡುತ್ತಿದ್ದ ಉಪಾಯ ಚೀನೀ ಅಕ್ಷರಗಳಲ್ಲಿ ವಿಳಾಸ ಬರೆಸಿಕೊಂಡು ಟ್ಯಾಕ್ಸಿಯವನಿಗೆ ಅದನ್ನು ತೋರಿಸುವುದು. ಆತನಿಗೆ ಆ ಸ್ಥಳ ಗೊತ್ತು, ಬರುತ್ತೇನೆ ಎಂದು ತಲೆಯಾಡಿಸಿದರೆ ಒಳಗೆ ಹತ್ತುವುದು. ಆತನ ಮೇಲೆ ಸಂಪೂರ್ಣ ಭರವಸೆಯಿಟ್ಟು, ನಾವು ಕೇಳಿದ ಜಾಗಕ್ಕೇ ಕರೆದೊಯ್ಯುತ್ತಾನೆ ಎಂದು ನಂಬಿ ಬಿಡುವುದು. ಪುಣ್ಯಕ್ಕೆ ಅಂಕೆ ಸಂಖ್ಯೆಗಳನ್ನು ಚೀನಿಯರೂ ನಮಗೆ ಗೊತ್ತಿರುವ ರೀತಿಯಲ್ಲೇ ಬರೆಯುತ್ತಾರೆ! ಏನನ್ನಾದರೂ ಕೊಳ್ಳಲು ಹೋಗುವಾಗ ನಾನು ಬೀಜಿಂಗ್‌ನಲ್ಲಿ ಕನ್ನಡದಲ್ಲೇ ಚೌಕಾಸಿ ಮಾಡುತ್ತಿದ್ದೆ! ಏಕೆಂದರೆ ನಮ್ಮ ಹಾವಭಾವಗಳು ಕನ್ನಡದಲ್ಲಿ ಮಾತನಾಡುವಾಗ ಒದಗಿ ಬರುವಷ್ಟು ಇಂಗ್ಲಿಷ್‌ಗೆ ಬರಲಾರವಷ್ಟೆ. ಹೇಗಿದ್ದರೂ ಅವರಿಗಂತೂ ಕನ್ನಡ-ಇಂಗ್ಲಿಷ್ ಎಲ್ಲವೂ ಒಂದೇ!

ವೈದ್ಯಕೀಯ ಸಮ್ಮೇಳನವೊಂದಕ್ಕೆ ಇಂಡೋನೇಷಿಯಾಕ್ಕೆ ಹೋಗಿದ್ದೆವು. ನಮ್ಮ ದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ನಾವು ಹೆಚ್ಚು ಮುತುವರ್ಜಿಯಿಂದ ಎಲ್ಲವನ್ನೂ 'ಇಂಗ್ಲಿಷ್' ಭಾಷೆಯಲ್ಲಿಯೇ ಆಯೋಜಿಸುತ್ತೇವಷ್ಟೆ. ಅದೇ ನಿರೀಕ್ಷೆಯಿಂದ ಹೋದೆವು. ಒಂದು ಗೋಷ್ಠಿ ಬಿಟ್ಟರೆ ಮಿಕ್ಕವೆಲ್ಲವೂ ಇದ್ದದ್ದು ಇಂಡೋನೇಷಿಯಾದ ಭಾಷೆಯಲ್ಲಿ, ಬೋರ್ಡನ್ನು ಓದಲು ಹೋದರೆ ಅಲ್ಲಿದ್ದದ್ದು ನಮಗೆ ಓದಲು ಬರುವ ಇಂಗ್ಲಿಷ್ ಅಕ್ಷರಗಳು! ಇಂಗ್ಲಿಷ್ ಲಿಪಿಯಲ್ಲಿ ಬರೆದಿದ್ದು ಮಾತ್ರ ಇಂಡೋನೇಷಿಯಾದ ಭಾಷೆ!!

ಜಪಾನ್‌ಗೆ ಹೋದಾಗ ಆದರ ಅನುಭವ ಮತ್ತೊಂದು ರೀತಿಯದು. ಇಲ್ಲಿಯೂ ಅಕ್ಷರಗಳು ಚೀನಾದಂತಹವೇ. ಚೀನೀ ಭಾಷೆಗೂ ಜಪಾನೀ ಭಾಷೆಗೂ ಲಿಪಿ ಒಂದೇ. ಒಂದು ಉದ್ದ ವಾಕ್ಯಕ್ಕೆ ಚಿತ್ರದಂತಹ ಒಂದೇ ಅಕ್ಷರ. ಅಲ್ಲಿದ್ದ ಭಾರತೀಯ ಸ್ನೇಹಿತರು ಜಪಾನೀ ಭಾಷೆ ಕಲಿತಿದ್ದರು. ಅವರ ಪ್ರಕಾರ ಒಂದೊಂದು ವಾಕ್ಯವನ್ನೂ ಮನಸ್ಸಿನಲ್ಲಿ ಚಿತ್ರದ ರೀತಿಯಲ್ಲಿ ಊಹಿಸಿಕೊಂಡು ಬರೆಯಲಾರಂಭಿಸಿದರೆ ಜಪಾನೀ ಭಾಷೆಯಲ್ಲಿ ಬರೆಯುವುದು ಸುಲಭವಂತೆ. ಇಂಗ್ಲಿಷ್‌ನಲ್ಲಿ ಪ್ರಕಟವಾಗುವ ವೈದ್ಯಕೀಯ ಜರ್ನಲ್‌ಗಳನ್ನು



ಜಪಾನೀ ಭಾಷೆಗೆ ತರ್ಜುಮೆ ಮಾಡಲೆಂದೇ ಇಲ್ಲಿ ವಿಭಾಗಗಳೇ ಕಾಲೇಜುಗಳಲ್ಲಿರುತ್ತವೆ. ಬೇಗ ಬೇಗ ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಅರ್ಥವಾಗದೆ ಕಣ್ಣು ಬಿಟ್ಟು ಬಿಡುವವರೇ ಹೆಚ್ಚು! ಈಜಿಪ್ಟ್‌ನಲ್ಲಂತೂ ಒಮ್ಮೆ ಸ್ನೇಹಿತರೊಬ್ಬರಿಗೆ ಶೌಚಾಲಯಕ್ಕೆ ಆತುರವಾಯಿತು. 'ಟಾಯ್ಲೆಟ್' 'ರೆಸ್ಟ್ ರೂಂ' ಎಂಬ ಪದಗಳ್ಯಾವುದೂ ಹೋದೆಡೆ ಯಾರಿಗೂ ಗೊತ್ತಾಗಲಿಲ್ಲ. ಕಿರುಬೆರಳನ್ನು ಎತ್ತಿ ಮಕ್ಕಳಂತೆ 'ಒಂದಕ್ಕೆ' ಎಂದು ತೋರಿಸಿದ್ದೂ ಆಯಿತು. ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಅವರು ಪ್ಯಾಂಟ್ ಜಿಪ್ಪಿನ ಹತ್ತಿರ ಕೈತೋರಿಸಿ ಮೂತ್ರ ಮಾಡಿದಂತೆ ಅಭಿನಯ ಮಾಡಿದ ಮೇಲೆ ಆ 'ವೇಟರ್' 'ಓ' ಎಂದು ಹಿಂದಿದ್ದ ಶೌಚಾಲಯಕ್ಕೆ ಕರೆದೊಯ್ದ.

ಇತರೆಡೆಗಳಲ್ಲಿ ಅಭಿನಯ ಮಾಡಿ ಅಭ್ಯಾಸವಾಗಿದ್ದ ನಮಗೆ ಬ್ರೆಜಿಲ್‌ನಲ್ಲಿಯೂ ಅವರಿಗೆ ಇಂಗ್ಲಿಷ್ ಬರುವುದಿಲ್ಲ ಎಂದುಕೊಂಡು ನಾವೇ ಅಂದುಕೊಂಡು ಬಿಟ್ಟೆವು! ಸಕ್ಕರೆ ಕೊಡಿ ಎನ್ನುವುದಕ್ಕೆ ನಾವು ಅಭಿನಯ ಮಾಡಿ ತೋರಿಸದ ರೀತಿಯಿಲ್ಲ. ಅಲ್ಲಿನ 'ವೇಟರ್' ಒಂದು 'ಟ್ರೇ'ಯಲ್ಲಿ ಅಡಿಗೆ ಮನೆಯ ವಸ್ತುಗಳನ್ನೆಲ್ಲ ಇಟ್ಟುಕೊಂಡು, ಜೊತೆಗೊಂದು ಪೆನ್ನು ಪೇಪರ್ ನಮ್ಮ ಮುಂದೆ ಹಿಡಿದೇ ಬಿಟ್ಟಳು! ಅದರಲ್ಲಿದ್ದ ಸಕ್ಕರೆ ತೋರಿಸಿದ್ದೇ 'ಓ ಷುಗರ್!' ಎಂದು ಉದ್ಧರಿಸಬೇಕೆ?

ಪರವೂರಿನಲ್ಲಿ ಬೇರೆ ಭಾಷಿಗರ ನಡುವೆ ವ್ಯವಹರಿಸಬೇಕಾದಾಗ ತಮ್ಮ ಭಾಷೆಯ ಮೇಲಿನ ಅಭಿಮಾನವನ್ನು ಕಾಪಿಟ್ಟುಕೊಂಡೇ, ಇತರ ಭಾಷೆಗಳಲ್ಲಿ ಎಗ್ಗಿಲ್ಲದೆ, ತಪ್ಪು ಮಾಡಿದರೆ ನಗಬಹುದೆಂಬ ಚಿಂತೆಯಿಲ್ಲದೆ, ಪ್ರಯತ್ನಿಸುವವರು ಮಾತ್ರ 'ಮಲೆಯಾಳಿ' ವೀರರೇ! ನರ್ಸರಿಯಲ್ಲಿ 'ಎಬಿಸಿ' ಬದಲು "ಒಬಿಸಿ' ಕಲಿಯುವರೇನೋ ಎಂಬಷ್ಟು ಮಟ್ಟಿಗೆ, 'ಲ' ಉಚ್ಚಾರ ನಾಲಿಗೆಯಲ್ಲಿ ಬರದೇನೋ ಎಂದೆನಿಸುವಂತೆ ಉಚ್ಚಾರವಾದರೂ, ಮತ್ತೊಬ್ಬರ ಭಾಷೆ ಕಲಿಯುವ, ಅದರಲ್ಲೇ ಮಾತನಾಡುವ ಅವರ ಉತ್ಸಾಹ ಮೆಚ್ಚತಕ್ಕದ್ದೇ. ಆದರೆ ಇನ್ನೊಬ್ಬ ಮಲೆಯಾಳಿ ಸಿಕ್ಕರೆ ಮಾತ್ರ ಅವರು ಮಾತನಾಡುವುದು ಮಲಯಾಳಂನಲ್ಲೇ. ನಮ್ಮಂತೆ ಕನ್ನಡಿಗರು ಸಿಕ್ಕರೂ ಕನ್ನಡದಲ್ಲಿ ಮಾತನಾಡಲು ಹಿಂದೆ- ಮುಂದೆ ನೋಡುವವರಲ್ಲ!

ಕೊಲ್ಕೊತ್ತಾದ ಬಂಗಾಳಿಗಳ ಮಧ್ಯೆ ಬೇರೆಯದೇ ಅನುಭವ. ಬಂಗಾಳಿಗಳು ಮಾತನಾಡುವ ಹಿಂದಿಯನ್ನೂ ನಮಗೆ ಅರ್ಥ ಮಾಡಿಕೊಳ್ಳಲು ಸ್ವಲ್ಪ ಸಮಯ ಬೇಕೇ ಬೇಕು. 'ಶ' ಕ್ಕೆ 'ಸ', 'ಬಡಾಪಾನಿ' ಎಂಬ ಶಬ್ದವನ್ನು 'ಬೊರಾಪಾನೀ' ('ಬ'ವನ್ನು ಬೊ ಮಾಡಿ 'ಡಾ'ವನ್ನು 'ರಾ' ಮಾಡಿದ್ದಾರೆಂದು ಊಹಿಸಲು ಸಮಯ ಬೇಕಷ್ಟೆ!). 'ವೀಣಾಪಾಣಿ' ಯನ್ನು 'ಬಿನಾಪಾನಿ' ಎಂದು, ಬಾಯಿಯಲ್ಲಿ 'ರಸಗುಲ್ಲಾ' ತುಂಬಿಕೊಂಡೇ ಹಿಂದಿ ಮಾತನಾಡಿದರೆ ಮಾತ್ರ 'ಬಂಗಾಳಿ'ಗಳು ಮಾತನಾಡುವ ರೀತಿಯನ್ನು ಅನುಸರಿಸಬಹುದೇನೋ ಎಂಬ ಅನುಮಾನ ಮೂಡಿತ್ತು.

ಇವೆಲ್ಲವನ್ನೂ ಮೀರಿಸುವ ವಿಶಿಷ್ಟ ಅನುಭವ 'ಫ್ರೆಂಚ್' ನಾಡಿನಲ್ಲಿ ಆದದ್ದು.



ಪ್ಯಾರಿಸ್‌ಗೆ ಹೋದಾಗ ನನಗೆ ಬರುತ್ತಿದ್ದದ್ದು 'ಮರ್ಸಿ', 'ಥ್ಯಾಂಕ್ಯೂ', 'ಬಾನ್ ವಾಯೇಜ್, 'ಬಾನ್ ಎಪ್ಪಿಟೈಟ್' ಎಂಬ ಕೆಲವು ಸುಪ್ರಸಿದ್ಧ ಪದಗಳು... ಇಂಗ್ಲಿಷ್ ಲಿಪಿಯಲ್ಲೇ ಬರೆಯಲ್ಪಡುವ ಫ್ರೆಂಚ್ ಭಾಷೆಯನ್ನು ಓದಿ, ಹಾಗೇ ಹೇಳಲು ಹೋದರೆ, ನನಗೆ ಸಿಕ್ಕಿದ್ದು ಗೊಂದಲಮಯ ದೃಷ್ಟಿ, ಫ್ರೆಂಚ್ ಭಾಷೆಯಲ್ಲಿ ಬರೆಯುವುದಕ್ಕೂ, ಮಾತನಾಡುವುದಕ್ಕೂ ಸಂಬಂಧವೇ ಇಲ್ಲವೇನೋ ಎನ್ನಿಸುವ ಮಟ್ಟಿಗೆ ಫಜೀತಿಯಾಗಿತ್ತು. ರೈಲಿನ ಸ್ಟೇಷನ್‌ಗಳ ಹೆಸರು 'ಕ್ಯಾಟಲೆಟ್' ಎಂದು ನಾವು ಓದಿದರೆ ಅದನ್ನು ಇಂಗ್ಲಿಷ್‌ನಲ್ಲಿ ಹಾಗೆ ಬರೆದು, ಅವರು ಉಚ್ಚರಿಸುವುದು 'ಶಟಲೆ' ಎಂದು! 'ಬಾನ್‌ಜೋ" ಎಂದು ನಾವು ಶುಭಾಶಯ ಹೇಳಿದರೆ ಅದು ನಿಜವಾಗಿ ಉಚ್ಚರಿಸಲ್ಪಡುವುದು 'ಬಾನ್ಯೂ' ಎಂದೇ!

ಇಷ್ಟೆಲ್ಲಾ ಅನುಭವಗಳಿಂದ ನಾನು ಕಲಿತಿರುವುದೇನು? ಮತ್ತೊಂದು ಭಾಷೆಯನ್ನು ಕಲಿಯುವುದು ಸುಲಭವಲ್ಲ. 'ಗೂಗ್ಲಕ್ಕ' ಇಂದು ನಮ್ಮ ಸಹಾಯಕ್ಕಿದ್ದರೂ, ತತ್‌ಕ್ಷಣ ಭಾಷಾಂತರಿಸಿದರೂ, ಉಚ್ಚಾರವನ್ನೂ

ಕೇಳಿಸಿದರೂ, ಆಯಾ ಭಾಷೆಗಿರುವ ಸಂಸ್ಕೃತಿಯನ್ನು ಕಲಿಯುವುದು ಕಷ್ಟವೇ. ಆದರೂ ಅವರವರ ಭಾಷೆಯಲ್ಲಿ ಕೆಲವು ವಾಕ್ಯಗಳನ್ನಾದರೂ ಮಾತನಾಡುವ ಪ್ರಯತ್ನ ವ್ಯವಹಾರ-ವ್ಯಾಪಾರ-ಸಾಮಾಜಿಕ ಸನ್ನಿವೇಶಗಳಲ್ಲಿ ಸಂವಹನವನ್ನು ಭಾವನಾತ್ಮಕವಾಗಿಸುತ್ತದೆ. ಭಾಷಾಂತರಗಳೂ, ಹಾಗೆ ಮಾಡುವಾಗ ನಡೆಯುವ ಅವಾಂತರಗಳೂ ಬದುಕನ್ನು ಸ್ವಾರಸ್ಯಕರ ಎನಿಸುವಂತೆ ಮಾಡಬಲ್ಲವು. ಮಾನವರ ನಡವಳಿಕೆಗಳ ಬಗ್ಗೆ ಕುತೂಹಲಕಾರಿ ಸಂಗತಿಗಳನ್ನ ಕಲಿಸಬಲ್ಲವು. ವೈದ್ಯಕೀಯ ವೃತ್ತಿಯಲ್ಲಂತೂ ರೋಗಿಯ ಮಾತೃಭಾಷೆಯಲ್ಲಿ ನೀವು ವ್ಯವಹರಿಸಬಲ್ಲವರಾದರೆ ನಿಮ್ಮ ಕೆಲಸ ಸುಲಭ. 'ಅಯ್ಯೋ ಆ ಡಾಕ್ಟ್ರಿಗೆ ನಮ್ಮ ಭಾಷೆಯೇ ಬರಲ್ಲ, ನಮ್ಮ ನೋವನ್ನು ಅವರಿಗೆ ಹೇಗೆ ಹೇಳಿಕೊಳ್ಳೋದು?' ಎಂದು ರೋಗಿಗಳು ಮೆಡಿಕಲ್ ಕಾಲೇಜುಗಳಲ್ಲಿ ದೂರುವುದು ಸಾಮಾನ್ಯ. ಹಾಗಾಗಿ ಪ್ರವಾಸ-ವ್ಯವಹಾರ-ಸಾಮಾಜಿಕ ಸನ್ನಿವೇಶ ಎಲ್ಲೇ ಆಗಲಿ ಭಾಷಾ ಅವಾಂತರಗಳಾದರೂ ಪರವಾಗಿಲ್ಲ, 'ಭಾಷಾಂತರ' ಮಾಡುವ ನಮ್ಮ ಪ್ರಯತ್ನ ನಡೆಯಲೇಬೇಕು ಅಲ್ಲವೆ?

**(ಉದಯವಾಣಿ ಸಾಪ್ತಾಹಿಕ, ಸೆಪ್ಟೆಂಬರ್ ೧೫, ೨೦೧೯)**

## ೪೩. ಅಮ್ಮ ಅಂದ್ರೆ...!

### ದೀಪ್ತಿ ಭದ್ರಾವತಿ

"ಅಮ್ಮ ಅಂದರೆ ಏನೋ ಹರುಷವು" ಆ ಪದವೇ ಹಾಗೆ ಜೀವರಸ, ಬೊಗಸೆಯಲ್ಲಿ ಹಿಡಿದು ಹೇಳಲಾಗದ ಕಡಲು. ಅದು ಹೆತ್ತಮ್ಮ, ಕನ್ನಡಮ್ಮ, ಭಾರತಮ್ಮ... ಆಕೆಯ ಯಾವುದೇ ರೂಪಗಳಿರಬಹುದು, ಶಬ್ದಗಳಲ್ಲಿ ಹೆಕ್ಕುವುದು ಸಾಧ್ಯವೇ ಇಲ್ಲದ್ದು... ಆದರೆ ನಾನಿಲ್ಲಿ ಹೇಳ ಹೊರಟಿರುವುದು ಮಾತ್ರ ಈ ಯಾವ ಅಮ್ಮನ ಬಗ್ಗೆಯೂ ಅಲ್ಲ. ಆರೋಗ್ಯ ಇಲಾಖೆಯ ಭಾಷೆಯಲ್ಲಿ ಚಿಕನ್ ಫಾಕ್ಸ್ ಎಂದು ಗುರುತಿಸಿಕೊಂಡು ಅಪ್ಪಟ ದೇಶಿ ಭಾಷೆಯಲ್ಲಿ "ಅಮ್ಮ" ಆಗಿರುವ "ಅಮ್ಮನ" ಬಗ್ಗೆ! ಈ ಎಲ್ಲವೂ ಶುರುವಾದದ್ದು ಈಗ್ಗೆ ಒಂದು ತಿಂಗಳಿನಿಂದ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್‍ಯ ನಿರ್ವಹಿಸುವ ನಾನು ಒಂದಲ್ಲ ಒಂದು ವೈರಾಣು ಬ್ಯಾಕ್ಟಿರಿಯಾಗಳಿಗೆ ಎದುರಾಗುತ್ತಲೇ ಇರುತ್ತೇನೆ. ನನ್ನಂತೆಯೇ ಅಲ್ಲಿರುವ ಬಹಳಷ್ಟು ಮಂದಿ ಕೂಡ. ಹೀಗಾಗಿಯೇ ಅಲ್ಲಿ ಕಾರ್‍ಯ ನಿರ್ವಹಿಸುವ ಬಹುತೇಕ ಮಂದಿಗೆ ಮೂರು ತಿಂಗಳಿಗೊಮ್ಮೆ ವೈರಲ್ ಲೋಡ್ ಪರೀಕ್ಷೆ ಮಾಡಲಾಗುತ್ತದೆ. ರೋಗ ನಿರೋಧಕ ಶಕ್ತಿ ಚೆನ್ನಾಗಿತ್ತೋ ಬಚಾವ್, ಅದಿಲ್ಲದಿದ್ದರೆ ಗ್ರಹಚಾರ ತಪ್ಪಿದ್ದಲ್ಲ. ಅದಿರಲಿ ಬಿಡಿ, ಅದು ನಮ್ಮ ಕರ್ಮ. ಆದರೆ ನಮ್ಮಗಳ ಕಾರಣಕ್ಕೆ ನಮ್ಮ ಮನೆ ಮಂದಿ ಕೂಡ ಖಾಯಿಲೆ ಬೀಳೋದಿದೆಯಲ್ಲ ಅದು ಮಾತ್ರ...

ಆವತ್ತೊಂದು ದಿನ ಹೇಗೋ ಏನೋ ನನಗೆ ಹರ್ಪಿಸ್ ಶುರುವಾಯಿತು. ಅಚ್ಚ ಕನ್ನಡದಲ್ಲಿ ಸರ್ಪಸುತ್ತು ಅಂತಾರಲ್ಲ ಅದೇ. ಅದೇನೋ ಗೊತ್ತಿಲ್ಲ, ಯಾರು ಏನೇ ಹೇಳಿದರೂ ಆಸ್ಪತ್ರೆ ಮಂದಿಗೆ ದಪ್ಪ ಮಾತ್ರೆಗಳಲ್ಲಿ, ಚುಚ್ಚುವ

ಸಿರಿಂಜುಗಳಲ್ಲಿ ನಂಬಿಕೆ ಇರುತ್ತದೆಯೇ ಹೊರತು ತಿಪ್ಪರಲಾಗ ಹಾಕಿದರೂ ಬೇರೆಯದನ್ನು ನಂಬುವುದು ಕಷ್ಟವೇ. ಸರಿ ಚರ್ಮವೈದ್ಯರ ಬಳಿ ಹೋದದ್ದಾಯಿತು. ಅವರೂ ನಮ್ಮವರೇ ತಾನೇ? ಮುತ್ತು ಪೋಣಿಸಿಟ್ಟಂತೆ ಎದ್ದ ಬಿಳಿ ಗುಳ್ಳೆಗಳ ನೋಡುತ್ತಲೇ ಏನಿಲ್ಲ, 'ಚಿಕನ್ ಫಾಕ್ಸ್ ವೈರಸ್ ಇನ್‌ಫೆಕ್ಟ್ ಆಗಿದೆ' ಎಂದು ಬಿಟ್ಟರು. ನಾನು ಗಾಬರಿಗೆ ಬಿದ್ದೆ! “ಅದು ಮೊದಲೇ ನನಗಾಗಿತ್ತು ಮತ್ತೆ ಬರತ್ತಾ ಸರ್” ಬಡಬಡಿಸಿದೆ. “ಬರಬಾರದು ಅಂತ ಏನಿಲ್ಲ, ಈಗ ಯಾರಿಗೆ ಏನು ಬೇಕಾದ್ರೂ ಯಾವಾಗ ಬೇಕಾದ್ರೂ ಬರತ್ತೆ” ಆಕಾಶ ನೋಡುತ್ತ ಹೇಳಿದರು. ಅವರು ಆಕಾಶ ನೋಡಿದ್ದು ಯಾಕೆ ಎಂದು ತಿಳಿಯದೇ ಹೋದರೂ, ಶೇಕಡಾ ಇಪ್ಪತ್ತು ಜನರಿಗೆ ಈ ಹಿಂದೆ ಚಿಕನ್ ಫಾಕ್ಸ್ ಆಗಿದ್ರೆ ಅದು ಕೆಲವು ವರ್ಷಗಳ ನಂತರ ಹರ್ಪಿಸ್ ರೂಪದಲ್ಲಿ ಕಾಣಿಸುತ್ತೆ ಎಂಬುದಂತೂ ಅರಿವಾಯಿತು. ಅಲ್ಲಿಂದ ಶುರುವಾಯಿತು ನೋಡಿ...

“ಮನೆಯಲ್ಲಿ ಸ್ವಲ್ಪ ಕೂಡ ಮಡಿ ಮೈಲಿಗೆ ಇಲ್ಲ. ಅದಕ್ಕೇ ಹೀಗಾಗಿರೋದು. ಪ್ರತಿ ವರ್ಷ ಸುಬ್ರಮಣ್ಯಕ್ಕೆ ಹೋಗಿ ಬರೋದಕ್ಕೆ ಏನು ನಿಮಗೆ? ಎಲ್ಲೆಲ್ಲೋ ಅಲೀತೀರಿ...” ಎನ್ನುತ್ತ ನನ್ನ ಮಾವ ನನ್ನ ತಲೆಗೆ ಸುಳಿದು ದೇವರ ಕೋಣೆಯಲ್ಲಿ ಐದು ರೂಪಾಯಿ



ತೆಗೆದಿಸಿಟ್ಟರು. ನನ್ನಮ್ಮನಂತೂ “ಸರ್ಪಸುತ್ತು ಇಂಗ್ಲೀಷ್ ಮೆಡಿಸಿನ್‌ನಲ್ಲಿ ಹೋಗೋದು ಸಾಧ್ಯವೇ ಇಲ್ಲ” ಎನ್ನುತ್ತ ಬೂದಿ ಮಂತ್ರಿಸಿ ಹಚ್ಚುವವರ ಬಗ್ಗೆ ಇನ್ನಿಲ್ಲದಂತೆ ವಿಚಾರಿಸತೊಡಗಿದರು. ನನಗೋ ಮೈತುಂಬಾ ಕೆಂಡ ಸುರಿವಿಕೊಂಡಷ್ಟು ಉರಿ, ಆಡುವಂತಿಲ್ಲ ಅನುಭವಿಸುವಂತಿಲ್ಲ. ಅಪ್ಪಿತಪ್ಪಿಯೂ ಉರಿ ಎನ್ನುವಂತಿಲ್ಲ. “ಬುದ್ಧಿವಂತರು ನೀವು, ನಮ್ಮ ಮಾತು ಎಲ್ಲಿ ಕೇಳ್ತೀರಿ” ಎನ್ನುವಲ್ಲಿಂದ ಮಂಗಳಾರತಿ ಶುರುವಾಗತೊಡಗಿತು.

ಇನ್ನು ಇದರ ಜೊತೆಗೆ ರೊಚ್ಚಿಗೆ ಬಿದ್ದವರಂತೆ ಬೆನ್ನಿನಲ್ಲಿ ಕೆಂಪಗೆ ಮೂತಿ ಊದಿಸಿಕೊಂಡು ಕೂತಿದ್ದ ಗುಳ್ಳೆಗಳು ಬೇರೆ. ಏನೇ ಗುಳಿಗೆ ನುಂಗಿದರೂ ಮದ್ದು ಹಚ್ಚಿದರೂ ಕಮಕ್ ಕಿಮಕ್ ಎನ್ನಲಿಲ್ಲ. ನನ್ನ ಹ್ಯಾಪು ಮೋರೆಯ ನೋಡಿದ ಮಂದಿಯೆಲ್ಲ “ಏನಾಗಿದೆ” ಎನ್ನುತ್ತಾ, “ಅಯ್ಯೋ ಸರ್ಪಸುತ್ತ? ಅದು ಒಂದು ಸುತ್ತು ಬರಬಾರದು, ಬಂದ್ರೆ ಅಷ್ಟೇ ಮುಗೀತು” ಎನ್ನುತ್ತ “ನಾನು ಫೋಟೋ ಆಗುವ” ಎಲ್ಲ ಸೂಚನೆಯನ್ನೂ ನೀಡುತ್ತ ದಿಗಿಲು ಬಡಿಸಿದರು. ನಾನು ಸುಟ್ಟ ಬದನೆ ಸೊಡ್ಡಿನಲ್ಲಿ, “ಅಯ್ಯೋ! ಅದೆಲ್ಲ ಏನೂ ಇಲ್ಲ, ಅದು ಚಿಕನ್ ಫಾಕ್ಸ್... ಅಷ್ಟೇ” ಎಂದು ಎಷ್ಟೇ ಅವಲತ್ತುಕೊಂಡರೂ, “ನೀವು ಆಸ್ಪತ್ರೆಯವರು ಏನೇ ಹೇಳಿದ್ರೂ, ಹಳ್ಳಿ ಔಷಧೀನೆ ಇದಕ್ಕೆಲ್ಲ ಸರಿ ನೋಡ್ತೀ..' ಎನ್ನುತ್ತ ಸಾಧ್ಯವಾದಷ್ಟೂ ನಮ್ಮ ಇಲಾಖೆಯವರ ಮೇಲೆ ಕೆಂಡ ಕಾರಿಕೊಂಡರು. ಇನ್ನು, 'ಹುತ್ತದ ಮಣ್ಣು ಹಚ್ಚಬೇಕಿತ್ತು. ನಾಗಪ್ಪನಿಗೆ ತನಿ ಎರೆಯಬೇಕಿತ್ತು, ಪಥ್ಯ ಮಾಡಬೇಕಿತ್ತು...' ಇಂತಹ ನೂರೆಂಟು ಮಾತುಗಳು ಎಲ್ಲಿದ್ದವೋ ಏನೋ ವೈರಸ್ಸಿಗಿಂತ ವೇಗದಲ್ಲಿ ಹಾರಿ ಬಂದು ಕಚ್ಚಿಕೊಂಡವು.

ನನಗೋ ಆ ಮಾತುಗಳನ್ನು ಕೇಳಿದಾಗಲೆಲ್ಲ ಚಿಲ್ಟು ವೈರಾಣುವಿನ ಮೇಲೆ ಇನ್ನಿಲ್ಲದ ಸಿಟ್ಟು ಬರತೊಡಗಿತ್ತು. ಆದರೇನೂ ಮಾಡುವಂತಿರಲಿಲ್ಲ. ಬಿಳಿಗುಳ್ಳೆಗಳ ನೋಡಿಕೊಳ್ಳುತ್ತ ಅವು ಎಂದು ಒಣಗಿ ಬೀಳುತ್ತವೆಯೋ ಎನ್ನುತ್ತ ದಿನದೂಡಿದ್ದಾಯ್ತು. ದಿನ ನಾಲ್ಕೈದು ಕಳೆದರೂ ಉರಿ ಹೆಚ್ಚುತ್ತಾ ಹೋಯಿತೇ ವಿನ: ಮತ್ತೇನೂ ಆಗಲಿಲ್ಲ. ಸರಿ ಇನ್ನೇನು, 'ಸಂಕಟ ಬಂದಾಗ ವೆಂಕಟರಮಣ' ಎನ್ನುವ ಹಾಗೆ ದಾರಿ ತೋಚದಾಗಿ “ಗೂಗಲ್ಲಿನ ಪಾದವೇ ಗತಿ” ಎಂದುಕೊಳ್ಳುತ್ತ ಗೂಗಲಿಸಿದೆ. ರಾಶಿ ರಾಶಿ ಅತಾಪತಾ ಬಂದು ಬಿದ್ದವು. ಗಂಟು ಬಿದ್ದಿರುವುದು “ವೆರಿಸೆಲ್ಲಾ ಜೋಯಿಸ್ಟರ್” ವೈರಾಣು, ಅವು ಸುಮಾರು ೨ ರಿಂದ ೪ ನಾಲ್ಕು ವಾರ ಬಿಟ್ಟ ಬಿಡಾರ ಬಿಡುವುದಿಲ್ಲ ಎಂದು ಅರಿವಾಗಿ ಹೋಯಿತು. ಮನಸ್ಸು ಗಟ್ಟಿಗೊಳಿಸಿದೆ. ಏನೇ ಆದರೂ ಇವುಗಳಿಗೆ ಬಗ್ಗಲೇಬಾರದು ಎನ್ನುವ ಹಠಕ್ಕೆ ಬಿದ್ದೆ. ಹೆಂಗಸರ ಹಠದ ಮುಂದೆ ಪ್ರಪಂಚವೇ ನಿಂತ ಉದಾಹರಣೆಗಳಿಲ್ಲ ಅಂತಾದ್ದರಲ್ಲಿ...

ಅವು ಸೋತವು. ಸೋತ ಸಿಟ್ಟಿಗೆ ಥಾಳು ಥಾಳು ಕಲೆಗಳನ್ನು ಬಿಟ್ಟು ಹೋದವು. ಅದಾಗಿ ನಾಲ್ಕು ದಿನವೂ ಕಳೆದಿರಲಿಲ್ಲ ಪತಿ ಮಹಾಶಯರು ಚಳಿ ಎನ್ನುತ್ತ ಬಂದು ಮಲಗಿಯೇ ಬಿಟ್ಟರು. ಮಾಮೂಲು ಜ್ವರ ಎಂದುಕೊಂಡು ಗೊತ್ತಿದ್ದ ಮದ್ದುಗಳನ್ನೆಲ್ಲ ಪ್ರಯೋಗಿಸಿದೆ, ಮಿಸುಕಾಡಲಿಲ್ಲ. ಬದಲಾಗಿ ಮೂರನೇ ದಿನಕ್ಕೆ ಸಾಲು ಸಾಲು ಬಿಳಿಯ ನೀರು ತುಂಬಿದ ಗುಳ್ಳೆಗಳು ಮೈ ಮುಖದ ತುಂಬೆಲ್ಲ ಎದ್ದೇ ಬಿಟ್ಟವು. ಹರ್ಪಿಸ್ಸಿನ ರೂಪದ ವೈರಾಣು ಇದೀಗ ಚಿಕನ್ ಫಾಕ್ಸ್ (ಅಮ್ಮನ ಅಧಿಕೃತ) ರೂಪದಲ್ಲಿ ರಂಗಕ್ಕಿಳಿದಿತ್ತು.



ಯಥಾ ಪ್ರಕಾರ ಅಲೋಪತಿ ವೈದ್ಯಕೀಯ. ತೀರಾ ಜ್ವರದಿಂದ ಬಳಲುತ್ತಿದ್ದ ನನ್ನವನಿಗೆ ಇನ್ನಿಲ್ಲದ ಕೋಪ ಬಂದದ್ದು ನನ್ನ ಮೇಲೆ! “ಅಂದೆಂತೆಂತಾ ಖಾಯಿಲೆ ಹಚ್ಚಿಕೊಂಡು ಬರ್ತಿ ಮಹರಾಯಿತಿ” ಕ್ಷೀಣ ಸ್ವರದಲ್ಲಿ ದಬಾಯಿಸಿದ. ನನಗೂ ಹಾಗೇ ಅನ್ನಿಸಿತಾದರೂ ಒಪ್ಪಿಕೊಳ್ಳುವುದಕ್ಕೆ ಬಿಂಕ ಬಿಡಬೇಕಲ್ಲ, “ಅಯ್ಯೋ ಖಾಯಿಲೆ ಮನುಷ್ಯರಿಗೆ ಬರದೆ ಮರಕ್ಕೆ ಬರತ್ತಾ, ಬರಬೇಕು ಅಂತಿದ್ದರೆ ಹೇಗೂ ಬರುತ್ತೆ” ಪೇಶಂಟಿಗೆ ಹೇಳುವ ಹಾಗೆ ಹೇಳಿದೆ. ಕೇಳೋರು ಬೇಕಲ್ಲ. ಮಾವನವರಂತೂ ಇದೀಗ ಗಂಟಲು ಸರಿಪಡಿಸಿಕೊಂಡರು. “ದೇವರಲ್ಲಿ ಒಂದಿಷ್ಟಾದರೂ ನಂಬಿಕೆ ಇರಬೇಕು, ಸಂಪ್ರದಾಯ ಸಂಸ್ಕಾರ ಇಲ್ಲದಿದ್ದರೆ ಆಗೋದೇ ಹೀಗೆ, ನಮ್ಮನೆಯಲ್ಲಿ ಅತೀ ಬುದ್ದಿವಂತರು ಜಾಸ್ತಿಯಾಗಿದ್ದಾರೆ” ಎನ್ನುತ್ತ ಯಾವ್ಯಾವುದೋ ವಿಚಾರಗಳನ್ನು ಎಲ್ಲೆಲ್ಲಿಗೋ ತಾಳೆ ಹಾಕುತ್ತ ನನ್ನ ಮುಖವನ್ನು ಓರೆಗಣ್ಣಿನಲ್ಲಿ ನೋಡುತ್ತ ಮನೆಯಲ್ಲಿದ್ದ ತೀರ್ಥಗಳನ್ನೆಲ್ಲ ಮಗನಿಗೆ ಕುಡಿಸಿದರು. ಆದರೆ ಎಂಭತ್ತರಲ್ಲಿಯೂ ಮಗನ ಅಕ್ಕರಿಕೆ ಮಾಡುವ ಅವರನ್ನು ಕಂಡು ನನಗೆ ಅಯ್ಯೋ ಎನ್ನಿಸಿತೇ ವಿನ: ವೈರಾಣುಗಳು ಮಾತ್ರ ಜಗ್ಗಲಿಲ್ಲ. ಸತತ ನಾಲ್ಕು ದಿನಗಳ ಕಾಲ ದೇಹದ ಸಿಕ್ಕ ಸಿಕ್ಕ ಭಾಗದಲ್ಲಿ ಸವಾರಿ ಮಾಡಿದವು. ಇಲಾಖೆಯ ಸ್ನೇಹಿತರು, “ಏನೂ ಬೇಡ, ಆಂಟಿಬಯೋಟಿಕ್ ಕೊಡು, ಕ್ಯಾಲಮೈನ್ ಲೋಶನ್ ಹಚ್ಚು ಸಾಕು, ಎರಡು ವಾರ ಇದ್ದೇ ಇರತ್ತೆ..” ಎಂದರಾದರೂ, ನನ್ನ ಗಂಡನನ್ನು ನೋಡಲು ಬಂದವರೆಲ್ಲ ಭಯ ಭಕ್ತಿಯಲ್ಲಿ ಬಾಗಿಲಲ್ಲಿ ನಿಂತು, “ಅಮ್ಮನಿಗೆ ಬೇವಿನ ಸೊಪ್ಪೇ

ಆಗಬೇಕು”  ಎನ್ನುತ್ತ ರಾಶಿ ರಾಶಿ ಸೊಪ್ಪನ್ನು ತಂದು ಸುರುವಿಯೇ ಬಿಟ್ಟರು (ತಂದದ್ದು ಬೇವಾದರೂ ಬೆಲ್ಲದಂತಹ ಅವರ ಪ್ರೀತಿಗೆ ನಾವುಗಳು ಕರಗಿ ಹೋದೆವು ಅದು ಬೇರೆ ವಿಷ್ಯ)!

“ಅಯ್ಯೋ, ಅದು ದೇವಿಗೀವಿ ಎಂತ ಅಲ್ಲ”  ನಾನು ಎಷ್ಟೇ ಬಡಿದುಕೊಂಡರೂ ಯಾರೊಬ್ಬರೂ ಕ್ಯಾರೆ ಎನ್ನಲಿಲ್ಲ. ಬದಲಾಗಿ ಅವರುಗಳ ಉದಾಸೀನ ನಿನ್ನ ತರ್ಕ ಬುದ್ಧಿ ತೋರಿಸಿದ್ದು ಸಾಕು ಎಂಬಂತಿತ್ತು. ನೋಡುನೋಡುತ್ತಲೇ ಮನೆ ಪೂರ ಬೇವಿನ ಮಯ. ಮದುವೆಯಲ್ಲಿ ಸಪ್ತಪದಿ ತುಳಿಯುವಾಗ ಹೂ ಹಾಸಿದ್ದರೋ ಇಲ್ಲವೋ ಗೊತ್ತಿಲ್ಲ ಇದೀಗ ನಾನಂತೂ ಪತಿರಾಯ ಓಡಾಡುವ ಕಡೆಗಳಲ್ಲೆಲ್ಲ ಬೇವಿನ ಸೊಪ್ಪು ಹಾಸಿದ್ದೆ. ಈ ನಡುವೆ ಬಂದವರೆಲ್ಲ ಬೇವಿನ ಸೊಪ್ಪು ಹಾಕೋದು ಸರಿ, ನೀವು ಅಮ್ಮನಿಗೆ ಮೊಸರನ್ನ ನೈವೇದ್ಯ ಮಾಡಬೇಕಿತ್ತು, ಎಳನೀರು ಅಭಿಷೇಕ ಮಾಡಬೇಕು ಎನ್ನುತ್ತ... ಬಂದಿರೋದು ಯಾವ ಅಮ್ಮ? ದೊಡ್ಡಮ್ಮನಾ? ಸಣ್ಣಮ್ಮನಾ? ಏನೇ ಆಗಲಿ, ನೀವು ಗ್ರಾಮದೇವತೆಗೆ ಪೂಜೆ ಮಾಡಿಸಲೇಬೇಕು ಎಂದು ತೀರ್ಪು ಕೊಟ್ಟರು.

ಅದಾಗಿ ಎರಡು ದಿನಕ್ಕೆ ಬಂದವರು “ಹೀಗೆ ಹೇಳ್ತೀನಿ ಅಂತ ಬೇಸರ ಮಾಡ್ಕೊಬೇಡಿ. ನಿಮ್ಮನೇಲಿ ಇರೋದೆಲ್ಲ ಗಂಡು ದೇವರ ಫೋಟೋಗಳೇ, ಅದಕ್ಕೇ ಅಮ್ಮ ಕೋಪ ಮಾಡ್ಕೊಂಡು ಬಂದಿರಬೇಕು”  ಎಂದುಬಿಟ್ಟರು. ಮೊದಲೇ ಮಗನ ಖಾಯಿಲೆಯಿಂದ ದಿಕ್ಕೆಟ್ಟವರಂತೆ ಆಗಿದ್ದ ನನ್ನ ಮಾವ ಭಾರೀ ಅವಘಡವೊಂದು ನಡೆದು ಹೋದಂತೆ, “ಹೌದಾ”  ಎನ್ನುತ್ತ ತಲೆ ಮೇಲೆ ಕೈ ಹೊತ್ತು ಕೂತೇ ಬಿಟ್ಟರು. ಅವರ ಪರಿಸ್ಥಿತಿ ನೋಡಿ ಬಂದವಗೆ ಏನು ಅನ್ನಿಸಿತೋ “ತಪ್ಪು ಕಾಣಿಕೆ ಕಟ್ಟಿ ಬಿಡಿ, ಎಲ್ಲ ಮುಗಿದ ಮೇಲೆ ಪೂಜೆ ಮಾಡಿಸ್ತೀವಿ ಅಂತ. ಸರಿಯಾಗತ್ತೆ”  ಎಂದು ಸಲಹೆ ಕೊಟ್ಟರು.



ಇತ್ತ ಏಳಲೂ ಆಗದೇ ಮಲಗಲೂ ಆಗದೆ ಒದ್ದಾಡುತ್ತಿದ್ದ ನನ್ನ ಸಂಗಾತಿ ತೀರ ದಯನೀಯವಾಗಿ ನನ್ನನ್ನೊಮ್ಮೆ ನೋಡಿದರು. “ಅಯ್ಯೋ”  ಎನ್ನಿಸಿತಾದರೂ, ಅತಿಯಾದ ಮೌಢ್ಯವನ್ನು ಆಚರಿಸುವುದು ನನ್ನಿಂದ ಸಾಧ್ಯವೇ ಇಲ್ಲ, ಅದೂ ಖಾಯಿಲೆ ವಿಚಾರದಲ್ಲಿ ಎಂದುಕೊಂಡು ಉರಿಗಣ್ಣಿನಲ್ಲಿ ನೋಡಿದೆ. ನನ್ನ ಮಾವ ಸುಮ್ಮನಿರಬೇಕಲ್ಲ ಪೂಜೆಗೆ ಕೊಟ್ಟು ಬರುವ ಸಂಕಲ್ಪ ಮಾಡಿಯೇ ಬಿಟ್ಟರು. ನನ್ನವನ ಮುಖದಲ್ಲಿ ಸಣ್ಣ ನೆಮ್ಮದಿ ಕಾಣಿಸಿತು. ಅಂತೆಯೇ ಏನೊಂದೂ ವಾದಿಸದೆ ಸುಮ್ಮನಾದೆ. ಅದಾದ ನಂತರ ಬಂದವರೊಬ್ಬರಂತೂ ನನ್ನವನ ಬಳಿಯಲ್ಲಿ, “ಸಾರ್ ಅಮ್ಮನ ತರಹ ಅಲಂಕಾರ ಮಾಡಿಕೊಂಡು ಇರುವ ಒಡವೆಗಳೆಲ್ಲ ಹಾಕಿಕೊಂಡು ಬಿಡಿ, ಆಕೆ ತಣ್ಣಗಾಗ್ತಾಳೆ”  ಎಂದರು. ಆ ಕ್ಷಣಕ್ಕೆ ನಗು ಉಕ್ಕಿತಾದರೂ ಮನೆಯವರ ಕೆಂಗಣ್ಣಿಗೆ ಹೆದರಿ ಸುಮ್ಮನಾದೆ. ಅವರು

ಹೋದ ಮೇಲೆ, “ಅದೂ ಒಂದು ಆಗಲಿ, ಏನಂತೀರಿ ಅಣ್ಣ?” ಮಾವನನ್ನು ಕಿಚಾಯಿಸುವುದು ತಪ್ಪಿಸಲಿಲ್ಲ. ನನ್ನವ ಮಾತ್ರ ದಿಗಿಲು ಬಿದ್ದು, “ಬ್ಯಾಡ ಮಹರಾಯ್ತಿ ಈಗಿರೋದು ಸಾಕು” ಎನ್ನುತ್ತ ಪೆಚ್ಚುಹೆಚ್ಚಾಗಿ ನಕ್ಕ.

ಅಂತೂ ಇಂತೂ ಬೆಳಿಗ್ಗೆ ಸಂಜೆ ಎರಡೂ ಹೊತ್ತು ಬೇವಿನ ಸೊಪ್ಪು ಅರೆದು ಹಚ್ಚುತ್ತ, ಆಂಟಿಬಯೋಟಿಕ್‌ಗಳ ನೀಡುತ್ತ ಮೈಯ್ಯ ತುಂಬ ಕ್ಯಾಲಮೈನ್ ಲೋಶನ್ ಬಳಿಯುತ್ತ... ಕೊನೆಗೂ ಹತ್ತು ದಿನಗಳ ನಂತರ ಖಾಯಿಲೆ ಹದಕ್ಕೆ ಬಂದಿತು. “ಅಬ್ಬಾ ಮುಗಿಯಿತು” ಎಂದುಕೊಳ್ಳುವಷ್ಟರಲ್ಲಿ ಸಿಕ್ಕಿದ ಪರಿಚಯಸ್ಥರೊಬ್ಬರು, 'ಏನೇ ಆಗಲಿ, ಅಮ್ಮನನ್ನು ಸರಿಯಾಗಿ ಕಳಿಸಿಕೊಟ್ಟು ಬಿಡಿ. ಇಲ್ಲದಿದ್ದರೆ ಮತ್ತೆ ಅಲ್ಲೇ ಕೂತು ಹಿಂಸಿಸುತ್ತಾಳೆ' ಎಂದರು. 'ಅಮ್ಮ ಎನ್ನುವ ದೇವತೆ ಯಾರನ್ನಾದರೂ ಹಿಂಸಿಸುವುದು ಹೇಗೆ ಸಾಧ್ಯ?” ಎಂದು ನನಗವರನ್ನು ಕೇಳಬೇಕಿನ್ನಿಸಿತ್ತು. ಪುರುಸೊತ್ತಿರಲಿಲ್ಲ. ವೈರಾಣು ಸೋಂಕು ಬಹುಬೇಗ ಹಬ್ಬುತ್ತವೆಯಾದ್ದರಿಂದ ಮನೆಯನ್ನು ಆದಷ್ಟು ಬೇಗ ಸ್ವಚ್ಛಗೊಳಿಸುವ ತುರ್ತು ಹೆಚ್ಚಾಗಿತ್ತು (ಬಹುಶ: ಇದನ್ನೇ ಅಮ್ಮನನ್ನು ಕಳಿಸೋದು ಎನ್ನುತ್ತಾರೇನೋ ಹಿರಿಯರು), ಮಗಳಿಗೆ ಖಾಯಿಲೆ ಹಬ್ಬದಂತೆ ತಡೆಯುವ ಅನಿವಾರತೆಯಿತ್ತು.

ಮಾವ, ಮನೆಯ ಹತ್ತಿರದ ದೇವತೆಗೆ ಪೂಜೆ ಮಾಡಿಸುವ ಆಲೋಚನೆ ಮಾಡಿದರಾದರೂ ಪಕ್ಕದ ಮನೆಯವರೊಬ್ಬರು, “ಸಾರ್ ಅದು ಶಾಂತ ದೇವತೆ. ನೀವು ಉಗ್ರ ದೇವತೆಗೆ ನೈವೇದ್ಯ ಮಾಡಿಸಬೇಕಾದ್ದು” ಎಂದುಬಿಟ್ಟರು. ವಿಧಿ ಇಲ್ಲ, ಕೇಳಿದ ಮೇಲೆ ಮಾಡಲೇಬೇಕು. ತಾವೇ ನೆತ್ತಿ ಕಾಯಿಸಿಕೊಂಡು ಹೋಗಿ ಬಂದರು.

ಇಷ್ಟೆಲ್ಲ ಆಗಿ ಒಂದು ವಾರ ಕಳೆದಿತ್ತು. ಕೇಳಿದವರಿಗೆಲ್ಲ “ಅಮ್ಮನನ್ನು ಕಳಿಸಿಯಾಯಿತು” ಎಂದು ಹೇಳಿ ನೆಮ್ಮದಿಯ ಉಸಿರು ಬಿಟ್ಟಾಗಿತ್ತು. ಅದೇ ಹೊತ್ತಿಗೆ ಮಗಳು ಚಳಿ ಎನ್ನುತ್ತ ಮಲಗಿಯೇ ಬಿಟ್ಟಳು. ಮತ್ತದೇ ಪುನರಾವರ್ತನೆ! ತೀರಾ ಮೊನ್ನೆ ಮೊನ್ನೆ ಬಸ್ ಸ್ಟಾಪಿನಲ್ಲಿ ಸಿಕ್ಕ ಸ್ನೇಹಿತೆಯೊಬ್ಬರು, “ನೀವು ಏನೇ ಹೇಳಿ, ಅಷ್ಟು ಅರ್ಜೆಂಟಾಗಿ ಅಮ್ಮನನ್ನು ಕಳಿಸಬಾರದಿತ್ತು. ಅವಳಿಗೆ ಎಷ್ಟು ದಿನ ಇರಬೇಕು ಅಂತಿತ್ತೋ ಏನೋ, ಅದಕ್ಕೇ ಮತ್ತೆ ಬಂದಿದ್ದು ಅನ್ಸತ್ತೆ” ಎಂದರು. ನಾನು ತಲೆ ಸುತ್ತಿ ಬೀಳುವುದೊಂದು ಬಾಕಿ!

**(ಕಸ್ತೂರಿ, ಡಿಸೆಂಬರ್ ೨೦೦೯).**

## ೪೪. ಅತ್ತೆ ಅಮ್ಮನಾಗುವ ಅಚ್ಚರಿ!

**ಡಾ. ವಸುಂಧರಾ ಭೂಪತಿ**

ಅತ್ತೆ ಸೊಸೆ ಸಂಬಂಧ ಎಂದಾಕ್ಷಣ ನೆನಪಿಗೆ ಬರುವುದು ಕೆರೆಗೆ ಹಾರ ಕಥನದಲ್ಲಿ ಸೊಸೆ, 'ಅತ್ತೆವ್ವ ನಾ ನಮ್ಮ ತವರಿಗೆ ಹೋಗಲೇನು?' ಅಂದಾಗ ಅತ್ತೆ, 'ಸರ್ರನೆ ಹೋಗವ್ವ ಭರ್ರನೆ ಬಾರವ್ವ' ಎಂದ ಮಾತಿನಂತೆ ಹೋಗಿ ಬರುವ ಸೊಸೆ. ಅತ್ತೆ-ಸೊಸೆ ಅಂದರೆ ಹೀಗೇ ಇರಬೇಕು ಎಂಬ ಇಂತಹ ಸಿದ್ಧ ಮಾದರಿಗಳು ನಮ್ಮ ಮುಂದೆ ಹಲವಾರು ಇವೆ. ಸತಿಸಕ್ಕೂಬಾಯಿ, ಹೇಮರೆಡ್ಡಿ ಮಲ್ಲಮ್ಮನ ಕಥೆಗಳಿಂದ ಹಿಡಿದು ತುತ್ತಾ ಮುತ್ತಾ ಸಿನಿಮಾಗಳವರೆಗೆ ಅತ್ತೆ ಸೊಸೆಯರನ್ನು ಕಂಡಿದ್ದೇವೆ. 'ಮಾಡಿದ್ದುಣೋ ಮಾರಾಯ' ಕಾದಂಬರಿಯಲ್ಲಿ ಅತ್ತೆ, ತನ್ನ ಸಂಬಂಧಿ ಸೊಸೆಯಾಗಿ ಬರಲಿಲ್ಲವೆಂದು, ಬಂದ ಸೊಸೆ ಸೀತೆಯ ಮೇಲೆ ಸೇಡು ತೀರಿಸಿಕೊಳ್ಳೋದು, ಸುಬ್ಬಮ್ಮ ಕಾದಂಬರಿಯ ಲಲಿತೆಯ ಪಾಡು, ನಿಸರ್ಗ ಕಾದಂಬರಿಯಲ್ಲಿ ತಾರಾ ಅತ್ತೆಯಿಂದ ಪಡುವ ಕಷ್ಟ.. ಎಲ್ಲವೂ ಸೊಸೆ ಅಂದರೆ ಅತ್ತೆ ಆದೇಶಿಸಿದಂತೆ ನಡೆಯುವ ಪಾತ್ರಗಳೇ ಆಗಿವೆ. ಅತ್ತೆ-ಸೊಸೆ ಕುರಿತಂತೆ ಜಾನಪದದಲ್ಲಿಯಂತೂ ಹಲವಾರು ತ್ರಿಪದಿಗಳು ರೂಪುಗೊಂಡಿವೆ.

ಒಂದು ಕುಟುಂಬದಲ್ಲಿ ಅತ್ತೆ ಸೊಸೆ ಅನ್ಯೋನ್ಯವಾಗಿದ್ದು, ಒಬ್ಬರೊಬ್ಬರು ಬಿಟ್ಟು ಕೊಡುತ್ತಿರಲಿಲ್ಲ. ಒಂದು ಬಾರಿ ಮನೆಗೆ ನೆಂಟರು ಬಂದಿರುತ್ತಾರೆ. ಅವರು ಹೀಗೇ ಮಾತಾಡ್ತಾ ಅತ್ತೆಯ ಬಳಿ ಸೊಸೆಯ ಬಗ್ಗೆ ಕೇಳ್ತಾರೆ. ಆಗ ಅತ್ತೆ, 'ಮಗಳು ಸಕ್ಕರೆ ಇದ್ದಂತೆ, ಸೊಸೆ ಉಪ್ಪು ಇದ್ದಂತೆ' ಎನ್ನುತ್ತಾಳೆ. ಸೊಸೆಯ ಕಿವಿಗೆ ಆ ಮಾತು ಬೀಳುತ್ತದೆ. ಅದನ್ನು ಕೇಳಿ ತುಂಬ ದುಃಖವೆನಿಸುತ್ತದೆ. ಆ ನಂತರದಲ್ಲಿ ಸೊಸೆ - ಮೌನಿಯಾಗ್ತಾಳೆ, ಯಾವ ಕೆಲಸದಲ್ಲಿಯೂ ಆಸಕ್ತಿಯಿರುವುದಿಲ್ಲ. ಅತ್ತೆಯೂ ಸೊಸೆಯ ನಡವಳಿಕೆಯನ್ನು ಗಮನಿಸುತ್ತಿರುತ್ತಾಳೆ. ಆಗ ಅತ್ತೆ ಸೊಸೆಯನ್ನು ಕೂರಿಸಿಕೊಂಡು ಕಾರಣವನ್ನು ಕೇಳುತ್ತಾಳೆ. ಆಗ ಸೊಸೆ ದುಃಖದಿಂದಲೇ ಸಕ್ಕರೆ ಉಪ್ಪಿನ ವಿಷಯ ಹೇಳುತ್ತಾಳೆ. ಆಗ ಅತ್ತೆ ನಗುತ್ತಾ, 'ನೀನು ತಪ್ಪು ತಿಳಿದಿದ್ದೀಯಾ, ಉಪ್ಪು ಇಲ್ಲದೇ ಯಾವ ಅಡುಗೆಯೂ ರುಚಿಸುವುದಿಲ್ಲ. ಉಪ್ಪಿನ ಋಣ ಯಾರೂ ತೀರಿಸಲು ಆಗುವುದಿಲ್ಲ. ನೀನು ಉಪ್ಪಿದ್ದಂತೆ ಅಂದ್ರೆ ನಿನ್ನ ಋಣ ಎಂದಿಗೂ ತೀರಿಸಲು ಸಾಧ್ಯವಿಲ್ಲ. ಈಗ ಹೇಳು ಸಕ್ಕರೆ ಹೆಚ್ಚ, ಉಪ್ಪು ಹೆಚ್ಚ ಅಂತ!' ಎನ್ನುತ್ತಾಳೆ.

ಅತ್ತೆಯಾಗುವುದು ಸುಲಭ. ಆದರೆ ಅತ್ತೆ ಅಮ್ಮನಾಗುವ ಪರಿ ಇದೆಯಲ್ಲ, ಈ ಪಯಣ ಬಲು ಕಷ್ಟದ್ದು. ಕಠಿಣವಾದ ದಾರಿಯದು. ನನ್ನ ಬಂಧುಗಳ, ಸ್ನೇಹಿತರ ಬಹಳಷ್ಟು ಕುಟುಂಬಗಳಲ್ಲಿ ಕಂಡಿರುವಂತೆ ಸೊಸೆಯಾಗಿ ಬಂದವಳು ತಮ್ಮ ಮನೆಗೆ

ಹೊಂದಿಕೊಂಡು ಹೋಗಬೇಕು ಎಂದು ಅಪೇಕ್ಷೆ ಪಡುವ ಅತ್ತೆಯರು, ತಾವು ಅವಳಿಗೆ ಹೊಂದಿಕೊಂಡು ಹೋಗಬೇಕು, ತಮ್ಮ ಮನೆಯ ರೀತಿ, ನೀತಿ, ರಿವಾಜುಗಳನ್ನು ಅವಳಿಗೆ ತಿಳಿಸಿಕೊಡಬೇಕು ಎಂಬುದನ್ನೇ ಮರೆಯುತ್ತಾರೆ. ಇನ್ನು ಕೆಲವು ಅತ್ತೆಯರಂತೂ ಮಗ-ಸೊಸೆ ನಗುನಗುತ್ತ ಸಂತೋಷವಾಗುವುದನ್ನೇ ಸಹಿಸಲಾರರು. ತಮಗಿಲ್ಲದ ಸುಖ ಅವರಿಗೂ ಬೇಡ ಎಂಬ ಸ್ಯಾಡಿಸ್ಟ್ ಮನೋಭಾವ ಅನೇಕರಲ್ಲಿರುತ್ತದೆ. ಮಗನ ಮೇಲೆ ಅಧಿಕಾರ ಚಲಾಯಿಸುವುದು ತಮ್ಮ ಹಕ್ಕು ಎಂದು ಭಾವಿಸಿರುತ್ತಾರೆ. ಮಗನ ಸಂತೋಷಕ್ಕಿಂತ ತಮ್ಮ ಅಧಿಕಾರ ಚಲಾವಣೆ ಅವರಿಗೆ ಮುಖ್ಯವೆನಿಸುತ್ತದೆ. ಸೊಸೆ ಅಂದ್ರೇನೇ ತೊತ್ತಿನ ಹಾಗೆ ಎಂದು ಪರಿಭಾವಿಸಿರುತ್ತಾರೆ. ಅತ್ತೆ, ಸೊಸೆಯ ಸಂಬಂಧ ಮೇಲ್ನೋಟಕ್ಕೆ ಕಂಡು ಬರುವಂತೆ ಸರಳವಾಗಿಲ್ಲ. ತಮ್ಮ ಹೆಣ್ಣುಮಕ್ಕಳಿಗೆ ಅತ್ತೆಯ ಮನೆಯಲ್ಲಿ ಕಷ್ಟ ಇರಬಾರದು, ಅಳಿಯ ಅವಳನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು ಅಂತ ಬಯಸುವವರು, ತಮ್ಮ ಮಗನ ಹೆಂಡತಿಯೂ ಇನ್ನೊಬ್ಬ ತಾಯಿಯ ಮಗಳೇ ಅಲ್ಲವೇ ಎಂಬುದನ್ನು ಮರೆಯುತ್ತಾರೆ. ಪ್ರೀತಿ, ಗೌರವಗಳೆರಡೂ ನಾವು ಇತರರಿಗೆ ಕೊಟ್ಟಷ್ಟೂ ನಮಗೆ ವಾಪಸ್ ಬರುತ್ತವೆ. ಯಾವ ಮನೆಯಲ್ಲಿ ಅತ್ತೆ, ಸೊಸೆ ಪರಸ್ಪರರನ್ನು ಗೌರವಿಸುತ್ತಾರೋ ಅಂತಹ ಮನೆಯೇ ಭೂಮಿಯಲ್ಲಿನ ಸ್ವರ್ಗ, ಮಗ, ಸೊಸೆಯ ಏಳಿಗೆಯಲ್ಲಿಯೇ ಇಡೀ ಮನೆಯ ಉನ್ನತಿ ಅಡಗಿದೆಯೆಂಬ ಸತ್ಯವನ್ನು ಅತ್ತೆ ಮನಗಾಣಬೇಕು.

ನನ್ನ ಅತ್ತೆ ನಾಗಮ್ಮ ಶಾಲೆಯ ಮುಖ ಕಂಡವರಲ್ಲ. ಆದರೆ ಸಹಿ ಮಾಡಬಲ್ಲರು, ಫೋನ್ ನಂಬರ್ ಹೇಳಬಲ್ಲರು, ಮೈಕ್ರೋವೇವ್ ಓವನ್ ಬಳಸಬಲ್ಲರು. ಒಟ್ಟಿನಲ್ಲಿ ಅವರೊಬ್ಬ ಸುಶಿಕ್ಷಿತೆ. ಬಹುಪಾಲು ಜನ ಅಕ್ಷರಸ್ಥರಾಗಿರುತ್ತಾರೆಯೇ ಹೊರತು ಸುಶಿಕ್ಷಿತರಾಗಿರುವುದಿಲ್ಲ. ನನ್ನ ಅತ್ತೆ ಜಾತ್ಯತೀತ ಮನೋಭಾವದವರು. ಅವರ ನಾಲ್ಕು ಮಕ್ಕಳಲ್ಲಿ ಇಬ್ಬರು ಮಕ್ಕಳು ಅಂತರ್ಜಾತಿ ಮದುವೆಯಾದವರು. ನಮ್ಮ ಮದುವೆಯಾಗಿ ೩೫ ವರ್ಷಗಳಾಗುತ್ತಾ ಬಂತು. ನಮ್ಮ ಮದುವೆಯಾದಾಗಿನಿಂದ ಇಲ್ಲಿಯೇ ನಮ್ಮೊಂದಿಗೇ ಇದ್ದಾರೆ. ನಮ್ಮಿಬ್ಬರ ನಡುವೆ ಯಾವತ್ತೂ ಯಾವುದೇ ವಿಷಯಕ್ಕೂ ಭಿನ್ನಾಭಿಪ್ರಾಯ ಉಂಟಾಗಿಲ್ಲ. ನೇರ ನುಡಿಯ ವಿಶಾಲ ಮನೋಭಾವದ ವ್ಯಕ್ತಿತ್ವ ಅವರದು. ನನ್ನ ಸಾಧನೆಯಲ್ಲಿ ಅವರ ಪಾಲು ಬಹಳಷ್ಟಿದೆ. ಅಡುಗೆ, ಮಕ್ಕಳ ಆರೈಕೆಯನ್ನು ಸಂಪೂರ್ಣವಾಗಿ ನೋಡಿಕೊಂಡಿದ್ದಾರೆ. ಎಷ್ಟೋ ಬಾರಿ ಮಧ್ಯಾಹ್ನ ನಾನು ವಿಶ್ರಾಂತಿ ಪಡೆಯುತ್ತಿದ್ದ ಸಮಯದಲ್ಲಿ ಭೂಪತಿಯವರೇ ಫೋನ್ ಮಾಡಿದಾಗಲೂ, "ಡಾಕ್ಟ್ರು ಮಲಗಿದಾರಪ್ಪ ಆಮೇಲೆ ಫೋನ್ ಮಾಡು" ಅಂತ ರಿಸೀವರ್ ಇಟ್ಟು ಬಿಡುತ್ತಿದ್ದರೇ ವಿನಹ ನನ್ನನ್ನು ಎಬ್ಬಿಸುತ್ತಿರಲಿಲ್ಲ. ೨೫ ವರ್ಷಗಳ ಹಿಂದಿನ ಮಾತು. ಆಗ ಮೊಬೈಲ್ ಇನ್ನೂ ನಮ್ಮ ಬದುಕನ್ನು ಪ್ರವೇಶಿಸಿರಲಿಲ್ಲ.

**ಹತ್ತು ಕೊಳಗ ಬತ್ತ, ಬತ್ತದ ಬಾವಿ ನೀರ**

**ಮತ್ತೇಳ ಅತ್ತೆಮ್ಮ ಕೆಲಸವಾ, ಸೊಸೆ ಮುದ್ದಿ**

ದುಂಡು ಮಲ್ಲಿಗೆ ಸರವ ಮುಡಿ ಬಾರೆ ಸೊಸೆ ಮುದ್ದಿ

ಹಾಲೋಗರದನ್ನ ಉಣ ಬಾರೆ



ಇದು ಅತ್ತೆ ಸೊಸೆಯ ಅನ್ನೋನ್ಯತೆಯನ್ನು ಸಾರುತ್ತದೆ. ಒಮ್ಮೆ ನನ್ನ ಮೈದುನ ಅವನ ಪತ್ನಿಯೊಂದಿಗೆ ಜಗಳವಾಡಿಕೊಂಡು ಬಂದಾಗ ನನ್ನತ್ತೆ ಹೇಳಿದ್ದು ಹೀಗೆ, "ನೀನೇ ಏನೋ ತಪ್ಪು ಮಾಡಿರುತ್ತೀಯಾ, ಅವಳು ಜಗಳ ಮಾಡಿರುತ್ತಾಳೆ. ನಿನ್ನನ್ನು ನೀನು ಸರಿ ಮಾಡಿಕೊ" ಎಂದಿದ್ದು ನಾನೆಂದಿಗೂ ಮರೆಯಲಾರೆ. ಅವರಿಗೆ ಹೆಣ್ಣುಮಕ್ಕಳಿರದಿದ್ದರೂ ಸೊಸೆಯರ ಬಗ್ಗೆ ಅಪಾರ ಕಾಳಜಿ ಮತ್ತು ಪ್ರೀತಿ, ಯಾವುದೇ ಕೆಲಸವಿರಲಿ ಶ್ರದ್ಧೆಯಿಂದ ಮಾಡಬೇಕೆನ್ನುವುದು ಅವರ ನಿಲುವು. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಮಾತು ಅವರಿಗೆ ಅನ್ವರ್ಥಕವಾದದ್ದು. ಹಬ್ಬ ಹರಿದಿನಗಳಲ್ಲಂತೂ ಬೆಳಗ್ಗೆ ಬೇಗನೆ ಎದ್ದು ಹೋಳಿಗೆ ತಯಾರಿಸಲು ಬೇಳೆ ಬೇಯಲು ಇಟ್ಟಿರುತ್ತಿದ್ದರು.

ಅವರಲ್ಲಿ ನನಗೆ ಇಷ್ಟವಾದ ಗುಣವೆಂದರೆ ಜಗತ್ತಿನ ಓಟದ ಜೊತೆಗೆ ಅವರ ನಡಿಗೆಯೂ ಇದೆ. ಆಧುನಿಕತೆಗೆ ತೆರೆದುಕೊಳ್ಳುವ ಮನೋಭಾವ, ಸ್ತ್ರೀವಾದವನ್ನು ಓದದೆಯೇ ಸ್ತ್ರೀವಾದಿಯಾಗಿರುವುದು. ಬುದ್ಧ, ಬಸವಣ್ಣ, ಅಂಬೇಡ್ಕರ್, ಗಾಂಧಿಯವರನ್ನು ಓದದಿದ್ದರೂ ಮಾನವೀಯತೆಯನ್ನೇ ಬದುಕಾಗಿಸಿಕೊಂಡವರು ಅವರು. ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನನ್ನ ಎರಡನೇ ಮೈದುನ ಹೃದಯಾಘಾತದಿಂದ ನಿಧನ ಹೊಂದಿದಾಗ ಅವನಿಗೆ ನಲವತ್ತು ವರ್ಷಗಳು ಅಷ್ಟೇ. ಅವನ ಪತ್ನಿಗೆ ಮೂವತ್ತು ವರ್ಷ ಇರಬೇಕು. ನನ್ನತ್ತೆಗೂ ಮಗನ ಸಾವು ಅಘಾತವನ್ನೇ ತಂದಿದ್ದರೂ, ಸೊಸೆಗೆ ಧೈರ್ಯ, ಸಾಂತ್ವನ ಹೇಳುತ್ತ, "ನೋಡಮ್ಮ ನೀನು ಮನೆಯಲ್ಲೇ ಇದ್ದರೆ ನೋವು ಇನ್ನೂ ಹೆಚ್ಚಾಗುತ್ತದೆ. ಓದು ಮುಂದುವರೆಸು. ಕೆಲಸಕ್ಕೆ ಸೇರು. ಒಳ್ಳೆ ಹುಡುಗನನ್ನು ನೋಡಿ ಮದುವೆಯಾಗಬೇಕು. ನಾವೇ ನಿಂತು ಮದುವೆ ಮಾಡಿಸುತ್ತೇವೆ" ಎಂದರು. ಆ ಮಾತನ್ನು ಕೇಳಿ ನನ್ನ ಓರಗಿತ್ತಿಯ ತಾಯಿಯೇ ಆಶ್ಚರ್ಯಚಕಿತರಾದರು.

ತಮ್ಮ ಮಗನ ಬಗ್ಗೆ ಅಂದರೆ ನನ್ನ ಪತಿ ಭೂಪತಿಯವರ ಬಗ್ಗೆ ತುಂಬ ಹೆಮ್ಮೆ, ಅಭಿಮಾನ. ಇಂತಹ ಮಗ ಯಾರಿಗೂ ಹುಟ್ಟಲಾರ ಎನ್ನುತ್ತಾರೆ. ಅವರು ಕೂಡ ಅಮ್ಮನ ಬಗ್ಗೆ ಅಷ್ಟೇ ಪ್ರೀತಿ, ಕಾಳಜಿ ಹೊಂದಿದ್ದರು. ಇಡೀ ಬದುಕನ್ನು ಹೊಲ, ಮನೆಗಳನ್ನು ಸಂಭಾಳಿಸುವುದರಲ್ಲಿ ನಿರತರು. ಮಾವ ದೊಡ್ಡಪ್ಪನವರು ಜಮೀನ್ದಾರೀ

ಮನೋಭಾವದವರು. ಸದಾ ಗತ್ತಿನಲ್ಲೇ ಇರುತ್ತಿದ್ದವರು. ಅವರಿಗೆ ಬಯಲಾಟದಲ್ಲಿ ಪಾತ್ರ ಮಾಡುವ ಹುಚ್ಚು. ಬೇಸಿಗೆ ಬಂತೆಂದರೆ ಬಯಲಾಟ ಕಲಿಯಲು ತಮ್ಮ ಮನೆಯ ಪಡಸಾಲೆಯನ್ನೇ ಬಿಟ್ಟು ಕೊಡುತ್ತಿದ್ದರು. ನಟಿಯರನ್ನು ಬೇರೆ ಬೇರೆ ಊರುಗಳಿಂದ ಕರೆಸಿ ಮನೆಯಲ್ಲೇ ಇರಿಸಿ ಕೊಳ್ಳುತ್ತಿದ್ದರು. ಆ ನಟಿಯರಲ್ಲಿ ಮಾವನವರಿಗೆ ಒಬ್ಬ ನಟಿ ತುಂಬ ಹತ್ತಿರವಾಗಿದ್ದಳು. ಅತ್ತೆಯವರು ಆಕೆಗೆ ಎಷ್ಟೋ ಬಾರಿ ಸ್ನಾನ ಮಾಡಲು ಬಿಸಿ ನೀರು ಕಾಯಿಸಿಕೊಟ್ಟು, ಅಡುಗೆ ಮಾಡಿ ಊಟ ಬಡಿಸಬೇಕಾಗಿತ್ತು. ಅತ್ತೆಯವರಿಗೆ ತನ್ನ ಗಂಡನೊಂದಿಗೆ ಆಕೆಯ ಸಂಬಂಧ ಗೊತ್ತಿದ್ದರೂ ಅತ್ತೆಯವರು ಗಂಡನಿಗೆ ಎದುರು ಮಾತನಾಡುತ್ತಿರಲಿಲ್ಲ! ಅವರಿಬ್ಬರ ಸಂಬಂಧ ಅತಿರೇಕಕ್ಕೆ ಹೋಗಿ ೪ ಎಕರೆ ಹೊಲ ನೀಡಬೇಕೆಂದು ಮಾವ ನಿರ್ಧರಿಸಿದ್ದರು. ನಮ್ಮತ್ತೆ ಕೊಡುವುದಿಲ್ಲ



ಅಂತ ಹಠ ಮಾಡಿದ್ದರಂತೆ. ಕೊನೆಗೆ ನಮ್ಮ ಮಾವ ಪಂಚಾಯಿತಿ ಸೇರಿಸುವೆ ಎಂದಾಗ ಅತ್ತೆ, “ಆಕೆ ನಿಮ್ಮೊಂದಿಗೆ ಒಂದು ವರ್ಷ ಇರಲಿ, ನಂತರ ನಾನೇ ಆಕೆಯ ಹೆಸರಿಗೆ ರಿಜಿಸ್ಟರ್ ಮಾಡಿಸಿ ಕೊಡುವೆ” ಎಂದರಂತೆ. ಆ ಕರಾರಿಗೆ ಮಾವನವರು ಒಪ್ಪಿದರಂತೆ. ನಂತರ ಆರು ತಿಂಗಳಲ್ಲಿಯೇ ಆಕೆಯೊಂದಿಗೆ ಸಂಬಂಧ ಹಳಸಿತಂತೆ. ಅದನ್ನು ನೆನಪಿಸಿಕೊಂಡು ಆಗಾಗ ಹೇಳುತ್ತಲೇ ಇರುತ್ತಾರೆ. 'ಮಾವನ ಕಾಟವನ್ನು ಸಹಿಸಿಕೊಂಡು ಹೇಗೆ ಇದ್ರಿ? ನೀವು ಜಗಳ

ಮಾಡುತ್ತಿರಲಿಲ್ವ?' ಎಂದರೆ, 'ಜಗಳ ಮಾಡಿ ಎಲ್ಲಿ ಹೋಗಲಿ? ನಾಲ್ಕು ಮಕ್ಕಳ ಬದುಕು ಮೂರಾಬಟ್ಟೆಯಾಗುತ್ತಿತ್ತು. ಅವರಿಗೋಸ್ಕರ ಎಲ್ಲವನ್ನೂ ಸಹಿಸಿಕೊಂಡು ಬದುಕು ನಡೆಸಬೇಕಾಗಿತ್ತು. ನಾನೇನು ಓದಿದ್ದೀನಾ? ಬರೆದಿದ್ದೀನಾ? ಆಸ್ತಿ ಇಲ್ಲ, ಹಣ ಇಲ್ಲ, ಹೊರಗೆ ಹೋಗಿ ಜೀವನ ನಡೆಸುವುದು ಹೇಗೆ?' ಎನ್ನುತ್ತಾರೆ. ನಮ್ಮ ಮನೆ ಯಾವಾಗಲೂ ಜನರಿಂದ ತುಂಬಿರುತ್ತಿತ್ತು. ೮ ರಿಂದ ೧೦ ಜನ ಮನೆಯಲ್ಲಿ ಇದ್ದೇ ಇರುತ್ತಿದ್ದರು. ಇದಲ್ಲದೇ ಭೇಟಿ ಕೊಡುತ್ತಿದ್ದವರೂ ಇದ್ದೇ ಇರುತ್ತಿದ್ದರು. ಸದಾ ಒಲೆ ಉರಿಯುತ್ತಿತ್ತು. ರಾತ್ರಿ ಎಷ್ಟೊತ್ತಿಗೆ ಯಾರೇ ಬಂದರೂ ಊಟವಿಲ್ಲದೇ ಕಳುಹಿಸುತ್ತಿರಲಿಲ್ಲ.

**ಅತ್ತೆ ಮುತ್ತಿನ ಸರವೇ ಮಾವ ಮಲ್ಲಿಗೆ ಹೂವು**

**ಬಂಗಾರ ಹೋಲ್ವ ಹಿರಿಭಾವ ನಮ್ಮನಿಯ**

**ಅರ(ರಿ)ಸಿನ ಕೆನಿಯೇ ಅರಸ(ಸಾ)ರು.**

ಹಾಂ! ಮತ್ತೊಂದು ವಿಚಾರ ಹೇಳಲೇಬೇಕು, ಅವರ ಬುದ್ಧಿವಂತಿಕೆ ಬಗ್ಗೆ ಹೇಳಲೇಬೇಕು. ನನ್ನ ಮಗನ ಮದುವೆಯ ದಿನ ಮನೆಯಿಂದ ಮದುವೆ ನಡೆದ ಸ್ಥಳಕ್ಕೆ ಕಾರಿನಲ್ಲಿ ಹೋದೆವು. ನಾನು, ಅತ್ತೆ, ಅಮ್ಮ, ಮಗ ಅಭಿಮನ್ಯು ಮತ್ತು ಡ್ರೈವರ್ ಯೋಗೇಶ್ ಇದ್ದೆವು. ಸ್ಥಳ ತಲುಪಿದ ಮೇಲೆ ನಾವೆಲ್ಲ ಕಾರಿನಿಂದ ಇಳಿದು ಅವರನ್ನು ಇಳಿಸಿಕೊಳ್ಳೋಣವೆಂದಾಗ, ಡೋರ್ ಎಲ್ಲಾ ಲಾಕ್ ಆಗಿ ಬಿಟ್ಟಿತ್ತು. ಡ್ರೈವರ್ ಕೂಡ ಮುಂಚೆಯೇ ಇಳಿದುಬಿಟ್ಟಿದ್ದ. ಕಿಟಕಿಗಳು ಕ್ಲೋಸ್ ಆಗಿದ್ದವು. ಕೀ ಒಳಗೇ ಇತ್ತು. ಒಳಗೆ ಅಮ್ಮ, ಅತ್ತೆ ಇಬ್ಬರೂ ಸಿಕ್ಕಿಕೊಂಡಿದ್ದರು. ನನಗೆ ಬೆವರಲು ಶುರುವಾಯಿತು. ಹೊರಗಿನಿಂದ ನನ್ನ ಮಗ ಇಂತಹ ಬಟನ್ ಒತ್ತಿ ಅಂತ ನನ್ನ ಅಮ್ಮ ಮತ್ತು ಅತ್ತೆಗೆ ಹೇಳುತ್ತಲೇ ಇದ್ದ. ಅವರಿಗೆ ಯಾವ ಬಟನ್ ಅಂತ ತಿಳಿಯುತ್ತಿಲ್ಲ. ಹೀಗೆ ಹತ್ತು ನಿಮಿಷ ಕಳೆಯಿತು. ಭಯ ಶುರುವಾಯಿತು. ಒಳಗೆ ಗಾಳಿ ಇಲ್ಲದೆ ಉಸಿರುಗಟ್ಟಿದರೆ ಎಂಬ ಆತಂಕ. ಆಗ ಅತ್ತೆಯವರೇ ಬಟನ್ ಪ್ರೆಸ್ ಮಾಡಿದರು. ಕಿಟಕಿ ತೆರೆದುಕೊಂಡಿತು. ನಮ್ಮೆಲ್ಲರ ಆತಂಕ ದೂರವಾಯಿತು. ಅಂತಹ ಅನಾರೋಗ್ಯದ ಸಮಯದಲ್ಲೂ ಅವರು ಸರಿಯಾಗಿ ಅರ್ಥ ಮಾಡಿಕೊಂಡಿದ್ದು ಸೋಜಿಗವೇ ಸೈ. ಅಂದರೆ ಸದಾ ಅವರ ಮೆದುಳು ಮತ್ತು ಮನಸ್ಸು ವರ್ತಮಾನದ ಸಂಗತಿಗಳಿಗೆ ತೆರೆದುಕೊಂಡಿರುತ್ತದೆ ಎಂಬುದಕ್ಕೆ ಸಾಕ್ಷಿ ಇದು. ಕಾರಿನಲ್ಲಿ ಓಡಾಡುವಾಗ ಬಟನ್‌ಗಳ ಬಗ್ಗೆ ಅವರು ತಿಳಿದುಕೊಂಡಿದ್ದರು. ಅಮ್ಮ ಕೂಡ ಕಾರಿನಲ್ಲಿ ಓಡಾಡಿದರೂ ಬಟನ್‌ಗಳ ಕಡೆಗೆ ಗಮನ ಕೊಟ್ಟವರಲ್ಲ. ಅಮ್ಮ, ಅತ್ತೆ ಇಬ್ಬರೂ ಒಳ್ಳೆಯ ಸ್ನೇಹಿತೆಯರು. ಅಮ್ಮನಿಂದ ಮೆಂತ್ಯ ಹಿಟ್ಟು, ಚಟ್ನಿಪುಡಿ,

ಬೇಸನ್ ಲಾಡು ಮಾಡುವುದನ್ನು ಅತ್ತೆ ಕಲಿತರೆ, ಅತ್ತೆ ತಯಾರಿಸುವ ಮಾದ್ಲಿ, ಕರ್ಜಿಕಾಯಿ, ಎಣ್ಣೆ ಹೋಳಿಗೆ ಅಮ್ಮ ಇಷ್ಟಪಟ್ಟು ಸವಿಯುತ್ತಾರೆ. ಅತ್ತೆಯಲ್ಲಿ ವೈಚಾರಿಕ ಮನೋಭಾವ ಇದೆ. ಅವರೆಂದೂ ಬಂಗಾರದ ಒಡವೆಗಳಿಗೆ, ರೇಷ್ಮೆ ಸೀರೆಗಳಿಗೆ ಆಸೆಪಟ್ಟವರಲ್ಲ. ಇನ್ನೊಬ್ಬರನ್ನು ನೋಡಿ ಕರಬುವುದೂ ಇಲ್ಲ. ನಮ್ಮ ಮನೆಯ ಕೆಳಭಾಗದಲ್ಲಿಯೇ ಪಂಚಕರ್ಮ ಚಿಕಿತ್ಸಾ ಕೇಂದ್ರ ನಡೆಸುತ್ತಿದ್ದೆ. ನಾನು ಕ್ಲಿನಿಕ್‌ಗೆ ಹೋದ ಮೇಲೆ ಮತ್ತು ಹೊರಗೆ ಕಾರ್ಯಕ್ರಮಗಳಿಗೆ ಹೋದಂತಹ ಸಮಯದಲ್ಲಿ ಅವರೇ ಎಲ್ಲದರ ಮೇಲ್ವಿಚಾರಣೆ ನಡೆಸುತ್ತಿದ್ದರು. ಚಿಕಿತ್ಸೆಗೆ ಬರುತ್ತಿದ್ದವರ ಜೊತೆ ಮಾತನಾಡುತ್ತಿದ್ದರು. ಗರ್ಭಿಣಿಯರಿಗೆ ನೀಡುವ ಹೊಂಬಾಳೆ ಔಷಧಿಗೆ ಬೇಕಾಗುವುದನ್ನು ತಯಾರಿಸುವುದು, ಹೊಂಬಾಳೆಯನ್ನು ಪರೀಕ್ಷೆ ಮಾಡುವುದು ಎಲ್ಲವನ್ನೂ ಕಲಿತರು.

ಒಮ್ಮೆ ಅಮ್ಮ, ಮಗ ಇಬ್ಬರೂ ಬೆಂಗಳೂರಿನಿಂದ ತೋರಣಗಲ್ಲಿಗೆ ಹೋಗುವಾಗ ಬಸ್‌ಸ್ಟಾಪ್‌ನಲ್ಲಿ ಬಸ್ ಹತ್ತುವ ಸಮಯದಲ್ಲಿ ಅತ್ತೆಯವರು ಹಿಂದೆ ಉಳಿದಿದ್ದಾರೆ. ಜನವೋ ಜನ. ಮುಂದೆ ಹೋದ ಭೂಪತಿಯವರು ಅಮ್ಮನನ್ನು ಕಾಣದೆ ಕಂಗಲಾಗಿ ಎಲ್ಲೆಡೆ ಹುಡುಕಾಡುತ್ತ ದುಃಖದಿಂದ ಅನೌನ್ಸ್ ಮಾಡಿಸಬೇಕೆಂದು ಹೋಗುತ್ತಿರುವಾಗ ಅತ್ತೆಯವರು ಆತಂಕದಿಂದ ಇರುವೆಯಂತೆ ಹರಿದಾಡುವ ಜನರನ್ನು ನೋಡುತ್ತಾ ಪೊಲೀಸರ ಬಳಿ ಹೋಗಿ ಹೇಳಬೇಕೆಂದು ಯೋಚಿಸುತ್ತಿದ್ದರಂತೆ. ಅಷ್ಟರಲ್ಲಿ ಅಮ್ಮ ಮಗನ ಭೇಟಿಯಾಗಿ ಸುಖಾಂತ್ಯವಾಯಿತು.

ಅತ್ತೆ-ಸೊಸೆ ಸಂಬಂಧ ಎಣ್ಣೆಸೀಗೆಕಾಯಿಯತರ ಇರುವುದೇ ಹೆಚ್ಚು.

ಕಣ್ಣಿಗೆ ಕಸಬಿದ್ದು ಹಾಲಾಗೆ ನೊಣಬಿದ್ದು

ಅತ್ತೆಗು ಸೊಸೆಗು ಹಗೆ ಬಿದ್ದೋ, ದೇವಾರೆ

ಕಣ್ಣಿನ ಕಸವ ತೆಗೀಬೇಕು – ಎಂದು ಆಡಿಕೊಳ್ಳುವವರೇ ಹೆಚ್ಚು.

ನನ್ನ ಅತ್ತೆಯವರಿಗೆ ಐದಾರು ವರ್ಷಗಳ ಹಿಂದೆ ಸಕ್ಕರೆ ಕಾಯಿಲೆ ಶುರುವಾಯಿತು. ಅವರಿಗೆ ಸಕ್ಕರೆ, ಉಪ್ಪು ಎರಡೂ ತುಂಬ ಇಷ್ಟ. ಅಡುಗೆಗೆ ಹಾಕಿದ್ದಲ್ಲದೇ ಮೇಲೆ ಮತ್ತಷ್ಟು ಉಪ್ಪು ಉದುರಿಸಿ ಕೊಳ್ಳುತ್ತಾರೆ. ಕಾಫಿ, ಟೀಗೆ ನಾವು ಹಾಕಿದ ಒಂದು ಚಮಚೆ ಸಕ್ಕರೆ ಸಾಲದೇ ಮತ್ತೊಂದು ಚಮಚೆ ಹಾಕಿಕೊಳ್ಳುವ ಅಭ್ಯಾಸ ಅವರದು. ಸಕ್ಕರೆಯಿಲ್ಲದೆ ಕಾಫಿ, ಟೀ ಕುಡಿಯಬೇಕೆಂದಾಗ ತುಂಬಾ ಹಠ ಮಾಡಿದರು. ಸಾಧ್ಯವಿಲ್ಲ, ಸಕ್ಕರೆ ಬೇಕೇ ಬೇಕು ಅಂದರು. ಆಗ ನಾನು, ಭೂಪತಿಯವರು ಇಬ್ಬರೂ ನಾವೂ ಸಕ್ಕರೆ ಬಿಟ್ಟು ಬಿಡುತ್ತೇವೆ. ನಾವೂ ಪ್ರತಿದಿನ ಸಕ್ಕರೆಯಿಲ್ಲದ ಕಾಫಿ, ಟೀ ಕುಡಿಯುತ್ತೇವೆಂದು ಅವರೊಂದಿಗೆ ಅದನ್ನೇ ಕುಡಿಯಲು ಆರಂಭಿಸಿದೆವು. ನಂತರ ಅವರೂ ಅದಕ್ಕೆ ಒಗ್ಗಿಕೊಂಡರು. ಈಗ ಸಕ್ಕರೆಯಿಲ್ಲದ ಕಾಫಿ, ಟೀ ಅಭ್ಯಾಸವಾಗಿ ಅಪ್ಪಿತಪ್ಪಿ ಯಾರಾದರೂ ಸಕ್ಕರೆ ಹಾಕಿದ್ದನ್ನು ಕೊಟ್ಟರೆ ಒಂದು ಗುಟುಕು

ಕುಡಿದು ನಾನಿದನ್ನು ಕುಡಿಯುವುದಿಲ್ಲ! ಎಂದು ವಾಪಸ್ ಕೊಟ್ಟು ಬಿಡುತ್ತಾರೆ. ಯಾವುದೇ ವಿಷಯ, ವಿಚಾರವಾಗಲಿ ತೆರೆದ ಮನಸ್ಸಿನಿಂದ ಕೇಳುತ್ತಾರೆ. ಆಧುನಿಕತೆಗೆ, ಜಾಗತಿಕ ವಿಚಾರಗಳಿಗೆ ಸ್ಪಂದಿಸುತ್ತಾರೆ. ಕೌಟುಂಬಿಕ ನೆಲೆಯಲ್ಲಿ ಜರುಗುತ್ತಿರುವ ವಿದ್ಯಮಾನಗಳನ್ನು ಗಮನಿಸುತ್ತಾರೆ.



ಸಂಬಂಧಿಯೊಬ್ಬರ ಮಗಳ ಗಂಡ ಅವಳಿಗೆ ಕಿರುಕುಳ ಕೊಡುತ್ತಿದ್ದ. ಅವಳಿಗೆ ತುಂಬ ಮಾನಸಿಕ ಹಿಂಸೆ ಕೊಡುತ್ತಿದ್ದ. ಅವಳ ಸಂಬಳ ಎಲ್ಲವನ್ನೂ ಅವನಿಗೆ ಕೊಡಬೇಕೆಂದು ಪೀಡಿಸಿ ಕಿತ್ತುಕೊಳ್ಳುತ್ತಿದ್ದ. ಈ ವಿಷಯ ಕೇಳಿದ ನನ್ನತ್ತೆಯ ಪ್ರತಿಕ್ರಿಯೆ, 'ಕಷ್ಟಪಟ್ಟು ಊಟ, ನಿದ್ದೆ ಬಿಟ್ಟು ಓದಿ ಇಂಜಿನಿಯರ್ ಆಗಿ ಕೆಲಸ ಸಂಪಾದಿಸಿ ಸಂಬಳ ಯಾಕೆ ಅವನಿಗೆ ಕೊಡಬೇಕು? ದುಡಿಯವುದು ಇವಳು, ಸಂಬಳ ಅವನಿಗಂದ್ರೆ ಹೇಗೆ? ಹೀಗೇ ಜಗಳ ಮಾಡುತ್ತಿದ್ದರೆ ಡೈವೋರ್ಸ್ ಕೊಟ್ಟು ಬಿಡು, ಹಣಕೋಸ್ಕರ ನಿನ್ನನ್ನು ಮದುವೆಯಾಗಿದ್ದ ಅವನು? ಅವನೆಂತಹ ಗಂಡಸು!' ಅಂತ ಹೇಳಿದನ್ನು ಕೇಳಿ ಅವರ ಮನೆಯವರೆಲ್ಲ ಆಶ್ಚರ್ಯಪಟ್ಟರು.

ಈಗ ೧೫ ವರ್ಷಗಳ ಹಿಂದೆ ಅಂದ್ರೆ ಅತ್ತೆಯವರಿಗಾಗ ೬೫ ವರ್ಷ ವಯಸ್ಸು. ಈಗ ಅವರಿಗೆ ೮೩ ವರ್ಷ. ಅತ್ತೆ ಹಾಗೂ ಅವರ ತಂಗಿ ಇಬ್ಬರೂ ಸೇರಿ ತಮ್ಮನ ಬಳಿ ಹೋಗಿ ಒಂದೊಂದು ಎಕರೆ ಹೊಲ ಕೇಳಿದ್ದಾರೆ. ಅವನು ಕೊಡಲು ಒಪ್ಪಿಲ್ಲ. ಆಗ ತಮ್ಮನ ಮೇಲೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೇಳಿ ಕೋರ್ಟ್ ಮೆಟ್ಟಿಲೇರಿದರು. ಇಬ್ಬರೂ ಸೇರಿ ನ್ಯಾಯಾಲಯಕ್ಕೆ ಹೋದರು. ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಪಾಲು ಇದೆ ಎಂಬ ಕಾನೂನಿನ ಅರಿವು ಅವರಿಗಿದ್ದುದರಿಂದ ಕೇಸ್ ಹಾಕಿದರು. ಎರಡು ಮೂರು ವರ್ಷ ಕೇಸ್ ನಡೆಯಿತು. ಕೇಸ್ ಹಾಕಿದ ಮೇಲೆ ಅವರ ತಮ್ಮ ಮತ್ತು ಕುಟುಂಬದವರೆಲ್ಲರೂ ಬಂದು ಒಂದು ಎಕರೆ ಹೊಲ ಕೊಡ್ತೀವಿ ಕೇಸ್ ವಾಪಸ್ ತೆಗೆದುಕೊಳ್ಳಿ ಎಂದರು. ಆದರೆ ಇವರು ಅದಕ್ಕೆ ಒಪ್ಪಲಿಲ್ಲ. ನಂತರ ಇಬ್ಬರಿಗೂ ಅಂದರೆ ಅತ್ತೆಯವರಿಗೆ ಮತ್ತು ಅವರ ತಂಗಿಗೆ ತಲಾ ಎರಡು ಎಕರೆ ಹೊಲ ಕೊಡಬೇಕೆಂದು ನ್ಯಾಯಾಲಯದಿಂದ ಆದೇಶವಾಯಿತು.

ಅತ್ತೆಯ ಪ್ರೀತಿ, ಅಂತಃಕರಣ, ಅಭಿಮಾನ ಎಲ್ಲವನ್ನೂ ಸಮೃದ್ಧವಾಗಿ ಉಂಡಿರುವ ನಾನು ಈಗ ಅತ್ತೆಯಾಗಿದ್ದೇನೆ. ಕಳೆದ ನವೆಂಬರ್ (೦೩.೧೧.೨೦೧೯)ನಲ್ಲಿ ಮಗ ಅಭಿಮನ್ಯುವಿನ ಮದುವೆಯಾಯಿತು. ಅವನು, ದಿವ್ಯಾ ಪ್ರೀತಿಸಿದರು. ಮಂತ್ರಮಾಂಗಲ್ಯದ ಮದುವೆ ಮಾಡಿದೆವು. ದಿವ್ಯಾ ಸೊಸೆಯಾಗಿ ಮನೆಯನ್ನು ತುಂಬಿದ್ದಾಳೆ. ಅಭಿಮನ್ಯುವಿನ ಪ್ರೀತಿಗೆ ಮನ ಸೋತಿದ್ದ ದಿವ್ಯಾ, ಈ ಆರು ತಿಂಗಳಲ್ಲಿ ತನ್ನ ನಡೆನುಡಿಯಿಂದ ನಮ್ಮೆಲ್ಲರ ಮನ ಗೆದ್ದಿದ್ದಾಳೆ. ಅತ್ತೆಯವರಿಗೆ ಮುದ್ದಿನ ಮೊಮ್ಮಗಳಾಗಿದ್ದಾಳೆ. ದಿವ್ಯ ಭರತನಾಟ್ಯ ಕಲಾವಿದೆ, ಎಂ.ಟೆಕ್ ಪದವೀಧರೆ.

ಅವಳು ಮದುವೆಗೆ ಮುಂಚೆ ನಡೆಸುತ್ತಿದ್ದ ಡ್ಯಾನ್ಸ್ ಕ್ಲಾಸ್, ಕಾರ್ಯಕ್ರಮಗಳು ಎಲ್ಲವನ್ನೂ ಮುಂದುವರೆಸಿದ್ದಾಳೆ. ಅವಳ ವ್ಯಕ್ತಿತ್ವ ನಮ್ಮ ಮನೆಯಲ್ಲಿ ಇನ್ನಷ್ಟು ಬೆಳಗಲು ಏನು ಬೇಕೋ ಅಂತಹ ಅವಕಾಶಗಳನ್ನು ಕಲ್ಪಿಸಿ ಕೊಡಬೇಕೆಂಬುದೇ ನನ್ನ ಬಯಕೆ. ನನ್ನ ಅತ್ತೆ ನಾಗಮ್ಮ ಹೇಗೆ ನನಗೆ ಅಮ್ಮನಾದರೋ ಅಂಥದ್ದೇ ಪರಂಪರೆಯ ಪಯಣವನ್ನು ನಾನೀಗ ಮುಂದುವರಿಸುತ್ತಿದ್ದೇನೆ. ನಾನು ಕೂಡ ಅದರಲ್ಲಿ ಯಶಸ್ವಿಯಾಗುತ್ತೇನೆನ್ನುವ ನಂಬಿಕೆ, ಭರವಸೆ ನನಗಿದೆ.

**(ಸಮಾಜಮುಖಿ' ಮಾಸಪತ್ರಿಕೆ, ನವೆಂಬರ್ ೨೦೨೦)**

## ೪೫. ಜಾಹೀರಾತುಗಳು

### ಮಾಲತಿ ಮುದಕವಿ

ಇಡೀ ವಿಶ್ವದಲ್ಲಿಯೇ ಮೋಹಕ ಹಾಗೂ ಮಾಯಾಜಾಲದ ಪ್ರಪಂಚವೆಂದರೆ ಅದು ಜಾಹೀರಾತಿನ ಜಾಲ, ಉತ್ಪಾದಕರು ತಾವು ಉತ್ಪಾದಿಸಿದ ವಸ್ತುಗಳನ್ನು ಉದ್ದೇಶಪೂರ್ವಕವಾಗಿ ಮಾರಾಟ ಮಾಡಲು ಗ್ರಾಹಕರಿಗೆ ವಸ್ತುಗಳ ಬಗ್ಗೆ ಮಾಹಿತಿ ತಿಳಿಸಲು ಹಲವು ತಂತ್ರಗಳನ್ನು ಉಪಯೋಗಿಸಿ ಅವರ ಮನ ಒಲಿಸಿ ಖರೀದಿಸುವಂತೆ ಮಾಡುವ ಸಮೂಹ ಮಾಧ್ಯಮಗಳೇ ಜಾಹೀರಾತುಗಳು. ಇವುಗಳಲ್ಲಿ ಮಾರುಕಟ್ಟೆಯ ದೃಷ್ಟಿಕೋನ ಇರುವುದರಿಂದ ಮಾರುಕಟ್ಟೆ ಕೇಂದ್ರಿತವಾಗಿ ಯಾವ ಯಾವ ತಂತ್ರಗಳನ್ನು ಉಪಯೋಗಿಸಿದರೆ ಸಮಾಜವು ತನ್ನನ್ನು ಸ್ವೀಕರಿಸಬಹುದೋ ಅಂಥ ತಂತ್ರಗಳನ್ನೆಲ್ಲ ಬಳಸಿಕೊಂಡು ತಮ್ಮ ಉದ್ದೇಶ ಪೂರೈಸಿಕೊಳ್ಳುತ್ತವೆ. ಮಾಧ್ಯಮದ ಗುಣವೇ ಬದಲಾವಣೆ. ಹೀಗಾಗಿ ಅದು ತನ್ನ ಅಸ್ತಿತ್ವಕ್ಕಾಗಿ ನಿರಂತರ ಕ್ರಿಯಾಶೀಲತೆಯಿಂದ ಅನೇಕ ತಂತ್ರಗಳನ್ನು ಪ್ರಯೋಗಿಸುತ್ತಲೇ ಇರುತ್ತದೆ.

ಜಾಹೀರಾತಿನ ಮುಖ್ಯ ಉದ್ದೇಶ ಯಾವುದೇ ಉತ್ಪನ್ನದ ಅಥವಾ ಸೇವೆಯ ಬಗ್ಗೆ ಸಂದೇಶಗಳ ಮೂಲಕ ಜನರ ಮನ ಸೆಳೆಯುವುದು. ಈ ಸಂದೇಶಗಳನ್ನು ಅನೇಕ ರೀತಿಯ ಸಂಪರ್ಕ ಮಾಧ್ಯಮಗಳ ಮೂಲಕ ಜನಮಾನಸಕ್ಕೆ ಹರಿಬಿಡಲಾಗುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ದೂರದರ್ಶನ, ಕೇಬಲ್ ಟಿ.ವಿ., ಅಂತರ್ಜಾಲ, ಗೋಡೆಬರಹಗಳು, ಬಸ್ಸಿನ ಎರಡೂ ಪಾರ್ಶ್ವಗಳು, ರೇಡಿಯೋ, ಬಿಲ್‌ಬೋರ್ಡ್, ಪ್ರಿಂಟೆಡ್ ಪೇಪರು, ಆಕಾಶದಲ್ಲಿ ಹಾರಿ ಬಿಡುವ ಬಲೂನುಗಳು, ಮ್ಯಾಗಝಿನ್ಸ್, ವೃತ್ತಪತ್ರಿಕೆಗಳು... ಇತ್ಯಾದಿ.

ಜಾಹೀರಾತಿಗೆ ಸಾವಿರಾರು ವರ್ಷಗಳ ಇತಿಹಾಸವೇ ಇದೆ. ಭಿತ್ತಿಚಿತ್ರಗಳ ಪರಂಪರೆ ಕ್ರಿ.ಪೂ.೪೦೦೦ ವರ್ಷಗಳಷ್ಟು ಪ್ರಾಚೀನವಾಗಿದೆ. ಆದರೂ ೧೯ನೆಯ ಶತಮಾನದ ತಿರುವಿನಲ್ಲಿ ಇಂದು ನಾವು ಉಪಯೋಗಿಸುತ್ತಿರುವ ಸ್ಲೋಗನ್ ಪರಂಪರೆ ಪ್ರಾರಂಭವಾಯಿತು, ಅದೂ ಮಹಿಳೆಯರನ್ನು ಜಾಹೀರಾತಿಗೆ ಗುರಿಯಾಗಿರಿಸಿಕೊಂಡು. ಆ ಕಾಲದಲ್ಲಿ ಮಹಿಳೆಯರಿಗೆ ಉದ್ಯಮದಲ್ಲಿ ಜೀವನೋಪಾಯದ ಆಯ್ಕೆಗಳು ಅತಿ ಕಡಿಮೆಯಾಗಿದ್ದವು. ಅದರಲ್ಲಿ ಜಾಹೀರಾತೂ ಕೂಡ ಒಂದಾಗಿತ್ತು. ಅವರು ಕುಟುಂಬದ ಬಹುಪಾಲು ಖರೀದಿಗೆ ಹೊಣೆಯಾಗಿದ್ದುದರಿಂದ ಜಾಹೀರಾತುದಾರರು ಅವರನ್ನೇ ಗುರಿ ಮಾಡಿದ್ದರು. ಜಾಹೀರಾತಿನ ಜನಕ ಲಂಡನ್ನಿನ ಥಾಮಸ್ ಜೆ. ಬರಾಟ್. ಆತ ಮೊಟ್ಟ ಮೊದಲ ಬಾರಿಗೆ ಸ್ಲೋಗನ್ ಉಪಯೋಗಿಸಿದ್ದ, ಜೊತೆಗೆ ಒಬ್ಬ ಮಹಿಳೆಯ



ಚಿತ್ರವನ್ನು ಕೂಡ! “ಶುಭೋದಯ.. ನೀವು ಪಿಯರ್ಸ್ ಸೋಪ್ ಉಪಯೋಗಿಸಿರುವಿರಾ?” ಎಂಬ ಈ ಬರಹ ಆ ಶತಮಾನದಲ್ಲಿ ಬಹಳಷ್ಟು ಪ್ರಸಿದ್ಧಿ ಹೊಂದಿತ್ತು.

೧೯೨೦ರ ಆರಂಭದಲ್ಲಿ ರೇಡಿಯೋ ಯುಗ ಪ್ರಾರಂಭವಾಗಿತ್ತು. ರೇಡಿಯೋಗಳಲ್ಲಿ ಪ್ರಚಾರವಾಗುವ ಕಾರ್ಯಕ್ರಮಗಳನ್ನು ಪ್ರಾಯೋಜಿಸುವ ಅಭ್ಯಾಸ ಜನಪ್ರಿಯಗೊಂಡಿತು. ೧೯೪೦ರ ದಶಕದ ಕೊನೆಯಲ್ಲಿ ಹಾಗೂ ೧೯೫೦ರ ದಶಕದ ಆರಂಭದಲ್ಲಿ ದೂರದರ್ಶನಕ್ಕೂ ಜಾಹೀರಾತಿನ ಜಾಲ ವಿಸ್ತಾರಗೊಂಡಿತು. ಮುಂದೆ ೧೯೬೦ರಿಂದ ಸೃಜನಾತ್ಮಕವಾಗಿ ಜಾಹೀರಾತು ಪ್ರಪಂಚ ಬೆಳೆಯಲಾರಂಭಿಸಿತು. ಗ್ರಾಹಕರ ಕಣ್ಣಿಗೆ ಹೆಚ್ಚು ಅಂದವಾಗಿ, ಆಕರ್ಷಕವಾಗಿ ಕಾಣಿಸುವಂಥ ಸಂದೇಶಗಳು ಸೃಷ್ಟಿಯಾಗತೊಡಗಿದವು. ಸಿನೆಮಾ ನಟ-ನಟಿಯರನ್ನು ಕೂಡ ಬಳಸಿಕೊಳ್ಳ ಲಾರಂಭಿಸಿದರು. ಜಾಹೀರಾತುಗಳನ್ನು ಆ ಕಾಲದಲ್ಲಿ ಸಿನೆಮಾ ಗೃಹಗಳಲ್ಲಿ ಉಪಯೋಗಿಸಲಾರಂಭಿಸಿದ್ದರು. ನಾವೆಲ್ಲ ಮಕ್ಕಳಾಗಿದ್ದ ಆ ಕಾಲದಲ್ಲಿ ಸುಂದರ ಜಾಹೀರಾತುಗಳನ್ನು ನೋಡಲೆಂದೇ ಸಿನೆಮಾ ಗೃಹಗಳಿಗೆ ಹೋಗುತ್ತಿದ್ದೆವು! ದೂರದರ್ಶನದಿಂದ ಮುಂದೆ ಈ ಪ್ರಪಂಚ ವಿವಿಧ ಚಾನೆಲ್‌ಗಳಿಗೂ ವಿಸ್ತಾರಗೊಂಡಿತು.

೧೯೬೦ರ ದಶಕವನ್ನು ಸೃಜನಾತ್ಮಕ ಜಾಹೀರಾತುಗಳ ಯುಗದ ಪ್ರಾರಂಭದ ದಿನಗಳು ಎಂದು ಹೇಳಬಹುದು. ಆಗ ಜಾಹೀರಾತು ಪ್ರಪಂಚ ಬೆಳೆಯಲಾರಂಭಿಸಿತ್ತು. ಜಾಹೀರಾತುಗಳು ಗ್ರಾಹಕರ ಕಣ್ಣುಗಳಿಗೆ ಹೆಚ್ಚು ಆಕರ್ಷಕವಾಗಿ ಕಾಣುವಂತೆ ಸುಂದರ ಸಂದೇಶಗಳೊಡನೆ ಬಿತ್ತರಗೊಳ್ಳತೊಡಗಿದವು. ೧೯೯೦ರಲ್ಲಿ ಕೇಬಲ್ ಮತ್ತು ಎಂಟಿವಿ ಪರಿಕಲ್ಪನೆ ಪ್ರವೇಶವಾಗಿತ್ತು. ಸಂಗೀತದ ವೀಡಿಯೋ ಪರಿಕಲ್ಪನೆ ಪ್ರಾರಂಭಗೊಂಡಿತ್ತು. ಹೀಗೆ ಜಾಹೀರಾತು

ಒಂದು ಉಪವಸ್ತು ಅಥವಾ ಹಿನ್ನೆಲೆಯಾಗುವ ಬದಲಾಗಿ ಗ್ರಾಹಕರು ಜಾಹೀರಾತಿನ ಸಂದೇಶಕ್ಕೆಂದೇ ದೂರದರ್ಶನದ ಚಾನೆಲ್ ಆರಿಸತೊಡಗಿದರು. ನಂತರದ್ದು ಸಂಪೂರ್ಣ ಜಾಹೀರಾತಿಗೇ ಮೀಸಲಾಗಿರಿಸಿದ ಟೆಲಿಶಾಪೀ, ಹೋಂ ಶಾಪೀ ಮುಂತಾದ ಚಾನೆಲ್‌ಗಳ ಪ್ರಾರಂಭದ ಯುಗ, ಗೂಗಲ್ ಕೂಡ ಈ ದಿಸೆಯಲ್ಲಿ ಬಳಕೆದಾರರಿಗೆ ಸಹಾಯ ಮಾಡುವುದಕ್ಕಾಗಿ ಈ ಕ್ಷೇತ್ರದಲ್ಲಿ ಬದಲಾವಣೆ ಆರಂಭಿಸಿತು.

ಹೀಗೆ ವೃತ್ತಪತ್ರಿಕೆಗಳು, ನಿಯತಕಾಲಿಕೆಗಳು ಇತ್ಯಾದಿಗಳ ಜಾಹೀರಾತು ಮಾಧ್ಯಮಗಳಿಗಿಂತ ಜನರು ಹೆಚ್ಚಾಗಿ ದೂರದರ್ಶನ, ರೇಡಿಯೋಗಳಲ್ಲಿಯ (ಇದೂ ಕೂಡ ಎರಡನೆಯ ಸ್ಥಾನವನ್ನೇ ಪಡೆಯಿತು) ಜಾಹೀರಾತುಗಳನ್ನೇ ಇಷ್ಟಪಡತೊಡಗಿದರು. ಇತ್ತೀಚೆಗಿನ ಗೆರಿಲ್ಲಾ ಪ್ರಚಾರಗಳೂ, ಸಂಚಾರೀ ಸರಕು ವಾಹನಗಳ ಮೇಲಿನ ಜಾಹೀರಾತು ಫಲಕಗಳೂ ಜಾಹೀರಾತಿನ ಕಲ್ಪನೆಗಳೇ. ಆದರೆ ಇತ್ತೀಚೆಗೆ ಜಾಹೀರಾತು ನಮ್ಮ ದಿನನಿತ್ಯದ ಚಟುವಟಿಕೆಗಳ ಮೇಲೂ ಸಾಮ್ರಾಜ್ಯ ಸ್ಥಾಪಿಸ ಹೊರಟಿದೆ ಎಂದು ನನ್ನ ಭಾವನೆ. ಅದಕ್ಕೆ ಪೂರಕವಾಗಿ ಇಂದು ನಮಗೆ ಬೆಳಗಾಗುವುದೇ ಈ ಜಾಹೀರಾತುಗಳಿಂದ. ಎದ್ದು ಹಲ್ಲುಜ್ಜಲು ಸಿಂಕ್ ಕಡೆಗೆ ಹೊರಟಿರಾ... "ನೀವು ನಿನ್ನೆ ರಾತ್ರಿ ಬದನೆಕಾಯಿ



ಪಲ್ಯ ತಿಂದದ್ದು ಯಾರಿಗೂ ತಿಳಿಯಬಾರದೆಂದಿದ್ದರೆ ಇಂತಿಂಥ ಟೂಥ್‌ಪೇಸ್ಟ್ ಉಪಯೋಗಿಸಿರಿ." ಎಂಬ ಸಲಹೆ ಇಲ್ಲವೇ, "ನಿಮ್ಮ ಟೂಥ್‌ಪೇಸ್‌ನಲ್ಲಿ ಉಪ್ಪಿದೆಯಾ?' ಎಂದು ಪ್ರಸಿದ್ಧ ತಾರೆಯೊಬ್ಬಳು ನಿಮ್ಮ ಮನೆಯಂಗಳಕ್ಕೆ (ಸಾರೀ, ನಿಮ್ಮ ಟಿವಿ ಪರದೆಗೆ) ಜಿಗಿದು ಬರುತ್ತಾಳೆ! ಆಯ್ತು. ಯಾವುದೋ ಒಂದು ಎಂದುಕೊಂಡು ಹಲ್ಲುಜ್ಜಿ ಟೇಬಲ್ಲಿಗೆ ಬರುತ್ತಿದ್ದಂತೆಯೇ, ಇನ್ನು ಚಹಾ... "ಇಂಥದೇ ಚಹಾ ಕುಡಿಯಿರಿ. ಇದರಲ್ಲಿ ಆರೋಗ್ಯಕರ ಅಂಶಗಳಿರುವುದರಿಂದ ನೀವು ಎಂದಿಗೂ ಆಫೀಸಿಗೆ ಗೈರುಹಾಜರಿಯಾಗುವುದಿಲ್ಲ... ಆಗ ನಿಮಗೆ ನಿಮ್ಮ ಚಹಾದ ಕಪ್ಪಿನ ಜೊತೆಗೆ ಆಫೀಸಿನಲ್ಲಿಯೂ ಬಹುಮಾನದ ಕಪ್ ಸಿಗುವ ಚಾನ್ಸಸ್...", "ಹಾಂ.. ನಿಮ್ಮ ಚಹಾದ ಜೊತೆಗೆ ಬಿಸ್ಕಟ್... ಅದರಲ್ಲಿ ಮೈದಾ ಇದೆಯಾ... ಬೇಡ... ನಿಮಗೆ ಅನಾರೋಗ್ಯ ಕಾಡೀತು...!", "ಗಡ್ಡ ಬೋಳಿಸಲು ತೆಂಡುಲ್‌ಕರ್ ಉಪಯೋಗಿಸುವ ಬೇಡ್ಲು ನೀವ್ಯಾಕೆ ಉಪಯೋಗಿಸಬಾರದು? ನೋಡಿರಿ, ಇದರಿಂದಾಗಿ ನಿಮ್ಮ ಬೆನ್ನ ಹಿಂದೆ ಹುಡುಗಿಯರು!", ಇನ್ನು ಸ್ನಾನಕ್ಕೆ ಹೊರಟರೆ, ಇಂಥದೇ ಸೋಪ್... ಇಂಥದೇ ಹೀಟರ್... ಇಂಥದೇ ಶಾಂಪೂ, ಕಂಡೀಶನರ್... ತಲೆಗೆ ಎಣ್ಣೆ, ತಲೆ ಕೂದಲು ಕಪ್ಪಗಾಗಬೇಕೆ... ಇಗೋ ಇದರಲ್ಲಿ ನೋ ಅಮೋನಿಯಾ... ನಿಮ್ಮ ಮುಖ ಬೆಳ್ಳಗಾಗಬೇಕೆ... ಇಗೋ ಆರು ವಾರಗಳಲ್ಲಿ ಬೆಳ್ಳಗಾಗಲು ಹೆಂಗಸರ ಕ್ರೀಮ್-ಪೌಡರ್ ಬೇರೆ... ಗಂಡಸರದೇ

ಬೇರೆ... ಮಕ್ಕಳಿಗೂ ಬೇರೆ! ಕೊನೆಗೆ ನಿಮ್ಮ ಒಳಉಡುಪನ್ನು ಆಯ್ಕೆ ಮಾಡುವ ಕೆಲಸವೂ ಜಾಹೀರಾತು ಕಂಪನಿಯವರದೇ. ನಾಲ್ತಾದ ವಿಷಯದಲ್ಲಿಯೂ ಅವರು ಹಿಂದಿಲ್ಲ. ಮಕ್ಕಳಿಗೆ ಎರಡೇ ನಿಮಿಷದಲ್ಲಿ ತಯಾರಾಗುವ, ಹತ್ತು ಕೈಗಳಿಂದ ಇಡ್ಲಿ, ವಡೆ, ದೋಸೆಗಳನ್ನು ಕ್ಷಣಮಾತ್ರದಲ್ಲಿ ತಯಾರಿಸುವ ಮಾಂತ್ರಿಕತೆ ಅವರಲ್ಲಿದೆ. ಆಫೀಸಿಗೆ ಹೊರಟಿರಾ, ಯಾವ ಟೂ ವೀಲ್ಹರ್... ಗೆಳತಿಯ ಜೊತೆಗೆ ಪಿಕ್‌ನಿಕ್‌ಗೆ ಹೊರಟಿರಾ, ಅಂಥದಕ್ಕೆಲ್ಲಾ ಸೂಟ್ ಆಗುವ ಗಾಡಿ ಯಾವುದು...? ಮನೆ ಮಂದಿಯ ಜೊತೆಗೆ ಹೊರಟಿರಾ, ಅಂಥ ಸಂದರ್ಭದಲ್ಲಿ ಯಾವ ಗಾಡಿ ಉಪಯೋಗಿಸಬೇಕು...? ಅವರಿಂದ ನೀವು ಪುಕ್ಕಟೆಯಾಗಿ ಸಲಹೆ. ಅಲ್ಲಲ್ಲ... ನಿಮ್ಮ ಸಮಯ, ನಿಮ್ಮ ಕರೆಂಟ್ ಬಿಲ್... ಇತ್ಯಾದಿ ಸ್ವಲ್ಪವೇ ಖರ್ಚಿನಲ್ಲಿ ಸಲಹೆ ಪಡೆಯಬಹುದು. ನಿಮ್ಮದು

ಇಷ್ಟು ಗಡಿಬಿಡಿಯ ಜೀವನ ಎಂದ ಮೇಲೆ ತೂಕ ಏರುವುದು ಗ್ಯಾರಂಟೀ. ಇಗೋ ಇಲ್ಲಿದೆ ನಮ್ಮ ತೂಕ ಇಳಿಸುವ ಮಶಿನ್...! ನಮ್ಮ ಔಷಧಿ... ನೋ ಸೈಡ್ ಇಫೆಕ್ಟ್, ಕೇವಲ ಎರಡೇ ದಿನಗಳಲ್ಲಿ ನಿಮ್ಮ ತೂಕ ಇಳಿಯುತ್ತದೆ! ಡಯೆಟ್ ಅಂತೂ ಬೇಡವೇ ಬೇಡ, ವ್ಯಾಯಾಮ ಬೇಡ. ಆಯ್ತು... ರೋಗಿ ಬಯಸಿದ್ದೂ ಹಾಲನ್ನ.. ವೈದ್ಯ ಹೇಳಿದ್ದೂ ಅದೇ...!

ಓಹೋ... ನೀವು ಇಂಟರ್‌ವ್ಯೂಗೆ ಹೊರಟಿರಾ! ನಿಮ್ಮ ಬುದ್ಧಿವಂತಿಕೆಯ ಫೈಲುಗಳನ್ನು ಇತ್ತ ಕಡೆ ಇಡಿ. ನೀವೀಗ ಆಯ್ಕೆಯಾಗಬೇಕೆಂದಾದಲ್ಲಿ ನಿಮಗೆ ಬೇಕು ಈ ಕನಸಿನ ಲೋಕದ ಪೌಡರ್! ನಿಮ್ಮ ಆಫೀಸರ್ ನಿಮ್ಮ ಮೇಲೆ ಫಿದಾ... ಓಹೋ...!



ಈಗ ಮಕ್ಕಳ ಸರದಿ. ಶಾಲೆಯಲ್ಲಿ ಕಲಿತದ್ದು ನೆನಪುಳಿಯಬೇಕಾದರೆ ಈ ಡ್ರಿಂಕ್, ಎಲ್ಲರಿಗಿಂತ ಎತ್ತರವಾಗಿ ಕಾಣಬೇಕಾದರೆ... ಕೆಮ್ಮದೆ, ಉಗುಳದೆ, ಶೀನದ ಇರಬೇಕೆಂದರೆ... ಬೇಕೆ ಬೇಕು. ಟಣ್ ಟಣ್...!

ಮೂಢನಂಬಿಕೆಯನ್ನು ಹುಟ್ಟು ಹಾಕುವುದರಲ್ಲಿಯೂ ಈ ದೂರದರ್ಶನದ ಚಾನೆಲ್‌ಗಳು ಸಹಾಯ ಮಾಡುತ್ತವೆ. ಇದರಲ್ಲಿ ಜ್ಯೋತಿಷಿಗಳೇನೂ ಹಿಂದೆ ಬಿದ್ದಿಲ್ಲ. ಅವರೂ ತಮ್ಮ ವ್ಯಾಪಾರ ವೃದ್ಧಿಸಿಕೊಳ್ಳಲು ಜಾಹೀರಾತು ಕ್ಷೇತ್ರವನ್ನು ಉಪಯೋಗಿಸಿಕೊಳ್ಳುತ್ತಾರೆ. “ನಿಮಗೆ ಮುಟ್ಟಿದ್ದೆಲ್ಲ ಚಿನ್ನವಾಗಬೇಕೆಂಬ ಕನಸಿದೆಯಾ. ಹಾಗಾದರೆ ಈ ಯಂತ್ರವನ್ನು ಧರಿಸಿರಿ” ಎಂದು ಹೇಳುವ ಅವರು ತಾವೇಕೆ ಇಂಥ ಜಾಹೀರಾತಿನ ಮೊರೆ ಹೋಗಬೇಕು? ತಾವೂ ಇಂಥ ಒಂದು ಹೊರೆ ಯಂತ್ರಗಳನ್ನು ಧರಿಸಬಾರದೇಕೆ?

ಆದರೆ ಈ ಜಾಹೀರಾತುಗಳು ಒಂದು ದೊಡ್ಡ ಉದ್ಯಮವನ್ನೇ ಹುಟ್ಟು ಹಾಕಿ, ಅನೇಕ ಜನರಿಗೆ ಉದ್ಯೋಗವನ್ನೂ ಸೃಷ್ಟಿ ಮಾಡಿವೆ ಎನ್ನುವುದು ಮಾತ್ರ ಸತ್ಯ. ಅಷ್ಟೇ ಅಲ್ಲ, ಇಲ್ಲಿ ತರಬೇತಿ ಇದೆ, ಸ್ಪರ್ಧೆ ಇದೆ, ಕಲಾತ್ಮಕತೆ ಇದೆ. ಅಲ್ಲದೆ ನಿಮ್ಮಲ್ಲಿ ಒಂದು ವೇಳೆ ಆಕಾಶಕ್ಕೇರುವ ಉತ್ಕಟ ಅಭಿಲಾಷೆ, ಅದಕ್ಕೆ ತಕ್ಕ ಛಲ, ಜಾಣೆ ಇದ್ದರೆ ನಿಮ್ಮಲ್ಲಿಯ ಸೃಜನಶೀಲತೆಗೆ ತೆರೆದುಕೊಳ್ಳಲು ಅವಕಾಶಗಳು ಮುಕ್ತ, ಮುಂದೆ ದುಡ್ಡು, ಕೀರ್ತಿಗಳ ಸುರಿಮಳೆ. ಅಲ್ಲದೆ ಇಲ್ಲಿ ಕೈತುಂಬ ಉದ್ಯೋಗಗಳೂ ಇವೆ. ಉದಾಹರಣೆಗೆ ಅಲ್ಲಿಯೂ ಸಾಹಿತ್ಯಕ್ಕೆಂದು ಒಂದು ವಿಭಾಗವೇ ಇದೆ. ಜಾಹೀರಾತಿಗಾಗಿ ಮನ ಸೆಳೆಯುವಂಥ ಸಾಹಿತ್ಯ ಸೃಷ್ಟಿಯಾಗುತ್ತದೆ. ಸಂಸ್ಥೆಯ ಹೆಸರು, ಸ್ಲೋಗನ್, ಸಂಸ್ಥೆಯು ನೀಡ ಬಯಸುವ ಉತ್ಪನ್ನಗಳ ವಿವರ ಇದೆಲ್ಲದರ ಪೂರ್ಣ ಪರಿಚಯ ಪಡೆದು ನಂತರ ಅವುಗಳಿಗೆ ಅನುಗುಣವಾಗಿ ಚಿತ್ರ ರಚನೆ, ಪ್ರಾಸಬದ್ಧ ಕವಿತೆಗಳು, ಮಾತುಗಳು, ಅಗತ್ಯವಿದ್ದಲ್ಲಿ ಬದಲಾವಣೆ. ದೃಶ್ಯ ಮಾಧ್ಯಮವಾಗಿದ್ದಲ್ಲಿ ಕಲಾವಿದರ ಆಯ್ಕೆ, ರೇಡಿಯೋದಲ್ಲಿ ಪ್ರಚಾರವಾಗಬೇಕಿದ್ದಲ್ಲಿ ಒಳ್ಳೆಯ ಧ್ವನಿಯ ಅವಶ್ಯಕತೆ, ಸಾಹಿತಿಗಳು, ಫೋಟೋಗ್ರಾಫರ್‌ಗಳು, ನಿರ್ಮಾಣ ಸಂಸ್ಥೆಗಳು, ಮುದ್ರಣಕಾರರು... ಹೀಗೆ ಅನೇಕ ಜನರ ಒಂದು ಸಹಕಾರದಿಂದ ಇದು ಪೂರ್ಣಗೊಳ್ಳುತ್ತದೆ. ಒಂದು ಜಾಹೀರಾತು ಸಿದ್ಧವಾಗಬೇಕಾದರೆ ಗಿರಾಕಿಯ ಅಗತ್ಯಗಳನ್ನು ವಿಶ್ಲೇಷಿಸಬೇಕು. ನೀಡಬೇಕಾದ ಸಂದೇಶದ ರಚನೆ, ಅದು ತಲುಪಬೇಕಾದ ಶೋತೃಗಳು ಅಥವಾ ವೀಕ್ಷಕರು ಇತ್ಯಾದಿ ಮುಖ್ಯ ವಿಷಯಗಳನ್ನು ಗಮನಿಸಬೇಕು. ಅದಕ್ಕನುಗುಣವಾಗಿ ಚಿತ್ರದ ರೂಪುರೇಷೆ, ವಿನ್ಯಾಸ. ನಂತರ ರಚನೆಯನ್ನು ದೃಶ್ಯಕ್ಕೆ ಅಳವಡಿಸುವುದು, ಮಲ್ಟಿಮೀಡಿಯಾ ಪ್ರದರ್ಶನಗಳಿಗಾಗಿ ಸಿದ್ಧಗೊಳಿಸುವುದು, ತಮ್ಮ ರಚನೆ ಪೂರ್ತಿಗೊಳ್ಳುವ ನಿಟ್ಟಿನಲ್ಲಿ ಸಹಕೆಲಸಗಾರರ ನಿರ್ವಹಣೆ ಇದೆಲ್ಲವನ್ನೂ ಗಮನಿಸಬೇಕಾಗುತ್ತದೆ. ಇದು ಗ್ರಾಫಿಕ್ ಡಿಜೈನರ್ ಕೆಲಸ. ಇಲ್ಲಿ ಫೋಟೋಗ್ರಫಿಯದೂ ಮುಖ್ಯ ಪಾತ್ರವೇ. ಮುಂದಿನದು ಅಕೌಂಟೆಂಟ್‌ನ ಅವಶ್ಯಕತೆ, ಹಣ ಸಂಪಾದನೆ ಮಾಡಬೇಕಾದರೆ ಮೊದಲು ಬಂಡವಾಳ ಹಾಕಬೇಕಾಗುತ್ತದೆ.

ದೊಡ್ಡ ಮೊತ್ತದ ಹಣ ಹಾಕಲು ಅವರಿಗೆ ಅದರ ಅಂದಾಜು ವೆಚ್ಚ ಹಾಗೂ ಮುಂದೆ ಬರಬಹುದಾದ ಲಾಭಾಂಶದ ವಿವರ ಕೊಡಬೇಕಾಗುತ್ತದೆ. ಜಾಹೀರಾತು ಬಯಸಿ ಬಂದವರ ಅಗತ್ಯ, ಬೇಕು ಬೇಡಗಳನ್ನು ಗಮನಿಸಿ, ಅವರ ಸರಕು ಅಥವಾ ಸೇವೆಯ ಜಾಹೀರಾತುಗಳನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಅಷ್ಟೇ ಅಲ್ಲ, ಗ್ರಾಹಕರಿಗೆ ಸಮರ್ಥವಾಗಿ ತಲುಪಿಸುವ ಚಾಕಚಕ್ಯತೆಯೂ ಬೇಕು. ಮಾರುಕಟ್ಟೆಯ ಅಧ್ಯಯನದ ಜೊತೆಗೇ ಅವರ ಮನಸ್ಸನ್ನು ಅರ್ಥ ಮಾಡಿಕೊಂಡು ಅವರಿಗೆ ಉತ್ಕೃಷ್ಟವಾದದ್ದನ್ನೇ ತಲುಪಿಸಬೇಕಾದ ಜವಾಬ್ದಾರಿಯೂ ಇದೆ. ಇಲ್ಲಿ ನಿರೂಪಣೆ ಹಾಗೂ ನಿರ್ವಹಣೆ ಎರಡೂ ಬೇಕು. ಈ ರೀತಿಯಾಗಿ ಸಾವಿರಾರು ಜನರಿಗೆ ಉದ್ಯೋಗ ನೀಡುವುದರಿಂದ ಈ ಕ್ಷೇತ್ರವನ್ನು ಕಡೆಗಣಿಸುವಂತಿಲ್ಲ.

ಕೇವಲ ಮಾಹಿತಿಯನ್ನು ಕೊಡುವ ಕೆಲಸ ಮಾತ್ರ ಮಾಡದೆ ಜಾಹೀರಾತುಗಳು ಮನದ ಮೇಲೆ ಅಚ್ಚೊತ್ತುವ ಭಾವನಾತ್ಮಕತೆಯನ್ನು ಸೃಷ್ಟಿಸುವ ಕೆಲಸವನ್ನೂ ಮಾಡುತ್ತವೆ. ಒಟ್ಟಿನಲ್ಲಿ ಬದಲಾಗುತ್ತಿರುವ ಸಮಾಜದ ದೃಷ್ಟಿಕೋನ ಹಾಗೂ ಬೆಳೆಯುತ್ತಿರುವ ಆರ್ಥಿಕ ಮುಕ್ತತೆಯ ಪರಿಣಾಮದಿಂದಾಗಿ ಜಾಹೀರಾತು ಉದ್ಯಮ ಇಂದು ಭದ್ರವಾದ ತಳಪಾಯ ಊರುತ್ತಿದೆ. ಹೀಗೆ ಮಕ್ಕಳ ಮನಸ್ಸಿಗೆ ತಟ್ಟುವ ಜಾಹೀರಾತುಗಳು ಕೆಲವಾದರೆ, ಹರೆಯದ ಹದಿ ಹರೆಯದ ಜನರನ್ನು ತಟ್ಟುವುವು ಕೆಲವು... ಇನ್ನು ಕೆಲವು ವಯಸ್ಸಾದವರನ್ನು ಆಕರ್ಷಿಸುತ್ತವೆ. ಈ ಜಾಹೀರಾತುಗಳು ಎಲ್ಲಾ ವರ್ಗದ, ಎಲ್ಲಾ ವಯಸ್ಸಿನ ಜನರನ್ನೂ ಆಕರ್ಷಿಸುತ್ತವೆ ಎಂದರೆ ತಪ್ಪಾಗಲಾರದು. ನಮ್ಮ ಇಡಿಯ ದಿನವನ್ನೇ ಆಳುವ ಈ ಜಾಹೀರಾತು ಪ್ರಪಂಚ ಒಂದು ಮೋಹಕ ಮಾಯಾಜಾಲವೇ ಆಗಿದೆ. ಇದರಿಂದ ಯಾರೂ ತಪ್ಪಿಸಿಕೊಳ್ಳಲಾರೆವು ಎನ್ನುವುದು ಮಾತ್ರ ನಿತ್ಯ ಸತ್ಯ...!

**(ಹಾಸ್ಯ ರಂಗೋಲಿ, ಸಾಗರಿ ಪ್ರಕಾಶನ, ಮೈಸೂರು, ೨೦೧೦)**

## ೪೬. RH ಡಯಾಗ್ನಾಸ್ಟಿಕ್

### ಸುಧಾ ಮೂರ್ತಿ

ಇದು ಸುಮಾರು ೬೦ ವರ್ಷದ ಹಿಂದಿನ ಸತ್ಯಸಂಗತಿ. ನಮ್ಮ ತಂದೆ ದಿವಂಗತ ಡಾ|| ಆರ್.ಹೆಚ್. ಕುಲಕರ್ಣಿಯವರು ಆಗ ತಾನೇ LCPS (MBBS ಗಿಂತ ಕಡಿಮೆ ಡಿಗ್ರಿ, ಇದು ಬ್ರಿಟಿಷರ ಕಾಲದ ಮೆಡಿಕಲ್ ಡಿಪ್ಲೊಮಾ) ಮುಗಿಸಿದ ೨೪ ವರ್ಷದ ನವ ತರುಣ. ಆಗಿನ ಕರ್ನಾಟಕದಲ್ಲಿ ಇದ್ದ, ಈಗಿನ ಮಹಾರಾಷ್ಟ್ರದ ಬಾರ್ಡ್ರನಲ್ಲಿರುವ ಸದಾ ನಿದ್ರಿಸುತ್ತಿದ್ದ ಒಂದು ಹಳ್ಳಿಗೆ, ವೈದ್ಯರಾಗಿ ಸರಕಾರದಿಂದ ನೇಮಿಸಲ್ಪಟ್ಟಿದ್ದರು. ಊರು ಎಂದರೆ, ಕಾಡಿನಲ್ಲಿದ್ದ ಒಂದು ಊರು. ೨೦ ಮನೆಗಳಿದ್ದರೆ ಹೆಚ್ಚು. ಸದಾ ಕಾಲವೂ ಸುರಿಯುವ ಮಳೆ, ಆಸ್ಪತ್ರೆಯೆಂದರೆ ಎರಡು ರೂಮಿನ ಕಟ್ಟಡ. ಅದಕ್ಕೆ ಹೊಂದಿಕೊಂಡಿರುವ ಮೂರು ರೂಮಿನ ಮನೆ. ಇವರೇ ಕಂಪೌಂಡರ್, ಇವರೇ ವೈದ್ಯರು. ಊರಾಚೆ ಇರುವ ಈ ಆಸ್ಪತ್ರೆಗೆ ಜನ ಬರುವುದೇ ಕಡಿಮೆ. ಮನೆ ಮದ್ದು ಔಷಧಿ ಇರುವ ಕಾಲ.

ದಿನ ಕಳೆಯುವುದು ತೀರ ಕಷ್ಟ ರಾತ್ರಿಯಾದೊಡನೆ ಕಾಡಿನಲ್ಲಿದ್ದ ಹುಲಿರಾಯನ ಕೂಗು, ಎಂಥವರ ಎದೆಯನ್ನೂ ನಡುಗಿಸುತ್ತಿತ್ತು.

ಇಂಥ ಒಂದು ಮಳೆಗಾಲದ ಅಮಾವಾಸ್ಯೆಯ ರಾತ್ರಿ ಸುಮಾರು ೧೦ ಗಂಟೆಗೆ ಯಾರೋ ಬಾಗಿಲು ಬಡಬಡ ಬಡಿದಂತೆ ಅನುಭವ. ತೆಗೆದು ನೋಡಿದರೆ ನಾಲ್ಕಾರು ಜನ ಗಂಡಸರು. ಕೈಯಲ್ಲಿ ಕಂದೀಲು, ಲಾಠಿ, ತಲೆಯ ಮೇಲೆ ಕಂಬಳಿಯ ಮುಸುಕು. ಗಡಿಪ್ರದೇಶವಾಗಿದ್ದರಿಂದ ಮರಾಠಿ ಮಿಶ್ರಿತ ಕನ್ನಡದ ಶೈಲಿಯಲ್ಲಿ "ಡಾಕ್ಟರರೇ, ನಮ್ಮ ಜೊತೆ ನಡೀರಿ, ಕೂಡಲೇ...", ಎಂದಾಗ, "ಎಲ್ಲಿಗೆ, ಯಾರು ಪೇಶಂಟ್" ಎಂದು ತಡವರಿಸುತ್ತ ಭಯದಿಂದ ಕೇಳಿದರು ವೈದ್ಯರು.

"ನೀವು ಚಕ್ಕಡಿಯಲ್ಲಿ ಕೂತ್ಕೊಳ್ರಿ..."

ಮಾತನಾಡಲು ಅವಕಾಶ ಕೊಡದೇ ಕೈ ಹಿಡಿದರು. ತಾನು ಇನ್ನು ಹೋಗದಿದ್ದರೆ ಅವರ ಕೈಯಲ್ಲಿದ್ದ ಲಾಠಿಯಿಂದ ಎಲ್ಲಿ ಹೊಡೆದು ಬಿಡುತ್ತಾರೆಯೋ ಎನ್ನುವ ಭೀತಿಯಾಯಿತು. ನಮ್ಮ ತಂದೆಗೆ

ಆ ಥರ ಹೊಡೆದು ಬಿಸಾಕಿ ಹೋದರೂ ಊರ ಜನರಿಗೆ ತಿಳಿಯಲು ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ.

ದೇವರ ಮೇಲೆ ಭಾರ ಹಾಕಿ ಡಾಕ್ಟರರ ಚೀಲ ತೆಗೆದುಕೊಂಡು, ಜೀವ



ಕೈಯಲ್ಲಿ ಹಿಡಿದುಕೊಂಡು ಹೊರಟರು. ಕತ್ತಲಲ್ಲಿ ಎಲ್ಲಿಯೋ ಪಯಣ. ದಾರಿಯಂತೂ ತಿಳಿಯಲೇ ಇಲ್ಲ. ಚಕ್ಕಡಿಯಲ್ಲಿ ಇದ್ದವರು ಯಾರೂ ಒಂದು ಅಕ್ಷರವನ್ನೂ ಮಾತನಾಡಲಿಲ್ಲ. ಎರಡು ಗಂಟೆಯ ಪಯಣದಲ್ಲಿ ಕಾಡಿನ ಅಂಚಿನಲ್ಲಿ ಗಾಡಿ ಸಾಗಿತು. ದೂರದಲ್ಲಿ ಕಂದೀಲಿನಿಂದ ಕೂಡಿದ ಮನೆ ಕಂಡಿತು. ಅದಂತೂ ಊರೇ ಅಲ್ಲ. ಕಾಡಿನ ಮಧ್ಯದಲ್ಲಿ ಒಂದು ಭತ್ತದ ಗದ್ದೆಯ ತುಣುಕಿನ ಅಂಚಿನಲ್ಲಿದ್ದ ಮನೆ.

ಚಕ್ಕಡಿ ಅಲ್ಲಿ ಹೋಗಿ ನಿಂತಿತು. ಇವರ ಬರವನ್ನೇ ಕಾಯುತ್ತ ನಿಂತ ಮುದುಕಿ ಒಬ್ಬಳು ಕಂದೀಲನ್ನು ತೋರಿಸಿದಳು. ನಮ್ಮ ತಂದೆಗೆ ಅದೊಂದು ಡಿಟೆಕ್ಟಿವ್ ಸಿನೇಮಾ ಥರ ಅನಿಸಿತಂತೆ.

ಇವರು ಒಳಗೆ ಹೋದ ಕೂಡಲೇ ಹೊರಗಿನಿಂದ ಬಾಗಿಲು ಚಿಲಕ ಹಾಕಿದರು. ಇವರಿಗೆ ಪರಿಸ್ಥಿತಿಯ ಅರಿವಾಯಿತು.

ಸುಮಾರು ೧೫-೧೬ ವರ್ಷದ ಎಳೆ ತರುಣಿ, ನೆಲದ ಮೇಲೆ ಚಾಪೆಯ ಮೇಲೆ ಪ್ರಸವ ವೇದನೆಯಿಂದ ಹೊರಳಾಡುತ್ತಿದ್ದಳು. ಅವಳ ಜೊತೆ ಈ ಮುದುಕಿ ಬಿಟ್ಟು ಬೇರೆ ಯಾರೂ ಇರಲಿಲ್ಲ. ಅವಳ ಹೆರಿಗೆಗೆ ಎಂದೇ ತನ್ನನ್ನು ಕರೆಸಿದ್ದಾರೆಂದು ಗೊತ್ತಾಯಿತು.

ಆಕೆ ಅವರ ಮೊದಲ ಹೆರಿಗೆಯ ಪೇಶಂಟ್. ಕಾಲೇಜಿನಲ್ಲಿ ಇದ್ದಾಗ ಹೆರಿಗೆಯ ವಾರ್ಡ್ ಡ್ಯೂಟಿ ಬಂದಾಗ ಒಂದೆರಡು ಹೆರಿಗೆಯನ್ನು ದೂರದಿಂದಲೇ ನೋಡಿದ್ದರು. ತರುಣ ವೈದ್ಯರಿಗೆ ಸಂಕೋಚವಿದ್ದುದರಿಂದ ಅವರಿಗೆ ಇದರ ಬಗ್ಗೆ ಹೆಚ್ಚು ಗೊತ್ತೂ ಇರಲಿಲ್ಲ.

ಈ ಹಳ್ಳಿಯ ಯಾವುದೋ ಮೂಲೆಯಲ್ಲಿ, ಹೆಂಗಸು ನರ್ಸಿನ ಸಹಾಯವಿಲ್ಲದೆ, ಅನುಭವವಿಲ್ಲದೆ, ಹೇಗೆ ಹೆರಿಗೆ ಮಾಡಿಸಬೇಕು ಎಂದು ತಿಳಿಯಲೂ ಇಲ್ಲ, ಹೊರಗೆ ಹೋಗಲು ಸಾಧ್ಯವೂ ಇಲ್ಲ.

ಪೇಶೆಂಟ್‌ಗಿಂತ ಇವರೇ ಬಹಳ ಗಾಬರಿಯಾದರು. ತಾವು ಓದಿದ ಪುಸ್ತಕವನ್ನು ನೆನೆದು, ತಮಗೆ ಹೆರಿಗೆಯ ಪಾಠ ಹೇಳಿದ ಶಿಕ್ಷಕರನ್ನು ನೆನೆದು, ಎಂದೂ ಕಾಣದ ದೇವರಿಗೆ ನಮಸ್ಕರಿಸಿ ಅವಳ ಬಳಿ ಸಾರಿದರು.

ರೋಗಿ ಹೆರಿಗೆಯ ನೋವಿಗೆ ಒದ್ದಾಡುತ್ತಿದ್ದಳು. ನಮ್ಮ ತಂದೆ ಆ ಮುದುಕಿಗೆ "ಒಂದು ತಪ್ಪಲೆ ಬಿಸಿ ನೀರು ಕುದಿಸಬೇಕು" ಎಂದರು. ಮುದುಕಿ ಮಾತನಾಡಲಿಲ್ಲ. ಆಗ ರೋಗಿಯೇ ಮರಾಠಿ ಮಿಶ್ರಿತ ಕನ್ನಡದಲ್ಲಿ, "ಡಾಕ್ಟರರೇ ಅವಳು ಕಿವುಡಿ ಮತ್ತು ಮೂಕಿ" ಎಂದು ಹೇಳಿ, ಆಕೆಗೆ ಸನ್ನೆಯಿಂದ ತಿಳಿಸಿದಳು.

ಸ್ವಲ್ಪ ಹೊತ್ತಿನಲ್ಲಿ ನೋವು ಕಡಿಮೆಯಾದಂತೆ ಅನ್ನಿಸಿದಾಗ ರೋಗಿಯೇ ಮಾತನಾಡಿದಳು.



"ಡಾಕ್ಟರರೇ ನನ್ನನ್ನು ಉಳಿಸಬೇಡಿ, ನನಗೆ ಉಳಿಯುವ ಆಸೆಯೇ ಇಲ್ಲ. ಸುಮ್ಮನೆ ಹೋಗಿ ಬಿಡಿ."

ಅಷ್ಟರಲ್ಲಿ ನಮ್ಮ ತಂದೆಗೆ ಪರಿಸ್ಥಿತಿಯ ಅರಿವಾಗಿದ್ದಿತು. ಬಹುಶಃ ಸಿರಿವಂತರ ಮಗಳಿರಬಹುದು, ಮದುವೆಯಾಗದೆ ಬಸಿರಾಗಿರಬಹುದು. ಆದ್ದರಿಂದ ಆಸ್ಪತ್ರೆಗೆ ಕರೆದುಕೊಂಡು ಬಂದಿಲ್ಲ. ಊರಾಚೆ ಎಲ್ಲಿಯೋ ಈ ವ್ಯವಸ್ಥೆ ಮಾಡಿದ್ದಾರೆ. ಆದರೆ ಹೆರಿಗೆ ಮಾಡಿಸುವುದು, ತನ್ನ ಜ್ಞಾನದ ಪರಿಧಿಯಲ್ಲಿ ಸಹಾಯ ಮಾಡುವುದು ಅವರ ಕರ್ತವ್ಯವಾಗಿತ್ತು.

ಅವಳ ಮಾತಿಗೆ ಬೆಲೆ ಕೊಡದೇ ಸುತ್ತಲೂ ನೋಡಿದರು. ಅಲ್ಲಿ ಅಕ್ಕಿಯ ಚೀಲವನ್ನು ಒಟ್ಟಿದ್ದರು. ತಾವೇ ನಾಲ್ಕಾರು ಅಕ್ಕಿಯ ಮೂಟೆಯನ್ನು ಎಳೆದು ಒಂದು ಟೇಬಲ್ ಮಾಡಿದರು. ತಮ್ಮ ಬ್ಯಾಗಿನಿಂದ ಪ್ಲಾಸ್ಟಿಕ್ ಶೀಟ್ ಎಳೆದು ಅದರ ಮೇಲೆ ಹಾಸಿದರು.

ಮಾತನಾಡದೇ ಅವಳ ಕೈಹಿಡಿದು ಆ ಮೇಕ್ ಶಿಫ್ಟ್ ಟೇಬಲ್ ಮೇಲೆ ಮಲಗಿಸಿದರು. ಹೆರಿಗೆಯ ಬೇನೆ ನಿಧಾನವಾಗಿ ಬರುತ್ತಿತ್ತು. ಆ ಹುಡುಗಿ ಈಗ ಬಾಯಿ ತೆರೆದಳು.

"ಡಾಕ್ಟರ್, ನನ್ನ ಕಥೆ ಕೇಳಿದ್ರ ನೀವು ಖಾತ್ರಿ ನನ್ನ ಬದುಕ ಉಳಿಸೋದಿಲ್ಲ..."

ಅವಳು ಯಾವುದೋ ಹಳ್ಳಿಯ ಜಮೀನುದಾರರ ಏಕ ಮಾತ್ರ ಪುತ್ರಿ ಅಲ್ಲಿ ಹೈಸ್ಕೂಲ್ ಇರಲಿಲ್ಲ. ಮನೆಯಲ್ಲಿ ಪಾಠ ಹೇಳಿಸಲಿಕ್ಕೆ ಬೆಳಗಾವಿಯಿಂದ ಒಬ್ಬ ಶಿಕ್ಷಕರನ್ನು ಕರೆಯಿಸಿ ಮನೆಯಲ್ಲಿ ಇಟ್ಟುಕೊಂಡಿದ್ದರು. ಯೌವನದ ಕಾಲ.

ಪರಿಚಯ ಪ್ರಣಯಕ್ಕೆ ತಿರುಗಿತು. ಅವಳು ಅರಿಯದೇ ಬಸಿರಾದಳು. ಶಿಕ್ಷಕ ಓಡಿ ಹೋದ. ಬಸಿರು ತೆಗಿಸಲು ಎಷ್ಟೋ ಪ್ರಯತ್ನ ಮಾಡಿದರು. ದೇಶಿ ಔಷಧಿ, ನಾಟಿ ಪ್ರಯೋಗ ಮಾಡಿದರೂ ಏನೂ ಫಲಿಸಲಿಲ್ಲ. ಗಟ್ಟಿಪಿಂಡ ಹಾಗೆಯೇ ಮುಂದುವರೆಯಿತು.

ಅವಿವಾಹಿತ ಕನ್ಯೆ. ಊರಲಿದ್ದರೆ ಸುದ್ದಿಯಾಗುವುದು ಎಂದು ಹೆದರಿ ಮೂಕಿಯಾದ, ನಂಬಿಕೆಯ ಮನೆಗೆಲಸದ ಮುದುಕಿಯ ಜೊತೆ ಈ ಕಾಡಿನ ಅಂಚಿನಲ್ಲಿ ಇರಿಸಿದ್ದರು. ಹೆರಿಗೆಯಾದ ಕೂಡಲೇ ಮಗುವನ್ನು ಯಾವುದೋ ಅನಾಥ ಆಶ್ರಮಕ್ಕೆ ದಾನ ಮಾಡಿ ಈ ಹುಡುಗಿಯ ಮರುಮದುವೆ ಮಾಡಬೇಕೆಂಬುದು ಅವರ ಯೋಜನೆ.

ಆದರೆ ದುರ್ದೈವದಿಂದ ಹೆರಿಗೆಯಲ್ಲಿಯೇ ಕಷ್ಟ ಕಂಡು ಬಂದಿತು. ಆದುದರಿಂದ ಈ ವೈದ್ಯರನ್ನು ಕರೆದುಕೊಂಡು ಬಂದಿದ್ದರು.

ಕನ್ಯೆ-ಬಸಿರಾಗಿದ್ದಕ್ಕೆ ಮನೆಯಲ್ಲಿಯ ಹಿಂಸೆ, ಹೊಡೆತ, ಬಯ್ಗಳ ನೋಡಿ ಅವಳಿಗೆ ಅಲ್ಲಿಗೆ ತಿರುಗಿ ಹೋಗುವ ವಿಚಾರವೇ ಮೈಮೇಲೆ ಮುಳ್ಳು ತರಿಸುತ್ತಿತ್ತು.



ಅಷ್ಟರಲ್ಲಿ ಹೆರಿಗೆ ಬೇನೆ ಮತ್ತೆ ಬಂದಿತು. ತೀರ ಕಷ್ಟದಿಂದ ೩-೪ ಗಂಟೆ ಕಳೆದ ಮೇಲೆ 'ಮಗು' ತಾಯಿಯನ್ನು ಬಿಟ್ಟು ಹೊರಬಂದಿತು.

ತಾಯಿ ಮಗುವಿನ ಬಗ್ಗೆ ಏನೂ ಕೇಳಲಿಲ್ಲ, ನೋಡಲಿಲ್ಲ. ನಮ್ಮ ತಂದೆಯೇ “ಮಗಳು ಛಲೋ ಇದ್ದಾಳ, ಹೆಲ್ದಿ ಬೇಬಿ” ಎಂದರು. ಅದನ್ನು ಕೇಳಿದ ಕೂಡಲೇ ಅವಳು ಮತ್ತೆ ಅಳಲು ಆರಂಭಿಸಿದಳು.

ಮಗು ಸರಿಯಾಗಿ ಅಳುತ್ತಿರಲಿಲ್ಲ. ಆಗಿನ ಪದ್ಧತಿಯಂತೆ ತಲೆ ಕೆಳಗೆ ಮಾಡಿ, ಕಾಲು ಮೇಲೆ ಮಾಡಿ ಅದಕ್ಕೆ ಮೃದುವಾಗಿ ಹೊಡೆದು ಅಳಿಸುವ ಪ್ರಯತ್ನ ನಮ್ಮ ತಂದೆ ಮಾಡುತ್ತಿದ್ದರು.

“ಡಾಕ್ಟರ್ ಹೆಣ್ಣು ಮಗೂನ? ಅದನ್ನ ಬದುಕಿಸಲಿಕ್ಕೆ ಪ್ರಯತ್ನ ಮಾಡಬೇಡಿರಿ, ಅದು ನನ್ಹಂಗ ಕಷ್ಟಪಡಬೇಕು. ಅನಾಥ ಆಶ್ರಮ ಸೇರಬೇಕು. ಸುಮ್ಮನೆ ಬಿಟ್ಟು ಬಿಡಿರಿ. ಸಾಯಲಿ ಬಿಡ್ರಿ...” ಎಂದು ಒಂದೇ ಸಮನೇ ಗೋಗರೆದಳು. ಅವಳ ಮಾತಿಗೆ ಕಿವಿಗೊಡದೇ ನಮ್ಮ ತಂದೆ, “ನಾನು ಕಟಕ ಅಲ್ಲ, ಡಾಕ್ಟರ್ ಇದ್ದೇನಿ. ಸಮಾಜದಾಗ ಯಾರು ಏನು ಹೇಳಿದ್ರೂ ನಮ್ಮ ಕೆಲಸ ಜೀವ ಉಳಿಸೋದು. ಅದು ಹೆಂಣಿರಲಿ, ಗಂಡಿರಲಿ, ಸಿರಿವಂತರು ಇರಲಿ, ಬಿಡಲಿ, ನಾವು ನಮ್ಮ ಕೆಲಸ ಮಾಡಬೇಕು. ಯಾಕೆಂದರೆ ಅದು ನನ್ನ ಧರ್ಮ” ಎಂದರು.

ಅವರ ಮಾತಿಗೆ ಹೂಂಗುಡುವಂತೆ ಮಗು ಅಳಲಿಕ್ಕೆ ಆರಂಭಿಸಿತು. ಮಗುವಿನ ಅಳುವಿನ ಶಬ್ದ ಕೇಳಿ, ಹೊರಗೆ ಹಾಕಿದ ಚಿಲಕ ತೆರೆಯಿತು. ಅಲ್ಲಿಂದಲೇ ಆ ಜನ, “ಡಾಕ್ಟರ್ ಲಗೂನ ಹೋಗೋ ತಯಾರಿ ಮಾಡ್ರಿ” ಎಂದು ಆಜ್ಞಾ ಮಾಡಿ, ಮತ್ತೆ ಚಿಲಕ ಹಾಕಿದರು.

ಮಗುವಿಗೆ ಬಿಸಿ ನೀರಿನಲ್ಲಿ ಒರೆಸುತ್ತ ನಮ್ಮ ತಂದೆ ಹೇಳಿದ್ರು,

“ನೋಡ ತಂಗಿ, ನಿನಗೆ ಇಲ್ಲಿಂದ ತಿರುಗಿ ಹೋಗಿ ನಿಮ್ಮ ಹಳ್ಳಿ ಒಳಗ ಇರಲಿಕ್ಕೆ ಬ್ಯಾಡ ಅಂತಿದ್ರ ನಾನು ನಿನಗೊಂದು ಉಪಾಯ ಹೇಳ್ತೀನಿ. ಪೂನಾದಾಗ ನರ್ಸಿಂಗ್ ಕೋರ್ಸ್ ಆದ. ಅದಕ್ಕೆ 10ನೇ ಕ್ಲಾಸ್ ತನಕ ಕಲ್ತರ ಸಾಕು. ಆ ಕಾಲೇಜನಾಗ ನನಗೆ ಪರಿಚಯದವರು ಒಬ್ಬರು ಆಷ್ಟೆ ಅನ್ನೋರು ಇದ್ದಾರೆ. ನೀ ಹೋಗಿ ಆರ್ ಹೆಚ್ ಕಳಿಸ್ಯಾನ ಅಂತ ಹೇಳು. ನೀ ಈ ಕೂಸಿನ ಜೀವ ತಗೀಬ್ಯಾಡ, ನರ್ಸ್ ಆಗಿ ಕೆಲಸ ಮಾಡು. ಇದಕ್ಕೂ ಹೆಚ್ಚು ಸಹಾಯ ಮಾಡಲಿಕ್ಕೆ ನನ್ನ ಕಡೆ ಏನಿಲ್ಲ” ಎಂದು ಅಸಹಾಯಕರಾಗಿ ಹೇಳಿದರು.

ಅವರ ಕೆಲಸ ಮುಗಿಯಿತು. ಮಗುವನ್ನು ತಾಯಿಯ ಬಳಿಗೆ ತಂದು ಮಲಗಿಸಿದರು. ಮುದುಕಿ ಮಲಗಿದ್ದಳು. ಇವರು ಬಾಗಿಲು ತಟ್ಟಿದರು.

ಹೊರಗಿನ ಗಂಡಸರು ಒಳಗೆ ಬಂದು ಕೈಯಲ್ಲಿ ಡಾಕ್ಟರ್ ಬ್ಯಾಗ್



ತೆಗೆದುಕೊಂಡರು. ಅವರಲ್ಲಿ ಸ್ವಲ್ಪ ಹಿರಿಯನು ಒಂದು 100 ರೂ. ನೋಟನ್ನು ಕೊಟ್ಟು, “ಯಾರ ಮುಂದ ಈ ಸುದ್ದಿ ಮಾತಾಡಬಾರ್ದು. ಹಾಂಗೇನಾದರ ಆದ್ರ ನಿಮ್ಮ ಎಲುಬು ಎಣಿಸಬೇಕಾಗ್ತದ” ಎಂದರು. ನಮ್ಮ ತಂದೆ ಮೌನವಾಗಿ ಹೊರ ಬಂದರು. ಆದರೆ ಅವರು ಅದೇನೋ ಚಿಂತಿಸುತ್ತಿದ್ದರು. ಚಕ್ಕಡಿಯ ಹತ್ತಿರ ಬಂದ ಕೂಡಲೇ,

“ನಾನು ನನ್ನ ಚಾಕೂ ಮತ್ತು ಬಂದೇನಿ. ಈಗ ಬತ್ತೇನಿ ಅಂತಾ ಒಳಗೆ ಹೋದರು”

ಕಣ್ಣೀರು ತುಂಬಿ ಮಗುವನ್ನೇ ನಿಟ್ಟಿಸುತ್ತಿದ್ದ ಆ ಹೊಸ ತಾಯಿಗೆ, “ಇದು ನನ್ನ ಮೊದಲ ಪ್ರಾಕ್ಟಿಸ್ ಹಣ, 100 ರೂ. ಇದನ್ನು ತಗೊಂಡು ಹೆಂಗರ ಮಾಡಿ ಪುಣೆಗೆ ಹೋಗು. ದೊಡ್ಡ ಊರು. ಅಲ್ಲಿ ಯಾರೂ ಏನೂ ಕೇಳೋದಿಲ್ಲ. ಅಲ್ಲದನ ಪುಣೆದಾಗ ಹೆಣ್ಣುಮಕ್ಕಳು ಬಾಳ ಕಲಿತವರು, ಮುಂದುವರೆದವರು. ನಿಂಗ ತ್ರಾಸ್ ಆಗೋದಿಲ್ಲ” ಎಂದು ಹೇಳಿ ಆ ಮಗುವಿನ ಕೈಯಲ್ಲಿ 100 ರೂ. ಇರಿಸಿ ಹಿಂದೆ ತಿರುಗದೇ, ಉತ್ತರಕ್ಕೆ ಕಾಯದೇ ಹೊರಗೆ ಬಂದರು. ಆಗ ಅವರ ಸಂಬಳ 75 ರೂ.

ಮತ್ತೆ ಚಕ್ಕಡಿಯ ಪ್ರವಾಸ, ಹೋದ ದಾರಿ ಬಂದ ದಾರಿ ತಿಳಿಯದಂಥ ಜಡಿ ಮಳೆ. ಕತ್ತಲೆಯ ಕಾಡು. ತಿರುಗಿ ಬಂದು ಆಸ್ಪತ್ರೆ ಹತ್ತಿರ ಇಳಿಸಿ, ಮತ್ತೊಂದು ಸಾರಿ ತಾಕೀತು ಮಾಡಿ ಎಲ್ಲರೂ ಹೊರಟು ಹೋದರು,

ಇದೊಂದು ಕನಸೇ, ಕನಸಿನಲ್ಲಿ ನಡೆದ ಘಟನೆ ಎನ್ನುವಂತೆ ಅವರಿಗೆ ಅನಿಸಿತು. ಈ ಗದ್ದಲದಲ್ಲಿ ಅವರು ಅವಳ ಹೆಸರನ್ನು ಕೇಳಲಿಲ್ಲ, ತಮ್ಮ ಹೆಸರೂ ಹೇಳಲಿಲ್ಲ.

ಕಾಲ ಉರುಳಿತು. ಅಲ್ಲಿಂದ ಮರುವರ್ಷ ಅವರಿಗೆ ಬದಲಿ ವರ್ಗಾವಣೆ ಆಯಿತು. ಮುಂದೆ ಅವರು ಮದುವೆಯಾದರು. ಮಕ್ಕಳೂ ಆದವು. ಆದರೆ ಅವರ ಅಂತರಾಳದಲ್ಲಿ ಒಂದು ನೋವು ಉಳಿದಿತ್ತು. “ತಾನು ಹೆರಿಗೆಯ ವಿಷಯದಲ್ಲಿ ಹೆಚ್ಚಿಗೆ ಓದಬೇಕು. ಹೆಚ್ಚು ಕಲಿಯಬೇಕು. ಅಂದು ಏನೋ ದೈವಕೃಪೆಯಿಂದ ಆ ಪೇಶೆಂಟ್ ಉಳಿದಳು. ಆಕಸ್ಮಾತ್ ಸತ್ತಿದ್ದರೆ, ತಮ್ಮ ಜ್ಞಾನದ ಕೊರತೆಯಿಂದ ಹೀಗೆ ಆಯಿತಲ್ಲಾ ಎನ್ನುವ ತಪ್ಪಿತಸ್ಥ ಮನೋಭಾವವು ಉಳಿಯುತ್ತಿತ್ತು” ಎನ್ನಿಸುತ್ತಿತ್ತು.

ಅದನ್ನು ಕಾರ್ಯಾಚರಣೆ ಮಾಡಲು ಅವರು ನಾನು ಹುಟ್ಟಿದ ವರ್ಷ ಮುಂಬೈಗೆ ಹೋಗಿ ಎಂಬಿಎಸ್ ಮುಗಿಸಿದರು. ಮುಂದೆ ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಸರಕಾರಿ ವೈದ್ಯರಾದರು. ನಂತರ 1956ರಲ್ಲಿ ಪ್ರಾಂತಾವಾರು ರಚನೆಯಾದಾಗ, 'ನಾವು ಕನ್ನಡದವರು, ಕರ್ನಾಟಕದಲ್ಲಿಯೇ ಇರಬೇಕು, ಮಕ್ಕಳು ಯಾವ ಭಾಷೆಯ ಸೊಂಕಿಲ್ಲದೇ ಶುದ್ಧವಾಗಿ, ಮುಕ್ತವಾಗಿ ಕನ್ನಡ ಮಾಧ್ಯಮದಲ್ಲಿಯೇ ಕಲಿಯಬೇಕೆಂಬ ನನ್ನ ತಾಯಿ ಶ್ರೀಮತಿ ವಿಮಲಾ ಕುಲಕರ್ಣಿಯವರ ಇಚ್ಛೆಯಂತೆ ಕರ್ನಾಟಕಕ್ಕೆ ಬಂದೆವು. ಮಹಾರಾಷ್ಟ್ರದ ನಂಟು ಹರಿಯಿತು.



ಅವರು ಮುಂದೆ ಅನೇಕ ವರ್ಷ ಕೆಲಸ ಮಾಡಿದರೂ ಆ 'ಅ ತೃಪ್ತಿ' ಕಲಿಯಬೇಕು ಎನ್ನುವದು ಹೋಗಲೇ ಇಲ್ಲ. ಮತ್ತೆ, ಆಗಿನ ಮದ್ರಾಸಿಗೆ ಹೋಗಿ ಪ್ರಸವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಹುಬ್ಬಳ್ಳಿಯ ಕೆಎಂಸಿಯಲ್ಲಿ ಪ್ರಾಧ್ಯಾಪಕರಾರು.

ತಮ್ಮ ಬದುಕಿನ ಉದ್ದಕ್ಕೂ ಸಾವಿರಾರು ತರುಣ ವೈದ್ಯರಿಗೆ ವಿದ್ಯಾದಾನ, ಅನುಭವ ಜ್ಞಾನ ನೀಡಿ, ಸಹಸ್ರ ಸ್ತ್ರೀಯರ ಹೆರಿಗೆ ಮಾಡಿಸಿ ಸಾರ್ಥಕ ಜೀವನ ನಡೆಸಿದರು.

ಕಾಲಕ್ರಮೇಣ ಅವರು ರಿಟೈರ್ ಆದರು. ಮಕ್ಕಳು ಬೆಳೆದು ತಮಗೆ ತಿಳಿದ ವೃತ್ತಿಯನ್ನು ಹಿಡಿದರು.

ಜ್ಞಾನದ ದಾಹ ಆರದ ನಮ್ಮ ತಂದೆ ಪ್ರತಿವರ್ಷವೂ ಸ್ತ್ರೀರೋಗದ ಕಾನ್ಸರೆನ್ಸ್ಗೆ (ಸಮ್ಮೇಲನಕ್ಕೆ) ಹೋಗುತ್ತಿದ್ದರು. ನೋಟ್ಸ್ ಮಾಡುತ್ತಿದ್ದರು.

ಎಂದಿನಂತೆ ಒಮ್ಮೆ ಅವರು ಕಾನ್ಫರೆನ್ಸ್‌ಗೆ ಹೋದಾಗ ವೇದಿಕೆಯ ಮೇಲೆ ಸುಮಾರು 35-40 ವರ್ಷದೊಳಗಿನ ವೈದ್ಯಳೊಬ್ಬಳು ಬಹಳ ಚೆನ್ನಾಗಿ ಭಾಷಣ ಮಾಡಿದಳು. ತನ್ನ ಅಧ್ಯಯನದ ಪೇಪರ್ ಬಗ್ಗೆ ಹೇಳಿದಳು. ನಮ್ಮ ತಂದೆಗೆ ಅವಳು ಮಂಡಿಸಿದ ಪ್ರಬಂಧ ಬಹಳ ಚೆನ್ನಾಗಿ ಅನಿಸಿತು.

ಅವಳು ವೇದಿಕೆಯಿಂದ ಕೆಳಗೆ ಇಳಿದ ಕೂಡಲೇ ಇವರು ಅವಳ ಬಳಿಗೆ ಹೋಗಿ, “ಮೇಡಮ್ ನಿಮ್ಮ ಭಾಷಣ, ಜ್ಞಾನ ಬಹಳ ಚೆನ್ನಾಗಿತ್ತು. ಅಭಿನಂದನೆಗಳು. ನೀವು ಯಾವ ಮೆಡಿಕಲ್ ಕಾಲೇಜ್‌ನಲ್ಲಿ ಕಲಿಸುತ್ತೀರಿ?” ಎಂದರು.

ಅದಕ್ಕೆ ಅವಳು ನಸುನಕ್ಕು, “ಇಲ್ಲ ಸರ್, ನಾನು ಹಳ್ಳಿಯಲ್ಲಿ ವೈದ್ಯಳಾಗಿದ್ದೇನೆ, ಅಲ್ಲಿಯೇ ಸುತ್ತಮುತ್ತಲ ಜನಕ್ಕೆ ಸಹಾಯ ಮಾಡುತ್ತೇನೆ” ಎಂದಾಗ ಇವರಿಗೆ ಅಚ್ಚರಿಯಾಯಿತು.

ಅಷ್ಟರಲ್ಲಿ ಯಾರೋ ನಮ್ಮ ತಂದೆಯ ಹಳೆಯ ಸ್ನೇಹಿತರು, “ಆರ್ ಹೆಚ್ ಲಗೂನ ಬಾ, ಹೊತ್ತಾಗ್ತದ” ಎಂದರು.

ನಮ್ಮ ತಂದೆ ಹಿಂದೆ ತಿರುಗಿದರು. ಇನ್ನೇನು ಹೊರಡಲು ತಯಾರಾದ ಆ ಸ್ತ್ರೀರೋಗ ತಜ್ಞೆ ಮಿಂಚು ಹೊಡೆದಂತೆ ಹಿಂದೆ ತಿರುಗಿ, ನಮ್ಮ ತಂದೆಗೆ,

“ಸರ್, ಆರ್‌ಹೆಚ್ ಅಂದ್ರೆ ನೀವೇನಾ?” ಎಂದಳು.

“ಹೌದು, ನನ್ನ ಹೆಸರು ಆರ್.ಹೆಚ್. ಕುಲಕರ್ಣಿ. ಆದ್ರೆ ನನ್ನ ಪರಿಚಯದವರೆಲ್ಲಾ ಅಂತೆಯೇ ಕರೆಯುತ್ತಾರೆ”

'ಸುಮಾರು 35 ವರ್ಷದ ಹಿಂದೆ ನೀವು ಕರ್ನಾಟಕ-ಮಹಾರಾಷ್ಟ್ರದ ಚಂದಗಜದ ಹತ್ತಿರದ ಹಳ್ಳಿಯಲ್ಲಿ ವೈದ್ಯರಾಗಿದ್ರಾ?”



“ಹೌದು, ಅದು ನನ್ನ ಮೊದಲನೇ ಪೋಸ್ಟಿಂಗ್, 1943-45ರವರೆಗೆ ಇದ್ದೆ. ಮತ್ತೇ ಹೋದಂತೆ ಆಗಿದೆ.”

“ಸರ್ ನೀವು ನಮ್ಮ ಮನೆಗೆ ಎರಡು ನಿಮಿಷ ಬರೇಕು”

“ನಿಮ್ಮ ಮನೆ ಎಲ್ಲಿದೆ?”

“ಇಲ್ಲಿಂದ 16 ಕಿ.ಮೀ ದೂರದ ಹಳ್ಳಿಯಲ್ಲಿದೆ. ಸರ್ ನೀವು ಬರಲೇಬೇಕು, ಎರಡೇ ನಿಮಿಷ.”

ಆತ್ಮೀಯ ಭಾವದಿಂದ ಅವಳು ಹಿಡಿದ ಕೈ ಬಿಡಲೇ ಇಲ್ಲ. ನನ್ನ ತಂದೆ ಈಗ ಗಲಿಬಿಲಿಗೊಂಡರು. ಕೇವಲ ನಿಮ್ಮ ಭಾಷಣ ಚೆನ್ನಾಗಿದೆ' ಎಂದು ಹೇಳಲು ಹೋದರೆ ಇದೇನು ಆ ಅಪರಿಚಿತ ವೈದ್ಯೆ ಮನೆಗೆ ಕರೆಯುತ್ತಾಳೆ. ಸ್ವಲ್ಪ ವಿಚಿತ್ರ ಅನಿಸಿತು. ಆದರೂ ಸಂಕೋಚ ಬದಿಗಿರಿಸಿ,

“ಸರಿ. ಆದ್ರೆ ನನ್ನ ಬೇಗ ವಾಪಸ್ ಕಳಿಸಬೇಕು. ನನಗೆ ರಾತ್ರಿ ಟ್ರೈನ್ ಇದೆ” ಎಂದರು.

ಮಾತನಾಡದೇ ಅವರನ್ನು ಕೈಹಿಡಿದು ಕರೆದುಕೊಂಡು ಹೋಗಿ ಕಾರ್ ಹತ್ತಿಸಿದಳು ಆ ವೈದ್ಯೆ.

ದಾರಿಯಲ್ಲಿ ಹೋಗುವಾಗ ಅವಳ ಕಥೆ ಗೊತ್ತಾಯಿತು. ಅವಳು ಸ್ತ್ರೀರೋಗ ತಜ್ಞೆ, ಗಂಡ ಎಲುಬು- ಕೀಲುಗಳ ವೈದ್ಯ, ಹಳ್ಳಿಯಲ್ಲಿ ಅವರದೇ ನರ್ಸಿಂಗ್ ಹೋಮ್ ಇದೆ.

ಇವರು ಮನೆ ಮುಟ್ಟಿದಾಗ ಬಾಗಿಲನ್ನು ತರೆದವಳು ಸುಮಾರು 50ರ ಅಂಚಿನಲ್ಲಿರುವ ಒಬ್ಬ ಮಹಿಳೆ,

“ಅವ್ವಾ, ನಾ ಯಾರನ್ನ ಕರೆತಂದೇನಿ ನೋಡು, ಆರ್‌ಹೆಚ್ ಅವರನ್ನ ಕಳೆದ ಅನೇಕ ವರ್ಷದಿಂದ ನೀ ಅವರ ಹಾದಿ ಕಾಯ್ತಿದ್ದಲ್ಲಾ ಅವರ ಸ್ವತಃ ಬಂದಾರ” ಎಂದಳು.

ಆ ಸ್ತ್ರೀ ನಮ್ಮ ತಂದೆಯ ಕಾಲು ಹಿಡಿದು ಅಳಲು ಆರಂಭಿಸಿದಳು. ಎಲ್ಲವೂ ಒಂದು ಸಿನಿಮಾದಂತೆ ಅನಿಸಿತು ನಮ್ಮ ತಂದೆಗೆ.

ನಂತರ ಅವಳು, “ಡಾಕ್ಟರ್ ನೀವು ಕೂಡ್ರಿ” ಎಂದು ಸೋಫಾದ ಮೇಲೆ ಕೂಡಿಸಿ,

“ನಿಮಗೆ ನೆನಪದೇನು? ರಾತ್ರಿ, ಸುರಿಯೋ ಮಳ್ಯಾಗ ಅಕ್ಕಿ ಚೀಲದ ಮೇಲೆ ಮಾಡಿಸಿದ ಹೆರಿಗೆ ನಿಮ್ಮ ಮೊದಲ ಪ್ರಾಕ್ಟಿಸ್ 100 ರೂ. ಕೂಸಿನ ಕೈಯಾಗ ಕೊಟ್ಟು,



'ಪುಣೇಕ್ಕ ಹೋಗು, ನರ್ಸ್ ಆಗು' ಅಂದಿದ್ದು, ವೈದ್ಯರ ಜೀವನ ಜೀವಾ ಉಳಿಸೋದು ಅಂತಾ ತಿಳವಳಿಕೆ ಹೇಳಿದ್ದು...”

ಭೂತಕಾಲದಲ್ಲಿ ಇತಿಹಾಸದಲ್ಲಿ ನಡೆದ ಘಟನೆ ಎಲ್ಲಿಂದಲೋ ತೂರಿ ಬಂದವು. ಆ ಅಸಹಾಯಕ ಅವಿವಾಹಿತ ಕನ್ಯೆಯ ಮಗು, ಸುರಿಯುತ್ತಿರುವ ಧೋ ಧೋ ಮಳೆ, ಕಂಬಳಿಯ ಮುಸುಗಿನ ಲಾಠಿ ಹಿಡಿದ ಪುರುಷರು. ಹೌದು, ಆ ಘಟನೆ ನಿಚ್ಚಳವಾಗಿ ನೆನಪಾಯಿತು.

ಮತ್ತೇ ಇದೇನು? ಅನ್ನುವಂತೆ ಮುಖ ನೋಡಿದರು. "ಆ ಪೇಶಂಟ್ ನಾನೇ ನೀವು ಕೊಟ್ಟ 100ರೂ ಸಹಾಯದಿಂದ ಮಗುವಿನೊಂದಿಗೆ ಪುಣೆಗೆ ಓಡಿ ಹೋದೆ. ಅಲ್ಲಿಯ ನರ್ಸಿಂಗ್ ಸ್ಕೂಲಿನಲ್ಲಿ ಅಪ್ಪೆಯವರನ್ನು ಭೇಟಿ ಮಾಡಿದೆ. ಅವರು ನಿಮ್ಮ ಹೆಸರು ಕೇಳಿ ನನಗೆ ಅಡಿಶನ್ ಮಾಡಿದರು. ಹೇಗೋ ಕಷ್ಟಪಟ್ಟು ಮಗುವನ್ನು ಕಟ್ಟಿಕೊಂಡು ನರ್ಸ್ ಆದೆ. ಮುಂದೆ ಮುಂಬೈ ಸರಕಾರದಲ್ಲಿ ಕೆಲಸವೂ ಆಯಿತು. ನಮ್ಮ ಮನೆಯವರು ಮುಂಬೈಗೆ ಬಂದು ತಿರುಗಿ ಕರೆದುಕೊಂಡು ಹೋಗಲು ಪ್ರಯತ್ನಪಟ್ಟರೂ ನಾನು ಹೋಗಲಿಲ್ಲ. ಅವರ ಹಣವನ್ನೂ ಮುಟ್ಟಲಿಲ್ಲ. ನನ್ನ ಕಾಲ ಮೇಲೆ ನಾನು ನಿಂತುಕೊಂಡೆ. ಆದ್ರೆ ನನ್ನ ಈ ಮಗಳನ್ನು ಸ್ತ್ರೀರೋಗ ತಜ್ಞಳನ್ನಾಗಿ ಮಾಡಬೇಕು ಎಂದು ಪಣ ತೊಟ್ಟೆ. ಇವಳು ಚೆನ್ನಾಗಿ ಓದಿದಳು. ನಮ್ಮ ಅಳಿಯನಂತೂ ಮಗನಿಗಿಂತ ಹೆಚ್ಚು. ನನ್ನ ಕಥೆ ಅವರಿಗೆ ಗೊತ್ತು, ನನ್ನ ಥರ ಬೇರೆಯವರಿಗೆ ತೊಂದರೆಯಾಗಬಾರದೆಂದು ಪಟ್ಟಣವನ್ನು ಬಿಟ್ಟು ಈ ಹಳ್ಳಿಯಲ್ಲಿ ನೆಲೆಸಿದ್ದಾರೆ. ನಾನೂ ಅವರಿಗೆ ಸಹಾಯ ಮಾಡುತ್ತೇನೆ...."

ಅಷ್ಟರಲ್ಲಿ ಮಗಳು ತಲೆ ಹಾಕಿದಳು.

"ಅವ್ವ ನಿಮ್ಮ ಸುದ್ದಿ ಹೇಳದ ದಿನವಿಲ್ಲ. ಆದರೆ ನಿಮ್ಮ ಬಗ್ಗೆ ನಮಗೇನೂ ಗೊತ್ತಿಲ್ಲ. ಮಹಾರಾಷ್ಟ್ರದ ಸರ್ಕಾರಿ ವೈದ್ಯರಲ್ಲಿ ಅನೇಕ ರೀತಿ ಹುಡುಕಾಡಿಸಿದರೂ ಪತ್ತೆ ಆಗಲಿಲ್ಲ. ಅಪ್ಪೆಯವರು ಬಹು ಹಿಂದೆಯೇ ತೀರಿಕೊಂಡಿದ್ದರು. ಒಂದೇ ಒಂದು ಮಾತು ಅವ್ವನ ತಲೆಯಲ್ಲಿ ಇದ್ದಿತು. ಅವರಿಗೆ ಅವರ ಮಿತ್ರರು ಆರ್‌ಹೆಚ್ ಅಂತಾರೆ' ಅನ್ನೋದು. ಅದಕ್ಕೇ ಈ ಹೊತ್ತು ನಿಮಗೆ ಯಾರೋ ಆರ್‌ಹೆಚ್ ಅಂತಾ ಕರೆದ ಕೂಡಲೇ ನಾನು ನಿಮ್ಮನ್ನು ಮಾತನಾಡಿಸಿದೆ. ಸರ್, ನೀವು ನಮ್ಮ ತಾಯಿಗೆ ಮರುಜೀವ ಕೊಟ್ಟರಿ. ಉಸಿರುಗಟ್ಟಿ ಸಾಯುತ್ತಿದ್ದ, ಲೋಕಕ್ಕೆ ಬೇಡವಾದ, ಹುಟ್ಟುವ ಮುನ್ನವೇ ತಿರಸ್ಕಾರದ ಜೊತೆ ಬಂದ ನನಗೆ ಜೀವದಾನ ಮಾಡಿದಿರಿ. ಈ ಜನ್ಮದಲ್ಲಿ ನಿಮ್ಮ ಉಪಕಾರವಂತೂ ಮರೆಯಲಾಗುವದಿಲ್ಲ, ತೀರಿಸಲಂತೂ ಸಾಧ್ಯವಿಲ್ಲ...."

ಎಲ್ಲರ ಕಣ್ಣುಗಳಿಂದ ಕಂಬನಿ ಇಳಿಯುತ್ತಿದ್ದವು. ಕಣ್ಣೀರಿನಿಂದ ಮಂಜಾದ ಕಣ್ಣುಗಳಿಂದ ನಮ್ಮ ತಂದೆ ತಲೆ ಎತ್ತಿ ಹೊರಗೆ ನೋಡಿದರು.

ಆಸ್ಪತ್ರೆಯ ಫಲಕ, "ಆರ್ ಹೆಚ್ ಡಯಾಗೊಸ್ಟಿಕ್" ಕಂಡಿತು!

**ಸಂಪಾದಕರ ವಿಳಾಸ**

೧. ಪ್ರೊ. ತಮಿಳ್ ಸೆಲ್ವಿ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಕನ್ನಡ ವಿಭಾಗ, ಮದ್ರಾಸ್ ವಿಶ್ವವಿದ್ಯಾಲಯ

ಮರೀನಾ ಆವರಣ, ಚೆನ್ನೈ ೬೦೦ ೦೦೫

ಫೋನ್ ೯೮೪೦೨ ೩೯೩೨೧

dr.tamilselvee@gmail.com

೨. ಶ್ರೀಮತಿ, ಬಾ.ಹ. ರಮಾಕುಮಾರಿ

ನಂ. ೯೬೩, ೨೪ನೇ ಕ್ರಾಸ್

ಎಸ್.ಐ.ಟಿ. ಬಡಾವಣೆ

ತುಮಕೂರು-೫೭೨ ೧೦೩

೯೪೪೮೬೯೪೩೨೩

bhramaviji@gmail.com

**ಲಲಿತ ಪ್ರಬಂಧಕಾರ್ತಿಯರ ವಿಳಾಸಗಳು**

೧. ಸುನಂದಮ್ಮ ಟಿ.

ನಂ.೭೪, ೨ನೇ ಕ್ರಾಸ್, ಗಾಯತ್ರಿ ದೇವಿ

ಪಾರ್ಕ್ ಬಡಾವಣೆ, ವಯ್ಯಾಲಿ ಕಾವಲ್

ಬೆಂಗಳೂರು- ೫೬೦೦೦೩

೯೮೪೫೯ ೨೭೧೭೪

shrilatasrinath@gmail.com

೨. ನಾಗಲಕ್ಷ್ಮಿ ಹರಿಹರೇಶ್ವರ

ನಂ. ೪, ೫ನೇ ಅಡ್ಡರಸ್ತೆ, ಸರಸ್ವತಿಪುರಂ

೩ನೇ ಮುಖ್ಯರಸ್ತೆ,

ಮೈಸೂರು ೫೭೦ ೦೦೮.

೦೮೨೧-೨೫೪೪೮೪೧

amerikannada_usa@hotmail.com

೩. ಭುವನೇಶ್ವರಿ ಹೆಗಡೆ

ನಂ. ೩೦೩, ಅಡೋನಿಯಾ ಅಪಾರ್ಟ್‌ಮೆಂಟ್

ಆಳ್ವಾಸ್ ರೇಸ್ ರಸ್ತೆ, ಕದ್ರಿ, ಮಂಗಳೂರು-

೫೭೫ ೦೦೨. ೯೪೪೮೮೮೮೩೫೧೫೫.

hegdebhuvaneshwari@gmail.com.

೪. ಜಯಶ್ರೀ ದೇಶಪಾಂಡೆ

ನಂ. ೪೩೦೩, 'ಕಾನ್ಸೆಪ್ಟ್', ನಂದಿ

ಎನ್‌ಕ್ಲೇವ್, ೨ನೇ ಕ್ರಾಸ್, ೫ನೇ ಬ್ಲಾಕ್

ಬನಶಂಕರಿ ೩ನೇ ಹಂತ

ಬೆಂಗಳೂರು-೫೬೦ ೦೮೫.

೯೯೮೬೩೭೯೦೨೪.

jayashree.deshpande@gmail.com

೫. ಜ್ಯೋತ್ಸ್ನಾ ಕೃಷ್ಣಾನಂದ ಕಾಮತ್

ನಂ. ೧೧೦, ಶಶಿಕಿರಣ

೧೮ನೇ ಅಡ್ಡರಸ್ತೆ ಮಲ್ಲೇಶ್ವರಂ

ಬೆಂಗಳೂರು ೫೬೦ ೦೫೫.

೯೮೪೪೭ ೨೬೧೭೬.

JyotsnaKamat72@gmail.com

೬. ಡಾ ಗುರುದೇವಿ ಹುಲೆಪ್ಪನವರಮಠ

ಮೃತ್ಯುಂಜಯ ಪ್ಲಾಝು

ಸಿಟ್ಟಾಳ ಕ್ರಾಸ್, ಮಹಾಂತೇಶ ನಗರ

ಬೆಳಗಾವಿ ೫೯೦ ೦೧೭, 2099662902.

raghujudoka@gmail.com

೭. ಸುನಂದಾ ಬೆಳಗಾಂವಕರ

೦೮೦-೨೩೪೧೦೪೩೬,

೨೩೪೧೪೬೧೪.

೮. ವರದ ಶ್ರೀನಿವಾಸ್

'ಸೌಹಾರ್ದ', ೩೧/೨

ಗೋವಿಂದಪ್ಪ ರಸ್ತೆ, ಬಸವನಗುಡಿ

ಬೆಂಗಳೂರು ೫೬೦ ೦೦೪.

೯೮೪೪೩ ೮೫೦೧೬,

೯. ಜಯಾ ಯಾಜಿ ಶಿರಾಲಿ

೧೨೦, ಎಂ.ಐ.ಜಿ.೧, ೩ನೇ ಮುಖ್ಯರಸ್ತೆ

ಹೌಸಿಂಗ್ ಬೋರ್ಡ್, ಜ್ಯೋತಿ ನಗರ

ಚಿಕ್ಕಮಗಳೂರು - ೫೭೭ ೧೦೨.

೯೪೮೨೫೫೯೭೩೪.

jayayaji@yahoo.com

೧೦. ಶಾರದಾ ಹೆಮ್ಮಿಗೆ

ಕಮಲಾ ಹೆಮ್ಮಿಗೆ (ಮಗಳು)

ನಂ. ೧೦೧, ಪೆರಿಜ್ವಾನ್ ಕೋಣಂ

ಕೊಡಪ್ಪಣ ಕುನ್ನು ಅಂಚೆ

ತ್ರಿವೇಂದ್ರಂ, ಕೇರಳ ೬೯೫ ೦೪೩.

೮೧೨೯೧ ೪೯೯೬೪.



೧೧. ಶೈಲಾ ಛಬ್ಬಿ

೧೨, 'ಮೇಘ ನಂದನ'

ತೇಜಸ್ವಿ ನಗರ, ಧಾರವಾಡ, ೫೮೦ ೦೦೨.

೮೭೬೨೩೩೪೪೨೦.

shaila.mohan@gmail.com

೧೨. ಜಾನಕಿ ಸುಂದರೇಶ್

'ಸಾಕ್ಷಿ', ಬೆಸ್ಟ್ ಇಂಗ್ಲಿಷ್ ಸ್ಕೂಲ್ ಹಿಂಭಾಗ

ಬಿ.ಸಿ.ರಸ್ತೆ, ಜೋಡುಮಾರ್ಗ,

ದಕ್ಷಿಣ ಕನ್ನಡ ಜಿಲ್ಲೆ, ೫೭೪ ೨೧೯

೯೪೪೮೯ ೮೪೮೨೦.

janaki.sundaresh@gmail.com

೧೩. ಶ್ವೇತಾ ನರಗುಂದ

೨೨, ಸುಭಾಷ ನಗರ, ಎಂ.ಎಂ.ಸೆಕ್ಟರ್-೧

ಬೆಳಗಾವಿ ೫೯೦೦೧೬,

೯೮೮೦೨ ೯೮೮೪೦.

sweta_nargund@yahoo.co.in

೧೪. ರುಚಿತಾ ಶಶಿಕಾಂತ್ (ಚೇನಾ)

ನಂ. ೩೭, 'ಶಾರದಾ ವಿಲ್ಲಾ, ೭ನೇ ಕ್ರಾಸ್,

ತುಳಸೀ ರಸ್ತೆ, ಗೋಕುಲ ಬಡಾವಣೆ,

ತುಮಕೂರು ೫೭೨೧೦೪.

೯೮೮೬೫ ೦೦೫೬೪.

tinashashikanth@gmail.com

೧೫. ನಿರ್ಮಲ ಜಿ.ವಿ.

ನಂ. ೫೭, ಬಿಳಿಗಿರಿ ಅಪಾರ್ಟ್‌ಮೆಂಟ್

೨ನೇ ಅಡ್ಡರಸ್ತೆ, ಗವಿಪುರಂ ಬಡಾವಣೆ

ಬೆಂಗಳೂರು ೫೬೦ ೦೧೯.

೯೮೪೫೨೯೩೭೦೪.

gvnirmala@gmail.com

೧೬. ಭಾರತಿ ಬಿ.ಎಸ್.

ಸಿದ್ಧೇಶ್ವರ ನಿಲಯ, ವಿಜಯ ಕಾಲೇಜು

ಸಮೀಪ, ಎಸ್.ಎಸ್.ಪುರಂ, ತುಮಕೂರು.

೮೬೧೮೩೯೬೮೦೩, ೭೩೧೦೬೫೧೪೫.

೧೭. ನಾಗವೇಣಿ ಎಚ್

ಸುಧಾ ಹಾಸ್ಪಿಟಲ್, ಹಳೆಯ ಬಸ್ ಸ್ಟ್ಯಾಂಡ್

ಸಮೀಪ, ಹೊಸಪೇಟೆ ತಾ.

ಬಳ್ಳಾರಿ ಜಿಲ್ಲೆ, ೫೮೩೨೨೧.

೯೪೪೮೬೫೩೬೭೫.

docnagani@yahoo.co.in

೧೮. ಡಾ. ಶ್ಯಾಮಲ ರವಿಶಂಕರ್

ನಂ. ೧೫೨೨, 'ಭೂಮಿಜ'

೧೭ನೇ ಬಿ ಮುಖ್ಯರಸ್ತೆ, ೧ನೇ ಹಂತ

೫ನೇ ಬ್ಲಾಕ್, ಎಚ್.ಬಿ.ಆರ್.ಲೇಔಟ್,

ಬೆಂಗಳೂರು -೪೩.

೯೭೪೦೦೦೩೩೮೮.

hyamala20@yahoo.com

೧೯. ಶಾಂತಾದೇವಿ ಹಿರೇಮಠ

'ಪ್ರಭುಸಿದ್ದ ನಿಲಯ', ವಿಕಾಸ ನಗರ

ಕೊಪ್ಪಳ ೫೮೩೨೩೧.

೯೯೪೫೫ ೨೧೨೧೩.

೨೦. ವಿಜಯಲಕ್ಷ್ಮಿ ಕೆ.ಎಂ.

ನಂ.೫೯, ೬ನೇ ಮೇನ್, ೫ನೇ ಬ್ಲಾಕ್,

ಜಯನಗರ, ಬೆಂಗಳೂರು-೪೧.

೮೧೯೭೦ ೩೫೯೧೩,

೦೮೦-೨೬೫೪೧೩೯೨

koplumane@gmail.com

೨೧. ಅನಿತಾ ನರೇಶ್ ಮಂಚಿ

ಮಂಚಿ ಪೋಸ್ಟ್, ಬಂಟ್ವಾಳ ತಾಲೂಕು

ದ.ಕ ಜಿಲ್ಲೆ, ೫೭೪ ೨೧೨.

೯೮೪೪೧೧೬೮೨೫.

aninaresh.manchi760@gmail.com

೨೨. ಮುದ್ದು ತೀರ್ಥಹಳ್ಳಿ

'ಪ್ರಶಮ', ಬೆಟ್ಟಮಕ್ಕಿ ಹೊಸ ಬಡಾವಣೆ,

ಸೀಬಿನಕೆರೆ ಅಂಚೆ, ತೀರ್ಥಹಳ್ಳಿ ೫೭೭೪೩೨.

೯೪೮೨೨೬೫೬೧೯.

muddhutheerthahalli@gmail.com

೧೩. ಸಾಯಿಲಕ್ಷ್ಮಿ

'ಹೊಂಗನಸು', ಸಿ-೧೯೫೦ ಸಹಕಾರ ನಗರ, ಸಿ ಬ್ಲಾಕ್

ಬೆಂಗಳೂರು ೫೬೦ ೦೦೯. ೯೪೪೮೫೫೩೪೫೧

sayilakshmiair@gmail.com

೧೪. ಶಾರದಾ ವಿ ಮೂರ್ತಿ

೧೦೧, ೬ನೇ ಕ್ರಾಸ್, ೩ನೇ ಮೈನ್

ಮೈಕೊ ಲೇಔಟ್, ಬಿಟಿಎಂ ಲೇಔಟ್

೨ನೇ ಹಂತ, ಬೆಂಗಳೂರು-೫೬೦ ೦೭೬.

೦೮೦-೨೬೬೮೪೪೫೧,

೯೪೮೩೫೩೬೦೯.

sharada.v.murthy@gmail.com

೧೫. ವಿಜಯ ಗುರುರಾಜ್

ನಂ.೩೨, ೪ನೇ ಮುಖ್ಯರಸ್ತೆ, ೨ನೇ ಹಂತ

ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರ

ಬೆಂಗಳೂರು ೫೬೦ ೦೮೬.

೮೩೧೦೬ ೧೨೦೮೬.

vijayagururaja53@gmail.com

೧೬. ಜಾಹ್ನವಿ ಆನಂದ ಹಳ್ಳೂರ

ನಂ. ೩೦೧-ಎ ಬ್ಲಾಕ್, ಎಸ್.ಎಂ.ಆರ್.

ವಿನಯ್ ಕ್ಯಾಸ್‌ಕೇಡ್, ಜಗದೀಶ ನಗರ

ಹೊಸ ತಿಪ್ಪಸಂದ್ರ ಅಂಚೆ

ಬೆಂಗಳೂರು-೭೫.

೯೬೮೬೯ ೮೪೮೨೬.

januhallur@gmail.com

೧೭. ಲಲಿತಾ ಹೊಸಪ್ಯಾಟಿ ಮಹಾಂತ ನಗರ

ಹುನಗುಂದ ೫೮೭ ೧೧೮.

೯೪೮೦೯ ೯೪೦೯೩.

lalithagk3@gmail.com

೧೮. ವಿಜಯಾ ಶ್ರೀಧರ್

ಕೋಂ ಡಾ|| ಕೆ.ಆರ್. ಶ್ರೀಧರ್

೧ನೇ ಮುಖ್ಯರಸ್ತೆ, ರಾಜೇಂದ್ರನಗರ

ಶಿವಮೊಗ್ಗ ೫೭೭ ೨೦೪.

೯೪೪೮೧೮೧೪೧೩.

sridhar.vijaya@rediffmail.com

೨೯. ಸ್ಮಿತಾ ಅಮೃತರಾಜ್

ಸಂಪಾಜೆ, 'ಹಸಿರು, ಬಾಲಂಬಿ ಅಂಚೆ

ಚೆಂಬು ಗ್ರಾಮ, ಮಡಿಕೇರಿ,

ಕೊಡಗು ಜಿಲ್ಲೆ ೫೭೪೨೩೪.

೯೯೮೦೪೦೨೯೬೮.

smitha.hasiru@gmail.com

೩೦. ರೋಹಿಣಿ ಎಸ್. ರಾವ್

'ಕೃಷ್ಣ ಮಾಲಾ', ಮುದಿಹಾಳ ಮುಖ್ಯ ರಸ್ತೆ

ಎಂ.ಜಿ.ನಗರ ಅಂಚೆ,

ಧಾರವಾಡ - ೫೮೦ ೦೦೬.

೯೪೮೧೧೨೪೧೨೯.

rohisrao@gmail.com

೩೧. ಗೀತಾ ಕುಂದಾಪುರ

೧೭೯, ೩ನೇ ಅಡ್ಡರಸ್ತೆ, ೩ನೇ ಮುಖ್ಯರಸ್ತೆ

'ಉಪಕಾರ್ ರೆಸಿಡೆನ್ಸಿ', ಉಲ್ಲಾಳು ಗ್ರಾಮ

ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧.

೯೫೩೮೯೧೪೫೫೦, ೦೭೩೪೨೮೧೮೪.

geetha.kundapura@yahoo.com

೩೨. ವಸುಮತಿ ಉಡುಪ

'ಗೌರಿ', ೪ನೇ ಕ್ರಾಸ್, ಗಾಂಧಿ ನಗರ 'ಎ',

ಶಿವಮೊಗ್ಗ ೫೭೭ ೨೦೧.

೮೨೧೨೫೧೨೪೮೯.

vasumathi.udupa@gmail.com

೩೩. ಉಷಾ ನರಸಿಂಹನ್

ನಂ. ೭೬, 'ಅನನ್ಯ', ೪ನೇ ಮುಖ್ಯರಸ್ತೆ

ಎನ್.ಬ್ಲಾಕ್, ಕುವೆಂಪು ನಗರ

ಮೈಸೂರು ೫೭೦ ೦೨೩

೯೯೬೪೭ ೬೮೬೩೨.

ushanarasimhan64@gmail.com

೩೪. ಡಾ. ಚೈತ್ರ ಕೆ.ಎಸ್

ದಂತವೈದ್ಯರು, 'ಅನುಗ್ರಹ', ಜಿ-೧೯೫

೧೭ನೇ ಮುಖ್ಯರಸ್ತೆ, ೭ನೇ ಅಡ್ಡರಸ್ತೆ

ಸಹಕಾರ ನಗರ, ಬೆಂಗಳೂರು-೫೬೦ ೦೯೨.

೯೮೪೫೨೨೯೫೪೨.

drkschaitra@gmail.com



೩೫. ಗಾಯತ್ರಿ ಮೂರ್ತಿ

'ಅಭ್ಯುದಯ', ೪೨೨/೨೫

೫ನೇ ಅಡ್ಡರಸ್ತೆ, ಜಯನಗರ ೭ನೇ ಬಡಾವಣೆ

ಬೆಂಗಳೂರು -೫೬೦ ೦೭೦.

೯೯೮೦೩ ೩೬೮೭೪.

gayathrimurthy.k@gmail.com

೩೬. ಸಹನಾ ಕಾಂತಬೈಲು

ಬಾಲಂಬಿ ಅಂಚೆ

ಮಡಿಕೇರಿ ತಾಲೂಕು ೫೭೪೨೩೪.

೯೦೦೮೧ ೯೬೫೨೨

sahanakanthabailu@gmail.com

೩೭. ಪ್ರಜ್ಞಾಮತ್ತಿಹಳ್ಳಿ

ಮನೆ ಸಂಖ್ಯೆ ೪೬, ಸಂತೋಷ ನಗರ

ಕೆಲಗೇರಿ ರಸ್ತೆ, ಧಾರವಾಡ ೫೮೦೦೦೮.

೯೪೪೮೨೬೭೪೧೦.

prajnamattihalli@gmail.com

೩೮. ಮಧುರ ಕರ್ಣಮ್

ನಂ, ೨೭, ಮಾತೃಸ್ಫೂರ್ತಿ

೮ನೇ ಮೇನ್, ಶಂಕರ ನಗರ ಬೆಂಗಳೂರು ೯೬

೦೮೦-೨೩೩೭೧೭೮೯,
೯೯೦೦೫೨೩೩೪೦.

madhurakarnam@yahoo.co.in

೩೯. ವಾಣಿ ಸುರೇಶ್

+೧ ೬೬೯ ೨೫೬ ೬೮೬೯

ಕ್ಯಾಲಿಫೋರಿಯಾ, ಅಮೇರಿಕ,

vaanee.suresh@gmail.com

೪೦. ಶೈಲಜಾ ಹಾಸನ್

'ಭೂಮಿಕಾ', ಶಿವಜ್ಯೋತಿ ನಗರ, ಹಾಸನ.

೯೪೪೮೬೫೩೨೮೨.

shylajahassans@gmail.com

೪೧. ಡಾ.ಸುಧಾ ರಮೇಶ್

ನಂ. ೧೦೭೬, ಗಂಗೆ ರಸ್ತೆ, ೧ನೇ ಅಡ್ಡರಸ್ತೆ,

ಜಿ-ಎಚ್ ಬ್ಲಾಕ್, ಕುವೆಂಪು ನಗರ,

ಮೈಸೂರು-೨೩.

೯೪೪೮೪೯೨೮೮೧.

srspring@rediffmail.com

೪೨. ಡಾ. ಪವಿತ್ರ ಕೆ.ಎಸ್.

ಮನೋವೈದ್ಯರು, 'ಪವಿತ್ರ',

೧ನೇ 'ಎ' ಅಡ್ಡರಸ್ತೆ, ರಾಜೇಂದ್ರನಗರ

ಶಿವಮೊಗ್ಗ, ೫೭೭ ೨೦೪.

೯೮೪೫೨೨೯೪೯೯.

pavitraks 2011@gmail.com

೪೩. ದೀಪ್ತಿ ಭದ್ರಾವತಿ

'ಸ್ನಿಗ್ಧ ನಿಲಯ', ೨ನೇ ತಿರುವು,

ಬಲಭಾಗ-ಶಂಕರಮಠ ರಸ್ತೆ

ಸಿದ್ಧಾರೂಢ ನಗರ, ಭದ್ರಾವತಿ,

೯೦೧೯೩೦೪೧೯೧.

deepthibdvt@gmail.com

೪೪. ವಸುಂಧರ ಭೂಪತಿ

ನಂ. ೨೨೨, ೨ನೇ ಇ ಕ್ರಾಸ್

೩ನೇ ಬ್ಲಾಕ್, ೩ನೇ ಹಂತ

ಬಸವೇಶ್ವರ ನಗರ, ಬೆಂಗಳೂರು -೭೯

ಮೊಬೈಲ್ : ೯೯೮೬೮೪೦೪೭೭.

bhupathivasundhara@gmail.com

೪೫. ಮಾಲತಿ ಮುದಕವಿ

ಶ್ರೀಪೂರ್ಣ ಅಪಾರ್ಟ್‌ಮೆಂಟ್

ಎಮ್ಮಿಕೆರೆ, ಮಾಲಮಡ್ಡಿ

ಧಾರವಾಡ ೫೮೦ ೦೦೭.

೯೯೦೦೮೯೬೭೯,೦೮೩೬-

೨೭೪೫೨೦೫

mudakavi@gmail.com

೪೬. ಸುಧಾ ಮೂರ್ತಿ

ಇನ್‌ಫೋಸಿಸ್ಪ್ರತಿಷ್ಠಾನನಂ.೧೮೭೮,

ನೆರಳು, ೩೯ನೇ ಕ್ರಾಸ್, ೧೧ನೇ

ಮುಖ್ಯರಸ್ತೆ, ಜಯನಗರ, ೪ನೇ ಟಿ ಬ್ಲಾಕ್,

ಬೆಂಗಳೂರು-೫೬೦ ೦೪೧

ದೂ- ೯೩೪೧೨೧೪೨೯೯

೦೮೦-೪೧೨೬೧೭೦೦

# ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

## ಕಾರ್ಯಕಾರಿ ಸಮಿತಿ

**ನಾಡೋಜ ಡಾ. ಮನು ಬಳಿಗಾರ್**, ಅಧ್ಯಕ್ಷರು
**ಡಾ. ರಾಜಶೇಖರ ಹತಗುಂದಿ**, ಗೌರವ ಕಾರ್ಯದರ್ಶಿ
**ಶ್ರೀ ಕೆ. ರಾಜಕುಮಾರ**, ಗೌರವ ಕಾರ್ಯದರ್ಶಿ
**ಶ್ರೀ ಪಿ. ಮಲ್ಲಿಕಾರ್ಜುನಪ್ಪ**, ಗೌರವ ಕೋಶಾಧ್ಯಕ್ಷರು

**ಶ್ರೀ ಮಾಯಣ್ಣ**, ಬೆಂಗಳೂರು ನಗರ
**ಶ್ರೀ ಚಿ.ಮಾ.ಸುಧಾಕರ**, ಬೆಂ. ಗ್ರಾಮಾಂತರ
**ಶ್ರೀ ಸಿಂ.ಲಿಂ. ನಾಗರಾಜ್**, ರಾಮನಗರ
**ಶ್ರೀ ನಾಗಾನಂದ ಕೆಂಪರಾಜ್**, ಕೋಲಾರ
**ಡಾ. ಕೈವಾರ ಎನ್. ಶ್ರೀನಿವಾಸ**, ಚಿಕ್ಕಬಳ್ಳಾಪುರ
**ಶ್ರೀಮತಿ ಬಾ.ಹ. ರಮಾಕುಮಾರಿ**, ತುಮಕೂರು
**ಡಾ. ದೊಡ್ಡಮಲ್ಲಯ್ಯ**, ಚಿತ್ರದುರ್ಗ
**ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ**, ದಾವಣಗೆರೆ
**ಶ್ರೀ ಡಿ.ಬಿ. ಶಂಕರಪ್ಪ**, ಶಿವಮೊಗ್ಗ
**ಡಾ. ವೈ.ಡಿ. ರಾಜಣ್ಣ**, ಮೈಸೂರು
**ಶ್ರೀ ಬಿ.ಎಸ್. ವಿನಯ್**, ಚಾಮರಾಜನಗರ
**ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ**, ಮಂಡ್ಯ
**ಶ್ರೀ ನಾಯಕರಹಳ್ಳಿ ಮಂಜೇಗೌಡ**, ಹಾಸನ
**ಶ್ರೀ ಬಿ.ಎಸ್. ಲೋಕೇಶ ಸಾಗರ್**, ಕೊಡಗು
**ಶ್ರೀ ಕುಂದೂರು ಅಶೋಕ**, ಚಿಕ್ಕಮಗಳೂರು
**ಶ್ರೀ ನೀಲಾವರ ಸುರೇಂದ್ರ ಅಡಿಗ**, ಉಡುಪಿ
**ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ**, ದಕ್ಷಿಣ ಕನ್ನಡ
**ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ**, ಬೆಳಗಾವಿ
**ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ**, ವಿಜಯಪುರ
**ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ**, ಬಾಗಲಕೋಟೆ
**ಡಾ. ಲಿಂಗರಾಜ ರು. ಅಂಗಡಿ**, ಧಾರವಾಡ
**ಶ್ರೀ ಲಿಂಗಯ್ಯ ಬಿ. ಹಿರೇಮಠ**, ಹಾವೇರಿ
**ಡಾ. ಶರಣು ಗೋಗೇರಿ**, ಗದಗ
**ಶ್ರೀ ಅರವಿಂದ ಕರ್ಕಿಕೋಡಿ**, ಉತ್ತರ ಕನ್ನಡ
**ಶ್ರೀ ವೀರಭದ್ರ ಸಿಂಪಿ**, ಗುಲ್ಬರ್ಗ
**ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ**, ಯಾದಗಿರಿ

**ಶ್ರೀ ಸುರೇಶ ಚನಶೆಟ್ಟಿ**, ಬೀದರ್
**ಡಾ.ಬಸವಪ್ರಭು ಪಾಟೀಲ ಬೆಟ್ಟದೂರು**, ರಾಯಚೂರು
**ಶ್ರೀ ರಾಜಶೇಖರ ಗು. ಅಂಗಡಿ**, ಕೊಪ್ಪಳ
**ಶ್ರೀ ಸಿದ್ಧರಾಮ ಕಲ್ಮಠ**, ಬಳ್ಳಾರಿ
**ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ**, ಮಹಾರಾಷ್ಟ್ರ
**ಪ್ರೊ. ಎಚ್.ಬಿ. ಶಿವಕುಮಾರ್**, ಆಂಧ್ರ ಪ್ರದೇಶ
**ಡಾ. ತಮಿಳ್ ಸೆಲ್ವಿ**, ತಮಿಳುನಾಡು
**ಶ್ರೀ ಸುಬ್ರಹ್ಮಣ್ಯ ವಿ.ಭಟ್**, ಕೇರಳ
**ಶ್ರೀ ಮಲ್ಲಿಕಾರ್ಜುನ ಬದಾಮಿ**, ಗೋವಾ

೮೫ನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು :
**ಡಾ. ಎಚ್.ಎಸ್. ವೆಂಕಟೇಶಮೂರ್ತಿ**

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ. :
**ಡಾ. ಗೀತಾ ವಸಂತ**

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :
**ಡಾ. ರಮೇಶ ಲಂಡನಕರ**

ಸರ್ಕಾರದ ಪ್ರತಿನಿಧಿ :
**ನಿರ್ದೇಶಕರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :
**ಡಾ. ವಸುಂಧರಾ ಭೂಪತಿ ಮತ್ತು**
**ಡಾ. ಎಸ್.ಪಿ. ಉಮಾದೇವಿ**

ಪರಿಶಿಷ್ಟ ಜಾತಿ ಪ್ರತಿನಿಧಿಗಳು :
**ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು**
**ಡಾ. ಸುಬ್ರಾವ ಎಂಟೆತ್ತಿನವರ**

ಪರಿಶಿಷ್ಟ ಪಂಗಡ ಪ್ರತಿನಿಧಿ :
**ಡಾ. ನೀಲಗಿರಿ ತಳವಾರ**

ಸಂಘಸಂಸ್ಥೆಗಳ ಪ್ರತಿನಿಧಿ :
**ಪ್ರೊ. ಸಿದ್ರಾಮಪ್ಪ ಮಾಸಿಮಾಡೆ**

ಕನ್ನಡದ ಲೇಖಕಿಯರ ಅನುಭವ ಲೋಕ, ಆಲೋಚನೆ, ಆಳದ ತಲ್ಲಣ ಮತ್ತು ಪ್ರತಿಭಟನೆಗಳು ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ಈ ಮಹಿಳಾ ಸಂಪುಟಗಳು ಹಿಡಿದು ಇಟ್ಟಿವೆ. ಇದೇ ಮೊದಲ ಬಾರಿ ಅವರ ಬಹು ಮುಖ ಅಭಿವ್ಯಕ್ತಿಯನ್ನು ಒಟ್ಟಂದದಲ್ಲಿ ಗ್ರಹಿಸಲು ಅನುವಾಗುವಂತೆ ಈ ಸಂಪುಟಗಳನ್ನು ರೂಪಿಸಲಾಗಿದೆ. ಹೆಣ್ಣು ಮತ್ತು ಗಂಡಿನ ಸಂವೇದನೆಗಳ ನಡುವಿನ ಭಿನ್ನತೆಗಳನ್ನು ಮತ್ತು ಸಾಮ್ಯತೆಗಳನ್ನು ಗುರುತಿಸಲು ಈ ಸಂಪುಟಗಳು ನೆರವಾಗುತ್ತವೆ ಎಂಬ ನಂಬಿಕೆ ನನ್ನದು. ಮಹಿಳಾ ಸಾಹಿತ್ಯ ಕುರಿತ ಉನ್ನತ ಅಧ್ಯಯನಕ್ಕೆ ಈ ಸಂಪುಟಗಳು ಆಕರಗಳಾಗುತ್ತವೆ ಹಾಗೂ ಆ ಅಧ್ಯಯನವನ್ನು ಇನ್ನಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗಲು ಅವು ನೆರವಾಗುತ್ತವೆ ಎಂದೂ ನಾನು ಭಾವಿಸಿದ್ದೇನೆ. ಇಂಥ ಅನನ್ಯ ಕೆಲಸವನ್ನು ನನ್ನ ಅವಧಿಯಲ್ಲಿ ಮಾಡಿ ಪೂರೈಸಿದ ಹೆಮ್ಮೆ ನನ್ನದು.

**ನಾಡೋಜ ಡಾ. ಮನು ಬಳಿಗಾರ್**

ಅಧ್ಯಕ್ಷರು

ರೂ ೧೮೦/-

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು - ೫೬೦ ೦೧೮.